ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಕಂಬಾರ ರಾಜು ನಾಗಪ್ಪ

ಮಾರ್ಗದರ್ಶಕರು

ಡಾ.ಎಸ್.ಎಸ್.ಅಂಗಡಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩. ೨೭೬

೨೦೧೮

ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಕಂಬಾರ ರಾಜು ನಾಗಪ್ಪ

ಮಾರ್ಗದರ್ಶಕರು
ಡಾ.ಎಸ್.ಎಸ್.ಅಂಗಡಿ
ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಕಂಬಾರ ರಾಜು ನಾಗಪ್ಪ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಹಸ್ತಪ್ರತಿಶಾಸ್ತ್ರ** ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಎಸ್.ಎಸ್. ಅಂಗಡಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583276

ಡಾ.ಎಸ್.ಎಸ್.ಅಂಗಡಿ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೦೨/೦೪/೨೦೧೮

ಸಂಶೋಧಕರ ಘೋಷಣಾ ಪತ್ರ

ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಹಸ್ತಪ್ರತಿಶಾಸ್ತ್ರ ವಿಭಾಗದ, ಪ್ರಾಧ್ಯಾಪಕರಾದ **ಡಾ.ಎಸ್.ಎಸ್.ಅಂಗಡಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸ ಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ರಾಜು

ಕಂಬಾರ ರಾಜು ನಾಗಪ್ಪ
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೦೨/೦೪/೨೦೧೮

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯರು ಉದಾತ್ತ ಸಂಸ್ಕೃತಿಯ ರೂವಾರಿಗಳು. ಪ್ರಾಚೀನ ಇತಿಹಾಸ ಪರಂಪರೆಯನ್ನು ಹೊಂದಿದ ವೈಶಿಷ್ಟ್ಯಪೂರ್ಣ ದೇಶ ಭಾರತ. ವಿವಿಧತೆಯಲ್ಲಿ ಏಕತೆಯನ್ನು ಕಂಡುಕೊಂಡ ದೇಶದಲ್ಲಿ ಕನ್ನಡ ಸಮುದಾಯ ಪ್ರಮುಖವಾದುದು. ಬಹುಭಾಷೆ, ಸಂಸ್ಕೃತಿ, ಸಂಪ್ರದಾಯ, ಕಸುಬುಗಳಲ್ಲಿ ಕನ್ನಡಿಗರ ಕೊಡುಗೆ ವಿಶೇಷವಾಗಿದೆ. ವಿಶ್ವಸಂಸ್ಕೃತಿಗೆ ಭಾರತೀಯ ಸಂಸ್ಕೃತಿಯ ಕೊಡುಗೆ ಎಷ್ಟು ಮಹತ್ವದ್ದಾಗಿದೆಯೋ ಅಷ್ಟೇ ಮಹತ್ವದ್ದು ಭಾರತೀಯ ಸಂಸ್ಕೃತಿಗೆ ಕನ್ನಡ ಸಂಸ್ಕೃತಿ. "ಪ್ರಾಚೀನ ಕನ್ನಡಿಗರು ಬದುಕಿದ ರೀತಿ, ಅವರ ಧರ್ಮಗಳು, ಆರ್ಥಿಕವ್ಯವಸ್ಥೆ, ಜಾತಿನೀತಿಗಳು ಅವರ ಬಾಳನ್ನು ಹಿಡಿದು ನಡೆಯಿಸಿದ ಮೌಲ್ಯಗಳು, ಒಟ್ಟಿನಲ್ಲಿ ಅವರ ಜೀವನ ವಿಧಾನ ಇವುಗಳನ್ನು ನಿರೂಪಿಸುವುದೇ ನಮ್ಮ ಗುರಿ. ಇವೇ ಪ್ರಾಚೀನ ಕನ್ನಡಿಗರ ಸಂಸ್ಕೃತಿಯನ್ನು ಎತ್ತಿ ತೋರಿಸತಕ್ಕವು"[೧] ಜನರ ರೀತಿ–ನೀತಿ, ಆಚಾರ, ವಿಚಾರ, ಸಂಪ್ರದಾಯ, ಉಡುಗೆ–ತೊಡುಗೆ–ಅಭಿರುಚಿಗಳು ವಿಶೇಷವಾದವು. ಇವು ಸಮುದಾಯದ ಮೇಲೆ ಪ್ರಭಾವ ಬೀರುತ್ತವೆ. ಭವ್ಯ ಪರಿಸರವನ್ನು ನಿರ್ಮಿಸುತ್ತವೆ. ಸುಂದರ ಬದುಕಿಗೆ ಮೌಲಿಕ ಕಸುಬುಗಳು ಬೆಸೆದುಕೊಳ್ಳುತ್ತವೆ. ಸಾಮಾಜಿಕ ಮೌಲ್ಯಗಳು ಹುಟ್ಟಿಕೊಳ್ಳುತ್ತವೆ. ಮೌಲಿಕ ಕಾಯಕ ಸಮುದಾಯಗಳು ಮಾನವ ಸಮಾಜಕ್ಕೆ ಉನ್ನತ ಸಂಸ್ಕೃತಿಯನ್ನು ಕಟ್ಟಿ ಕೊಡುತ್ತವೆ.

ಸಂಸ್ಕೃತಿಯೆಂದರೆ ಒಂದು ಸಮುದಾಯದ ಜೀವನ ವಿಧಾನವಾಗಿದೆ. ಸಮುದಾಯದ ಆಚಾರ–ವಿಚಾರ ವ್ಯವಹಾರಗಳು, ಸಂಘ–ಸಂಸ್ಥೆ, ಕಾರ್ಯಾಗಾರಗಳು, ಆಲೋಚಿಸುವ ಕ್ರಮಗಳಾಗಿವೆ. ಯಾವೊಬ್ಬ ವ್ಯಕ್ತಿಗೂ ಜಗತ್ತಿನಿಂದ ಸ್ವತಂತ್ರವಾಗಿರಲು ಸಾಧ್ಯವಾಗಲಾರದೆಂದು ವಿದ್ವಾಂಸರು ಹೇಳುತ್ತಾರೆ. ಮಾನವನನ್ನು ತನ್ನ ಸಮುದಾಯದ ಆಲೋಚನ ಕ್ರಮ, ವ್ಯವಹಾರ, ಸಂಪ್ರದಾಯಗಳು

ಕಟ್ಟಲ್ಪಡುತ್ತವೆ. ಕಾಲಾನುಕ್ರಮದಲ್ಲಿ ಬದಲಾಯಿಸುತ್ತವೆ. ಇದರಿಂದ ಮಾನವ ತನ್ನ ಸಮುದಾಯ ಸಂಸ್ಕೃತಿಯ ಶಿಶುವಾಗಿ, ಸಸಿಯಾಗಿ, ಮಹಾಮರವಾಗಿ, ಮಹಾ ಮಾನವನಾಗಿ ಬೆಳೆಯುತ್ತಾನೆ.

ಮ್ಯಾಥ್ಯೂ ಆರ್ನಾಲ್ಡರು 'ಪೂರ್ಣತೆಯ ಸಿದ್ಧಿಗಾಗಿ ಮನುಷ್ಯನು ಮಾಡುತ್ತಿರುವ ಪ್ರಯತ್ನವನ್ನು ಸಂಸ್ಕೃತಿ' ಎಂದು ಕರೆಯುತ್ತಾರೆ. ಮಾನವನಲ್ಲಿ ಕ್ರಿಯಾಶೀಲತೆಯನ್ನು ತಂದುಕೊಡುವುದೇ ಸಂಸ್ಕೃತಿ. ಮಾನವನ ಸಮುದಾಯಿಕ ಜೀವನದಲ್ಲಿ ವ್ಯಕ್ತಗೊಳ್ಳುವ ಗುಣಧರ್ಮವೇ ಸಂಸ್ಕೃತಿಯಾಗಿದೆ. ರವೀಂದ್ರನಾಥ ಠಾಕೂರರು ಮನೋಮಯ ಜೀವನವೇ(The Life of mind) ಸಂಸ್ಕೃತಿ ಎಂದು ಹೇಳಿದ್ದಾರೆ. ಟಿ.ಎಸ್.ಎಲಿಯಟ್ಟನು ಮನುಷ್ಯನು ವಂಶಾನುಗತವಾದ ಕೆಲವು ಲಕ್ಷಣಗಳೊಡನೆ, ಶಕ್ತಿಯೊಡನೆ ಹುಟ್ಟುತ್ತಾನೆ. ಇವುಗಳನ್ನು ಯಾರು ಅವನಿಗೆ ಕಲಿಸಿಕೊಡಬೇಕಾಗಿಲ್ಲ ವೆಂದು ಹೇಳುತ್ತಾರೆ. ಜನ್ಮದಿಂದಲೆ ಮಾನವನಲ್ಲಿ ಸಾಂಸ್ಕೃತಿಕತೆಯ ಗುಣ ಸ್ವಭಾವ, ಕಲೆ ಜ್ಞಾನ, ತಿಳಿವಳಿಕೆಯ ಅಂಶಗಳು ಬೆಳೆದು ಬರುತ್ತವೆ. ಇಂತಹ ಗುಣ ಸ್ವಭಾವದ ಸಾಂಘಿಕ ಜೀವನ ನಡೆಸುವ ಗುಂಪು ಒಂದು ಸಮುದಾಯವಾಗಿ ಹುಟ್ಟಿಕೊಂಡು, ಒಂದೇ ಬಗೆಯ ಉದ್ಯೋಗಗಳನ್ನು ಕೈಗೊಳ್ಳುತ್ತವೆ. ಸಮುದಾಯ ಮತ್ತು ಉದ್ಯೋಗಗಳನ್ನೊಳಗೊಂಡು ಒಂದು ವಿಶಿಷ್ಟ ಸಂಸ್ಕೃತಿಯ ಹುಟ್ಟಿಗೆ ಕಾರಣರಾಗುತ್ತವೆ.

ಕೃಷಿ ಸಂಸ್ಕೃತಿಯ ದೇಶದಲ್ಲಿ ಶ್ರಮ ಸಂಸ್ಕೃತಿಯ ಕುಲಕಸಬುದಾರರು ಬೆಳೆದುಬಂದ ರೀತಿ ವಿಭಿನ್ನ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕುಲಕಸಬುದಾರರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕತೆಯು ತುಂಬಾ ಮಹತ್ವದ ಪಾತ್ರ ವಹಿಸುತ್ತದೆ. ಕುಲಕಸಬುದಾರರು ವಿವಿಧ ಶ್ರೇಣಿ ಅಥವಾ ವರ್ಗಗಳಲ್ಲಿ ವಿಭಜಿಸಲ್ಪಟ್ಟಿದ್ದಾರೆ. ಶ್ರಮದಾಯಕ ಶ್ರೇಣಿಕೃತ ವ್ಯವಸ್ಥೆಯು ಅವರ ಸಮುದಾಯದ ಸ್ಥಾನಮಾನ, ಕಸಬುಗಾರಿಕೆ, ಆರ್ಥಿಕ ಸಂಪನ್ಮೂಲತೆಗಳ ಆಧಾರದಲ್ಲಿ ನಿರ್ಮಾಣವಾಗಿದೆ. ಶ್ರಮ ಸಂಸ್ಕೃತಿಯ ಕುಲಕಸಬುದಾರರನ್ನು ವಿವಿಧ ಸಾಮಾಜಿಕ ವರ್ಗಗಳಲ್ಲಿ ಗುರುತಿಸಲಾಯಿತು. ಶ್ರಮ ಒಂದೇ ಆದರೂ, ಸಾಮಾಜಿಕ ಸ್ಥಾನಮಾನಗಳು ಬೇರೆಯಾದವು. ಕುಶಲಕರ್ಮಿಗಳು ವರ್ಗೀಕೃತಗೊಂಡರು. ಅವರವರದೇ ಆದ ಸಮುದಾಯಿಕ ಸಂಸ್ಕೃತಿಯನ್ನು ಕಟ್ಟಿಕೊಂಡು ಬೆಳೆಯಲಾರಂಭಿಸಿದರು.

ಶ್ರಮ ಸಮುದಾಯದ ಕುಶಲಕರ್ಮಿಗಳಲ್ಲಿ ಮೇಲು-ಕೀಳುಗಳೆಂಬ ಘಟಕಗಳು ವರ್ಗೀಕರಣವಾದವು. ಕೆಲವು ಉನ್ನತ ಕುಶಲಕರ್ಮಿ ವರ್ಗಗಳೆಂದು, ಇನ್ನು ಕೆಲವು ಕೆಳ ಕುಶಲಕರ್ಮಿ ವರ್ಗಗಳೆಂದು ಸಮುದಾಯ ಪರಿಗಣಿಸಿತು. ಕುಶಲಕರ್ಮಿ ವರ್ಗಗಳಲ್ಲಿ ಸಾಮಾಜಿಕ ಸ್ಥಾನಮಾನಗಳಿಂದ ತಳ್ಳಲ್ಪಟ್ಟ ವರ್ಗ ಹಾಗೂ ಹಕ್ಕು ಸೌಲಭ್ಯಗಳಿಂದ ವಂಚಿತವಾದ ವರ್ಗಗಳೆಂದು ಮುನ್ನಡೆದವು.

ಸಾಮಾಜಿಕ ಸ್ತರಗಳು ಭಿನ್ನವಾಗಿದ್ದರೂ ಕುಶಲಕರ್ಮಿಗಳ ಕಲಾ ಸಂಸ್ಕೃತಿ ಏಕತೆಯಿಂದ ಕೂಡಿದ್ದಾಗಿದೆ. ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಕುಶಲಕರ್ಮಿಗಳ ಕೊಡುಗೆ ಮಹತ್ವಪೂರ್ಣ ವಾದದ್ದು. ಕುಶಲಕರ್ಮಿಗಳಿಲ್ಲದ ಭಾರತದ ಯಾವ ಹಳ್ಳಿಗಳು ಇಲ್ಲ. ಹಳ್ಳಿಯ ರೈತ ಸಮುದಾಯದ ಪ್ರತಿಯೊಂದು ಕೆಲಸಕಾರ್ಯಗಳಿಗೆ ಕುಶಲಕರ್ಮಿಗಳು ಅವಶ್ಯವಾಗಿದ್ದಾರೆ.

ಕುಶಲಕರ್ಮಗಾರಿಕೆ ಒಂದು ಕಲಾತ್ಮಕ ಕರ್ಮವೆಂಬುದು ಕಸಬಿನ ಔನ್ನತ್ಯವನ್ನು ತೋರಿಸು ತ್ತದೆ. ಕಸಬು ಶ್ರೇಷ್ಠವಾದದ್ದು. ಕುಶಲ ಎಂದರೆ ಜಾಣ್ಮೆ, ತಿಳಿವಳಿಕೆ, ಅನುಭವಜ್ಞಾನ ಪೂರ್ಣತೆಯ ಶ್ರಮ. ಕುಶಲಕರ್ಮಿ ಯಾವುದೇ ಒಂದು ವಸ್ತುವನ್ನು ತಯಾರಿಸಲು ವಿಶಿಷ್ಟಜ್ಞಾನ ಹೊಂದಿರಬೇಕು. ಅಷ್ಟೇ ಅಲ್ಲ ಜ್ಞಾನವನ್ನು ಕ್ರಿಯಾತ್ಮಕಗೊಳಿಸುವ ಕಲೆಗಾರಿಕೆ ಅವಶ್ಯಕ. ರೂಪದೊಳಗೆ ನಿರೂಪವನ್ನು ಹುಡುಕುವುದು ಕರಕುಶಲಕಲೆಯಾಗಿದೆ. ನಿರಂತರ ಕ್ರಿಯಾಶೀಲತೆಯ ಲಕ್ಷಣವನ್ನು ಹೊಂದಿರುವವರು ಕುಶಲಕರ್ಮಿಗಳು.

ಸಾಮಾಜಿಕ ವ್ಯವಸ್ಥೆಯಲ್ಲಿ ಕಸುಬುಗಳು ಜಾತಿ ಸ್ವರೂಪ ಪಡೆದುಕೊಂಡಿವೆ. ಕುಶಲಕರ್ಮಿಗಳು ಉತ್ಪಾದಿಸುವ ವಸ್ತುಗಳ ಆಧಾರಿತವಾಗಿ ಜಾತಿಗಳು ಸೃಜಿಸಿದವು. ಹದಿನೆಂಟು ಕುಲ ಕಸಬುಗಳಿಗೆ, ಹದಿನೆಂಟು ಜಾತಿಗೊಂಡ ಪರಿಣಾಮ ಕುಶಲಕರ್ಮಿಗಳು ಒಂದೊಂದು ಸಮುದಾಯದ ಸಂಸ್ಕೃತಿಕಾರರಾದರು. ಇಂತಹ ಬಹುಕುಶಲಕರ್ಮಿ ಸಂಸ್ಕೃತಿಕಾರರಲ್ಲಿ ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡದ್ದು ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿ ಕುಶಲ ಕರ್ಮಿಗಳು ಮತ್ತು ಅವರ ಆರಾಧಕಳಾದ ಶಿರಸಂಗಿ ಕಾಳಮ್ಮ ದೇವತೆ ಕುರಿತು.

ಈ ಬಗೆಯ ಪಂಚ ಕಸಬುಗಳನ್ನು ನಿರ್ವಹಿಸುವ ಕುಶಲಕರ್ಮಿಗಳಲ್ಲಿ ಒಂದೇ ಬಗೆಯ ರೀತಿ-ನೀತಿ, ಸಂಪ್ರದಾಯ ಆಚರಣೆ, ಕೊಡು-ಕೊಳ್ಳುವಿಕೆ ಇದ್ದುದು ಕಂಡುಬರುತ್ತದೆ. ಪಂಚ ಕಸಬುಗಳು ಒಂದಕ್ಕೊಂದು ಪೂರಕವಾದ ಉದ್ಯೋಗಗಳಾಗಿವೆ. ಈ ಐದು ವೃತ್ತಿಗಳಿಗೆ ಬೆಂಕಿ(ಅಗ್ನಿ) ಪ್ರಮುಖವಾದ ಸಂಪನ್ಮೂಲವಾಗಿದೆ. ಬೆಂಕಿಯನ್ನು ಐದು ಉದ್ಯೋಗದಾರರು ಶಕ್ತಿ ಎಂದು ಗುರುತಿಸಿದ್ದಾರೆ. ಬೆಂಕಿಯೆಂಬ ಶಕ್ತಿಯ ಸುತ್ತಲೂ ವೃತ್ತಿ ಬದುಕನ್ನು ಅನಾವರಣಗೊಳಿಸಿ ಕೊಂಡ ಐದು ಕುಶಲಕರ್ಮಿ ಗುಂಪನ್ನು ಪಂಚಾಳರೆಂದು, ವಿಶ್ವಕರ್ಮರೆಂದು ಕರೆಯುತ್ತಾರೆ.

ಐದು ಉದ್ಯೋಗಿಗಳನ್ನು 'ವಿಶ್ವಕರ್ಮ'ರು ಎನ್ನುವುದಕ್ಕಿಂತ ಸೃಜನಶೀಲ ಉದ್ಯೋಗದ ಹಿನ್ನೆಲೆಯಲ್ಲಿ ಪಂಚಾಳರೆಂದು ಕರೆಯುವುದು ಸೂಕ್ತ. "ಪಂಚಾಳ ಪದ ವೃತ್ತಿ ಮೂಲವಾದ ಸಹಜ ಬದುಕಿನ ಅನನ್ಯತೆಯನ್ನು ಸೂಚಿಸಿದರೆ, ವಿಶ್ವಕರ್ಮ ಪದವು ಸಂಸ್ಕೃತೀಕರಣ ಪ್ರಧಾನವಾದ ಏಕಘನಾಕೃತಿಯೊಂದನ್ನು ಕಟ್ಟಿಕೊಡುತ್ತದೆ."[೨] ಪಂಚಾಳ ಎಂಬ ಪದ ವೃತ್ತಿ ಮೂಲವಾಗಿ ಹುಟ್ಟಿಬಂದಿದೆ. ಅದು ಕ್ರಿಯಾಶೀಲತೆ ಸಂಕೇತವಾಗಿದೆ. ಪಂಚಕಸಬುಗಳು ಸಮುದಾಯದವರಿಗೆ

ಇಲ್ಲವಾದರೆ, ಪಂಚಾಳ ಪದವೇ ಇರುವುದಿಲ್ಲ. ಪಂಚಾಳ ಪಂಚ ಉದ್ಯೋಗಗಳ, ಪಂಚ ಕುಟುಂಬಗಳ ಐಕ್ಯತೆಯ ಪದ. ಪಂಚಾಳ ಪದಕ್ಕೆ ವಿಶಿಷ್ಟ ಶಕ್ತಿಯಿದೆ. ಇದು ವಿಶ್ವಕರ್ಮವೆಂಬ ಬಹುಮಹಡಿ ಕಟ್ಟಡದ ಮೂಲಪಾಯ(Foundation). ಪಾಯವಿಲ್ಲದೇ ಕಟ್ಟಡಕ್ಕೆ ಅಸ್ತಿತ್ವವಿಲ್ಲ. ಸಮುದಾಯವನ್ನು ವೃತ್ತಿ ಮೂಲ ಇರುವಿಕೆಯಿಂದ ಗುರುತಿಸಬೇಕಾಗುತ್ತದೆ. ವಾಸ್ತವತೆಯಲ್ಲಿ ಐದು ವೃತ್ತಿಗಳು ಕಣ್ಣೆದುರಿಗೆ ಕಾಣುವ ಸತ್ಯ. ಈ ಸತ್ಯದ ಹಿನ್ನೆಲೆಯಲ್ಲಿ ಪಂಚಾಳ ಕುಲಕಸಬು, ಪಂಚಾಳ ಸಮುದಾಯವೆಂದು ಅಧ್ಯಯನದಲ್ಲಿ ಬಳಸಲ್ಪಟ್ಟಿದೆ. ಅದು ಸರಿಯಾದ ಪದವಾಗಿ ಬಳಕೆಯಾಗಿದೆ ಎಂಬುದರ ಅರಿವು ನನಗಿದೆ. ಪಂಚಾಳ ಕುಲ ಮತ್ತು ಈ ಕುಲದ ದೇವತೆ ಶಿರಸಂಗಿ ಕಾಳಮ್ಮನ ಕುರಿತಾಗಿ ಈ ಅಧ್ಯಯನದಲ್ಲಿ ವಿವೇಚಿಸಿದ್ದೇನೆ.

ಪಂಚ+ಅಣ್ಣ= ಪಂಚಾಣ್ಣ> ಪಂಚಾಳ>ಪಾಂಚಾಳರೆಂದು ಸಮುದಾಯವನ್ನು ಗುರುತಿಸಲಾಗುತ್ತದೆ. ಪಂಚಾಳರ ಐದು ವೃತ್ತಿ ಬದುಕು ಮತ್ತು ಬದುಕಿನಲ್ಲಿ ಸಾಮ್ಯತೆಯಿರುವು ದರಿಂದ ಮತ್ತು ನಾನು ಇದೇ ಸಮುದಾಯದಲ್ಲಿ ಹುಟ್ಟಿ ಬೆಳದವನಾದುದರಿಂದ ಕುಶಲಕರ್ಮಿಗಳ ಮತ್ತು ಉದ್ಯೋಗಗಳ ಸಂವೇದನೆಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಅನುಭವ ಜ್ಞಾನವನ್ನು ಕ್ಷೇತ್ರಾಧ್ಯಯನದ ಮಾಹಿತಿ ಮತ್ತು ಮೌಲಿಕ ಗ್ರಂಥಗಳಲ್ಲಿನ ಸೂಕ್ತ ವಿಷಯಗಳನ್ನು ನನ್ನ ಅಧ್ಯಯನದಲ್ಲಿ ಚರ್ಚಿಸಿದ್ದೇನೆ.

ನಮ್ಮ ದೇಶದ ಭವ್ಯ ಸಂಸ್ಕೃತಿಯಲ್ಲಿ ದೈವತ್ವಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದನ್ನು ಕಾಣುತ್ತೇವೆ. ವಿವಿಧ ಉದ್ದೇಶಗಳ ಕಾರಣವಾಗಿ ಹುಟ್ಟಿಕೊಂಡ ದೈವಗಳು ತಮ್ಮದೇ ಆದ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡುತ್ತವೆ. ಈ ದೈವಗಳು ಆರಂಭದಲ್ಲಿ ಒಂದು ಸ್ವರೂಪವಾಗಿ ಸಮುದಾಯದಲ್ಲಿ ಹುಟ್ಟುತ್ತವೆ. ಅನಂತರದಲ್ಲಿ ದಿವ್ಯ ಸ್ವರೂಪದಲ್ಲಿ ಕಂಡುಬಂದ ದೈವಗಳು ಸಮುದಾಯ ಶಕ್ತಿಕೇಂದ್ರವಾಗಿ ಬೆಳೆಯುತ್ತವೆ. ಅನ್ಯ ಸಮುದಾಯಗಳ ಬದುಕಿನ ಮೇಲೆ ಪ್ರಭಾವ ಬೀರುತ್ತದೆ. ಇಂತಹ ಪರಿಸರದಲ್ಲಿ ವಿವಿಧ ಸನ್ನಿವೇಶಗಳಲ್ಲಿ ಹುಟ್ಟಿಕೊಂಡ ದೈವಗಳು ಭಿನ್ನ ಸಂಸ್ಕೃತಿಯನ್ನು ಕಟ್ಟುತ್ತವೆ. ಕಾಲಾಂತರದಲ್ಲಿ ಈ ದೈವಗಳು ಅವತಾರ ದೇವತೆಗಳಾಗಿರುವುದು ಕನ್ನಡ ನೆಲದ ಗುಣ. ಈ ನೆಲದ ಅವತಾರ ದೇವ, ದೇವತೆಗಳು ಭಿನ್ನ ಸಂಸ್ಕೃತಿ ಕಟ್ಟಿಕೊಟ್ಟ ಸಮುದಾಯದ ಕಸಬು ಮೂಲ ಬದುಕಿನ ಆರಾಧ್ಯ ದೈವವಾಗುತ್ತವೆ. ಈ ದೈವಗಳು ಸಾಮಾಜಿಕ ಮೌಲ್ಯ ಸ್ಥಾಪನೆಯ ಹಿನ್ನೆಲೆಯಲ್ಲಿ ರೂಪಗೊಳ್ಳುತ್ತವೆ. ಇಂತಹ ಕಸಬು ಮೂಲ ದೈವಗಳಲ್ಲಿ ಶಿರಸಂಗಿ ಕಾಳಮ್ಮ ದೇವತೆಯೂ ಒಬ್ಬಳು.

ಶಿರಸಂಗಿಯ ಕಾಳಮ್ಮ: ಕಾಳಮ್ಮ ಪಂಚಾಳ ಕುಶಲಕರ್ಮಿಗಳ ಕುಲದೇವತೆ. ಅವಳ ದೈವಿಕ ನೆಲೆ ಶಿರಸಂಗಿ. ಕರ್ನಾಟಕದ ಉತ್ತರ ಭಾಗದ ಬೆಳಗಾವಿ ಜಿಲ್ಲೆಯ ರಟ್ಟರ ಪ್ರದೇಶ ಸವದತ್ತಿಯಿಂದ

೨೨ ಕಿ.ಮೀ.ದೂರದಲ್ಲಿದೆ. ಕಾಳಮ್ಮ ಶಿರಸಂಗಿ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಸಿದ್ದಾಳೆ. ಇಲ್ಲಿಯ ದೇವಾಲಯ ಪುರಾತನ ಕಾಲದ್ದು ಇಲ್ಲಿ ಕುಲುಮೆಯ ಕಾರ್ಯಾಗಾರವಿತ್ತೆಂದು ಕ್ಷೇತ್ರಾಧ್ಯಾಯಿ ಡಾ.ವಾಸುದೇವ ಬಡಿಗೇರ ಅಭಿಪ್ರಾಯಪಟ್ಟಿದ್ದಾರೆ. ತ್ರೇತಾಯುಗದ ಋಷ್ಯಶೃಂಗನ ತಪಸ್ಸಿಗೆ ಮೆಚ್ಚಿ ಕಾಳಮ್ಮ ಶಿರಸಂಗಿಯಲ್ಲಿ ನೆಲೆಸಿದ್ದಾಳೆ. ಋಷ್ಯಶೃಂಗನ ಕಾರಣವಾಗಿ ಈ ಪ್ರದೇಶಕ್ಕೆ ಶಿರಶೃಂಗಿ>ಪಿರಿಸಿಂಗಿ, ಶಿರಸಂಗಿ ಎಂದು ಹೆಸರು ಬಂದಿದೆ.

ಪಂಚಾಳರ ಪಂಚ ಕಸಬುಗಳಿಗೆ ಮೂಲ ಶಕ್ತಿಯಾದ ಬೆಂಕಿ(ಅಗ್ನಿ) ಕಾಳಮ್ಮನೆಂದು ನಿರೂಪಗೊಳಿಸಲಾಗಿದೆ. ಕುಲುಮೆಯಲ್ಲಿ ಲೋಹಕರಗಿಸಿ ವಸ್ತು ಉತ್ಪಾದಿಸಲು ಬೆಂಕಿಯನ್ನು ಬಳಸಿದ ಕುಶಲಕರ್ಮಿವರ್ಗಕ್ಕೆ ಶಕ್ತಿ ಅಂದರೆ ಮಾತೃ ದೇವತೆಯಾಗಿ ಕಾಳಮ್ಮ ಕಂಡಿದ್ದಾಳೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಕುಶಲಕರ್ಮಿಗಳು ತಾವು ಉದ್ಯೋಗಕ್ಕೆ ಬಳಸುವ ಉಪಕರಣಗಳನ್ನು ಕಾಳಮ್ಮನೆಂದು ಪರಿಭಾವಿಸಿಕೊಂಡು ಬಂದಿದ್ದಾರೆ. ಪಂಚಕಸಬು ಮತ್ತು ಶಿರಸಂಗಿ ಕಾಳಮ್ಮ ಪಂಚಾಳ ಕುಶಲಕರ್ಮಿಗಳ ಬದುಕಿನ ಶಕ್ತಿ.

ಗ್ರಾಮೀಣ ಪ್ರದೇಶದಲ್ಲಿ ಕುಶಲಕರ್ಮಿಗಳಿಗೆ ವಿಶೇಷ ಗೌರವವಿದೆ. ಗ್ರಾಮದ ಎಲ್ಲ ಸಮುದಾಯದವರ ರೈತೋಪಯೋಗಿ ಮತ್ತು ಗೃಹೋಪಯೋಗಿ ಉಪಕರಣಗಳನ್ನು ತಯಾರಿಸಿಕೊಡುತ್ತಾರೆ. ಕಬ್ಬಿಣ, ಮರ, ಕಂಚು, ಹಿತ್ತಾಳೆ, ತಾಮ್ರ, ಶಿಲೆ ಮತ್ತು ಚಿನ್ನ-ಬೆಳ್ಳಿಯ ವಸ್ತುಗಳನ್ನು ತಯಾರಿಸಿಕೊಟ್ಟು, ಊರಿನ ಪ್ರೀತಿ-ಗೌರವಗಳಿಸಿದ 'ಆಯಗಾರ'ರಾಗಿದ್ದಾರೆ. ಇವರು ಸೃಷ್ಟಿಸುವ ಪ್ರತಿಯೊಂದು ವಸ್ತು ತಾಳಿಕೆ-ಬಾಳಿಕೆಯಿಂದ ಕೂಡಿರುತ್ತವೆ. ಅದಕ್ಕೆ ಕಾಳಮ್ಮನು ಕಾರಣಳು ಎಂಬುದು ಕುಶಲಕರ್ಮಿಗಳ ಅಚಲ ನಂಬಿಕೆ. ಹೀಗಾಗಿ ಕುಶಲಕರ್ಮಿಗಳು ಶಿರಸಂಗಿ ಕಾಳಮ್ಮನನ್ನು ಭಕ್ತಿ ಭಾವದಿಂದ ಆರಾಧಿಸುತ್ತಾರೆ. ಕ್ಷೇತ್ರಕ್ಕೆ ಒಂದು ಶಕ್ತಿಯಿದೆ. ಇಂದಿಗೂ ಪಂಚಾಳ ಕುಶಲಕರ್ಮಿ ಸಮುದಾಯ ಶಿರಸಂಗಿ ಪ್ರದೇಶಕ್ಕೆ ತೆರಳುತ್ತಾರೆ. ಶಕ್ತಿಯುತವಾದ ಮಣ್ಣನ್ನು ಸ್ಪರ್ಶಿಸುತ್ತಾರೆ. ನೆಲದ ಶಕ್ತಿಯನ್ನು ಆವಾಹಿಸಿ ದರ್ಶನ ಪಡೆಯುತ್ತಾರೆ. ಅವಳ ನಾಮದ ಬಲದಿಂದ ಕುಶಲಕರ್ಮಿಗಳಿಗೆ ಉದ್ಯೋಗಗಳು ನಿರಂತರವಾಗಿರುತ್ತವೆ. ದೇವಿಯ ಕೃಪೆಯಿಂದಾಗಿ ಕಸಬುಗಳಲ್ಲಿ ಪ್ರಸಿದ್ಧಿಯನ್ನು ಕುಶಲಕರ್ಮಿಗಳು ಪಡೆದಿದ್ದಾರೆ. ಹೀಗಾಗಿ ಕುಶಲಕರ್ಮಿಗಳಿಗೆ ಶಿರಸಂಗಿ ಕಾಳಮ್ಮ ಆರಾಧನೆಯ ದೇವತೆಯಾಗಿದ್ದಾಳೆ. ಈ ಹಿನ್ನೆಲೆಯಲ್ಲಿ 'ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ' ಅಧ್ಯಯನ ನನಗೆ ಮಹತ್ವದ್ದೆನಿಸಿದೆ.

ಒಂದು ಕಾಲದಲ್ಲಿ ಉನ್ನತ ಸ್ಥಾನಮಾನಗಳನ್ನು ಪಡೆದುಕೊಂಡಿದ್ದ ಪಂಚಾಳ ಕುಶಲಕರ್ಮಿ ಸಮುದಾಯ ಕಾಲಾಂತರದಲ್ಲಿ ಕೆಳಸ್ತರಕ್ಕೆ ತಳ್ಳಲ್ಪಟ್ಟಿದೆ. ಸಮುದಾಯ ಮತ್ತೆ ಉನ್ನತ ಸ್ಥಾನಮಾನಗಳನ್ನು ಪಡೆಯಬೇಕಾಗಿದೆ. ಈ ದೆಸೆಯಲ್ಲಿ ಡಾ.ಕೆ.ವಿ.ಕೃಷ್ಣಮೂರ್ತಿಯವರು ಮಹತ್ವಪೂರ್ಣವಾದ

ಸಮಾಜಶಾಸ್ತ್ರೀಯ ಅಧ್ಯಯನಗೈದಿದ್ದಾರೆ. ಅದೇ ನೂಲಿನಲ್ಲಿ ಮುಂದುವರೆದು, ಸಮುದಾಯ ಮೂಲತಃ ಬ್ರಾಹ್ಮಣ ವರ್ಗ ಜ್ಞಾನಮಾರ್ಗದಿಂದ ಕರ್ಮಮಾರ್ಗದತ್ತ ಸಾಗಿ ಕುಶಲಕರ್ಮಿಗಳಾಗಿದ್ದಾರೆ ಎಂಬುದನ್ನು ಮನಗಾಣಲಾಗಿದೆ.

"ಗ್ರಾಮೀಣ ಸಾಮಾಜಿಕ ವ್ಯವಸ್ಥೆಯಲ್ಲಿ ಪಂಚಾಳ ಜಾತಿಯವರ ಸ್ಥಾನವೇನು? ಎಂಬುದನ್ನು ತಿಳಿದುಕೊಳ್ಳಲು ಇತರ ಹಿಂದೂ ಜಾತಿಗಳೊಂದಿಗಿನ ಈ ಜಾತಿಯವರ ಸಂಬಂಧಗಳ ಬಗೆಗಿನ ಮಾಹಿತಿಗಳು ಬೇಕಾಗಿವೆ. ಈ ಬಗೆಗಿನ ಮಾಹಿತಿಗಳು ನನ್ನ ತಿಳಿವಿಗೆ ಬಂದಿರುವಂತೆ ಲಭ್ಯವಿಲ್ಲ. ಈ ಸಂಬಂಧವಾಗಿ ಪಂಚಾಳ ಜಾತಿಯವರು ಇತರ ಹಿಂದೂ ಜಾತಿಗಳೊಂದಿಗೆ ಹೊಂದಿರುವ ಸಾಮಾಜಿಕ ಸಂಬಂಧಗಳ ಬಗೆಗೆ ಸಂಶೋಧನೆಯ ಅವಶ್ಯವಿದೆ"[೩] ಎಂದು ಎಫ್ ಸ್ಟೀನ್ ಸಮುದಾಯದವರ ಸಾಮಾಜಿಕ ಸಂಬಂಧಗಳ ಕುರಿತಾಗಿ ಹೇಳುತ್ತಾರೆ. ಅನ್ಯ ಸಮುದಾಯದವರ ಜೊತೆ ಕುಶಲಕರ್ಮಿಗಳ ಸಾಮಾಜಿಕ ಸಂಬಂಧಗಳ ಅಧ್ಯಯನ ಅಗತ್ಯತೆಯನ್ನು ಮನಗಾಣಲಾಗಿದೆ.

ಆಧುನಿಕ ಸಂದರ್ಭದಲ್ಲಿ ಪಂಚಾಳ ಕುಶಲಕರ್ಮಿಗಳ ಪಾರಂಪರಿಕ ಉದ್ಯೋಗಗಳ ಕುರಿತು ಹೆಚ್ಚಾಗಿ ಗಮನಹರಿಸುತ್ತಿಲ್ಲ. ಇಂದು ಉದ್ಯೋಗಗಳು ಆರ್ಥಿಕ ಬಲವನ್ನು ತುಂಬುತ್ತಿಲ್ಲ. ಅನ್ಯ ಸಮುದಾಯಗಳ ಪೈಪೋಟಿಯು ಒಂದು ಕಾರಣವಾಗಿದೆ. "ಕಳೆದ ನೂರು ವರ್ಷಗಳಿಗಿಂತಲೂ ಸ್ವಲ್ಪ ಹೆಚ್ಚು ಕಾಲಾವಧಿಯಲ್ಲಿ ನಮ್ಮ ದೇಶದಲ್ಲಿ ಪರಂಪರಾಗತವಾದ (ವಾರುಸುದಾರಿಕೆಯ ಆಧಾರದ) ಕೆಲಸಗಳ ವಿಂಗಡಣೆಯು ಸಂಪೂರ್ಣವಾಗಿ ಭಿನ್ನ ವಿಭಿನ್ನವಾಗದಿದ್ದರೂ ಬಹಳ ಮಟ್ಟಿಗೆ ದುರ್ಬಲವಾಗಿ ಕುಸಿದು ಹೋಗಿದೆ."[೪] ಪಂಚಾಳ ಕುಶಲಕರ್ಮಿ ಸಮುದಾಯ ತನ್ನ ಮೂಲ ಸಾಮಾಜಿಕ ಸ್ಥಾನಮಾನ ಪಡೆಯಲು ಚಲನಶೀಲಗೊಳ್ಳಬೇಕಾಗಿದೆ. ಸಮುದಾಯ ಮತ್ತು ಪಂಚ ಉದ್ಯೋಗಗಳು ಅಂದರೆ ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ ಇಂದು ಎಷ್ಟು ಪ್ರಸ್ತುತ ಎಂಬುದನ್ನು ನಾನು ಅಧ್ಯಯನದಲ್ಲಿ ವಿಶ್ಲೇಷಿಸಿದ್ದೇನೆ.

ಪ್ರಾಗೀತಿಹಾಸ ಕಾಲದ ಶಿರಸಂಗಿ ಕಾಳಮ್ಮ ಅವಳ ಆರಾಧಕರಾದ ಪಂಚಾಳ ಕುಶಲಕರ್ಮಿ ಸಮುದಾಯದ ಬದುಕು ಮತ್ತು ಪಂಚಕಸಬುಗಳ ಮೇಲೆ ಬೆಳಕು ಹರಿಸುವುದು ನನ್ನ ಅಧ್ಯಯನದ ಉದ್ದೇಶವಾಗಿದೆ. ಅಧ್ಯಯನಕ್ಕೆ ಚಾರಿತ್ರಿಕ ದೃಷ್ಟಿಕೋನ ಹರಿಸಲಾಗಿದೆ. ಶಿರಸಂಗಿ ಪ್ರದೇಶದ ಇತಿಹಾಸವನ್ನು ಅರಿಯದೇ ಕುಶಲಕರ್ಮಿ ಮತ್ತು ಕಾಳಮ್ಮನ ಕುರಿತಾದ ಅಧ್ಯಯನ ಮುಂದುವರಿಯಲಾರದು; ಪೂರ್ಣವಾಗಲಾರದು. ಇದಕ್ಕೆ ಪೂರಕವಾದ ವಿವಿಧ ದಾಖಲೆಗಳನ್ನು, ಚಾರಿತ್ರಿಕ ಅಂಶಗಳನ್ನು ಕೂಲಂಕುಷವಾಗಿ ಬಳಸಿಕೊಳ್ಳಲಾಗಿದೆ. ಒಂದು ಸಮುದಾಯದ ಸಾಂಸ್ಕೃತಿಕ ಅಧ್ಯಯನಕ್ಕೆ ಚಾರಿತ್ರಿಕ ಮಾಹಿತಿಗಳು ಮುಖ್ಯವೆಂಬುದು ತಿಳಿಯಲಾಗಿದೆ. ಪ್ರಾಚೀನ ಗ್ರಂಥಗಳು

ಪುರಾಣಗಳು, ಸಾಹಿತ್ಯಕೃತಿಗಳು, ಗೆಝೆಟಿಯರ್, ಶಾಸನಗಳು ಜನಪದರು, ಕುಶಲಕರ್ಮಿಗಳು ಅಧ್ಯಯನಕ್ಕೆ ಮುಖ್ಯರಾಗಿದ್ದು, ಸಾಂಸ್ಕೃತಿಕವಾಗಿ ವಿಶ್ಲೇಷಿಸಲಾಗಿದೆ.

ಸಮುದಾಯದ ಸಂವೇದನಾಶೀಲ ವ್ಯಕ್ತಿಯಾಗಿ, ತಂದೆಯ ಜೊತೆ ಕುಶಲಕರ್ಮಿಯಾಗಿ ಬೆಳೆದ ಅನುಭವ ಜ್ಞಾನವನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ. ಅನುಭವಜ್ಞಾನವು ಕ್ಷೇತ್ರಾಧ್ಯಯನಕ್ಕೆ ಅವಶ್ಯಕವಾದ ಕಾರ್ಯವಿಧಾನವಾಗಿದೆ. ಆದುದರಿಂದ ಕ್ಷೇತ್ರಾಧ್ಯಯನ ಸಂದರ್ಭದಲ್ಲಿ ಸಮುದಾಯದ ಕುಶಲಕರ್ಮಿಗಳಿಗಿಂತ ಪಂಚಾಳೇತರ ಸಮುದಾಯದ ಕುಶಲಕರ್ಮಿಗಳಿಗೆ ಹೆಚ್ಚು ಒತ್ತು ನೀಡಿ ಅವರುಗಳಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ ಮುಖ್ಯವಾಗಿ ಪಂಚಾಳ ಸಮುದಾಯ ಮತ್ತು ಪಂಚ ಉದ್ಯೋಗ ಕುಶಲಕರ್ಮಿಗಳ ಸಾಂಸ್ಕೃತಿಕ ಅಧ್ಯಯನವೆನಿಸಿದರೂ ಚಾರಿತ್ರಿಕ, ಸಾಮಾಜಿಕ ಅಂಶಗಳನ್ನು ಪರಿಗಣಿಸಲಾಗಿದೆ. ಈ ಪ್ರಬಂಧವನ್ನು ೮ ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ.

ಶಿರಸಂಗಿ ಪರಿಸರ ಮತ್ತು ಈ ನೆಲದ ಕುಲ ಕಸಬುದೇವತೆ ಕಾಳಮ್ಮನ ಪ್ರದೇಶವನ್ನು ಚಾರಿತ್ರಿಕ ಮತ್ತು ಭೌಗೋಳಿಕ ಮಹತ್ವದ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಶಿರಸಂಗಿ ಪ್ರಾಗೀತಿಹಾಸ ಕಾಲದ ಪ್ರದೇಶವಾಗಿದ್ದು, ಕುಲುಮೆ ಕಾರ್ಯಾಗಾರವಾಗಿರುವುದರ ಕಡೆಗೆ ಗಮನಹರಿಸಲಾಗಿದೆ. ಪುರಾಣಗಳಲ್ಲಿ ಉಲ್ಲೇಖಿತವಾದ ಋಷ್ಯಶೃಂಗನು ತನ್ನ ತಪೋಭೂಮಿಗೆ ಕಾಳಮ್ಮನನ್ನು ಕರೆಯಿಸಿಕೊಂಡದ್ದು, ಋಷಿಯಿಂದ ಕಾಳಮ್ಮ ನೆಲೆಸಿದ ಪ್ರದೇಶಕ್ಕೆ ಋಷ್ಯಶೃಂಗ, ಶಿರಃಶೃಂಗ>ಪಿರಿಸಿಂಗಿ>ಶಿರಸಂಗಿ ಎಂದು ಹೆಸರು ಪಡೆದಿರುವುದನ್ನು ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ವಿಷಯಗಳ ವಿಶ್ಲೇಷಣೆಯಲ್ಲಿ ಶಾಸನಗಳ, ಪುರಾಣಗಳ, ಐತಿಹ್ಯಗಳ ಮೂಲಕ ಪಂಚಾಳ ಸಮುದಾಯದ ಸಂಸ್ಕೃತಿಯನ್ನು ಎರಡನೆಯ ಅಧ್ಯಾಯದಲ್ಲಿ ಚಿತ್ರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕುಶಲಕರ್ಮಿಗಳ ವೃತ್ತಿ ಹಿನ್ನೆಲೆಯನ್ನು ವಿವೇಚಿಸಲಾಗಿದೆ. ಕುಶಲಕಲೆಗಳು ಅವುಗಳನ್ನು ನಿರ್ವಹಿಸುವ ಕರ್ಮಿಯ ಜ್ಞಾನ, ಕ್ರಿಯಾಶೀಲತೆಯ ಕುರಿತು ವಿಶ್ಲೇಷಿಸಲಾಗಿದೆ. ಕುಶಲಕರ್ಮಿಗಳಲ್ಲಿ ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿ ಐದು ಉದ್ಯೋಗಗಳಲ್ಲಿ ಸಾಮ್ಯತೆಯಿರುವ ಪಂಚಾಳ ಕುಶಲಕರ್ಮಿ ವರ್ಗಗಳ ವೃತ್ತಿ ಚಾಣಾಕ್ಷತೆ, ಅನುಭವಜ್ಞಾನ, ಉತ್ಪಾದಿತ ವಸ್ತುಗಳು ಮತ್ತು ಅವುಗಳ ತಾಳಿಕೆ-ಬಾಳಿಕೆ, ಕುಶಲಕರ್ಮಿಗಳು ವಸ್ತು ಉತ್ಪಾದನೆಗೆ ಬಳಸುವ ಉಪಕರಣಗಳ ಕುರಿತಾಗಿ ಸುದೀರ್ಘವಾಗಿ ಚರ್ಚಿಸಲಾಗಿದೆ. ಬಾಚಿ-ಉಳಿ-ಕೊಡತಿಯಂತಹ ಉಪಕರಣಗಳ ಪ್ರಾಮುಖ್ಯತೆಯನ್ನು ವೃತ್ತಿ ವಚನಕಾರರ ತಾತ್ವಿಕ ನಿಲುವುಗಳ ಹಿನ್ನೆಲೆಯಲ್ಲಿ ವಿಷಯ ನಿರೂಪಿಸಲಾಗಿದೆ. ಪಂಚಾಳರ ಉದ್ಯೋಗಗಳಿಗೆ ಶಕ್ತಿಯಾದ

ಕಾಳಮ್ಮನ ಕುರಿತಾದ ಪುರಾಣ, ಐತಿಹ್ಯ, ಜನಪದ, ಶಾಸನಗಳ ಆಧಾರದಿಂದ ವಿಷಯ ವಿವರಿಸಲಾಗಿದೆ. ಕುಶಲಕರ್ಮಿಗಳ ಕಾಳಮ್ಮನ ಆರಾಧನೆಯ ಮಹತ್ವವನ್ನು ತಿಳಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪಂಚಾಳೇತರ ಸಮುದಾಯದ ಕುಶಲಕರ್ಮಿಗಳ ವೃತ್ತಿ ನೈಪುಣ್ಯತೆಗೆ ಆದ್ಯತೆ ನೀಡಲಾಗಿದೆ. ಪಂಚಾಳ ಕುಶಲಕರ್ಮಿಗಳು ನಿರ್ವಹಿಸುವ ಪಂಚ ಕಸಬುಗಳನ್ನು, ಪಂಚಾಳೇತರ ಸಮುದಾಯ ಕಾರಣಾಂತರಗಳಿಂದ ಉದ್ಯೋಗ ಮುಂದುವರೆಸಿರುವುದರ ಕುರಿತು ವಿವರಿಸಲಾಗಿದೆ. ಕುರುಬ, ಕ್ಷತ್ರೀಯ, ಲಿಂಗಾಯತ, ಮಾದರ, ಮರಾಠ, ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಪ್ರಾತಿನಿಧಿಕ ಕುಶಲಕರ್ಮಿಗಳನ್ನು ಕ್ಷೇತ್ರಾಧ್ಯಯನ ಮಾಡಿ ಅವರ ವೃತ್ತಿ ಕೌಶಲ್ಯ, ಬೆಳೆದುಬಂದ ರೀತಿ, ತಲೆಮಾರುಗಳ ಹಿನ್ನೆಲೆಯಲ್ಲಿ ವಿಷಯ ಸಿದ್ಧಪಡಿಸಲಾಗಿದೆ. ಪಂಚಾಳರ ಪಂಚ ಕಸಬುಗಳನ್ನು ತಲೆಮಾರಿನಿಂದ ನಿರ್ವಹಿಸಿಕೊಂಡುಬಂದ ಅನ್ಯ ಸಮುದಾಯದ ಕುಶಲಕರ್ಮಿಗಳು, ಕಾಳಮ್ಮನ ಆರಾಧಕರಾಗಿರುವ ಬಗೆಯನ್ನು ಅನುಭವ ಜ್ಞಾನ ಮತ್ತು ಕ್ಷೇತ್ರಾಧ್ಯಯನದಿಂದ ವಾಸ್ತವತೆಯನ್ನು ಕಟ್ಟಿಕೊಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕುಶಲಕರ್ಮಿಗಳ ಆರಾಧಕ ದೇವತೆಯಾದ ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಂಶಗಳ ಮಹತ್ವತೆಯನ್ನು ಎತ್ತಿ ಹಿಡಿಯಲಾಗಿದೆ. ಕರ್ನಾಟಕದ ಶಕ್ತಿ ಪೀಠಗಳಲ್ಲಿ ಒಂದಾಗಿರುವ ಶಿರಸಂಗಿಯು ಕಾಳಮ್ಮನ ನೆಲೆಯಾಗಿದೆ. ಇಲ್ಲಿಯ ದೇವಾಲಯ ಪ್ರಾಚೀನ ಕಾಲದ್ದಾಗಿದೆ. ವಿಗ್ರಹ ೯೦೦ ವರ್ಷಗಳದ್ದಾಗಿದೆ. ದೇವಸ್ಥಾನದ ಆವರಣದಲ್ಲಿಯ ಎರಡು ಶಾಸನಗಳ ಹಿನ್ನೆಲೆ-ಮುನ್ನೆಲೆಗಳನ್ನು ಚರ್ಚಿಸಲಾಗಿದೆ. ಕಾಳಮ್ಮ-ಕಮ್ಮಟೇಶ್ವರ-ಭೈರವ ದೇವಸ್ಥಾನಗಳೊಂದಿಗೆ ಆವೃತ ದೇವತೆಗಳು ನೆಲೆಸಿರುವುದು ಶ್ರೇಷ್ಠ ಸಾಂಸ್ಕೃತಿಕ ಪರಿಸರ ನಿರ್ಮಾಣಕ್ಕೆ ಕಾರಣವೆನಿಸಿರುವುದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಪಂಚಾಳ ಕುಶಲಕರ್ಮಿ ಸಮುದಾಯದ ರೀತಿ-ನೀತಿ-ಸಂಪ್ರದಾಯಗಳು ಹಬ್ಬ-ಹರಿದಿನ, ಜಾತ್ರೆ-ಉತ್ಸವ ಮತ್ತು ಯುಗಾದಿ ಯಂದು ಬುತ್ತಿ ಹಾರಿಸುವ ಏಕೈಕ ಪ್ರಾಚೀನ ಪದ್ಧತಿಯ ಸಂಸ್ಕೃತಿಯ ತಾಣ ಶಿರಸಂಗಿಯಾಗಿದೆ ಎಂಬುದನ್ನು ನಿರೂಪಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸ ಕಾಲದಿಂದಲೂ ಬೆಳೆದುಬಂದ ಕಾಳಮ್ಮನ ದೇವಾಲಯ ಮತ್ತು ಅಲ್ಲಿಯ ಸಂಸ್ಕೃತಿಯ ಇತ್ತೀಚಿನ ಸಂದರ್ಭದಲ್ಲಿ ಸುರೂಪಗೊಂಡಿರುವ ರೀತಿಯ ಚರ್ಚೆ ಮುಖ್ಯವೆನಿಸುತ್ತದೆ. ಶಿರಸಂಗಿ ಕಾಳಮ್ಮನ ಆಧುನಿಕ ಪರಿಸರವನ್ನು ಅಧ್ಯಯನದ ಅನುಕೂಲತೆಗಾಗಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಅಭಿವೃದ್ಧಿಗಳು ಎಂದು ವಿಭಾಗಿಸಿ ಅಧ್ಯಯನಿಸಲಾಗಿದೆ. ೬೦ರ ದಶಕ ಅಭಿವೃದ್ಧಿಯ ಮೊದಲ ಹೆಜ್ಜೆಯಾದರೂ ೯೦ರ ದಶಕವು ದೇವಸ್ಥಾನ ಅಭಿವೃದ್ಧಿಯ ಸುವರ್ಣಯುಗವೆಂದು ಗುರುತಿಸಲಾಗಿದೆ. ಅನಂತರದ ೨೦

ವರ್ಷಗಳಲ್ಲಿ ದೇವಸ್ಥಾನ ಭೌತಿಕವಾಗಿ ವೇಗವಾಗಿ ಬೆಳೆಯುತ್ತಿದೆ. ಧಾರ್ಮಿಕ ಆಧ್ಯಾತ್ಮಿಕ ವೇದಿಕೆ ರೂಪಗೊಂಡ ವಿಧಾನಗಳನ್ನು ಪರಿಚಯಿಸಲಾಗಿದೆ. ದೇವಸ್ಥಾನದ ಅಭಿವೃದ್ಧಿಗೆ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಮತ್ತು ಪಾರಂಪರಿಕ ಪೂಜಾರಿಗಳು ಕಾರಣರಾಗಿದ್ದಾರೆ. ಹೀಗಾಗಿ ಸಂಸ್ಥೆಯ ಸ್ಥೂಲ ಪರಿಚಯ, ಪ್ರಾಚೀನ ಕಾಲದಿಂದಲೂ ಪರಂಪರಾಗತ ಅರ್ಚಕರಾಗಿ ಮುಂದುವರೆದ ಪೂಜಾರಿ ಕುಟುಂಬಗಳ ಸಾಂಸ್ಕೃತಿಕ ಬದುಕಿನ ಸ್ವರೂಪದ ಕಡೆ ಗಮನಹರಿಸ ಲಾಗಿದೆ.

ಪಂಚಾಳ ಕುಶಲಕರ್ಮಿ ಸಮುದಾಯ ಮೂಲತಃ ಬ್ರಾಹ್ಮಣ ವರ್ಗ, ಜ್ಞಾನಮಾರ್ಗ ದೊಂದಿಗೆ, ಕರ್ಮಮಾರ್ಗ ಹಿಡಿದು ಕುಶಲಕರ್ಮಿಗಳಾದರು. ಕಾಲಾಂತರದಲ್ಲಿ ತಮ್ಮ ಉನ್ನತ ಸ್ಥಾನಮಾನ ಕಳೆದುಕೊಂಡುದನ್ನು ಪುರಾಣಗಳು, ಸಾಹಿತ್ಯ ಕೃತಿಗಳ ದಾಖಲಾತಿಗಳೊಂದಿಗೆ ವಿಶ್ಲೇಷಿಸಲಾಗಿದೆ. ಕೆಳಸ್ಥರಕ್ಕೆ ತಳ್ಳಲ್ಪಟ್ಟ ಸಮುದಾಯ ಮತ್ತು ಸಮುದಾಯಿಕ ಪಂಚ ಉದ್ಯೋಗಗಳು ಅಳಿವಿನ ಅಂಚಿಗೆ ತಲುಪಿರುವುದನ್ನು ಸೋದಾರಣವಾಗಿ ಚರ್ಚಿಸಲಾಗಿದೆ. ಸಮುದಾಯ ಪಡೆದುಕೊಂಡ ಉನ್ನತ ಸ್ಥಾನಮಾನಗಳನ್ನು ತಿಳಿಯಲು ಶಾಸನ, ಜನಪದ ತಿಳಿವಳಿಕೆ, ಸಾಹಿತ್ಯ ಕೃತಿಗಳ ಹಿನ್ನೆಲೆಯನ್ನು ಬಳಸಿಕೊಳ್ಳಲಾಗಿದೆ. ಸಾಮಾಜಿಕ ಜೀವನ, ಆರ್ಥಿಕ ಪರಿಸ್ಥಿತಿ ಮತ್ತು ಸಮುದಾಯದ ರೀತಿ-ನೀತಿ ಸಂಪ್ರದಾಯ ಆಚರಣೆಗಳ ಮೇಲೆ ಬೆಳಕು ಹರಿಸಲಾಗಿದೆ. ಪಂಚಾಳ ಸಮುದಾಯದ ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿ ಉದ್ಯೋಗಗಳು ಪಾರಂಪರಿಕ ಕಸಬುಗಳಾಗಿವೆ. ಪ್ರಾಚೀನ ಕಾಲದಲ್ಲಿ ಈ ಉದ್ಯೋಗಗಳ ಗತವೈಭವದ ಪುನರಾವಲೋಕನ ಮಾಡಲಾಗಿದೆ.

ಆಧುನಿಕ ಸಂದರ್ಭದಲ್ಲಿ ಉದ್ಯೋಗಗಳ ಮಹತ್ವತೆ ಮತ್ತು ಕುಶಲಕರ್ಮಿಗಳ ವೃತ್ತಿ ಜೀವನ ಚೈತನ್ಯ ಕಳೆದುಕೊಂಡಿರುವುದನ್ನು ಕಂಡರಿಯಲಾಗಿದೆ. ಪಂಚಾಳ ಕುಶಲಕರ್ಮಿ ಸಮುದಾಯ ಮತ್ತು ಪಂಚ ಉದ್ಯೋಗಗಳು ಉನ್ನತೀಕರಣಗೊಳ್ಳಬೇಕು. ಕೆಳಸ್ತರಕ್ಕಿಳಿದ ಸಮುದಾಯ ಮತ್ತು ಅನ್ಯ ಸಮುದಾಯದ ನಡುವಿನ ಕುಶಲಕರ್ಮಿಗಳ ಸ್ಪರ್ಧೆ ಹಾಗೂ ಜಾಗತೀಕ ವ್ಯವಹಾರದ ಸವಾಲುಗಳನ್ನು ಹೇಗೆ ಎದುರಿಸಬೇಕು? ಎಂಬುದನ್ನು ಕಂಡುಕೊಳ್ಳಲಾಗಿದೆ. ಸಮುದಾಯ ಮತ್ತು ಪಂಚ ಉದ್ಯೋಗಗಳು ಪರಂಪರಾಗತವಾಗಿ ಮುಂದುವರೆಯಬೇಕು. ಈ ನಿಟ್ಟಿನಲ್ಲಿ ಪಂಚಾಳ ಸಮುದಾಯ ಮತ್ತು ಸಮುದಾಯಿಕ ಪಂಚ ಉದ್ಯೋಗಗಳ ಪುನಶ್ಚೇತನಕ್ಕೆ ಹದಿಮೂರು ಆಯಾಮಗಳನ್ನು ಕಂಡುಕೊಂಡು ವಿವೇಚಿಸಲಾಗಿದೆ. ಆಯಾಮಗಳು ಕಾಲ ಕಾಲಕ್ಕೆ ಹೆಚ್ಚು ಕಡಿಮೆಯಾಗುವ ಸಾಧ್ಯತೆಗಳಿರುತ್ತವೆ. ನನ್ನ ಅನುಭವ ಮತ್ತು ಅಧ್ಯಯನದ ಹಿನ್ನೆಲೆಯಲ್ಲಿ ಕೆಲವು ಆಯಾಮಗಳನ್ನು ಏಳನೆಯ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ. ಪಂಚಾಳ ಕುಶಲಕರ್ಮಿ ಸಮುದಾಯ ಮತ್ತು ಶಿರಸಂಗಿ ಕಾಳಮ್ಮನ ನಡುವಿನ ಕಸಬು ಮೂಲ ಸಂಬಂಧಗಳನ್ನು ಕೂಲಂಕುಷವಾಗಿ ವಿವರಿಸುವುದು ಅಧ್ಯಯನದ ಮುಖ್ಯ ಗುರಿಯಾಗಿದೆ.

ಪಂಚಾಳ ಕುಶಲಕರ್ಮಿಗಳ ಕುಲಕಸಬುಗಳ ಶಕ್ತಿಯಾಗಿರುವ ಕಾಳಮ್ಮನ ನೆಲೆ ಶಿರಸಂಗಿಯಾಗಿದೆ. ಪ್ರಬಂಧದ ವಸ್ತು ಶಿರಸಂಗಿ ಪರಿಸರದ ಅಧ್ಯಯನವಾದರೂ ಸಮಸ್ತ ಕರ್ನಾಟಕದ ಕುಶಲಕರ್ಮಿಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸಿದ ಪ್ರಯತ್ನವಿದು. ನಾಡು-ಹೊರನಾಡುಗಳಲ್ಲಿಯೂ ಶಿರಸಂಗಿ ಕಾಳಮ್ಮ ಆರಾಧನೆಯ ಕುಶಲಕರ್ಮಿಗಳಿದ್ದುದು ಇದರಿಂದಾಗಿ ಅಧ್ಯಯನದ ವ್ಯಾಪ್ತಿ ಕರ್ನಾಟಕದುದ್ದಗಲಕ್ಕೂ ವಿಸ್ತರಿಸಿದೆ. ಶಿರಸಂಗಿ ಪರಿಸರವನ್ನು ಅನುಲಕ್ಷಿಸಿ, ಪ್ರಾತಿನಿಧಿಕ ಕುಶಲಕರ್ಮಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಮುಖ್ಯವಾಗಿ ಕರ್ನಾಟಕದ ಉತ್ತರ ಭಾಗದ ಕುಶಲಕರ್ಮಿಗಳ ಲಭ್ಯತೆಗನುಗುಣವಾಗಿ ಕ್ಷೇತ್ರಾಧ್ಯಯನ ಮಾಡಲಾಗಿದ್ದರೂ ಇಡೀ ಕರ್ನಾಟಕದ ಕುಶಲಕರ್ಮಿಗಳನ್ನು ಗಮನದಲ್ಲಿರಿಸಿ ಅಧ್ಯಯನಿಸಲಾಗಿದೆ. ನನ್ನ ಅಧ್ಯಯನದ ಮೇಲೆ ಸಮುದಾಯದ ಅಧ್ಯಯನಕಾರ ಡಾ.ಕೆ.ವಿ.ಕೃಷ್ಣಮೂರ್ತಿಯವರ 'ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು' ಮತ್ತು ಡಾ.ವಾಸುದೇವ ಬಡಿಗೇರ ಅವರ 'ಶಿರಸಂಗಿ ಕಾಳಮ್ಮ' ಕೃತಿಗಳು ಪ್ರಭಾವೀಕರಣಗೊಂಡಿವೆ.

ಶಿರಸಂಗಿ ಪರಿಸರ ನೈಸರ್ಗಿಕ ಸಂಪತ್ತಿನ ದೈವಿಕ ಶಕ್ತಿಯ ತಾಣ. ಕುಶಲಕರ್ಮಿಗಳ ಕಾಯಕದ ನೆಲೆ. ಈ ನೆಲದ ಮಣ್ಣಿನ ಶಕ್ತಿಯನ್ನು ಆತ್ಮದೊಂದಿಗೆ ಬೆರೆಸಿಕೊಂಡ ಕಾಯಕ ಜೀವಿ ಪಂಚಾಳ ಕುಶಲಕರ್ಮಿ ಸಮುದಾಯದ ಸಾಂಸ್ಕೃತಿಕ ಬೆಳವಣಿಗೆಯನ್ನು ಪ್ರಬಂಧದ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಕೊನೆಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ೨೦೧೧, ಪು.೨

೨. ವೀರೇಶ ಬಡಿಗೇರ, **ಕಾಳಿಕಾ ಸಂದೇಶ,** ಮಾರ್ಚ್, ೨೦೧೫, ಪು.೭

೩. ಕೃಷ್ಣಮೂರ್ತಿ ಕೆ.ವಿ.(ಮೂಲ), ಸೂರ್ಯನಾರಾಯಣಾಚಾರ್ ವಿ.ಎಸ್.(ಅನು), **ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು,** ೨೦೧೨, ಪು.೭

೪. ಇರ್ಫಾನ್ ಹಬೀಬ್(ಮೂಲ), ಕಕ್ಕಿಲಾಯ ಬಿ.ವಿ.(ಅನು), **ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ,** ೨೦೧೧, ಪು.೯.

ಅಧ್ಯಾಯ ಎರಡು

ಚಾರಿತ್ರಿಕ ಮತ್ತು ಭೌಗೋಳಿಕ ಮಹತ್ವ

ಅಧ್ಯಾಯ ಎರಡು

ಚಾರಿತ್ರಿಕ ಮತ್ತು ಭೌಗೋಳಿಕ ಮಹತ್ವ

ವಿಶ್ವದಲ್ಲಿ ಭಾರತವು ವೈವಿಧ್ಯಮಯ ಸಂಸ್ಕೃತಿಯಿಂದ ಕೂಡಿ ವಿಶಿಷ್ಟವಾಗಿ ಕಂಡುಬರುತ್ತದೆ. ಈ ದೇಶದ ಜನರ ಆಸಕ್ತಿ-ಆಚರಣೆಗಳು ಒಂದು ಕಾಲಘಟ್ಟದಲ್ಲಿ ಆರಂಭಗೊಳ್ಳುತ್ತವೆ. ಅವು ಬೆಳೆಯುತ್ತ ಹೋದಂತೆ, ಆಚರಣೆಗಳು ಸುತ್ತಮುತ್ತಲಿನ ಪರಿಸರದ ಮೇಲೆ ಪ್ರಭಾವ ಬೀರುತ್ತವೆ. ಜನರು ಮಾಡುವ ಕಸಬುದಾರಿಕೆಯೂ ಕಾರಣವಾಗಿ, ಸಾಮಾಜಿಕ ಮೌಲ್ಯಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಭಾರತ ಸಂಸ್ಕೃತಿಯು ವಿಸ್ತಾರಗೊಳ್ಳುತ್ತ ಸಾಗುತ್ತದೆ. ದೇಶದಲ್ಲಿ ದೇವತೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತೇವೆ. ಬೇರೆ ಬೇರೆ ಉದ್ದೇಶಗಳಿಗಾಗಿ ದೇವತೆಗಳು ಹುಟ್ಟಿಕೊಳ್ಳುತ್ತವೆ. ಅನಂತರದಲ್ಲಿ ತಮ್ಮದೇ ಆದ ಒಂದು ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಳ್ಳುತ್ತವೆ.

ದೇವತೆಗಳು ಒಂದು ಸಮುದಾಯದಲ್ಲಿ ಹುಟ್ಟಿ, ಅನಂತರದಲ್ಲಿ ಆ ಸಮುದಾಯದ ಶಕ್ತಿ ಕೇಂದ್ರವಾಗಿ ಬೆಳೆಯುತ್ತವೆ. ಒಂದು ಕಾಲಘಟ್ಟಕ್ಕೆ ಬಂದಾಗ ಈ ದೇವತೆಗಳು ಸಮುದಾಯವನ್ನು ನಿಯಂತ್ರಿಸುವ ನಿಯಂತ್ರಕಗಳಾಗುತ್ತವೆ. ಈ ದೇವತೆಗಳನ್ನು ಬಿಟ್ಟು ಮಾನವ; ಮಾನವನನ್ನು ಬಿಟ್ಟು ದೇವತೆಗಳು ಇರಲಾರದಷ್ಟು ದೇವ-ಭಕ್ತನ ಸಂಬಂಧಗಳು ನಿರ್ಮಾಣಗೊಳ್ಳುತ್ತವೆ. ಮನುಕುಲದ ಉದ್ಧಾರಕ್ಕಾಗಿಯೇ ಅವತರಿಸಿದ ದೇವತೆಗಳಾಗಿ ನಿರೂಪಿತಗೊಳ್ಳುವುದು ಈ ಮಣ್ಣಿನ ಗುಣವಾಗಿದೆ. ನಮ್ಮ ದೇವತೆಗಳು ಒಂದು ಸಮುದಾಯದ ಕಸಬು ಮೂಲ ಬದುಕಿನ ಆರಾಧ್ಯ ದೇವತೆಗಳಾಗುತ್ತವೆ. ಸಾಮಾಜಿಕ ಮೌಲ್ಯಗಳನ್ನು ಪ್ರತಿಷ್ಠಾನಗೊಳಿಸುವ ಕ್ಷೇತ್ರದ ಅಧಿದೇವತೆಯಾಗುತ್ತವೆ. ಇಂತಹ ಸಾಮಾಜಿಕ ಮೌಲ್ಯಗಳ ಕಸಬುಮೂಲ ದೇವತೆಗಳಲ್ಲಿ ಅಪರೂಪವೆನಿಸಿದವಳು ಶಿರಸಂಗಿ ಕಾಳಮ್ಮ ದೇವತೆ. ಕಾಳಮ್ಮ ಐದು ಕಸಬುದಾರಿಕೆಯ ಪಾಂಚಾಳ ಕುಶಲಕರ್ಮಿಗಳ ಆರಾಧಕಳು. ಪಾಂಚಾಳರ ಜೊತೆಯಲ್ಲಿ ಅನ್ಯಸಮುದಾಯದ ಕುಶಲಕರ್ಮಿಗಳ ಆರಾಧನ ದೇವತೆಯಾಗಿ ಶಿರಸಂಗಿ ಕ್ಷೇತ್ರದಲ್ಲಿ ನೆಲೆಗೊಂಡಿದ್ದಾಳೆ.

ಕರ್ನಾಟಕದ ಕುಶಲಕರ್ಮಿಗಳ ಶಕ್ತಿ ಪೀಠಗಳಲ್ಲಿ ಶಿರಸಂಗಿ ಕಾಳಮ್ಮನ ಗ್ರಾಮವು ಒಂದು ಶಿರಸಂಗಿ ಪರಿಸರವು ಚಾರಿತ್ರಿಕ ದೃಷ್ಟಿಯಿಂದ ಬಹಳ ಮಹತ್ವವನ್ನು ಪಡೆದಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಇಲ್ಲಿ ಮಾನವ ವಾಸವಾಗಿದ್ದನು. ಇಲ್ಲಿಯ ಫಲವತ್ತಾದ ಮಣ್ಣು, ಗುಡ್ಡಗಳು ಕೊರೆದು ನಿರ್ಮಿಸಿದ ಗವಿಗಳಿವೆ. ಕಬ್ಬಿಣ-ತಾಮ್ರ-ಚಿನ್ನದ ಅದಿರು, ಕೆರೆ-ಹೊಂಡ, ಬಾವಿಗಳು ಮಾನವ ವಾಸಕ್ಕೆ ಕಾರಣಗಳಾಗಿವೆ. "ಒಂದು ಸಮಾಜವು ಅಸ್ತಿತ್ವಕ್ಕೆ ಬರುವ ಮತ್ತು ವಿಕಾಸಗೊಳ್ಳುವ ರೀತಿಯನ್ನು ಅರ್ಥ ಮಾಡಿಕೊಳ್ಳಲು ಚಾರಿತ್ರಿಕ ದೃಷ್ಟಿಯನ್ನು ಶಿಸ್ತು ಕ್ರಮ ವಿಧಾನದ ಪ್ರಮುಖಾಂಶವಾಗಿ ಬಳಸಿಕೊಳ್ಳಬೇಕಾದುದರ ಅಗತ್ಯವನ್ನು ಸೂಚಿಸುತ್ತದೆ."[೧] ಯಾವುದೇ ಒಂದು ಸಮುದಾಯವಾಗಲಿ, ಪ್ರದೇಶವಾಗಲಿ ಅವುಗಳ ಅಸ್ತಿತ್ವ ಮತ್ತು ವಿಕಸನವನ್ನು ಅರಿಯಲು ಚಾರಿತ್ರಿಕ ದೃಷ್ಟಿ ಅತ್ಯಂತ ಅವಶ್ಯವಾಗಿದೆ. ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆಯಲ್ಲಿ ಕಾಳಮ್ಮನ ಶಿರಸಂಗಿಯನ್ನು ಅಧ್ಯಯನಿಸುವುದು ಅಗತ್ಯ.

ಭೌಗೋಳಿಕ ಪರಿಸರ

ಶಿರಸಂಗಿಯ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಪ್ರಮುಖ ಗ್ರಾಮವಾಗಿದೆ. ಬೆಳಗಾವಿಯಿಂದ ಆಗ್ನೇಯಕ್ಕೆ ೮೫ ಕಿ.ಮೀ.ದೂರದಲ್ಲಿ ಸವದತ್ತಿ ತಾಲೂಕು ಇದೆ. ಈ ತಾಲೂಕಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಹೊಂದಿದ ಗ್ರಾಮಗಳಲ್ಲಿ ಶಿರಸಂಗಿ ಗ್ರಾಮವು ಒಂದಾಗಿದೆ. ಶಿರಸಂಗಿಯು ಸವದತ್ತಿಯಿಂದ ೨೧ ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವ-ಪಶ್ಚಿಮ; ಉತ್ತರ-ದಕ್ಷಿಣ ದಿಕ್ಕುಗಳಲ್ಲಿ ಬೆಟ್ಟ-ಗುಡ್ಡಗಳು ಆವೃತಗೊಂಡಿವೆ. ದಕ್ಷಿಣ ಭಾಗ ಬಯಲುಪ್ರದೇಶದಿಂದ ಕೂಡಿದೆ. ಹತ್ತಿರದ ಮೇಗುಂಡಿಕೊಳ್ಳ, ಕಲ್ಲೂರು, ರಾಮದುರ್ಗ ಮುಂತಾದ ಸ್ಥಳಗಳಲ್ಲಿ ಗುಡ್ಡಗಳಿವೆ. "ಸೌದತ್ತಿ ಗುಡ್ಡ(೧೩೦ ಮೀ.), ಹೂಲಿಗುಡ್ಡ(೯೦ ಮೀ.), ಹಿರೇಕುಂಬಿ ಗುಡ್ಡ(೧೫೦ ರಿಂದ ೧೮೦ ಮೀ) ಸಮುದ್ರಮಟ್ಟದಿಂದ(೭೮೪ ಮೀ) ಸೌಂದತ್ತಿಯ ಆಗ್ನೇಯದಲ್ಲಿ ಸೋಮೇಶ್ವರ ಗುಡ್ಡ(೯೦ ಮೀ)"[೨] ಎಲ್ಲಮ್ಮನ ಗುಡ್ಡ ಜೋಗಿ ಗುಡ್ಡ, ಮಲ್ಲಯ್ಯನ ಗುಡ್ಡ, ನಾಗರಾಳ ಗುಡ್ಡ, ರಾಕ್ಷಸರಾದ ನಲುಂದಾಸುರ ಗುಡ್ಡ, ನರುಂದಾಸುರ ಗುಡ್ಡ, ಚಿಕ್ಕುಂಬಾಸುರ ಗುಡ್ಡ, ಹಿರೇಕುಂಬಾಸುರಗುಡ್ಡ ಮುಂತಾದ ಗುಡ್ಡಗಳಿರುವಂತೆ, ಶಿರಸಂಗಿ ಸುತ್ತಮುತ್ತಲಿನ ಬೆಟ್ಟ ಪ್ರದೇಶವನ್ನು ಋಷ್ಯಶೃಂಗ ಬೆಟ್ಟವೆಂದು ಕರೆಯಲಾಗುತ್ತಿದೆ. ಇಲ್ಲಿಯ ಬೆಟ್ಟ-ಗುಡ್ಡಗಳು ಉತ್ತರದಿಂದ ೩೫ ಕಿ.ಮೀ.ರವರೆಗೆ ಪಶ್ಚಿಮದ ಬೆಳಗಾವಿ ಕಡೆಗೆ ಹರಡಿದೆ.

ನದಿಗಳು

ಸವದತ್ತಿ ತಾಲೂಕಿನಲ್ಲಿ ಹರಿದಿರುವ ಏಕೈಕ ನದಿ ಮಲಪ್ರಭೆ, ತಾಲೂಕಿನ ಮುನವಳ್ಳಿಯ ಮೂಲಕ ಪಕ್ಕದ ರಾಮದುರ್ಗ ತಾಲೂಕಿನ ತೊರಗಲ್ಲ ಮೇಗುಂಡಿಕೊಳ್ಳ ಬೆಟ್ಟದ ಇಳಿಜಾರಿನಲ್ಲಿ

ಮಲಪ್ರಭೆ ಪೂರ್ವದ ಕಡೆಗೆ ಹರಿಯುತ್ತ ರಾಮದುರ್ಗ ಸೇರುತ್ತದೆ. ಮೇಗುಂಡಿಕೊಳ್ಳ-ಶಿರಸಂಗಿಯನ್ನು ಆವರಿಸಿಕೊಂಡ ಬೆಟ್ಟ; ಋಷ್ಯಶೃಂಗ ಬೆಟ್ಟ. ಮೇಗುಂಡಿಕೊಳ್ಳಕ್ಕೂ ಶಿರಸಂಗಿಗೂ ಬೆಟ್ಟದ ಕಾಲುದಾರಿ ೮ ಕಿ.ಮೀ. ದೂರವಿದೆ. ಶಿರಸಂಗಿಗೆ ೧೦ ಕಿ.ಮೀ. ದೂರದಲ್ಲಿ ಮಲಪ್ರಭೆ ಹರಿದಿದೆ. ಸವದತ್ತಿ-ಮುನವಳ್ಳಿ ನಡುವಿನ ಬೆಟ್ಟವನ್ನು ಸೀಳಿ ನದಿ ಹರಿದಿದೆ. ಈ ನದಿಗೆ 'ಮಲಪಹಾರಿ' 'ಮಲ್ಲರಪ್ರಭೆ' ಎಂದು ಕರೆಯುತ್ತಾರೆ. ಈ ಮಲಪ್ರಭೆ ಕುರಿತು ಒಂದು ಐತಿಹ್ಯ ಕಥೆಯನ್ನು ಇಲ್ಲಿಯ ಜನ ಹೇಳುತ್ತಾರೆ. ಮಲಪ್ರಭೆ ಸವದತ್ತಿ ಮಾರ್ಗವಾಗಿ ಪೂರ್ವಕ್ಕೆ ಸಾಗುತ್ತಿರುವಾಗ, ಬೆಟ್ಟ ಎದುರುಗೊಳ್ಳುತ್ತದೆ. ತನ್ನ ಹರಿವ ದಿಕ್ಕನ್ನು ಮಲಪ್ರಭೆ ಬದಲಾಯಿಸುತ್ತದೆ. ಮಾರ್ಗ ಬದಲಾಯಿಸಿದ ಮಲಪ್ರಭೆಯನ್ನು ಬೆಟ್ಟದ ಮೇಲೆ ಕುಳಿತು ನೋಡುತ್ತಿದ್ದ ನವಿಲು "ಬೆಟ್ಟಕ್ಕಂಜಿ ಮಲ್ನಾಡ ಸೇರಿದಳು ಮಲ್ಲಿ" ಎಂದು ಕೂಗುತ್ತದೆ. ಸ್ವಾಭಿಮಾನಿಯಾದ ಮಲಪ್ರಭೆ ನವಿಲು ಕುಳಿತ ಬೆಟ್ಟವನ್ನು ಸೀಳಿ ಶಿರಸಂಗಿ ಪ್ರದೇಶದತ್ತ ಹರಿದು ಬರುತ್ತದೆ. ನವಿಲಿನ ಮಾತು ಇಂದಿಗೂ ಈ ಭಾಗದಲ್ಲಿ ನಾಣ್ಣುಡಿಯಾಗಿ ಬೆಳೆದುಬಂದಿದೆ. ಬೆಟ್ಟ ಸೀಳಿ ಹರಿದ ಪ್ರದೇಶದಲ್ಲಿ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದ್ದು, ಅದಕ್ಕೆ "ನವಿಲುತೀರ್ಥ"ವೆಂದು ಕರೆಯುತ್ತಾರೆ. ಈ ನದಿಯೊಂದಿಗೆ ಹಲವಾರು ಹಳ್ಳ-ಕೊಳ್ಳಗಳು, ಚಿಕ್ಕ-ಚಿಕ್ಕ ನೀರಿನ ಝುರಿಗಳು ಹರಿಯುತ್ತವೆ. ಕಲ್ಲೂರ ಸಿದ್ದೇಶ್ವರ ಕೊಳ್ಳ, ಶಬರಿಕೊಳ್ಳ, ಮೇಗುಂಡಿ ಕೊಳ್ಳಗಳಿವೆ. ಇಲ್ಲಿಯ ನಿಸರ್ಗರಮಣೀಯ ವಾದ ವನವನ್ನು "ಕಾಮ್ಯಕವನ" ಎಂದು ಕರೆಯುತ್ತಿದ್ದು, ಶಿವನನ್ನು ಕಾಮೇಶ್ವರ ಎನ್ನಲಾಗುತ್ತಿದೆ. ಈ ಹಿನ್ನಲೆಯಲ್ಲಿ ರಾಮದುರ್ಗ-ಶಿರಸಂಗಿ ನಡುವಿನ ಬೆಟ್ಟದ ಪ್ರದೇಶದಲ್ಲಿ, ರಾಮದುರ್ಗದಿಂದ ೪ ಕಿ.ಮೀ. ಅಂತರದಲ್ಲಿ ೬೫ ಅಡಿ ಎತ್ತರದ ಶಿವನಮೂರ್ತಿಯನ್ನು ಪ್ರತಿಷ್ಠಾಪಿಸಲು ಕಾರ್ಯಾರಂಭಗೊಂಡಿದೆ. ಅದು ಮುರಡೇಶ್ವರದಲ್ಲಿರುವ ಶಿವನಮೂರ್ತಿಯನ್ನು ಹೋಲುವಂತೆ, ಈ ಕಾಮ್ಯಕ ವನದಲ್ಲಿ ಶಿವ-ಕಾಮೇಶ್ವರನಾಗಿ ಪ್ರತಿಷ್ಠಾಪನಗೊಳ್ಳಲಿದ್ದಾನೆ.

ಭೂರಚನೆ

ಶಿರಸಂಗಿ ಪ್ರದೇಶವು ಬೆಟ್ಟ-ಗುಡ್ಡಗಳಿಂದ ಆವೃತವಾಗಿದೆ. ಈ ಪ್ರದೇಶದಲ್ಲಿಯ ಶಿಲಾ ರಚನೆಯನ್ನು ಕಲಾದಗಿ ಪರಿಸರದ ಶಿಲೆಯೆಂದು ಕರೆಯುತ್ತಾರೆ. ಕಲಾದಗಿ ಪರಿಸರದ ಶಿಲೆಯು "ಸುಮಾರು ೫ ಸಾವಿರ ಚ.ಕಿ.ಮೀ. ವಿಸ್ತೀರ್ಣದಲ್ಲಿ ನೈಸುಗಳು ಪದರು ಶಿಲೆಗಳ ಮೇಲೆ ಇವುಗಳ ಹೊದಿಕೆ ನಿಂತಿವೆ. ಇದರಲ್ಲಿ ಕಲಾದಗಿ, ಬಾದೂರು, ರಾಮದುರ್ಗ, ಬಾಗಲಕೋಟೆ ರಚನೆಗಳಿವೆ. ಗುಂಡು ಶಿಲೆ ಕ್ವಾರ್ಟ್ಸ್(Quartz arenites)ಗಳು ರಾಮದುರ್ಗದಲ್ಲಿದ್ದು, ಇದು ಶಿರಸಂಗಿ ಮೂಲಕ ನವಿಲುತೀರ್ಥ, ಬೈಲಹೊಂಗಲದವರೆಗೂ ಹಬ್ಬಿದೆ"[೩] ಇಲ್ಲಿಯ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಗುಂಡು ಶಿಲೆಯ ಒಂದು ಭಾಗದ ಕಣಗಳು ಹೇರಳವಾಗಿ ದೊರೆಯುತ್ತವೆ.

ರಾಮದುರ್ಗ-ಸವದತ್ತಿ ಶಿರಸಂಗಿ, ನವಲಗುಂದ, ನರಗುಂದ ಭಾಗಗಳಲ್ಲಿ ಕಲಾದಗಿ ಪರಿಸರದ ಶಿಲಾ ಪದರುಗಳು ಕಂಡುಬರುತ್ತಿವೆ. ಕಲಾದಗಿ ಪರಿಸರದ ಶಿಲೆಯನ್ನು "ರಾಬರ್ಟ್ ಬ್ರೂಸ್ ಪೂಟ್' ಎಂಬುವನು ಪ್ರಾರಂಭದಲ್ಲಿ ಇದನ್ನು ಕೆಳ ಮತ್ತು ಮೇಲ್ವರ್ಗಗಳೆಂದು ವಿಂಗಡಿಸಿದ್ದಾನೆ."[೪]

ಮಣ್ಣು

ಈ ಪ್ರದೇಶದ ಮಣ್ಣು ಹೆಚ್ಚಾಗಿ ಕೃಷಿಗೆ ಉಪಯೋಗವಾಗಿದೆ. ಕಪ್ಪು ಎರೆ ಮಣ್ಣು ಹಾಗೂ ಕೆಂಪು ಮರಳಿನಿಂದ ಕೂಡಿದ ಮಿಶ್ರಮಣ್ಣು ಇಲ್ಲಿದೆ. ಮಲಪ್ರಭೆಯ ನದಿಯನ್ನು ಕಾಲುವೆ ಮೂಲಕ ಹರಿಸಿರುವುದರಿಂದ ಶಿರಸಂಗಿ ಪ್ರದೇಶದ ಕೆಲವು ಭಾಗ ನೀರಾವರಿ ಪ್ರದೇಶವಾಗಿದೆ. ಕೆಲವು ಭಾಗ ಸಾಗುವಳಿಯ ಭೂಮಿಯು ಮಳೆಯನ್ನು ಆವಲಂಬಿಸಿದೆ. ಬೇಸಿಗೆಯ ಅವಧಿಯಲ್ಲಿ ೪೨° ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಿನ ಉಷ್ಣಾಂಶವನ್ನು ಈ ಪ್ರದೇಶದಲ್ಲಿ ಕಾಣುತ್ತೇವೆ.

ಬೆಳೆಗಳು

ಶಿರಸಂಗಿಯ ಸುತ್ತಲಿನ ಪ್ರದೇಶದಲ್ಲಿ ಮಳೆಯಾಧಾರಿತ ನೆಲದಲ್ಲಿ ಬಿಳಿಜೋಳ, ಕಡಲೆ, ಸಜ್ಜೆಯನ್ನು, ಹೆಸರನ್ನು ಬೆಳೆಯಲಾಗುತ್ತದೆ. ಮಲಪ್ರಭಾ ನದಿಯ ನೀರಿನಿಂದ ಗೋಧಿ, ಸದಕ, ಗೋವಿನ ಜೋಳ, ಕಬ್ಬು, ಹತ್ತಿ, ಬಾಳೆ, ಶೇಂಗಾ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಹೆಚ್ಚಾಗಿ ಗೋವಿನ ಜೋಳ ಮತ್ತು ಕಬ್ಬು ಈ ಭಾಗದಲ್ಲಿ ಕಂಡುಬರುತ್ತದೆ. ಈ ಪ್ರದೇಶದ ಕಾಡು ಮತ್ತು ಬೆಟ್ಟ ಗುಡ್ಡಗಳಲ್ಲಿ ಚಿರತೆ, ಕರಡಿ, ನರಿ, ತೋಳ, ಹುಲಿ, ಕಾಡು ಪ್ರಾಣಿಗಳಿವೆ. ಹಂದಿ, ನಾಯಿ, ಬೆಕ್ಕು, ಕೋಳಿ, ಕುರಿ, ಗಿಳಿ, ಪಾರಿವಾಳ, ನವಿಲು, ಸಾಕು ಪ್ರಾಣಿ-ಪಕ್ಷಿಗಳಿವೆ. ಮಲಪ್ರಭೆ ನದಿಯ ದಂಡೆಗಳ ಗ್ರಾಮಗಳಲ್ಲಿ ಮೀನು ಸಾಕಲಾಗುತ್ತದೆ.

ಪ್ರಾಗಿತಿಹಾಸ ಕಾಲ

ಶಿರಸಂಗಿ ಪ್ರದೇಶವು ಪ್ರಾಗಿತಿಹಾಸ ಕಾಲದಿಂದಲೂ ಮಾನವನು ವಾಸವಾಗಿರಲು ಯೋಗ್ಯವಾಗಿರುವ ಪ್ರದೇಶವಾಗಿತ್ತು. ಇಲ್ಲಿಯ ಫಲವತ್ತಾದ ಮಣ್ಣು ಮಾನವನ ಕೃಷಿ ಬಳಕೆಗೆ ಪೂರಕವಾಗಿತ್ತು. ಇಲ್ಲಿ ದೊಡ್ಡದಾದ ಬಂಡೆಗಲ್ಲುಗಳಿವೆ. ಪ್ರಕೃತಿ ಮತ್ತು ಮಾನವ ನಿರ್ಮಿತವಾದ ಗವಿಗಳು ದೊರೆಯುತ್ತವೆ. ಮಾನವನ ಪ್ರಾಚೀನ ಇತಿಹಾಸದ ಕಾಲಘಟ್ಟ, ಏಳು ಹಂತಗಳಲ್ಲಿ ಗುರುತಿಸಬಹುದಾಗಿದೆ. "ಆದಿ ಶಿಲಾಯುಗ(೫ಲಕ್ಷ ಅಥವಾ ಅದಕ್ಕೂ ಮುಂಚೆ), ಮಧ್ಯಹಳೆ ಶಿಲಾಯುಗ(ಕ್ರಿ.ಪೂ.೭೦,೦೦೦-೩೦,೦೦೦), ಅಂತ್ಯ ಹಳೆ ಶಿಲಾಯುಗ(ಕ್ರಿ.ಪೂ.-೪೦,೦೦೦-೧೦,೦೦೦), ಮಧ್ಯ(ಸೂಕ್ಷ್ಮ)ಶಿಲಾಯುಗ(ಕ್ರಿ.ಪೂ.೭೦೦೦-೩೦೦೦), ನವಶಿಲಾ ಶಿಲಾ-ತಾಮ್ರಯುಗ

(ಕ್ರಿ.ಪೂ.೨೨೦೦-೮೦೦), ಕಬ್ಬಿಣ ಬೃಹತ್ ಶಿಲಾಯುಗ(ಕ್ರಿ.ಪೂ.೧೨೦೦-೨೦೦)ಆದಿ ಇತಿಹಾಸಕಾಲ(ಕ್ರಿ.ಪೂ.೩೦೦-ಕ್ರಿ.ಶ.೧-೨)"[೫] ೫ ಲಕ್ಷ ವರ್ಷಗಳ ಪೂರ್ವದಲ್ಲೂ ಮಾನವ ವಿವಿಧ ಪ್ರದೇಶಗಳಲ್ಲಿ ವಾಸವಾಗಿದ್ದದು ತಿಳಿದುಬರುತ್ತದೆ. ಶಿರಸಂಗಿ ಪ್ರದೇಶದ ಕ್ಷೇತ್ರಕಾರ್ಯಗಳಿಂದಲೂ ಕಂಡುಬಂದಿರುವ ಪ್ರಾಗಿತಿಹಾಸ ಕಾಲದ ಅವಶೇಷಗಳಿಂದ ಮಾನವನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ವಿವಿಧ ಸ್ಥಳಗಳನ್ನು ಆಯಾ ಕಾಲಘಟ್ಟದ ನೆಲೆಗಳಲ್ಲಿ ಗುರುತಿಸಲಾಗಿದೆ. ಶಿರಸಂಗಿ ಪ್ರದೇಶವು ಆದಿ ಹಳೆ ಶಿಲಾಯುಗ, ಮಧ್ಯಹಳೆ ಶಿಲಾಯುಗ, ನವಶಿಲಾ-ಶಿಲಾತಾಮ್ರಯುಗ ಕಬ್ಬಿಣ-ಬೃಹತ್ ಶಿಲಾಯುಗ ಮತ್ತು ಇತಿಹಾಸ ಪ್ರಾರಂಭ ಕಾಲ ಘಟ್ಟಗಳಲ್ಲಿ ಮಾನವ ವಾಸವಾಗಿದ್ದು ತಿಳಿದುಬರುತ್ತದೆ. ಈ ಎಲ್ಲ ಶಿಲಾಯುಗಗಳಲ್ಲಿಯ ನೆಲೆಗಳನ್ನು ಗಮನಿಸಿದಾಗ, ಶಿರಸಂಗಿ ಪರಿಸರದಲ್ಲಿ ಆದಿ ಹಳೆಶಿಲಾಯುಗದಿಂದ ಆರಂಭಗೊಂಡು ಎಲ್ಲ ಶಿಲಾಯುಗದವರೆಗೂ ಮಾನವನ ಸಾಂಸ್ಕೃತಿಕ ಪರಂಪರೆ ಬೆಳೆದು ಬಂದಿದೆ. ಮಲಪ್ರಭಾ ನದಿ ಬಯಲು ಪ್ರದೇಶದ ಶಿರಸಂಗಿ, ಹೂಲಿ ಮುಂತಾದ ನೆಲೆಗಳು ಆದಿ ಹಳೆಶಿಲಾಯುಗದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಸುತ್ತವೆ.

ಶಿರಸಂಗಿ ಭೂಪ್ರದೇಶವು ಕೇವಲ ಭೌತಿಕವಾದ ಕಲ್ಲು-ಮಣ್ಣಿನ ನೆಲವಲ್ಲ. ಅದೊಂದು ವಿಶ್ವಶಕ್ತಿ, ಪ್ರಾಗಿತಿಹಾಸ ಕಾಲದಿಂದಲು ಈ ನೆಲಕ್ಕೆ ಒಂದು ಶಕ್ತಿಯಿದೆ. ಗ್ರಾಮದ ಉತ್ತರಕ್ಕೆ ಒಳ ಸರಿತವುಂಟಾಗಿ ಪೂರ್ವ, ಪಶ್ಚಿಮ, ಉತ್ತರದಲ್ಲಿ ಬೆಟ್ಟ ಆವೃತವಾಗಿದೆ. ಅದರ ಒಂದು ವಿಶಾಲಭಾಗ ಬಯಲು ಪ್ರದೇಶ ಇಲ್ಲಿ ಪ್ರಾಚೀನ ಕಾಲದಿಂದಲೂ ಮಾನವನು ವಾಸವಾಗಿದ್ದ ನೆಲೆಯಾಗಿದೆ. ಶಿರಸಂಗಿ ಕಾಳಮ್ಮನ ದೇವಾಲಯ ದಕ್ಷಿಣ ದಿಕ್ಕಿಗೆ ಹೊಂದಿಕೊಂಡ ವಿಶಾಲ ಪ್ರದೇಶವಾಗಿದೆ.

ಹಳೆ ಶಿಲಾಯುಗ

ಈ ಯುಗವನ್ನು ಸು.೫ ಲಕ್ಷದಿಂದ ೧.೨೫ ಲಕ್ಷ ವರ್ಷಗಳಷ್ಟು ಹಳೆಯದೆಂದು ಗುರುತಿಸಲಾಗಿದೆ. ಹಳೆ ಶಿಲಾಯುಗದ ಅವಶೇಷಗಳು ಭಾರತದ ಹಲವಾರು ಸ್ಥಳಗಳಲ್ಲಿ ಕಂಡುಬರುತ್ತವೆ. ಕರ್ನಾಟಕದ ಅನಗವಾಡಿ ಮತ್ತು ಹುನಸಗಿಯಲ್ಲಿಯೂ ದೊರೆಯುತ್ತವೆ. ಶಿರಸಂಗಿಯಲ್ಲಿ ದೊರೆತ ಉಪಕರಣಗಳ ಕುರಿತು ಎಸ್.ಕೆ.ಜೋಶಿ ಅವರು ಈ ಹಿಂದೆ ಅಧ್ಯಯನ ಮಾಡಿದ್ದಾರೆ. "ಹುನಸಿಗೆಯಲ್ಲಿ ತಾತ್ಕಾಲಿಕವಾಗಿ ಅಡ್ಡ ಮರೆ ಮಾಡಿಕೊಂಡಿದ್ದ ಗುರುತು ಮತ್ತು ತನ್ನ ದೈನಂದಿನ ಜೀವನಕ್ಕೆ ಬೇಕಾದ ಕಲ್ಲಿನ ಉಪಕರಣಗಳನ್ನು ಮಾಡಲು ಉಪಯೋಗಿಸಿದ ಅಡಿಗಲ್ಲು ಉತ್ಖನನದಲ್ಲಿ ಶೋಧವಾಗಿದೆ."[೬] ಈ ಪ್ರದೇಶಗಳಲ್ಲಿ ಮಾನವನು ಬಳಸಿ ಬಿಟ್ಟುಹೋದ ಶಿಲಾ ಉಪಕರಣಗಳು ದೊರೆಯುತ್ತವೆ. ಈ ಹಂತದಲ್ಲಿ ಮಾನವ

ದಿನನಿತ್ಯ ಆಹಾರ ಸಂಗ್ರಹಿಸುವುದು ಮತ್ತು ಬೇಟೆಗಾರಿಕೆಯನ್ನು ಮಾಡುತ್ತಿದ್ದನು. ಈ ಹಂತದ ಉಪಕರಣಗಳನ್ನು ಗೆಡ್ಡೆ-ಗೆಣಸುಗಳನ್ನು ಅಗೆದು ತೆಗೆಯುವುದು, ಬೇಟೆಯಾಡಿದ ಪ್ರಾಣಿಗಳ ಚರ್ಮ ಬೇರ್ಪಡಿಸಿ, ಪ್ರಾಣಿಯ ಮಾಂಸವನ್ನು ತುಂಡು ತುಂಡಾಗಿ ಮಾಡಲು ಬಳಕೆ ಮಾಡುತ್ತಿದ್ದನೆಂಬುದು ತಿಳಿದುಬರುತ್ತದೆ. ಇಂತಹ ಉಪಕರಣಗಳನ್ನು ಮಲಪ್ರಭಾ ನದಿ ಬಯಲಿನ ಖ್ಯಾತ, ಢಾನಕ್ ಶಿರೂರ ಎಂಬಲ್ಲಿ ಗುರುತಿಸಲಾಗಿದೆ.

ಮಧ್ಯ(ಸೂಕ್ಷ್ಮ) ಶಿಲಾಯುಗ

ಹಳೆಯ ಶಿಲಾಯುಗದಿಂದ ಮಾನವನ ದಿನನಿತ್ಯದ ಬದುಕಿನಲ್ಲಿ ಬದಲಾವಣೆಗಳು ಆಗುತ್ತ ಬಂದವು. ಅವನು ಬಳಸುತ್ತಿದ್ದ ಕಲ್ಲಿನ ಉಪಕರಣಗಳು ಬದಲಾದವು. ಮರಳು ಕಲ್ಲಿನ ಬದಲಾಗಿ ಜಾಸ್ಪರ್ ಮತ್ತು ಚರ್ಟ್ ಕಲ್ಲುಗಳಿಂದ ಉಪಕರಣಗಳು ತಯಾರಾದವು. "ಮೊದಲಿದ್ದ ದೊಡ್ಡ ಒರಟು ಕಲ್ಲುಗಳಿಗೆ ಬದಲಾಗಿ ಚಕ್ಕೆಗಳನ್ನು ಎಬ್ಬಿಸಿ ತೆಳ್ಳಗಿನ ಹೆರೆಯುವ ಚಕ್ಕೆಗಳು(Scrapers) ನೀಳವಾದ ಉದ್ದನೆಯ ಚಕ್ಕೆಗಳು(Blodes), ಚೂಪಾದ ಕೊರೆಯುವ ಮೊನೆಗಳು(Burins), ತೂತು ಮಾಡಲು ಅನುಕೂಲವಾಗುವಂಥಹ ಮೊನೆಗಳು(Points)"[೭] ಈ ಉಪಕರಣಗಳು ನಂತರದಲ್ಲಿ ಬಳಕೆಗೊಂಡವು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯೂ ಇಂಥಹ ಉಪಕರಣಗಳು ದೊರೆತಿವೆ. "ಬಳ್ಳಾರಿ ಮೊಕರಸ್ತೆಯಲ್ಲಿರುವ ಬಂಗಲೆ ತೋಟದ ಹತ್ತಿರ ನಡೆಸಿದ ಉತ್ಖನನದಲ್ಲಿ ಚರ್ಟ್, ಕ್ವಾರ್ಜ್, ವೈಟ್‌ಕ್ವಾರ್ಜ್ ಶಿಲೆಯಲ್ಲಿ ತಯಾರಿಸಿದ ಉಪಕರಣಗಳು ಮತ್ತು ಇವುಗಳ ತಯಾರಿಕೆಗಾಗಿ ಬಳಸಿದ ಶಿಲಾಗಟ್ಟಿಗಳು ದೊರೆತಿವೆ."[೮] ಕಪ್ಪು-ನಸುಗೆಂಪಿನ ಬಣ್ಣದ ಚರ್ಟ್ ಶಿಲೆಯಲ್ಲಿ ಸಾಲವಾಡಗಿ ಮತ್ತು ಭುವನಹಳ್ಳಿಯಲ್ಲಿಯೂ ಉಪಕರಣಗಳನ್ನು ತಯಾರಿಸಲಾಗುತ್ತಿತ್ತು.

ಈ ಹಂತದಲ್ಲಿ ಮಾನವ ಸಾಂಸ್ಕೃತಿಕವಾಗಿ ಬದಲಾಗುತ್ತ ಬಂದನು. ಆಹಾರ ಸಂಗ್ರಹಣೆಯ ಜೊತೆಗೆ ವ್ಯವಸಾಯಗಾರಿಕೆಯನ್ನು ಕಲಿತುಕೊಳ್ಳುತ್ತಾನೆ. ಇಲ್ಲಿ ಅತಿ ಸೂಕ್ಷ್ಮವಾದ "ಸಮಾನ ಅಂಚುಗಳುಳ್ಳ ಅಲಗುಗಳು, ಚಿಕ್ಕ ಅಲಗುಗಳು, ಬಾಗಿದ ಅಲಗುಗಳು, ಮೊನೆಗಳು, ಸಣ್ಣ ಬೈರಿಗೆಗಳು, ಆಹಾರ ಕತ್ತರಿಸುವ ಚಿಕ್ಕ ಮಚ್ಚುಗಳು"[೯] ಶಿಲಾ ಉಪಕರಣಗಳು ಬಳಕೆಯಲ್ಲಿದ್ದವು.

ನವಶಿಲಾ-ಶಿಲಾತಾಮ್ರಯುಗ

ಈ ಹಂತದಲ್ಲಿ ಮಾನವ ಒಟ್ಟು ಚಟುವಟಿಕೆಗಳು ಬದಲಾವಣೆಗೊಂಡವು. ಕಲ್ಲಿನ ಕೊಡಲಿಗಳು, ಕೈಬಾಚಿಗಳು, ಉಳಿಗಳು, ಮಡಿಕೆಗಳು ಕಂಡುಬರುತ್ತವೆ. ಈ ಕಾಲಘಟ್ಟದ ಸಂಸ್ಕೃತಿಯ ಹಂತದಲ್ಲಿ ಕೆಲವು ಪಾತ್ರಾವಶೇಷಗಳು ಬೇರೆ ಬೇರೆ ಬಣ್ಣದಿಂದ ಕೂಡಿದ್ದವು. ಬೂದು, ತಿಳಿಬೂದು, ಕಂದು, ಮಿಂಚುವ ಕಂದು, ಕಪ್ಪು-ಕೆಂಪು ಮಿಶ್ರ ನಸುಗೆಂಪು ಮಿಶ್ರಿತ

ಬೂದು, ಕೆಂಪು ಬಣ್ಣದ ಮಡಿಕೆಗಳನ್ನು ಗುರುತಿಸಲಾಗಿದೆ. ಮಾನವನ ಕೃಷಿ ಮತ್ತು ಪಶುಪಾಲನೆ ಕಾರ್ಯ ಆರಂಭಗೊಂಡಂತೆ, ವಾಸಿಸುವ ಮನೆಗಳು ಹುಟ್ಟಿಕೊಳ್ಳುತ್ತವೆ. ನದಿ ದಂಡೆಯ ಮೇಲೂ ವಾಸದ ನೆಲೆಗಳಿದ್ದವು. ದೊಡ್ಡ ದೊಡ್ಡ ಬೆಟ್ಟ ಗುಡ್ಡಗಳಲ್ಲಿಯೂ ಗುಹೆಗಳಲ್ಲಿ ವಾಸ್ತವ್ಯಕ್ಕಾಗಿ ಅನುಕೂಲ ಮಾಡಿಕೊಂಡಿರುವುದು ಕಂಡುಬರುತ್ತದೆ. ವಾಸ್ತವ್ಯದ ನೆಲೆಗಳನ್ನು "ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿದ ಮಾರ್ಟಿಮರ್ ವ್ಹೀಲರ್ ಅವರು ನವಶಿಲಾಯುಗದಿಂದ ಮೊದಲ್ಗೊಂಡು ಒಟ್ಟು ನಾಲ್ಕು ಹಂತಗಳನ್ನು ಗುರುತಿಸಿದ್ದಾರೆ."[೧೦]

೧. ಬ್ರಹ್ಮಗಿರಿ

೨. ಮಸ್ಕಿ

೩. ಸಂಗನಕಲ್ಲು

೪. ತೆಕ್ಕಲಕೋಟೆ

ಉತ್ತರ ಭಾರತದಲ್ಲಿ ಸಾವಳದಾ ಸಂಸ್ಕೃತಿ ಗುರುತಿಸಲಾಗಿದೆ. ಹಾಗೇ ದಕ್ಷಿಣ ಭಾರತದಲ್ಲಿಯ ಉಪಕರಣಗಳನ್ನು ಮಸ್ಕಿ ಸಂಸ್ಕೃತಿಗೆ ಹೋಲಿಸಲಾಗಿದೆ. ಮಲಪ್ರಭಾ, ಘಟಪ್ರಭಾ ಮತ್ತು ತುಂಗಭದ್ರಾ ಕೆಳದಂಡೆ ಪ್ರದೇಶದಲ್ಲಿ ದೊರೆತಿರುವ ಪಾತ್ರಾವಶೇಷಗಳು ಮಸ್ಕಿ ಮಾದರಿ ಸಂಸ್ಕೃತಿಯ ಉಪಕರಣಗಳಾಗಿವೆ.

ಮಲಪ್ರಭಾ ನದಿ ಬಯಲಿನಲ್ಲಿ ಕಂಡುಬರುವ ಶಿರಸಂಗಿ ಪ್ರದೇಶವು ನವಶಿಲಾಯುಗ ಶಿಲಾ–ತಾಮ್ರಯುಗ–ಕಬ್ಬಿಣ ಬೃಹತ್ ಶಿಲಾಯುಗದ ಪ್ರಮುಖ ನೆಲೆಯಾಗಿದೆ. ಇಲ್ಲಿ ಕುಲುಮೆ ಕಾರ್ಯಾಗಾರ ನಡೆದಿದೆ. ಹಳದಿ ಮಿಶ್ರಿತ ಕಂದುಬಣ್ಣದ ತಾಮ್ರದ ಅದಿರು, ಕಬ್ಬಿಣದ ಉಂಡೆಗಳು ಹರಡಿಕೊಂಡಿವೆ. ಈ ಸಂಗತಿಗಳನ್ನು ಗಮನಿಸಿದರೆ ಶಿರಸಂಗಿಯಲ್ಲಿ ಬೃಹತ್ ಪ್ರಮಾಣದಲ್ಲಿ ಕುಲುಮೆ ಚಟುವಟಿಕೆ ನಡೆದಿರುವುದು ಸ್ಪಷ್ಟವಾಗುತ್ತದೆ.

ನವಶಿಲಾಯುಗದ ಎರಡನೆಯ ಹಂತವಾಗಿ ಉಜ್ಜಿ ನಯಗೊಳಿಸಿದ ಕೈಗೊಡಲಿ, ಕೈಬಾಚಿಗಳೊಂದಿಗೆ ತಾಮ್ರದ ಉಪಕರಣಗಳನ್ನು ಗುರುತಿಸಲಾಗಿದೆ. ಕರ್ನಾಟಕದ ಹಲವಾರು ಭಾಗಗಳಲ್ಲಿ ತಾಮ್ರದ ನಿಕ್ಷೇಪಗಳು ಪತ್ತೆಗೊಂಡಿವೆ. ಅದಿರನ್ನು ಸಂಗ್ರಹಿಸಿ ಕುಲುಮೆಗಳಲ್ಲಿ ಕರಗಿಸಿ ವಿನೂತನ ರೀತಿಯಲ್ಲಿ ಉಪಕರಣಗಳನ್ನು ತಯಾರಿಸುವ ತಾಂತ್ರಿಕತೆ ಬಳಕೆಯಾಯಿತು. ಲೋಹವನ್ನು ತಯಾರಿಸಿ ಅದರಿಂದ ಆಭರಣಗಳನ್ನು, ಆಯುಧಗಳನ್ನು ಮಾಡಲಾಗುತ್ತಿತ್ತು. ಈ ಕಾಲದಲ್ಲಿ ಮಾನವನ ಜೀವನದಲ್ಲಿ ತುಂಬಾ ಬದಲಾವಣೆಗಳಾದವು. ಶಿಲಾಯುಧಗಳ ತಯಾರಿಕೆ ಜೊತೆಯಲ್ಲಿ ತಾಮ್ರ–ಕಂಚಿನ ಆಯುಧೋಪಕರಣಗಳು ಸಿದ್ಧಗೊಂಡವು. ಹೀಗಾಗಿ ಈ ಹಂತದ ಸಂಸ್ಕೃತಿಯನ್ನು ಶಿಲಾ–ತಾಮ್ರಯುಗವೆಂದು ಗುರುತಿಸಲಾಗಿದೆ.

ಶಿಲಾ-ತಾಮ್ರಯುಗದ ಸಂಸ್ಕೃತಿಯ ಉಪಕರಣಗಳಲ್ಲಿ ಬೂದು ವರ್ಣದ ಮಡಿಕೆಗಳು ಮುಖ್ಯವಾಗಿ ಶಿರಸಂಗಿಯಲ್ಲಿ ದೊರೆಯುತ್ತವೆ. ಕಲ್ಲಿನ ಕೊಡಲಿಗಳು ಕಂಡುಬಂದಿಲ್ಲವೆಂದು ವಾಸುದೇವ ಬಡಿಗೇರ ಅವರು ಶಿರಸಂಗಿ ಕಾಳಮ್ಮ ಕೃತಿಯಲ್ಲಿ ಹೇಳಿದ್ದಾರೆ. ಮಣ್ಣಿನ ಮಡಿಕೆಗಳಿಗೆ ಸಂಬಂಧಿಸಿದಂತೆ ಶಿರಸಂಗಿ ಪರಿಸರದ ಕಲ್ಲೂರು, ಮಾರಡಗಿ, ಕಿತ್ತೂರ(ಬೈಲಹೊಂಗಲ ತಾಲೂಕು) ಗೋಕಾಕ ತಾಲೂಕಿನ ಕೊಣ್ಣೂರ ಮುಂತಾದ ಸ್ಥಳಗಳಲ್ಲಿ ಬೂದು-ಕಂದು ಬಣ್ಣದ ಮಡಿಕೆಗಳು ದೊರೆತಿವೆ.

ಕಬ್ಬಿಣ-ಬೃಹತ್ ಶಿಲಾಯುಗ ಸಂಸ್ಕೃತಿ

ವಿಶಿಷ್ಟ ರೀತಿಯ ಸಂಸ್ಕೃತಿಯನ್ನು ಈ ಕಾಲದಲ್ಲಿ ನೋಡುತ್ತೇವೆ. ಇದು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಕಂಡುಬಂದಿದೆ. ಶಿಲಾ-ತಾಮ್ರಯುಗದ ಸಂಸ್ಕೃತಿಯ ಮುಂದುವರೆದ ಬದಲಾವಣೆ ಯನ್ನು ಬೃಹತ್‌ಶಿಲಾ ಸಂಸ್ಕೃತಿಯೆಂದು ಗುರುತಿಸಲಾಗಿದೆ. ಮೃತರಿಗಾಗಿ ದೊಡ್ಡ ದೊಡ್ಡ ಕಲ್ಲಿನಿಂದ ಗೋರಿಗಳನ್ನು ನಿರ್ಮಿಸಲಾಗುತ್ತಿತ್ತು. ಇದನ್ನು ಬೃಹತ್ ಶಿಲಾಯುಗವೆಂದು ಗುರುತಿಸಲಾಗಿದೆ. ಇಂತಹ ಬೃಹತ್ ಶಿಲಾಸಂಸ್ಕೃತಿಯ ನೆಲೆಗಳು ತೇರದಾಳದಿಂದ ತಾಳಿಕೋಟೆ ವರೆಗೂ ಇವೆ.

"ಶಿರಸಂಗಿಯಲ್ಲಿ ಶಿಲಾ-ತಾಮ್ರಯುಗದ ಮೇಲ್ಭಾಗದ ಸ್ತರದಲ್ಲಿ ಕಬ್ಬಿಣ-ಬೃಹತ್ ಶಿಲಾ ಸಂಸ್ಕೃತಿಯ ಬೆಳವಣಿಗೆ ಕಾಣಿಸುತ್ತದೆ. ಇದರಲ್ಲಿಯ ಕಪ್ಪು-ಕೆಂಪು ಮಡಿಕೆಗಳು ಶಿಲಾ-ತಾಮ್ರಯುಗದ ಬೂದು, ಕಂದು, ವರ್ಣದ ಪಾತ್ರೆಗಳೊಂದಿಗೆ ಮಿಶ್ರಿತವಾಗಿವೆ. ಇಂತಹ ಪಾತ್ರಗಳು ಮುನೋಳ್ಳಿ ನೆಲೆಯಲ್ಲಿ ಇದಕ್ಕೆ ಹತ್ತಿರದಲ್ಲಿರುವ ಸೌಂದತ್ತಿ ಮತ್ತು ಕೊಣ್ಣೂರುಗಳಲ್ಲಿ ಬೃಹತ್ ಬಂಡೆಗಳಿಂದ ನಿರ್ಮಿಸಿದ ಗೋರಿಗಳಿವೆ."[೧೧] ಈ ತರಹದ ಗೋರಿಗಳಲ್ಲಿ ಹಲವು ಪ್ರಕಾರಗಳನ್ನು ಗುರುತಿಸಲಾಗಿದೆ. "ದಾರಿಕೋಣೆ, ಕಿಂಡಿಕೋಣೆ, ಕೊರೆದು ತಯಾರಿಸಿದ ಶವಕುಣಿಗಳು, ಮಡಿಕೆಯ ಶವಪೆಟ್ಟಿಗೆಗಳುಳ್ಳ ದುಂಡು ವೃತ್ತಗಳು, ನಿಲ್ಲಿಸುಗಲ್ಲುಗಳು, ಕಲ್ಲುಗುಂಡೆಗಳು"[೧೨] ಕಂಡುಬರುತ್ತವೆ.

ಕಬ್ಬಿಣ ಬಳಕೆ

ಬೃಹತ್ ಶಿಲಾಯುಗ ಕಾಲದಿಂದ ಮಾನವನಲ್ಲಿ ಪ್ರಮುಖವಾದ ಬೆಳವಣಿಗೆಗಳು ನಡೆದಿವೆ. ಅವುಗಳಲ್ಲಿ ಕಬ್ಬಿಣ ತಯಾರಿಕೆ ಮಹತ್ವವನ್ನು ಪಡೆಯಿತು. ಅದಿರಿನಿಂದ ಕಬ್ಬಿಣ ಉತ್ಪಾದನೆ ಕಂಡುಕೊಳ್ಳಲಾಯಿತು. ಸಾಮಾಜಿಕವಾಗಿ ಹಲವಾರು ಪರಿವರ್ತನೆಗಳು ಜರುಗಿದವು. "ಬ್ರಹ್ಮಗಿರಿಯಲ್ಲಿ ಉತ್ಖನನ ಕೈಗೊಂಡ ಮಾರ್ಟಿಮರ್ ವ್ಹೀಲರ್ ಅವರು ಉತ್ತರ ಭಾರತದಲ್ಲಿ ಬಳಕೆಯಲ್ಲಿರುವ ಮೊದಲೇ ಇಲ್ಲಿ ಕಬ್ಬಿಣದ ಉತ್ಪಾದನೆ ನಡೆಯುತ್ತಿತ್ತೆಂದು ಹೇಳಿದ್ದಾರೆ."[೧೩] ಹೀಗೆ ದಕ್ಷಿಣ

ಭಾರತದಲ್ಲಿ ಕಬ್ಬಿಣದ ಬಳಕೆ ಮೊದಲೆ ಆರಂಭಗೊಂಡು, ಕಬ್ಬಿಣ ಉಪಕರಣಗಳು ಸಿದ್ಧವಾದವು. "ಬೃಹತ್ ಶಿಲಾ ಸಂಸ್ಕೃತಿಯ ಜನವರ್ಗದವರು ಬಳಸಿಕೊಂಡಂಥಹ ಪ್ರಮುಖ ವೃತ್ತಿ ಅದಿರನ್ನು ಕರಗಿಸಿ ಕಬ್ಬಿಣ ಉತ್ಪಾದನೆ ಮಾಡುವುದು. ಅದಿರಿನಿಂದ ಕಬ್ಬಿಣ ಉತ್ಪಾದನೆ ಮಾಡುವ ಇವರ ತಾಂತ್ರಿಕ ಜ್ಞಾನ ಸುಧಾರಿಸಿದ ಮಟ್ಟದಲ್ಲಿತ್ತೆಂದು ತಡಕನಹಳ್ಳಿ ಮತ್ತು ಕೋಮಾರನಹಳ್ಳಿ ಉತ್ಖನನಗಳಲ್ಲಿ ದೊರೆತ ಅವಶೇಷಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ತಿಳಿಯುತ್ತದೆ."[೧೪] ಕಲ್ಲಿನಿಂದ ತಯಾರಿಸುತ್ತಿದ್ದ ಆಯುಧಗಳನ್ನು ಬಿಟ್ಟು, ತಾಮ್ರ–ಕಬ್ಬಿಣದಿಂದ ಆಯುಧೋಪಕರಣಗಳನ್ನು ತಯಾರಿಸುತ್ತಿದ್ದರು. ಇಲ್ಲಿ ಸುಧಾರಿಸಿದ ಉಕ್ಕನ್ನು ತಯಾರಿಸಲಾಗುತ್ತಿತ್ತು. ಕಬ್ಬಿಣ–ಉಕ್ಕಿನಿಂದ ಬೇಟೆಯಾಡಲು ಕೈಗೊಡಲಿಗಳನ್ನು, ಕೃಷಿಗೆ ಸಂಬಂಧಿಸಿದಂತೆ ಗುದ್ದಲಿಗಳು ಬಳಕೆಗೊಂಡವು. ವ್ಯವಸಾಯದ ಮೂಲಕ ಮಾನವನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗಳು ಬದಲಾದವು. ಸುಧಾರಿತ ನಗರ ಮತ್ತು ಪಟ್ಟಣಗಳು ಬೆಳೆದವು. ಉಕ್ಕನ್ನು ಕರಗಿಸಿ ಉಪಕರಣಗಳನ್ನು ತಯಾರಿಸುವಾಗ "ಅತ್ಯಂತ ಸುಧಾರಿಸಿದ ವೈಜ್ಞಾನಿಕ ತಂತ್ರಜ್ಞಾನದಿಂದ ಕಷ್ಟಸಾಧ್ಯವಾದ ಉಕ್ಕನ್ನು(ವೂಟ್ಸ್‌ಸ್ಟೀಲ್) ಕಿ.ಪೂ.೧೪೦೦–೧೨೦೦ರ ಹೊತ್ತಿಗೆ ತಯಾರಿಸುತ್ತಿದ್ದರು."[೧೫] ಇಂಥಹ ನಿಕ್ಷೇಪಗಳು ಇರುವಲ್ಲಿ ಕುಲುಮೆಯ ಕಾರ್ಯಾಗಾರಗಳು ಹುಟ್ಟಿಕೊಳ್ಳುತ್ತವೆ. ಸಂಡೂರು, ಶಿರಸಂಗಿ ಮುಂತಾದ ಭಾಗಗಳಲ್ಲಿ ಈ ಕಾರ್ಯಗಳು ನಡೆದವು. ಶಿರಸಂಗಿ ಪರಿಸರದಲ್ಲಿ ಕ್ರಿ.ಶ.೧೮ನೇ ಶತಮಾನದವರೆಗೂ ಕಬ್ಬಿನ ಕರಗಿಸುವ ಕುಲುಮೆ ಚಟುವಟಿಕೆಗಳು ನಡೆದು ಬಂದಿವೆ ಎಂಬುದು ತಿಳಿಯುತ್ತಿದೆ.

ಸಂಡೂರ ಪ್ರದೇಶದಲ್ಲಿ ತಯಾರಿಸಲ್ಪಟ್ಟ ಕಬ್ಬಿಣ ಉಪಕರಣಗಳು "೩–೪ನೇ ಶತಮಾನದಲ್ಲಿ ಹೆಸರು ಪಡೆದುಕೊಂಡಿರಬೇಕು. ಕಾರ್ತಿಕೇಯ ವನ ಶಸ್ತ್ರಾಸ್ತ್ರ ನಿರ್ಮಾಣ ಕಾರ್ಯದಲ್ಲಿ ಪ್ರಮುಖವಾಗಿದ್ದು, ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖವಾದಂತೆ ತೋರುತ್ತದೆ."[೧೬] ಕಬ್ಬಿಣ–ಉಕ್ಕಿನ ಉಪಕರಣಗಳನ್ನು ತಯಾರಿಸಲು ಮಾನವನ ತಾಂತ್ರಿಕ ಬಳಕೆಯಿತ್ತು. ಇದಕ್ಕಿಂತ ಹೆಚ್ಚಾಗಿ ಅದಿರನ್ನು ಸಂಗ್ರಹಿಸಿಟ್ಟು, ಅದರಿಂದ ಲೋಹವನ್ನು ಪ್ರತ್ಯೇಕಗೊಳಿಸುವುದು ಒಂದು ಕಲೆಯಾಗಿ ಪರಿಣಮಿಸಿತ್ತು. ಕರ್ನಾಟಕದ ಗೊಲ್ಲರಹಳ್ಳಿ ಮತ್ತು ನಂದಿಬಂಡೆಗಳಲ್ಲಿ ಅವಶೇಷಗಳು ದೊರೆತಿವೆ. ಅಲ್ಲಿ ನಿತ್ಯ ಕಬ್ಬಿಣ ಉತ್ಪಾದನೆ ನಡೆದಿತ್ತು. "ಗೊಲ್ಲರಹಳ್ಳಿಯಲ್ಲಿ ಕ್ರಿ.ಶ.೧೪–೧೭ನೆಯ ಶತಮಾನ ಇಲ್ಲವೇ ಅದಕ್ಕೂ ಪೂರ್ವದಲ್ಲಿ ನಡೆದ ಕಬ್ಬಿಣ ಉತ್ಪಾದನೆಯಿಂದ ದೊಡ್ಡ ದಿಬ್ಬವೇ ಉಂಟಾಗಿದೆ. ನಂದಿಬಂಡಿಯಲ್ಲಿ ಕಬ್ಬಿಣದ ಅದಿರು ಕರಗಿಸಿ ಲೋಹದ ರಸವನ್ನು ಸಂಗ್ರಹಿಸುತ್ತಿದ್ದ ಬಟ್ಟಲುಗಳು ಮತ್ತು ಕುಲುಮೆ ಅವಶೇಷಗಳು ಕಂಡುಬಂದಿವೆ."[೧೭] ಹೀಗಾಗಿ ಬೆಟ್ಟದ ಆಶ್ರಯದಲ್ಲಿ ಬೇರೆ ಬೇರೆ ಕಡೆ ಕಬ್ಬಿಣ ಕರಗಿಸುವ ಕುಲುಮೆಯ ಪ್ರದೇಶಗಳು ದಿಬ್ಬಗಳನ್ನು ಹುಟ್ಟು ಹಾಕಿರುವುದು ಕಂಡುಬರುತ್ತದೆ.

ದಿಬ್ಬಗಳು

ನವಶಿಲಾಯುಗ, ಶಿಲಾ–ತಾಮ್ರಯುಗ ಮತ್ತು ಕಬ್ಬಿಣ ಬೃಹತ್‌ಶಿಲಾ ಸಂಸ್ಕೃತಿಯ ಬೆಳವಣಿಗೆಗಳಲ್ಲಿ ಬೂದಿದಿಬ್ಬ ಅವಶೇಷ ಪ್ರಮುಖವಾಗಿದೆ. ಈ ಕಾಲಘಟ್ಟದಲ್ಲಿ ವ್ಯವಸಾಯಗಾರಿಕೆ ಬೆಳೆಯಿತು. ಪಶು ಸಾಕಾಣಿಕೆಯ ಭಾಗವಾಗಿ ದನಗಳ ಸೆಗಣಿಯನ್ನು ಸುಡುವುದರಿಂದ ದೊಡ್ಡ ಪ್ರಮಾಣದ ದಿಬ್ಬಗಳು ಕಂಡುಬಂದವು. ಕುಡಿತಿನಿ ಸಮೀಪ ಮತ್ತು ಹಟ್ಟಿಯಲ್ಲಿ ಬೂದಿದಿಬ್ಬಗಳು ದೊಡ್ಡ ಪ್ರಮಾಣದಲ್ಲಿವೆ. ದಿಬ್ಬಗಳು ಹುಟ್ಟಿಕೊಳ್ಳುವುದಕ್ಕೆ ಒಂದೇ ಕಾರಣಗಳು ಇಲ್ಲ. ಪಶುಸಂಗೋಪನೆಯ ಕಾರಣವಾಗಿ ಸಗಣಿ ಪ್ರತಿನಿತ್ಯ ಸಂಗ್ರಹಿಸಲಾಗುತ್ತಿತ್ತು. ಇದು ಒಣಗುತ್ತಿದ್ದಂತೆ ಮಾನವನ ಚಲನವಲನಗಳು ಇದರ ಮೇಲಾಗಿ ಗಟ್ಟಿಗೊಳ್ಳುತ್ತದೆ. ಇದರ ಜೊತೆ ನಿತ್ಯ ಸಗಣಿ ಮತ್ತು ಮಣ್ಣು ಬೆರೆಯುತ್ತ ಹೋಗುತ್ತದೆ. ಪಶುಪಾಲನೆಯ ಜನ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ಸಗಣಿ ಗುಂಪನ್ನು ಸುಟ್ಟಿರಬೇಕು ಅಥವಾ ಸುಡದೇ ಹಾಗೇ ಬಿಟ್ಟಿರಬೇಕು. ಇದರಿಂದ ದಿಬ್ಬಗಳು ಹುಟ್ಟಿಕೊಂಡಿರಲು ಸಾಧ್ಯ. ಕುಡಿತಿನಿ ಸಮೀಪ ಬೂದಿಗುಡ್ಡೆಯು ಮಹಾಭಾರತದ ಹಿಡಿಂಬಾಸುರನನ್ನು ಸುಟ್ಟಿದ್ದರಿಂದ ದಿಬ್ಬ ಉಂಟಾಗಿರಬೇಕು ಎಂಬುದು ಸ್ಥಳೀಯ ಐತಿಹ್ಯವಾಗಿದೆ. ಬೃಹತ್ ಪ್ರಮಾಣದ ರಾಕ್ಷಸರನ್ನು ಸುಟ್ಟ ಪರಿಣಾಮವಾಗಿ ದಿಬ್ಬಗಳು ಹುಟ್ಟಿಕೊಂಡಿರಲು ಕಾರಣವಾಗಿರಬೇಕು. ಕಬ್ಬಿಣದ ಅದಿರನ್ನು ಸಂಗ್ರಹಿಸಿ ಲೋಹ ಮಾಡಲು ಸುಟ್ಟಿದ್ದರ ಪರಿಣಾಮ ದಿಬ್ಬಗಳು ಉಂಟಾಗಿರಬೇಕು. ಶಿರಸಂಗಿಯ "ಕಾಳಿಕಾ ದೇವಾಲಯದ ತಳಪಾಯವನ್ನು ಗಮನಿಸಿದರೆ ಪೂರ್ವದಲ್ಲಿ ೮ ಅಡಿ ಎತ್ತರದ ಹಾಳು ಮಣ್ಣಿನ ದಿಬ್ಬ ಇಲ್ಲಿತ್ತೆಂದು ತಿಳಿಯುತ್ತದೆ."[೧೭] ದಿಬ್ಬದ ಮೇಲೆ ದೇವಿಯ ಗುಡಿ ನಿರ್ಮಾಣ ಮಾಡಿದ್ದು ಸ್ಪಷ್ಟವಾಗುತ್ತದೆ. ವ್ಯವಸಾಯ, ಪಶುಸಂಗೋಪನೆ ಅಥವಾ ದೊಡ್ಡ ಪ್ರಮಾಣದಲ್ಲಿ ಕುಲುಮೆ ಕಾರ್ಯಾಗಾರ ಏರ್ಪಟ್ಟಿದ್ದುದರಿಂದ ಶಿರಸಂಗಿ ಪರಿಸರವು ಹಲವಾರು ದಿಬ್ಬಗಳಿಂದ ಕೂಡಿರಬೇಕು. ರಾಕ್ಷಸರನ್ನು ಸುಟ್ಟದ್ದರಿಂದ ಬೂದಿದಿನ್ನೆ, ವಾಲಿದಿಬ್ಬಗಳು ಬಳ್ಳಾರಿ ಪರಿಸರದಲ್ಲಿ ಹುಟ್ಟಿಕೊಂಡಿರುವಂತೆ, ಶಿರಸಂಗಿ ಕಾಳಿಕಾದೇವಿ ಭಕ್ತರಿಗೂ ಕಂಟಕರಾಗಿದ್ದ ಹಲವಾರು ರಾಕ್ಷಸರನ್ನು ಇಲ್ಲಿ ಸುಟ್ಟಿರಬೇಕು. ಹಾಗಿದ್ದರೆ ನವಲಗುಂದ, ನರಗುಂದ, ಹಿರೇಕುಂಬಿ, ಚಿಕ್ಕುಂಬಿ, ಬೆಟಸೂರ ಮುಂತಾದ ಕಡೆ ಇಂತಹ ದಿಬ್ಬಗಳು ಇದ್ದಿರಬೇಕು. ಭೌಗೋಳಿಕವಾಗಿ ಈ ಗ್ರಾಮಗಳನ್ನು ಗಮನಿಸಿದರೆ ಎತ್ತರದ ಪ್ರದೇಶಗಳಲ್ಲಿಯೇ ಇವೆ. ಆದರೆ ಹೆಚ್ಚಿನ ಅಧ್ಯಯನದಿಂದ ನಲಂದಾಸುರ, ನರಂದಾಸುರ, ಹಿರೇಕುಂಬಾಸುರ, ಚಿಕ್ಕುಂಬಾಸುರ, ಬೆಟ್ಟಾಸುರ ಮುಂತಾದ ಹೆಸರಿನ ದಿಬ್ಬಗಳನ್ನು ಸಂಶೋಧಿಸಬೇಕಾಗಿದೆ.

ಶಿರಸಂಗಿಯಲ್ಲಿ ಕಾಳಮ್ಮನ ದೇವಾಲಯ ದಿಬ್ಬದ ಮೇಲೆ ನಿರ್ಮಿತಗೊಂಡಿರುವುದು ಖಚಿತವೆನಿಸುತ್ತದೆ. ಆದರೆ ಈಗ ದೇವಾಲಯದ ದಕ್ಷಿಣ ಭಾಗದಲ್ಲಿ ದಿಬ್ಬ ಸಂಪೂರ್ಣವಾಗಿ

ಹಾಳಾಗಿದೆ. "ಗ್ರಾಮವು ಕ್ರಮೇಣವಾಗಿ ಸ್ಥಳಾಂತರಗೊಂಡು ಈ ದೇವಾಲಯದಿಂದ ದಕ್ಷಿಣಕ್ಕೆ ಒಂದೂವರೆ ಕಿ.ಮೀ. ದೂರದಲ್ಲಿ ನಿರ್ಮಾಣಗೊಂಡಿದೆ."[೧೮] ಶಿಲಾ-ತಾಮ್ರಯುಗದ ಸ್ತರದಲ್ಲಿ ಬೃಹದಾಕಾರದ ಬೂದಿ ಮಿಶ್ರಿತ ಕುಲುಮೆ ತಗ್ಗುಗಳು, ತಾಮ್ರದ ಅದಿರು ಮತ್ತು ತಾಮ್ರದ ಕಿಟ್ಟ ಹರಡಿರುವುದು ವಿಶೇಷವಾಗಿದೆ. ಇದರೊಂದಿಗೆ ಕಬ್ಬಿಣದ ಅದಿರು ಕಂಡುಬರುವುದರಿಂದ ನಂತರದ ಅವಧಿಯಲ್ಲಿ ಈ ಉತ್ಪಾದನೆಯು ಇದೆ ನೆಲೆಯಲ್ಲಿ ಮುಂದುವರೆದುದ್ದನ್ನು ಸೂಚಿಸುತ್ತದೆ. ಇದರಿಂದ "೪ ರಿಂದ ೩ ಸಾವಿರ ವರ್ಷಗಳ ಅವಧಿಯಲ್ಲಿ ತಾಮ್ರ-ಕಬ್ಬಿಣ ತಯಾರಿಕೆಯ ಪ್ರಮುಖ ಕಾರ್ಯಾಗಾರ ಇದಾಗಿತ್ತೆಂದು ತಿಳಿಯುತ್ತದೆ"[೧೯] ಹೀಗಾಗಿ ಶಿರಸಂಗಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಕುಲುಮೆ ಕಾರ್ಯಚಟುವಟಿಕೆ ನಡೆದಿರುವುದು ಸ್ಪಷ್ಟವಾಗಿದೆ. ಆದರೆ ಶಿಲಾ-ತಾಮ್ರಯುಗವು ಕಿ.ಪೂ.೨೨೦೦ ರಿಂದ ೮೦೦ರ ಅವಧಿಯಲ್ಲಿರುವುದರಿಂದ ೪ ರಿಂದ ೩ ಸಾವಿರ ಅವಧಿಯಲ್ಲಿ ಇರುವುದಕ್ಕಿಂತ ಹೆಚ್ಚಾಗಿ ಕ್ರಿಪೂ.೨೦೦೦ ಅವಧಿಯಲ್ಲಿ ಶಿರಸಂಗಿಯಲ್ಲಿ ತಾಮ್ರ, ಕಬ್ಬಿಣ ಬಳಕೆಯಾಗಿ ಇದೇ ಅವಧಿಯಲ್ಲಿ ಕುಲುಮೆ ಕಾರ್ಯಾಗಾರಗಳು ಹುಟ್ಟಿಕೊಂಡಿರಬೇಕು.

ಮಾನವನ ಲೋಹವನ್ನು ತಯಾರಿಸುವ ಜ್ಞಾನವನ್ನು ಪಡೆಯಲು ಸಾಕಷ್ಟು ಪ್ರಯತ್ನ ಪಟ್ಟಿದ್ದಾನೆ. ಭೂಮಿಯ ಆಳಕ್ಕೆ ಇಳಿದು ತಾಮ್ರ-ಕಬ್ಬಿಣದ ಲೋಹವನ್ನು ಹುಡುಕಿದ್ದಾನೆ. ತಾಮ್ರ ಮತ್ತು ಕಬ್ಬಿಣ ಕರಗಿಸಿ ವಿವಿಧ ಉಪಕರಣಗಳನ್ನು ತಯಾರಿಸಲು ತಿದಿಗಳ ಅವಶ್ಯಕತೆಯಿತ್ತು. "ತಾಮ್ರವನ್ನು ೧೨೦೦° ಸೆ.ಗಿಂತ ಹೆಚ್ಚಿನ ಶಾಖದಲ್ಲಿ ಕರಗಿಸಬಹುದು. ಆದರೆ ಕಬ್ಬಿಣವನ್ನು ಕರಗಿಸಲು ೧೫೦೦° ಸೆ.ಗಿಂತ ಹೆಚ್ಚಿನ ಶಾಖ ಬೇಕಾಗುತ್ತದೆ."[೨೪] ತಾಮ್ರಗಿಂತಲೂ ಕಬ್ಬಿಣ ಕರಗಿಸಲು ಹೆಚ್ಚಿನ ಶಾಖದ ಅವಶ್ಯಕತೆ ಇರುತ್ತದೆ. ಕಬ್ಬಿಣದ ಬಳಕೆ ಆರಂಭಗೊಂಡಂತೆ ಹೆಚ್ಚಿನ ಶಾಖವನ್ನು ಉತ್ಪಾದಿಸಬಲ್ಲ ತಿದಿಗಳು ಕೂಡ ಅಷ್ಟೇ ಅವಶ್ಯಕವಾಗಿದ್ದವು. ಕಬ್ಬಿಣದ ಅದಿರನ್ನು ಸಂಗ್ರಹಿಸುವ ಕೆಲಸ ಬಹಳ ವಿಶಿಷ್ಟವಾದದ್ದು. ಬೆಟ್ಟ-ಗುಡ್ಡಗಳಲ್ಲಿ ಕಬ್ಬಿಣದ ಅದಿರನ್ನು ಸಂಗ್ರಹಿಸಲಾಗುತ್ತಿತ್ತು. ಅದಿರು ಗಟ್ಟಿಯಾದುದರಿಂದ ಅದನ್ನು ತುಂಡು ತುಂಡಾಗಿ ಮಾಡಿ ಸುಡಲಾಗುತ್ತಿತ್ತು. ಸುಟ್ಟ ಪುಡಿಯನ್ನು ಎತ್ತರದ ಪ್ರದೇಶದಲ್ಲಿ ಹರಡಿಸಲಾಗುತ್ತಿತ್ತು. "ಬೆಟ್ಟದಲ್ಲಿರುವ ಅದಿರನ್ನು ತಂದು ಪುಡಿ ಮಾಡಿ ಎತ್ತರದ ಬಂಡೆಗಳ ಮಧ್ಯ ಹಾಕಿದಾಗ ಅದರಲ್ಲಿರುವ ಮಣ್ಣಿನ ಅಂಶ ನೀರಿನೊಂದಿಗೆ ಹರಿದು ಹೋಗಿ ಉತ್ತಮವಾದ ಅದಿರು ತಗ್ಗು ಪ್ರದೇಶದಲ್ಲಿ ಸಂಗ್ರಹವಾಗುತ್ತಿತ್ತು. ಅದನ್ನು ಕಬ್ಬಿಣ ತಯಾರಿಕೆಗೆ ಬಳಸಿಕೊಳ್ಳಲಾಗುತ್ತಿತ್ತು. ಈ ವಿಧಾನವು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಾಗಿತ್ತು. ಬಿಸ್ನಾಳದಲ್ಲಿ ಬೃಹದಾಕಾರದ ಕಬ್ಬಿಣದ ಗಣಿಗಳ ತಗ್ಗುಗಳು ಅದರ ಬಳಿಯಲ್ಲಿಯೇ ಅದಿರು ಕರಗಿಸಿದ ಅವಶೇಷಗಳಿವೆ."[೨೦] ಶುದ್ಧ ಕಬ್ಬಿಣ ಮತ್ತು ಅಶುದ್ಧ ಕಬ್ಬಿಣ ಕರಗಿಸಲು ಬೇಕಾಗಿರುವ ಶಾಖದಲ್ಲಿ ವ್ಯತ್ಯಾಸ ಕಾಣುತ್ತೇವೆ.

ತಾಮ್ರಕ್ಕೆ ಅವಶ್ಯವಿರುವ ಶಾಖದಷ್ಟು ಶುದ್ಧ ಕಬ್ಬಿಣ ಕರಗಿಸುವುದಕ್ಕೆ ಶಾಖ ಸಾಕಾಗುತ್ತದೆ. "ಶುದ್ಧ ಕಬ್ಬಿಣ ೧೧೪೦° ಸೆ.ಶಾಖದಲ್ಲಿ ಕರಗುತ್ತದೆ."[೨೧] ಅಶುದ್ಧ ಕಬ್ಬಿಣಕ್ಕೆ ಇದಕ್ಕಿಂತ ೩೬೦° ಸೆ.ಶಾಖ ಹೆಚ್ಚು ಬೇಕಾಗುತ್ತವೆ. ಇಷ್ಟು ಶಾಖವನ್ನು ಉತ್ಪಾದಿಸಲು ದೊಡ್ಡ ಪ್ರಮಾಣದ ತಿದಿಗಳು ಬೇಕಾಗುತ್ತದೆ. ಸ್ಥಳೀಯವಾಗಿ ಅವು ದೊರೆಯದಿದ್ದರೆ ನೆರೆಯ ಅಕ್ಕ-ಪಕ್ಕದ ಪ್ರದೇಶಗಳನ್ನು ಅವಲಂಬಿಸಲಾಗುತ್ತಿತ್ತು.

"ಮಹಾರಾಷ್ಟ್ರದ ನೈಕುಂದದ ಬೃಹತ್ ಶಿಲಾ ಸಂಸ್ಕೃತಿಯ ನೆಲೆಯಲ್ಲಿ ಕಬ್ಬಿಣ ಕರಗಿಸುವ ಕುಲುಮೆಗಳು ದೊರೆತಿವೆ. ಇವು ಕ್ರಿಪೂ.೬ನೇ ಶತಮಾನದಿಂದ ೪ನೇ ಶತಮಾನದ ಅವಧಿಯವು. ಈ ಕುಲುಮೆಗಳು ಕಬ್ಬಿಣದ ಅದಿರನ್ನು ಕರಗಿಸಲು ಬಳಸುತ್ತಿದ್ದ ಎಲ್ಲಾ ವಿಧಾನಗಳನ್ನು ನಿದರ್ಶಿಸುತ್ತವೆ. ಸಂಡೂರು, ಕುಡತಿನಿ ಪ್ರದೇಶದಲ್ಲಿ ಕಬ್ಬಿಣ ತಯಾರಿಕೆ ಕ್ರಿಪೂ.೧೧೦೦ರ ವೇಳೆಗೆ ಬಳಕೆಯಲ್ಲಿತ್ತು."[೨೨] ಬೆಟ್ಟ-ಗುಡ್ಡಗಳ ಆಶ್ರಯದಲ್ಲಿ ನಿತ್ಯ ಕೆಲಸ ಮಾಡುವ ಕಬ್ಬಿಣ ಕರಗಿಸಲು ಕುಲುಮೆಗಳನ್ನು ತಯಾರಿಸುತ್ತಿದ್ದರು. ಕರ್ನಾಟಕದ ಗೊಲ್ಲರ ಹಳ್ಳಿ ಚಿಲಕನಹಟ್ಟಿ ಮುಂತಾದ ಪ್ರದೇಶಗಳಲ್ಲಿ ದೊಡ್ಡ ಗಾತ್ರದಲ್ಲಿ ಕುಲುಮೆ ಕಾರ್ಯಾಗಾರಗಳು ಇದ್ದುದಾಗಿ ತಿಳಿದು ಬರುತ್ತದೆ. ಲೋಹದ ಮುದ್ದೆಗಳು ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. "ತಾಮ್ರ-ಕಬ್ಬಿಣ ತಯಾರಿಕೆಗೆ ಮಾಡಿಕೊಂಡ ಕುಲುಮೆ ತಗ್ಗುಗಳು ಕ್ರಿಪೂ.೧೮೦೦-೮೦೦ ಅವಧಿಯ ಪಾತ್ರಾವಶೇಷಗಳೊಂದಿಗೆ ಶಿರಸಂಗಿ ನೆಲೆಯಲ್ಲಿ ಕಂಡುಬರುತ್ತವೆ."[೨೩] ಇಂತಹ ಅಲ್ಪಸ್ವಲ್ಪ ಬದಲಾವಣೆ ಕಂಡುಬಂದ ಕುಲುಮೆಗಳು ಬಳ್ಳಾರಿ ಪರಿಸರ ಬೆಟ್ಟದ ಆಶ್ರಯದಲ್ಲಿ ಕಂಡುಬರುತ್ತವೆ. ಒಟ್ಟಾಗಿ ತಾಮ್ರದ ಜೊತೆಯಲ್ಲಿ ಕಬ್ಬಿಣ ಕರಗಿಸಲು ದೊಡ್ಡ ಪ್ರಮಾಣದ ಕುಲುಮೆಗಳು ಶಿರಸಂಗಿ ಪರಿಸರದ ಕುಶಲಕರ್ಮಿಗಳಿಗೆ ಅಗತ್ಯವಾಗಿತ್ತು. ಕೊಲ್ಲಾಪುರ-ಬಳ್ಳಾರಿ ಮಾದರಿಯ ಕುಲುಮೆಗಳನ್ನು ತಯಾರಿಸಿಕೊಂಡು, ಬೃಹತ್ ಪ್ರಮಾಣದಲ್ಲಿ ಕಬ್ಬಿಣ ಕರಗಿಸುವ ಕಾರ್ಯಾಗಾರಗಳು ಶಿರಸಂಗಿಯಲ್ಲಿ ನಿರ್ಮಾಣವಾಗಿರಬೇಕು.

ಜನವಸತಿ ನಿರ್ಮಾಣ

ಶಿರಸಂಗಿ ಪ್ರದೇಶದಲ್ಲಿ ಲೋಹ ತಯಾರಿಕೆಯ ಕೆಲಸಗಾರರು ಬೃಹತ್ ಪ್ರಮಾಣದಲ್ಲಿ ನೆಲೆಸಿದ್ದರು. ಅವರುಗಳು ತಮಗೆ ವಾಸ್ತವ್ಯ ಹೂಡಲು ಗುಡಿಸಲು-ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಒಂದು ಕಡೆ ನೆಲೆ ನಿಂತು ಮನೆಗಳನ್ನು ತಯಾರಿಸಿಕೊಳ್ಳುವ ಸಮುದಾಯ ಹುಟ್ಟುತ್ತದೆ. ಮನೆಗಳ "ವಿನ್ಯಾಸ ವರ್ತುಳ, ಅಪರೂಪವಾಗಿ ಆಯಾಕಾರದಲ್ಲಿದ್ದು, ಅದರ ಒಂದು ಭಾಗ ಹಿಗ್ಗಿದ ಅರ್ಧದಷ್ಟು ವಿನ್ಯಾಸದಲ್ಲಿರುತ್ತದೆ. ನೆಲದ ಅಂಚಿನಲ್ಲಿ ಕಂಬಗಳನ್ನು ನೆಟ್ಟು ಅವುಗಳಿಗೆ ಬಿದಿರಿನ ಇಲ್ಲವೆ ಬಳ್ಳಿಗಳಿಂದ ಹೆಣೆದ ತಡಿಕೆಗಳನ್ನು ಕಟ್ಟಲಾಗುತ್ತಿತ್ತು. ತಟ್ಟೆಯ ಎರಡೂ ಗೋಡೆಗೆ ಕಲಸು ಮಣ್ಣನ್ನು ಮತ್ತು ಬುಡದಲ್ಲಿ ಒಂದರ ಬದಿಗೊಂದು ಕಲ್ಲುಗಳನ್ನು

ಇಡಲಾಗುತ್ತಿತ್ತು."[೨೪] ಇಂತಹ ಮಾದರಿಯ ಮನೆಗಳನ್ನು ಸಮೀಪದ ತೆಕ್ಕಲಕೋಟೆ, ಇನಾಮಗಾಂವ ಮತ್ತು ಕರ್ನಾಟಕದ ಸಂಗನಕಲ್ಲು ಸ್ಥಳಗಳಲ್ಲಿ ನಡೆದ ಉತ್ಖನನಗಳು ತಿಳಿಸುತ್ತವೆ. ಕರ್ನಾಟಕ–ಮಹಾರಾಷ್ಟ್ರಗಳ ಸಂಸ್ಕೃತಿ ಒಂದಕ್ಕೊಂದು ಪೂರಕವಾಗಿರುವಂತೆ ಅಲ್ಲಿಯ ಜನರ ಜೀವನ ಕ್ರಮಗಳು–ಆಚರಣೆಗಳಲ್ಲಿ ಸಾಮ್ಯತೆಯಿರುವುದರಿಂದ ತೆಕ್ಕಲಕೋಟೆ, ಇನಾಮಗಾಂವದಲ್ಲಿಯ ಮನೆಗಳು ಇರುವಂತೆ ಕರ್ನಾಟಕದ ಬಳ್ಳಾರಿ ಜಿಲ್ಲೆ ಸಂಗನಕಲ್ಲುನಲ್ಲಿಯೂ ಮನೆಗಳ ಸಾಮ್ಯತೆಯನ್ನು ಕಾಣುತ್ತೇವೆ. ಹೀಗಾಗಿ ಸಂಗನಕಲ್ಲು ಸ್ಥಳದಲ್ಲಿ ನಿರ್ಮಿಸಿದ ಮನೆಗಳ ಮಾದರಿಯು ಬೆಳಗಾವಿ ಭಾಗದ ಶಿರಸಂಗಿಯ ಪರಿಸರದಲ್ಲಿಯೂ ನಿರ್ಮಾಣಗೊಂಡಿರಬೇಕು. "ಮನೆಯನ್ನು ಕಟ್ಟುವುದರಲ್ಲಿ ಸಿಂಧೂ ಸಂಸ್ಕೃತಿಯ ಜನಗಳು ತೋರಿಸಿರುವ ಅನುಕೂಲತೆಯ ದೃಷ್ಟಿ ಮೆಚ್ಚತಕ್ಕದ್ದು."[೨೫] ತುಂಬಾ ಕುಶಲತೆಯಿಂದ ಅಚ್ಚುಕಟ್ಟುತನದಿಂದ ಮನೆಗಳನ್ನು ತಯಾರಿಸುತ್ತಿದ್ದರು. ಮೊಹಂಜೋದಾರೋದಲ್ಲಿ ಬಣ್ಣ ಹಾಕಿರುವ ಹತ್ತಿಯ ಚೂರು ಲೇಪಗೊಂಡಿರುವ ಬೆಳ್ಳಿಯ ಪಾತ್ರೆಯ ಅವಶೇಷ ಬಹಳ ಹಳೆಯದಾಗಿದ್ದು ಅದು ಇಲ್ಲಿ ದೊರೆತಿದೆ. ಆಭರಣಗಳನ್ನು ಧರಿಸುವುದರಲ್ಲಿ ಅಲ್ಲಿಯ ಜನರಿಗೆ ಒಲವಿತ್ತು. ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ಲೋಹಗಳಿಂದಲೂ, ಫಯಾನ್ಸ್ ಮತ್ತು ಜೋಡಿ ಮಣ್ಣುಗಳಿಂದಲೂ ಅನೇಕ ಬಗೆಯ ಆಭರಣಗಳನ್ನು ಅವರು ಮಾಡುತ್ತಿದ್ದರು. ಕೊರಳ ಹಾರ, ಡಾಬು, ಉಂಗುರ, ಕಾಲಂದಿಗೆ, ಕೈಗಡಗ ಮೊದಲಾದ ಆಭರಣಗಳನ್ನು ಸ್ತ್ರೀಯರು ಧರಿಸುತ್ತಿದ್ದರೆನ್ನುವುದಕ್ಕೆ ಆಧಾರಗಳು ದೊರೆತಿವೆ."[೨೬] ಈ ಪ್ರದೇಶದಲ್ಲಿ ಆಭರಣಗಳು ಹಾಗು ಅವುಗಳನ್ನು ಧರಿಸುವ ಸ್ತ್ರೀಯರು ಇದ್ದರೆಂದ ಮೇಲೆ ಆಭರಣಗಳನ್ನು ತಯಾರಿಸುವ ಕುಶಲಕರ್ಮಿಗಳು ಖಂಡಿತವಾಗಿಯೂ ಇರಲೇಬೇಕಾಗುತ್ತದೆ. ಕುಶಲಕರ್ಮಿಗಳು ಒಂದೆಡೆ ಕೂಡಿ ಇರುತ್ತಾರೆ ಎಂಬುದು ಸ್ಪಷ್ಟ. ಹೀಗಿರುವಾಗ ಅವರು ತಮಗೆ ಬೇಕಾದ ವಾಸ್ತವ್ಯಕ್ಕೆ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅಷ್ಟೇ ಅಲ್ಲದೇ ನಿತ್ಯ ಬಳಸುವ ಹಲವು ಉಪಕರಣಗಳು ಈ ಸಿಂಧು ಸಂಸ್ಕೃತಿಯಲ್ಲಿ ಸಿಗುತ್ತವೆ. ಚನ್ಹುದಾರೋದಲ್ಲಿಯೂ ತಾಮ್ರ, ಕಂಚಿನ, ಕಲ್ಲಿನ ಆಯುಧಗಳಿವೆ. "ಭರ್ಚಿ, ಶೂಲ, ಬಾಣ, ಚಾಕು, ಕತ್ತಿ, ಮೊದಲಾದ ಯುದ್ಧೋಪಕರಣಗಳು, ಉಳಿ, ಗರಗಸ ಮೊದಲಾದ ಗೃಹೋಪಕರಣಗಳೂ ಇಲ್ಲಿ ದೊರಕಿವೆ."[೨೭] ಮೊಹಂಜೋದಾರೋ ದಲ್ಲಿ ದೊರಕಿರುವ ಉಪಕರಣಗಳು ಅತೀ ಪ್ರಾಚೀನವಾದವುಗಳಾಗಿವೆ. ಅದರಲ್ಲಿಯೂ ಕುಶಲಕರ್ಮಿಗಳಿಗೆ ಹತ್ತಿರವಾಗಿರುವ ಗರಗಸ ಪುರಾತನ ನಾಗರೀಕತೆಯಿಂದ ಹಿಡಿದು ರೋಮನ್ನರ ಅವಧಿಯವರೆಗೂ ಇಂಥಹ ಗರಗಸ ಕಂಡುಬರುವುದಿಲ್ಲ ಎಂದು ಸಂಶೋಧಕ ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ ಕರ್ನಾಟಕ ಸಂಸ್ಕೃತಿ ಸಮೀಕ್ಷೆ(ಪು.೧೬)ಯಲ್ಲಿ ಹೇಳಿದ್ದಾರೆ. ಇಲ್ಲಿಯವರೂ ಶಿಲ್ಪ ಕಲೆಯಲ್ಲಿಯೂ ನಿಪುಣರಾಗಿದ್ದರು. ಶಿಲಾಮೂರ್ತಿಗಳೊಂದಿಗೆ, ಕಂಚಿನ ವಿಗ್ರಹ ಮತ್ತು ಜೇಡಿ ಮಣ್ಣಿನ ಕಲಾಕೃತಿಗಳು ದೊರೆತಿರುವ ಸಂಗತಿ ತಿಳಿದುಬರುತ್ತದೆ.

"ಹರಪ್ಪ ಕೋಟೆ ಪ್ರದೇಶದಲ್ಲಿ ಕಂಡುಬಂದ ಹದಿನಾರು ಕುಲುಮೆಗಳು ಮತ್ತು ಲೋಥಾಲ್‌ದಲ್ಲಿ ತಾಮ್ರದ ಕೆಲಸ ಮಾಡುವವರ ಮೂರು ಮನೆಗಳು ಒಂದೇ ಕಡೆಗೆ ಇರುವುದು"[೨೮] ಕಂಡುಬರುತ್ತದೆ. ಯಾವ ಪರಿಸರದಲ್ಲಿ ನೋಡಿದರೂ ಕೂಡ ಒಂದೇ ಕಡೆ ತಮ್ಮ ತಮ್ಮ ಮನೆಗಳನ್ನು ನಿರ್ಮಿಸಿಕೊಂಡು ಬಂದ ಕುಶಲಕರ್ಮಿಗಳು ಕಬ್ಬಿಣ, ಕಟ್ಟಿಗೆ, ಚಿನ್ನ-ಬೆಳ್ಳಿಗಾರಿಕೆ, ಕಂಚು, ಶಿಲ್ಪಗಾರಿಕೆಯನ್ನು ತಮ್ಮ ಪಾರಂಪರಿಕ ಕೌಶಲ್ಯತೆಯಿಂದ ಕುಲಕಸುಬು ಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಂಥಹ ವ್ಯವಸ್ಥೆ ಶಿರಸಂಗಿ ಪರಿಸರದಲ್ಲಿಯೂ ಬೆಳೆದು ಬಂದಿರುವುದನ್ನು ಪ್ರಸ್ತುತವಾಗಿ ಕಾಣುತ್ತೇವೆ. ಚಿನ್ನ ಬೆಳ್ಳಿಯ ಕಾರ್ಯಗಳನ್ನು ಹೊರತುಪಡಿಸಿದರೆ ಕಬ್ಬಿಣ, ಮರ, ಕಂಚು, ಶಿಲ್ಪಗಾರಿಕೆಯ ಕೆಲಸಗಳು ಭಾರವಾದ ಕೆಲಸಗಳಾಗಿವೆ. ಅದರಲ್ಲೂ ಕಬ್ಬಿಣ-ಕಂಚು ಕೆಲಸಕ್ಕೆ ಬೆಂಕಿಯ ಬಳಕೆ ಅತ್ಯವಶ್ಯಕ. ಬೆಂಕಿಯ ಜೊತೆ ಕೆಲಸ ಮಾಡುವುದು ಕುಶಲಕರ್ಮಿಗೆ ಅಪಾಯಕಾರಿಯಾದುದು. ಬೆಂಕಿ ಬಿಟ್ಟು ಕೆಲಸ ಮಾಡಲು ಸಾಧ್ಯವಿಲ್ಲದಿರುವಾಗ ಕೆಲಸಗಾರ ಕುಲವೃತ್ತಿಯಿಂದ ಹಿಂದೆ ಸರಿಯಬೇಕಾಗುತ್ತದೆ. ಕುಲವೃತ್ತಿಗೆ ಗೌರವ ನೀಡುವುದು ಕೆಲಸಗಾರನ ಸಂಸ್ಕೃತಿಯಾಗಿರುವುದರಿಂದ ಬೆಂಕಿ(ಅಗ್ನಿ)ಯ ಕೆಲಸ ಮಾಡುತ್ತಾನೆ. ಬೆಂಕಿಯನ್ನು ಕುಲದೇವತೆಯನ್ನಾಗಿ ಸ್ವೀಕರಿಸುತ್ತಾನೆ. ಶಿರಸಂಗಿ ಪ್ರದೇಶದ ಕುಶಲಕರ್ಮಿಗಳು ಮಾಡಿರುವುದು ಇದೇ ಕಾರ್ಯವನ್ನು ಬೆಂಕಿಯನ್ನು ಕಾಳಿ ಎಂದು, ಶಕ್ತಿ ಎಂದು ಪೂಜಿಸಿ ದಿನ ನಿತ್ಯ ತಮ್ಮ ಕೆಲಸ ಕಾರ್ಯಗಳನ್ನು ಬಹಳ ಪ್ರಾಚೀನ ಕಾಲದಿಂದಲೂ ಮಾಡುತ್ತ ಬಂದಿದ್ದಾರೆ.

ಈ ಪ್ರದೇಶದಲ್ಲಿ ತಮ್ಮ ಉಪಜೀವನವನ್ನು ಸಾಗಿಸಲು ಒಂದೆಡೆ ಸೇರಿದ ಪಂಚವೃತ್ತಿಯ ಕುಶಲಕರ್ಮಿಗಳು ಕುಲುಮೆಗಳನ್ನು ಸ್ಥಾಪಿಸುತ್ತಾರೆ. ಅದನ್ನು ಒಂದೆಡೆ ಸೇರಿ ಕುಶಲಗಾರಿಕೆಯ ಕೆಲಸಗಳನ್ನು ಮಾಡುವ ಸ್ಥಳಕ್ಕೆ 'ಕಮ್ಮಟ'ವೆಂದು ಕುಲುಮೆಯೆಂದು ಗುರುತಿಸಿ, ಅದಕ್ಕೆ ಅಗತ್ಯವಾಗಿರುವ ಬೆಂಕಿಯನ್ನು ಶಕ್ತಿ-ಕಾಳಿ ಎಂದು ಭಾವಿಸಿದ್ದು ಕಂಡುಬರುತ್ತದೆ. ವೃತ್ತಿ ಮೂಲವಾಗಿ ಬೆಂಕಿ-ಕುಲುಮೆಗಳು ಪರಸ್ಪರ ಕೂಡಿಕೊಂಡೆ ಬಂದಿರುವುದು ತಿಳಿದುಬರುತ್ತದೆ. ಕಾಳಿ ಮತ್ತು ಕಮ್ಮಟಗಳು ಕುಶಲಕರ್ಮಿಗಳ ಹೃನ್ಮನಗಳಲ್ಲಿ ಜೊತೆಯಾಗಿ ಬೆಳೆದು ಬಂದ ದೇವತೆಗಳಾಗಿವೆ. (ಅಗ್ನಿ)ಬೆಂಕಿಯ ಪೂಜೆಯೊಂದಿಗೆ ಕುಲುಮೆಯ ಪೂಜೆಯನ್ನು ಕುಶಲಕರ್ಮಿ ಶಿರಸಂಗಿ ಪ್ರದೇಶದಲ್ಲಿ ಮಾಡುತ್ತ ಬಂದಿರುವುದನ್ನು ಕಾಣುತ್ತೇವೆ. ಯಾವುದೇ ಕೆಲಸ ಆರಂಭಿಸುವ ಮುನ್ನ ಕುಶಲಕರ್ಮಿ ಕಾಳಮ್ಮ ಮತ್ತು ಕಮ್ಮಟ>ಕಮ್ಮಟೇಶ್ವರನನ್ನು ಪೂಜಿಸಿಯೇ ಕಬ್ಬಿಣ ಕರಗಿಸುವುದನ್ನು ಆರಂಭಿಸುತ್ತಿದ್ದನು. ಈ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಶಿರಸಂಗಿ ಪ್ರದೇಶದಲ್ಲಿ ಬೆಳೆದುಬಂದಿದೆ. ಬೆಂಕಿ ಮತ್ತು ಕುಲುಮೆಯನ್ನ ಆರಾಧಿಸುತ್ತಿದ್ದ ಕೆಲಸಗಾರರು ಕಾಳಮ್ಮ ಮತ್ತು ಕಮ್ಮಟೇಶ್ವರನಿಗೆ ದೇವಾಲಯಗಳನ್ನು ನಿರ್ಮಿಸಿ, ಜಾತ್ರೆ-ಉತ್ಸವಗಳನ್ನು ನೆರವೇರಿ ಸುತ್ತ ಬಂದಿದ್ದಾರೆ. ಇಂಥಹ

ಮಾದರಿಯನ್ನು ಕುಡುತಿನಿ ಪ್ರದೇಶದ ಗೊಲ್ಲರಹಳ್ಳಿ ಮತ್ತು ನಂದಿಬಂಡಿಗಳಲ್ಲಿ ಕಾಣುತ್ತೇವೆ. ನಂದಿಬಂಡಿಯಲ್ಲಿ ಕಬ್ಬಿಣದ ಅದಿರು ಕರಗಿಸಿ ಲೋಹದ ರಸವನ್ನು ಸಂಗ್ರಹಿಸುತ್ತಿದ್ದ ಬಟ್ಟಲುಗಳು ಮತ್ತು ಕುಲುಮೆ ಅವಶೇಷಗಳು ಕಂಡುಬಂದಿವೆ. ಇದರಿಂದ ಗೊಲ್ಲರಹಳ್ಳಿ ಪ್ರದೇಶದಲ್ಲಿ ಕಾಳಿ ಮತ್ತು ಕಮ್ಮಟಗಳ ಬಳಕೆಯಿರುವುದರಿಂದ ಈ ಹೆಸರಿನ ದೇವಾಲಯಗಳು ನಿರ್ಮಾಣಗೊಂಡಿವೆ.

ಶಿರಸಂಗಿ ಪ್ರದೇಶದಲ್ಲಿ ಬೆಂಕಿ ಮತ್ತು ಕುಲುಮೆಗಳ ಬಳಕೆ ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವುದರಿಂದ ಕಾಳಮ್ಮ ನಂತರದಲ್ಲಿ ಕಮ್ಮಟೇಶ್ವರ ದೇವಾಲಯಗಳು ನಿರ್ಮಾಣ ಗೊಂಡು ಕುಶಲಕರ್ಮಿಗಳ ಆರಾಧನಾ ಶಕ್ತಿಕೇಂದ್ರವಾಗಿ ರೂಪ ತಾಳಿರಬೇಕು. ಈ ಪ್ರದೇಶದಲ್ಲಿ ಕೆಲಸ ಮಾಡುವ ಕಂಬಾರ, ಬಡಗಿ, ಕಂಚುಗಾರ, ಶಿಲ್ಪಿ, ಪತ್ತಾರ, ಪಂಚ ಕಸುಬುಗಳ ಕುಶಲಕರ್ಮಿಗಳಿಗೆ ಕಾಳಿ–ಶಕ್ತಿಯಾಗಿ ಕಂಡಿದ್ದಾಳೆ. ಇವರ ಪ್ರತಿಯೊಂದು ಉಪಕರಣಗಳಲ್ಲಿಯೂ ಅವಳನ್ನು ದೈವೀಕರಿಸಿದ್ದಾರೆ. ಕುಶಲಕರ್ಮಿಗಳಿಂದ ಉತ್ಪಾದಿತಗೊಳ್ಳುವ ವಸ್ತುವಿನಲ್ಲಿಯೂ ಅವಳ ಶಕ್ತಿಯನ್ನು ತುಂಬಲಾಗಿದೆ. ಶಿರಸಂಗಿ ಪ್ರದೇಶದ ಕುಶಲಕರ್ಮಿಗಳಿಂದ ನಿರ್ಮಿತಗೊಳ್ಳುವ ಪ್ರತಿ ವಸ್ತುವು ಕಾಳಿಯ ಕೃಪೆಯಿಂದ ತಯಾರಾದದ್ದಾಗಿರುತ್ತದೆ. ಹೀಗಾಗಿ ಕಾಳಿಕಮ್ಮ ಶಿರಸಂಗಿ ಪ್ರದೇಶದ ಪ್ರತಿ ಮಣ್ಣಿನ ಕಣಕಣದಲ್ಲಿ ಇದ್ದಾಳೆ. ಪಂಚ ಕಸುಬುಗಳ ಕರ್ಮಿಗಳಿಗೆ ಆರಾಧನೆಯ ದೇವತೆಯಾಗಿ ನೆಲೆಯೂರಿದ್ದಾಳೆ. ವಿಶಿಷ್ಟ ಶಕ್ತಿಯನ್ನೆ ನೆಲೆಯೂರಿಸಿಕೊಂಡ ಶಿರಸಂಗಿ ಪ್ರದೇಶ ಭೌಗೋಳಿಕವಾಗಿ ಅತೀ ಮಹತ್ವವನ್ನು ಪಡೆದುಕೊಂಡಿದೆ. ಇಂದಿಗೂ ಕಾಳಿ–ಕಮ್ಮಟೇಶ್ವರನನ್ನು ಪೂಜಿಸುವ ಭಕ್ತಿ ಸಮೂಹದ ಪುಣ್ಯಕ್ಷೇತ್ರ ಶಿರಸಂಗಿಯಾಗಿದೆ.

ಶಿರಸಂಗಿ–ಚಾರಿತ್ರಿಕ ಮಹತ್ವ

ಶಿರಸಂಗಿ ಕ್ಷೇತ್ರವು ಕ್ಷಾತ್ರಧರ್ಮ, ಓಜಸ್ಸು, ತೇಜಸ್ಸುಗಳಿಂದ ಪುರಾಣ ಪ್ರಸಿದ್ಧ, ಇತಿಹಾಸ ಪ್ರಸಿದ್ಧಗಳಿಂದ ಮಹತಿಯನ್ನು ಪಡೆದಿದೆ. ಇಲ್ಲಿಯ ಪರಿಸರವು ಪ್ರಾಗಿತಿಹಾಸ ಕಾಲದಿಂದಲೂ ಮೂಡಿ ಬಂದಿದೆ. ಪಂಚ ಕುಲಕಸುಬುಗಳನ್ನು ಆರಂಭ ಕಾಲದಿಂದಲೂ ನಿರ್ವಹಿಸುತ್ತ ಬಂದಿರುವ ಕುಶಲಕರ್ಮಿಗಳ ಕಲೆಯ ನಾಡಿದು. ವಿಶ್ವಕರ್ಮರ ಕ್ರಿಯಾಶೀಲ ವ್ಯಕ್ತಿತ್ವದ ಪುರಾತನ ಕ್ಷೇತ್ರವಾಗಿದೆ. ಸ್ಕಂದ ಪುರಾಣ, ಶಿವ ಪುರಾಣ, ದೇವಿ ಪುರಾಣ ಮತ್ತು ವಾಲ್ಮೀಕಿ ರಾಮಾಯಣದಂಥಹ ಮಹಾನ್ ಗ್ರಂಥಗಳಲ್ಲಿ ತನ್ನ ಕ್ಷೇತ್ರದ ಮಹಿಮೆ ಸಾರಿಕೊಂಡಿದೆ. ಅಷ್ಟೇ ಅಲ್ಲ ಶಿಲಾಶಾಸನಗಳಿಂದಲೂ ಶಿರಸಂಗಿ ಕ್ಷೇತ್ರ ಪ್ರಸಿದ್ಧಿ ಪಡೆದಿದೆ. "ಇದು ಮೊದಲು ಕರವೀರ ವೆಂಬ ಕ್ಷೇತ್ರವಾಗಿತ್ತು."[೨೯] ಕಾಲಾಂತರದಲ್ಲಿ ಇದು ಶಿರಸಂಗಿ ಕ್ಷೇತ್ರವಾಗಿ ಬೆಳೆಯಿತು. ಕ್ಷೇತ್ರದ ಐತಿಹ್ಯ ಮತ್ತು ಪುರಾಣಗಳು ಸ್ಥಳೀಯ ಕುಶಲಕರ್ಮಿ ಸಮುದಾಯದ ವಿಕಾಸದ ವಿವಿಧ ಹಂತಗಳನ್ನು ತಿಳಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಐತಿಹ್ಯ, ಪುರಾಣಗಳಿಂದ ಕ್ಷೇತ್ರದ

ಚರಿತ್ರೆ ಕಟ್ಟಲು ಕಷ್ಟವಾಗಬಹುದು. ಆದರೂ ಶಿರಸಂಗಿ ಪ್ರದೇಶ ರಾಜ್ಯಾಡಳಿತ ಶಿಲಾಶಾಸನಗಳಿಂದ ತನ್ನದೇ ಆದ ಚರಿತ್ರೆಯನ್ನು ಕಟ್ಟಿಕೊಳ್ಳುತ್ತದೆ.

ಐತಿಹ್ಯ

ಶಿರಸಂಗಿ ಪ್ರದೇಶ ಮತ್ತು ಸ್ಥಳೀಯ ಕ್ಷೇತ್ರದ ಕುರಿತು ಹಾಗೂ ಇಲ್ಲಿ ನೆಲೆಯೂರಿ ನಿಂತ ಶಿರಸಂಗಿ ಅಧಿದೇವತೆ ಶ್ರೀ ಕಾಳಿಕಾದೇವಿ, ಗ್ರಾಮದೇವತೆ ಉಡಚಮ್ಮರ ಬಗೆಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಮಾಣದಲ್ಲಿ ಐತಿಹ್ಯಗಳು ದೊರೆಯುತ್ತವೆ. ಒಂದು ಸಲ ಕೈಲಾಸ ಪರ್ವತದಲ್ಲಿ ಶಿವ-ಪಾರ್ವತಿಯರು ಸಂಭಾಷಣೆಯಲ್ಲಿ ನಿರತರಾಗಿದ್ದರು. ಗಣಪತಿಯು ಬರುತ್ತಾನೆ. ತಂದೆ-ತಾಯಿಗಳ ಕುರಿತು ಇಬ್ಬರಲ್ಲಿ ಯಾರು ಸುಂದರರು ಎಂದು ಪ್ರಶ್ನಿಸುತ್ತಾನೆ. ಪರಸ್ಪರ ಶಿವ-ಪಾರ್ವತಿಯರು ತಾನು ಶ್ರೇಷ್ಠವೆಂದು ಹೊಗಳಿಕೊಳ್ಳುತ್ತಾರೆ. ಈ ಸಮಸ್ಯೆ ಬಗೆ ಹರಿಸಲು ಶಿವನು ಬ್ರಹ್ಮ, ವಿಷ್ಣು ಇವರಿಗೆ ತಿಳಿಸುತ್ತಾನೆ. ಅವರಿಂದಲೂ ಸಾಧ್ಯವಾಗದೆ ಇರುವಾಗ ಸೃಷ್ಟಿಕರ್ತನಾದ ವಿಶ್ವಕರ್ಮನಲ್ಲಿ ಮೊರೆ ಇಡುತ್ತಾನೆ. ವಿಶ್ವಕರ್ಮನು ತನ್ನ ಮಗ ಶಿಲ್ಪಿಗೆ ಈ ಕಾರ್ಯವನ್ನು ವಹಿಸಿಕೊಡುತ್ತಾನೆ. ಶಿಲ್ಪಿಯು ಶಿವ-ಪಾರ್ವತಿಯ ಈ ಅಪಹಾಸ್ಯ ಪ್ರಸಂಗವನ್ನು ಕಂಡು ನಸು ನಗುತ್ತಾನೆ. ಆರು ದಿನಗಳ ನಂತರ ಭೇಟಿಯಾಗುವುದಾಗಿ ತಿಳಿಸಿ ಹೊರಟು ಹೋಗುತ್ತಾನೆ.

ಆರು ದಿನಗಳು ಕಳೆದು, ಏಳನೆಯ ದಿನದಂದು ಶಿವ-ಪಾರ್ವತಿಯರು ನಿತ್ಯ ಕರ್ಮಾದಿಗಳನ್ನು ಪೂರೈಸಿಕೊಂಡು ತಮ್ಮ ಅರಮನೆಯ ದ್ವಾರದ ಬಳಿ ಬರುತ್ತಾರೆ. ಅಲ್ಲಿ ತಮ್ಮ ತಮ್ಮ ಪ್ರತಿರೂಪಗಳನ್ನು ನೋಡುತ್ತಾರೆ. ಶಿವನ ಪ್ರತಿರೂಪ ನೋಡಿ ಪಾರ್ವತಿ, ಪಾರ್ವತಿಯ ಪ್ರತಿರೂಪ ನೋಡಿ ಶಿವನು ಹೊಗಳಿದನು. ಇದಕ್ಕೆ ಕಾರಣನಾದ ಶಿಲ್ಪಿಯನ್ನು ಕರೆಯಿಸಿ ತೀರ್ಪನ್ನು ಕೇಳಲು 'ನೀವಿಬ್ಬರು ಸುಂದರರೆ ಆಗಿದ್ದಿರಿ' ನಿಮಗೆ ನಿಮ್ಮನ್ನು ಬಿಟ್ಟರೆ ಜಗತ್ತಿನಲ್ಲಿ ಅವರವರಿಗೆ ಅವರುಗಳೇ ಸುಂದರರಾಗಿದ್ದಾರೆಂದು ಶಿಲ್ಪಿಯು ಶಿವ-ಪಾರ್ವತಿಯ ಸಮಸ್ಯೆಯನ್ನು ಬಗೆಹರಿಸಿದಾಗ, ಪ್ರಸನ್ನನಾದ ಶಿವ ವರಕೇಳಲು ಶಿಲ್ಪಿಗೆ ಹೇಳುತ್ತಾನೆ. ಶಿಲ್ಪಿಯು 'ಜಗತ್ತಿನಲ್ಲಿ ವಿಶ್ವಕರ್ಮರು ನಿರ್ಮಿಸಿದ ವಸ್ತುಗಳಲ್ಲಿ ಯಾವ ಅಸ್ತ್ರವೂ ತಾಗದಿರುವ ವಸ್ತುವನ್ನು ಕೇಳಲು, ಶಿವನು ಶಿಲ್ಪಿಗೆ ದಾರಿದ್ರ್ಯವನ್ನು ದಯಪಾಲಿಸುತ್ತಾನೆ. ಇದರಿಂದ ಕುಪಿತಗೊಂಡ ಶಿಲ್ಪಿಯು ಶಿವನೊಂದಿಗೆ ಯುದ್ಧ ಮಾಡುತ್ತಾನೆ. ಕೋಪಗೊಂಡ ಶಿವ ಶಿಲ್ಪಿ ಹಾಗೂ ಆತನ ವಿಶ್ವಕರ್ಮ ಸಮುದಾಯವನ್ನು ನಾಶ ಮಾಡಲು ಉರಿಗಣ್ಣನ್ನು ತೆರೆಯುತ್ತಾನೆ. ಆ ಜ್ವಾಲೆಯಿಂದ ತನ್ನನ್ನು ಮತ್ತು ತನ್ನ ಕುಲದವರನ್ನು ರಕ್ಷಿಸಲು ಶಿಲ್ಪಿಯು ಪಾರ್ವತಿಯ ರಕ್ಷಣೆ ಬಯಸುತ್ತಾನೆ. ಶಿವನ ಎದುರು ಪಾರ್ವತಿ ದೇವಿಯು ನಿಂತಾಗ ಉರಿಗಣ್ಣಿನ ಜ್ವಾಲೆ ಅವಳ ಮುಖಕ್ಕೆ ತಗುಲುತ್ತದೆ. ಪಾರ್ವತಿಯ ಮುಖ ಕಪ್ಪಾಗುತ್ತದೆ. ತನಗೋಸ್ಕರ ಮುಖದ ಕಳೆಯನ್ನು ಕಳೆದುಕೊಂಡ ಅಂಬೆ ಅಂದರೆ ತಾಯಿ ಕಾಳಿಕಾಂಬೆ,

ಕಾಳಿಕಾದೇವಿ, ಕಾಳಮ್ಮ ಎಂದು ಶಿಲ್ಪಿ ಅವಳನ್ನು ಸ್ತುತಿಸುತ್ತಾನೆ. ಶಿಲ್ಪಿಯ ಭಕ್ತಿಗೆ ಪ್ರಸನ್ನಳಾದ ಪಾರ್ವತಿಯು ಕಲಿಯುಗದಲ್ಲಿ ನನ್ನ ಮಕ್ಕಳಾದ ವಿಶ್ವಕರ್ಮರೆಲ್ಲರನ್ನ ರಕ್ಷಿಸಲು, ಕುಲವನ್ನುದ್ಧರಿಸಲು ಶ್ರೀಕಾಳಿಕಾದೇವಿಯಾಗಿ ಕಾಳಮ್ಮನಾಗಿ ಅವತರಿಸುತ್ತೇನೆ. ಶಿವನನ್ನು ಈ ಕುಲದಲ್ಲಿ ಅವತರಿಸುವಂತೆ ಮಾಡುವುದಾಗಿ ಹೇಳಿ, ತನ್ನನ್ನು ಧ್ಯಾನಿಸುವ ಕುಶಲಕರ್ಮಿಗಳನ್ನು ರಕ್ಷಿಸುತ್ತೇನೆ ಮತ್ತು ದಾರಿದ್ರ್ಯವನ್ನು ಕಡಿಮೆ ಮಾಡುವುದಾಗಿ ಹೇಳುತ್ತಾಳೆ. ಅದರಂತೆ ಕಲಿಯುಗದಲ್ಲಿ ಪಾರ್ವತಿದೇವಿಯು ಕಾಳಮ್ಮನಾಗಿ ಅವತರಿಸಿದ್ದಾಳೆ. ಹೀಗೆ ಕಾಳಮ್ಮ ಅವತರಿಸುವುದಕ್ಕೆ ಕಾರಣಗಳಿವೆ ಎಂಬ ಐತಿಹ್ಯಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಐತಿಹ್ಯಗಳು ಕಾಳಮ್ಮನ ಕುರಿತಾಗಿ ಹಲವಾರು ಕತೆಗಳನ್ನು ಹೇಳುತ್ತವೆ. ಒಟ್ಟಾರೆ ಕಾಳಮ್ಮ ವಿಶ್ವಕರ್ಮ ಸಮುದಾಯವನ್ನು ಉದ್ಧರಿಸಲು ಅವತರಿಸಿ, ಶಿರಸಂಗಿಯಲ್ಲಿ ನೆಲೆಸಿರುವುದು ಸತ್ಯ.

ಪೌರಾಣಿಕ ಹಿನ್ನೆಲೆ

ಶಿರಸಂಗಿ ಪರಿಸರವು ರಾಮಾಯಣ ಕಾಲಕ್ಕೂ ಸಂಬಂಧಿಸಿದ್ದಾಗಿದೆ. ಸಕಲ ವೇದಶಾಸ್ತ್ರಗಳನ್ನು ಅರಿತು ರಹೂಗಣ ಋಷಿಯು, ಬ್ರಹ್ಮರ್ಷಿ ಅಂಗಿರಸನ ವಂಶಜನಾಗಿದ್ದಾನೆ. ಇತನ ಮಗ ಪ್ರತ್ನಿರ್ಷಿ ಕುಶಲಕರ್ಮಿಗಳ ನಾಲ್ಕನೆ ಗೋತ್ರದವನು. ಈ ಗೋತ್ರದಲ್ಲಿ ಜನಿಸಿದ ವಿಭಾಂಡಕ ಋಷಿಯ ಮಗ ಋಷ್ಯಶೃಂಗ. ಈಗಿನ ಶೃಂಗೇರಿ ಪ್ರದೇಶವು ವಿಭಾಂಡಕನ ತಪೋಭೂಮಿಯಾಗಿದ್ದರೆ ಈತನ ಮಗ ಋಷ್ಯಶೃಂಗನ ತಪೋಭೂಮಿ ಇಂದಿನ ಶಿರಸಂಗಿ ಯಾಗಿತ್ತು. ಅಯೋಧ್ಯೆಯ ಅರಸು ಧಶರಥನು 'ಪುತ್ರಕಾಮೇಷ್ಠಿ' ಯಾಗವನ್ನು ಮಾಡುತ್ತಾನೆ. ಈ ಯಜ್ಞದ ಮುಖ್ಯ ಆಚಾರ್ಯನಾಗಿ ಋಷ್ಯಶೃಂಗನು ಕಾರ್ಯನಿರ್ವಹಿಸುತ್ತಾನೆ. ಇದರ ಫಲವಾಗಿ ದಶರಥನಿಗೆ ಪುತ್ರ ಸಂತಾನ ಭಾಗ್ಯ ದೊರೆಯುತ್ತದೆ. ಈ ಸಂಗತಿ ರಾಮಾಯಣದಲ್ಲಿ ಉಲ್ಲೇಖವಾಗಿದೆ. ಮುಂದೆ ರಾಮಾಯಣದ ರಾಮ-ರಾವಣರ ಯುದ್ಧಾನಂತರ ಲಕ್ಷ್ಮಣ-ಸೀತೆ, ಹನುಮಂತನೊಂದಿಗೆ ರಾಮನು ಅಯೋಧ್ಯೆಗೆ ತೆರಳುವಾಗ ಋಷ್ಯಶೃಂಗರ ಆಶ್ರಮಕ್ಕೆ ಬರುತ್ತಾರೆ. ಅವರ ಆಶೀರ್ವಾದ ಪಡೆದುಕೊಂಡಿರುವುದು ರಾಮಾಯಣದಿಂದ ತಿಳಿದುಬರುತ್ತದೆ.

ಶಿರಸಂಗಿ ಪ್ರದೇಶದಲ್ಲಿ ಋಷ್ಯಶೃಂಗರು ೧೦ ವರ್ಷಗಳ ಕಾಲ ಘೋರ ತಪಸ್ಸು ಮಾಡಿ ಶ್ರೀಕಾಳಿಕಾದೇವಿಯನ್ನು ಒಲಿಸಿಕೊಂಡಿದ್ದಾರೆ. ಆ ಪ್ರದೇಶದಲ್ಲಿ ಕಂಟಕಪ್ರಾಯರಾಗಿದ್ದ ನಲುಂದಾಸುರ (ಈಗ ನವಲಗುಂದ), ನರುಂದಾಸುರ(ಈಗ ನರಗುಂದ), ಬೆಟ್ಟಾಸುರ(ಈಗ ಬೆಟ್ಟಸೂರ), ಹಿರಿಕುಂಬಾಸುರ(ಈಗ ಹಿರೇಕುಂಬಿ) ಮತ್ತು ಚಿಕ್ಕುಂಬಾಸುರ(ಈಗ ಚಿಕ್ಕುಂಬಿ) ಎಂಬುವರನ್ನು ಶ್ರೀಕಾಳಿಕಾದೇವಿಯು ಸಂಹರಿಸಿ, ಭಕ್ತರನ್ನು ಕಾಪಾಡಿದಳು. ಶ್ರೀಕಾಳಿಕಾದೇವಿಯ ದರ್ಶನಕ್ಕೆ ಕಾರಣರಾದ ಋಷ್ಯಶೃಂಗರು ಅಲ್ಲಿಯೇ ಒಂದು ಆಶ್ರಮ ಕಟ್ಟಿಕೊಂಡರು. ನಂತರದಲ್ಲಿ ಅದು

ಒಂದು ಗ್ರಾಮವಾಗಿ, ಚಿಕ್ಕ ಪಟ್ಟಣವಾಯಿತು. ಋಷ್ಯಶೃಂಗರು ವಾಸವಾಗಿದ್ದ ಈ ಊರು ಋಷ್ಯಶೃಂಗ ಪುರ>ರಿಶ್ಯಶೃಂಗ>ಪಿರಿಸಂಗ>ಶಿರಶೃಂಗ ಈಗ ಶಿರಸಂಗಿಯಾಗಿ ಕರೆಸಿಕೊಳ್ಳುತ್ತದೆ.

ವಿಶ್ವಕರ್ಮ ಕುಶಲಕರ್ಮಿಗಳ ಕುಲದೇವತೆಯಾಗಿ ಶ್ರೀಕಾಳಿಕಾದೇವಿಯು ಶಿರಸಂಗಿ ಪ್ರದೇಶದಲ್ಲಿ ನೆಲೆಸುತ್ತಾಳೆ. ಇದರಿಂದ ಪಂಚ ಕಸುಬುದಾರರಿಗೆ ಸ್ಫೂರ್ತಿ-ಚೈತನ್ಯದ ಶಕ್ತಿ ಕೇಂದ್ರವಾಯಿತು. ಪುಣ್ಯದ ಪ್ರಭಾವದಿಂದ, ದೇವಿಯ ಕೃಪೆಯಿಂದ ಕುಶಲಕರ್ಮಿಗಳು ಉತ್ಪಾದಿಸಿದ ಪ್ರತಿವಸ್ತುಗಳು ದೀರ್ಘ ತಾಳಿಕೆಯುಳ್ಳ ವಸ್ತುಗಳಾಗಿರುತ್ತಿದ್ದವು. ಇದರಿಂದ ದೇವಿಯ ಮೇಲೆ ಕುಶಲಕರ್ಮಿಗಳು ನಂಬಿಕೆಯನ್ನಿಟ್ಟು ಶ್ರಮದಾಯಕ ಕಾರ್ಯದಲ್ಲಿ ನಿತ್ಯ ತೊಡಗುತ್ತಿದ್ದರು. ತಮ್ಮ ಉತ್ಪಾದಿತ ವಸ್ತುಗಳಿಂದ ಬರುತ್ತಿದ್ದ ಅಲ್ಪ ಧನ-ಧಾನ್ಯಗಳನ್ನು ಒಂದಿಷ್ಟು ದೇವಿಗೆ ಮೀಸಲಿಟ್ಟು ಕೂಡಿಸಿಡುತ್ತಿದ್ದರು. ಹೃನ್ಮನಗಳಲ್ಲಿ ತುಂಬಿಕೊಂಡಿದ್ದ ಕಾಳಿಕಾದೇವಿಯನ್ನು ಪ್ರತಿಮಾರೂಪದಲ್ಲಿ ತಂದು ನಿತ್ಯ ಕಾಯಕದೊಂದಿಗೆ ಅವಳ ಪೂಜೆ ಆರಂಭವಾಗುತ್ತದೆ. ದೇವಿಗೊಂದು ದೇವಾಲಯ ರೂಪಿಸುತ್ತಾರೆ. ಶಕ್ತಿ ಸ್ವರೂಪಿಣಿಯಾದ ಕಾಳಿಕಾದೇವಿಯು ಶಿರಸಂಗಿಯಲ್ಲಿ ಶಕ್ತಿಪೀಠವಾಗಿ ಸ್ಥಾಪಿತಗೊಳ್ಳುತ್ತಾಳೆ. ದೊಡ್ಡ ಪ್ರಮಾಣದಲ್ಲಿ ಈ ಪ್ರದೇಶದಲ್ಲಿ ಕಾಳಿಕಾದೇವಿ ಆರಾಧಕರ 'ಶಾಕ್ತ ಪಂಥ'ವೇ ಹುಟ್ಟಿಕೊಳ್ಳುತ್ತದೆ. "ಶಕ್ತಿ ಆರಾಧನೆಯ ಸಿದ್ಧಾಂತ ಮತ್ತು ವಿಶೇಷತೆಗಳನ್ನು ನಿರ್ದಿಷ್ಟವಾಗಿ ತಿಳಿಯಲು 'ಶಕ್ತ್ಯಾಗಮ'ಗಳಿವೆ. ಶಕ್ತ್ಯಾಗಮಗಳಲ್ಲಿ ಸಾತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ಭಾಗಗಳಿದ್ದು ದೇವಿಯ ಮೂರ್ತಿಗಳಲ್ಲೂ, ಪೂಜಾ ವಿಧಾನಗಳಲ್ಲಿಯೂ ಈ ಪ್ರಭೇದವನ್ನು ಗುರುತಿಸಬಹುದಾಗಿದೆ."[೩೦] ಸಂಶೋಧಕ ಡಾ.ಶಂ.ಬಾ.ಜೋಶಿಯವರು, ಈ ಶಾಕ್ತ ಸಂಪ್ರದಾಯ ಉತ್ತರದಿಂದ ದಕ್ಷಿಣದ ಕಡೆಗೆ ಬಂದಿರಬೇಕೆಂದು ಅಭಿಪ್ರಾಯಿಸುತ್ತಾರೆ. ಈ ಪಂಥವು ೧೧-೧೨ನೇ ಶತಮಾನದಲ್ಲಿ ದಕ್ಷಿಣ ಬಾರತದಲ್ಲಿ ವ್ಯಾಪಿಸುತ್ತದೆ. ಅದೇ ಹೊತ್ತಿಗೆ ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಶಕ್ತಿಪೀಠಗಳು ರೂಪಿತಗೊಂಡಿರುವಂತೆ, ಶಿರಸಂಗಿಯೂ ಇಂದು ಶಕ್ತಿಪೀಠವಾಗಿ ರೂಪ ತಾಳಿದೆ. ದೇವಿಯ ಆರಾಧಕರು ಶಕ್ತಿಗೆ ಪ್ರಥಮ ಆದ್ಯತೆ ನೀಡುತ್ತಾರೆ. ಶಕ್ತಿಯ ನಂತರ ಶಿವನಿಗೆ ಶಾಕ್ತ ಪಂಥರು ಸ್ಥಾನ ನೀಡುತ್ತಾರೆ. ಶಕ್ತಿ ಮತ್ತು ಶಿವ ಒಂದೆಡೆ ಇರುವುದನ್ನು ಶಕ್ತಿಪೀಠಗಳಲ್ಲಿ ಕಾಣುತ್ತೇವೆ. ಶಕ್ತಿಯ ಸಂರಕ್ಷಕನಾಗಿ ಬರುವ ಶಿವ ಕ್ಷೇತ್ರಪಾಲನೆ ಮಾಡುವ ಕಾರ್ಯನಿರ್ವಹಿಸುತ್ತಾನೆ. ಈತನನ್ನೇ ಭೈರವನೆಂದು ಪೂಜಿಸಲಾಗುತ್ತದೆ. ಶಿರಸಂಗಿಯಲ್ಲಿ ಈ ತರಹದ ವ್ಯವಸ್ಥೆಯನ್ನು ಕಾಣುತ್ತೇವೆ. ಕಾಳಿಕಾದೇವಿಯ ಪೂಜೆಯೊಂದಿಗೆ ಭೈರವನ ಪೂಜೆಯ ಸಲ್ಲುತ್ತದೆ.

ಶಿರಸಂಗಿಯಲ್ಲಿ ಕಾಳಮ್ಮ ದೇವಾಲಯ ವಿನ್ಯಾಸ

ಶಕ್ತಿಯೊಂದಿಗೆ ಶಿವನನ್ನು ಪೂಜಿಸುವ ಸಂಪ್ರದಾಯ ಈ ಪ್ರದೇಶದಲ್ಲಿ ಹುಟ್ಟಿಕೊಂಡ ಮೇಲೆ ಇಲ್ಲಿಯ ಕುಶಲಕರ್ಮಿಗಳು ಕಾಳಮ್ಮ ದೇವಾಲಯ ನಿರ್ಮಾಣಕ್ಕೆ ಪ್ರಾಚೀನ ಕಾಲದಲ್ಲಿಯೇ

ನೀಲಿ ನಕ್ಷೆ ತಯಾರಿಸಿರಬೇಕು. ಗ್ರಾಮದ ಉತ್ತರ ದಿಕ್ಕಿನಲ್ಲಿ ಅತ್ಯಂತ ಪುರಾತನ ಕಾಲದಲ್ಲಿ 'ಹೇಮಾಡ'ನೆಂಬುವನು ಕಟ್ಟಿಸಿದ್ದಾನೆ ಕಾಳಮ್ಮನ ಕುಳಿತ ಮೂರ್ತಿಯಿದೆ. ದೇವಾಲಯವು ಗರ್ಭಗುಡಿ, ದೊಡ್ಡ ಮಂಟಪ ಹೊಂದಿದೆ. ಒಂದು ಆಳ ಪ್ರಮಾಣದಷ್ಟು ಎತ್ತರವಿದೆ. ಕಾಳಿಕಾದೇವಿಯ ಮೂರ್ತಿಯು ಸಾಲಿಗ್ರಾಮ ಶಿಲೆಯದಿದ್ದು ಸುವರ್ಣಾಂಕಿತ ರೇಷೆಗಳಿಂದ ಕೂಡಿದೆ. ಎಂಬುದು ಪುಣೆಯ ಬ್ರಹ್ಮರ್ಷಿ ಬಾಳಾಶಾಸ್ತ್ರೀ ಕ್ಷೀರಸಾಗರ ಅವರು ೧೯೩೫ರಲ್ಲಿ ರಚಿಸಿದ ಶಿರಃಶೃಂಗೀ ಕಾಳಿಕಾ ಚರಿತ್ರ' ಗ್ರಂಥದಲ್ಲಿ ಹೇಳಿಕೊಂಡಿದ್ದಾರೆಂದು ತಿಳಿದುಬರುತ್ತದೆ. ದೇವಿಯ ಗರ್ಭಗುಡಿ ಬೇರೆಯಿದೆ. ದೊಡ್ಡದಾದ ಮಂಟಪವಿದೆ. ಈ ದೇವಾಲಯಕ್ಕೆ ಹೊಂದಿಕೊಂಡು ಕಮ್ಮಟೇಶ್ವರ, ಭೈರವನ ದೇವಾಲಯಗಳಿವೆ. ಇವೆರಡು ಒಂದೇ ಅಧಿಷ್ಠಾನದ ಪಾತಳಿಯಲ್ಲಿವೆ. ಕಾಳಿಕಾ ದೇವಾಲಯ ಅಧಿಷ್ಠಾನ ಪಾತಳಿ ಬೇರೆಯಾಗಿದೆ. ಇದರಿಂದ ಕಾಳಿಕಾ ದೇವಾಲಯ ಬಹಳ ಪ್ರಾಚೀನ ಕಾಲದಲ್ಲಿ ನಿರ್ಮಾಣವಾಗಿದ್ದು, ನಂತರದಲ್ಲಿ ಕಮ್ಮಟೇಶ್ವರ, ಭೈರವನ ದೇವಾಲಯಗಳು ನಿರ್ಮಾಣಗೊಂಡಿರಬೇಕು. ಕಾಳಿಕಾ ದೇವಾಲಯ ಕಟ್ಟಿಸಿದವ ಹೇಮಾಡನೆಂದು ಹೇಳಲಾಗುತ್ತದೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಈ ಕುರಿತು ಹೆಚ್ಚಿನ ಅಧ್ಯಯನ ನಡೆಯಬೇಕಿದೆ.

ಶ್ರೀ ಕಾಳಿಕಾದೇವಿಯ ವಿಗ್ರಹವು "ಕ್ರಿ.ಶ.೮ ಹಾಗೂ ೯ನೇ ಶತಮಾನದ ಮಧ್ಯದ ಅವದಿಯಲ್ಲಿ ತಯಾರಿಸಿದ ಮೂರ್ತಿಯಾಗಿದೆ. ಆದರೆ ದೇವಸ್ಥಾನದ ರಚನೆಯನ್ನು ವೀಕ್ಷಿಸಿದರೆ, ಭಾರತೀಯ ವಾಸ್ತುಶಿಲ್ಪ ಶಾಸ್ತ್ರಕ್ಕನುಸಾರವಾಗಿ ಕ್ರಿ.ಶ.೧ನೇ ಶತಮಾನಕ್ಕಿಂತ ಮೊದಲೇ ದೇವಸ್ಥಾನ"[೩೧] ನಿರ್ಮಾಣಗೊಂಡಿರಬೇಕು. ಒಟ್ಟಾಗಿ ಈ ಕಾಳಿಕಾದೇವಸ್ಥಾನವನ್ನು "ಗೋಲ್ಡಸ್ಮಿಥ್ಸ್ ಟೆಂಪಲ್' ಎಂದು ದಿನಾಂಕ ೨೮ ಮಾರ್ಚ್, ೧೯೧೭ ಇಸ್ವಿಯ 'ನವಲಗುಂದ ಶಿರಸಂಗಿ ಟ್ರಸ್ಟ್ ಫಂಡಿನ' ದಾಖಲೆಗಳಲ್ಲಿ ವಿವರಿಸಲಾಗಿದೆ."[೩೨]

ಶಿರಸಂಗಿ ಇತಿಹಾಸ

ಕ್ರಿ.ಶ.ಆರಂಭದಿಂದಲೂ ಕರ್ನಾಟಕವನ್ನು ಆಳಿದ ಶಾತವಾಹನ, ಗಂಗ-ಕದಂಬ, ಬಾದಾಮಿ ಚಾಲುಕ್ಯ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಸವದತ್ತಿ ರಟ್ಟರು, ವಿಜಯನಗರ, ವಿಜಯಪುರ ಆದಿಲ್‌ಶಾಹಿ ಮುಂತಾದ ಅರಸರ ಆಳ್ವಿಕೆಗೆ ಒಳಪಟ್ಟಿದೆ. ಕಾವೇರಿಯಿಂದ ಗೋದಾವರಿಯವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದ ರಾಷ್ಟ್ರಕೂಟ ಅರಸು ಅಮೋಘವರ್ಷ ನೃಪತುಂಗ(ಕ್ರಿ.ಶ.೮೧೪-೮೫೭) ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ರಾಷ್ಟ್ರಕೂಟ ಅರಸರ ಮಾಂಡಳಿಕರಾದ ಸವದತ್ತಿ ರಟ್ಟರು (ಕ್ರಿ.ಶ.೯೩೦-೧೨೩೦) ಈ ಪರಿಸರದ ಆಡಳಿತಗಾರರಾಗಿದ್ದರು. ಕಲ್ಯಾಣದ ಚಾಲುಕ್ಯರು, ದೇವಗಿರಿಯ ಯಾದವರು, ಮಹಮ್ಮದ ಬಿನ್ ತಘಲಕ್, ವಿಜಯನಗರ ಅರಸರ ಮಾಂಡಲೀಕರು, ಛತ್ರಪತಿ ಶಿವಾಜಿ, ಮೊಘಲರು ನಂತರದ ದಿನಗಳಲ್ಲಿ ಬ್ರಿಟಿಷರ

ಆಡಳಿತ ಪರಂಪರೆಯಲ್ಲಿ ಶಿರಸಂಗಿ ಸಂಸ್ಥಾನದ ದೇಸಾಯಿ ಮನೆತನದವರು ಆಳ್ವಿಕೆಯನ್ನು ನಡೆಸಿದರು.

ಶಿರಸಂಗಿ ದೇಸಾಯಿ ಮನೆತನದ ದಾಖಲಾತಿಗಳಲ್ಲಿ ದೊರೆತಿರುವ ಮಾಹಿತಿಯಂತೆ ೧೭೯೫ರ ಹೊತ್ತಿಗೆ ಸಂಸ್ಥಾನ ಸ್ಥಾಪಿತವಾದ ಬಗ್ಗೆ ತಿಳಿದುಬರುತ್ತದೆ. ಕೊಕಟನೂರ ಪರಗಣೆಯಿಂದ(ಕ್ರಿ.ಶ.೧೩೦೨) ನವಲಗುಂದ ಸಂಸ್ಥಾನ(ಕ್ರಿ.ಶ.೧೫೬೫)ರವರೆಗೆ ಬೆಳೆದು ಬಂದಿದೆ. ನವಲಗುಂದದಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದ ದೇಸಾಯಿ ಸಂಸ್ಥಾನಿಕರು ತಮ್ಮ ರಾಜಧಾನಿಯನ್ನು ೧೭೯೬ರ ಅವಧಿಯಲ್ಲಿ ಶಿರಸಂಗಿಗೆ ಸ್ಥಳಾಂತರಿಸಿಕೊಂಡರು. ಈ ಸಂಸ್ಥಾನದ ಕೊನೆಯ ದೇಸಾಯಿ ಲಿಂಗರಾಜರು ಮಹಾದಾನಿಗಳಾಗಿದ್ದು. ೧೯೦೬ರಲ್ಲಿ ಶಿರಸಂಗಿಯಲ್ಲಿ ದೇಸಾಯರ ಆಡಳಿತ ಮುಕ್ತಾಯಗೊಳ್ಳುತ್ತದೆ.

ಬೆಳಗಾವಿ ಭಾಗದಲ್ಲಿ ಅತ್ಯಂತ ಪ್ರಮುಖ ಹಾಗೂ ಪ್ರಸಿದ್ಧಿಯ ಸಂಸ್ಥಾನಗಳಲ್ಲಿ ಶಿರಸಂಗಿಯು ಒಂದು. 'ಮ್ಯಾಕ್ ಗ್ರಿಗೋರ್' ಬೆಳಗಾವಿಯ ಕಲೆಕ್ಟರ್ ಆಗಿದ್ದಾಗ ಬೆಳಗಾವಿ ಭಾಗದ ಇನಾಂ ಹಳ್ಳಿ ಮತ್ತು ಸಂಸ್ಥಾನಿಕ ಮನೆತನಗಳನ್ನು ಯಾದಿ ಮಾಡಿದ್ದಾನೆ. ಅವು ನೂರಕ್ಕೂ ಹೆಚ್ಚು ಇದ್ದಿರುವುದಾಗಿ ತಿಳಿದುಬರುತ್ತದೆ. ಬೆಳಗಾವಿ ಭಾಗದಲ್ಲಿಯೇ ಕಿತ್ತೂರು ನಂತರದಲ್ಲಿ ಪ್ರಮುಖವಾದ ದೇಸಗತಿ ಶಿರಸಂಗಿ ದೇಸಾಯರದು. ಇದನ್ನು ಮೂವತ್ತೆರಡು ವ್ಯಕ್ತಿಗಳು ಅಂದರೆ ೩೭ ಜನ ದೇಸಾಯರು ಮತ್ತು ೫ ಜನ ದೇಸಾಯಣಿರು ಆಳಿದ್ದಾರೆ.

ಸವಣೂರಿನಲ್ಲಿ ನವಾಬ್ ಅಬ್ದುಲ್ ಗಫಾರಖಾನ ಆಳುತ್ತಿದ್ದ ಅವಧಿಯಲ್ಲಿ ಶಿರಸಂಗಿ ದೇಸಗತಿಯನ್ನು ಮೂಲದ ಲಿಂಗಪ್ಪ ದೇಸಾಯಿ ನವಲಗುಂದದಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಅವನ ನಿಧನಾನಂತರ ಅವನ ಹಿರಿಯ ಪತ್ನಿ ಚನ್ನವ್ವ-ದೇಸಾಯಿ(೧೭೧೬-೧೭೩೩) ಆಳಿದಳು. ಕಿತ್ತೂರು ಕೆಳದಿ ಚನ್ನಮ್ಮನಂತೆ ನವಲಗುಂದ-ಶಿರಸಂಗಿ ಸಂಸ್ಥಾನದ ಚನ್ನವ್ವ ಉತ್ತಮ ಆಡಳಿತಗಾರಳಾಗಿದ್ದಳು. ಅವಳ ಆಡಳಿತಕ್ಕೆ ಮೆಚ್ಚಿ ಹಲವಾರು ಗ್ರಾಮಗಳು ಉಂಬಳಿಯಾಗಿ ಬಂದಿರುವುದು ತಿಳಿದುಬರುತ್ತದೆ. ಚೆನ್ನವ್ವನ ನಿಧನಾನಂತರ ಈಕೆಯ ಸವತಿ ಮಗ ೨ನೇ ಜಾಯಗೊಂಡ ಅಥವಾ ಜಾಯಪ್ಪ ದೇಸಾಯಿಗೆ ಯಕ್ಕುಂಡಿ ಕರ್ಯಾತಿನ ಕೃಷ್ಣಪ್ಪ ದೇಸಾಯಿ ತಮ್ಮ ಆಡಳಿತ ವ್ಯಾಪ್ತಿಯ ೨೦ ಗ್ರಾಮಗಳನ್ನು ಇನಾಂ ಆಗಿ ಕೊಟ್ಟದ್ದು ತಿಳಿದುಬರುತ್ತದೆ.

ಸವಣೂರ ನವಾಬ್‌ನಿಗೆ ಯುದ್ಧದ ಸಂದರ್ಭದಲ್ಲಿ ನವಲಗುಂದ ದೇಸಾಯಿಯು ಸಹಾಯ ಮಾಡಿದನೆಂಬ ಕಾರಣದಿಂದ ೧೭೭೮ರ ಅವಧಿಯ ಸಂಸ್ಥಾನವನ್ನು ಸವಾಯಿ ಮಾಧವರಾವ್ ಪೇಶ್ವೆಯು ಕಸಿದುಕೊಂಡನು. ೧೭೯೫ರಲ್ಲಿ ನಾನಾ ಫಡ್ನವೀಸನು ಮಧ್ಯಸ್ಥಿಕೆ ವಹಿಸಿ ನವಲಗುಂದ ಸಂಸ್ಥಾನದ ಬದಲಾಗಿ ಹತ್ತು ಗ್ರಾಮಗಳನ್ನು ಮತ್ತು ೨೮೫ ಮಾರ ಜಮೀನು ಪೇಶ್ವೆಯಿಂದ

ಕೂಡಿಸಿದನು. "ಶಿರಸಂಗಿ ಸಂಸ್ಥಾನದ ಮೊದಲ ದೇಸಾಯಿ ಜಾಯಪ್ಪ. ಸವಾಯಿ ಮಾಧವರಾವ್ ಪೇಶ್ವೆಯಿಂದ ಶಿರಸಂಗಿ, ಕಲ್ಲಾಪೂರ, ಗೋವನಕೊಪ್ಪ, ಹೂಲಿಕಟ್ಟಿ, ಗುರುವನಕೊಪ್ಪ, ಕೆಂಚಲಾರಕೊಪ್ಪ, ಹೊಸವಾಳ ಹೊಂಗಲ, ಉಳಿಗೇರಿ, ಬೆಳ್ಳಿರಿ ಎಂಬ ಹತ್ತು ಗ್ರಾಮಗಳನ್ನು ಕೊಡಲಾಯಿತು. ಶಿರಸಂಗಿಯನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡ ಸಂಸ್ಥಾನಕ್ಕೆ ಇಲ್ಲಿಯ ಜಮೀನುಗಳನ್ನು ಕೊಡುವಾಗ ಅಂದರೆ ೧೮೬೬ರಲ್ಲಿ ದೇಸಾಯಿ ಮತ್ತು ಸರಕಾರದ ಠರಾವಣೆ(Settlement) ಮಾಡಲಾಗಿತ್ತು. Exhibit –೭೨ರಲ್ಲಿ ಕಂಡುಬರುವಂತೆ ಕಾಳಮ್ಮ, ಸಿದ್ಧಲಿಂಗ, ಶಂಕರಲಿಂಗ ಈ ಮೂರು ದೇವಾಲಯಗಳ ಒಟ್ಟು ಜಮೀನಿನ ಕ್ಷೇತ್ರವನ್ನು ಕಳೆದು ಉಳಿದ ಈ ಗ್ರಾಮದ ಕ್ಷೇತ್ರವನ್ನು ದೇಸಗತಿಗೆ ಕೊಡಲಾಗಿದೆ. ಇದರಿಂದ ನಿರಂತರವಾಗಿ ನಡೆದು ಬಂದ ಕಾಳಮ್ಮನ ಆರಾಧನೆಯು ತಿಳಿಯುತ್ತದೆ."[೩೩]

ಶಿರಸಂಗಿ ಪ್ರದೇಶದಲ್ಲಿ ಕಾಳಮ್ಮನ ಆರಾಧನೆ ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ನಿರಂತರವಾಗಿ ನಡೆಯುತ್ತ ಬಂದಿದೆ. "ಪ್ರಾಚೀನ ಕಾಲದಲ್ಲಿ ಊರಿನ ಮುಖಂಡತ್ವವನ್ನು ವಹಿಸಿಕೊಂಡ ಮಾಂಡಳಿಕ, ಪ್ರಧಾನ, ಗೌಡ ಮೊದಲಾದವರ ನೇತೃತ್ವದಲ್ಲಿ ದೇವಾಲಯದ ಕಾರ್ಯಾಚರಣೆ, ಹಬ್ಬ, ಉತ್ಸವಾದಿಗಳು ನಡೆಯುತ್ತಿದ್ದವು. ಅದರಂತೆ ಶಿರಸಂಗಿ ಗ್ರಾಮದಲ್ಲಿ ನಡೆಯುತ್ತಿದ್ದ ಕಾಳಮ್ಮ, ಮಲ್ಲಿಕಾರ್ಜುನ, ಸಿದ್ದಲಿಂಗ, ಕಲ್ಮೇಶ್ವರ, ಆಂಜನೇಯ ಮೊದಲಾದ ಉತ್ಸವಗಳಿಗೆ ಗ್ರಾಮದ ವಿದ್ಯಮಾನಗಳ ಪ್ರಕಾರ ಈ ದೇಸಗತಿ ಮನೆತನದವರು ಕಾಣಿಕೆ ಕೊಡುತ್ತಿದ್ದರು."[೩೪] ಈ ಮಹತ್ತರ ಕಾರ್ಯಗಳು ಸಂಸ್ಥಾನದ ಕೊನೆಯ ದೇಸಾಯಿ ಲಿಂಗರಾಜರು ಶ್ರೀಕಾಳಿಕಾದೇವಿಗೆ ಪ್ರತಿವರ್ಷವು ಧನ-ಕನಕಾದಿಗಳನ್ನು ಸಮರ್ಪಿಸುತ್ತ ಬಂದಿರುವುದು ತಿಳಿದುಬರುತ್ತದೆ. ಶಿರಸಂಗಿಯ ಬೇರೆ ಬೇರೆ ದೇವಾಲಯಗಳಿಗೆ ಭಟ್ಟರನ್ನು ಜೋಯಿಸರನ್ನು ನೇಮಿಸಿದ್ದರು. ದೇಸಾಯಿಯರು ಕಾಳಮ್ಮ ದೇವಸ್ಥಾನಕ್ಕೆ ಯಾರನ್ನು ನೇಮಿಸಲಿಲ್ಲ. ಅಲ್ಲಿ ಪ್ರಾಚೀನ ಕಾಲದಿಂದಲು ಕಾಳಿಕಾದೇವಿಯನ್ನು ವಿಶ್ವಕರ್ಮ ಸಮುದಾಯದ ಆಚಾರಿ ಅಥವಾ ಪೂಜಾರಿಗಳು ಪೂಜಿಸುತ್ತ ಬಂದಿರುವುದು ಸ್ಪಷ್ಟವಾಗುತ್ತದೆ. ತಲೆ-ತಲಾಂತರದಿಂದ ಪೂಜಿಸುತ್ತ ಬಂದ ಪೂಜಾರ(ಆಚಾರಿ) ಮನೆತನಗಳು ಇಂದಿಗೂ ಶಿರಸಂಗಿಯಲ್ಲಿವೆ.

ಶಾಸನಗಳಲ್ಲಿ ಶಿರಸಂಗಿ

ಕರ್ನಾಟಕದಲ್ಲಿ ಅರಸರು ಕೆರೆ, ಭೂಮಿ, ದೇಗುಲಗಳನ್ನು ಕಟ್ಟಿಸಿದುದರ ಚರಿತ್ರೆಗಳನ್ನು ಸಾರುವ ದತ್ತಿ-ದಾನ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತವೆ. "ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ದಾನಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿಯೆನ್ನಬಹುದು.

ದೇವಾಲಯಗಳನ್ನು ಕಟ್ಟಿಸುವುದು."[೩೫] ಅವುಗಳ ವ್ಯವಸ್ಥೆಗಾಗಿ ದಾನದತ್ತಿ ಕೊಡುವುದು. ಇಂಥಹ ಧಾರ್ಮಿಕ ಭಾವನೆಗಳು ಮನುಷ್ಯ ಜೀವನದ ಸಹಜ ಗುಣವಾಗಿತ್ತು. ಅದರ ಫಲವಾಗಿ ಪ್ರತಿಗ್ರಾಮಗಳಲ್ಲಿಯೂ ದೇವಾಲಯಗಳು ನಿರ್ಮಾಣಗೊಂಡವು. ದಾನ-ಧರ್ಮ, ಮೌಲ್ಯಗಳು ಬದುಕಿನ ತಳಹದಿಯಾಗಿರುವುದನ್ನು ಕಾಣುತ್ತೇವೆ.

ನಿಸರ್ಗ ರಮಣೀಯ ಸಹ್ಯಾದ್ರಿ ಬೆಟ್ಟದಡಿಯಲ್ಲಿ ನಿರ್ಮಾಣಗೊಂಡ ಶಿರಸಂಗಿಯಲ್ಲಿ ೧೧-೧೨ನೇ ಶತಮಾನದವರೆಗೆ ಯಾವ ಶಾಸನಗಳು ದೊರೆಯುವುದಿಲ್ಲ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದೊರೆತ ಶಾಸನಗಳು ಮೂರು ಎಂದು ಹೇಳಲಾಗುತ್ತಿದ್ದರೂ ಉಪಲಬ್ಧವಿದ್ದುದು ಎರಡು ಶಾಸನಗಳು. ಕಲ್ಯಾಣ ಚಾಲುಕ್ಯರ ಅರಸ ಜಗದೇಕ ಮಲ್ಲನ ಕ್ರಿ.ಶ.೧೧೪೮ರ ಶಾಸನ, ಚಾಲುಕ್ಯರ ಕೊನೆಯ ಅರಸ ನಾಲ್ಕನೆಯ ಸೋಮೇಶ್ವರನ ಕ್ರಿ.ಶ.೧೧೮೬ರ ಶಾಸನಗಳಾಗಿವೆ.

ಕ್ರಿ.ಶ.೧೧೪೮ರ ಶಾಸನ

ಇದು ಗ್ರಾಮದಲ್ಲಿರುವ ಕಲ್ಮೇಶ್ವರ ದೇವಾಲಯದ ಎದುರಿಗೆ ಕ್ರಿ.ಶ.೧೧೪೮ರಲ್ಲಿ ಕೆತ್ತಿಸಲ್ಪಟ್ಟಿದೆ. ಈ ಅವಧಿಯಲ್ಲಿ ಶಿರಸಂಗಿಯನ್ನು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕ ಮಲ್ಲನು ಆಳ್ವಿಕೆ ಮಾಡುತ್ತಿದ್ದನು. ಈತನ ಮಹಾಪ್ರಧಾನ ದಂಡನಾಯಕ ಕೇಶಿಮಯ್ಯನು ಈ ಪ್ರದೇಶದ ಉಸ್ತುವಾರಿಯನ್ನು ಹೊತ್ತಿದ್ದನು. ಈ ಶಾಸನದಲ್ಲಿ ಶಿರಸಂಗಿಯನ್ನು ರಿಶಿಶೃಂಗಪುರ, ಪಿರಿಸಂಗಿ ಎಂದು ಕರೆಯಲಾಗಿದೆ. "ಆರು ಜನ ಗೌಡರ ವರ್ಣನೆಯಿದ್ದು, ಅವರಲ್ಲಿ ತೋಲಹ ಕುಲದ ಕಾವಗಾವುಂಡನು ಇಲ್ಲಿಯ ಗ್ರಾಮೇಶ್ವರ ದೇವಾಲಯಕ್ಕೆ(ಇಂದು ಇದಕ್ಕೆ ಕಲ್ಮೇಶ್ವರ ದೇವಾಲಯವೆನ್ನುವರು) ಪೂಜೆ, ಜೀರ್ಣೋದ್ಧಾರಕ್ಕೆಂದು ೨ ಮತ್ತರ ಭೂಮಿಯನ್ನು ಅದರ ಸ್ಥಾನಾಚಾರ್ಯ ರುದ್ರಶಕ್ತಿದೇವನಿಗೆ ದಾನ ಮಾಡಿದ್ದಾನೆ."[೩೬] ತೋಲಹ ಕುಲದ "ಚಿಯಲಗೌಂಡ, ತಿಪ್ಪಗೌಂಡ, ಅರಂದೆರ ಕುಲದ ಬೋನಗೌಂಡ, ಪದ್ಮಗೌಂಡ ಮತ್ತು ಬಮ್ಮಗೌಂಡರು ಇದೇ ದೇವಾಲಯಕ್ಕೆ ಅನೇಕ ಸಲ ಭೂದಾನ ಮಾಡಿದ್ದನ್ನು ಹೇಳಲಾಗಿದೆ."[೩೭] ಈ ಊರ ಗೌಡರು ನೀಡಿದ ಭೂದಾನವನ್ನು ರುದ್ರಶಕ್ತಿ ದೇವರು ಸ್ವೀಕರಿಸಿದ್ದಾಗಿ ಶಾಸನ ಹೇಳುತ್ತದೆ. ಶಿರಸಂಗಿಯಲ್ಲಿ ಕೆರೆ ನಿರ್ಮಿಸಲು ಸೌಗುಳದ ರಾಜಿ ಗೌಂಡನ ಹೆಂಡತಿ ಸೋರಿ ಗವುಂಡಿಯು ಭೂಮಿಯನ್ನು ದತ್ತಿಯಾಗಿ ಕೊಟ್ಟಿರುವ ವಿಷಯ ಈ ಶಾಸನದಿಂದ ತಿಳಿದುಬರುತ್ತದೆ.

ದಾನ ನೀಡುವವನು ಎಷ್ಟು ಶ್ರೇಷ್ಠನೋ ಅಷ್ಟೇ ದಾನವನ್ನು ಸ್ವೀಕರಿಸುವವನು ಪುಣ್ಯವಂತನಾಗಿರಬೇಕಾಗಿರುತ್ತದೆ. ಅಂದಾಗ ಮಾತ್ರ ದಾನ ಸಾರ್ಥಕವಾಗುತ್ತದೆ. ಕ್ರಿ.ಶ.೧೧೪೮ರಲ್ಲಿ ಬಾಣಗಬ್ಬೆ ಗ್ರಾಮೇಶ್ವರ ದೇವಾಲಯ ಕಟ್ಟಿಸಿದ ಮೇಲೆ, ಕಾವಗಾವುಂಡ ಭೂದಾನ ಮಾಡುತ್ತಾನೆ. ಈ ದಾನವನ್ನು ಸ್ವೀಕರಿಸಿದವನು ರುದ್ರಶಕ್ತಿ ಮತ್ತು ಆತನ ಶಿಷ್ಯ ವಾಮಶಕ್ತಿ. ಇವರನ್ನು

೧೧೪೮ರ ಶಾಸನವು "ಜ್ಞಾನ ನಿಧಿ ಗುಣಗಣಾಂಬುದಿ ದಾನದ ಕಣಿ ಸಮೇಯದೀಪಕಂ ನೆಗರ್ದ ಮಹಾಸ್ಥಾನ ಗ್ರಾಮೇಶ್ವರಯೆನಲ್ಕೇ(ನೆ)ಂಬುದೊ ರುದ್ರಶಕ್ತಿ ದೇವರ ಪೆಂಪಂ ಅವರಗ್ರಸಿಷ್ಯ ನಾದಂ ಶಿವಪಾದದ್ವಯ ಸರೋಜಿನಿ ಕಳಹಂಸಂ ವಿವಿಧ ಗುಣನಿಳೆಯನೆನೆ ಸತ್ಕವಿಜನ ಸಂಸೇವ್ಯ ವಾಮಶಕ್ತಿ ಬ್ರತಿ" ಎಂದು ಸ್ಥಾನಾಚಾರ್ಯರನ್ನು ಈ ಶಾಸನ ವರ್ಣಿಸಿದೆ.

ಬೆಳಗಾವಿ ಜಿಲ್ಲೆಯ ಆಡಳಿತ ಪ್ರಾಂತಗಳನ್ನು ಪ್ರಮುಖವಾಗಿ "ಕುಹುಂಡಿ-೩೦೦೦, ಪಲಾಶಿಕ-೧೨೦೦, ಮಿರುಂಜೆ-೩೦೦೦, ಕರಹಾಡ-೪೦೦೦, ಬೆಳ್ವೊಲ-೩೦೦೦"[೩೮] ಗಳೆಂದು ಗುರುತಿಸಿದೆ. ಈ ಶಾಸನದಲ್ಲಿ ಬೆಳ್ವೊಲ ದೇಶವನ್ನು "ಎಳೆಯೆಂಬ ಸತಿಯ ಕುನ್ತಳ ಕಳಾಪದಂತೆಸೆದು ತೋಪದ ಕುನ್ತಳ ದೇಶಕ್ಕಳವಟ್ಟ ಚಿನ್ನ ಪೊವೆನೆ ಬೆಳಗಿದುದೊಳ್ವೊಲವೆನಿಪ್ಪ ಬೆಳ್ವಲದೇಶಂ"[೩೯] ಎಂದು ಬೆಳ್ವೊಲ ನಾಡನ್ನು ವರ್ಣಿಸುತ್ತ ಸುಂದರ ಯುವತಿಯ ತೀಡಿದ ಮುಂಗುರುಳಿನಂತೆ, ಮನೋಹರವಾಗಿ ಕಾಣುವ ಕುಂತಳ ದೇಶದಲ್ಲಿ ಬಂಗಾರದ ಹೂವೋ ಎಂಬಂತೆ ಪ್ರಕಾಶಿಸುವ ಹೊಲವೊ ಎನ್ನುವಂತೆ ಬೆಳ್ವೊಲ ದೇಶವು ಶೋಭಿಸುತ್ತಿರುವುದು. ಶಿರಸಂಗಿ ಗ್ರಾಮದಲ್ಲಿ ಸ್ಥಾಪಿತವಾದ ಈ ಶಾಸನದಲ್ಲಿ ಬೆಳ್ವೊಲದೇಶದ ವರ್ಣನೆ ಮಾಡುವಾಗ ಹೋಲಿಕೆಗೆ ಬಂಗಾರವನ್ನು ಆಯ್ಕೆ ಮಾಡಿಕೊಂಡುದರ ಔಚಿತ್ಯತೆಯನ್ನು ಗುರುತಿಸಬಹುದಾಗಿದೆ. ಪಂಚಾಳರಾದ ಕುಶಲಕರ್ಮಿಗಳ ಬಳಿ ಸದಾ ಸಾಮಗ್ರಿಯಾಗಿ ರೂಪಗೊಳ್ಳುತ್ತಿರುವುದು. ಅದು ಶಾಸನ ಕವಿಗೆ ತೀರಾ ಹತ್ತಿರವಾದ ವಸ್ತುವಾದುದು. ಕುಶಲಕರ್ಮಿಗಳ ನೆಲೆಯೆಂಬುದನ್ನು ಈ ವರ್ಣನೆ ತಿಳಿಸಿಕೊಡುತ್ತದೆ. ಇಲ್ಲಿಯ ಪಂಚಾಳ ಗುರು ರುದ್ರಶಕ್ತಿಯನ್ನು ಜ್ಞಾನದ ಭಂಡಾರ, ಒಳ್ಳೆಯ ಗುಣಸಾಗರ, ದಾನದ ಖಣಿ, ಧರ್ಮವನ್ನು ಬೆಳಗುವ ದೀಪ ಪ್ರಸಿದ್ಧ ಕ್ಷೇತ್ರವಾದ ಗ್ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯ ರುದ್ರಶಕ್ತಿ ದೇವರ ಮಹಿಮೆ ಅಪಾರವಾದುದು ಎಂದು ಹೇಳುತ್ತದೆ. ಹಾಗೆ ಇವನ ಶಿಷ್ಯ ವಾಮಶಕ್ತಿಯನ್ನು ಶಿವನ ಪಾದದ್ವಯಗಳೆಂಬ ಕಮಲಗಳಿಂದ ಕೂಡಿದ ಸರೋವರದಲ್ಲಿ(ಈಸಾಡುವ) ಕಲಕಲ ಮಧುರ ಧ್ವನಿ ಮಾಡುವ ಹಂಸನೂ(ಅರ್ಥಾತ್ ಯಾವಾಗಲೂ ಶಿವನ ಪಾದಗಳಲ್ಲಿಯೇ ಮನಸ್ಸನ್ನು ಇಟ್ಟವನೂ), ಅನೇಕ ಸದ್ಗುಣಗಳಿಂದ ಕೂಡಿದವನೂ, ಸತ್ಕವಿಗಳಿಂದ ಸೇವೆಯನ್ನು ಪಡೆಯುವವನೆಂದು ಭೂಮಂಡಲವೇ ಹೊಗಳುತ್ತಿರಲು ವಾಮಶಕ್ತಿ ಯತೀಶ್ವರನು ಅವರ(ರುದ್ರಶಕ್ತಿ ದೇವರ) ಮುಖ್ಯ ಶಿಷ್ಯನಾದನು ಎಂದು ಶಾಸನ ಹೇಳುತ್ತದೆ.

ಪ್ರಾಚೀನ ಕಾಲದಲ್ಲಿ ಶಿರಸಂಗಿ ಗ್ರಾಮ ಹೇಗಿತ್ತು ಎಂಬುದನ್ನು ಈ ಶಾಸನದಲ್ಲಿ ಹೀಗೆ ವರ್ಣಿಸಲಾಗಿದೆ. "ಸುತ್ತಿದ ಬೆಟ್ಟದಿಂದೆಸೆವ ನನ್ದನದಿಂ ಪಲವುಂ ತಟಾಕದಿಂದ, ಸುತ್ತಮುಮಪ್ಪ ದೇವಗ್ರೀಹ ಸಂಕುಳದಿಂ ವರದಿವ್ಯ ತೀರ್ಥದಿಂ ವೃತ್ತಪ ಯೋಧರಾಂಗನೆಯರಿಂ ಸುಕವೀಶ್ವರ ತಂಡದಿಂದೇ ಲೋಕೋತ್ತರಮಾಯ್ತು ಬೆಳ್ವೊಲದೋಳೀ ರಿಶಿಶೃಂಗಪುರಂ ಮನೋಹರಂ"[೪೦]

ಸಿರಸಂಗಿಯನ್ನು ರಿಶಿಶೃಂಗಪುರವೆಂದು ಹೇಳುತ್ತ ಸುತ್ತುವರಿದ ಪರ್ವತಗಳಿಂದಲೂ, ಇಂದ್ರನ ತೋಟದಂತಿರುವ ಸುಂದರವಾದ ತೋಟಗಳಿಂದಲೂ, ಅನೇಕ ಕೆರೆಗಳಿಂದಲೂ, ಶೋಭಿಸುವಂಥ ಶ್ರೇಷ್ಠವಾದ ದೇವಾಲಯಗಳ ಸಮೂಹದಿಂದಲೂ ದಿವ್ಯ ತೀರ್ಥಕ್ಷೇತ್ರಗಳಿಂದಲೂ, ವರ್ತುಳದಂತೆ ಇದ್ದ ಬಟ್ಟ ಮೊಲೆಗಳುಳ್ಳ ಸ್ತ್ರೀಯರಿಂದಲೂ, ಒಳ್ಳೆಯ ಕವಿಗಳ ಸಮೂಹದಿಂದಲೂ ಬೆಳ್ವೊಲದಲ್ಲಿರುವ ಈ ಮನೋಹರವಾದ ಋಷ್ಯಶೃಂಗಪುರವು ಲೋಕೋತ್ತರವಾಯಿತು (ಜಗತ್ತಿನಲ್ಲಿಯೇ ಶ್ರೇಷ್ಠ ಎನ್ನಿಸಿಕೊಂಡಿತು). ಹೀಗೆ ಶಿರಶಂಗಿಯ ವರ್ಣನೆ ಮಾಡುತ್ತ ಆರು ಜನರ ಗೌಡರ ವರ್ಣನೆ ಹಾಗೂ ಕಾವುಂಡಗೌಂಡನ ಹೆಂಡತಿ ಬಾರ್ಗಬ್ಬೆ ಅಥವಾ ಬಾಗಣಬ್ಬೆ ಗ್ರಾಮೇಶ್ವರ ದೇವಾಲಯವನ್ನು ಕಲ್ಲಿನಿಂದ ಕಟ್ಟಿಸಿದುದರ ವಿವರಣೆಯನ್ನು ಶಾಸನ ಹೇಳಿದೆ.

ಕ್ರಿ.ಶ.೧೧೪೮ರ ಈ ಶಾಸನವನ್ನು ಭುವನಚಂದ್ರ ಸಿದ್ಧಾಂತ ದೇವನ ಶಿಷ್ಯನಾದ ಕಲಿದೇವ ಪಂಡಿತ ರಚಿಸಿದ್ದಾನೆ. ಇದನ್ನು ಶಿಲೆಯಲ್ಲಿ ಸುಮತೋಜನು ಶಾಸನವನ್ನು ಕೆತ್ತಿದ್ದಾನೆ. ಪಂಚಾಳ ಕುಲದ ಶಿಲ್ಪಿ ಸುಮತೋಜನು ಇದನ್ನು ಒಂದು ಶುಭ ಮೂಹೂರ್ತದಲ್ಲಿ ಇಮ್ಮಡಿ ಜಗದೇಕ ಮಲ್ಲನು ಸಿಂಹಾಸನವೇರಿದ ೭ನೇ ವಾರ್ಷಿಕೋತ್ಸವದ ವಿಭವ ಸಂವತ್ಸರ, ಪುಷ್ಯಮಾಸದ ಶುಕ್ಲಪಕ್ಷ ದಶಮಿ, ಸೋಮವಾರದಂದು ಬರೆದಿದ್ದಾನೆಂದು ಹೇಳಲಾಗಿದೆ.

ಶಾಸನ ಕವಿಗೆ ಶಾಸನ ರಚನೆ ಎಷ್ಟು ಮುಖ್ಯವೋ ಅಷ್ಟೇ ಶಾಸನ ಸಂರಕ್ಷಣೆ ಎಂಬುದನ್ನು ತಿಳಿಸುವ ಶಾಸನದ ಕೊನೆಯ ಸಾಲುಗಳು ಆತನ ಶಾಸನ ಕಾಳಜಿಯನ್ನು ತಿಳಿಸುತ್ತದೆ. "ಈ ಶಾಸನವನ್ನು ರಕ್ಷಿಸಿದವರಿಗೆ ಆಗುವ ಸುಗತಿಯನ್ನು ನಾಶ ಮಾಡಿದವರಿಗಾಗುವ ದುರ್ಗತಿಯನ್ನು ಹೇಳಿ, ಇದನ್ನು ಸಿದ್ಧಾಂತ ದೇವರ ಶಿಷ್ಯನಾದ ಕಲಿದೇವನು ರಚಿಸಿ ಹೇಳಿದನೆಂದೂ ರೂವಾರಿ(ಶಿಲ್ಪಿ) ಚಕ್ರವರ್ತಿ ಸುಮತೋಜನು ಕೆತ್ತಿದನೆಂದೂ ಶಾಸನಾಂತ್ಯದಲ್ಲಿ ಹೇಳಲಾಗಿದೆ. ಕಲಿದೇವ ಪಂಡಿತ ಹಾಗೂ ಸಮತೋಜರು ಪಂಚಾಳರೇ ಆಗಿರುವರು"[೪೧] ಎಂಬುದನ್ನು ತಿಳಿಸುವ ಈ ಶಾಸನವು ಶಿರಸಂಗಿಯಲ್ಲಿ ಕುಶಲಕರ್ಮಿಗಳು ತಮ್ಮ ಕುಶಲಕಲೆಗಳಿಂದ ರಾಜಾಶ್ರಯ, ರಾಜ ಮನ್ನಣೆಯನ್ನು ಪಡೆದಿದ್ದರು ಎನ್ನುವುದನ್ನು ಹೇಳುತ್ತದೆ.

ಕ್ರಿ.ಶ.೧೧೮೬ರ ಮತ್ತೊಂದು ಶಾಸನ

ಶಿರಸಂಗಿಯಲ್ಲಿ ದೊರೆತ ಎರಡನೆಯ ಶಾಸನ ಕಲ್ಯಾಣ ಚಾಲುಕ್ಯ ಅರಸ ನಾಲ್ಕನೆಯ ಸೋಮದೇವನ ಕಾಲದ್ದು. ಕಾಳಿಕಾದೇವಿ ದೇವಸ್ಥಾನದಲ್ಲಿ ನಿಲ್ಲಿಸಲಾಗಿದೆ. ಕಪ್ಪು ಹಲಗೆಯಿಂದ ಕೂಡಿದ ಈ ಶಾಸನದಲ್ಲಿ ೧೦೦ ಸಾಲುಗಳಿವೆ. ಪದ್ಧತಿಯಂತೆ ಮೊದಲು ಮೂಲಸ್ತಂಭನ ಸ್ತುತಿಯೊಂದಿಗೆ ಶಾಸನ ಸಾಹಿತ್ಯ ಪ್ರಾರಂಭವಾಗುತ್ತದೆ. ಈ ಶಾಸನದಲ್ಲಿ ಶಿರಸಂಗಿ ಗ್ರಾಮದ ವಿವರಣೆ ದೊರೆಯುತ್ತದೆ. ಈ ಪ್ರದೇಶವು ಕಲ್ಯಾಣ ಚಾಲುಕ್ಯ ಚಕ್ರವರ್ತಿ ನಾಲ್ಕನೆಯ ಸೋಮೇಶ್ವರನ

ಆಳ್ವಿಕೆಗೆ ಒಳಪಟ್ಟಿತ್ತು. ಕುಂತಳ ದೇಶದ, ಬೆಳ್ವೊಲದ ಕೊಳನೂರು-೨೦ರ ವಿಭಾಗದಲ್ಲಿ ಋಷ್ಯಶೃಂಗಪುರ ಇದ್ದುದಾಗಿ ತಿಳಿದುಬರುತ್ತದೆ. "ಆ ಕೊಳನೂರ್ಮೂವತ್ತರ ಲೋಕಸ್ತುತಮಪ್ಪ ಬಳಿಯ ಬಾಡಂ ತಾನಾದಾಕೀರ್ತಿಯೊಳ್ಕಾಯ್ದಳಾ ಕಾಂತಾ ತಿಳಕ ರಿಶ್ಯಶೃಂಗಪುರಂ" ಎಂದು ಶಾಸನದ ೧೪ನೇ ಸಾಲಿನಲ್ಲಿ ವರ್ಣಿಸಿದೆ. ಬೆಳ್ವೊಲದ ಕೊಳನೂರು ಎಂದರೆ ಈಗಿನ ನರಗುಂದ ತಾಲೂಕಿನ ಕೊಣ್ಣೂರು ವಿಭಾಗದ ವ್ಯಾಪ್ತಿಯಲ್ಲಿ ಶಿರಸಂಗಿ ಇದ್ದಿತು. ಆ ಕೊಳನೂರು ೨೦ರ ಜಗತ್ತಿನ ಜನರಿಂದ ಹೊಗಳಲ್ಪಟ್ಟ ಪಕ್ಕದ ಗ್ರಾಮವೆಂದು ಹೆಸರಾದ ಭೂದೇವಿಯ(ಹಣೆಯ ಮೇಲಿನ) ತಿಳಕದಂತೆ ಋಷ್ಯಶೃಂಗಪುರವು ಕೀರ್ತಿಯನ್ನು ಹೊಂದಿತು ಎಂದು ಶಿರಸಂಗಿಯನ್ನು ವರ್ಣಿಸಿರುವುದರಿಂದ ಅದೊಂದು ಚಿಕ್ಕ ಪಟ್ಟಣವಾಗಿ ವ್ಯವಹಾರಿಕ ಕೇಂದ್ರವಾಗಿರಬೇಕೆಂದು ತಿಳಿಯುತ್ತದೆ.

"ಶಿರಸಂಗಿ ಪಟ್ಟಣದ ರಸ್ತೆಗಳು, ರಾಜ ಮಾರ್ಗಗಳು, ರಾಜ ದರ್ಬಾರು, ಕಂದಾಯ ಕಚೇರಿಗಳು ಪೊಲೀಸ ಪಡೆ, ಸೇನಾಪಡೆ, ಅಂಗಡಿಗಳು, ಕಿರಾಣಿ, ಜವಳಿ, ಬಾರಡಿ ಸಾಲು ಸಾಲಾಗಿ ಕಂಗೊಳಿಸುತ್ತಿದ್ದವು. ಚಿಕ್ಕ ಪುಟ್ಟ ಉದ್ಯೋಗಗಳು ಸುವರ್ಣಕಾರ, ಬಡಿಗ, ಕಮ್ಮಾರ, ಶಿಲ್ಪ ಮೊದಲಾದ ಉದ್ಯೋಗಿಗಳು ಶಿರಸಂಗಿಯನ್ನು ರಮಣೀಯ ಸ್ಥಳವನ್ನಾಗಿ ಏರ್ಪಡಿಸಿದ್ದವು."[೪೨] ವ್ಯಾಪಾರ ಉದ್ಯೋಗಗಳು, ಬೆಳೆದಿದ್ದವು. ಶ್ರೇಷ್ಠಮಟ್ಟದ ವ್ಯವಸಾಯದ ಭೂಮಿಗಳಿದ್ದವು. ಚಿಕ್ಕ ಪುಟ್ಟ ನೀರಾವರಿ ಕೆರೆಗಳ ನಿರ್ಮಾಣದಿಂದ ಶಿರಸಂಗಿ ಗ್ರಾಮವು ಕಂಗೊಳಿಸುತ್ತಿತ್ತು.

ಈ ಶಾಸನದಲ್ಲಿ 'ರಾಮಾಯಣ ಕಾಲದ ವಿಭಾಂಡಕ ಋಷ್ಯಶೃಂಗರನ್ನು ಉಲ್ಲೇಖಿಸಲಾಗಿದೆ. ಕುಶಲಕರ್ಮಿಗಳಿಗಾಗಿ ಕಾಳಿಕಾದೇವಿಯನ್ನೇ ಶಿರಸಂಗಿಯಲ್ಲಿ ನೆಲೆಯೂರಿಸಿದ ವಿಶ್ವಕರ್ಮ ಪರಂಪರೆಯ ಮಹಾಮಾರ್ಗಕಾರ ಋಷ್ಯಶೃಂಗ. ಈತನ ಜನನದ ವೃತ್ತಾಂತ ತಿಳಿಸುವ ಏಕೈಕ ಸಾಕ್ಷಿ ಕ್ರಿ.ಶ.೧೧೮೬ರ ಶಾಸನವಾಗಿದೆ. ಋಷ್ಯಶೃಂಗನ ಜನ್ಮದ ವಿವರಣೆಯನ್ನು ಶಾಸನದಲ್ಲಿ ಹೀಗೆ ಉಲ್ಲೇಖವಾಗಿದೆ.' 'ಸಕಲ ವೇದ-ವೇದಾಂಗಗಳಲ್ಲಿ "ಪಾರಂಗತನಾಗಿ ಜಗತ್ತಿಗೆ ಶ್ರೇಷ್ಠನಾದ ವಿಭಾಂಡಕಮುನಿ ಕೊಳ್ಳಗಳು, ಹಣ್ಣು ಹಂಪಲುಗಳಿಂದ ಕಂಗೊಳಿಸುತ್ತಿದ್ದ ಈ ದಟ್ಟವಾದ ಅರಣ್ಯದಲ್ಲಿ ವಾಸವಾಗಿದ್ದನು. ವಿಭಾಂಡಕ ಮುನಿಯ ತಪಶಕ್ತಿಯ ಬಲದಿಂದ ಈ ಪ್ರದೇಶದಲ್ಲಿ ಹುಲಿ, ಸಿಂಹ, ಜಿಂಕೆ ಮೊದಲಾದ ಕಾಡ ಮೃಗಗಳು, ಹಾವು ಪಕ್ಷಿಗಳು ತಮ್ಮೊಳಗಿನ ನಿಸರ್ಗ ವೈರತ್ವವನ್ನು ಮರೆತು ಸಹಬಾಳ್ವೆ ಮಾಡುತ್ತಿದ್ದವು. ಪ್ರಶಾಂತವಾದ ಮನಸ್ಸನ್ನು ಹೊಂದಿದ ವಿಭಾಂಡಕ ಮುನಿ ಯಾರೊಡನೆ ವೈರತ್ವವಿಲ್ಲದೆ, ಯಾವ ಫಲಾಕಾಂಕ್ಷೆಗಳನ್ನು ಬಯಸದೇ ಕೈವಲ್ಯ(ಮೋಕ್ಷ)ವನ್ನು ಹೊಂದಲು ಏಕೈಕ ಉದ್ದೇಶದಿಂದ ತಪಸ್ಸನ್ನು ಕೈಗೊಂಡಿದ್ದ. ಅಲ್ಲಿದ್ದ ಒಂದು ತೀರ್ಥದಲ್ಲಿ ಸ್ನಾನ ಮುಗಿಸಿಕೊಂಡು ತಪಕ್ರಿಯೆಯಲ್ಲಿ ತೊಡಗುತ್ತಿದ್ದ. ಈ ರೀತಿ

ಸ್ನಾನಕ್ಕಾಗಿ ತೀರ್ಥ(ಹೊಂಡ)ಕ್ಕೆ ಬರುವಾಗ ಕಮಲದ ಮಧ್ಯದಲ್ಲಿ ಸುಂದರವಾದ ಓರ್ವ ಊರ್ವಶಿಯನ್ನು ಕಾಣುತ್ತಾನೆ. ಮುನಿಯ ದೃಷ್ಟಿ ಅವಳ ಮೇಲೆ ಹರಿದಾಗ, ಅವಳಲ್ಲಿ ವಶಪರನಾದಂತಾಗಿ ಮನಸ್ಸು ಚಂಚಲವಾಗುತ್ತದೆ. ಅವನಿಗೆ ತಿಳಿಯದಂತೆ ತನ್ನಲ್ಲಿಯ ರೇತಸ್ಸು(ವೀರ್ಯ) ಹೊರಹೊಮ್ಮುತ್ತದೆ. ಅದಕ್ಕೆ ನಾಚಿದ ಮುನಿ ದುಃಖಪಟ್ಟು ಅದನ್ನು ಊರ್ವಸಿ ಕಮಲದ ಎಲೆಯಲ್ಲಿ ಬಚ್ಚಿಡುತ್ತಾನೆ. ಮುನಿಗಳ ವೀರ್ಯ ಶ್ರೇಷ್ಟವಾದ್ದರಿಂದ ತಕ್ಷಣ ಅದನ್ನು ಸೇವನೆ ಮಾಡುತ್ತಾಳೆ. ಅದರಿಂದ ಗರ್ಭಧರಿಸಿ ಕೋಡುಗಳುಳ್ಳ ಕುಮಾರನಿಗೆ ಜನ್ಮವೀಯುತ್ತಾಳೆ. ಜನಿಸಿದ ಮಗುವನ್ನು ಅಲ್ಲಿಯೇ ಬಿಟ್ಟು ಮಾನುಷಾಕಾರದಿಂದ ಅಪ್ಸರೆಯ ರೂಪವನ್ನು ತಳೆದು ಆಕಾಶಕ್ಕೆ ಹಾರಿ ತನ್ನ ನಿಜವಾದ ಮನೆ ಸೇರುತ್ತಾಳೆ ಎಂದು ಸಾರುತ್ತದೆ.

ಇದೇ ವಿವರವು ಶಾಸನದಲ್ಲಿ "ಮುನೀಂದ್ರಂ ನೆಗಳ್ದಂ ಸ್ನಾನಾರ್ಥದಿಂ ವಿಭಾಂಡಕ ನಾ ನಗದೊಳದೊಂದು ತೀರ್ಥಕೇಳ್ತದಿರದಂತಾ ನಳಿನಿಯೊಳಿರ್ದ್ದ ತನುನಿ ಧಾನಮನೆರ್ಬ್ಬಶಿಯನಾ ಮುನೀಂದ್ರಂ ಕಂಡ ಕಾಣಲೊಡನೆ ಅಸ್ಕಳಿತ ಚಿತ್ತನಾ ಚೇತಸ್ಕಳನೆ(ಯೆ)ನ ವಶವೆನಿಸಿಪೆಜಿ ಪೊಂಣ್ಮುವರೇತಸ್ಕಳನೆಗೆ ನಾಣ್ಚುತಲೆ ದುಃಖಾಂನ್ವಿತನಬ್ಜದಳದೊಳಂತದ ನಾಂತಂ ಮರೆವಿಡಿಯಾ ಘ್ರಾಯಿಸೆ ಮುನಿವರ ವೀರ್ಯ್ಯವಮೋಘವೀರ್ಯ್ಯವಪ್ಪುದ ಜಿಂದಾ ಮರೆವೆಣ್ಣಗರ್ಭ್ಭದಿಂದ ವತರಿಸಿದ ನೊರ್ವಂ ಕುಮಾರಕಂ"[೪೩] ಎಂದು ವರ್ಣಿಸಲಾಗಿದೆ. ಕಾಳಿಯನ್ನು ಶಿರಸಂಗಿ ಪ್ರದೇಶದಲ್ಲಿ ಸಾಕ್ಷಾತ್ಕರಿಸಿ ಕೊಂಡಿರುವ ಋಷ್ಯಶೃಂಗನ ಜನ್ಮ ವೃತ್ತಾಂತ ಈ ಶಾಸನದಲ್ಲಿ ವಿವರಣಾತ್ಮಕವಾಗಿ ಬಂದಿದೆ. ಶಿರದಲ್ಲಿ ಶೃಂಗಗಳನ್ನು ಹೊಂದಿ, ಊರ್ವಶಿಯಿಂದ ಜನ್ಮ ತಳೆದವನು ಋಷ್ಯಶೃಂಗನು ಎಂಬುದನ್ನು ಈ ಶಾಸನ ಸ್ಪಷ್ಟವಾಗಿ ತಿಳಿಸುತ್ತದೆ.

ಋಷ್ಯಶೃಂಗನು ರಾಮಾಯಣ ಕಾಲದಲ್ಲಿ ಬದುಕಿದ್ದವನು ಎಂದು ಹೇಳುವುದಕ್ಕೆ ಈ ಶಾಸನ ಪುಷ್ಠಿ ನೀಡುತ್ತದೆ. ಕಿಷ್ಕಿಂದ ಅಂದರೆ ಈಗಿನ ಹಂಪಿ ಪ್ರದೇಶ ಋಷ್ಯಶೃಂಗನ ಆಶ್ರಮ. ಈಗಿನ ಶಿರಸಂಗಿಯ ಉಲ್ಲೇಖಗಳು ಶಾಸನದಲ್ಲಿ ಬಂದಿದೆ. ರಾಮಾಯಣದ ದಶರಥನು ಪುತ್ರಕಾಮೇಷ್ಠಿಯಾಗವನ್ನು ಮಾಡಿರುವುದು ಅದರ ಪ್ರಧಾನ ಪೌರೋಹಿತ್ಯವನ್ನು ಋಷ್ಯಶೃಂಗನು ವಹಿಸಿದ್ದನು. ಈ ಋಷಿಯ ಜನನಕ್ಕೆ ಕಾರಣಳಾಗಿರುವ ದೇವಕನ್ಯೆಯಾದ ಮಂಜುಗೋಷೆಯು ಶೃಂಗಋಷಿಯ ಶಾಪಕ್ಕೆ ಗುರಿಯಾದುದರ ವಿಷಯವನ್ನು ಈ ಶಾಸನವು ತಿಳಿಸಿದೆ. ತಪೋ ನಿರತ ಶೃಂಗ ಋಷಿಗೆ ಮಂಜುಗೋಷೆಯ ಕಾಲು ತಾಗುತ್ತದೆ. ಇದರಿಂದ ಎಚ್ಚರಗೊಂಡ ಶೃಂಗ ಬ್ರಹ್ಮನು. ಕೋಪೋದ್ರಿಕ್ತನಾಗಿ ಮತ್ತೆ ನೀನು ದೇವಲೋಕಕ್ಕೆ ಹೋಗದೆ ನಿನ್ನ ಮೊದಲಿನ ಈ ಅವಸ್ಥೆಯನ್ನು ಮರೆತು ಮಾನವಳಾಗಿ ತಿರುಗೆಂದು ಶಾಪಕೊಡುತ್ತಾನೆ. ಮುನಿಗಳ ಶಾಪಕ್ಕಂಜಿದ ಅವಳು ಮರಳಿ ಬಂದು ಪಾದಗಳಿಗೆ ನಮಸ್ಕರಿಸಿ ಇದು ನನಗರಿವಿಲ್ಲದಂತೆ ಅಜ್ಞಾನದಿಂದ ಈ

ಘಟನೆ ನಡೆದು ಹೋಯಿತು. ತಮ್ಮ ಶಾಪದಿಂದ ನನ್ನನ್ನು ಮುಕ್ತಳನ್ನಾಗಿ ಮಾಡಬೇಕೆಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ. ಕೋಪಕರಗಿದ ಶೃಂಗಬ್ರಹ್ಮ ಕೊಟ್ಟ ಶಾಪ ಮರಳಿ ಪಡೆಯುವಂತಿಲ್ಲ. ಇದಕ್ಕೆ ಪರಿಹಾರವನ್ನು ಸೂಚಿಸುತ್ತೇನೆಂದು, ಈ ಪ್ರದೇಶದಲ್ಲಿರುವ ವಿಭಾಂಡಕನೆಂಬ ಮುನಿಯಿಂದ ಮಗ ಜನಿಸುತ್ತಾನೆ. ಈ ಪುತ್ರನ ಜನನದಿಂದಾಗಿ ನೀನು ಶಾಪವಿಮುಕ್ತಳಾಗಿ ಮೊದಲಿನ ರೂಪ ಪಡೆಯುತ್ತಿ ಎಂದು ಹೇಳುತ್ತಾನೆ. ಇದರಿಂದ ದೇವಕನ್ಯೆ ವಿಭಾಂಡಕನಿಂದ ಋಷ್ಯಶೃಂಗನನ್ನು ಪಡೆಯುತ್ತಾಳೆ. ಈ ಋಷಿಯ ಹುಟ್ಟಿನಿಂದಾಗಿ ಮಂಜುಗೋಷೆ ಮತ್ತೆ ದೇವಕನ್ಯೆಯಾಗಿ ದೇವಲೋಕ ಸೇರುವ ವಿಷಯವನ್ನು ಶಾಸನದಲ್ಲಿ–

"ಕೋಪಕ್ಕಂಜಿ ಶಾಪಮಮಂ ಕೈಯ್ಕೊಂಡು ಮಗಳೆ ಬಂದವರ ಪದ ಪದ್ಮಕ್ಕೆಱಗಿ ಯಾವ ಜ್ಞಾನದಿಂ ನಿಂಮನವಜ್ಞೆಗೆಯ್ದೆನೆನ್ದಿಗೆ ವಿಶಾಪ ನಿಮಿತ್ತಮಂ ಬೆಸಸಿವೆನೆ ವಿಭಾಂಡಕ ಮುನಿಯ ವೀರ್ಯ್ಯದ ದೆಸೆಯಿಂ ನನಗೆ ರಿಶ್ಯಶೃಂಗಾನ್ವಿತಮೊರ್ವ ಮಗಂ ಪುಟ್ಟಲೊಡನೆ ನಿನಗಾನಿತ್ತಂ ಶಾಪಂ ವಿಶಾಪವಾಗಿ ಪುನ(ರ)ಸ್ಪರಸ್ಸಂಪತ್ತಿಯಂ ಪಡೆವೆ"[೪೪] ಎಂದು ಉಲ್ಲೇಖಿಸ ಲಾಗಿದೆ. ಶೃಂಗಋಷಿಯ ಶಾಪದ ಕಾರಣವಾಗಿಯೋ, ವಿಭಾಂಡಕ ಮಂಜುಗೋಷೆಯ ಆಕಸ್ಮಿಕ ಸೆಳೆತದಿಂದಾಗಿಯೋ ಶಿರದಲ್ಲಿ ಶೃಂಗಗಳೆರಡನ್ನು ಹೊಂದಿದ ಋಷ್ಯಶೃಂಗ ಈ ಭೂಮಿಯ ಮೇಲೆ ಜನಿಸುತ್ತಾನೆ. ಅವನು ಕಾಲಿಟ್ಟೆಡೆಯಲ್ಲಿ ಕ್ಷಾಮ, ದಾರಿದ್ರ್ಯಗಳು ಹೊರಟು ಹೋಗುವುವು ಎಂಬ ಕಾರಣದಿಂದಲೇ ಏನೋ ದಶರಥ ಋಷ್ಯಶೃಂಗನನ್ನು ಅಯೋಧ್ಯೆಗೆ ಕರೆಯಿಸಿಕೊಳ್ಳುತ್ತಾನೆ. ಸಂತಾನಭಾಗ್ಯವಿಲ್ಲದ ತನಗೆ 'ಪುತ್ರಕಾಮೇಷ್ಠಿ' ಯಾಗಕ್ಕೆ ಮುಖ್ಯ ಪುರೋಹಿತನನ್ನಾಗಿ ನೇಮಿಸುತ್ತಾನೆ. ಆ ಕೃತಜ್ಞತೆಯ ಭಾವದಿಂದ ಶ್ರೀರಾಮಚಂದ್ರನು ರಾವಣೇಶ್ವರನನ್ನು ಸಂಹರಿಸಿ ಸೀತೆ, ಲಕ್ಷ್ಮಣ, ಹನುಮಂತರೊಂದಿಗೆ ಅಯೋಧ್ಯೆಗೆ ತೆರಳುವ ಸಂದರ್ಭದಲ್ಲಿ ಋಷ್ಯಶೃಂಗನ ಆಶ್ರಮಕ್ಕೆ ಬರುತ್ತಾರೆ. ಋಷಿಯಿಂದ ಆಶೀರ್ವಾದ ಪಡೆದು ಈಶ್ವರನ ಪೂಜೆ ಮಾಡುತ್ತಾರೆ. ಇಂದಿಗೂ ಶಿರಸಂಗಿಯಲ್ಲಿ ಅವು ರಾಮೇಶ್ವರ, ಲಕ್ಷ್ಮಣೇಶ್ವರ, ಹನುಮಂತೇಶ್ವರ ಎಂದು ಲಿಂಗಗಳನ್ನು ಪ್ರತಿಷ್ಠಾಪಿಸಿದ್ದನ್ನು ಕಾಣುತ್ತೇವೆ.

ರಾಮಾಯಣ ಕಾಲದ ಕಿಷ್ಕಿಂದ ಈಗಿನ ಹಂಪಿ ಪ್ರದೇಶ ಹಾಗೂ ಋಷ್ಯಶೃಂಗ ಈಗಿನ ಶಿರಸಂಗಿ ಪ್ರದೇಶಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. "ಪೂರ್ವ, ಪಶ್ಚಿಮ ಹಾಗೂ ಸಮುದ್ರ ಪರ್ಯಾಂತ ವಿಸ್ತಾರವಾದ ಭೂಮಿಗೆ ಹಿಮವತ್ಪರ್ವತ, ವಿಂಧ್ಯ ಹಾಗೂ ಕಿಷ್ಕಿಂದ ಈ ಮೂರು ಪರ್ವತಗಳು ಉನ್ನತವಾದವು. ಮೂರು ಪರ್ವತಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಉತ್ತಮವಾದುದು ಎಂದರೆ ಕಿಷ್ಕಿಂದಾಗಿರಿಯೇ. ಇದು ಜನನಿಬೀಡವಾದ ನಗರವಾಗಿತ್ತು. ಅದರಲ್ಲಿಯೂ ವಾಲಿ, ಮರುತ್ತು, ಅಂಗದ, ದಿನೇಶ, ಮತಂಗ, ಹಂಸ, ಕಪಿಲ, ಶೌರ್ಗ,

ಅಗಸ್ತ್ಯ, ವಿಭಾರಡಕನ ಪುತ್ರ ಋಷ್ಯಶೃಂಗ ಮೊದಲಾದ ಋಷಿಗಳಿಗೆ ಅಗ್ರಸ್ಥಾನವಾಗಿತ್ತೆಂದು ವರ್ಣಿಸುತ್ತದೆ."[೪೫] ೧೧೮೬ರ ಈ ಶಾಸನದ ರಚನೆಯ ಸಂದರ್ಭದಲ್ಲಿ ಶಿರಸಂಗಿಯನ್ನು ಕಲ್ಯಾಣ ಚಾಲುಕ್ಯ ಅರಸ ಹಬ್ಬೆನಾಯಕನು ಆಳುತ್ತಿದ್ದನು. ಕಲ್ಯಾಣ ಚಾಲುಕ್ಯರ ಅಭಿನವ ಮಲ್ಲನಾಲ್ಕನೆಯ ವೀರಸೋಮೇಶ್ವರ ಅರಸನ 'ಕೊಳನೂರು ಮುವತ್ತು' ಕಂಪನಾ ವಿಭಾಗಕ್ಕೆ ಋಷ್ಯಶೃಂಗ ಪುರವು ಸೇರಿತೆಂದು ಈ ಶಾಸನವು ಸೂಚಸುತ್ತದೆ. ಶಿರಸಂಗಿಯನ್ನು ಆಳುತ್ತಿದ್ದ ಹಬ್ಬೆನಾಯಕನ ವಂಶಾವಳಿಯನ್ನು ಶಾಸನದಲ್ಲಿ ವರ್ಣಿಸಲಾಗಿದೆ. ಹಬ್ಬೆನಾಯಕನು ವೈಶ್ಯಕುಲದವನು. ಅವನ ಪರಂಪರೆಯನ್ನು ಹೇಳುತ್ತ, ಈ ವಂಶದ ಪೂರ್ವಿಕರಲ್ಲಿ ಪದ್ಮಾವತಿ ಎಂಬ ಕನ್ಯೆ ಜನಿಸಿದಳು. ಅವಳು ಬಹಳ ಸೌಂದರ್ಯವತಿಯಾಗಿದ್ದರಿಂದ ಭೈರವನು ಲೀಲೆಯಿಂದ ಆ ಕಾಂತೆಯನ್ನು ಕೂಡಿದನು. ಮುಂದೆ ಅವಳು ಗರ್ಭಿಣಿಯಾಗಿ ಮಗುವಿಗೆ ಜನ್ಮವೀಯುತ್ತಾಳೆ. ಅವನು ಮಲಪಹಾರಿ ನದಿ ಪ್ರದೇಶದ ನಿಕಟ ಮಂಡಳಕ್ಕೆ ಒಡೆಯನಾಗುತ್ತಾನೆ. ಅಂದಿನಿಂದ ಈ ವಂಶದವರಿಗೆ ಲೀಲಾ ಭೈರವನೆ ಕುಲದೈವ ಮತ್ತು ಮನೆದೈವನಾಗುತ್ತಾನೆ. ಈ ಪರಂಪರೆ ಮುಂದುವರೆದುಕೊಂಡು ಬಂದು ಅನೇಕ ಶೂರ ಮಾಂಡಳೀಕರು ಆಗಿ ಹೋದರು. ತನ್ನ ವಂಶದಲ್ಲಿ ಹಬ್ಬೆನಾಯಕನು ನಾಲ್ಕನೆಯ ತಲೆಮಾರಿನವನಾಗಿ ಜನಿಸಿದನು. ಹೆಬ್ಬೆನಾಯಕನು ಭೈರವನ ಆರಾಧಕನಾಗಿದ್ದನು ಸ್ವತಃ ವೀರ-ಸಾಹಸಿಯಾಗಿದ್ದ ಈ ಅರಸನಿಗೆ ಭೈರವನ ಕುರಿತು ಏನನ್ನಾದರೂ ಮಾಡಬೇಕೆಂದು ವಿಚಾರ ಹೊಳೆದಿರಬೇಕು. ವೈಶ್ಯ ಕುಲದ ಬಾಚಹುಲಿ ಮತ್ತು ಈತನ ಹೆಂಡತಿ ಬಾಚಿಯಕ್ಕ ಮೊದಲನೆಯ ತಲೆಮಾರಿನ ಅರಸರು. ಇವರ ನಂತರದಲ್ಲಿ ಹಿರಿಯ ಹೆಬ್ಬನಾಯಕ ಈತನ ಹೆಂಡತಿ ಚೊಂಡಿಯಕ್ಕ ಎರಡನೆಯ ತಲೆಮಾರಿನವರು. ಬಾಚಹುಲಿ ಮತ್ತು ಈತನ ಹೆಂಡತಿ ಬೆಳ್ಳಿಯಕ್ಕ ಮೂರನೆ ತಲೆಮಾರಿನ ಅರಸರು. ಹಬ್ಬೆನಾಯಕ ಈತನ ಮೊದಲನೆ ಹೆಂಡತಿ ಮಲ್ಲಿಯಕ್ಕ ಇವಳು ಬೆಟ್ಟಗಾವುಂಡನ ಮಗಳು. ಎರಡನೆಯ ಹೆಂಡತಿ ಕಾಳವೆ. ಬಾಚಯ ಇವರ ಮಗ ಎಂಬುದನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ ಎಂದು ವಾಸುದೇವ ಬಡಿಗೇರ ಅವರು 'ಶಿರಸಂಗಿ ಕಾಳಮ್ಮ ಕೃತಿಯಲ್ಲಿ ಹೇಳಿದ್ದಾರೆ. ಹಬ್ಬೆ ನಾಯಕನ ಮೊದಲ ಹೆಂಡತಿ ಮಲ್ಲಿಯಕ್ಕ ಅಥವಾ ಮಲ್ಲವ್ವೆ ಶಿರಸಂಗಿಯ ಬೆಟ್ಟಗಾವುಂಡನ ಮಗಳು ಉಮಾ-ಮಹೇಶ್ವರನನ್ನು ಪ್ರತಿಷ್ಠಾಪಿಸಿ ಭೂದಾನ ಮಾಡಿದ್ದಾಳೆ. ಹಬ್ಬೆನಾಯಕನು ಹಬ್ಬೇಶ್ವರ ಮತ್ತು ಪ್ರಸನ್ನ ಭೈರವ ದೇವಾಲಯಗಳನ್ನು ಕಟ್ಟಿಸಿರುವ ಸಂಗತಿಗಳನ್ನು ಶಾಸನ ವಿವರಿಸುತ್ತದೆ.

ಶಿರಸಂಗಿ ಗ್ರಾಮ ಮುಖಂಡರಾದ ಕಾವಗಾವುಂಡ ಚಿಯಲಗೌಡ, ತಿಪ್ಪಗೌಂಡ, ಬೋನಗೌಂಡ, ಪದ್ಮಗೌಂಡ ಮತ್ತು ಬಮ್ಮೆಗೌಂಡರ ಕುರಿತು ವಿವರಣೆಯಿದೆ. ಹಬ್ಬೆಶೈವ ಮತ್ತು ಪ್ರಸನ್ನ ಭೈರವನ

ದೇವಾಲಯಗಳ ನಂತರ ಅಲ್ಲಿಯ ಸ್ಥಾನಪತಿ ವಾಮಶಕ್ತಿ ಪಂಡಿತನಿಗೆ ಸಾಕಷ್ಟು ಪ್ರಮಾಣದಲ್ಲಿ ದಾನ-ದತ್ತಿಗಳನ್ನು ನೀಡಿತು. ಪ್ರತಿವರ್ಷ ಚೈತ್ರದಲ್ಲಿ ಉತ್ಸವ ಸಲುವಾಗಿ ನೀಡಿದ ದಾನಗಳ ವಿವರಣೆಯಿದೆ. ಕರ್ನಾಟಕಾಂಧ್ರ ಮಹಾರಾಷ್ಟ್ರಗಳ ಲಕ್ಷೋಪಲಕ್ಷ ಜನ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. ಸ್ಥಾನಪತಿ ವಾಮಶಕ್ತಿ ಪಂಡಿತನಿಗೆ "ವಿವಿಧ ದತ್ತಿಗಳನ್ನು ೧೧೮೫ನೇ ಇಸ್ವಿ ಡಿಸೆಂಬರ್ ೨ನೇ ದಿನಾಂಕದಂದು ಮಂಗಳವಾರ ಆದ ಉತ್ತರಾಯಣ ಮಕರ ಸಂಕ್ರಾಂತಿಯ ದಿನ ಕೊಟ್ಟರೆಂದೂ ೧೧೮೬ರ ಜನವರಿ ೬ನೇ ದಿನಾಂಕದಂದು ಈ ಶಾಸನವನ್ನು ಬರೆಯಿಸಲಾಯಿತೆಂದು"[೪೬] ತಿಳಿದುಬರುತ್ತದೆ. ಈ ಅವಧಿಯಲ್ಲಿ ಅಥವಾ ಅದಕ್ಕಿಂತ ಮುಂಚೆ ಶಿರಶಂಗಿಯು ವ್ಯಾಪಾರದ ಕೇಂದ್ರವಾಗಿತ್ತು. ಆಂಧ್ರ-ತಮಿಳುನಾಡಿನ ವರ್ತಕರು ಶಿರಸಂಗಿಗೆ ಬರುತ್ತಿದ್ದರೆಂದು, ಅಂದಿನ ಕಾಲದಲ್ಲಿ ಜೈನರು ವ್ಯಾಪಾರದಲ್ಲಿ ಪ್ರಮುಖರಾಗಿದ್ದರು ಎಂದು ಶಾಸನ ಸ್ಪಷ್ಟಪಡಿಸುತ್ತದೆ. ಈ ಶಾಸನದ ೮೪ನೇ ಸಾಲಿನಲ್ಲಿ ಉಲ್ಲೇಖಿತವಾದ ಭಗವತಿದೇವಿ ಎಂಬ ಶಬ್ದ ಕಾಳಿಕಾದೇವಿಯ ಮತ್ತೊಂದು ಹೆಸರು. ಹಬ್ಬೇಶ್ವರ ದೇವಸ್ಥಾನಕ್ಕಿಂತಲೂ ಈ ಕಾಳಿಕಾ ದೇವಸ್ಥಾನ ಹೆಚ್ಚು ಪ್ರಾಚೀನವಾದುದು ಎಂಬುದನ್ನು ಸಮರ್ಥಿಸಲು ಈ ಶಬ್ದ ಮತ್ತಷ್ಟು ಪುಷ್ಟಿ ಕೊಡುತ್ತದೆ. "ಪ್ರೊಫೆಸರ್ ಕೆ.ಜಿ.ಕುಂದಣಗಾರ ಅವರು ಈ ಶಾಸನವನ್ನು ಸಂಪೂರ್ಣವಾಗಿ ಇಂಗ್ಲೀಷ್ ಭಾಷೆಯಲ್ಲಿ ಅನುವಾದಿಸಿದ್ದು ಭಗವತಿ ದೇವಿ ಶಬ್ದಕ್ಕೆ 'Goddes durga' ಎಂದು ವಿವರಣೆ ನೀಡಿದ್ದಾರೆ. ದುರ್ಗನೆಂಬ ರಾಕ್ಷಸನನ್ನು ಸಂಹರಿಸಿದ್ದರಿಂದ ಶ್ರೀಕಾಳಿಕಾದೇವಿಗೆ ದುರ್ಗಾ ಎಂಬ ಮತ್ತೊಂದು ಹೆಸರು ಪ್ರಾಪ್ತವಾಗಿದ್ದುದು"[೪೭] ತಿಳಿದುಬರುತ್ತದೆ.

"ವ್ಯಾಪಾರಿ ಸಂಘಗಳ ಬಣಜಿಗಳು, ಅಯ್ಯೊಹೊಳೆಯ ೫೦೦ ಜನ ಸ್ವಾಮಿಗಳು, ಸೆಟ್ಟಿಗಳು, ಒಕ್ಕಲಿಗರು"[೪೮] ಚೈತ್ರಯದ ಉತ್ಸವದಲ್ಲಿ ಭಾಗಿಯಾಗಿದ್ದರೆಂದು ಶಾಸನದಲ್ಲಿ ವಿವರಿಸಲಾಗಿದೆ. ಶಿರಸಂಗಿಯು ನೆರೆಯ ಕರ್ನಾಟಕ-ಆಂಧ್ರ-ತಮಿಳುನಾಡು ಮಹಾರಾಷ್ಟ್ರಗಳ ವ್ಯಾಪಾರಿಗಳನ್ನು ಆಕರ್ಷಿಸಿದ ಪಟ್ಟಣವಾಗಿತ್ತು. ಇಡೀ ದಕ್ಷಿಣ ಭಾರತದ ಜೈನ ವ್ಯಾಪಾರಿಗಳೂ ಭಾಗವತಿ ಕಾಳಿಕಾದೇವಿಯುತ್ಸವಕ್ಕೆ ಬರುತ್ತಿದ್ದರು. ಈ ಶಾಸನದ ಕೊನೆಯಲ್ಲಿ ಅದನ್ನು ರಕ್ಷಿಸಿದವರಿಗೆ ಆಗುವ ಸುಗತಿ ಮತ್ತು ನಾಶ ಮಾಡಿದವರಿಗೆ ಆಗುವ ದುರ್ಗತಿಯನ್ನು ಹೇಳಿದೆ. ಈ ಶಾಸನವನ್ನು ಹೊಸಗನ್ನಡದಲ್ಲಿ ಸಜ್ಜನ ತಿಲಕನು ರಚಿಸಿ ಹೇಳಿದನೆಂದೂ ರೂವಾರಿ ಚಕ್ರವರ್ತಿ ಚಂಡೋಜನ ಮೊಮ್ಮಗ ಸಾತೋಜನು ಕೆತ್ತಿದನೆಂದೂ ಹೇಳಿ ಮುಕ್ತಾಯಗೊಳ್ಳುತ್ತದೆ.

ಶಿರಸಂಗಿ ಕಾಳಿಕಾದೇವಿ ದೇವಾಲಯಕ್ಕೆ ಹೊಂದಿಕೊಂಡ ಹಬ್ಬೇಶ್ವರ ಮತ್ತು ಪ್ರಸನ್ನ ಭೈರವನ ದೇವಸ್ಥಾನಗಳನ್ನು ಕಟ್ಟಿಸಿದ ಕಾಲ ಅಲ್ಲಿಯ ಶಾಸನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಕಾಳಿಕಾ ದೇವಾಲಯದ ಬಗ್ಗೆ ಯಾವ ಮಾಹಿತಿಗಳು ಶಾಸನಗಳಲ್ಲಿ ದೊರೆಯುವುದಿಲ್ಲ.

'ಹಬ್ಬೇಶ್ವರ ಮತ್ತು ಪ್ರಸನ್ನ ಭೈರವ ದೇವಾಲಯಗಳಿಗಿಂತ ಕಾಳಿಕಾ ದೇವಾಲಯ ಒಂದು ಸಾವಿರ ವರ್ಷಗಳಷ್ಟು ಪ್ರಾಚೀನವಾಗಿದ್ದಿರಬೇಕು. ಕದಂಬರ ಕಾಲದಲ್ಲಿ ಕಟ್ಟಲ್ಪಟ್ಟು, ಕಲ್ಯಾಣ ಚಾಲುಕ್ಯರ ಕಾಲದ ಹಬ್ಬೆನಾಯಕನಿಂದ ಕಾಳಿಕಾ ದೇವಾಲಯ ಜೀರ್ಣೋದ್ಧಾರಗೊಂಡು ವಿಸ್ತರಿಸಲ್ಪಟ್ಟಿದೆ ಎಂದು ಹೇಳಬಹುದಾಗಿದೆ. ಶಿರಸಂಗಿಯಲ್ಲಿ ಬಹಳ ದಿನಗಳಿಂದಲೂ ಕಾಳಿಕಾದೇವಿಯ ಆರಾಧನೆಯಿದೆ. ಶಾಸನಗಳಲ್ಲಿ ಉಲ್ಲೇಖಿಸುವಂತೆ ಇದು ಪ್ರಮುಖ ವ್ಯಾಪಾರಿ ಕೇಂದ್ರವಾಗಿ ಚಿನ್ನ-ಬೆಳ್ಳಿ, ತಾಮ್ರ, ಕಂಚು-ಕಬ್ಬಿಣ, ಮರ ವಸ್ತುಗಳ ಉತ್ಪಾದಿತ ಪಟ್ಟಣ ವಾಗಿತ್ತೆಂಬುದನ್ನು ಸೂಚಿಸುತ್ತದೆ. ಈ ಕುಶಲಕರ್ಮಿಗಳಿಗೆ ಆರಂಭ ಕಾಲದಿಂದಲೂ ಕಾಳಿಕಾದೇವಿ ಕುಲದೇವತೆಯಾಗಿ, ಸರ್ವಕಲೆಗಳನ್ನು ಕರಗತ ಮಾಡಿಕೊಂಡ ಪಂಚಾಳರ ಮನೆದೇವತೆಯಾಗಿ ಪಂಚಕಸುಬುಗಳ ಕರ್ಮಿಗಳ ಮೇಲೆ ಪ್ರಭಾವ ಬೀರಿದ್ದಾಳೆ. ಈ ಶಾಸನದ ಸಾತೋಜ ಮತ್ತು ಅವನ ಅಜ್ಜ ಚಂಡೋಜ ಕಾಳಿಕಾದೇವಿಯ ವರಪ್ರಸಾದದಿಂದ 'ರೂವಾರಿ ಚಕ್ರವರ್ತಿ'ಗಳೆಂದು ಕರೆಸಿಕೊಂಡಿದ್ದಾರೆ. ಶಿರಸಂಗಿಯ ಕುಶಲಕರ್ಮಿಗಳು ಒಂದಿಲ್ಲ ಒಂದು ರೀತಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದರು. ಅವರ ಆರಾಧಕಳಾದ ಶ್ರೀಕಾಳಿಕಾದೇವಿಯು ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಯೂರಿ ನಿಂತು ಪಂಚಾಳರ ಇಷ್ಟಾರ್ಥಗಳನ್ನು ಈಡೇರಿಸುತ್ತ ಬಂದಿದ್ದಾಳೆ. ಕುಶಲಕರ್ಮಿಗಳು ಪ್ರಾಚೀನ ಕಾಲದಿಂದಲೂ ಚೈತ್ರದ ಉತ್ಸವಕ್ಕೆ ಕರ್ನಾಟಕ-ಮಹಾರಾಷ್ಟ್ರ-ಆಂಧ್ರ-ತಮಿಳುನಾಡಿನಿಂದ ಬರುತ್ತಾರೆ. ಕಾಳಿಕಾ ದೇವಿಯು ಶಿರಸಂಗಿಯಲ್ಲಿ ಶಕ್ತಿಯಾಗಿ ನಿರೂಪಗೊಂಡಿದ್ದಾಳೆ.

ಪಂಚ ಕಸುಬುಗಳ ಕುಶಲಕರ್ಮಿಗಳು ಮತ್ತು ಅವರಿಗೆ ಆಶ್ರಯವಾಗಿದ್ದ ಶಿರಸಂಗಿ ಪ್ರದೇಶದ ಚರಿತ್ರೆಯನ್ನು ಗಮನಿಸಿದಾಗ ಶಿರಸಂಗಿಯು ಆದಿಕಾಲದಿಂದಲೂ ಮಾನವರು ವಾಸಿಸುತ್ತಿದ್ದ ಮಾನವ ಸಂಸ್ಕೃತಿಯ ಪ್ರದೇಶವಾಗಿತ್ತು. ಇಲ್ಲಿಯ ಮಾನವರು ಆದಿ ಹಳೆ ಶಿಲಾಯುಗದ ಸಂದರ್ಭದಲ್ಲಿ ಗುಹೆಗಳಲ್ಲಿ ವಾಸವಾಗಿದ್ದು, ಶಿಲೆಗಳಿಂದ ಆಯುಧಗಳನ್ನು ಮಾಡಿಕೊಂಡು ಗೆಡ್ಡೆ-ಗೆಣಸುಗಳನ್ನು ತಿಂದು ಜೀವನ ಸಾಗಿಸುತ್ತಿದ್ದರು. ಕಬ್ಬಿಣಯುಗ ಆರಂಭಗೊಂಡಿರುವಂತೆ ಇಲ್ಲಿಯ ಜನ ಕುಲುಮೆಗಳನ್ನು ಸ್ಥಾಪಿಸುವುದರ ಮೂಲಕ ಅದಿರನ್ನು ಕರಗಿಸಿ ಕಬ್ಬಿಣ ವಸ್ತುಗಳನ್ನು ತಯಾರಿಸುತ್ತ ಬಂದಿದ್ದಾರೆ. ಇವರಿಗೆ ಕಾಳಿಕಾದೇವಿಯು ಶಕ್ತಿಯಾಗಿ ನಿಂತಿದ್ದಾಳೆ. ೧-೨ನೇ ಶತಮಾನದಲ್ಲಿ ಕಾಳಿಕಾ ದೇವಾಲಯ ನಿರ್ಮಾಣವಾಗಿ ಸರ್ವರಿಂದ ಪೂಜಿತಗೊಳ್ಳುವ ದೇವಿಯಾಗಿ ರೂಪುಗೊಂಡಿದ್ದಾಳೆ. ಹೊರನಾಡಿನ ವ್ಯಾಪಾರಿಗಳಿಗೆ ವ್ಯವಹಾರಿಕ ಪಟ್ಟಣವಾಗಿ ಈ ಗ್ರಾಮ ಬೆಳೆಯುತ್ತದೆ. ಋಷ್ಯಶೃಂಗನಿಂದಾಗಿ ಈ ಪ್ರದೇಶ ಶಿರಸಂಗಿಯಾಗಿ ಹಲವು ರಾಜರುಗಳ ರಾಜ್ಯಾಡಳಿತ ಕೇಂದ್ರವಾಗಿತ್ತು. ಆರಂಭದಿಂದಲೂ ಚೈತ್ರದ ದೇವಿ ಉತ್ಸವ ಜರಗುತ್ತ ಬಂದಿರುವುದು

ವಿಶೇಷವಾಗಿದೆ. ಈ ಉತ್ಸವಕ್ಕೆ ದೇವಿಯ ಆರಾಧಕರಾದ ಕುಶಲಕರ್ಮಿಗಳು ತಂಡೋಪತಂಡವಾಗಿ ಬರುವುದರ ಮೂಲಕ ಶಿರಸಂಗಿಯು ಶ್ರೀಕಾಳಿಕಾದೇವಿಯ ಶಕ್ತಿ ಪೀಠವಾಗಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ.

ಕೊನೆಟಿಪ್ಪಣಿ

೧. ಕೃಷ್ಣಮೂರ್ತಿ ಕೆ.ವಿ., **ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು(ಸಮಾಜ ಶಾಸ್ತ್ರೀಯ ಅಧ್ಯಯನ),** ೨೦೧೨, ಪು.೧೪

೨. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ-ಸಾಂಸ್ಕೃತಿಕ ಅಧ್ಯಯನ,** ೨೦೦೨, ಪು.೯

೩. ಅದೇ, ಪು.೮

೪. ಅದೇ, ಪು.೮

೫. ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ-೧,** ೨೦೧೨, ಪು.೫

೬. ಅದೇ, ಪು.೬

೭. ವಾಸುದೇವ ಬಡಿಗೇರ(ಸಂ), **ಬಸವನ ಬಾಗೇವಾಡಿ,** ೨೦೧೦, ಪು.೩

೮. ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ-೧,** ೨೦೧೨, ಪು.೭

೯. ಅದೇ, ಪು.೭

೧೦. Antiguary Indian - Vol-4

೧೧. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ-ಸಾಂಸ್ಕೃತಿ ಪರಂಪರೆ-೧,** ೨೦೧೨, ಪು.೧೭

೧೨. ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ-೧,** ೨೦೧೨, ಪು.೧೨

೧೩. Antiguary Indian - Vol-4

೧೪. ವಾಸುದೇವ ಬಡಿಗೇರ(ಸಂ), **ಬಸವನ ಬಾಗೇವಾಡಿ,** ೨೦೧೦, ಪು.೧೨.

೧೫. ವಾಸುದೇವ ಬಡಿಗೇರ, **ಶಿರಸಂಗಿಕಾಳಮ್ಮ-ಸಾಂಸ್ಕೃತಿಕ ಅಧ್ಯಯನ,** ೨೦೦೨, ಪು.೧೮

೧೬. ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ-೧,** ೨೦೧೨, ಪು.೧೪.

೧೭. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ-ಸಾಂಸ್ಕೃತಿಕ ಅಧ್ಯಯನ,** ೨೦೦೨, ಪು.೧೨.

೧೮. ಅದೇ, ಪು.೧೨

೧೯. ಅದೇ, ಪು.೧೨

೨೦. ಅದೇ, ಪು.೨೦

೨೧. ಸುಂದರ ಅ.(ಸಂ), **ಕರ್ನಾಟಕ ಚರಿತ್ರೆ ಸಂ–೧**, ೧೯೯೭, ಪು.೨೧೦

೨೨. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ**, ೨೦೦೨, ಪು.೨೦

೨೩. ಅದೇ, ಪು.೨೨

೨೪. ಅದೇ, ಪು.೨೨

೨೫. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ೨೦೧೧, ಪು.೧೬.

೨೬. ಅದೇ, ಪು.೧೮

೨೭. ಅದೇ, ಪು.೧೯

೨೮. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ**, ೨೦೦೨, ಪು.೨೩

೨೯. ಮೋಹನರಾವ್ ಎ.ಎಫ್.(ಸಂ) **ಶ್ರೀಕಾಳಿಕಾ ಕ್ಷೇತ್ರ ಶಿರಸಂಗಿ ವಿಶ್ವಕರ್ಮ ಸಮಾಜದರ್ಶನ–೨**, ೧೯೯೭, ಪು.೯೧

೩೦. ವಿರುಪಾಕ್ಷ ಬಿ.ಬಡಿಗೇರ, **ಶ್ರೀಕ್ಷೇತ್ರ ಶಿರಸಂಗಿ, ನೆಲೆ–ಹಿನ್ನಲೆ ಕಾಳಿಕಾ ಸಂದೇಶ**, ೨೦೧೪, ಪು.೨೯

೩೧. ಅದೇ, ಪು.೨೯

೩೨. ಅದೇ, ಪು.೨೯

೩೩. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ**, ೨೦೦೨, ಪು.೪೫

೩೪. ವಿರೂಪಾಕ್ಷ ಬಾ.ಬಡಿಗೇರ, **ಶಿರಸಂಗಿ ಸಂಸ್ಥಾನ–ಒಂದು ಅಧ್ಯಯನ**, ೧೯೮೮, ಪು.೫೧

೩೫. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ೨೦೧೧, ಪು.೨೫೦

೩೬. ದೀಕ್ಷಿತ ವಿ.ಜಿ., **ಶಾಸನಗಳಲ್ಲಿ ಶಿರಸಂಗಿ ಮತ್ತು ಪಾಂಚಾಳರ ಕುಲದೇವತೆ ಶ್ರೀಕಾಳಿಕಾದೇವಿ, ಕಾಳಿಕಾ ಸಂದೇಶ**, ೨೦೧೪, ಪು.೪೭

೩೭. ಅದೇ, ಪು.೪೭

೩೮. ಷಡಕ್ಷರಯ್ಯ ಎಂ.ಆರ್., **ಬೆಳಗಾವಿ ಜಿಲ್ಲೆಯ ಶಾಸನಗಳು, ಬೆಳಗಾವಿ ಸಂಸ್ಕೃತಿ**, ೨೦೧೧, ಪು.೨೭

೩೯. ದೀಕ್ಷಿತ್ ವಿ.ಜಿ., **ಶಾಸನಗಳಲ್ಲಿ ಶಿರಸಂಗಿ ಮತ್ತು ಪಂಚಾಲರ ಕುಲದೇವತೆ ಶ್ರೀ ಕಾಳಿಕಾದೇವಿ, ಕಾಳಿಕಸಂದೇಶ,** ೨೦೧೪, ಪು.೪೭.

೪೦. ಅದೇ, ಪು.೪೮.

೪೧. ಅದೇ, ಪು.೪೯.

೪೨. ನಾರಾಯಣ ರ. ಪತ್ತಾರ, **ಶ್ರೀಕ್ಷೇತ್ರ ಶಿರಸಂಗಿ ಶ್ರೀಕಾಳಿಕಾದೇವಿ ಮಹಾತ್ಮೆ,** ೧೯೯೨, ಪು.೭೧

೪೩. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ,** ೨೦೦೨, ಪು.೨೭

೪೪. ಅದೇ, ಪು.೨೭.

೪೫. ಅದೇ, ಪು.೩೩

೪೬. ದೀಕ್ಷಿತ ವಿ.ಜಿ., **ಶಾಸನಗಳಲ್ಲಿ ಶಿರಸಂಗಿ ಮತ್ತು ಪಾಂಚಾಳರ ಕುಲದೇವತೆ ಶ್ರೀಕಾಳಿಕಾದೇವಿ, ಕಾಳಿಕಾ ಸಂದೇಶ,** ೨೦೧೪, ಪು.೪೯

೪೭. ವಿರೂಪಾಕ್ಷ ಬಡಿಗೇರ, **ಶಿರಸಂಗಿ: ಇತಿಹಾಸದ ಇಣುಕು ನೋಟ,** ಶ್ರೀಕಾಳಿಕಾ ಸಂದೇಶ, ೨೦೦೮, ಪು.೧೮

೪೮. ದೀಕ್ಷಿತ ವಿ.ಜಿ., **ಶಾಸನಗಳಲ್ಲಿ ಶಿರಸಂಗಿ ಮತ್ತು ಪಾಂಚಾಳರ ಕುಲದೇವತೆ ಶ್ರೀಕಾಳಿಕಾದೇವಿ, ಕಾಳಿಕಾ ಸಂದೇಶ,** ೨೦೧೪, ಪು.೪೮

ಅಧ್ಯಾಯ: ಮೂರು

ಕುಶಲಕರ್ಮಿಗಳು: ಪಾಂಚಾಳ ವರ್ಗಗಳು ಮತ್ತು ಕಾಳಮ್ಮನ ಆರಾಧನೆ

ಅಧ್ಯಾಯ ಮೂರು

ಕುಶಲಕರ್ಮಿಗಳು: ಪಾಂಚಾಳ ವರ್ಗಗಳು ಮತ್ತು ಕಾಳಮ್ಮನ ಆರಾಧನೆ

ಜಗತ್ತಿನಲ್ಲಿ ಜ್ಞಾನವು ಮುಖ್ಯವಾಗಿದೆ. ಅದು ಒಂದು ಕಲೆಯಾಗಿಯೂ ಬೆಲೆದಿದೆ. ಕಲೆಯ ಅಭಿವ್ಯಕ್ತಿಗಾಗಿ ಕುಶಲತೆ ಅಗತ್ಯವಾಗುತ್ತದೆ. ಕುಶಲತೆ ಮತ್ತು ಕಲೆ ಒಂದು ಗೂಡಿದಾಗ ಅದು ಕುಶಲಕಲೆಯಾಗುತ್ತದೆ. ಜ್ಞಾನವನ್ನು ಅನುಭವದ ಸಹಾಯದೊಂದಿಗೆ ಕುಶಲತೆಯಿಂದ ಸ್ವರೂಪಗೊಳಿಸುವುದು. ಕಲೆಯಾಗಿರುವ ಜ್ಞಾನವನ್ನು ಕುಶಲತೆಯಿಂದ ಜಗತ್ತಿಗೆ ತೋರಿಸುವವರನ್ನು ಕರ್ಮಿಗಳು, ಶ್ರಮಿಕರು, ಕಾಯಕಜೀವಿಗಳೆಂದು ಗುರುತಿಸಲಾಗುತ್ತದೆ. ಕ್ರಿಯಾಶೀಲವಾಗಿ ಚಾತುರ್ಯದಿಂದ ಕಲೆಯನ್ನು ಜಗತ್ತಿಗೆ ಪ್ರದರ್ಶಿಸುವ ಕಲಾವಂತಿಕೆಯ ಕರ್ಮಕಾರರೇ ಕುಶಲಕರ್ಮಿಗಳು.

ಕುಶಲಕರ್ಮಿಗೆ ಅತೀ ಸೂಕ್ಷ್ಮವಾದ ಅರಿವು, ತಿಳಿವಳಿಕೆ ಇರುತ್ತದೆ. ವಿಶೇಷ ಜ್ಞಾನವು ಕುಶಲಕರ್ಮಿಯ ಪ್ರತಿ ಉತ್ಪಾದಿತ ವಸ್ತುವು ಆತನನ್ನು ಜನಪ್ರಿಯಗೊಳಿಸುತ್ತದೆ. ಅದು ಶಾಶ್ವತಗೊಳಿಸಲು ಸಾಧ್ಯವಾಗುತ್ತದೆ. ನಿರ್ಮಿತ ವಸ್ತು ಶಾಶ್ವತಗೊಳಿಸುವುದರೊಂದಿಗೆ ಮನುಷ್ಯರು ಶಾಶ್ವತಗೊಂಡಿದ್ದಾರೆ. ವಸ್ತು ಮತ್ತು ವ್ಯಕ್ತಿ ಶಾಶ್ವತಗೊಂಡಿರುವುದನ್ನು ಕುಶಲಕರ್ಮಿಗಳಲ್ಲಿ ಕಾಣುತ್ತೇವೆ. ಕಲೆ, ವಾಸ್ತುಶಿಲ್ಪ, ಗೃಹಕೈಗಾರಿಕೆ, ಲೋಹಕಾಷ್ಟ, ಶಿಲೆ ಮೊದಲಾದವುಗಳಲ್ಲಿ ಶಾಶ್ವತತನದ ಕುಶಲಕಲೆಯಿದೆ. ಕುಶಲಕಲೆಗೆ ಪ್ರಾಚೀನ ಇತಿಹಾಸವಿದೆ. ಸಿಂಧೂ ಕೊಳ್ಳದ ನಾಗರೀಕತೆಯ ಕಾಲದಲ್ಲಿಯೂ ಕಲಾಕೌಶಲ್ಯತೆ ಇರುವುದಾಗಿ ತಿಳಿದುಬರುತ್ತದೆ. ಲೋಹ ಮತ್ತು ಶಿಲೆಗಳಲ್ಲಿ ಶ್ರೇಷ್ಟವಾದ ಕಲಾಕೌಶಲ್ಯತೆಯನ್ನು ಕುಶಲಕರ್ಮಿಗಳು ತೋರ್ಪಡಿಸಿದ್ದಾರೆ. ಸೂಕ್ಷ್ಮವಾದ ಸುಳಿವು, ಶಿಲೆಯನ್ನು ಸುಂದರಗೊಳಿಸುವುದು. ಉಳಿಯಿಂದ ಕೆತ್ತಿ ನಯಗೊಳಿಸುವ ಸಾಧಣೋಪಕರಣಗಳನ್ನು ಬಳಸುವ ಶಿಲಾಯುಗ ಮತ್ತು ಲೋಹಯುಗಗಳು ಕುಶಲಕರ್ಮಿಗಳ ಪ್ರಾಚೀನತೆಯನ್ನು ತಿಳಿಸುತ್ತವೆ. ಪ್ರಾಚೀನ ಕಾಲದಲ್ಲಿ ಕಬ್ಬಿಣ, ಕಂಚು, ತಾಮ್ರ, ಬೆಳ್ಳಿ-ಬಂಗಾರಗಳನ್ನು ಕರಗಿಸಿ ಯುದ್ಧೋಪಕರಣ, ರಥ, ಆಭರಣಗಳನ್ನು ತಯಾರಿಸುವ ಶ್ರಮಿಕ ವರ್ಗಗಳಿದ್ದವು. ಅವರುಗಳನ್ನು ಕುಶಲಕರ್ಮಿ ವರ್ಗಗಳೆಂದು ಕರೆಯ ಲಾಗುತ್ತಿತ್ತು.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' ಎಂದು ಹೇಳಿದ್ದಾನೆ. ಗುಣಕರ್ಮಗಳಿಗೆ ಅನುಗುಣವಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯರು ನಾಲ್ಕು ವಿಭಾಗಗಳಲ್ಲಿ ವಿಂಗಡನೆಗೊಂಡಿದ್ದಾರೆ. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರರೆಂದು ಗುರುತಿಸಲಾಗಿದೆ. ಈ ವರ್ಗಗಳ ಜನರಿಗೆ ಅವರವರದೇ ಆದ ಬೇರೆ ಬೇರೆ ಕರ್ತವ್ಯಗಳು ಹುಟ್ಟಿಕೊಂಡವು. ಏಣಿ-ಶ್ರೇಣೀಕೃತ ವ್ಯವಸ್ಥೆ ರೂಪಗೊಂಡಿತು. ವೇದಕಾಲದಲ್ಲಿ ನಾಲ್ಕು ವರ್ಣಗಳು ಸಮಾನವಾಗಿದ್ದವು. ಆದರೆ "ಕ್ರಿ.ಪೂ.೬೦೦ರ ಹೊತ್ತಿಗೆ ನಿಧಾನಗತಿಯಲ್ಲಿ 'ಜಾತಿ' ಸ್ವರೂಪ ಪಡೆಯತೊಡಗಿತು"[೧] ನಾಲ್ಕು ವರ್ಣಗಳಿದ್ದ ಸಾಮರಸ್ಯತ್ವ ಕಡಿಮೆಯಾಗಿ 'ವರ್ಣಸಂಕರ ಉಂಟಾಯಿತು. ಬೇರೆ ಬೇರೆ ವೃತ್ತಿಗಳನ್ನು ನಿರ್ವಹಿಸುತ್ತಿದ್ದ ಗುಂಪುಗಳು ತಮ್ಮ ವೃತ್ತಿಯ ಗೌಪ್ಯತೆಗಳನ್ನು ತಮ್ಮ ತಮ್ಮಲ್ಲಿಯೇ ಕಾಯ್ದುಕೊಳ್ಳುವ ವರ್ಗಗಳು ಉಳಿದುಕೊಂಡವು. ವೃತ್ತಿಗಳು ಜಾತಿಯ ಸ್ವರೂಪಗಳನ್ನು ಪಡೆದುಕೊಂಡವು. ವೃತ್ತಿಯಲ್ಲಿ ಯಾವುದೇ ರೀತಿಯ ದೋಷಗಳು ಇರಬಾರದು. ಹಾಗೇನಾದರೂ ಆದರೆ ಅದಕ್ಕೆ ತಕ್ಕ ದಂಡನೆಗಳು ಪ್ರಾಚೀನ ಕಾಲದಲ್ಲಿ ಭಾರತದಲ್ಲಿದ್ದವು. ಇದರಿಂದ ವೃತ್ತಿದಾರ ತುಂಬಾ ಜಾಗರೂಕನಾಗಿರುತ್ತಿದ್ದನು. ಒಂದು ಹಂತದಲ್ಲಿ ವೃತ್ತಿಯ ನೈಪುಣ್ಯತೆ, ಕಲಾ ಕೌಶಲ್ಯತೆಗಳು ರಹಸ್ಯಮಯವಾಗಿಯೇ ಆಯಾ ವರ್ಗಗಳಲ್ಲಿ ಉಳಿಯ ತೊಡಗಿದವು. ತಂದೆಯಿಂದ ಮಗ, ಮಗನಿಂದ ಮೊಮ್ಮಗನಿಗೆ ವೃತ್ತಿ ರಹಸ್ಯಗಳು ವರ್ಗಾವಣೆಗೊಂಡವು. ವೃತ್ತಿ ಮತ್ತು ಸಂಬಂಧಗಳು ಗಟ್ಟಿಗೊಳ್ಳುತ್ತ ಹೋದವು.

ಸಾಮಾಜಿಕವಾಗಿ ರಹಸ್ಯವಾಗಿ ಬೆಳೆದ ವೃತ್ತಿಗಳು ಕುಲಕಸುಬುಗಳಾಗಿ ಪರಿವರ್ತಿವಾದವು. ವೃತ್ತಿಯಲ್ಲಿ ವಂಶಪಾರಂಪರ್ಯತೆ ಬೆಳೆದು ಬಂದಿತು. ಅವರದೇ ಆದ ಆಚಾರ-ವಿಚಾರ, ಸಂಪ್ರದಾಯ ಬೆಳೆಯಿತು. ಅನ್ಯ ವೃತ್ತಿದಾರರಲ್ಲಿದ್ದ ಸಂಪರ್ಕಗಳು ನಿಷಿದ್ಧಗೊಂಡವು. ಕಲಾಕೌಶಲ್ಯತೆಯನ್ನು ಹೊಂದಿದ ಕುಶಲಕರ್ಮಿಗಳು ಸಮಾಜಕ್ಕೆ ಅಗತ್ಯವಾಗಿರುವ ಉಪಕರಣ-ಸಾಮಗ್ರಿಗಳನ್ನು ಮಾಡಿ ಕೊಡುವುದರ ಮೂಲಕ ಸಮಾಜದ ಎಲ್ಲ ವರ್ಗಗಳ ಜನರ ಪ್ರೀತಿಯನ್ನು ಪಡೆದುಕೊಳ್ಳುತ್ತಾರೆ. ಭಾರತದಂಥ ಕೃಷಿ ಪ್ರಧಾನ ರಾಷ್ಟ್ರಗಳಲ್ಲಿ ಕುಶಲಕರ್ಮಿಗಳಿಲ್ಲದ ಹಳ್ಳಿಗಳೇ ಇಲ್ಲ. ಕೃಷಿಕರಿಗೆ ಹಾಗೂ ಇತರರಿಗೆ ಅಗತ್ಯವಿರುವ ವಸ್ತುಗಳನ್ನು ತಯಾರಿಸಿಕೊಡುವ ಹೊಣೆಗಾರಿಕೆ ಕುಶಲಕರ್ಮಿ ಗಳದಾಗಿದೆ. ಕ್ರಿ.ಶ.ಸುಮಾರು ೭೫೫ರ ಲಕ್ಷ್ಮೇಶ್ವರದ ಶಾಸನವನ್ನು ಚಿದಾನಂದ ಮೂರ್ತಿಯವರು ಉದ್ಧರಿಸಿರುವಂತೆ "ಓಂ ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಯುವರಾಜರ ಪೊರಿಗೆಱೆಯಾ ಮಹಾಜನಕ್ಕುಂ ನಗರಕ್ಕುಂ ಹದಿನೆಂಟು ಪ್ರಕೃತಿಗಳ್ಗುಂ ಕೊಟ್ಟ ಆಚಾರ ವ್ಯವಸ್ಥೆ"[೨]ಯನ್ನು ತಿಳಿಸಿದಂತೆ ಹದಿನೆಂಟು ಪ್ರಕೃತಿಯನ್ನು, ಪ್ರಕೃತಿಯೆಂದರೆ ಜಾತಿಯೆಂದು ಪರಿಗಣಿಸಲಾಗಿದೆ. 'ಹೊಲಿಯ ಹದಿನೆಂಟು' ಜಾತಿಗಳಿಗೆ ಕುಶಲಕರ್ಮಿಗಳು ಅವಶ್ಯಕವಾದವರಾಗಿದ್ದು, ಅಗತ್ಯಕ್ಕಾನುಗುಣವಾಗಿ ಯುದ್ಧೋಪಕರಣ ಗಳಿಂದ ಹಿಡಿದು

ಕೃಷಿಯೋಪಕರಣ, ಗೃಹೋಪಕರಣಗಳನ್ನು ತಯಾರಿಸುವುದರ ಮೂಲಕ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಮುಖ ಭಾಗವಾಗಿ ಉಳಿದುಕೊಂಡಿದ್ದಾರೆ.

ಕಸುಬುಗಾರಿಕೆಯನ್ನು ಪರಂಪರಾಗತವಾಗಿ ಉಳಿಸಿ-ಬೆಳೆಸಿಕೊಂಡು ಬಂದವರು ಕುಶಲ ಕರ್ಮಿಗಳು. ಈ ಕುಶಲಕರ್ಮಿ ವರ್ಗಗಳಲ್ಲಿಯೇ ಪ್ರಮುಖವಾಗಿರುವ ಸಮುದಾಯವೇ ಪಾಂಚಾಳ ವರ್ಗ. ಭಾರತೀಯ ಸಮಾಜದಲ್ಲಿ ಕಸುಬುಗಾರಿಕೆ ಮತ್ತು ಧಾರ್ಮಿಕ ಸಂಪ್ರದಾಯಗಳು ಪರಸ್ಪರ ಸಂಬಂಧಗೊಂಡಿರುವುದು ಪಾಂಚಾಳ ಕುಶಲಕರ್ಮಿ ವರ್ಗಗಳಲ್ಲಿ ಮಾತ್ರ ಕಾಣುತ್ತೇವೆ. ಪಾಂಚಾಳ ಕುಶಲಕರ್ಮಿಗಳು ಕರ್ಮಮಾರ್ಗವನ್ನು ಅನುಸರಿಸಿದ ವಿಶ್ವಬ್ರಾಹ್ಮಣರು, ಜ್ಞಾನ ಮೂಲ ಮಾರ್ಗವನ್ನು, ಕ್ರಿಯಾ ಮೂಲಮಾರ್ಗಕ್ಕೆ ಬಳಸಿಕೊಂಡು ಪಾಂಚಾಳರು ಕುಶಲಮತಿಗಳಾದರು. ತಮ್ಮಲ್ಲಿಯ ಸೂಕ್ಷ್ಮಜ್ಞಾನವನ್ನು ಕಲಾತ್ಮಕಗೊಳಿಸಿ, ಜಗತ್ತಿಗೆ ಕೊಡುಗೆಯಾಗಿಸಿದರು ಹೊಲೆಯ ಹದಿನೆಂಟು ಜಾತಿಯ ವಿಷಯಗಳಲ್ಲಿ ೧೨ನೇ ಶತಮಾನದಲ್ಲಿ ವಚನಕಾರರು 'ಪಂಚಾಳ' ವರ್ಗಗಳನ್ನು ವಿವರಿಸಿದ್ದಾರೆ. ಬಸವಣ್ಣನವರ ಸಮಕಾಲೀನರಾದ ಸೊಡ್ಡಲ ಬಾಚರಸರು "ಶಿಖಿ ಬ್ರಾಹ್ಮಣ, ನಯನಕ್ಷತ್ರಿಯ ನಾಶಿಕ ಬಣಜಿಗ, ಅಧರ ಒಕ್ಕಲಿಗ, ಕರ್ಣಗೊಲ್ಲ, ಕೊರಳು ಕುಂಬಾರ, ಬಾಹು ಪಂಚಾಳ....."[೩] ಎಂದು ಪಂಚಾಳ ಎಂಬ ಜಾತಿಯನ್ನು ತಿಳಿಸುವ ಕುಶಲಕರ್ಮಿಗಳ ಕುರಿತು ಸೂಚಿಸುತ್ತಾನೆ.

'ಪಂಚಾಳ' ಎನ್ನುವುದು ಬೇರೆ ಬೇರೆ ಐದು ವೃತ್ತಿ ಜಾತಿಗಳಾದ ಕಮ್ಮಾರ ಅಥವಾ ಕಂಬಾರ, ಬಡಿಗ/ಬಡಿಗೇರ, ಅಕ್ಕಸಾಲಿಗ(ಪತ್ತಾರ), ಶಿಲ್ಪಿ, ಕಂಚುಗಾರರನ್ನೊಳಗೊಂಡ ಒಂದು ಕೂಡು ಪದವಾಗಿದೆ. ಪಂಚ ವೃತ್ತಿ ಎಂದರೆ ಪಂಚಾಳ'ವೆಂದು ವಚನಕಾರ ತಿಳಿಸಿದ್ದಾನೆ. ಕೆ.ವಿ.ಕೃಷ್ಣಮೂರ್ತಿ ಅವರ ಕನ್ನಡ ಅನುವಾದಿತ ಕೃತಿ 'ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು' ಇದರಲ್ಲಿ ಜೆ.ಎಚ್.ಹಟ್ಟನ್ ಅವರ ಹೇಳಿಕೆ ಈ ರೀತಿಯಿದೆ. 'ಕಮ್ಮಲನ್ ಅಥವಾ ಪಾಂಚಾಳ ಎಂಬ ಜಾತಿಯು, ಸ್ವರ್ಣಕಾರರು, ಲೋಹಗಾರರು, ಬಡಗಿಗಳು, ಶಿಲಾಕರ್ಮಿಗಳು ಮತ್ತು ಕಮ್ಮಾರರು ಎಂದು ಐದು ಕಸಬುಗಾರಿಕೆ ಪಂಗಡಗಳಿಂದ ಕೂಡಿದೆ. ಇವರು ವಿಶ್ವಸೃಷ್ಟಿಕರ್ತ ಮತ್ತು ದೇವನವಯೋಜಕ ವಿಶ್ವಕರ್ಮನ ಸಂತತಿಯೆಂದೂ, ಬ್ರಾಹ್ಮಣ ವರ್ಗದವರಿಗೆ ಸರಿಸಮಾನರೆಂದೂ ಪ್ರತಿಪಾದಿಸುತ್ತಾರೆ. ಇವರು ತಮ್ಮ ತಮ್ಮ ಜಾತಿಯವರಲ್ಲಿ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ ಮತ್ತು ವಿಸ್ತೃತ ವೃತ್ತಿ ಸಂಘಟನೆಗಳನ್ನು ಹೊಂದಿದ್ದಾರೆ."[೪] ಪಂಚಾಳರನ್ನು ಕೇರಳದಲ್ಲಿ 'ಕಮ್ಮಾಲನ್' ಎಂದು ಕರೆಯುತ್ತಾರೆ. ಐದು ತರದ ವೃತ್ತಿಗಳನ್ನು ಮಾಡುತ್ತಾರೆ. ವಿಶ್ವಕರ್ಮನ ಮಕ್ಕಳ ಮತ್ತು ವಿಶ್ವಬ್ರಾಹ್ಮಣರೆಂದು ಕರೆಸಿಕೊಳ್ಳುತ್ತಾರೆಂದು ಹಟ್ಟನ್ ಹೇಳಿರುವುದು ಸರಿಯಾಗಿದೆ. ಪಂಚಾಳರು ಕಂಬಾರಿಕೆ, ಬಡಿಗತನ, ಪತ್ತಾರಿಕೆ, ಶಿಲ್ಪಗಾರಿಕೆ ಹಾಗೂ ಕಂಚುಗಾರಿಕೆ ಕೆಲಸಗಳನ್ನು ಮಾಡುತ್ತಾರೆ. ಪಂಚಾಳ ಕುಶಲಕರ್ಮಿಗಳ ಪಿತಾಮಹ ವಿಶ್ವಕರ್ಮನಾಗಿದ್ದಾನೆ. ಇವರು ವಿಶ್ವಬ್ರಾಹ್ಮಣರಾಗಿದ್ದು,

ಸಗೋತ್ರಗಳಲ್ಲಿ ಮದುವೆ ಏರ್ಪಡುವುದಿಲ್ಲ. ಸಮಾಜದ ಅಭಿವೃದ್ಧಿಗಾಗಿ ಸಂಘಗಳು ಹುಟ್ಟಿಕೊಂಡಿವೆ ಎಂಬುದನ್ನು ಹಟ್ಟನ್ ಅವರ ಮಾತನ್ನು ಸಮರ್ಥಿಸಿ ಕೊಳ್ಳಲಾಗಿದೆ.

ಪಂಚಾಳರನ್ನು ವಿಶ್ವಬ್ರಾಹ್ಮಣ, ಆಚಾರಿ, ಓಜ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ. ಇವರು ವಿಶ್ವಕ್ಕೆ ಶ್ರೇಷ್ಠ ಸಂಸ್ಕೃತಿಯನ್ನು ನೀಡಿದ್ದಾರೆ. ಪಂಚಾಳರು ವಿಶ್ವದ ಸೃಷ್ಟಿಗೆ ಕಾರಣರು. ಇವರೇ ಮೂಲ ಸೃಷ್ಟಿಕರ್ತರೆಂದು ಋಗ್ವೇದವು ತಿಳಿಸುತ್ತದೆ. ಪಂಚಾಳರ ಮೂಲ ಅಧಿದೇವತೆ ವಿಶ್ವಕರ್ಮ. ಪಾಣಿನಿಯು ತನ್ನ 'ಅಷ್ಟಾಧ್ಯಾಯಿ'ಯಲ್ಲಿ ತಿಳಿಸಿರುವಂತೆ 'ವಿಶ್ವದ ಸೃಷ್ಟಿ, ರಕ್ಷಣೆ ಮತ್ತು ಆಗು-ಹೋಗುಗಳು ಯಾರಿಂದ ಸಾಧ್ಯವಿದೆಯೋ ಅವನೇ ವಿಶ್ವಕರ್ಮ' ಎನ್ನುತ್ತಾನೆ. ಜಗತ್ತಿನ ಆಗು-ಹೋಗುಗಳನ್ನು ನಿಯಂತ್ರಿಸುವ ಶಕ್ತಿ ವಿಶ್ವಕರ್ಮನಾಗಿದ್ದಾನೆ. ಈ ವಿಶ್ವಕರ್ಮನನ್ನು ಮನು ಈ ರೀತಿ ಸ್ತುತಿಸಿದ್ದಾನೆ. "ಯಾವನು ವೇದಗಳಿಂದಲೇ ಅಳೆಯಲು ಸಾಧ್ಯನೋ ವಾಕ್ ಕ್ರಿಯೆಗಳಿಗೆ ಒಡೆಯನೋ ಆ ವಿಶ್ವಕರ್ಮನಿಗೆ ನಮಸ್ಕರಿಸುತ್ತೇನೆ."[೫] ವಾಕ್‌ಕ್ರಿಯೆಗಳಿಗೆ ಶಕ್ತಿಯಾಗಿರುವ ವಿಶ್ವಕರ್ಮ ತನ್ನ ಪಂಚಮುಖಗಳಿಂದ ಪಂಚಬ್ರಹ್ಮರನ್ನು ಸೃಷ್ಟಿಸುತ್ತಾನೆಂದು ಉಪನಿಷತ್-ಪುರಾಣಗಳು ತಿಳಿಸುತ್ತವೆ. "ವಿಶ್ವಕರ್ಮನೆಂದರೆ -ಸೃಷ್ಟಿ, ಸ್ಥಿತಿ, ಸಂಹಾರ, ರೂಪವಾದ ಎಲ್ಲ ಕರ್ಮಗಳು ಯಾವನಿಗುಂಟೋ ಅವನೇ ವಿಶ್ವಕರ್ಮ. ಅವನಲ್ಲಿಯೇ ಈ ಸರ್ವಭುವನಗಳೂ ಹುಟ್ಟಿದವು. ಅವನಿಂದಲೇ ಈ ಸಮಸ್ತ ಸಂಕಲ್ಪರೂಪವಾದ ಶಿಲ್ಪವು ಕಲ್ಪಿಸಲ್ಪಡುತ್ತದೆ. ಆ ವಿಶ್ವಕರ್ಮನೇ ಪರಮಾತ್ಮನು. ಅವನೇ ಆದಿಶಿಲ್ಪಿ"[೬] ಆಗಿದ್ದಾನೆ. ವಿಶ್ವದ ಸೃಷ್ಟಿಗೆ ತನ್ನ ಐದು ಜನ ಮಕ್ಕಳಿಗೆ ಜಗತ್ತನ್ನು ಶಿಲ್ಪಮಯವಾಗಿಸಬೇಕೆಂದು ಆಜ್ಞಾಪಿಸುತ್ತಾನೆ. "ಈ ಪಂಚಬ್ರಹ್ಮರ ವಂಶಜರೇ ೧೨೫ ಗೋತ್ರ ಋಷಿಗಳಾಗಿ ಲೋಕವನ್ನು ಶಿಲ್ಪಮಯವಾಗಿಸಿದಂತೆ ಶಿವನೇ ಮನುವಾದ ಕಮ್ಮಾರ, ವಿಷ್ಣುವೇ ಮಯನಾದ ಬಡಿಗ, ಬ್ರಹ್ಮನೇ ತ್ವಷ್ಟನಾದ ಕಂಚುಗಾರ, ಇಂದ್ರನೇ ಶಿಲಾಕರ್ಮಿಯಾದ ಶಿಲ್ಪಿ ಹಾಗೂ ಸೂರ್ಯನೇ ವಿಶ್ವಜ್ಞನಾದ ಅಕ್ಕಸಾಲಿಗ. ವಿಶ್ವಕರ್ಮನೇ ಆಯಶಿಲ್ಪ, ದಾರುಶಿಲ್ಪ, ತಾಮ್ರಶಿಲ್ಪ, ಶಿಲಾಶಿಲ್ಪ, ಸುವರ್ಣಶಿಲ್ಪ ಎಂಬ ಪಂಚ ವಿದ್ಯೆಗಳನ್ನು ತನ್ನ ಐದು ಮಕ್ಕಳಿಗೆ ಬೋಧಿಸಿ ಲೋಕಕಲ್ಯಾಣಕ್ಕೆ ಸಿದ್ಧಗೊಳಿಸಿದನು. ಹೀಗೆ ಪಂಚಶಿಲ್ಪ ಕಾಯಕ ನಿಷ್ಠರಾಗಿದ್ದರಿಂದಲೇ ಇವರಿಗೆ ಪಂಚಾಳರೆಂದು ಕರೆಯುತ್ತಾರೆ."[೭]

ಪಂಚಾಳರು

೧. ಕಂಬಾರ/ಕಮ್ಮಾರ - ಸಾನಗಗೋತ್ರ - ಮನು ಋಷಿ

೨. ಬಡಿಗೇರ/ಬಡಿಗ - ಸನಾತನಗೋತ್ರ - ಮಯ ಋಷಿ

೩. ಕಂಚುಗಾರ - ಅಹಭೂನ ಗೋತ್ರ - ತ್ವಷ್ಟ ಋಷಿ

೪. ಶಿಲ್ಪಗಾರಿಕೆ – ಪ್ರತ್ನಸ ಗೋತ್ರ – ಶಿಲ್ಪಿ

೫. ಅಕ್ಕಸಾಲಿಗ/ಪತ್ತಾರ – ಸುಪರ್ಣಸ – ವಿಶ್ವಜ್ಞ

ವಿಶ್ವಕರ್ಮನ ಐದು ಬಗೆಯ ವೃತ್ತಿ ವಾರಸುದಾರ ಪಂಚಾಳರು ಪರಸ್ಪರರಲ್ಲಿ ಸಹೋದರತ್ವದ ಭಾವನೆಯನ್ನು ಹೊಂದಿದವರಾಗಿದ್ದಾರೆ. ಇವರಲ್ಲಿ ಒಬ್ಬರೇ ಐದು ವೃತ್ತಿಗಳನ್ನು ಮಾಡುವುದು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಆದರೆ ಎರಡು–ಮೂರು ವೃತ್ತಿಗಳನ್ನು ಮಾಡುತ್ತಾರೆ. ಶಾಸನಗಳಲ್ಲಿಯೂ ಪಂಚಾಳರ ಉಲ್ಲೇಖಗಳು ಬರುತ್ತವೆ. "ಕ್ರಿ.ಶ.೧೩೧೨ರ ಕೃಷ್ಣರಾಜ ಪೇಟೆ ತಾಲೂಕು ಬೈರಾಪುರದ ಶಾಸನದಲ್ಲಿ ಪಾಂಚಾಳರಿಗೆ ಆಯಿ ಘಂಡುಗ ಗದ್ದೆಯನ್ನು ಬೈರಾಪುರದ ಮಹಾಜನರು ನೀಡಿರುವ ವಿವರ ಸಿಗುತ್ತದೆ. ಈ ಎಲ್ಲ ಮಾಹಿತಿಗಳು ಅಕ್ಕಸಾಲೆ, ಕಮ್ಮಾರಿಕೆ, ಬಡಿಗ ವೃತ್ತಿಗಳು ಒಂದೇ ಕುಟುಂಬದ ವೃತ್ತಿಯಾಗಿದ್ದು, ಒಂದೇ ಮೂಲದವೆನ್ನುವುದನ್ನು ದೃಢಪಡಿಸುತ್ತವೆ."[೮] ಕಂಬಾರಿಕೆ, ಬಡಿಗತನ, ಕಂಚುಗಾರಿಕೆ, ಶಿಲ್ಪಗಾರಿಕೆ, ಅಕ್ಕಸಾಲಿ ವೃತ್ತಿಗಳನ್ನು ಪಂಚಾಳರೇ ಪ್ರಾಚೀನ ಕಾಲದಿಂದಲೂ ನಿರ್ವಹಿಸಿಕೊಂಡು ಬಂದಿದ್ದಾರೆ. ಈ ವೃತ್ತಿಗಳು ಭಾರತದಂಥಹ ಕೃಷಿ ಪ್ರಧಾನ ರಾಷ್ಟ್ರಗಳಿಗೆ ಅತ್ಯಂತ ಅವಶ್ಯವಾದವುಗಳಾಗಿವೆ.

ಗ್ರಾಮ ಸಂಸ್ಕೃತಿಗೆ ಕಲಾತ್ಮಕವಾದ ಶಕ್ತಿಯನ್ನು ಪಂಚಾಳ ವರ್ಗಗಳು ನೀಡಿವೆ. ಭಾರತವು ರೈತರನ್ನು ಕೇಂದ್ರಿಕರಿಸಿ ಕೊಂಡಿದ್ದರೆ; ರೈತ ಪಂಚಾಳ ವರ್ಗಗಳನ್ನು ನಂಬಿಕೊಂಡವನಾಗಿದ್ದಾನೆ. ರೈತನಿಗೆ ಅವಶ್ಯಕವಾಗಿರುವ ಕೃಷಿ ಸಲಕರಣೆಗಳನ್ನು, ಹೆಂಡತಿ–ಮಕ್ಕಳಿಗೆ ಚಿನ್ನಾಭರಣಗಳನ್ನು ಮತ್ತು ಭಕ್ತಿಯಿಂದ ಪೂಜಿಸುವ ಮೂರ್ತಿಗಳನ್ನು ತಯಾರಿಸಿಕೊಡುವುದು ಪಂಚಾಳರ ಕಾಯಕವಾಗಿವೆ. ಇವರನ್ನು ಗ್ರಾಮೀಣರು ಆಯಗಾರರೆಂದು ಕರೆಯುತ್ತಾರೆ. 'ಆಯ ಪದ್ಧತಿ ಎನ್ನುವುದು ಬರೀ ಕೂಲಿಯಾಗಿರಲಿಲ್ಲ. ಅದಕ್ಕೆ ದೀರ್ಘಕಾಲಿಕವಾದ ಆಯಾಮಗಳಿದ್ದವು. ಪ್ರಾಪ್ತಿಗಿಂತ ಸಂತೃಪ್ತಿ ಮತ್ತು ಸಮುದಾಯಿಕ ಗುಣಗಳು ಅವುಗಳಿಗಿದ್ದವು. ಹೀಗಾಗಿ ಆಯಗಾರರು ಬರೀ ಕಾರ್ಮಿಕರಾಗಿರದೇ ಅವನೊಬ್ಬ ಜವಾಬ್ದಾರಿಯುತ ಬಾಬುದಾರರಾಗಿದ್ದರು. ಸಮಾಜದ ನೀತಿ ನಿರೂಪಣೆಯಲ್ಲಿ ಸಕ್ರಿಯ ಪಾಲುದಾರನಾಗಿದ್ದ ಬಗ್ಗೆ ಕನ್ನಡದ ಹಲವು ಶಾಸನಗಳು ತಿಳಿಸುತ್ತವೆ."[೯] ಪಂಚಾಳರು ಕೇವಲ ತಮ್ಮ ತಮ್ಮ ವೃತ್ತಿದಾರರು ಅಷ್ಟೇ ಆಗಿರಲಿಲ್ಲ. ಗ್ರಾಮದ ಪ್ರತಿಯೊಂದು ಕಾರ್ಯದಲ್ಲೂ ಸಕ್ರಿಯವಾಗಿ ತೊಡಗುತ್ತಿದ್ದರು. ತಮ್ಮ ಕೆಲಸಕ್ಕನುಗುಣವಾಗಿ ವರ್ಷಕ್ಕೊಮ್ಮೆ ರೈತನಿಂದ ಧವಸ–ಧಾನ್ಯಗಳ ರೂಪದಲ್ಲಿ ಆಯವನ್ನು ಪಡೆಯುತ್ತಿದ್ದರು. ಇವರು ಹಳ್ಳಿಗಳಲ್ಲಿ ಪ್ರತಿಗೌಡರಾಗಿ ಗೌರವದಿಂದ ಬದುಕುತ್ತಿದ್ದರು. ಇವರನ್ನು ಕಂಬಾರಗೌಡ, ಬಡಿಗ್ಗೌಡ, ಪತ್ತಾರಗೌಡ ಎಂದೇ ಹಳ್ಳಿಗರು ಕರೆಯುತ್ತಿದ್ದರು. ರಾಶಿ ಮಾಡುವ ಕಾಲಕ್ಕೆ ಕಣಕ್ಕೆ ಆಯಗಾರರನ್ನು ರೈತರು ತಪ್ಪದೇ ಕರೆಯಿಸಿಕೊಳ್ಳುತ್ತಿದ್ದರು ಎನ್ನುವುದು ತ್ರಿಪದಿ ಈ ರೀತಿ ಹೇಳಿದೆ. 'ಬಡಿಗೇರಣ್ಣ ಕಣಕ ಬಾರೋ ಬಣ್ಣದ ರ‍್ಯಾಗೋಲ ಕಣಕ ತಾರೋ'

ಎಂದು ಪಂಚಾಳ ಆಯಗಾರನಿಗೆ ಬೆಳೆದ ಧವಸ-ಧಾನ್ಯಗಳನ್ನು ನೀಡಿ ಗೌರವಿಸುವ ಸಂಸ್ಕೃತಿ ಭಾರತದಲ್ಲಿದೆ.

'ಗ್ರಾಮ ಸಂಸ್ಕೃತಿಯ ಅಂಗವಾಗಿ ಬೆಳೆದುಬಂದ ಆಯಗಾರರೆಂದು ಪ್ರಸಿದ್ಧರಾಗಿರುವ ಗ್ರಾಮೀಣ ಕಸುಬುದಾರರಲ್ಲಿ ಬಡಿಗೇರರು ಮುಖ್ಯರು. ವಿಶ್ವಕರ್ಮ ವಂಶದವರಾದ ಇವರೊಂದಿಗೆ ಕಮ್ಮಾರ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗರು ಬರುತ್ತಾರೆ. ಇವರೆಲ್ಲರೂ ಶಿಲ್ಪಕಾಯಕ ಪ್ರವರ್ತಕರು. ಇವರು ತಮ್ಮನ್ನು ವಿಶ್ವಕರ್ಮ ಬ್ರಾಹ್ಮಣರೆಂದು ಕರೆದುಕೊಳ್ಳುತ್ತಾರೆ. ಮತ್ತು ಅದನ್ನು ಪೌರಾಣಿಕ, ಐತಿಹ್ಯ, ಶಾಸ್ತ್ರ, ಪುರಾಣ, ವೇದೋಪನಿಷತ್ತುಗಳ ಆಧಾರಗಳಿಂದ ಪುಷ್ಟೀಕರಿಸುತ್ತಾರೆಂದು ಡಾ.ದಸ್ತಗೀರ ಅಲ್ಲಿಭಾಯಿ ಅವರು ಅಭಿಪ್ರಾಯಪಟ್ಟಿದ್ದಾರೆ. ಅವರು ಹೇಳಿದಂತೆ ಪಂಚಾಳರು ಪಂಚ ಕಸಬುಗಳನ್ನು ಮಾಡುವವರಾಗಿದ್ದು, ವಿಶ್ವಬ್ರಾಹ್ಮಣರೂ ಆಗಿದ್ದಾರೆ. ಎಂಬುದನ್ನು ಮೂಲಸ್ತಂಭ, ವಿಶ್ವಕರ್ಮ ಪುರಾಣ, ಋಗ್ವೇದಗಳು ಹೇಳಿವೆ.

ದ್ರಾವಿಡ ಸಾಮಾಜಿಕ ವ್ಯವಸ್ಥೆಯಲ್ಲಿ ವೃತ್ತಿಗಳು ಬಹುಮುಖ್ಯವಾಗಿವೆ. ವೃತ್ತಿದಾರರು ಶ್ರಮಿಕ ವರ್ಗದವರಾಗಿರುವುದರಿಂದ ಶ್ರಮ ಸಂಸ್ಕೃತಿಯನ್ನು ದ್ರಾವಿಡರಲ್ಲಿ ಕಾಣುತ್ತೇವೆ. ಜಾತಿಗಿಂತ ವೃತ್ತಿ ವರ್ಗಗಳು ಇಲ್ಲಿ ಮುಖ್ಯವಾಗುತ್ತವೆ. ದ್ರಾವಿಡ ಸಾಮಾಜಿಕ ವ್ಯವಸ್ಥೆಯಲ್ಲಿ ಬರುವ ಎಲ್ಲ ವೃತ್ತಿದಾರರಲ್ಲಿ ಸಮಾನ ಮನೋಭಾವವಿದ್ದವು. ಇಲ್ಲಿ ಪಂಚಾಳ ವೃತ್ತಿಗಾರರನ್ನು ಐದು ಬಗೆಯ ವೃತ್ತಿಗಾರರೆಂದು ಅವರು ಸಮಾವೇಶಗೊಂಡವರಾಗಿದ್ದಾರೆ ಎಂದು ತಿಳಿಸಲಾಗುತ್ತಿದೆ.

"ಕಂಬಾರ, ಬಡಗೇರ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗ - ಈ ಐದು ವೃತ್ತಿಯವರು ಸೇರಿ ಪಂಚಾಳರಾಗಿದ್ದಾರೆ. ಇವರೆಲ್ಲ ಗ್ರಾಮಸ್ಥರಿಗೆ ಅಗತ್ಯವಾದ ವಸ್ತುಗಳನ್ನು ಕಲಾತ್ಮಕವಾಗಿ ತಯಾರಿಸಿ ಕೊಡುತ್ತಾರೆ.

೧. **ಕಂಬಾರ:** ಕಬ್ಬಿಣದ ಕೆಲಸ, ಸಾಮಾನುಗಳನ್ನು ಮಾಡಿಕೊಡುವುದು.

೨. **ಬಡಗಿ, ಬಡಿಗೇರ:** ಕಟ್ಟಿಗೆ ಕೊರೆಯುದು, ಅಂದದ ಬಾಗಿಲು, ಕಿಟಕಿ ಮುಂತಾದ ವಸ್ತುಗಳನ್ನು ಸಿದ್ಧಪಡಿಸುವ ಮರಗೆಲಸಗಾರ.

೩. **ಕಂಚುಗಾರ:** ಲೋಹದ ಪಾತ್ರೆಗಳನ್ನು ಸಿದ್ಧಪಡಿಸುವ ಕೆಲಸಗಾರ.

೪. **ಶಿಲ್ಪಿ:** ಶಿಲೆಯಿಂದ ಶಿಲ್ಪವನ್ನು ಮಾಡುವುದು, ಕಲ್ಲಿನಿಂದ ಮೂರ್ತಿ ಮುಂತಾದ ವಸ್ತುಗಳನ್ನು ಕಲಾತ್ಮಕವಾಗಿ ತಯಾರಿಸುವ ಕುಶಲಕರ್ಮಿ.

೫. **ಅಕ್ಕಸಾಲಿಗ:** ಬಂಗಾರ, ಬೆಳ್ಳಿಯ ಆಭರಣಗಳನ್ನು ತಯಾರಿಸಿ ಕೊಡುವ ಸ್ವರ್ಣಕಾರ.

ಹೀಗೆ "ಗ್ರಾಮದ ಜನರಿಗೆ ಅವಶ್ಯಕವಾದಂಥ ವಿವಿಧ ಬಗೆಯ ಉಪಕರಣಗಳನ್ನು ಮಾಡಿಕೊಡುವವರೆಲ್ಲ ಸೇರಿ 'ಪಂಚಾಳ'ರೆನಿಸಿಕೊಳ್ಳುವರು. ಗ್ರಾಮ ಸಂಸ್ಕೃತಿಗೆ ಕಲಾತ್ಮಕತೆಯ ಸ್ಪರ್ಷ ನೀಡುವಲ್ಲಿ ಇವರ ಪಾತ್ರ ಮಹತ್ವದಾಗಿದೆ."[೧೦] ಗ್ರಾಮೀಣಭಿವೃದ್ಧಿಯಲ್ಲಿ ಸಕ್ರೀಯವಾಗಿ, ಸೃಜನಶೀಲತೆಯನ್ನು ಪಂಚಾಳರು ಮೆರೆದಿದ್ದಾರೆ. ದೇಶಿಗರಾಗಿ, ಮಂತ್ರಸಿದ್ಧ, ಬ್ರಹ್ಮಜ್ಞರಾಗಿದ್ದಾರೆ. ಪಾಂಚಾಳರ ಜ್ಞಾನ ಶಕ್ತಿ ವಿಶ್ವಕ್ಕೆ ಅವಶ್ಯಕವಾಗಿದೆ. ಸಮಾಜಕ್ಕೆ ಒಳ್ಳೆಯ ಸಂಸ್ಕೃತಿಯನ್ನು ನೀಡಬಲ್ಲ ಸಾಮರ್ಥ್ಯ ಇವರಿಗಿದೆ. ಸಿಂಧು ಕೊಳ್ಳದಲ್ಲಿ ದೊರೆತ ವಸ್ತುಗಳು ಪಾಂಚಾಳರ ಸಂಸ್ಕೃತಿಯನ್ನು ಖಚಿತಗೊಳಿಸುತ್ತವೆ. ಇವರುಗಳನ್ನು ವೃತ್ತಿಯಾಧಾರಿತವಾಗಿ ಪ್ರತ್ಯೇಕವಾಗಿ ಅಭ್ಯಸಿಸುವುದು ಅತ್ಯಂತ ಸೂಕ್ತ.

೩.೧. ಕಂಬಾರ/ಕಮ್ಮಾರ

ವಿಶ್ವಕರ್ಮನ ಹಿರಿಯ ಮಗ ಮನು. ಈ ವೃತ್ತಿಯ ಮೂಲ ಪುರುಷ. ಮನು ಸಾನಗ ಗೋತ್ರದವನಾಗಿದ್ದು, ಈತನ ಪತ್ನಿ ಕಾಂಚನಾದೇವಿ. ಈಕೆಯು ಅಂಗೀರಸ ಋಷಿಯ ಮಗಳಾಗಿದ್ದಾಳೆ. ಈ ಗೋತ್ರದ ಕುಶಲಕರ್ಮಿಗಳ ಕರ್ತವ್ಯ ಕಬ್ಬಿಣ ಕಾಯಕ. ಕಬ್ಬಿಣದಿಂದ ಕೃಷಿ ಹಾಗೂ ಕೃಷಿಯೇತರ ಕಾರ್ಯಗಳಿಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುವ ಕಸುಬನ್ನು ಕಂಬಾರ/ಕಮ್ಮಾರರು ಮಾಡುತ್ತಾರೆ. ಕಬ್ಬಿಣದ ಕೆಲಸವನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ಕಂಬಾರರು ಮಾಡುತ್ತಾರೆ. ಅದಕ್ಕೆ 'ಕಂಬಾರ ಸಾಲಿ' ಅಥವಾ 'ಕುಲುಮೆ ಮನೆ' ಎಂದು ಕರೆಯಲಾಗುತ್ತದೆ. ಪಂಚಾಳ ವರ್ಗದಲ್ಲಿ ಹಿರಿಯನಾಗಿರುವ ಕಂಬಾರ ಅಥವಾ ಕಮ್ಮಾರರನ್ನು ಕರ್ಮಹರ, ಲೋಹಕಾರ' ಎಂದು ಕರೆಯುತ್ತಾರೆ. ಕರ್ಮನ್ ಅಥವಾ ಕರ್ಬೋನ ಎಂಬ ಮೂಲ ಪದದಿಂದ ಕರ್ಮಹರ, ಕಮ್ಮಾರ, ಕಂಬರ, ಕಂಬಾರ ಎಂಬ ಪರ್ಯಾಯ ಪದಗಳಿಂದ ಗುರುತಿಸಲಾಗಿದೆ. ಕಂಬಾರರ ಮೂಲ ಪುರುಷ ಮನು–ದೇವಾನು ದೇವತೆಗಳಿಗೆ ಯುದ್ಧೋಪಯೋಗಿ ಆಯುಧೋಪಕರಣಗಳನ್ನು ನಿರ್ಮಿಸಿ ಕೊಡುತ್ತಿದ್ದನೆಂದು ಬ್ರಹ್ಮಾನಂದ ಪುರಾಣ ತಿಳಿಸಿಕೊಡುತ್ತದೆ. ಕಂಬಾರರನ್ನು 'ಆಯಸ್ಕಾರರು' ಎಂದು ತಿಳಿಯಲಾಗಿದೆ. ಆಯಸ ಎಂದರೆ ಕಬ್ಬಿಣ, ಕಬ್ಬಿಣದ ವಸ್ತು ಆಯುಧ ಮತ್ತು ರನ್ನವೆಂದು ಹೇಳಲಾಗುತ್ತದೆ. ಹಾಗೆಯೇ ಆಯಾಸ ಅಥವಾ ದಣಿವು ಇಲ್ಲದವರು, ಕಬ್ಬಿಣದ ಕೆಲಸವನ್ನು ಮಾಡಿದರೂ ದಣಿವು ಆಯಾಸ ಕಾಣದ ಕರ್ಮಿಗಳೇ 'ಆಯಸ್ಕಾರ'ರಾಗಿದ್ದಾರೆ.

ರಾಜತ್ವದ ಕಾಲದಲ್ಲಿ ಯುದ್ಧಕ್ಕೆ ಅವಶ್ಯಕವಾಗಿರುವ ರಥದ ಚಕ್ರಕೀಲು, ಶಸ್ತ್ರಾಸ್ತ್ರಗಳನ್ನು ತಯಾರಿಸಿ ಕೊಡುತ್ತಿದ್ದರು. ಇವರು ನಿರ್ಮಿಸಿ ಕೊಡುತ್ತಿದ್ದ ಸೂರ್ಯಾಸ್ತ್ರ, ಚಂದ್ರಾಸ್ತ್ರ, ಅರ್ಧಚಂದ್ರಸ್ತ್ರ, ಸರ್ಪಾಸ್ತ್ರ, ಅಗ್ನಿಅಸ್ತ್ರ, ಜಲಾಸ್ತ್ರ ಹಾಗೂ ದಿವ್ಯವಾದ ಬ್ರಹ್ಮಾಸ್ತ್ರಗಳನ್ನು ಅತ್ಯಂತ ಶ್ರದ್ಧೆ–ಭಕ್ತಿಯಿಂದ ಮಾಡಿಕೊಡುತ್ತಿದ್ದರಿಂದ ಅರಸರುಗಳು ವಿಜಯತ್ವವನ್ನು ಪಡೆಯುತ್ತಿದ್ದರು. ರಾಜನು ಸಾಮ್ರಾಜ್ಯವನ್ನು

ವಿಸ್ತರಿಸಬೇಕಾದರೆ ಶಸ್ತ್ರಾಗಾರದ ಕಡೆ ನೋಡಬೇಕಾಗುತ್ತಿತ್ತು. ಶಸ್ತ್ರಾಗಾರವೆಂದರೆ ಕಂಬಾರರು; ಕಂಬಾರರೆಂದರೆ ಶಸ್ತ್ರಗಳಾಗಿದ್ದವು. ಯುದ್ಧದ ಸಂದರ್ಭದಲ್ಲಿ ರಾಜರುಗಳಿಗೆ ಕಂಬಾರರ ಸಹಾಯ ಅವಶ್ಯಕವಾಗಿರುತ್ತಿತ್ತು. ರಾಜರುಗಳಿಂದ ಗೌರವಿಸಿಕೊಳ್ಳುತ್ತಿದ್ದ ಕಂಬಾರರು, ಎಲ್ಲ ಸಮಾಜದ ಗೌರವಕ್ಕೆ ಪಾತ್ರರಾಗಿದ್ದರು. ಇಂದಿಗೂ ಬ್ರಹ್ಮಾಸ್ತ್ರದ ಬಗ್ಗೆ ಪುರಾಣಗಳಲ್ಲಿ ಕೇಳಿ ತಿಳಿಯುತ್ತೇವೆ. ಎಲ್ಲ ಅಸ್ತ್ರಗಳಲ್ಲಿಯೇ ಶ್ರೇಷ್ಠವಾದದ್ದು ಎಂದು ಹೇಳಲಾಗುತ್ತದೆ. ಇದಕ್ಕೆ ಕಂಬಾರನ ಕಲಾ ಕೌಶಲ್ಯವೇ ಕಾರಣವಾಗಿರಬೇಕು. ಬತ್ತಳಿಕೆಯಲ್ಲಿರುವ ಬಾಣದ ತುತ್ತತುದಿಗೆ ಉಕ್ಕನ್ನು ಜೋಡಿಸಲಾಗಿರುತ್ತದೆ. ಈ ಚಾಣಾಕ್ಷತನವನ್ನು ಕಂಬಾರ ತನ್ನ ವೃತ್ತಿಯಲ್ಲಿ ಸೂಕ್ಷ್ಮವಾಗಿ ಗುರುತಿಸಿಕೊಂಡಿರುತ್ತಾನೆ. ಈಗಲೂ ದೊಡ್ಡ ದೊಡ್ಡ ಕಲ್ಲನ್ನು ಒಡೆಯುವ ದೊಡ್ಡ ಸುತ್ತಿಗೆ ತುದಿಗೆ ಉಕ್ಕನ್ನು ಜೋಡಿಸಲಾಗುತ್ತದೆ. ಇದರಿಂದ ಕಲ್ಲು ಬೇಗ ಸೀಳುವ ಸಾಧ್ಯತೆ ಇರುತ್ತದೆ. ಜೋಡನೆ ಮಾತ್ರ ಕಂಬಾರ ಸೂಕ್ಷ್ಮ ಪ್ರಜ್ಞೆಗೆ ಬಿಟ್ಟ ಕೆಲಸವಾಗಿದೆ. ಈ ಸೂಕ್ಷ್ಮ ಕೆಲಸಗಳನ್ನು ಮಾಡುವ ಕಂಬಾರರು ತಮ್ಮದೇ ಆದ ಒಂದು ನಿರ್ದಿಷ್ಟ ಪ್ರದೇಶವನ್ನು ಗುರುತಿಸಿಕೊಳ್ಳುತ್ತಾರೆ. ಕಂಬಾರರು ಕೆಲಸ ಮಾಡುವ ಸ್ಥಳಕ್ಕೆ ಬಹಳ ಪವಿತ್ರವಾದ ಹೆಸರಿದೆ. ಅದನ್ನು 'ಸಾಲಿ' ಎಂದು ಸಾಮಾಜಿಕರು ಕರೆಯುತ್ತ ಬಂದಿದ್ದಾರೆ. 'ಸಾಲಿ' ಎಂಬುದು ಸಂಸ್ಕೃತದ ಶಾಲಾ ಎಂಬ ಪದದ ಉತ್ಪತ್ತಿ. ಇದು ಕೇವಲ ಶಿಕ್ಷಣ ಸಂಸ್ಥೆಗಳು ವಿದ್ಯಾಭ್ಯಾಸ ನೀಡುವ ಕೇಂದ್ರವಲ್ಲ; ಕುಶಲಕರ್ಮಿ ಕೈಗಾರಿಕಾ ಕಾರ್ಯಾಗಾರವಾಗಿದೆ. ಹೀಗಾಗಿ ಕಬ್ಬಿಣದ ಕೆಲಸ ನಡೆಯುವ 'ಸಾಲಿ' 'ಕಂಬಾರಸಾಲಿ' ಎಂದು ಕರೆಯಲಾಗುತ್ತಿತ್ತು. 'ಒಂದು ಕಾಲದಲ್ಲಿ ಕಮ್ಮಾರಿಕೆ ಭಾರತದಲ್ಲಿ ಅತ್ಯಂತ ಪ್ರಬುದ್ಧವಾದ ಮಟ್ಟವನ್ನು ಮುಟ್ಟಿತ್ತು. ಜಗತ್ತಿನಲ್ಲಿ ಭಾರತದ ಉಕ್ಕು ಅತ್ಯಂತ ಬೇಡಿಕೆಯನ್ನು ಹೊಂದಿತ್ತು. ಈ ಬೇಡಿಕೆ ಇಲ್ಲಿ ತಯಾರಾಗುವ ಅತ್ಯುತ್ಕೃಷ್ಟವಾದ ಉಕ್ಕಿನ ಮೇಲೆ ಅವಲಂಬಿಸಿದೆ. ಕ್ರಿ.ಶ.೪ನೇ ಶತಮಾನದಲ್ಲಿ ತಯಾರಾದ ಸಮುದ್ರಗುಪ್ತನ ಅಲಹಬಾದ್ ಸ್ತಂಭಶಾಸನ ಶತಮಾನಗಳು ಕಳೆದರೂ ತುಕ್ಕು ಹಿಡಿಯದೇ ನಿಂತಿದೆ."[೧೧] ಕಂಬಾರಿಕೆಗೆ ಅವಶ್ಯಕವಾಗಿರುವ ಕಬ್ಬಿಣ, ಉಕ್ಕು ಭಾರತದಲ್ಲಿ ಹೇರಳವಾಗಿ ದೊರೆಯು ತ್ತಿತ್ತು. ಇದರಿಂದ ಕಂಬಾರಿಕೆ ವೃತ್ತಿಯೂ ಪ್ರಸಿದ್ಧಿಯನ್ನು ಪಡೆದಿತ್ತು.

ಯುದ್ಧೋಪಕರಣಗಳು ಮತ್ತು ಕಂಬಾರಿಕೆ

ಪ್ರಾಚೀನ ಮತ್ತು ಶ್ರೇಷ್ಠ ಸಂಸ್ಕೃತಿಯನ್ನು ಸಾರುವ ಭಾರತದಲ್ಲಿ ರಾಮಾಯಣ-ಮಹಾಭಾರತದಂಥಹ ಮಹಾಕಾವ್ಯಗಳನ್ನು ಕಾಣುತ್ತೇವೆ. ಇಲ್ಲಿ ಜರುಗಿರಬಹುದಾದ ಪ್ರಸಂಗಗಳೆಂದರೆ ಯುದ್ಧ ಸನ್ನಿವೇಶ, ಕವಿಗಳು ಯುದ್ಧಗಳನ್ನು ವೈಭವೀಕರಿಸಿರಬಹುದು. ಆದರೆ ಯುದ್ಧ ನಡೆದಿರುವುದಂತೂ ಸತ್ಯವೆನಿಸುತ್ತದೆ. ಪರಸ್ಪರ ರಾಜರುಗಳನ್ನು ಗೆಲ್ಲಲು ಯುದ್ಧ ಅನಿವಾರ್ಯವು ಆಗಿರುತ್ತದೆ. ಬರಿಗೈಲಿ ಇದ್ದವರೂ ಸಂದರ್ಭಕ್ಕನುಗುಣವಾಗಿ ತಮ್ಮ ಬತ್ತಳಿಕೆಗೆ ಬಾಣ, ಶಸ್ತ್ರಾಸ್ತ್ರಗಳನ್ನು

ತುಂಬಿಕೊಳ್ಳಬೇಕಾಗುತ್ತದೆ. ಅಲ್ಲಲ್ಲಿ ಶಸ್ತ್ರಾಗಾರಗಳನ್ನು ನಿರ್ಮಿಸುವ, ಶಸ್ತ್ರಗಳನ್ನು ತಯಾರಿಸುವ ಕಬ್ಬಿಣ, ಉಕ್ಕು ಕೆಲಸ ಮಾಡುವ ಕಂಬಾರ ಕುಶಲಕರ್ಮಿಗಳ ಸಹಾಯವನ್ನು ಪಡೆಯಬೇಕಾಗುತ್ತದೆ. ಇದು ಅವಶ್ಯಕವೂ ಆಗಿರುತ್ತದೆ. ಯುದ್ಧದಲ್ಲಿ ಶಸ್ತ್ರಗಳು ಪರಿಣಾಮಕಾರಿಗಳಾಗಿದ್ದರೆ ರಾಜನು ಉಳಿಯುತ್ತಾನೆ; ಇಲ್ಲದಿದ್ದರೆ ಅಳಿಯುತ್ತಾನೆ. ಇದು ಕಂಬಾರನ ವೃತ್ತಿ ಕೌಶಲ್ಯವನ್ನು ದೃಢಪಡಿಸುತ್ತದೆ.

ರಾಮಾಯಣದ ಕಾಲದಲ್ಲಿ ಯುದ್ಧವು ಮುಖ್ಯವಾಗಿ ರಾಮ–ರಾವಣರ ನಡುವೆ ಘನಘೋರವಾಗಿತ್ತು ಎಂದು ತಿಳಿಯಲಾಗುತ್ತದೆ. ಅದರ ಜೊತೆ ರಾಮ–ವಾಲ್ಮೀಕಿ, ಲಕ್ಷ್ಮಣ–ಇಂದ್ರಜಿತ್‌ರ ಯುದ್ಧವು ಜರುಗುತ್ತದೆ. ಇಲ್ಲಿ ಪ್ರಮುಖವಾಗಿ ಕಾಣುವ ಯುದ್ಧಾಸ್ತ್ರಗಳು ಮಹತ್ವತೆಯನ್ನು ಪಡೆಯುತ್ತವೆ. ಕರ್ನಾಟಕದ ಬಳ್ಳಾರಿ ಜಿಲ್ಲೆ ಕುಡತಿನಿ ಸಮೀಪದ ವೆಂಕಟಾಪುರದಲ್ಲಿ ಬೂದಿದಿನ್ನೆಯಿದೆ. ಅದನ್ನು ವಾಲಿದಿಬ್ಬವೆಂದು ಕರೆಯಲಾಗುತ್ತದೆ. ಇಲ್ಲಿ ರಾಮನು ಸುಗ್ರೀವನ ಸ್ನೇಹ ಪಡೆಯುವುದಕ್ಕಾಗಿ ವಾಲಿಯನ್ನು ಸಂಹರಿಸುತ್ತಾನೆ. ಅಲ್ಲಿ ದಿವ್ಯವಾದ ಅಸ್ತ್ರಗಳನ್ನು ರಾಮನು ಬಳಸುತ್ತಾನೆ. ಅಂದಿನ ಕಾಲದಲ್ಲಿ ದಿವ್ಯಾಸ್ತ್ರಗಳನ್ನು ರಾಮನಿಗೆ ತಯಾರಿಸಿದವರು ಕರ್ನಾಟಕದ ಕಂಬಾರರೇ ಆಗಿರಬೇಕು. "ರಾಮ–ಲಕ್ಷ್ಮಣ, ಸುಗ್ರೀವರ ನಡುವೆ ನಡೆದ ಒಪ್ಪಂದದಂತೆ ವಾಲಿಯನ್ನು ಹತ್ಯೆಗೆಯ್ಯಲು ರಾಮ ಒಪ್ಪಿಕೊಂಡನು. ಆದರೆ ಸುಗ್ರೀವನಿಗೆ ಬಲಿಷ್ಠನಾದ ವಾಲಿಯನ್ನು ಕೊಲ್ಲಲು ರಾಮನಲ್ಲಿರುವ ಶಸ್ತ್ರಾಸ್ತ್ರಗಳ ಬಗ್ಗೆ ಸಂದೇಹ ಉಂಟಾಗುತ್ತದೆ. ಅದಕ್ಕೆ ರಾಮನು ತನ್ನಲ್ಲಿರುವ ಶಕ್ತಿ–ಸಾಮರ್ಥ್ಯವನ್ನು ಹೊಂದಿದ ಶಸ್ತ್ರಾಸ್ತ್ರಗಳ ಬಗ್ಗೆ ಅವನಿಗೆ ತಿಳಿಸುವಾಗ ತನ್ನ ಬಾಣಗಳು ಕಾರ್ತಿಕೇಯ ವನದಲ್ಲಿ ಸಿದ್ಧವಾದವು. ಅವು 'ಹೇಮವಿಭೂಷಿತಾ... ಮಹೇಂದ್ರಾಶನಿಸನ್ನಿಭಾಃ...... ಸುಪರ್ವಣಃ ಸುತೀಕ್ಷ್ಣಾಗ್ರಾಃ' ಎಂದು ಹೇಳುತ್ತಾನೆ. ಈ ಅವಧಿಯಲ್ಲಿ ಕಾರ್ತಿಕೇಯ ವನ ಕಮ್ಮಾರಿಕೆ ಚಟುವಟಿಕೆಯಿಂದ ಪ್ರಸಿದ್ಧಿಯನ್ನು ಪಡೆದಿರಬಹುದು."[೨] ಕುಡುತಿನಿಯ ವೆಂಕಟಾಪುರದ ವಾಲಿದಿಬ್ಬ, ಕಾರ್ತಿಕೇಯ ವನ ರಾಮಾಯಣದ ವಾಲಿವಧೆಯ ಪ್ರಸಂಗವನ್ನು ಸೂಚಿಸುತ್ತವೆ. ಇದು ಕರ್ನಾಟಕದ ಕಂಬಾರರ ವೃತ್ತಿ ಕೌಶಲ್ಯತೆಯನ್ನು ತಿಳಿಸುತ್ತದೆ. ಇದರಿಂದ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಕಂಬಾರರು ಪ್ರಸಿದ್ಧಿಯನ್ನು ಪಡೆದಿದ್ದರು ಎಂಬುದನ್ನು ತಿಳಿಯಲಾಗುತ್ತದೆ.

ರಾಮನು ಅಯೋಧ್ಯಯಿಂದ ಕರ್ನಾಟಕದ ಮೂಲಕ ಲಂಕೆಗೆ ಯುದ್ಧಕ್ಕೆ ಹೋಗುವಾಗ ಕಾರ್ತಿಕೇಯ ವನದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಯುದ್ಧಾಸ್ತ್ರಗಳನ್ನು ಕರ್ನಾಟಕದ ಕಂಬಾರರಿಂದ ತಯಾರಿಸಿಕೊಂಡು ಹೋಗಿರಬೇಕು. ರಾವಣನ ಸಂಹಾರದಲ್ಲಿ ರಾಮನಿಗೆ ಕಂಬಾರರು ತಯಾರಿಸಿದ ಶಸ್ತ್ರಾಸ್ತ್ರಗಳು ತುಂಬಾ ಸಹಾಯಕವಾಗಿದ್ದವು ಎಂಬುದನ್ನು ವಾಲಿಯುದ್ಧದ ರಾಮನ ಮಾತುಗಳು ಖಚಿತಪಡಿಸುತ್ತವೆ.

ಮಹಾಭಾರತ ಎಂಬುದು ಯುದ್ಧದ ಪ್ರಮುಖ ವಸ್ತುವೇ ಆಗಿದೆ. 'ಇಂಥಹದೊಂದು ಯುದ್ಧ ಕ್ರಿ.ಪೂ.೮೫೦ರ ಸುಮಾರಿನಲ್ಲಿ ನಡೆದಿರಬಹುದು"[೧೩] ಕುರುಭೂಮಿ ಅಥವಾ ಕುರುಕ್ಷೇತ್ರ ಇಂದಿನ ದೆಹಲಿ ಮತ್ತು ಮೀರತ್‌ನಗರಗಳು ಯುದ್ಧ ನಡೆದಿರುವ ಕ್ಷೇತ್ರ, ಇಲ್ಲಿ ೧೮ ಅಕ್ಷೋಹಿಣಿ ಸೈನ್ಯ ಹಾಗೂ ೧೦೦ ಕೌರವರು ಹತ್ಯೆಯಾದ ಪ್ರಸಂಗವಿದೆ. ಇಲ್ಲಿ ಬಳಸಲ್ಪಟ್ಟ ಶಸ್ತ್ರಾಸ್ತ್ರಗಳು ಅಪಾರ ಸಂಖ್ಯೆಯಲ್ಲಿವೆ. ಅಸಂಖ್ಯಾತ ಶಸ್ತ್ರಾಸ್ತ್ರಗಳು, ಬಾಣ, ಗದೆ, ಖಡ್ಗ, ಕವಚ, ಡಾಲು ಮುಂತಾದ ಕಬ್ಬಿಣದಿಂದ ತಯಾರಿಸಲ್ಪಟ್ಟ ವಸ್ತುಗಳನ್ನು ವರ್ಷಾನುಗಟ್ಟಲೆ ಕಂಬಾರರು ಮಾಡಿರಬೇಕು. ಕೃಷ್ಣನು ಭೀಷ್ಮನಿಗೆ ಬಳಸಲು ಪ್ರಯತ್ನಿಸಿದ ಸುದರ್ಶನ ಚಕ್ರವು ಸಾಕ್ಷಾತ್ ವಿಶ್ವಕರ್ಮನ ಮನುದ್ಭವ. ಕಂಬಾರರು ತಯಾರಿಸಿದ ಅತ್ಯಂತ ಸೂಕ್ಷ್ಮಾಯುಧವೆಂದು ಗುರುತಿಸಬೇಕಾಗುತ್ತದೆ. ದ್ರೋಣ–ಅರ್ಜುನಾದಿಗಳು ಬಳಸುತ್ತಿದ್ದ ಶಬ್ಧವೇದಿ ಅಸ್ತ್ರಗಳು ಕಂಬಾರರ ವೃತ್ತಿ ಚಾಣಾಕ್ಷತೆಯನ್ನು ತಿಳಿಸುತ್ತವೆ. ಯಾವುದೋ ಒಂದು ಸ್ಥಳದಿಂದ ಬಿಟ್ಟ ಬಾಣ ಇನ್ನಾವುದೋ ಒಂದು ಸ್ಥಳಕ್ಕೆ ಕೇಂದ್ರೀಕರಿಸುತ್ತದೆ. ಎಂದರೆ ಈ ಅಸ್ತ್ರವನ್ನು ತಯಾರಸಿದ ಕಂಬಾರ ಎಂಥಹ ಸೂಕ್ಷ್ಮಮತಿ, ಅನುಭವಶಾಲಿಯಾಗಿದ್ದನು ಎಂಬುದನ್ನು ತಿಳಿಸುತ್ತದೆ. ತೊಟ್ಟ ಬಾಣವನ್ನು ಮತ್ತೆ ಬಿಡುವುದಿಲ್ಲವೆಂದ ಕರ್ಣನಿಗೆ ಮತ್ತೊಮ್ಮೆ ಕಂಬಾರನಿಂದ ಅಂತಹ ಬಾಣ ತಯಾರಿಸಲು ಸಾಧ್ಯವಾಗದೇ ಇರಬಹುದು. ಕರ್ಣನ ಮಾತಿಗೆ ಮನ್ನಣೆ ನೀಡಲು ಕಂಬಾರನು ಒಂದು ಶ್ರೇಷ್ಠವಾದ ಅಸ್ತ್ರವನ್ನು ತಯಾರಿಸಿರಬೇಕು. ಈ ತಯಾರಿಕೆ ಯಲ್ಲಿ ಕಂಬಾರನು ತನ್ನೆಲ್ಲ ಜ್ಞಾನ–ಅನುಭವವನ್ನು ಬಳಸಿರಬೇಕು. ಈ ಅಸ್ತ್ರವನ್ನು ತಪಸ್ಸು ಮಾಡಿದ ರೀತಿಯಲ್ಲಿ ಕುಶಲಕರ್ಮಿ ತಯಾರಿಸಿರಬೇಕು. ಕರ್ಣಾರ್ಜುನರ ಯುದ್ಧ ಪ್ರಸಂಗಕ್ಕೆ ಕಂಬಾರರ ಶಸ್ತ್ರಾಸ್ತ್ರಗಳೇ ರೋಚಕತೆಯನ್ನು ಹುಟ್ಟಿಸುತ್ತವೆ. ಹಾಗೆಯೇ ಭೀಮ–ದುರ್ಯೋಧನರ ಗದಾಯುದ್ಧ ಪ್ರಸಂಗದಲ್ಲಿ ಭೂಮಿಯನ್ನು ನಡುಗಿಸಬಲ್ಲ ಶಕ್ತಿ ಸಾಮರ್ಥ್ಯದ ಗದೆಗಳನ್ನು ತಯಾರಿಸಿ ಕೊಡುವಲ್ಲಿ ಕಂಬಾರರ ಕಲಾ ನೈಪುಣ್ಯತೆಯನ್ನು ಕಾಣುತ್ತೇವೆ.

ಲೋಕ ಕಲ್ಯಾಣಕ್ಕಾಗಿ ಜರುಗುವ ಎಲ್ಲ ಕ್ರಿಯೆಗಳನ್ನು ಸಾಮಾನ್ಯವಾಗಿ ಎರಡು ವಿಧವಾಗಿ ಗುರುತಿಸಲಾಗುತ್ತಿದೆ. ಒಂದು ವೈದಿಕವಾದರೆ ಇನ್ನೊಂದು ಲೌಕಿಕ. ಇವುಗಳನ್ನು "ಲೋಕಾನುಗ್ರಹ ಕಾರಕಂ ಸ್ಯಾತ್ ಪಂಚವಿಧಮ್" ಎಂದು ಅಂದರೆ ಕಬ್ಬಿಣ, ಮರ, ಎರಕದ ಕೆಲಸ, ಶಿಲಾ ಶಿಲ್ಪ ಮತ್ತು ಸ್ವರ್ಣ ಶಿಲ್ಪವೂ ಲೌಕಿಕ ಕ್ರಿಯೆಯೆನಿಸುತ್ತದೆ ಎಂದು ಸ್ಮೃತಿಕಾರರು ಹೇಳಿದ್ದಾರೆ. ಲೌಕಿಕ ಕ್ರಿಯಾಶೀಲನಾಗಿರುವವರಲ್ಲಿ ಕಂಬಾರನು ಒಬ್ಬನಾಗಿದ್ದಾನೆ. ಕಂಬಾರ ಕ್ರಿಯಾಶಕ್ತಿಯಾಗಿರುವುದರಿಂದಲೇ ಅದ್ಭುತವಾದುದನ್ನು ಸೃಷ್ಟಿಸುತ್ತಾನೆ. ಅವನಿಂದ ಸೃಷ್ಟಿಗೊಂಡ ಯುದ್ಧೋಪಕರಣಗಳು ಕಂಬಾರನ ಕ್ರಿಯಾಶೀಲತೆಗೆ ಸಾಕ್ಷಿಯಾಗುತ್ತವೆ. ಯುದ್ಧೋಪಕರಣಗಳಿಂದ ಯುದ್ಧಗಳು ಅವಿಸ್ಮರಣೀಯವಾಗಿವೆ.

ಆದರೆ ಇವುಗಳನ್ನು ಜ್ಞಾನ ಮತ್ತು ಕ್ರಿಯಾಶಕ್ತಿಯಿಂದ ತಯಾರಿಸಿದ ಕುಶಲಕರ್ಮಿಗಳ ಹೆಸರು ಯಾವ ಕಾವ್ಯಗಳಲ್ಲಿಯೂ ಉಲ್ಲೇಖವಾಗದೇ ಇರುವುದು ಕಂಬಾರನ ದುರ್ದೈವತನವೆನ್ನಬಹುದಾಗಿದೆ.

ಸಿಂಧೂ ನಾಗರಿಕತೆಯ ಕಾಲದಲ್ಲೂ ಕಬ್ಬಿಣದ ಬಳಕೆ ಕಂಬಾರರ ಕೆಲಸಗಳನ್ನು ಗುರುತಿಸುತ್ತೇವೆ. "ಅವರು ತೀರಾ ಸರಳವಾದ ಎರಕಯೊಯ್ದು ಮಾಡಿದ ಕಂಚಿನ ಉಳಿಗಳನ್ನು ಬಳಸುತ್ತಿದ್ದರು. ಮರದ ಹಿಡಿಯನ್ನು ಹಾಕಬಹುದಾದ ತೂತಿರುವ ಕೊಡಲಿ ಮತ್ತು ಪಿಕಾಸಿಯನ್ನು ಮಾಡುವುದು ಸಿಂಧೂ ಕುಶಲಕರ್ಮಿಗಳಿಗೆ ಅಸಾಧ್ಯವಾಗಿರಲಿಲ್ಲ."[೧೪] ಸಿಂಧೂ ನಾಗರಿಕತೆಯಲ್ಲಿ ಕಂಬಾರಿಕೆ ವೃತ್ತಿ ಬಳಕೆಯಲ್ಲಿತ್ತು. ಇಲ್ಲಿಯ ಕಂಬಾರರಿಗೆ ಯಾವ ಉಪಕರಣಗಳು ಅಸಾಧ್ಯವೆನಿಸುವಂತಿರಲಿಲ್ಲ. ಎಂಥಹ ಉಪಕರಣಗಳನ್ನಾದರೂ ತಯಾರಿಸುವ ಜಾಣ್ಮೆ ಕಂಬಾರರಿಗಿತ್ತು. "ರೈತರು ಪಶು ಸಂಗೋಪನೆ ಅಲೆಮಾರಿ, ಗುಲಾಮರು, ನಗರದ ಬಡವರು, ಕುಶಲಕರ್ಮಿಗಳು, ಪುರೋಹಿತರು, ಆಳುವವರು ಹಾಗೂ ಇವರನ್ನು ನಂಬಿಕೊಂಡ ಯೋಧರು, ಲಿಪಿಗಾರರು, ಸೇವಕರು ಇದ್ದ ಚೆನ್ನಾಗಿ ಅಭಿವೃದ್ಧಿಯಾದ ವರ್ಗ ಸಮಾಜವೊಂದರ ಚಿತ್ರಣ"[೧೫] ನಮಗೆ ದೊರೆಯುತ್ತದೆ. ಹರಪ್ಪ ನೆಲೆಗಳನ್ನು ಗುರುತಿಸುವಾಗ ಅಲ್ಲಿ ಕೆಲಸಗಾರರ ಮನೆಗಳು ಇದ್ದವೆಂಬುದು ತಿಳಿದುಬರುತ್ತವೆ. ಧಾನ್ಯಗಳನ್ನು ಸಂಗ್ರಹಿಸುವ ನೆಲವು ಹರಪ್ಪದಲ್ಲಿ ಕಂಡುಬರುತ್ತದೆ. ಅಲ್ಲಿಯ ಕಟ್ಟಡವನ್ನು ಬ್ರಹದಾಕಾರದ ಕಣಜವೆಂದು ಭಾವಿಸಬಹುದಾಗಿದ್ದು, "ಲೋಹ ಕೆಲಸಗಾರರ ಕುಲುಮೆಯೂ ಸಹ ಇಲ್ಲಿಯೇ ಹತ್ತಿರದಲ್ಲಿದೆ."[೧೬]

ವ್ಯವಸಾಯ ಮತ್ತು ಕಂಬಾರಿಕೆ

ಕೃಷಿ ಪ್ರಧಾನವಾದ ಭಾರತದಲ್ಲಿ ವ್ಯವಸಾಯಗಾರಿಕೆಯೇ ಪ್ರಮುಖ ಕಸಬು. ಒಕ್ಕಲುತನವನ್ನು ನಂಬಿಕೊಂಡು ಜೀವನ ಸಾಗಿಸಲಾಗುತ್ತಿದೆ. ಈ ಕೃಷಿ ಕೆಲಸಕ್ಕೆ ಅಗತ್ಯವಾಗಿರುವ ಉಪಕರಣಗಳನ್ನು ಮಾಡಿಕೊಡುವವನೇ ಕಂಬಾರ ಕುಶಲಕರ್ಮಿ. ಕೃಷಿಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುವುದ ರೊಂದಿಗೆ ಗೃಹಬಳಕೆಗೆ ಸಂಬಂಧಿಸಿಯೂ ವಸ್ತುಗಳನ್ನು ಕಂಬಾರನು ತಯಾರಿಸುತ್ತಿದ್ದನು. ಸಮುದಾಯದ ವಸ್ತುಗಳನ್ನು ತಯಾರಿಸಿ ಕೊಡುವ ಕಂಬಾರನಿಗೆ ತನಗೆ ಅವಶ್ಯಕವಾಗಿರುವ ವಸ್ತುಗಳನ್ನು ಮೊದಲು ತಾನು ತಯಾರಿಸಿಕೊಳ್ಳುತ್ತಿದ್ದನು.

ಕಂಬಾರಿಕೆಯ ಸಾಧನೋಪಕರಣಗಳು

ಕುಲುಮೆ

ತಿದಿ

ಅಡಿಗಲ್ಲು

ದೊಡ್ಡ ಸುತ್ತಿಗೆ

ಸಣ್ಣ ಸುತ್ತಿಗೆ

ಇಕ್ಕಳ

ಚಾಣಗಳು

ಚಮ್ಮಟಿಗೆ

ಪೋಗರ(ಪಾಗರಿ) ರಂಧ್ರ ಮಾಡುವ ಸಾಧನ

ಪೋಗರನಟ್ – (ರಂಧ್ರ ಮಾಡುವಾಗ ವಸ್ತುವಿನ ಕೆಳಗೆ ಬಳಸುವ ಸಾಧನ)

ಸರಗೋಲು

ಇದ್ದಿಲು

ನೀರಿನ ದೋಣಿ

ಕಂಬಾರ ಸಾಲಿ ಮತ್ತು ಕುಲುಮೆ

ಕಂಬಾರನು ತಾನು ಉಪಕರಣಗಳನ್ನು ತಯಾರಿಸಲು ಒಂದು ಬಯಲು ಪ್ರದೇಶವನ್ನು ಗುರುತಿಸುತ್ತಾನೆ. ಸುತ್ತಲೂ ಗೋಡೆಗಳನ್ನು ನಿರ್ಮಿಸಿಕೊಂಡು, ನೆರಳಿಗಾಗಿ ತಗಡಿನ ಅಥವಾ ಸಿಮೆಂಟಿನ ಶೀಟ್‌ಗಳನ್ನು ಮೇಲ್ಛಾವಣಿಯಾಗಿ ಹೊದಿಸುತ್ತಾನೆ. ತಾನು ಹೊತ್ತಿಸುವ ಬೆಂಕಿಯ ಕಿಡಿಯಿಂದ ಸಾಮಾಜಿಕರಿಗೆ ತೊಂದರೆಯಾಗದಂತೆ ಜಾಗೃತಿವಹಿಸುತ್ತಾನೆ. ನಾಲ್ಕು ಗೋಡೆಗಳ ಮಧ್ಯದಲ್ಲಿ ಬೆಂಕಿ ಹೊತ್ತಿಸಲು ಕುಲುಮೆ ತಯಾರಿಸುತ್ತಾನೆ. ಚಿಕ್ಕ ಗೋಡೆಯಾಕಾರದಲ್ಲಿ ಐದು ಹಂತದಲ್ಲಿ ಒಂದರ ಮೇಲೊಂದು ಇಟ್ಟಿಗೆ ಅಥವಾ ಕಲ್ಲಿನಿಂದ ಕಟ್ಟುತ್ತಾನೆ. ಕೊನೆಗೆ ಐದನೇ ಹಂತದಲ್ಲಿ ತಲೆಯ(ಶಿರ) ಆಕಾರದಂತೆ ಕಲ್ಲುಮಣ್ಣಿನಿಂದ ತಯಾರಿಸುತ್ತಾನೆ. ಮೇಲ್ತುದಿ ಕಳಸದಂತೆ ಕಾಣುತ್ತದೆ. ಕೆಳಗೆ ಒಂದು ರಂಧ್ರವನ್ನು ಬಿಟ್ಟಿರುತ್ತಾನೆ. ರಂಧ್ರದ ಮೂಲಕ ತಿದಿಯಿಂದ ಗಾಳಿ ಬರಲು ವ್ಯವಸ್ಥೆ ಮಾಡಿಕೊಂಡಿರುತ್ತಾನೆ. ಗೋಡೆಯ ಮುಂದೆ ಕಬ್ಬಿಣ ಕಾಯಿಸಲು ವ್ಯವಸ್ಥೆ ಮಾಡಿಕೊಳ್ಳುತ್ತಾನೆ. ಕುಲುಮೆ ಕಂಬಾರನಿಗೆ ದೈವ ಸ್ವರೂಪಿಯಾಗಿದೆ. ಕಂಬಾರನಿಗೆ ಕುಲುಮೆ ಜೀವಾಳವಾಗಿದೆ.

ತಿದಿ

ಕಂಬಾರಿಕೆಗೆ ಅತ್ಯಂತ ಅವಶ್ಯಕವಾಗಿರುವ ಉಪಕರಣ. ಇದನ್ನು ತಯಾರಿಸಲು ಕಟ್ಟಿಗೆಯ ಹಲಗೆಗಳು ಹಾಗೂ ಹಸು ಅಥವಾ ಎಮ್ಮೆ ಕರುವಿನ ಚರ್ಮ ಬಳಸಲಾಗುತ್ತದೆ. ಕರುವಿನ ಚರ್ಮ ತೆಳುವಾಗಿರುತ್ತದೆ. ತಿದಿ ತಯಾರಿಸಲು ಚರ್ಮ ನಿರಿಗೆಗಟ್ಟಬೇಕು. ದಪ್ಪ ಚರ್ಮವಿದ್ದರೆ ಅದು ಬೇಗ ಕತ್ತರಿಸುತ್ತದೆ. ನಿರಿಗೆ ಗಟ್ಟಲು ಸಾಧ್ಯವಿರುವುದಿಲ್ಲ. ಕಂಬಾರರು ತಿದಿಗೆ ಅವಶ್ಯಕವಾಗಿರುವ ನಿರಿಗೆ ಬೀಳಲು ಎರಡು ಕಟ್ಟಿಗೆ ಹಲಗೆಗಳ ನಡುವೆ ಚರ್ಮ ಮಡಿಕೆ ಮಾಡಿ ನಾಲ್ಕೈದಾರು ದಿನಗಳವರೆಗೆ

ಇಡಲಾಗುತ್ತದೆ. ನಂತರ ಆ ಚರ್ಮಕ್ಕೆ ನಿರಿಗೆ ಬಿದ್ದಿರುತ್ತದೆ. ಚರ್ಮದ ಕೆಳ ತುದಿಯನ್ನು ಮರದ ಒಂದು ಹಲಗೆಗೆ ಚರ್ಮದ ಮೇಲ್ತುದಿಯನ್ನು ಇನ್ನೊಂದು ಮರದ ಹಲಗೆಗೆ ಜೋಡಿಸಲಾಗುತ್ತದೆ. ಮೇಲ್ಭಾಗದ ಹಲಗೆಯಲ್ಲಿ ಒಂದು ರಂಧ್ರವಿದ್ದು, ಅದರ ಮೂಲಕ ಚರ್ಮದಲ್ಲಿ ಗಾಳಿ ತುಂಬಲು ಸಹಾಯಕವಾಗುತ್ತದೆ. ಚರ್ಮ–ಕಟ್ಟಿಗೆ ಹಲಗೆಯಿಂದ ತಯಾರಾದ ತಿದಿಯ ಮುಂಭಾಗದಲ್ಲಿ ಒಂದು ಸಣ್ಣ ರಂಧ್ರವಿರುತ್ತದೆ. ಅದಕ್ಕೆ ಕೊಳವೆಯನ್ನು ಜೋಡಿಸಲಾಗುತ್ತದೆ. ತಿದಿ ಜೋಡಿಸಿದ ಕೊಳವೆಯ ಮತ್ತೊಂದು ತುದಿಯನ್ನು ಕುಲುಮೆಯ ರಂಧ್ರಕ್ಕೆ ಜೋಡಿಸಲಾಗುತ್ತದೆ. ಇದರಿಂದ ತಿದಿಯ ಮೂಲಕ ಕುಲುಮೆಗೆ ಗಾಳಿ ಬರುತ್ತದೆ. ಆದರೆ 'ಇತ್ತೀಚಿನ ದಿನಗಳಲ್ಲಿ ಚರ್ಮದ ತಿದಿಯ ಬದಲಾಗಿ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬ್ಲೋವರ ಬಳಸಲಾಗುತ್ತದೆ' ಎಂದು ಉತ್ತರ ಕನ್ನಡ ಜಿಲ್ಲೆಯ ಕಂಬಾರಿಕೆ ಕುರಿತು ಅಧ್ಯಯನ ಮಾಡಿದ ಡಾ.ಸೈಯದ ಜಮೀರುಲ್ಲಾ ಷರೀಫರು ಹೇಳಿದ್ದಾರೆ.

ಅಡಿಗಲ್ಲು

ಕುಲುಮೆಯಲ್ಲಿ ಕಾಯ್ದ ಕಬ್ಬಿಣವನ್ನು ಆಕಾರಕ್ಕೆ ತರಲು ಅಡಿಗಲ್ಲು ಅವಶ್ಯಕವಾಗಿರುತ್ತದೆ. ಕಂಬಾರಿಕೆಗೆ ಬಳಸುವ ಅಡಿಗಲು ದೊಡ್ಡ ಪ್ರಮಾಣದಲ್ಲಿರುತ್ತದೆ. ೧೨ ಇಂಚು ಉದ್ದ x ೬ ಇಂಚು ಅಗಲ, ೬ ಇಂಚು ದಪ್ಪವಾಗಿರುತ್ತದೆ. ಕೆಲವೊಂದು ಕಂಬಾರರು ಇದಕ್ಕಿಂತ ಹೆಚ್ಚಿನ ಗಾತ್ರದಲ್ಲಿ ೮ x೧೮ x ೬, ೧೦ x೨೪ x ೮,೯ ಅಳತೆಯ ಅಡಿಗಲ್ಲನ್ನು ಬಳಸುತ್ತಾರೆ. ಸಂಚಾರಿ ಕಂಬಾರರು ಇದಕ್ಕಿಂತ ಕಡಿಮೆ ಗಾತ್ರದ ಅಡಿಗಲ್ಲನ್ನು ಬಳಸುತ್ತಾರೆ. ಸಲಿಕೆ, ಗುದ್ದಲಿ, ಹಾರೆ, ಕುಡಲೋಲು, ಕೊಡಲಿ, ಕತ್ತಿ, ಉಳಿ, ಬಾಚಿ, ಉಪಕರಣಗಳನ್ನು ತಯಾರಿಸಲು ಅಡಿಗಲ್ಲನ್ನು ಬಳಸಲಾಗುತ್ತದೆ. ಅಡಿಗಲ್ಲು ಕಾಯ್ದ ಕಬ್ಬಿಣ ಹಾಗೂ ಸುತ್ತಿಗೆಯ ನೋವನ್ನು ಉಂಡು ತಾನು ಗಟ್ಟಿಯಾಗಿದ್ದೇನೆಂದು ನೀತಿಯನ್ನು ಕಲಿಸಿಕೊಡುತ್ತದೆ.

ದೊಡ್ಡ ಸುತ್ತಿಗೆ

ಬಂಡಿ ಹಾರೆ, ನೇಗಿಲು(ಕಬ್ಬಿಣ) ತಯಾರಿಸುವಾಗ ದೊಡ್ಡ ಸುತ್ತಿಗೆಯನ್ನು ಕಂಬಾರರು ಬಳಸುತ್ತಾರೆ. ಇದಕ್ಕೆ 'ಘನ್' ಎಂಧು ಕರೆಯುತ್ತಾರೆ. ದೊಡ್ಡ ಸುತ್ತಿಗೆ ೪, ೫ ಕಿಲೋ ಭಾರವಾಗಿದ್ದು ಇದನ್ನು ಕಂಬಾರನು ತನ್ನ ಸಹಾಯಕನಿಂದ ಅಥವಾ ರೈತನಿಂದ ಬಳಸಿಕೊಳ್ಳುತ್ತಾನೆ. ಕಾದ ಕಬ್ಬಿಣ ಸಾದಾ ಆಕಾರ ತಾಳಲು ಅಡಿಗಲ್ಲಿನ ಮೇಲೆ ಕಬ್ಬಿಣವಿಟ್ಟು ಸಹಾಯಕನಿಂದ ದೊಡ್ಡ ಸುತ್ತಿಗೆಯಿಂದ ಬಡಿಸುತ್ತಾನೆ. ಇದರ ಬಳಕೆ ಕಡಿಮೆ.

ಸಣ್ಣ ಸುತ್ತಿಗೆ

ಕಬ್ಬಿಣದ ಉಪಕರಣಗಳನ್ನು ತಯಾರಿಸಲು ಸಣ್ಣ ಸುತ್ತಿಗೆ ಬೇಕೇ ಬೇಕು. ಇದು ಕಂಬಾರನ ಬಲಗೈಯಲ್ಲಿ ಕಾಯಂ ಇರುತ್ತದೆ. ಕೆಲವರು ಎಡಗೈಯಲ್ಲಿ ಬಳಸುತ್ತಾರೆ. ಅರ್ಧದಿಂದ ಒಂದು

ಕಿಲೋ ಬಾರದ ಉಪಕರಣವಾಗಿದೆ. ಕಾಯ್ದ ಕಬ್ಬಿಣಕ್ಕೆ ಸ್ಪಷ್ಟ ರೂಪವನ್ನು ಕಂಬಾರನು ಸಣ್ಣ ಸುತ್ತಿಗೆಯಿಂದ ನೀಡುತ್ತಾನೆ. ಕೃಷಿಯೋಪಕರಣಗಳನ್ನು ಬಾಯ ಹೆಣೆಯುವಾಗ ಇದರ ಬಳಕೆ ಹೆಚ್ಚಾಗಿರುತ್ತದೆ. ಕಬ್ಬಿಣ ಪಟ್ಟಿಯಲ್ಲಿ ರಂಧ್ರ ತೆಗೆಯುವಾಗಲೂ ಸುತ್ತಿಗೆ ಪೆಟ್ಟನ್ನು ನೀಡುತ್ತಾರೆ. ಇದು ಚಾಕು ಮತ್ತು ಗುಂಡು ಆಕಾರದಲ್ಲಿರುತ್ತದೆ.

ಇಕ್ಕಳ

ಕಾಯ್ದ ಕಬ್ಬಿಣವನ್ನು ಆಕಾರಗೊಳಿಸಲು ಇದನ್ನು ಬಳಸುತ್ತಾರೆ. ಇಕ್ಕಳು ಇರದೇ ಹೋದರೆ ಕಬ್ಬಿಣ ಎಷ್ಟು ಪ್ರಮಾಣದಲ್ಲಿ ಕಾದಿದೆ ಎಂಬುದು ತಿಳಿಯುವುದಿಲ್ಲ. ಕಬ್ಬಿಣವನ್ನು ತನಗೆ ಬೇಕಾದ ಕಡೆ ತಿರುಗಿಸಲು ಕಂಬಾರನಿಗೆ ಇಕ್ಕಳ ಸಹಾಯಕವಾಗುತ್ತದೆ. ಸಣ್ಣ ಮತ್ತು ದೊಡ್ಡ ಆಕಾರದ ಇಕ್ಕಳು ಇರುತ್ತದೆ. ಇದನ್ನು ಕಂಬಾರನೇ ತಯಾರಿಸಿಕೊಳ್ಳುತ್ತಾನೆ. ಚಿಕ್ಕದು ೧೮ X ೧/೨ ಅಳತೆಯ ಕಬ್ಬಿಣ ಸಲಾಕೆಯಲ್ಲಿ ಒಂದೊಂದು ತುದಿಯನ್ನು ಸ್ವಲ್ಪ ಪ್ರಮಾಣದಲ್ಲಿ ಅಗಲಿಸಿ, ಮುಂಭಾಗದಲ್ಲಿ ಎರಡು ಅಗಲಿಸಿದ ಕಬ್ಬಿಣ ಸಲಾಕೆಗೆ ರಂಧ್ರ ತೆಗೆಯಲಾಗುತ್ತದೆ. ಇಕ್ಕಳದ ಬಾಯ್ತುದಿ ಪರಸ್ಪರ ವಿರುದ್ಧವಾಗಿಟ್ಟು ರಂಧ್ರಕ್ಕೆ ಕೀಲನ್ನು ಬಡಿಯಲಾಗುತ್ತದೆ. ಕರಾವಳಿ ಕಂಬಾರರು ಬಳಸುವ 'ಪಕ್ಕಡ' ಪದದಂತೆ ಗಟ್ಟಿಯಾಗಿ ಹಿಡಿಯುವ ಉಪಕರಣವಾಗಿದೆ. ದೊಡ್ಡ ಇಕ್ಕಳನ್ನು ಬಂಡಿ ಚಕ್ರದ ಹಳಿ ಬಿಗಿಯುವಾಗ ಹೆಚ್ಚಾಗಿ ಬಳಕೆಯಾಗುತ್ತದೆ.

ಚಾಣ

ಕಬ್ಬಿಣದ ಪಟ್ಟಿ, ಸಲಾಕೆಗಳನ್ನು ತುಂಡರಿಸಲು ಚಾಣ ಬಳಸಲಾಗುತ್ತದೆ. ೩, ೪, ೫ ಇಂಚು ಉದ್ದದ ಚಾಣಗಳಿರುತ್ತವೆ. ಸಣ್ಣ ಬಾಯಿ ಮತ್ತು ಅಗಲ ಬಾಯಿ ಚಾಳಗಳಿದ್ದು ಕಬ್ಬಿಣ ಪಟ್ಟಿಯಲ್ಲಿ ರಂಧ್ರ ತೆಗೆಯಲು ಬಳಸುತ್ತಾರೆ. ಇದರ ತುದಿಯು ಚೂಪಾಗಿರುತ್ತದೆ. ಕಂಬಾರನು ಅದರ ತುದಿಗೆ ಸರಿಯಾದ ಪ್ರಮಾಣದಲ್ಲಿ ನೀರನ್ನು ಕುಡಿಸಿರುತ್ತಾನೆ. ತುದಿ ಪದೇ ಪದೇ ಹಾಳಾಗುವುದಿಲ್ಲ.

ಬರಗಲ್ಲು/ಬಕ್ಕಸಗೋಲು

ಎರಡರಿಂದ ಮೂರು ಅಡಿ ಉದ್ದದ ಕಬ್ಬಿಣ ಸಲಾಕೆಗೆ ಬರಗಲ್ಲು\ಬಕ್ಕಸಗೋಲು ಅಥವಾ ಕೊಕ್ಕೆ ಎಂದು ಕರೆಯುತ್ತಾರೆ. ಇದು ೧ ನೂಲು ದಪ್ಪನೆಯ ಸಲಾಕೆ. ಹಿಂಭಾಗದ ತುದಿ ಕೈಯಿಂದ ಹಿಡಿಯುವಂತೆ ಮಾಡಲಾಗಿರುತ್ತದೆ. ಮುಂದಿನ ತುದಿಯನ್ನು ಎಲ್(L) ಆಕಾರದಲ್ಲಿ ಬಾಗಿಸಲಾಗುತ್ತದೆ. ಕರಾವಳಿ ಭಾಗದಲ್ಲಿ ಇದರ ತುದಿಯನ್ನು ಚಮಚ ಬಾಯಿಯಂತೆ ಆಕಾರವಿರುತ್ತದೆ. ಕಬ್ಬಿಣವನ್ನು ಕಾಯಿಸುವಾಗ ಇದ್ದಿಲನ್ನು ನೂಕಲು ಬಳಕೆಯಾಗುತ್ತದೆ. ಇದು ಕೂಡ ಕಂಬಾರನ ಕುಲುಮೆಯಿಂದ ತಯಾರಾಗುತ್ತದೆ.

ಪೋಗರ

ಇದನ್ನು ರಂಧ್ರ ತೆಗೆಯಲು ಬಳಸುತ್ತಾರೆ. ೪, ೫ ಇಂಚು ಉದ್ದದ ಅರ್ಧದಿಂದ ಒಂದು ಇಂಚು ದಪ್ಪವಾಗಿರುತ್ತದೆ. ಇದರ ತಲೆಭಾಗ ಸ್ವಲ್ಪ ಅಗಲವಾಗಿರುತ್ತದೆ. ಸುತ್ತಿಗೆ ಪೆಟ್ಟು ತಿನ್ನುತ್ತಿದೆ. ಇದರಿಂದ ಅಗಲು ಆಗಿರುತ್ತದೆ. ಕೆಳತುದಿ ದುಂಡಾಗಿರುತ್ತದೆ. ಕೆಲವು ಚೌಕ ಆಕಾರದವು ಇರುತ್ತವೆ. ಅಗಲವಾದ ಕಬ್ಬಿಣ ಪಟ್ಟಿಯಲ್ಲಿ ರಂಧ್ರ ತೆಗೆಯಲು ಪೋಗರ ಬಳಸುತ್ತಾರೆ. ಇದನ್ನು ಕಂಬಾರನೇ ತಯಾರಿಸಿಕೊಳ್ಳುತ್ತಾನೆ.

ಪೋಗರನಟ್

ಒಂದು ನೂಲು, ಅರ್ಧ, ಒಂದು ಇಂಚು ರಂಧ್ರಾಕಾರವಿರುವ ಅರ್ಧಇಂಚು ದಪ್ಪದ ಕಬ್ಬಿಣ ಪಟ್ಟಿ. ಇದು ಚೌಕಾರ ಮತ್ತು ದುಂಡಾಕಾರದಲ್ಲಿರುತ್ತದೆ. ಕಬ್ಬಿಣ ಪಟ್ಟಿಯ ರಂಧ್ರ ತೆಗೆಯುವಾಗ ಅದರ ಕೆಳಗೆ ಬಳಸುತ್ತಾರೆ.

ಕಂಬಾರನು ತನ್ನ ವೃತ್ತಿಗೆ ಪೂರಕವಾಗಿ ಇದ್ದಿಲು ಕಬ್ಬಿಣ ಸ್ವಚ್ಛಗೊಳಿಸುವ ಪುಡಿಯನ್ನು ಬಳಸುತ್ತಾನೆ. ಕಬ್ಬಿಣಕ್ಕೆ ನೀರು ಕುಡಿಸಲು ಕಲ್ಲಿನ ನೀರಿನ ದೋಣಿ ಹಾಗೂ ಮಣ್ಣನ್ನು ಬಳಸುತ್ತಾರೆ. ಹಳಿ ಬೆಸೆಯುವ ಸಂದರ್ಭದಲ್ಲಿ ಎರಡು ತುದಿಯ ಬೆಸೆಯುವಿಕೆಯ ಸಂದರ್ಭದಲ್ಲಿ ಆ ಜಾಗೆಯಲ್ಲಿ ಮಣ್ಣನ್ನು ಸ್ವಲ್ಪ ಸುರಿದು ಕಾಯಿಸುತ್ತಿದ್ದರು. ಇತ್ತೀಚೆಗೆ ಬೆಸೆಯುವಿಕೆಯ ಯಂತ್ರ(ವೆಲ್ಡಿಂಗ್ ಮಷೀನ್) ಬಂದಿರುವುದರಿಂದ ಕಂಬಾರರು ಕಬ್ಬಿಣ ಬೆಸೆಯುವುದು ಕಡಿಮೆಯಾಗಿದೆ. ಗಾಲಿಯ ಚಕ್ರಕ್ಕೆ ಹಳಿ ಬಿಗಿಯುವಾಗ ಕಾದ ಹಳಿಯನ್ನು ಎರಡು–ಮೂರು ದೊಡ್ಡ ಇಕ್ಕಳುಗಳಿಂದ ಎತ್ತಿಕೊಂಡು ಚಕ್ರಕ್ಕೆ(ಗಾಲಿ) ಹೊಂದಿಸುವಾಗ ಹಳಿ ಅಗಲಿಸಲು 'ಹಳಿಬಿಗಿಯುವ ನಾಯಿ' ಎಂದು ಕರೆಯುವ ವಸ್ತುವನ್ನು ಬಳಸಲಾಗುತ್ತಿತ್ತು. ಈಗ ಯಂತ್ರಗಳು ಬಂದಿವೆ. ವಿದ್ಯುತ್ ಚಾಲಿತ ಕಬ್ಬಿಣ ಕಾಯುವ ಮತ್ತು ಕಬ್ಬಿಣ ಬಡಿಯುವ ಯಂತ್ರಗಳಿವೆ. ಸಂಪೂರ್ಣ ಕಬ್ಬಿಣದ ಚಕ್ಕಡಿಗಳು ದೊರೆಯುತ್ತಿರುವುದರಿಂದ ಹಳಿಬಿಗಿಯುವುದು ನಿಂತುಹೋಗಿದೆ. ತೀದಿಯ ಬಳಕೆಯೂ ಕಡಿಮೆಯಾಗಿದೆ. ಕಾಲ ಎಷ್ಟೇ ಬದಲಾಗಿದ್ದರೂ ಕಂಬಾರನು ವಸ್ತುಗಳನ್ನು ತಯಾರಿಸಲು ಅಡಿಗಲ್ಲು, ಸುತ್ತಿಗೆ, ಚಾಣ, ಇಕ್ಕಳುಗಳನ್ನು ಬಳಸುವುದು ಅವಶ್ಯಕವಾಗಿದೆ.

ಕಂಬಾರರ ಸೇವೆಯು ಪ್ರತಿ ಹಳ್ಳಿಗಳಿಗೂ ಅವಶ್ಯ. ಆಯಸಗಾರರು, ವ್ಯವಸಾಯಗಾರರ ಅಗತ್ಯತೆಗನುಗುಣವಾಗಿ ಕೃಷಿಯೋಪಕರಣಗಳನ್ನು ಮಾಡಿಕೊಡಲು ಬೇಕಾಗುತ್ತಾರೆ. ರೈತರು ಮತ್ತು ಕಂಬಾರರ ನಡುವೆ ಉತ್ತಮವಾದ ಸಂಬಂಧಗಳು ಏರ್ಪಡುತ್ತಿದ್ದವು. ವರ್ಷದುದ್ದಕ್ಕೂ ಕೃಷಿ ಉಪಕರಣಗಳನ್ನು ಮಾಡಿ ಕೊಡುತ್ತಿದ್ದರು. ಪ್ರತಿಯಾಗಿ ರೈತರು ಬೆಳೆಯುವ ಧವಸ–ಧಾನ್ಯಗಳನ್ನು

ವರ್ಷಕ್ಕೊಮ್ಮೆ ಪಡೆಯುವ ಪದ್ಧತಿಯಿತ್ತು. ಈ ಪದ್ಧತಿಗೆ 'ಆಯ' ಪದ್ಧತಿಯೆಂದು ಕರೆಯುತ್ತಾರೆ. ಹಳ್ಳಿಗಳಲ್ಲಿ ಒಕ್ಕಲುತನದ ಕೆಲಸಗಳನ್ನು ಉಪಕರಣಗಳನ್ನು ತಯಾರಿಸಿಕೊಡುವುದರಿಂದ ಕಂಬಾರರು ಆಯವನ್ನು ಪಡೆಯುತ್ತಿದ್ದುದರಿಂದ ಆಯಗಾರರೆಂದು ಕರೆಯುತ್ತಿದ್ದರು. ಈಗ ವರ್ಷಕ್ಕೊಮ್ಮೆ ಆಯವನ್ನು ಪಡೆದು ಬದುಕು ನಡೆಸುವುದು ಕಂಬಾರರಿಗೆ ಕಷ್ಟಕರವಾಗಿದೆ. 'ಆಯ'ದ ಬದಲಾಗಿ ಕೆಲಸ ಅದೇ ಆದರೂ ಧವಸ-ಧಾನ್ಯದ ರೂಪ ಹಣದ ಸ್ವರೂಪವನ್ನು ಪಡೆದಿದೆ.

ಹಳ್ಳಿಗಳಲ್ಲಿ ಹಣದ ಮೌಲ್ಯ ನೋಟುಗಳು ಬದಲಾದರೂ ಕಂಬಾರನ ಮತ್ತು ಆತನು ಮಾಡಿಕೊಡುವ ವಸ್ತುಗಳ ಮೌಲ್ಯ ಕಡಿಮೆಯಾಗಿಲ್ಲ. ಇಂದಿಗೂ ಸಲಿಕೆ, ಗುದ್ದಲಿ, ಹಾರೆ ಅವಶ್ಯಕವಾಗಿವೆ. ನಿತ್ಯ ಬಳಕೆಗೆ ಬೇಕಾಗಿವೆ. ಇಂದಿಗೂ ಕೃಷಿಕನಿಗೆ ಕಂಬಾರನು ನೇಗಿಲನ್ನು ತಯಾರಿಸಿಕೊಟ್ಟರೆ ಮಾತ್ರ ರೈತ ನೇಗಿಲಯೋಗಿ ಆಗಲು ಸಾಧ್ಯವಿದೆ.

ಕಂಬಾರರು ತಯಾರಿಸುವ ವಸ್ತುಗಳು

ಕೃಷಿಯೋಪಕರಣ

ಪಿಕಾಸಿ

ಹಾರೆ

ಕತ್ತಿ

ಸಲಿಕೆ

ಗುದ್ದಲಿ

ಕೊಡಲಿ

ಕುಡಗೋಲು

ನೇಗಿಲು

ಕುಳ

ಕುರುಪಿ

ಕುಡ

ಗಾಲಿ ಚಕ್ರದ ಬಾಯಬಳೆ

ಗುಂಬದ ಕಟ್ಟುಬಳೆ(ಗುಮಕಟ್ ಬಳೆ)

ಬಂಡಿಕೀಲು

ಬಂಡಿಹಾರೆ

ಚಾಣ

ಸುತ್ತಿಗೆ

ಉಳಿ

ಬಾಚಿ

ಪಿಕಾಸಿ : ನೆಲವನ್ನು ಅಗೆಯಲು ಬಳಸುವ ಉಪಕರಣ. ರೈತ ಹೊಲ, ತೋಟ, ಗದ್ದೆಗಳಿಗೆ ಹೋಗುವಾಗ ಹೆಗಲ ಮೇಲೆ ಸದಾ ಇರುವ ಕೃಷಿ ಉಪಕರಣವಾಗಿದೆ. ೨ ರಿಂದ ೨ ೧/೨ ಇಂಚು ಅಗಲ, ೨ ಅಡಿ ಉದ್ದ, ೨ ರಿಂದ ೩ ನೂಲು ದಪ್ಪವಾದ ಕಬ್ಬಿಣ ಪಟ್ಟಿಯಿಂದ ಪಿಕಾಸಿಯನ್ನು ತಯಾರಿಸಲಾಗುತ್ತದೆ. ತುದಿ ಸ್ವಲ್ಪ ಅಗಲವಾಗಿರುತ್ತದೆ. ಕಬ್ಬಿಣ ಪಟ್ಟಿಯನ್ನು ವಿಶಾಲಕೋನಾಕಾರದಲ್ಲಿ ಬಾಗಿರುತ್ತದೆ. ಮೇಲ್ಭಾಗವನ್ನು ಬೆಂಕಿಯಲ್ಲಿ ಕಾಯಿಸಿ ತಿರುಗಿಸಲಾಗಿರುತ್ತದೆ. ೮ ರಿಂದ ೧೦ ಇಂಚು ತಿರುಗಿದ ಪಟ್ಟಿಯನ್ನು ಕಾಯಿಸಿ ವರ್ತುಲಾಕಾರವನ್ನು ಮಾಡುತ್ತಾರೆ. ಎದುರಿಗೆ ನೋಡಿದರೆ ೨ ೧/೨ ಇಂಚಿನ ರಂಧ್ರಾಕಾರ ಕಾಣುತ್ತದೆ. ಈ ರಂಧ್ರದಲ್ಲಿ ಉದ್ದನೆಯ ಕಟ್ಟಿಗೆ ಸೇರಿಸುತ್ತಾರೆ. ಇದರಿಂದ ನೆಲ ಅಗೆಯಲು ಸಹಾಯಕವಾಗುತ್ತದೆ.

ಹಾರೆ : ಮುಖ್ಯವಾಗಿ ಹಾರೆ ಎರಡು ವಿಧವಾಗಿ ಗುರುತಿಸಲಾಗಿದೆ. ಬಾವಿ ತೋಡಲು ಬಳಸುವ ರೈತೋಪಕರಣ. ಇನ್ನೊಂದು ಬಂಡಿ ಗಾಲಿಯ ಅಚ್ಚು. ಇಲ್ಲಿ ಬಾವಿ ತೋಡುವ ಉಪಕರಣವಾಗಿ ವಿವರಿಸಲಾಗಿದೆ. ೭ ರಿಂದ ೮ ಅಡಿ ಎತ್ತರದ ೧ ಇಂಚು ದಪ್ಪಗಿರುವ ಹಾರೆ ಕೆಳ ತುದಿ ಚಪ್ಪಟೆಯಾಗಿರುತ್ತದೆ. ಬಾಣದ ತುದಿಯಂತೆ ಚೂಪಾಗಿರುತ್ತದೆ. ಇದನ್ನು ಬಳಸಿಕೊಂಡು ರೈತರಿಗೆ ನೀರಿನ ಅನುಕೂಲತೆ ಒದಗಿಸುವ ಬಾವಿ ತೋಡುವುದಕ್ಕೆ ಬಳಕೆಯಾಗುತ್ತದೆ. ದೊಡ್ಡ ದೊಡ್ಡ ಕಲ್ಲುಗಳನ್ನು ಎಬ್ಬಿಸಲು ಕಲ್ಲಿನಲ್ಲಿ ರಂಧ್ರ ತೆಗೆದು ಸಿಡಿ ಮದ್ದು ಸ್ಫೋಟಿಸಲು ಹಾರೆ ಅವಶ್ಯ ಉಪಕರಣವಾಗಿದೆ.

ಕತ್ತಿ : ಇದು ಹರಿತವಾದ ಉಪಕರಣ. ಇದನ್ನು ಹಗ್ಗ, ಬಟ್ಟೆ, ಇತರ ವಸ್ತುಗಳನ್ನು ಕತ್ತರಿಸಲು ಬಳಸುತ್ತಾರೆ. ೧೨ ರಿಂದ ೮ ಇಂಚು ಉದ್ದ ಅರ್ಧ ಇಂಚು ಅಗಲ ಪಟ್ಟಿಯಲ್ಲಿ ತಯಾರಿಸಲಾಗುತ್ತದೆ. ಹಿಂಬದಿ ಪಟ್ಟಿಯ ನಾಲ್ಕು ಏಣುಗಳನ್ನು ಮುರಿಯಲಾಗಿದ್ದು ಕೈಯಲ್ಲಿ ಗಟ್ಟಿಯಾಗಿ ಹಿಡಿಯಲು ಬರುವಂತೆ ಮಾಡಲಾಗಿರುತ್ತದೆ. ಮುಂದಿನ ಅರ್ಧಭಾಗದಲ್ಲಿ ಕೆಳಭಾಗ ಸುತ್ತಿಗೆಯಿಂದ ಬಡಿದು ಚಪ್ಪಟೆ ಮಾಡಲಾಗಿರುತ್ತದೆ. ಕೆಳಭಾಗದ ತುತ್ತ ತುದಿ ಕೂದಲೇಳೆ ಆಕಾರದಷ್ಟಾಗಿದ್ದು ಹರಿತವಾಗಿರುತ್ತದೆ.

ಸಲಿಕೆ : ಅಗೆದ ಮಣ್ಣನ್ನು ಹೊರ ತೆಗೆಯುವ, ಭೂಮಿಗೆ ನೀರೂನಿಸಲು ಬಳಸುವ ಉಪಕರಣವಾಗಿದೆ ೮ ಇಂಚು ಅಗಲ ೧೦ ರಿಂದ ೧೨ ಇಂಚು ಉದ್ದವಿರುತ್ತದೆ. ಸಲಿಕೆಯ ಮೇಲ್ಭಾಗದಲ್ಲಿ ಕಟ್ಟಿಗೆ ಅಳವಡಿಸಲು ೨ ಇಂಚಿನ ವರ್ತುಲ ಪಟ್ಟಿ ಜೋಡಿಸಲಾಗುತ್ತದೆ. ಮೇಲಿನ ವರ್ತುಲದ ಪಟ್ಟಿ ಸ್ವಲ್ಪ ಭಾಗ ಕೆಳ ಭಾಗಕ್ಕೂ ಇರುತ್ತದೆ. ತಗಡಿಗೂ ಮತ್ತು ಕಬ್ಬಿಣ ಪಟ್ಟಿಗೂ ರಂಧ್ರ ತೆಗೆದು ಕಬ್ಬಿಣ ಸಲಾಕೆ

ತುಂಡನ್ನು ಜೋಡಿಸುತ್ತಾರೆ. ಈಗ ವೆಲ್ಡಿಂಗ್ ಮಾಡಲಾಗುತ್ತದೆ. ಹೊಲ, ತೋಟ, ಗದ್ದೆಗಳಿಗೆ ನೀರು ಹಾಯಿಸಲು ಸಲಿಕೆ ಅವಶ್ಯಕವಾಗಿದೆ.

ಗುದ್ದಲಿ : ನೆಲವನ್ನು ಅಗೆಯಲು ಬಳಸುತ್ತಾರೆ. ೨ ಅಡಿ ಎತ್ತರ ೨ ಇಂಚು ಅಗಲ ದಪ್ಪದ ಕಬ್ಬಿಣ ಪಟ್ಟಿಯಲ್ಲಿ ಮಧ್ಯಭಾಗದಲಿ ಅಂಡಾಕಾರದ ರಂಧ್ರ ಮಾಡುತ್ತಾರೆ. ಅದರಲ್ಲಿ ಕಟ್ಟಿಗೆ ಅಥವಾ ಕಾಂವ್ ಹಾಸಲು ಬೇಕು. ಕೆಳ ಮತ್ತು ಮೇಲ್ಭಾಗವನ್ನು ಬೆಂಕಿಯಲ್ಲಿ ಕಾಯಿಸಿದ ಕಂಬಾರ ಚೂಪು ಮಾಡುತ್ತಾನೆ. ಗುದ್ದಲಿಯ ಒಂದು ವೈಶಿಷ್ಟ್ಯವೆಂದರೆ ಅದರ ಕೆಳಭಾಗದಿಂದ ಮಣ್ಣು ಅಗಿಯುತ್ತಾರೆ. ಮೇಲ್ಭಾಗದಿಂದಲೂ ಅಗೆಯಲು ಅವಕಾಶವಿರುತ್ತದೆ. ಕಂಬಾರರು ಗುದ್ದಲಿಯನ್ನು ಪದೇ ಪದೇ ಬಾಯ ಹೆಣೆಯುತ್ತಾರೆ.

ಕೊಡಲಿ : ಕಟ್ಟಿಗೆ ತುಂಡರಿಸಲು ಬಳಸುವ ಉಪಕರಣ. ಹೊಲ, ತೋಟಗಳಲ್ಲಿರುವ ಗಿಡ-ಗಂಟಿ, ಮರ, ಬೇರು ಕತ್ತರಿಸಿ ಭೂಮಿ ಹಸನುಗೊಳಿಸಲು ಕೊಡಲಿ ಬೇಕಾಗುತ್ತದೆ. ಕೊಡಲಿಯಲ್ಲಿ ಸಣ್ಣ ಮತ್ತು ದೊಡ್ಡ ಕೊಡಲಿಗಳನ್ನು ಕಾಣುತ್ತೇವೆ. ಸಣ್ಣ ಕೊಡಲಿ ೮ ಇಂಚು ಎತ್ತರ, ೩ ೧/೨ ಇಂಚು ಅಗಲ ಮತ್ತು ೧ ಸೆಂ.ಮೀ. ದಪ್ಪವಿರುತ್ತದೆ. ಮೇಲ್ಭಾಗ ೩ ಸೆಂ.ಮೀ. ರಂಧ್ರವಿರುತ್ತದೆ. ಕೆಳಭಾಗ ಚೂಪಾಗಿರುತ್ತದೆ. ದಾರದ ಮೇಲೆ ಸಹಜವಾಗಿಟ್ಟರು ದಾರ ತುಂಡಾಗುತ್ತದೆ. ಕೊಡಲಿಯ ಬಾಯಿ ಹರಿತವಾಗಿರುತ್ತದೆ. ದೊಡ್ಡ ಕೊಡಲಿ ೯ ಇಂಚು ಎತ್ತರ ೩ ೧/೨ ಇಂಚು ಅಗಲ ಮತ್ತು ೫ ಸೆಂ.ಮೀ. ದಪ್ಪವಿರುತ್ತದೆ. ಮೇಲ್ಭಾಗ ೪ ಸೆಂ.ಮೀ. ರಂಧ್ರವಿರುತ್ತದೆ. ಮೇಲ್ಭಾಗದಲ್ಲಿ ೫ ಸೆಂ.ಮೀ. ದಪ್ಪವಿರುವ ಕೊಡಲಿ, ತುದಿಯಲ್ಲಿ ಕೂದಲೆಳೆಯಷ್ಟು ಚೂಪಾಗಿರುತ್ತದೆ. ಕೊಡಲಿಯ ಬಾಯಿ ಮತ್ತು ರಂಧ್ರ ಮಾಡುವುದು ಕಂಬಾರನ ಅನುಭವಜ್ಞಾನದಿಂದ ಮಾತ್ರ ಸಾಧ್ಯವಾಗುತ್ತದೆ. ಕೆಲವೊಂಧು ಮೀಸೆಯಾಕಾರದ ಹೇಳಿ ಮಾಡಿಸಿದ ಸಣ್ಣ ಕೊಡಲಿಗಳನ್ನು ಕಂಬಾರ ಚಾಣಾಕ್ಷತೆಯಿಂದ ತಯಾರಿಸುತ್ತಾನೆ. ಇವುಗಳಿಗೆ ಮಧ್ಯಮ ಪ್ರಮಾಣದಲ್ಲಿ ನೀರನ್ನು ಕುಡಿಸುತ್ತಾನೆ. ಕಂಬಾರನ ನಿಜವಾದ ಜ್ಞಾನ ಕಬ್ಬಿಣಕ್ಕೆ ನೀರು ಕುಡಿಸುವುದರಲ್ಲಿರುತ್ತದೆ.

ಕುಡಗೋಲು : ಬೆಳೆದ ಬೆಳೆಯನ್ನು ಕೊಯ್ಲು ಮಾಡುವಾಗ ಬಳಸುವ ಉಪಕರಣವಾಗಿದೆ. ೧ ರಿಂದ ೧ ೧/೨ ಇಂಚು ಅಗಲದ ೩ ಅಡಿ ಉದ್ದದ ಕಬ್ಬಿಣ ಪಟ್ಟಿಯಲ್ಲಿ ಕುಡಗೋಲನ್ನು ತಯಾರಿಸಲಾಗುತ್ತದೆ. ೮ ಇಂಚಿನ ಕಟ್ಟಿಗೆಯ ಕೈ ಹಿಡಿಕೆಯಲ್ಲಿ ಮಧ್ಯದಲ್ಲಿ ರಂಧ್ರ ಮಾಡಿದ್ದು, ಕಟ್ಟಿಗೆ ತುದಿಗೆ ಮಡಚುತ್ತಾರೆ. ೨ ಅಡಿ ೪ ಇಂಚು ಕಬ್ಬಿಣ ಪಟ್ಟಿಯಲ್ಲಿ ಅರ್ಧಚಂದ್ರಾಕೃತಿಯಲ್ಲಿ ಕಾಯಿಸಿ ಬಾಗಿಸಲಾಗಿರುತ್ತದೆ. ಇದರ ಕೆಳ ತುದಿಯನ್ನು ಸಣ್ಣಗೊಳಿಸಿ, ಅರ್ಧಇಂಚು ಚೂಪುಗೊಳಿಸಲಾಗಿರುತ್ತದೆ. ಸಹಜವಾಗಿ ಬೆರಳಾಡಿಸಿದರೆ ಚರ್ಮ ಕತ್ತರಿಸುವಷ್ಟು ಹರಿತವಾಗಿರುತ್ತದೆ. ಹೊಲ, ತೋಟಗಳಿಗೆ ಸಂಬಂಧಿಸಿದಂತೆ ಸಾಧಾರಣ ಕುಡಗೋಲು ಕಂಬಾರರು ಮಾಡುತ್ತಾರೆ. ಕಬ್ಬು ಕಟಾವು ಮಾಡಲು ಹಾಗೂ ಇತರೆ ಕೆಲಸಕ್ಕೆ ದೊಡ್ಡದಾದ ಕುಡಗೋಲನ್ನು ಕಂಬಾರನಿಗೆ

ಹೇಳಿಸಿ ಮಾಡಿಸುತ್ತಾರೆ. ಈ ಹಿಂದೆ ಕೋಣ ಬಲಿಕೊಡುವಾಗ ದೊಡ್ಡ ಕುಡಗೋಲನ್ನು ಹೇಳಿಸಿ ಮಾಡಿಸುವ ಪದ್ಧತಿಯಿತ್ತು.

ನೇಗಿಲು : ನೇಗಿಲ ಹಿಡಿದಾ ಹೊಲದೊಳು ಉಳುವಾ ಯೋಗಿಯ ನೋಡಲ್ಲಿ..... ಎಂಬ ಕುವೆಂಪು ವಾಣಿಯಂತೆ, ಭೂಮಿಯನ್ನು ಹದಗೊಳಿಸಲು ರೈತನಿಗೆ ಅತ್ಯಂತ ಅವಶ್ಯಕವಾಗಿ ನೇಗಿಲು ಬೇಕಾಗುತ್ತದೆ. ೧ ಅಡಿ ಅಗಲ, ೨ ಅಡಿ ಉದ್ದ ಕಬ್ಬಿಣ ಪಾಳೆ ಇರುತ್ತದೆ. ಮೇಲ್ಭಾಗ ಅಗಲವಾಗಿ, ಕೆಳಭಾಗದಲ್ಲಿ ಚೂಪಾಗಿರುತ್ತದೆ. ಇದು ವಿಶಾಲ ಕೋನಾಕೃತಿಯಲ್ಲಿರುತ್ತದೆ. ನೇಗಿಲಿಗೆ ಪೂರಕವಾಗಿ ಮೇಳಿಯಿದ್ದು ೨ ಇಂಚಿನ ಅಗಲ ಕಬ್ಬಿಣ ಪೈಪು ೨ ಅಡಿ ಎತ್ತರವಿರುತ್ತದೆ. ಇದಕ್ಕೆ ಕಟ್ಟಿಗೆಯ ಈಸು ಹಾಸುತ್ತಾರೆ. ಇದಕ್ಕೆ ರೆಂಟೆ ಎಂದು ಕರೆಯುತ್ತಾರೆ. ನೇಗಿಲಿನಿಂದ ಭೂಮಿ ಹದಗೊಂಡು ಹೆಚ್ಚುವರಿ ಇಳುವರಿಯನ್ನು ಕೊಡುತ್ತದೆ. ಈಗ ಆಧುನಿಕ ನೇಗಿಲು, ಟ್ರ್ಯಾಕ್ಟರ್ ನೇಗಿಲು ಬಳಕೆಯಾಗುತ್ತಿದೆ.

ಕುಳ : ಇದು ನೇಗಿಲಿಗೆ ಪೂರಕವಾದ ಉಪಕರಣ ನೋಡುವುದಕ್ಕೆ ಚಿಕ್ಕದಾಗಿದ್ದರು ಕೆಲಸ ಚೊಕ್ಕದಾಗಿರುತ್ತದೆ. ೮ ರಿಂದ ೯ ಇಂಚು ಉದ್ದನೆಯ ೨ ಇಂಚು ಅಗಲವಾದ ಕಬ್ಬಿಣ ಪಟ್ಟಿಯಿಂಥ ಕುಳವನ್ನು ತಯಾರಿಸಲಾಗುತ್ತದೆ. ಇದರ ಕೆಳತುದಿ ಚೂಪಾಗಿರುತ್ತದೆ. ನೆಲವನ್ನು ಅಗೆಯಲು ನೇಗಿಲಿಗೆ ಕುಳ ಅವಶ್ಯವಾಗಿದೆ. ನೇಗಿಲಿನ ತುದಿಗೆ ಮತ್ತು ಕುಳಕ್ಕೆ ೨ ರಂಧ್ರಗಳನ್ನು ತೆಗೆದು ಜೋಡಿಸಲಾಗುತ್ತದೆ.

ಕುರುಪಿ : ಭೂಮಿಯಲ್ಲಿ ಬೆಳೆದ ಕಸ ಅಥವಾ ಕಳೆಯನ್ನು ತೆಗೆಯಲು ಬಳಸುವ ಉಪಕರಣವಾಗಿದೆ. ಸಾಮಾನ್ಯವಾಗಿ ಕುರುಪಿ ಕುಡಗೋಲಿನ ಸ್ವರೂಪವನ್ನೇ ಪಡೆದಿದ್ದರೂ ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ೨ ೧/೨ ಅಡಿ ಉದ್ದ, ೧ ೧/೨ ಇಂಚು ಅಗಲದ ಕಬ್ಬಿಣ ಪಟ್ಟಿಯಲ್ಲಿ ತಯಾರಾಗುತ್ತದೆ. ೬ ಇಂಚು ಕಟ್ಟಿಗೆ ಹಿಡಿಕೆಯಲ್ಲಿ ಒಂದು ತುದಿಯನ್ನು ಕಿರು ಬೆರಳಿನಕ್ಕಿಂತ ಚಿಕ್ಕದಾಗಿಸಿ ಹಿಡಿಕೆಯಲ್ಲಿ ಸೇರಿಸುತ್ತಾರೆ. ೨ ಅಡಿ ಉದ್ದದಲ್ಲಿ ಕಬ್ಬಿಣವನ್ನು ಅರ್ಧಚಂದ್ರಾಕೃತಿಯಲ್ಲಿ ಭಾಗಿಸಲಾಗುತ್ತದೆ. ಮುಂದಿನ ತುದಿ ಚೂಪಾಗಿರುತ್ತದೆ. ಮಧ್ಯದಲ್ಲಿ ಅಗಲವಾಗಿದ್ದು, ಕುರುಪಿ ಮೇಲ್ಭಾಗವನ್ನು ಕಂಬಾರ ಬಡಿದು ಚೂಪಾಗಿಸುತ್ತಾನೆ. ಕುಡಗೋಲು ಒಳಭಾಗ ಹರಿತವಾದರೆ, ಕುರುಪಿ ಹೊರಭಾಗ ಹರಿತವಾಗಿರುತ್ತದೆ. ಕುರುಪಿಯ ಮುಂದಿನ ತುದಿಯಿಂದ ಕಸ/ಕಳೆ ತೆಗೆಯಲು ಅನುಕೂಲವಾಗುತ್ತದೆ.

ಕುಡ : ಕುಂಟಿಗೆ ಪೂರಕವಾಗಿ ನೆಲ ಹದಗೊಳಿಸುವ ಉಪಕರಣವಾಗಿದೆ. ಬೀಜ ಬಿತ್ತನೆಯಾದ ಮೇಲೆ ಕುಂಟಿಯಿಂದ ಹರಗುವಾಗ ಕುಡಬೇಕು. ೩ ೧/೨ ಅಡಿಯಿಂದ ೪ ಅಡಿ ಉದ್ದ, ೨ ಇಂಚು ಅಗಲವಿರುತ್ತದೆ. ಅರ್ಧ(೧/೨) ಇಂಚು ದಪ್ಪವಿರುತ್ತದೆ. ನೆಲಭಾಗ ಚೂಪಾಗಿರುತ್ತದೆ. ಮೇಲ್ಭಾಗ ಚೌಕವಿರುತ್ತದೆ. ಕಬ್ಬಿಣ ಪಟ್ಟಿಯ ಎರಡು ಎಡ, ಬಲ ಭಾಗದಲ್ಲಿ ೨ ಇಂಚು ಎಲ್(L) ಆಕಾರದಲ್ಲಿ ಭಾಗಿಸಲಾಗಿರುತ್ತದೆ. ಅವುಗಳನ್ನು ಕುಡದ ಕಿವಿಯೆಂದು ಕರೆಯುತ್ತಾರೆ. ಅರ್ಧ(೧/೨)

ಇಂಚು ದಪ್ಪ ಇದ್ದು, ಕುಂಟೆ ತಾಳದಲ್ಲಿ ಜೋಡಿಸಲು ಬರುವಂತೆ ಕಂಬಾರನು ತಯಾರಿಸುತ್ತಾನೆ. ಎರಡು ಕಿವಿಯನ್ನು ಬಾಗಿಸುವಾಗ ತುಂಡಾಗದಂತೆ ಕಂಬಾರನು ಜಾಗೃತಿವಹಿಸಿ ಕುಡ ತಯಾರಿಸುತ್ತಾನೆ. ಕುಡವನ್ನು ಪದೇ ಪದೇ ಬಾಯ ಹೆಣೆಯಲು ಕಂಬಾರ ಸಾಲೆಗೆ ರೈತರು ತರುತ್ತಾರೆ.

ಬಾಯಬಳೆ(ಗಾಲಿ ಚಕ್ರದ್ದು) : ಬಂಡಿಗಾಲಿಯ ಮಧ್ಯದಲ್ಲಿರುವ ಗಡ್ಡೆಗೆ ಜೋಡಿಸುವ ಉಪಕರಣ. ಗಡ್ಡೆ ರಂಧ್ರದ ತುದಿಗೆ ಜೋಡಿಸುತ್ತಾರೆ. ೮ ಇಂಚು ಉದ್ದ ೨ ಇಂಚು ಅಗಲದ ೧/೨ ಇಂಚು ದಪ್ಪದ ಕಬ್ಬಿಣ ಪಟ್ಟಿಯಿಂದ ಕಂಬಾರರು ತಯಾರಿಸುತ್ತಾರೆ. ೨ ಇಂಚು ಅಗಲದ ದುಂಡಾಕೃತಿ ಯಲ್ಲಿರುತ್ತದೆ. ಗಡ್ಡೆಯ ಬಾಯಿಗೆ ಬಳೆಯಾಕಾರದಲ್ಲಿ ಜೋಡಿಸುವುದರಿಂದ ಬಾಯಬಳೆಯೆಂದು ಕರೆಯುತ್ತಾರೆ. ಇದರಲ್ಲಿ ಬಂಡಿಯ ಅಚ್ಚು ಅಥವಾ ಹಾರೆಯನ್ನು ಅಳವಡಿಸುತ್ತಾರೆ. ಚಕ್ರ ಉರುಳಿದಂತೆ ಬಾಯಿಬಳೆ ಸವೆಯುತ್ತ ಹೋಗುತ್ತದೆ. ಇದಕ್ಕೆ ಒಂದು ಅಥವಾ ಎರಡು ಕಿವಿ ಇರುತ್ತದೆ. ೧ ಇಂಚು ವರ್ತುಲದ ಹೊರಗೆ ಇರುತ್ತದೆ. ಗಡ್ಡೆ ಬಾಯಿಬಳೆ ಸಡಿಲುಗೊಂಡು ತಿರುಗಬಾರದೆಂದು ಕಿವಿ ಜೋಡಿಸುತ್ತಾರೆ.

ಗುಂಬದ ಕಣ್ಣುಬಳೆ(ಗುಮ್‌ಕಟ್ಟ ಬಳೆ) : ಗಡ್ಡೆಯೆಂದು ಕರೆಯುವ ಚಕ್ರದ ಮೂಲವಾಗಿದ್ದು, ಗಡ್ಡೆ ತಾಳಿಕೆ ಬರಲು ಜೋಡಿಸಿರುವ ಬಳೆ ಗುಮ್‌ಕಟ್ಟ ಬಳೆಯಾಗಿದೆ. ಒಂದು ಗಡ್ಡೆಗೆ ೪ ಬಳೆ ಜೋಡಿಸಲಾಗಿದ್ದು ೨ ಸಣ್ಣ, ೨ ದೊಡ್ಡ ಬಳೆಗಳು, ೧ ಇಂಚು ಅಗಲದ ೩ ಅಡಿ ಉದ್ದ, ೨ ನೂಲಿನ ದಪ್ಪನೆಯ ಕಬ್ಬಿಣದ ಪಟ್ಟಿಯಿಂದ ವರ್ತುಲ ಆಕಾರಗೊಳಿಸಿದಾಗ ದೊಡ್ಡ ಗುಮ್‌ಕಟ್ಟ ಬಳೆಯಾಗುತ್ತದೆ. ಸಣ್ಣ ಬಳೆ ತಯಾರಿಸುವಾಗ ೧ ಇಂಚು ಅಗಲ ೨ ಅಡಿ ಉದ್ದ, ೨ ನೂಲಿನ ದಪ್ಪ ಕಬ್ಬಿಣ ಪಟ್ಟಿಯಲ್ಲಿ ೯ ಇಂಚಿನ ಆಕಾರದ ಬಳೆ, ಸಣ್ಣ ಗುಮ್‌ಕಟ್ಟಿ ಬಳೆ ಎನ್ನುತ್ತಾರೆ. ಉದ್ದನೆಯ ಪಟ್ಟಿಯಲ್ಲಿ ಸುತ್ತಿಗೆ ಪೆಟ್ಟಿನಿಂದ ವರ್ತುಲ ಆಕಾರಗೊಳಿಸುತ್ತಾರೆ. ಬಳೆಯ ಎರಡು ತುದಿಯನ್ನು ಜೋಡಿಸಿ ಬೆಸೆಯುತ್ತಾರೆ. ಈಗ ವೆಲ್ಡಿಂಗ್ ಮಾಡಲಾಗುತ್ತದೆ. ಗಡ್ಡೆಗಳಿಗೆ ಗುಮ್‌ಕಟ್ಟಿ ಬಳೆಯನ್ನು ಕಂಬಾರನೇ ಜೋಡಿಸುತ್ತಾನೆ. ಗಡ್ಡೆಗೆ ಬಳೆ ಜೋಡಿಸುವಾಗ ಕೆಲವೊಂದು ಸಾರಿ ಬೆಸುಗೆ ಬಿಚ್ಚುತ್ತದೆ. ಕಂಬಾರನು ಮತ್ತೊಮ್ಮೆ ಗಟ್ಟಿಯಾಗಿ ಬೆಸುಗೆ ಹಾಕುತ್ತಾನೆ.

ಬಂಡಿಕೀಲು : ಎತ್ತಿನ ಬಂಡಿಗೆ ಅವಶ್ಯಕವಾಗಿ ಅಚ್ಚು ಬೇಕಾಗುತ್ತದೆ. ಇದಕ್ಕೆ ಬಂಡಿಹಾರೆ ಎಂದು ಕರೆಯುತ್ತಾರೆ. ಈ ಹಾರೆಯ ಕೊನೆಯ ಎರಡು ತುದಿಗಳಿಗೆ ಬಂಡಿಗಾಲಿಗಳು ಉರುಳಿ ಬೀಳದಂತೆ ಕೀಲುಗಳನ್ನು ಜೋಡಿಸುತ್ತಾರೆ. ಕೀಲುಗಳಿಲ್ಲದೆ ಬಂಡಿಯು ಸಾಗಲು ಸಾಧ್ಯವಿಲ್ಲ. ೧ ಅಡಿ ಎತ್ತರದ ೧/೨ ಇಂಚು ಕಬ್ಬಿಣ ಸಲಾಕೆಯಲ್ಲಿ ಕೀಲನ್ನು ತಯಾರಿಸುತ್ತಾರೆ. ಕಬ್ಬಿಣ ಸಲಾಕೆಯ ಮೇಲ್ಭಾಗ ಅಗಲವಾಗಿ ಚಮಚೆಯಂತೆ ಕಾಣುತ್ತದೆ. ಚಪ್ಪಟೆಯಾದ ಕಬ್ಬಿಣ ಭಾಗ ೨ ಇಂಚು ಎಲ್(L) ಆಕಾರವಾಗಿಸಿ, ಸ್ವಲ್ಪ ಕೆಳಬಾಗಿಸಿ ಅರ್ಧಚಂದ್ರಾಕೃತಿಯಾಗಿಸುತ್ತಾರೆ. ಹೀಗೆ ಮಾಡಿದ ಆಕೃತಿಯನ್ನು

ಕೀಲಿನ ಕಿವಿ ಎಂದು ಕರೆಯುವರು. ಕೀಲಿನ ಕೆಳಭಾಗವನ್ನು ಸ್ವಲ್ಪ ಸಣ್ಣದಾಗಿಸಿ, ಹಾರೆಯ ರಂಧ್ರದಲ್ಲಿ ಸಲೀಸಾಗಿ ಇಳಿಯುವಂತೆ ಕಂಬಾರನು ಕಬ್ಬಿಣ ಸಲಾಕೆಯನ್ನು ಬಡಿದು ಚಿಕ್ಕದಾಗಿಸುತ್ತಾರೆ. '...ಸಾಲಿಗನು ಬಂದು ಒದೆವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂಬ ಸರ್ವಜ್ಞನ ಮಾತಿನಂತೆ ಮನುಷ್ಯನಿಗೆ ಕೀಲಿನ ಅವಶ್ಯಕತೆ ಎಷ್ಟಿದಿಯೋ ಬಂಡಿಗೂ ಕೀಲು ಅಷ್ಟೇ ಅವಶ್ಯಕವಾಗಿದೆ. ಕೆಲವೊಂದು ಸಾರಿ ಕೀಲಿಗೆ ಗೆಜ್ಜೆಯನ್ನು ಜೋಡಿಸುತ್ತಾರೆ. ಕಚ್ಚಾ ರಸ್ತೆಯಲ್ಲಿ ಸಾಗುವಾಗ ಬಂಡಿಯ ಕೀಲಿನ ಗೆಜ್ಜೆಯಿಂದ ಬರುವ ನಾದ ಇಂಪಾಗಿರುತ್ತದೆ.

ಬಂಡಿಹಾರೆ : ಕಂಬಾರನ ವೃತ್ತಿಗೆ ಸವಾಲೆಂಬಂತೆ ಬಂಡಿಹಾರೆ ಕೆಲಸವಾಗಿದೆ. ಅನುಭವ ಜ್ಞಾನದೊಂದಿಗೆ ಕುಶಲಮತಿಯಾಗಿರಬೇಕಾಗುತ್ತದೆ. ಅಚ್ಚು ಅಥವಾ ಬಂಡಿ ಹಾರೆ ಎಂದು ಕರೆಯುವರು. ಬಂಡಿಗೆ ಗಾಲಿಗಳನ್ನು ಹೊಂದಿಸಿಕೊಳ್ಳಲು ಅತ್ಯಂತ ಅವಶ್ಯಕವಾಗಿ ಹಾರೆ ಬೇಕು. ೨ ಇಂಚು ದಪ್ಪದ ೫ ಅಡಿ ಉದ್ದದ ಚಚೌಕಾರದ ಕಬ್ಬಿಣದ ಹಾರೆಯನ್ನು ಕಂಬಾರ ರಾತ್ರಿ ಹೊತ್ತು ಸಾಲೆ ಹಾಕುತ್ತಾರೆ. ೨ ೧/೨ ಅಡಿ ಮಧ್ಯದಲ್ಲಿ ಒಂದು ರಂಧ್ರವನ್ನು ಹದವಾಗಿ ಕುಲುಮೆಯಲ್ಲಿ ಕಾಯಿಸುತ್ತಾರೆ. ಇದ್ದಿಲು-ತವಡನ್ನು ಹಾಕುತ್ತಾರೆ. ದೊಡ್ಡ ಪೋಗರ್‌ದಿಂದ ರಂಧ್ರ ತೆಗೆಯಲಾಗುತ್ತದೆ. ಕಬ್ಬಿಣ ಆರಿದ ಮೇಲೆ ಮಧ್ಯದ ರಂಧ್ರದಿಂದ ಎರಡು ಬದಿಗೆ ೧ ೧/೪ ಅಡಿ ಅಳತೆ ಮಾಡಿ ಚಾಣದಿಂದ ಗುರುತು ಹಾಕುತ್ತಾರೆ. ಒಂದೊಂದು ತುದಿಯನ್ನು ಪ್ರತ್ಯೇಕವಾಗಿ ಕಾಯಿಸುತ್ತಾರೆ. ಕಬ್ಬಿಣ ಕಾದುಕೆಂಪಾಗುವಂತೆ, ಹಣ್ಣಾಗುವಂತೆ ಮಾಡುತ್ತಾರೆ. ಹಾರೆಯ ತುದಿಯನ್ನು ಒಂದು ಇಂಚು ಸುತ್ತಳತೆಯ ವರ್ತುಲಾಕೃತಿಯಾಗಿಸುತ್ತಾರೆ. ಇದು ೧ ೧/೪ ಅಡಿಯಷ್ಟು ಹಾರೆಯ ತುದಿಯನ್ನು ದುಂಡಾಗಿಸಿದ ನಂತರ ಹಾರೆಯ ತುತ್ತ ತುದಿಯಿಂದ ಹಿಡಿದು ೨ ಇಂಚು ಅಳತೆಯಲ್ಲಿ ಮತ್ತೆ ಕಬ್ಬಿಣ ಕಾಯಿಸಿ ಈ ಬಂಡಿಕೀಲು ಸೇರಿಸಲು ರಂಧ್ರ ಮಾಡುತ್ತಾರೆ. ಇದು ಎರಡು ತುದಿಯ ಇದೇ ರೀತಿ ದುಂಡಾಗಿ ಹಾರೆಯನ್ನು ತಯಾರಿಸುತ್ತಾರೆ. ಹಾರೆಯ ರಂಧ್ರಗಳು ಆರ-ಪಾರ ಮಾಡಲು ಕಂಬಾರನು ಕಬ್ಬಿಣವನ್ನು ಹೆಚ್ಚಾಗಿ ಕಾಯಿಸಬೇಕಾಗುತ್ತದೆ. ಇಲ್ಲಿ ದೈಹಿಕ ಶ್ರಮ ಅಷ್ಟೇ ಅಲ್ಲ ರಾತ್ರಿ ನಿದ್ರೆಗೆ ಹೋಗದಂತೆ ಜಾಗೃತವಾಗಿರಬೇಕಾಗುತ್ತದೆ. ಹಾರೆಯನ್ನು ತಯಾರಿಸುವಾಗ ಕಂಬಾರನು ಇಬ್ಬರು-ಮೂವರನ್ನು ಸಹಾಯಕರನ್ನಾಗಿ ಪಡೆದುಕೊಳ್ಳುತ್ತಾನೆ. ಒಬ್ಬರು ತಿದಿಯನ್ನು ಜಗ್ಗಿದರೆ ಇಬ್ಬರೂ ಹಾರೆಯನ್ನು ಬಡಿಯುತ್ತಾರೆ. ಘನ್ ಅಥವಾ ದೊಡ್ಡ ಸುತ್ತಿಗೆ ಪೆಟ್ಟು ಒಬ್ಬರಾದ ಮೇಲೆ ಮತ್ತೊಬ್ಬರದು ಬೀಳುವಂತೆ ಕಂಬಾರನು ನೋಡಿಕೊಳ್ಳುತ್ತಾನೆ. ಸುತ್ತಿಗೆ ಬಡಿತಕ್ಕನುಗುಣವಾಗಿ ಹಾರೆಯ ತುದಿಯನ್ನು ತಯಾರಿಸುತ್ತಾನೆ. ಇಬ್ಬರ ಬಡಿತವು ಒಂದೇ ಆಗದ ರೀತಿಯಲ್ಲಿ ಸಹಾಯಕರು ನೋಡಿಕೊಳ್ಳಬೇಕಾಗುತ್ತದೆ. ಸಹಾಯಕರು ಅಜಾಗೃತರಾಗದಂತೆ ಕಂಬಾರ ಅವರನ್ನು ಮಾತನಾಡಿ ಸುತ್ತಲೇ ಕೆಲಸವನ್ನು ಮುಂದುವರೆಸುತ್ತಿರುತ್ತಾನೆ. ಇಲ್ಲವಾದರೆ ಹಾರೆಯ ಮೇಲೆ ಬೀಳುವ ಪೆಟ್ಟು, ಕಂಬಾರನ ತಲೆಯ ಮೇಲೆ ಬೀಳುವ ಸಾಧ್ಯತೆಯಿರುತ್ತದೆ.

ಉಳಿ–ಬಾಚಿ : ರೈತರು ಉಪಕರಣಗಳನ್ನು ತಯಾರಿಸಿಕೊಡಲು ಬಡಿಗೇರರಿಗೆ ಕಂಬಾರನು ಉಳಿ–ಬಾಚಿ; ಚಾಣ–ಸುತ್ತಿಗೆಗಳನ್ನು ಮಾಡುತ್ತಾನೆ. ೬–೭ ಇಂಚು ಎತ್ತರ ೨ ಇಂಚು ಅಗಲದ ಉಳಿಯನ್ನು ಅಗಲಬಾಯಿ ಉಳಿಯೆಂದು ಕರೆಯುತ್ತಾರೆ. ಮೇಲ್ತುದಿಯನ್ನು ಕುಲುಮೆಯಲ್ಲಿ ಕಾಯಿಸಿ, ಕಿರುಬೆರಳಿನಷ್ಟು ಚಿಕ್ಕದಾಗಿಸುತ್ತಾರೆ. ಕಟ್ಟಿಗೆ ಹಿಡಿಕೆಯಲ್ಲಿ ಸೇರುವಂತೆ ಸಣ್ಣದಾಗಿಸಿರುತ್ತಾರೆ. ಕೆಳ ತುದಿ ಬಡಿದು ಚಪ್ಪಟೆ ಮಾಡುತ್ತಾರೆ. ಬಾಯಿ ಹರಿತವಾಗಿರುತ್ತದೆ. ೭–೮ ಇಂಚು ಎತ್ತರ ೧/೨–೧ ಇಂಚಿನ ಕಿರುಳಿಗಳನ್ನು ಕಂಬಾರರು ತಯಾರಿಸುತ್ತಾರೆ. ಇದರ ಮೇಲ್ತುದಿಯು ಸಣ್ಣದಾಗಿ ಕಟ್ಟಿಗೆ ಹಿಡಿಕೆಯಲ್ಲಿ ಸೇರುವಂತೆ ಮಾಡಿರುತ್ತಾರೆ. ಕೆಳತುದಿಯನ್ನು ಹೆಚ್ಚಾಗಿ ಕಾಯಿಸಿ ಬಡಿದು ಸಣ್ಣದಾಗಿಸುತ್ತಾರೆ. ಕೆಳತುದಿ ಹರಿತವಾಗಿರುತ್ತದೆ. ರೈತರ ಕಟ್ಟಿಗೆ ಕೆಲಸಕ್ಕೆ ಅನುಗುಣವಾಗಿ ಸಣ್ಣ, ದೊಡ್ಡ, ಅಗಲ ಬಾಯಿ ಉಳಿಗಳನ್ನು ತಯಾರಿಸಲಾಗುತ್ತದೆ. ಕೃಷಿ ಕೆಲಸಕ್ಕೆ ಕಟ್ಟಿಗೆ ಕೆತ್ತಲು ಬಾಚಿ ಅವಶ್ಯಕವಾದ ಉಪಕರಣ. ೮ ಇಂಚು ಉದ್ದ ೨ ಇಂಚು ಅಗಲ, ೨ ಇಂಚು ದಪ್ಪವಾಗಿರುತ್ತದೆ. ಕೆಳತುದಿಯನ್ನು ಕಾಯಿಸಿ ಬಡಿದು ೨ ೧/೨ ಇಂಚು ಬಾಯಿಯನ್ನು ಅಗಲವಾಗಿಸುತ್ತಾರೆ. ಬಾಚಿಯ ಕೆಳತುದಿ ಕೂದಲೆಳೆಯಷ್ಟು ಚಿಕ್ಕದಾಗಿದ್ದು, ಹರಿತವಾಗಿರುತ್ತದೆ. ಬಾಚಿಯ ತಲೆ ಭಾಗ ೨ ಇಂಚಿನಷ್ಟು ದಪ್ಪ ಇರುತ್ತದೆ. ದಪ್ಪವಿರುವ ತಲೆ ಭಾಗದಲ್ಲಿ ೧ ೧/೨ ಇಂಚು ಸುತ್ತಳತೆಯ ದೊಡ್ಡ ರೂಪಾಯಿ ನಾಣ್ಯದಷ್ಟು ರಂಧ್ರ ಮಾಡಲಾಗಿರುತ್ತದೆ. ರಂಧ್ರ ಮಾಡಲು ಕಬ್ಬಿಣವನ್ನು ಹಣ್ಣಾಗಿ ಕಾಯಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ರಂಧ್ರದ ಕೆಳಭಾಗ ಎರಡು ಕಡೆ ಸುತ್ತಿಗೆಯಿಂದ ಬಡಿದು ಸಣ್ಣವಾಗಿಸಿರುತ್ತಾರೆ. ಇದಕ್ಕೆ ಬಾಚಿಯ ಕುತ್ತಿಗೆ ಭಾಗವೆಂದು ಕರೆಯುತ್ತಾರೆ. ಉಳಿ ಮತ್ತು ಬಾಚಿಗಳಿಗೆ ನೀರು ಕುಡಿಸುವುದು ಕಂಬಾರನ ವೃತ್ತಿ ಕೌಶಲ್ಯತೆಯನ್ನು ತೋರಿಸುತ್ತದೆ.

ಗೃಹೋಪಕರಣಗಳು

ಇಳಿಗೆ

ಚಾಕು

ಚಿಲಕ

ಒನಕೆ ಬಳೆ

ಬೀಸುವ ಕಲ್ಲು ಮೊಳೆ

ಚಮಚ(ಕಡತಾರ)

ಊದುಗೊಳವೆ

ತಂಡಾಸು

ಅಗಳಿ

ಸೇರು

ಪಾವು

ಪಡಿ

ಕೀಲಿ

ಅಡಕತ್ತರಿ(ಅಡಕೋತ)

ತೊಟ್ಟಿಲ ಬಳೆ

ಇಕ್ಕಳು

ಇಳಿಗೆ : ಇದು ಗೃಹಬಳಕೆಯ ಮುಖ್ಯ ವಸ್ತುವಾಗಿ ಕಂಡುಬರುತ್ತದೆ. ಅಡುಗೆಯ ಮನೆಯಲ್ಲಿ ಉಳ್ಳೆಗಡ್ಡಿ(ಈರುಳ್ಳಿ), ಹಣ್ಣು-ಹಂಪಲ, ಕಾಯಿಪಲ್ಲೆ ತುಂಡರಿಸಲು ಬಳಸುವ ಉಪಕರಣವಾಗಿದೆ. ೧ ಅಡಿ ಉದ್ದ ೪ ಸೆಂ.ಮೀ. ಅಗಲ ೧ ನೂಲು ದಪ್ಪದ ಕಬ್ಬಿಣ ಪಟ್ಟಿಯಲ್ಲಿ ಇಳಿಗೆ ತಯಾರಿಸಲಾಗುತ್ತದೆ. ಇಳಿಗೆಯ ಮುಂದಿನ ತುದಿ ಚಿಕ್ಕದಾಗಿ ಕಟ್ಟಿಗೆ ರಂಧ್ರದಲ್ಲಿ ಸೇರುತ್ತದೆ. ಹಿಂದಿನ ತುದಿ ೪ ಇಂಚು ಸುತ್ತಳತೆಯ ದುಂಡಾಕಾರವಾಗಿರುತ್ತದೆ. ಸುತ್ತಲೂ ಚೂಪಾದ ಮೊನೆಗಳಿರುತ್ತವೆ. ಹಸಿಕೊಬ್ಬರಿ ಹೆರೆಯಲು ಸಹಾಯಕವಾಗುತ್ತದೆ. ಇಳಿಗೆಯ ಎರಡು ತುದಿಗಳನ್ನು ಹೊರತುಪಡಿಸಿದರೆ ಮಧ್ಯದಲ್ಲಿ ೪ ಸೆಂ.ಮೀ. ಅಗಲವಾಗಿದ್ದು ಅರ್ಧ ಚಂದ್ರಾಕೃತಿಯಲ್ಲಿ ಕಂಬಾರನು ತಯಾರಿಸುತ್ತಾನೆ. ಮೇಲ್ಭಾಗ ಮೊಂಡವಾಗಿದ್ದು, ಒಳಭಾಗ ಚಪ್ಪಟೆಯಾಗಿ, ಹರಿತವಾಗಿರುತ್ತದೆ. ಮದುವೆ-ಮುಂಜಿ, ಜಾತ್ರೆಗಳಲ್ಲಿ ಅಡುಗೆ ತಯಾರಿಸುವಾಗ ದೊಡ್ಡ ಇಳಿಗೆಯನ್ನು ಉಪಯೋಗಿಸುತ್ತಾರೆ. ಇದು ೧ ೧/೨ ಉದ್ದದ ೫ ಸೆಂ.ಮೀ. ಅಗಲ, ೧ ನೂಲು ದಪ್ಪದ ಕಬ್ಬಿಣ ಪಟ್ಟಿಯಲ್ಲಿ ತಯಾರಾಗುತ್ತದೆ.

ಚಾಕು : 'ಚಾಕು ನಿಮ್ಮಪ್ಪ ಡಾಕು' ಎಂಬ ಚಿಕ್ಕ ಮಕ್ಕಳ ಗಾದೆ ಮಾತು ಬಳಕೆಯಲ್ಲಿರುವಂತೆ ಡಾಕುನ ಹತ್ತಿರ ಈ ಚಾಕು ಇರಲೇಬೇಕು. ಇದು ಚರ್ಮವನ್ನು ಕತ್ತರಿಸುವ ಉಪಕರಣವಾಗಿದೆ. ೮ ರಿಂದ ೧೦ ಇಂಚು ಉದ್ದ ೧ ಇಂಚು ಅಗಲ, ೨ ನೂಲು ದಪ್ಪವಿರುತ್ತದೆ. ಚಾಕುವಿನ ಹಿಂದಿನ ತುದಿ ಚಿಕ್ಕದಾಗಿದ್ದು, ಕಟ್ಟಿಗೆ ಹಿಡಿಕೆಯಲ್ಲಿ ಸೇರುತ್ತದೆ. ಮುಂದಿನ ತುದಿ ಅತೀ ಚೂಪಾಗಿರುತ್ತದೆ. ಒಳಭಾಗ ಚಪ್ಪಟೆಯಾಗಿ ಹರಿತವಾಗಿರುತ್ತದೆ. ಹಣ್ಣು-ಹಂಪಲು ಕತ್ತರಿಸಲು ಬಳಕೆಯಾಗುತ್ತದೆ.

ಚಿಲಕ : ಬಾಗಿಲುಗಳಿಗೆ ಚಿಲಕವನ್ನು ಜೋಡಿಸುತ್ತಾರೆ. ೮ ರಿಂದ ೧೦ ಇಂಚು ಉದ್ದವಿರುತ್ತದೆ. ೨ ನೂಲು ದಪ್ಪದ ಕಬ್ಬಿಣ ಸಲಾಕೆಯಿಂದ ಕಂಬಾರರು ತಯಾರಿಸುತ್ತಾರೆ. ೩ ೧/೨ ಇಂಚಿನ ಉದ್ದದ ಇಂಗ್ಲಿಷ್ ಎಂಟು(8) ಆಕಾರದ ೪ ತುಕಡಿಗಳನ್ನು ಒಂದರೊಳಗೊಂದು ಪೋಣಿಸಿ ಜೋಡಿಸುತ್ತಾರೆ. ೧ ೧/೨ ಇಂಚಿನ ಆಯತಾಕರಾದ ಬಳಿಗಳನ್ನು ಜೋಡಿಸಿ ಚಿಲಕವನ್ನು ತಯಾರಿಸುತ್ತಾರೆ. ಅಗಸಿ ಬಾಗಿಲಿಗೆ, ಅರಮನೆ ದ್ವಾರಕ್ಕೆ ೨-೩ ಅಡಿ ಉದ್ದದ ೧ ಇಂಚಿನ ಕಬ್ಬಿಣ ಸಲಾಕೆ ತುಂಡಿನಿಂದ

ಚಿಲಕ ಮಾಡುತ್ತಾರೆ. ಸಂಗ್ಯಾಬಾಳ್ಯ ಸಿನಿಮಾದ ಸಂಭಾಷಣೆಯಂತೆ 'ಲಗಳ್ಯಾರ ಮನಿ ಚಿಲಕ-ಗಲಕ್ ಅಂತು!' ಎಂಬಂತೆ ದೊಡ್ಡ ದೊಡ್ಡ ಮನೆತನದ ಬಾಗಿಲ ಚಿಲಕ-ಗಲಕ ಎನ್ನುವಷ್ಟು ಸಪ್ಪಳ ಮಾಡುತ್ತದೆ. ಚಿಲಕ ಮನೆತನದ ಪ್ರತಿಷ್ಠೆಯ ಸಂಕೇತವು ಆಗಿದೆ.

ಒನಕೆ ಬಳೆ : ಓಬವ್ವನನ್ನು ನೆನಪಿಸುವ ಒನಕೆ ಮದುವೆಯಂತಹ ಮಂಗಲ ಕಾರ್ಯಗಳಿಗೆ ಬೇಕು ಅಕ್ಕಿ, ಬತ್ತ, ಗೋಧಿ ಕುಟ್ಟಲು ಒನಕೆಯನ್ನು ಉಪಯೋಗಿಸಲಾಗುತ್ತದೆ. ಒಳ್ಳದ ಜೊತೆಯಾಗಿರುವ ಒನಕೆ ತಾಳಿಕೆ ಬರಲು ಇದರ ರಕ್ಷಕನಂತೆ ಒನಕೆಗೆ ಬಳೆ ಕೆಳತುದಿಗೆ ಹೊಂದಿಸಿರುತ್ತಾರೆ. ಬಳೆ ಇಲ್ಲದೆ ಹೋದರೆ ಒನಕೆ ಬಾಯಿ(ಕೆಳತುದಿ) ಬೇಗನೆ ಒಡೆದು ಹೋಗುತ್ತದೆ. ೬ ೧/೨ ಇಂಚು ಉದ್ದ, ೧ ೧/೨ ಇಂಚು ಅಗಲ ೧ ನೂಲು ದಪ್ಪದ ಕಬ್ಬಿಣ ಪಟ್ಟಿಯಲ್ಲಿ ೨ ಇಂಚು ಸುತ್ತಳತೆಯ ದುಂಡಾಕಾರವಾಗಿರುತ್ತದೆ. ಉದ್ದನೆಯ ಕಬ್ಬಿಣ ಪಟ್ಟಿಯನ್ನು ದುಂಡಾಕಾರ ಮಾಡುವುದು ಸುಲಭದ ಕಾರ್ಯವಲ್ಲ. ಉದ್ದನೆಯ ಪಟ್ಟಿಯಿದ್ದರೆ ಒಳಪೆಟ್ಟಿನಿಂಧ ದುಂಡಾಗುತ್ತದೆ. ಆದರೆ ಇದು ಚಿಕ್ಕದಾಗಿರುವುದರಿಂದ ಮೇಲ್ಪೆಟ ಸುತ್ತಿಗೆಯಿಂದ ಬಡಿದು ಬಳೆಯಾಕಾರ ಮಾಡುತ್ತಾರೆ. ಬಳೆಯ ಎರಡು ತುದಿಯನ್ನು ಕೂಡಿಸಿ ಬೆಸೆಯಲಾಗುತ್ತದೆ. ಕೆಲವೊಮ್ಮೆ ರಿವಿಟ್ ಮಳೆ ಬಡೆದು ಕೂಡಿಸುತ್ತಾರೆ.

ಬೀಸುವ ಕಲ್ಲಿನ ಮೊಳೆ : ೨೦-೩೦ ವರ್ಷಗಳ ಹಿಂದೆ ಹಳ್ಳಿಯ ಪ್ರತಿಯೊಂದು ಮನೆಗಳಲ್ಲಿ ಬೀಸುವ ಕಲ್ಲುಗಳು ಇರುತ್ತಿದ್ದವು. ಈಗಿನಂತೆ ಗಿರಣಿ ಬಂದಿರಲಿಲ್ಲ. ಬೀಸುವ ಕಲ್ಲು ನೆಲದಲ್ಲಿ ಗಟ್ಟಿಯಾಗಿ ತಳವೂರಲೂ ಕಲ್ಲಿನ ಮಧ್ಯದ ರಂಧ್ರಕ್ಕೆ ಕಟ್ಟಿಗೆ ಗೂಟ ಜೋಡಿಸುತ್ತಾರೆ. ತಳ ಬೀಸುವ ಕಲ್ಲು ಗಟ್ಟಿಯಾದ ಮೇಲೆ ಮೇಲಿನ ಕಲ್ಲು ಸರಿಯಾಗಿ ತಿರುಗಲು ಮಧ್ಯದ ಕಟ್ಟಿಗೆಗೆ ಮೊಳೆಯನ್ನು ಜಡಿಯಲಾಗುತ್ತದೆ. ಇದೇ ಬೀಸುವ ಕಲ್ಲಿನ ಮೊಳೆ ೩ ಇಂಚು ಉದ್ದ ಅರ್ಧ ಇಂಚಿನ ಕಬ್ಬಿಣ ಸಲಾಕೆ ಅಥವಾ ಚಿನಿ ಎಂದು ಕರೆಯುವ ತುಂಡನ್ನು ಬೀಸುವ ಕಲ್ಲಿಗೆ ಜೋಡಿಸುತ್ತಾರೆ. ಈ ಕಬ್ಬಿಣ ತುಂಡು ೧ ೧/೨ ಇಂಚು ದುಂಡಾಕಾರದಲ್ಲಿ ಕೆಳಬೀಸುವ ಕಲ್ಲಿನ ಮೇಲೆ ಕಾಣಿಸುತ್ತದೆ. ೧ ೧/೨ ಇಂಚು ತುಕಡಿ ರಂಧ್ರಕ್ಕೆ ಬಡಿದ ಕಟ್ಟಿಗೆಗೆ ಗಟ್ಟಿಯಾಗಿ ಜಡಿಯಲಾಗುತ್ತದೆ. ಕಟ್ಟಿಗೆಗೆ ಬಡಿಯುವ ಮೊಳೆಯ ತುದಿ ಸಣ್ಣದಾಗಿ ಚೂಪಾಗಿ ಕಂಬಾರರು ಮಾಡುತ್ತಾರೆ. ಇದರ ಜೊತೆ ಇದೆ ಮೊಳೆಗೆ ಜೋಡಿಸಲು ೩ ಇಂಚಿನ ದುಂಡಾಕಾರದ ತಗಡಿನ 'ಅಂತರ'ವನ್ನು ಮಾಡಿ ಕೊಡುತ್ತಾರೆ. 'ಅಂತರ'ವಿರುವುದರಿಂದ ಹಿಟ್ಟು ಸ್ವಲ್ಪ ದಪ್ಪವಾಗಿ ಬೀಳುತ್ತದೆ. ಬೀಸುವ ಕಲ್ಲನ್ನೆ ಮರೆಯುವ ಕಾಲದಲ್ಲಿ ಬೀಸುವ ಕಲ್ಲಿನ ಮೊಳೆ ಹಾಗೂ ತಗಡಿನ 'ಅಂತರ' ನೆನಪಿಡುವುದೇ ಕಷ್ಟ.

ಚಮಚ ಅಥವಾ ಕಡತಾರ : ಅಡುಗೆ ಮನೆಯಲ್ಲಿ ರೊಟ್ಟಿ ಅಥವಾ ಬಕ್ಕರಿ ಮಾಡುವಾಗ ಬಳಸುವ ಉಪಕರಣವಾಗಿದೆ. ಕಾದ ತವೆಯ ಮೇಲೆ ಸದಾ ಓಡಾಡುತ್ತದೆ. ರೊಟ್ಟಿ ಬೇಯಿಸಲು ಇದನ್ನು ಹೆಚ್ಚಾಗಿ ಬಳಸುತ್ತಾರೆ. ೧ ಅಡಿ ೩ ಇಂಚು ಉದ್ದವಿರುವ ೨ ನೂಲಿನ ಸಲಾಕೆಯಲ್ಲಿ ಕಡತಾರವನ್ನು

ಕಂಬಾರರು ತಯಾರಿಸುತ್ತಾರೆ. ಕಡತಾರದ ಹಿಂದಿನ ತುದಿ ಚೂಪಾಗಿ ಗಟ್ಟಿಯಾಗಿ ಕೈಯಲ್ಲಿ ಹಿಡಿಯಲು ಬರುವಂತೆ ಮಾಡಲಾಗಿರುತ್ತದೆ. ಮುಂದಿನ ತುದಿಯನ್ನು ೧ ೧/೨ ಇಂಚು ಅಗಲಿಸಲಾಗುತ್ತದೆ. ಚಪ್ಪಟೆಯಾಗಿರುತ್ತದೆ. ರೊಟ್ಟಿ ಕತ್ತರಿಸದಂತೆ ಸ್ವಲ್ಪ ಚೂಪು ಮಾಡಲಾಗಿರುತ್ತದೆ. ಕಡತಾರದ ಇನ್ನೊಂದು ವಿಶೇಷ ಗುಣ ಹೆದರುವವರನ್ನು ಗಟ್ಟಿಗೊಳಿಸುತ್ತದೆ. ಚಿಕ್ಕ ಮಕ್ಕಳು ಹೆದರಿ ಅಳುತ್ತಿದ್ದರೆ ಕಡತಾರ ಕಾಯಿಸಿ ನೀರಿನಲ್ಲಿ ಅದ್ದಿ ಆರಿಸಿ ನೀರು ಕುಡಿಸುತ್ತಾರೆ. ಇದರಿಂದ ಚಿಕ್ಕ ಮಕ್ಕಳು ಅಳು ನಿಲ್ಲಿಸುತ್ತಾರೆ ಎಂಬುದು ಜನಪದರ ನಂಬಿಕೆಯಾಗಿದೆ. ಸೊಸೆಯನ್ನು ಹೆದರಿಸಲು ಅತ್ತೆಯು ಹೆಚ್ಚಾಗಿ ಬಳಸುವ ಉಪಕರಣವಾಗಿದೆ. ಎಲ್ಲದಕ್ಕೂ ಉಪಯೋಗಕಾರಿಯಾದ ಕಡತಾರ ಅಥವಾ ಚಮಚ ಕಂಬಾರನ ಕುಲುಮೆಯ ಕೆನ್ನಾಲಿಗೆಯಿಂದ ಹುಟ್ಟಿ ಬಂದಿರುತ್ತದೆ.

ಊದುಗೊಳವೆ : ಅಡುಗೆ ಮಾಡುವಾಗ ಉರಿ ಹತ್ತಿಸಲು, ಹೊಗೆಯನ್ನು ಹೋಗಲಾಡಿಸಲು ಊದು ಗೊಳವೆಯನ್ನು ಬಳಸಲಾಗುತ್ತದೆ. ೧ ಅಡಿ ೩ ಇಂಚು ಉದ್ದವಿರುವ ೪ ಇಂಚು ಅಗಲದ ಕಬ್ಬಿಣ ಪಟ್ಟಿಯಲ್ಲಿ ಊದುಗೊಳವೆ ತಯಾರಿಸಲಾಗುತ್ತದೆ. ೧ ೧/೪ ಇಂಚು ಸುತ್ತಳತೆ ಕೊಳವೆಯನ್ನು ಮಾಡುತ್ತಾರೆ. ಪಟ್ಟಿಯ ಅಗಲದ ಎರಡು ತುದಿಯನ್ನು ಕೊಳವೆಯಾಕಾರಿಸಿ ಕೂಡಿಸಿ, ಬೆಸೆಯುತ್ತಾರೆ. ಕೆಲವೊಮ್ಮೆ ಎರಡು ತುದಿಗಳನ್ನು ಒಂದರ ಮೇಲೆ ಮತ್ತೊಂದು ತುದಿ ಹೇರಿ ರಿವಿಟ್ ಮೊಳೆ ಜಡಿಯುತ್ತಾರೆ. ಇದರಿಂದ ಕೊಳವೆಯಲ್ಲಿ ಗಾಳಿ ತುಂಬಲು ಅನುಕೂಲ ವಾಗುತ್ತದೆ. ಕೊಳವೆಯ ಒಂದು ತುದಿಯಿಂದ ಊದಿದರೆ ಇನ್ನೊಂದು ತುದಿಯಲ್ಲಿ ಹವೆ ಪಾರಾಗಿ ಒಲೆಯನ್ನು ಮುಟ್ಟುತ್ತದೆ. ಕೊಳವೆಯನ್ನು ಸರಿಯಾಗಿ ಜೋಡಿಸದಿದ್ದರೆ ಗಾಳಿ ಸರಿಯಾಗಿ ತುಂಬುವುದಿಲ್ಲ. ಹೊರಗೆ ಪಾರಾಗುತ್ತದೆ. ಇತ್ತೀಚೆಗೆ ೧ ಇಂಚು ಸುತ್ತಳತೆಯ ಕಬ್ಬಿಣ ಪೈಪನಲ್ಲಿ ತಯಾರಿಸಲಾಗುತ್ತದೆ. ೧ ೧/೨ ಅಡಿಯಿಂದ ೨ ಅಡಿಯಷ್ಟು ಉದ್ದ ಕಬ್ಬಿಣ ಕೊಯ್ಯುವ ಗರಗಸದಿಂದ ತುಂಡಾಗಿಸುತ್ತಾರೆ. ಗ್ಯಾಸ್ ಬರ್ಷನ್ ಒಲೆ ಬಂದ ಮೇಲೆ ಊದುಗೊಳವೆ ಮೂಲೆ ಸೇರುವಂತಾಗಿದೆ.

ತಂಡಾಸು : ಉರಿಯುವ ಒಲೆಯ ಕಟ್ಟಿಗೆಯ ತುಂಡನ್ನು ಒಳನೂಕಲು, ಹೊರ ತೆಗೆಯಲು ಬಳಸುವ ಉಪಕರಣವಾಗಿದೆ. ೨ ಅಡಿ ಉದ್ದ ೧ ೧/೪ ಇಂಚು ಅಗಲದ ಕಬ್ಬಿಣ ಪಟ್ಟಿಯಲ್ಲಿ ತಯಾರಿಸುತ್ತಾರೆ. ಮಧ್ಯದಲ್ಲಿ ಬಾಗಿಸಿದಾಗ ೧ ಅಡಿ ಉದ್ದದ ತಂಡಾಸು ತಯಾರಾಗುತ್ತದೆ. ಮೇಲ್ತುದಿ ದುಂಡಾಗಿರುತ್ತದೆ. ತಂಡಾಸಿನ ಮಧ್ಯಭಾಗದಲ್ಲಿ ಒತ್ತಿ ಹಿಡಿದರೆ ಬೆಂಕಿಯ, ಇದ್ದಿಲು ತುಂಡನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ. ಮೇಲ್ತುದಿ ೧ ಇಂಚು ದುಂಡಾಗಿಸಿ ಅದರ ಕೆಳಗೆ ಎರಡು ಕಬ್ಬಿಣ ಪಟ್ಟಿ ಕೂಡಿಸಿ ರೀವಿಟ್ ಮೊಳೆ ಜಡಿಯುತ್ತಾರೆ.

ಅಗಳಿ : ರೈತರ ಮನೆಯಿಂದ ಧನ-ಕನಕ, ದವಸ-ಧಾನ್ಯಗಳ ದಾಸ್ತಾನು ಮಹಾಮನೆ, ರಾತ್ರಿ ಹೊತ್ತು ಕಳ್ಳ-ಕಾಕರಿಂದ ರಕ್ಷಿಸಲು ಬಾಗಿಲನ್ನು ಮುಚ್ಚಿ ಯಾವ ಸಂದರ್ಭದಲ್ಲೂ ಬಾಗಿಲನ್ನು

ತೆರೆಯಲು ಸಾಧ್ಯವಾಗದಂತೆ ರೈತರು ಅಗಳಿ ಜಡಿಯುತ್ತಾರೆ. ಹೆಬ್ಬಾಗಿಲಿನ ಒಳಗೆ ಎರಡು ಗೋಡೆಗಳಿಗೆ ಅಡ್ಡಲಾಗಿರುತ್ತದೆ. ಗೋಡೆಗಳಲ್ಲಿ ರಂಧ್ರ ಮಾಡಿರುತ್ತಾರೆ. ಅಗಳಿ ಬಾಗಿಲು ತೆರೆದ ಹೊತ್ತಿನಲ್ಲಿ ಗೋಡೆಯ ರಂಧ್ರದ ಒಳಗೆ ಇಡಲಾಗುತ್ತದೆ. ೪ ೧/೨ ಅಡಿ ಉದ್ದ, ೩ ಇಂಚು ಸುತ್ತಳತೆ ದುಂಡಾಕಾರ ಮತ್ತು ಚೌಕಾಕಾರದ ಅಗಳಿ ಇರುತ್ತವೆ. ಚೌಕಾಕಾರದ ಅಗಳಿ ತಯಾರಿಸಲು ಹೆಚ್ಚು ಶ್ರಮವಿರುವುದಿಲ್ಲ. ದುಂಡಾಕಾರದ ಅಗಳಿ ಮಾಡಲು ಕಂಬಾರನು ಶ್ರಮಿಸಬೇಕು.

ಸೇರು : ಕಾಳನ್ನು ಅಳೆಯಲು ಬಳಸುವ ಉಪಕರಣವಾಗಿದೆ. ಪ್ರಾಚೀನ ಕಾಲದಿಂದಲೂ ರೈತ–ವ್ಯಾಪಾರಸ್ಥ ಕಾಳನ್ನು ಸೇರಿನ ಮೂಲಕವೇ ಅಳತೆ ಮಾಡುವ ಪದ್ಧತಿಯಿತ್ತು. ಇದು ೪ ೧/೨ ಇಂಚು ಸುತ್ತಳತೆಯ ಅಗಲ, ೫ ಇಂಚು ಎತ್ತರದ ಸೇರು ದಪ್ಪ ತಗಡಿನಿಂದ ಮಾಡಲಾಗಿರುತ್ತದೆ. ಮೇಲೆ ಮತ್ತು ಕೆಳಗೆ ಕಬ್ಬಿಣ ಪಟ್ಟಿಯ ಕಟ್ಟು ಹಾಕಲಾಗಿರುತ್ತದೆ. ಆಧುನಿಕ ಅಳತೆಯ ೧ ಕಿಲೋ ಅಳತೆಗೆ ಒಂದು ಸೇರು ಸಮವಾಗಿರುತ್ತದೆ.

ಪಡಿ : ಕಾಳನ್ನು ಅಳೆಯಲು ಬಳಸುವ ಉಪಕರಣವಾಗಿದೆ. ಇದು ೨ ಸೇರು ಅಳತೆಯ ಮಾಪನವಾಗಿದೆ. ೪ ೧/೨ ಇಂಚು ಸುತ್ತಳತೆಯ ಅಗಲದ ೧೦ ಇಂಚು ಎತ್ತರದ ಆಕೃತಿಯನ್ನು ಪಡಿ ಹೊಂದಿರುತ್ತದೆ. ಸೇರಿನ ಎರಡು ಪಟ್ಟು ತಗಡಿನ ಪಡಿಗೆ ೩ ಕಟ್ಟುಗಳಿದ್ದು ಮೇಲೆ, ಮಧ್ಯ, ಕೆಳಗೆ ಜೋಡಿಸಲಾಗಿರುತ್ತದೆ.

ಯುದ್ಧೋಪಕಾರಿ, ಕೃಷಿಯೋಪಕಾರಿ ಮತ್ತು ಗೃಹೋಪಕಾರಿಯಾಗಿ ಕಂಬಾರರು ಜಾಗತೀಕರಣದ ವ್ಯವಸ್ಥೆಗೆ ಸಿಕ್ಕು ಬೆಂದು ಹೋಗುತ್ತಿದ್ದಾರೆ. ಕಂಬಾರಿಕೆ ವೃತ್ತಿ ಎಂಬುದು ಕೆಲವೇ ವರ್ಷಗಳಲ್ಲಿ ಕಣ್ಮರೆಯಾಗುವ ಹಂತ ತಲುಪುತ್ತಿದೆ. ಯಾಂತ್ರೀಕರಣದ ವ್ಯವಸ್ಥೆಯಿಂದಾಗಿ ಕಂಬಾರರ ಸಾಲಿಯಲ್ಲಿ ದೊರೆಯುವ ವಸ್ತುಗಳು ಮಾರುಕಟ್ಟೆಯಲ್ಲಿ ಕಡಿಮೆ ಹಣದಲ್ಲಿ ಸಿಗುತ್ತಿವೆ. ತಾಳಿಕೆಯಿಲ್ಲದ ವಸ್ತುವಿಗೆ ಜನ ಮನಸೋಲುತ್ತಿದ್ದಾರೆ. ಪ್ರೀತಿ–ವಿಶ್ವಾಸ ನಂಬಿಕೆಯ ದ್ಯೋತಕವಾಗಿರುವ ಸ್ಥಾನಿಕ ಕಂಬಾರನು ತಯಾರಿಸುವ ವಸ್ತುವಿನಿಂದ ರೈತ ದೂರವಾಗಿದ್ದಾನೆ. ದಿನಕ್ಕೆ ಎರಡೆರಡು ಬಾರಿ ಸಾಲಿ ಹಾಕುವುದು ಅಪರೂಪವಾಗಿ ಬಿಟ್ಟಿದೆ. ಕೆಲವು ಗ್ರಾಮಗಳಲ್ಲಿ ಸಂತೆ ನಡೆಯುವ ದಿನದಂದು ಮಾತ್ರ ಕುಲುಮೆ ನಗುತ್ತಿರುತ್ತದೆ. ಕಂಬಾರಿಕೆ ವೃತ್ತಿ ಕಡಿಮೆಯಾಗುತ್ತಿರುವುದಕ್ಕೆ ಇದ್ದಿಲು ಕಾರಣವಾಗಿದೆ. ಪ್ರತಿ ಹಳ್ಳಿಗಳಲ್ಲಿಯೂ ಗ್ಯಾಸ ಒಲೆಗಳೂ ಪ್ರವೇಶವಾದ ಮೇಲೆ ಕಟ್ಟಿಗೆ ಒಲೆಗಳು ಕಡಿಮೆಯಾದವು. ಸುಟ್ಟ ಕಟ್ಟಿಗೆಯ ಇದ್ದಿಲು ಅಪಾರ ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಹೀಗಾಗಿ ಇದ್ದಿಲು ಇಲ್ಲದಿರುವುದರಿಂದ ಕಂಬಾರಿಕೆ ವೃತ್ತಿ ನಿಂತು ಹೋಗುತ್ತದೆ. ಇದು ಶ್ರಮಿಕರ ಕೆಲಸ, ವೃತ್ತಿಗೆ ಬಲಿಷ್ಠರು ಬೇಕು. ಕಂಬಾರನಿಗೆ ಇಬ್ಬರು ಸಹಾಯಕರು ಬೇಕಾಗುತ್ತಾರೆ. ಆದರೆ ಈಗ ಈ ಕೆಲಸಕ್ಕೆ ಸಹಾಯಕರು ಸಿಗುತ್ತಿಲ್ಲ. ಸೌಂದರ್ಯಕರಣದ ಯುಗದಲ್ಲಿ ಕುಲುಮೆ ಮುಂದೆ ಕುಳಿತರೆ ಬಣ್ಣ ಮಾಸುತ್ತದೆನ್ನುವ ಮನೋಭಾವದವರಿರುವುದರಿಂದ ಕಂಬಾರ ಸಾಲಿ ಕಡೆ ಯಾರೂ ಗಮನ ಹರಿಸುತ್ತಿಲ್ಲ. ಅಲ್ಲೊಬ್ಬ–

ಇಲ್ಲೊಬ್ಬ ವಯೋವೃದ್ಧ ಕಂಬಾರರು ಆಗೊಮ್ಮೆ-ಇಗೊಮ್ಮೆ ಸಾಲಿ ಹಾಕುತ್ತಾರೆ. ಅದು ಕೇವಲ ಸಲಿಕೆ-ಗುದ್ದಲಿ, ಕುರೂಪಿ-ಕುಡಗೋಲು, ಕೊಡಲಿ-ಬಾಚಿ, ಉಳಿಯಂತಹ ವಸ್ತುಗಳ ಬಾಯ ಹೆಣೆಯುವುದಕ್ಕೆ ಮಾತ್ರ ವೃತ್ತಿ ಮೀಸಲಾಗಿದೆ. ಕಂಬಾರಿಕೆ ವೃತ್ತಿ ದುಡಿಮೆಗೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಕಂಬಾರರು ಹಳ್ಳಿಗಳಿಂದ ಪಟ್ಟಣದತ್ತ ಸಾಗುತ್ತಿದ್ದಾರೆ. ವೃತ್ತಿಯಿಂದ ವೃತ್ತಿಗೆ ಬದಲಾಯಿಸಿಕೊಳ್ಳುತ್ತಿದ್ದಾರೆ.

೩.೨. ಬಡಿಗೇರ/ಬಡಗಿ

ವಿಶ್ವಕರ್ಮನ ಎರಡನೆಯ ಮಗ ಮಯ ಬಡಿಗ ವೃತ್ತಿಯ ಮೂಲ ಪುರುಷನಾಗಿದ್ದಾನೆ. ಮಯ ಸನಾತನ ಗೋತ್ರದವನಾಗಿದ್ದಾನೆ. ಈತನ ಪತ್ನಿ ಸುಲೋಚನಾದೇವಿ. ಈಕೆಯು ಪರಾಶರ ಮುನಿಯ ಮಗಳು. ಈ ಗೋತ್ರದ ಕುಶಲಕರ್ಮಿಗಳು ಕಟ್ಟಿಗೆ ಕೆಲಸಗಳನ್ನು ಮಾಡುತ್ತಾರೆ. ಮರ ಅಥವಾ ಕಟ್ಟಿಗೆಯಿಂದ ಕೃಷಿ ಹಾಗೂ ಕೃಷಿಯೇತರ ವಸ್ತುಗಳನ್ನು ತಯಾರಿಸುವ ಕಸುಬನ್ನು ಬಡಿಗೇರರು ಮಾಡುತ್ತಾರೆ. ಕಟ್ಟಿಗೆ ಕೆಲಸವನ್ನು ಮಾಡುವ ಬಡಿಗೇರರಿಗೆ ನಿರ್ಧಿಷ್ಟವಾದ ಸ್ಥಳದೊಂದಿಗೆ, ಬೇರೆ ಬೇರೆ ಸ್ಥಳಗಳಲ್ಲಿಯೂ ಕೆಲಸ ಮಾಡುತ್ತಾರೆ. ನಿರ್ಧಿಷ್ಟವಾದ ಸ್ಥಳಕ್ಕೆ 'ಬಡಿಗಸಾಲಿ>ಬಡಿಸಾಲಿ' ಎಂದು ಕರೆಯುತ್ತಾರೆ. ಇಲ್ಲಿ ಮುಖ್ಯವಾಗಿ ೧೦ ಇಂಚು ಸುತ್ತಳತೆಯ ದೊಡ್ಡ ಮರದ ಬಡ್ಡಿಯನ್ನು ನೆಲದಲ್ಲಿ ಹುಗಿದಿರುತ್ತಾರೆ. ಅದಕ್ಕೆ 'ಅಡ್ಡಿಬಡ್ಡಿ' ಎಂದು ಕರೆಯುತ್ತಾರೆ. ಇದರ ಮೇಲೆ ಕೃಷಿ ಕಟ್ಟಿಗೆಗಳನ್ನು ಬಾಚಿಯಿಂದ ಬಡಿಗರು ಕೆತ್ತುತ್ತಾರೆ. ಇನ್ನೊಂದೆಡೆ ಮನೆ ತಯಾರಿಸುವ ಕೆಲಸಗಳಿದ್ದಾಗ ಆ ಸ್ಥಳದಲ್ಲಿಯೇ ಕೆಲಸ ಮಾಡುತ್ತಾರೆ. ಪಂಚಾಳ ವರ್ಗದಲ್ಲಿ ಎರಡನೆಯವನಾದ ಬಡಿಗೇರ ಅಥವಾ ಮರಗೆಲಸಗಾರರನ್ನು 'ರಥಕಾರರು' ಎಂದು ಕರೆಯಲಾಗುತ್ತದೆ. ಇದು ಪ್ರಾಚೀನ ಪದವಾಗಿದೆ. ಬಡಿಗರನ್ನು ಸಾಮಾನ್ಯವಾಗಿ ರಥಕಾರರೆಂದು ಋಗ್ವೇದದಲ್ಲಿ ಬಳಸಲ್ಪಟ್ಟಿದೆ. "ವರ್ಧಕಿ ಎಂಬ ಸಂಸ್ಕೃತ ಪದದಿಂದ ವದ್ದತಿ, ಒಡ್ಡತಿ, ಬಡಗಿ ಪದ ಬೆಳೆದು ಬಂದಿರಬೇಕು."[೧೭] ಬಡಿಗೇರರ ಮೂಲ ಪುರುಷ ಮಯ ಒಬ್ಬ ಇಂದ್ರಜಾಲ ಹಾಗೂ ಕಾಷ್ಠಶಿಲ್ಪ ಸೃಷ್ಟಿಕಾರನಾಗಿದ್ದಾನೆ. ಕುರುಕ್ಷೇತ್ರದಲ್ಲಿ ಧರ್ಮರಾಜನು ರಾಜಸೂಯಯಾಗ ಮಾಡಿದಾಗ, ಈತ ಅದ್ಭುತವಾದ ಮಯಸಭೆಯನ್ನು ಪಾಂಡವರಿಗಾಗಿ ನಿರ್ಮಿಸಿಕೊಟ್ಟನು. ಮಯಸಭೆ ವಿನ್ಯಾಸ ಪ್ರಾಚೀನ ಶಿಲ್ಪಕಲೆಯ ವಿಕಾಸವೆಂದು ಗುರುತಿಸಲಾಗುತ್ತದೆ. ಈ ಅದ್ಭುತ ವಿದ್ಯಾಕಾರನಾದ ಮಯ ದೇವಾನು-ದೇವತೆಗಳಿಗೂ ರಥ-ವಿಮಾನಗಳನ್ನು ಸೃಷ್ಟಿಸಿಕೊಡುತ್ತಿದ್ದನು ಎಂದು ತಿಳಿಯಲಾಗಿದೆ.

ರಾಜರ ಕಾಲದಲ್ಲಿ ಬಡಿಗೇರ ಅಥವಾ ರಥಕಾರರು ದೇವಾಲಯಗಳಿಗೆ ಸಂಬಂಧಿಸಿ, ರಥ ಅಥವಾ ತೇರುಗಳನ್ನು ತಯಾರಿಸುತ್ತಿದ್ದರು. ಯುದ್ಧೋಪಯೋಗಿ ರಥಗಳನ್ನು ನಿರ್ಮಿಸುತ್ತಿದ್ದರು. ರಾಜ-ಸಾಮಂತ ಮಾಂಡಲಿಕರಿಗೆ ಸಿಂಹಾಸನಗಳು, ಸುಂದರವಾದ ಅರಮನೆ, ಅಂತಃಪುರ, ರಾಣಿವಾಸದ ಮನೆಗಳನ್ನು ತಯಾರಿಸುತ್ತಿದ್ದರು. ಪ್ರಾಚೀನ ಕಾಲದಿಂದಲೂ ಬಡಿಗೇರರು ರಾಜ

ಮನ್ನಣೆಯನ್ನು ಪಡೆದವರಾಗಿದ್ದಾರೆ. ಬಡಿಗೇರರು ಇಲ್ಲದಿದ್ದರೆ ರಾಜನಿಗೆ ಸಿಂಹಾಸನವೇ ಇಲ್ಲ. ರಾಜನ ಗಣತೆಗೆ ತಕ್ಕದಾದ ಆಸನಗಳನ್ನು ಸೂಕ್ಷ್ಮಪ್ರಜ್ಞೆಯಿಂದ ಬಡಿಗೇರರು ಮಾಡುತ್ತಿದ್ದರು. ವೇದಗಳ ಕಾಲದಲ್ಲಿ ಕಾಷ್ಠಶಿಲ್ಪಿಗಳಿಗೆ ಉನ್ನತವಾದ ಸ್ಥಾನವಿತ್ತು. "ಭೃಗು ಮತ್ತು ರಿಭು ಅವರು ಶ್ರೇಷ್ಠ ರಥಶಿಲ್ಪಿ"[೧೮]ಗಳಾಗಿದ್ದರು ಎಂದು ವಾಜಸೇನ ಸಂಹಿತೆ ಮತ್ತು ಅಥರ್ವ ವೇದಗಳು ತಿಳಿಸುತ್ತವೆ. ಬಡಿಗರ ಕಲಾನೈಪುಣ್ಯತೆಯನ್ನು ಬಲ್ಲ ಅನೇಕ ರಾಜರುಗಳು ಕುಶಲಕರ್ಮಿಗಳಿಗೆ ದತ್ತಿ ದಾನಗಳನ್ನು ನೀಡಿದ್ದರ ಕುರಿತು ಅನೇಕ ಶಾಸನಗಳು ತಿಳಿಸಿಕೊಡುತ್ತವೆ. 'ಹುಬ್ಬಳ್ಳಿ ತಾಲೂಕಿನ ಮಂಟೂರ ಗ್ರಾಮಕ್ಕೆ ಸೇರಿದ ಹೊಯ್ಸಳ ವೀರಬಲ್ಲಾಳನ ತಾಮ್ರಪಟದಲ್ಲಿ(ಕ್ರಿ.ಶ.ಸು.೧೨೦೦) ಹಿಟ್ಟಿನ ತಳವಾರಿ ಮಾರನಾಯಕ, ಹಿಟ್ಟಕಾರ ಬಡಗಿ ಹಿಲೋಜ, ಹಿಟ್ಟಿನ ಕಮ್ಮಾರ ದೇವೋಜ ಮತ್ತು ಹಿಟ್ಟಿನ ಅಕ್ಕಸಾಲೆ ಪಾರಸೋಜ ಇವರಿಗೆ ಭೂಮಿಯನ್ನು ಬಿಟ್ಟುಕೊಟ್ಟ ಉಲ್ಲೇಖ ಬರುತ್ತದೆ."[೧೯] ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಕುಶಲಕರ್ಮಿ ಬಡಿಗರು ಹಿಟ್ಟುಕಾರರು ಅಥವಾ ಇದಕ್ಕೆ ಸಂವಾದಿಯಾಗಿ ಆಯಗಾರರು ಎಂದು ಗುರುತಿಸಲಾಗಿದೆ. ಭೂಮಿಯನ್ನು ಉಂಬಳಿಯಾಗಿ ನೀಡುವಾಗ ವೃತ್ತಿ ತೆರಿಗೆಯಲ್ಲೂ ವಿನಾಯಿತಿ ಬಡಿಗರಿಗೆ ಇರುತ್ತಿತ್ತು. ವಿಜಾಪುರದ ಖ್ವಾಜಾಜಹಾನ್ ಮಸೀದೆ ೨ನೆಯ ಕಂಬದಲ್ಲಿ ದೊರೆತ ಶಾಸನದಲ್ಲಿ (ಕ್ರಿ.ಶ.೧೨೨೯) ಸ್ಥಾನಾಚಾರ್ಯ ಸರ್ವಜ್ಞರಾಶಿ ದೇವನಿಂದ ಸ್ವಯಂಭೂ ಶಿವಲಿಂಗ ದೇವಾಲಯಕ್ಕಾಗಿ ಬಡಿಗಿ ಕಾಮೋಜನ ಮಗ ಮಲ್ಲನಿಗೆ ಭೂದಾನ ನೀಡಿದ ವಿವರವಿದೆ."[೨೦] ಬಡಿಗೇರರು ಎಲ್ಲ ರಾಜರುಗಳಿಗೂ ಬೇಕಾದವರಾಗಿದ್ದು, ತಮ್ಮ ಕಲಾಕೌಶಲ್ಯತೆಯಿಂದ ರಾಜಪ್ರಿಯ, ಜನಪ್ರಿಯ ಸರ್ವವಂದಿತರಾಗಿದ್ದರು. ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ಬಾರ್ಬೂಸಾ ನೂನಿಜ್ ತಮ್ಮ ಬರಹಗಳಲ್ಲಿ ಹೇಳಿರುವಂತೆ ಕರ್ನಾಟಕದ ಬಡಗಿಗಳು ಕುಶಲಮತಿಗಳು ಆಗಿದ್ದರೆಂದು ತಿಳಿದುಬರುತ್ತದೆ.

ಯುದ್ಧೋಪಕರಣಗಳು ಮತ್ತು ಬಡಿಗೇರರು

ಭಾರತದಲ್ಲಿ ಎಲ್ಲರೂ ನೆನಪಿಡುವಂತ ಎರಡು ಮಹಾಕಾವ್ಯಗಳು ರಾಮಾಯಣ-ಮಹಾಭಾರತ. ಅನೇಕ ರಾಜರುಗಳ ಕಥೆಗಳೊಂದಿಗೆ ಯುದ್ಧ ಪ್ರಸಂಗಗಳು ಚಾರಿತ್ರ್ಯರೂಪ ಪಡೆದುಕೊಂಡಿವೆ. ಯುದ್ಧವಿಲ್ಲದೇ ರಾಮಾಯಣ-ಮಹಾಭಾರತಗಳು ಮುಕ್ತಾಯವಾಗುವುದೇ ಇಲ್ಲ. ಯುದ್ಧಭೂಮಿಗೆ ತೆರಳುವಾಗ ಮುಖ್ಯವಾಗಿ ರಾಜ-ಸಾಮಂತರೆಲ್ಲರೂ ಹೆಚ್ಚಾಗಿ ರಥಗಳನ್ನು ಬಳಸಿರುವುದು ತಿಳಿದುಬರುತ್ತದೆ. ಕೆಲವರು ಕುದುರೆ ಏರಿ ಯುದ್ಧಕ್ಕೆ ಹೋಗಿರಬಹುದಾದ ನಿದರ್ಶನಗಳಿವೆ. ಆದರೆ ರಾಮಾಯಣ-ಮಹಾಭಾರತದ ಯುದ್ಧ ಪ್ರಸಂಗದ ವಿವರಣೆಗಳನ್ನು ಗಮನಿಸಿದರೆ ರಾಜರುಗಳು ರಥಗಳನ್ನು ಬಳಸಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ರಾಮ-ರಾವಣರ ಯುದ್ಧದಲ್ಲಿ ರಾಮ-ಲಕ್ಷ್ಮಣಾದಿಗಳು ರಥಗಳನ್ನು ಬಳಸದೇ ಇರಬಹುದು. ಆದರೆ ಅವರ ಎದುರಾಳಿ ರಾವಣ-

ಇಂದ್ರಜಿತ್ ಇವರೆಲ್ಲರೂ ರಥಗಳನ್ನು ಬಳಸಿದ್ದಾರೆಂಬುದು ತಿಳಿಯುತ್ತದೆ. ರಾವಣನು ಸೀತೆಯನ್ನು ಅಪಹರಿಸಿಕೊಂಡು ಬಂದದ್ದು ಪುಷ್ಪಕ ವಿಮಾನ, ಲಂಕಾನಗರ ನಿರ್ಮಾಣವೆಲ್ಲವೂ ಮಯ ಮತ್ತು ಆತನ ಅನುಯಾಯಿಗಳಾದ ಬಡಿಗೇರರ ಸೃಷ್ಟಿಯಾಗಿದೆ. ರಥಗಳೆಂದರೆ ರಾಜರುಗಳಿಗೆ ರಾಜಭೂಷಣ. ಛತ್ರ-ಚಾಮರ-ಬೆಳ್ಗೊಡೆಗಳಿರುವ ಚಾಲಿತ ಸಾಧನ ರಥಗಳಾಗಿದ್ದವು. ರಾವಣೇಶ್ವರನ ರಥಗಳು ಮತ್ತು ವಿಮಾನಗಳು ಗಾಳಿಯಲ್ಲಿ ತೇಲಾಡುವ ಸ್ವಯಂ ಚಾಲಿತ ಯಂತ್ರಗಳಾಗಿದ್ದವು. ಇದು ಬಡಗಿ ಕುಶಲಕರ್ಮಿಯ ಕಲಾಕೌಶಲ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಮಹಾಭಾರತ ಯುದ್ಧದಲ್ಲಿ ಹೆಚ್ಚಾಗಿ ಬಳಸಲ್ಪಟ್ಟ ಯುದ್ಧೋಪಕಾರಿ ವಸ್ತುಗಳಲ್ಲಿ ರಥಗಳು ಮುಖ್ಯ. ೧೮ ದಿನಗಳ ಕಾಲ ಜರುಗಿದ ಮಹಾಯುದ್ಧದಲ್ಲಿ ಕೌರವರ ಸೈನ್ಯ ಬಲವೇ ಹೆಚ್ಚು. ೧೮ ಅಕ್ಷೋಹಿಣಿ ಚದುರಂಗ ಬಲದಲ್ಲಿ ೧/೪ ರಷ್ಟು ಸೈನ್ಯಾ ಬಲಕ್ಕೆ ರಥಗಳೇ ಬಳಕೆಯಾಗಿರಬೇಕು. ಅಪಾರ ಪ್ರಮಾಣದಲ್ಲಿ ಅಸಂಖ್ಯಾತ ರಥಗಳನ್ನು ತಯಾರಿಸಿಕೊಟ್ಟ ಕೀರ್ತಿ ಬಡಿಗೇರರಿಗೆ ಸಲ್ಲುತ್ತದೆ. ಬಡಿಗೇರರು ಯುದ್ಧಾಂತ್ಯದವರೆಗೂ ಕುರುಕ್ಷೇತ್ರದ ಒಂದು ಪ್ರದೇಶದಲ್ಲಿ ಕುಶಲಕರ್ಮಿಗಳ ಕಾರ್ಯಾಗಾರವನ್ನು (ಬಡಿಸಾಲಿ) ನಿರ್ಮಿಸಿರಬೇಕು. ಅಗತ್ಯತೆಗನುಗುಣವಾಗಿ ವ್ಯವಸ್ಥಿತವಾದ ರಥಗಳನ್ನು ಬಡಿಗೇರರು ತಯಾರಿಸಿಕೊಟ್ಟಿರಬೇಕು. ಬಡಿಗೇರರು ಯುದ್ಧ ಪ್ರಸಂಗದಲ್ಲಿ ಬಳಸಲು ತಯಾರಿಸಿಕೊಟ್ಟ ರಥಗಳು ಭಾರವಾದದ್ದವುಗಳಾಗಿರಬೇಕು. ಭೂಮಿ ತೂಕದ ರಥಗಳೇ ಆಗಿರಬೇಕು. ಭೀಮ-ದುರ್ಯೋಧನ ನಂತಹ ಭಾರವಾದ ವ್ಯಕ್ತಿಗಳನ್ನು ಹೊತ್ತುಕೊಂಡು ಕುರುಕ್ಷೇತ್ರದುದ್ದಕ್ಕೂ ಚಲಿಸಬೇಕಾದರೆ ಅತ್ಯಂತ ಗಟ್ಟಿಯಾದ ರಥಗಳು ಬೇಕಾಗಿರುತ್ತವೆ. ಇಂತಹ ತಾಳಿಕೆಯ ರಥಗಳನ್ನು ತಯಾರಿಸಿಕೊಡುವಲ್ಲಿ ಮಹಾಭಾರತ ಕಾಲದ ಬಡಿಗೇರರು ಸಿದ್ಧಹಸ್ತರಾಗಿರಬೇಕು. ಇದು ಇಂದಿಗೂ ಈ ಪರಂಪರೆ ಮುಂದುವರೆದಿದೆ.

ಮಹಾಭಾರತದ ರಥಗಳು ಭಾರವಾದವುಗಳು ಎನ್ನುವುದಕ್ಕೆ ಒಂದು ನಿದರ್ಶನ ಸಾಕೆನಿಸುತ್ತದೆ. ಅದಾವುದೆಂದರೆ ಕರ್ಣಾರ್ಜುನರ ಯುದ್ಧ ಪ್ರಸಂಗ.

ಯುದ್ಧದ ಕೊನೆಯ ಕೆಲವೇ ದಿನಗಳು ಬಾಕಿಯಿರುವಾಗ ನೇರವಾಗಿ ಕರ್ಣ-ಅರ್ಜುನ ಮುಖಾಮುಖಿಯಾಗುವುದು. ರಕ್ತದ ಕೆಸರಿನಲ್ಲಿ ಕರ್ಣನ ರಥದ ಚಕ್ರ ಸಿಲುಕುವುದು. ರಥವನ್ನು ಮೇಲಕ್ಕೆತ್ತಲು ಕರ್ಣ ಹೆಗಲು ಕೊಟ್ಟು ನಿಲ್ಲುವುದು. ಈ ಪ್ರಸಂಗ ಬಡಿಗರು ಅತ್ಯಂತ ಶ್ರದ್ಧೆ-ನಿಷ್ಠೆಯಿಂದ ಭಾರವಾದ ರಥಗಳನ್ನು ತಯಾರಿಸಿಕೊಡುತ್ತಿದ್ದರು. ಯಾವುದೇ ಕಾರಣಕ್ಕೂ ರಥದಿಂದ ರಾಜರುಗಳಿಗೆ ತೊಂದರೆಯಾಗಬಾರದೆಂಬುದು ಬಡಿಗೇರರ ಕಾಳಜಿಯನ್ನು ತೋರಿಸಿಕೊಡುತ್ತದೆ. ತಗ್ಗು ಪ್ರದೇಶಕ್ಕೆ ರಥದ ಗಾಲಿ ಸಿಲುಕಿದಾಗ ಚಕ್ರಮುರಿಯಬಹುದಾಗಿತ್ತು. ಆದರೆ ಚಕ್ರಕ್ಕೆ ಕಿಂಚಿತ್ತು ತೊಂದರೆಯಾಗದಿರುವುದು ಬಡಿಗೇರರ ವೃತ್ತಿ ಮತ್ತು ರಾಜನಿಷ್ಠೆ ತೋರಿಸುತ್ತದೆ.

ಭಾರತೀಯರ ಎರಡು ಕಾವ್ಯಗಳಲ್ಲಿಯೂ ಬಡಿಗೇರರು ತಯಾರಿಸಿದ ರಥಗಳು ಅವುಗಳನ್ನು ಬಳಸಿದ ರಾಜರುಗಳು ದಾಖಲೆಯಾಗಿ ಉಳಿದರು. ಅದ್ಭುತವಾದ ಹಸ್ತಿನಾವತಿ ಮತ್ತು ಕೌರವರು ನಾಚುವಂತೆ ಇಂದ್ರಪ್ರಸ್ತ ಅರಮನೆಯನ್ನು, ರಥಗಳನ್ನು ತಯಾರಿಸಿಕೊಟ್ಟ ಬಡಿಗೇರ ಕುಶಲಕರ್ಮಿಗಳ ದಾಖಲೆಗಳು ಮಾತ್ರ ಎಲ್ಲಿಯೂ ಉಳಿದುಕೊಂಡಿಲ್ಲ. 'ಕ್ರಿ.ಶ.೧೮೫೮ ಇತ್ತೀಚಿನ ಪಾಂಡವಪುರ ಕನ್ನಂಬಾಡಿ ಗ್ರಾಮದಲ್ಲಿರುವ ಮಹಾಲಕ್ಷ್ಮಿ ಗುಡಿಗೆ ಸೇರಿದ ರಥವನ್ನು ಧರ್ಮಲಿಂಗಾಚಾರಿ ಎನ್ನುವವನು ರಚನೆ ಮಾಡಿದ್ದಾನೆ. ಶಾಸನವು ಧರ್ಮಲಿಂಗಾಚಾರಿ ನಿರ್ಮಿತ ಎಂದು ಮಾತ್ರ ಹೇಳದೆ"[೨೧] ೧೯೧೮ ರಿಂದ ೧೯೨೬ರ ಅವಧಿಯಲ್ಲಿ ತಯಾರಾದ ಲಿಂಗಸೂರಿನ ಕುಪ್ಪಿ ಭೀಮದೇವರಿಗೆ ಒಂದು ಸುಂದರವಾದ ರಥವನ್ನು ರಥಶಿಲ್ಪಿ ಈರಪ್ಪ ಬಡಿಗೇರ(ಸಂಧಿಮನಿ) ಅವರು ತಯಾರಿಸಿ ಕೊಟ್ಟಿದ್ದಾರೆ. ಜಗನ್ನಾಥದಾಸರ ಶಿಷ್ಯ ವರದೇಶ ವಿಠ್ಠಲರು ತಮ್ಮ ಕೀರ್ತನೆಯಲ್ಲಿ "ಈರಪ್ಪನೆಂಬ ಬಡಿಗನು ಮುನಿಯ ಚಾರುತನದಲ್ಲಿ ನಿರ್ಮಿಸಿದವನು. ತೋರುವ ಸಿಂಹಾಸನವನ್ನು ಮಧ್ಯೆಗಾರದಿ ನಿನಗಾಗಿ ವಿರಚಿಸಿಹನು......"[೨೨] ಎಂದು ರಥಶಿಲ್ಪಿಯ ಕಲಾಕೌಶಲ್ಯತೆಯನ್ನು ಹಾಡಿದ್ದಾರೆ.

ನಂಜುಂಡ ಕವಿಯ ಕುಮಾರ ರಾಮ ಸಾಂಗತ್ಯದಲ್ಲಿಯೂ ಬಡಿಗೇರರು ಯುದ್ಧೋಪಕರಣ ಗಳನ್ನು ತಯಾರಿಸಿದ ಸಂಗತಿ ತಿಳಿದುಬರುತ್ತದೆ. 'ಬಲಿನ ಪೆಟಲ ಬೆಣೆ, ಡೆಂಕಣಿಗೈ ಪಂದಿದತೆ, ತಿರುಗಣಿ, ಭೀಮಗದೆ ಮೊದಲಾದ ಮರದ ಆಯುಧಗಳನ್ನು ಬಡಗಿಗಳು ಕೆತ್ತಿದರು. "ಕೆತ್ತುವಾ ಬಡಗಿಗಳಿಂಥಾ ದುರ್ಗಸಲೆ ಮೆರೆದುದು"[೨೩] ಮರದ ಆಯುಧಗಳನ್ನು ಕೋಟೆಯೊಳಗಡೆ ಸುರಕ್ಷಿತವಾದ ಸ್ಥಳದಲ್ಲಿ ಬಡಿಗೇರರು ತಯಾರಿಸುತ್ತಿದ್ದರೆಂಬುದು ತಿಳಿದುಬರುತ್ತದೆ.

ವ್ಯವಸಾಯ ಮತ್ತು ಬಡಗಿತನ

ಗ್ರಾಮೀಣ ಸಂಸ್ಕೃತಿಯ ಪ್ರಸಾರಕರಾದ ಬಡಿಗೇರರು, ಕೃಷಿಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಬಡಿಗೇರರ ಕೆಲಸವು ದೈಹಿಕ ಶ್ರಮದ ಕೆಲಸವಾಗಿದೆ. ರೆಂಟೆ-ಕುಂಟೆ ನೇಗಿಲುಗಳನ್ನು ಮರದ ಕಟ್ಟಿಗೆಯಲ್ಲಿ ತಯಾರಿಸುತ್ತಿದ್ದರು. ಇವುಗಳನ್ನು 'ಬಡಿಸಾಲಿ'ಯಲಿ ಬಾಚಿ-ಉಳಿಯಿಂದ ಕೆತ್ತಿ, ಕೃಷಿ ಉಪಕರಣಗಳನ್ನು ನಿರ್ಮಿಸುತ್ತಿದ್ದರು. ಇತ್ತೀಚೆಗೆ ಆಧುನಿಕ ಯಂತ್ರಗಳು, ಕಬ್ಬಿಣ ಉಪಕರಣಗಳ ಬಳಕೆಯಿಂದಾಗಿ ಬಡಿಗ ಸಾಲಿಯಲಿ ರೆಂಟೆ-ಕುಂಟೆ-ನೇಗಿಲು ಮಾಯ ವಾಗುತ್ತಿವೆ. ಬಡಿಗೇರರು ಕೃಷಿ ಮತ್ತು ಕೃಷಿಯೇತರ ಉಪಕರಣಗಳನ್ನು ತಯಾರಿಸಿಕೊಡುವ ಮುನ್ನ ತಮಗೆ ಬೇಕಾದ ಪರಿಕರಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು.

ಬಡಿಗತನದ ಸಾಧನೋಪಕರಣಗಳು: ಬಡಿಗೇರರು ಎಂದರೆ ಬ್ರಹ್ಮಜ್ಞಾನಿಗಳು. ವಿಶ್ವಕರ್ಮನ ಸಂತಾನುದ್ಭವರಾದ ಬಡಿಗೇರರು ಜ್ಞಾನವಂತರು ಮತ್ತು ಕ್ರಿಯಾಶೀಲರಾಗಿದ್ದಾರೆ. "ಜ್ಞಾನವೆನ್ನುವುದು

ಮನುಷ್ಯನಿಗೆ ಧ್ಯಾನಮೂಲವಾಗಿ ಬರಲಿಲ್ಲ, ಕ್ರಿಯಾಮೂಲವಾಗಿ ಬಂದದ್ದು ಇಂತಹ ಕ್ರಿಯಾಮೂಲ ಜ್ಞಾನದ 'ಬಡಗಿ'ಯನ್ನು ಋಗ್ವೇದವು 'ಜ್ಞಾನಿ' ಎಂದು ಕರೆಯುತ್ತದೆ."[೨೪] ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಬಡಿಗೇರರಿಗೆ 'ಬ್ರಹ್ಮಬಡಿಗ'ನು ಎಂದು ಗೌರವಿಸುತ್ತಾರೆ. ಕ್ರಿಯೆ ಮತ್ತು ಅರಿವಿನ ಸಂಬಂಧಗಳು ಕುಶಲಕರ್ಮಿಯ ಜೀವನದ ಮುಖ್ಯ ಗುಣವಾಗಿದೆ. ಅರಿವಿನ ಬಲವನ್ನು ಕ್ರಿಯೆಗೆ ಬಳಸಿ ತನ್ನ ವೃತ್ತಿಬದುಕಿಗೆ ಅಗತ್ಯವಾದ ಪರಿಕರಗಳನ್ನು ತಯಾರಿಸಿಕೊಳ್ಳುತ್ತಾನೆ.

ದೊಡ್ಡ ಕೊಡಲಿ, ಕೈಕೊಡಲಿ, ಬಾಚಿ, ದೊಡ್ಡ ಉಳಿ, ಸಣ್ಣ ಉಳಿ, ಕೋಡಕುಳಿ, ಅಗಲಬಾಯಿ ಉಳಿ, ಗುಂಡುಬಾಯಿ ಉಳಿ, ದೊಡ್ಡಗರಗಸ, ಕೈಗರಗಸ, ಮಟ್ಟಲಿಗೆ(ಮಟವಾಲಿಗೆ), ಅರನ, ಅಗಲರನ, ಮುರೇನಿನ ಅರನ(ಗರಗಸ ಹರಿತಗೊಳಿಸಲು ಬಳಸುವ ಸಾಧನ) ಕೊಡಲಿ, ಚೌಕ ಕೊಡಲಿ, ಗುಂಡುಕೊಡಲಿ, ಉಚುಗೊಡ್ಡ, ಸಣ್ಣ ಉಚುಗೊಡ್ಡ, ಅರ್ಧಚಂದ್ರಾಕೃತಿ ಉಚುಗೊಡ್ಡ(ಮಟೆ ಒಳಭಾಗ ನುನುಪುಗೊಳಿಸಲು ಬಳಸುವುದು), ಕೈವಾರ, ಸುತ್ತಿಗೆ, ಸಳ್(ರಂಧ್ರ ತೆಗೆಯುವುದು), ಇತ್ತೀಚೆಗೆ ಡ್ರೀಲ್ ಮಸಿನ್, ಸ್ಕೂಡ್ರೈವರ್, ಟೇಪು ಇವು ಬಡಿಗತನ ವೃತ್ತಿಗೆ ಬಡಿಗೇರರು ತಾವಾಗಿಯೇ ಕಂಬಾರನ ಸಹಾಯದೊಂದಿಗೆ ತಯಾರಿಸಿಕೊಳ್ಳುತ್ತಾರೆ. ಮರದ ವಸ್ತುಗಳು ನುನುಪಾಗಿ ಕಾಣಲು ಪಾಲೀಸ್ ಕಾಗದ, ಪಾಲೀಸ್ ಮಶೀನು ಬಳಕೆಯಾಗುತ್ತಿದೆ. ಕಟ್ಟಿಗೆ ಕತ್ತರಿಸಲು ಕತ್ತರಿಸುವ ಮಶೀನು ಬಡಿಗೇರರು ಬಳಸುತ್ತಿದ್ದಾರೆ. ಮರದ ವಸ್ತುಗಳನ್ನು ತಯಾರಿಸುವಾಗ ಗುರುತು ಹಾಕಲು ಸೀಸ ಪೆನ್ಸಿಲ್, ಬಾಲ್ ಪೆನ್ನು, ಕಡುವುಗಳನ್ನು ಬಳಸಲಾಗುತ್ತದೆ. ವಿವಿಧ ವಸ್ತುಗಳಿಗೆ ಪೂರಕವಾಗಿ ಪ್ಲೇವುಡ್, ಪೆವಿಕಾಲ್, ಸನ್‌ಮೈಕ್, ಮೇಣ, ಸ್ಪಿರಿಟ್, ಫ್ರೆಂಚ್‌ಪಾಲಿಶ್ ಬಣ್ಣಗಳನ್ನು ಬಳಸುತ್ತಾರೆ.

ಕಟ್ಟಿಗೆಯ ಜಾತಿಯನ್ನು ಗುರುತಿಸಲು ಬಡಿಗೇರರಷ್ಟು ಜ್ಞಾನ ಯಾರಿಗೂ ಇಲ್ಲವೆಂಬ ಮಾತು ಇಂದಿಗೂ ಹಳ್ಳಿ ಪಟ್ಟಣಗಳಲ್ಲಿ ಬಳಕೆಯಲ್ಲಿದೆ. ಬಡಿಗೇರರು ಕಟ್ಟಿಗೆಯ ಎಲ್ಲ ಜಾತಿ ಮತ್ತು ಗುಣ-ಲಕ್ಷಣಗಳನ್ನು ಬಲ್ಲವರಾಗಿದ್ದಾರೆ. ಯಾವ ಯಾವ ವಸ್ತುಗಳನ್ನು ಯಾವ ಯಾವ ಜಾತಿ ಮರದಿಂದ ತಯಾರಿಸಬೇಕೆಂಬುದು ವಂಶಪಾರಂಪರಿಕವಾಗಿ ತಿಳಿದುಕೊಂಡಿರುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ಜಾಲಿ, ಕರಿಜಾಲಿ, ಬೇವು, ಮಾವು, ತೇಗು, ಹೊನ್ನಿ, ನೀಲಗಿರಿ, ಬಾರಿ, ಹೆದ್ದಿ, ಜಂಗಲ, ನಾನಾ, ಆರಿ, ಇಂಗಳ ಕಟ್ಟಿಗೆಗಳ್ನು ಬಡಿಗೇರರು ಬಳಸುತ್ತಾರೆ. ವಿವಿಧ ಜಾತಿಯ ಮರದ ಮಹತ್ವತೆಯನ್ನು ರೈತರಿಗೆ ತಿಳಿಸುತ್ತಾರೆ. ಬಡಿಗೇರರು ತಯಾರಿಸುವ ವಸ್ತುಗೆ ಸಂಬಂಧಿಸಿ, ಮರದ ತುಂಡುಗಳನ್ನು ಒಮ್ಮೆ ವಿಕ್ಷೀಸಿದರೆ ಸಾಕು ವಸ್ತು ಈ ಕಟ್ಟಿಗೆಯಲ್ಲಿ ರೂಪಗೊಳ್ಳುವುದರ ಖಚಿತ ಮಾಹಿತಿ ಪಡೆದುಕೊಳ್ಳುತ್ತಾರೆ. ರೈತ ಮರವನ್ನು ಕಡಿದು ಅಂದಾಜು ದುಂಡಾಗಿಸಿ ಬಡಿಸಾಲಿಗೆ ತಂದು ಒಗೆಯುತ್ತಾನೆ. ಬಡಿಗನು ಆಗಲೇ ಮರದ ತುಂಡು ಉಪಯುಕ್ತ ಇಲ್ಲವೇ ಅನುಪಯುಕ್ತವೆಂದು ಹೇಳುತ್ತಾರೆ.

ಬಡಿಗನಲ್ಲಿ ಕಟ್ಟುವಿಕೆಯ ವಿಶೇಷ ಗುಣವಿದೆ. ಒಂದು ಮರದ ತುಂಡಿನಲ್ಲಿ ಒಂದು ವಸ್ತುವನ್ನು ತಯಾರಿಸಬೇಕೆಂದು ಪೂರ್ವ ನಿರ್ಧಾರ ಮಾಡಿದನೆಂದರೆ ಏನೇ ತೊಂದರೆಯಾದರೂ ಮರದಲ್ಲಿ ರೂಪವನ್ನು ಕಟ್ಟುತ್ತಾನೆ. ಕಟ್ಟುವಿಕೆ ಬಡಿಗೇರರಿಗೆ ದೇವರು ಕೊಟ್ಟ ವರ. ಕುಶಲಕರ್ಮಿಗಳು ಮಾಡುವ ವಸ್ತುವಿನಿಂದ ಲೋಕಮಾನ್ಯರಾಗಿದ್ದಾರೆ.

> "ಬಡಿಗ ಕಮ್ಮಾರರು ಪೊಡವಿಗಧಿಕರ್ತರು
> ಬಡಿದು ಬತ್ತೀಸ ಆಯುಧವ ಮಾಡಿ
> ಸರ್ವರಿಗೆ ಕೊಡುವರಯ್ಯ ಬಸವಣ್ಣ"[೨೫]

ತಿಂಥಣಿಯ ಮೌನೇಶ್ವರರ ಈ ವಚನವು ಬಡಿಗೇರರ ವೃತ್ತಿ ಲೋಕಪ್ರಿಯತೆಯನ್ನು ದೃಢೀಕರಿಸುತ್ತದೆ. ಬಡಿಗರು ವಿಶ್ವಕ್ಕೆ ಅಗತ್ಯವಾಗಿರುವ ಎಲ್ಲ ಬಗೆಯ ವಸ್ತುಗಳನ್ನು ತಯಾರಿಸುತ್ತಾರೆ. ಸರ್ವಜನರಿಗೆ ಪ್ರಿಯರಾಗುತ್ತಾರೆ. ಪ್ರೀತಿ-ವಿಶ್ವಾಸ-ನಂಬಿಕೆಗಳ ಸಾಕ್ಷಿಯಾಗುತ್ತಾರೆ.

ಬಡಿಗರು ತಮ್ಮಲ್ಲಿಯ ಹರಿತ-ನುರಿತ ಸಾಧನ, ಪರಿಕರಗಳಿಂದ ಸೂಕ್ಷ್ಮ ಕೆತ್ತನೆಯ ಕೆಲಸಗಳನ್ನು ಅಚ್ಚುಕಟ್ಟಾಗಿ ತಯಾರಿಸುತ್ತಾರೆ. ಸುಳಿವಿನ-ಹೊಳೆವಿನ ಕೆಲಸಗಳು ಬಡಿಗರ ಸೂಕ್ಷ್ಮ ಪ್ರಜ್ಞೆ ಹಾಗೂ ಪ್ರತಿಭೆಯನ್ನು ಗುರುತಿಸುತ್ತವೆ. ಬಡಿಗರ ಪ್ರತಿ ವಸ್ತು ರೂಪದಲ್ಲಿ ಅನುಭವ ಜ್ಞಾನ ಕೆಲಸ ಮಾಡುತ್ತದೆ.

ಬಡಿಗೇರರ ಸೇವೆಯು ಪ್ರತಿಗ್ರಾಮಗಳಿಗೂ ಅವಶ್ಯಕವಾಗಿದೆ. ಬಡಿಗರು ರೈತರ ಅಗತ್ಯಕ್ಕೆ ಅನುಗುಣವಾಗಿ ಕೃಷಿಯೋಪಕರಣಗಳನ್ನು ತಯಾರಿಸಿ ಕೊಡಲು ಬೇಕಾಗುತ್ತಾರೆ. ಹಳ್ಳಿಗಳಲ್ಲಿ ಇಂದಿಗೂ ರೈತರ ಮತ್ತು ಬಡಿಗೇರರ ನಡುವೆ ಉತ್ತಮ ಸಂಬಂಧಗಳಿವೆ. ನೇಗಿಲಯೋಗಿ ಒಬ್ಬನಾದರೆ, ಇನ್ನೊಬ್ಬ ರೈತಯೋಗಿ. ಒಬ್ಬರೊಬ್ಬರ ಕೆಲಸ ಕಾರ್ಯಗಳು ಗ್ರಾಮಾಭಿವೃದ್ಧಿಗೆ ಪೂರಕವಾಗಿರುತ್ತದೆ. ವರ್ಷದುದ್ದಕ್ಕೂ ಬಡಿಗರು ರೈತರಿಗೆ ಕೃಷಿ ವಸ್ತುಗಳನ್ನು ತಯಾರಿಸಿಕೊಡುತ್ತಾರೆ. ರಾಶಿ ಮಾಡಿದ ಮೇಲೆ ರೈತರು ವರ್ಷಕ್ಕೊಮ್ಮೆ ನೀಡುವ 'ಆಯ' ಪದ್ಧತಿಯಿತ್ತು. ರಾಶಿ ಮಾಡುವ ಕಣಕ್ಕೆ ಹೋದರೆ ಬಡಿಗರಿಗೆ ಕಡಿ-ಕಾಳುಗಳನ್ನು ನೀಡಿ ಗೌರವಿಸುತ್ತಿದ್ದರು. ನಮ್ಮ ತಂದೆ ಪ್ರತಿವರ್ಷ ಪ್ರತಿಯೊಬ್ಬ ರೈತರಿಂದ ೧೨ ಸೊಲಿಗೆ ಅಂದರೆ ೩೬ ಸೇರು ಕಾಳನ್ನು ಅಳೆಸಿಕೊಂಡು ಬರುತ್ತಿದ್ದರು. ಇವರನ್ನು ಗ್ರಾಮಸ್ಥರು ಪ್ರೀತಿ-ನೀತಿಯಿಂದ 'ಆಯಗಾರ'ರೆಂದು ಸಂಬೋಧಿಸುತ್ತಿದ್ದರು. ಈಗ ಜಾಗತೀಕರಣದ ಯುಗ. ೩೦ ಸೇರು ಕಾಳಿನಲ್ಲಿ ವರ್ಷಗಟ್ಟಲೆ ಕಾಲ ಕಳೆಯುವುದು ಕಷ್ಟವಾಗಿದೆ. ಆಯಗಾರಿಕೆ ಕಡಿಮೆಯಾಗಿ ಹಣಗಾರಿಕೆ ಹುಟ್ಟಿಕೊಂಡಿದೆ. ದವಸ-ಧಾನ್ಯದ ಮೌಲ್ಯ ಹಣದ ರೂಪಕ್ಕೆ ತಿರುಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ರೂಪಾಯಿ ಮೌಲ್ಯ ಕಡಿಮೆಯಾದರೂ ಬಡಿಗೇರರು ತಯಾರಿಸಿಕೊಡುವ ವಸ್ತುಗಳ ಮೌಲ್ಯ ಕಡಿಮೆಯಾಗಿಲ್ಲ. ಇಂದಿಗೂ ರೆಂಟೆ, ಕುಂಟೆ, ಕೂರಿಗೆ, ಬಂಡಿ ಅಗತ್ಯ ವಸ್ತುಗಳಾಗಿವೆ. ಇಂದಿಗೂ ರೈತ ಹೊಲ ಹದಗೊಳಿಸಲು, ಬಿತ್ತನೆಗೆ ಹೊರಟರೆ

ಕೂರಿಗೆ ಕುಂಟಿಗಳ ತಾಳು-ಈಸು ಹಾಸಿ ಕೊಟ್ಟಾಗ ಮಾತ್ರ ರೈತರು ಭಾರತದ ಬೆನ್ನೆಲುಬು ಆಗುವುದಕ್ಕೆ ಕಾರಣವಾಗುತ್ತಾರೆ.

ಬಡಿಗರು ತಯಾರಿಸುವ ವಸ್ತುಗಳು

ಕೃಷಿಯೋಪಕರಣ

ರೆಂಟೆ

ಕುಂಟೆ

ಕೂರಿಗೆ

ಎಡಿಗುಂಟಿ

ಈಸು

ತಾಳು

ಮೇಳಿ

ನೊಗ

ಬಾರಕೋಲು

ಬ್ಯಾಕೋಲ

ಜಂತಗುಂಟಿ

ಮೇಟಿ

ಗ್ವಾರಿ

ಬಂಡಿ

ರೆಂಟೆ : ಬಿತ್ತನೆ ಮಾಡುವ ಮುನ್ನ ಬಿರುಸುಗೊಂಡ ನೆಲವನ್ನು ಆಳವಾಗಿ ಹದಗೊಳಿಸಲು ರೈತರು ರೆಂಟೆಯನ್ನು ಬಳಸುತ್ತಾರೆ. ೮ ಇಂಚು ಅಗಲ, ೫ ಇಂಚು ದಪ್ಪ, ೩ ಅಡಿ ವಿಶಾಲ ಕೋನಾಕೃತಿಯಲ್ಲಿ ಉದ್ದವಿರುತ್ತದೆ. ಮೇಲ ಅರ್ಧಭಾಗ ನೇರವಾಗಿ, ಕೆಳ ಅರ್ಧಬಾಗಿರುತ್ತದೆ. ಕೆಳಭಾಗ ಮಧ್ಯದಿಂದ ತುದಿಯವರೆಗೆ ಚೂಪಾಗಿರುತ್ತದೆ. ಮಧ್ಯದಲ್ಲಿ ೪ ಇಂಚು ಉದ್ದ, ೩ ಇಂಚು ಅಗಲ ಚೌಕಾಕಾರದ ರಂಧ್ರವಿರುತ್ತದೆ. ರಂಧ್ರದಲ್ಲಿ ಈಸು ಹಾಸಲಾಗುತ್ತದೆ.

ಕುಂಟೆ : ಭೂಮಿಯನ್ನು ಹರಗಲು ಈ ಸಾಧನವನ್ನು ಬಳಸಲಾಗುತ್ತದೆ. ೪ ಅಡಿ ಉದ್ದದ ೬ ಇಂಚು X ೪ ಇಂಚು ಅಳತೆಯ ದಪ್ಪ ಕಟ್ಟಿಗೆಯಲ್ಲಿ ಕುಂಟಿ ದಿಂಡನ್ನು ತಯಾರಿಸಲಾಗುತ್ತದೆ. ಕುಂಟಿ ದಿಂಡಿಗೆ ಒಟ್ಟು ೫ ರಂಧ್ರಗಳಿರುತ್ತವೆ. ೨ ಈಸು ಹಾಸಲು, ಎರಡು ತಾಳ ಹಾಸಲು ಮತ್ತು

ಒಂದು ಮೇಳಿ ಹಾಸಲು ಇರುತ್ತವೆ. ೪ ಮುಖದ ದಿಂಡು ಬಾಚಿಯಿಂದ ಕೆತ್ತಿ ಅಷ್ಟಫೆಲ್ ೮ ಮುಖದಲ್ಲಿ ತಯಾರಿಸಲಾಗುತ್ತದೆ. ದಿಂಡಿನ ಮೇಲ್ಭಾಗ ಮೇಳಿಯ ರಂಧ್ರರ, ಮುಂಭಾಗ ಎರಡು ಈಸಿನ ರಂಧ್ರಗಳು ಮತ್ತು ಕೆಳಭಾಗದ ಮಧ್ಯಮುಖಭಾಗದಲ್ಲಿ ತಾಳಿಗೆ ಎರಡು ರಂಧ್ರಗಳನ್ನು ತೊಡಲಾಗುತ್ತದೆ. ಐದು ರಂಧ್ರಗಳು ಪರಸ್ಪರ ಸಂಧಿಸುವುದಿಲ್ಲ, ಆ ತೀಕ್ಷ್ಣತೆಯನ್ನು ಅರಿತುಕೊಂಡೆ ಬಡಿಗೇರರು ಕುಂಟೆ ತಯಾರಿಸುತ್ತಾರೆ.

ಕೂರಿಗೆ : ಹೊಲದಲ್ಲಿ ಬಿತ್ತನೆ ಕೆಲಸಕ್ಕೆ ಈ ಉಪಕರಣವನ್ನು ಬಳಸುತ್ತಾರೆ. ೬ X ೪ ಇಂಚು ಅಳತೆಯ ೪ ಅಡಿ ಉದ್ದವಿರುವ ಮರದ ತುಂಡಿನಲ್ಲಿ ಕೂರಿಗೆ ದಿಂಡನ್ನು ತಯಾರಿಸಲಾಗುತ್ತದೆ. ಸಾಮಾನ್ಯವಾಗಿ ಕೂರಿಗೆ ದಿಂಡು ೩ ತಾಳು (ಮುತ್ತಾಳ ಕೂರ್ಗಿ)ಗಳನ್ನು ಹೊಂದಿರುತ್ತವೆ. ಒಟ್ಟು ೬ ರಂಧ್ರಗಳಿರುತ್ತವೆ. ಮೂರು ತಾಳುಗಳ ಮಧ್ಯ ರಂಧ್ರವಿದ್ದು ಶೆಡ್ಡಿ ಕೋಲುಗಳನ್ನು ಶೆಡ್ಡಿ ಬಟ್ಟಲಕ್ಕೆ ಜೋಡಿಸಿ ಕಾಳನ್ನು ಬಿತ್ತುತ್ತಾರೆ. ಕಾಳು ತಾಳ ಮೂಲಕ ಭೂಮಿಗೆ ಸರಿಯಾಗಿ ಬೀಳುತ್ತವೆಯೋ ಇಲ್ಲವೋ ಎಂಬುದನ್ನು ರೈತರು ಬಡಿಗ ಸಾಲಿಯಲ್ಲಿ ಪರೀಕ್ಷಿಸಿಕೊಳ್ಳುತ್ತಾರೆ. ಪರೀಕ್ಷಿಸಲು ತಂದ ಕಾಳನ್ನು ಬಡಿಗನಿಗೆ ನೀಡುವ ಪದ್ಧತಿಯಿದೆ. ಭೂಮಿಗೆ ಬೀಳುವ ಕಾಳು ಮೊದಲು ಬಡಿಗರ ಮನೆ ಸೇರುತ್ತದೆ. ರೈತನೊಬ್ಬ ಕಾಳುಗಳಲ್ಲಿ ಒಂದು ಮುಷ್ಠಿಯಷ್ಟು ಕಾಳನ್ನು ಬಡಿಗರು ರೈತನಿಗೆ ನೀಡುವುದು ವಾಡಿಕೆಯಾಗಿದೆ.

ಎಡಿಗುಂಟೆ : ಬಿತ್ತನೆಯಾದ ತಿಂಗಳ ಹೊತ್ತಿಗೆ ಬೆಳೆ ಕಿರಿದಾಗಿ ಬೆಳೆಯುತ್ತಿರುತ್ತದೆ. ಸಣ್ಣ-ಪುಟ್ಟ ಕಳೆಯನ್ನು ತೆಗೆದು ಹಾಕಲು ಎಡಿಗುಂಟೆಯನ್ನು ಬಳಸಲಾಗುತ್ತದೆ. ಬೆಳೆಯ ಎರಡು ಸಾಲುಗಳು ಮಧ್ಯ ಹಾದು ಹೋಗುವಷ್ಟು ೧ ಅಡಿ ಉದ್ದ ೫ X ೩ ಇಂಚು ದಪ್ಪವಿರುವ ದಿಂಡು, ೫ ರಂಧ್ರಗಳನ್ನು ಹೊಂದಿರುತ್ತದೆ. ಈಸು, ತಾಳು, ಕುಡ ಮೇಳಿಗೆಗಳನ್ನು ಹೊಂದಿರುತ್ತದೆ. ಬಿತ್ತಿದ ಮೇಲೆ ಎಡಿ ಹೊಡೆಯದಿದ್ದರೆ ಬೆಳೆ ಸರಿಯಾಗಿ ಬೆಳೆಯುವುದಿಲ್ಲ. ಕುಂಟೆ-ಕುರಿಗೆಯಷ್ಟೇ ಮಹತ್ವತೆಯನ್ನು ಎಡಿಗುಂಟೆ ಪಡೆದಿದೆ.

ಈಸು : ರೈತ ಭೂಮಿಯಲ್ಲಿ ಬಿತ್ತುವ, ಹರಗುವ ನೇಗಿಲು ಹೊಡೆಯುವ ಪ್ರತಿ ಉಪಕರಣಗಳಿಗೆ ಈಸು ಅವಶ್ಯಕವಾಗಿದೆ. ಬಿತ್ತುವ, ಹರಗುವ ಸಂದರ್ಭದಲ್ಲಿ ಈಸು ಮುರಿದರೆ ಅಂದಿನ ದುಡಿಮೆ ವ್ಯರ್ಥವಾಗುತ್ತದೆ. ಇಲ್ಲವೆ ಹೊಲಕ್ಕೆ ಬಡಿಗನೇ ಹೋಗಿ ಈಸು ಹಾಸಬೇಕಾಗುತ್ತದೆ. ಆಯಾ ಉಪಕರಣಗಳಿಗನುಗುಣವಾಗಿ ಈಸಿನ ಉದ್ದಳತೆಯಲ್ಲಿ ಏರುಪೇರು ಇರುತ್ತದೆ. ಸಾಮಾನ್ಯವಾಗಿ ೮ ಅಡಿ ಉದ್ದವಿರುವ ಈಸನ್ನು ಬಡ್ಡಿ ತುದಿಯನ್ನು ಬಡಿಗೇರರು ಬಾಚಿ-ಉಳಿದಿಂದ ಕೆತ್ತಿ, ಚೌಕಾಕಾರ ತಂದು ದಿಂಡಿಗೆ ಹಾಸುತ್ತಾರೆ. ಕೆತ್ತುವಾಗ ಹೆಚ್ಚಾಗಿ ಕೆತ್ತಿದರೆ ಈಸು ಅನುಪಯುಕ್ತವಾಗುತ್ತದೆ. ರೈತರ ಪ್ರತಿಯೊಂದು ಕಟ್ಟಿಗೆಯು ಹಾಳಾಗದಂತೆ ಬಡಿಗೇರರು ನೋಡಿಕೊಳ್ಳುತ್ತಾರೆ. ರೆಂಟೆಗೆ ೫ ಇಂಚು

ಸುತ್ತಳತೆಯ ಈಸು ಬೇಕು. ಉಳಿದಂತೆ ಇತರ ದಿಂಡುಗಳಿಗೆ ೩ ಇಂಚು ಸುತ್ತಳತೆ ಈಸು ಬೇಕಾಗುತ್ತದೆ. ಈಸು ಹಾಸಲು ಕಡ್ಡಾಯವಾಗಿ ಬಡಿಗನಿಗೆ ಬಾಚಿ ಬಳಕೆಯ ಜ್ಞಾನ ಅವಶ್ಯಕ ವಾಗಿರುತ್ತದೆ. 'ಬಾಚಿ ಬಳಸದವನು ಬಡಿಗನೇ ಅಲ್ಲ' ಎಂಬ ನುಡಿ ಹಳ್ಳಿಗಳಲ್ಲಿ ಬಳಕೆಯಿದೆ. ಕೃಷಿಯ ಎಲ್ಲ ಉಪಕರಣಗಳ ಈಸಿಗಿಂತ ಬಂಡಿಯ ಈಸು ದೊಡ್ಡದು ಮತ್ತು ವೃತ್ತಿ ಕೌಶಲ್ಯತೆಯಿಂದ ಕೂಡಿದ್ದಾಗಿರುತ್ತದೆ. ಚೌಕಾಕಾರದಲ್ಲಿರುವ ಬಂಡಿಯ ಈಸು, ಅನೇಕ ರಂಧ್ರಗಳನ್ನು ಹೊಂದಿರುತ್ತದೆ. ಸ್ವಲ್ಪ ಉಚುಗೊಡ್ಡದಿಂದ ನುನುಪು ಮಾಡಲಾಗಿರುತ್ತದೆ. ಈಸಿನ ಕಟ್ಟಿಗೆ ಜಾತಿ ತೇಗಿನದಾಗಿರುತ್ತದೆ.

ತಾಳು : ಕೃಷಿಗೆ ಬಳಸುವ ಉಪಕರಣಗಳ ಪ್ರತಿ ದಿಂಡುಗಳಿಗೂ ತಾಳುಗಳು ಬೇಕಾಗುತ್ತವೆ. ತಾಳು ಇಲ್ಲದಿದ್ದರೆ ರೈತನ ಬಾಳು ಇಲ್ಲವೆಂಬುದು ನಿತ್ಯ ಬಳಕೆಯ ಮಾತಾಗಿದೆ. ಕೂರಿಗೆಗೆ ೬ ಇಂಚು ದಪ್ಪವಿರುವ ೨ ಅಡಿ ಉದ್ದವಿರುವ ಜಾಲಿ ಕಟ್ಟಿಗೆಯಲ್ಲಿ ಬಡಿಗರು ತಾಳನ್ನು ಕೆತ್ತುತ್ತಾರೆ. ಮಧ್ಯದಲ್ಲಿ ಕಾಳು ಬೀಳಲು ದೊಡ್ಡ ರೂಪಾಯಿ ಅಗಲದಷ್ಟು ರಂಧ್ರವಿರುತ್ತದೆ. ಕೆಳತುದಿ ಚೂಪಾಗಿದ್ದು ಉದ್ದನೆಯ ಕಬ್ಬಿಣ ಪಟ್ಟಿಯನ್ನು(ಹೊಂಬಲ) ಬಡೆಯುತ್ತಾರೆ. ಇದರಿಂದ ತಾಳುಗಳು ಬೇಗ ಸವೆಯುವುದಿಲ್ಲವೆಂಬ ನಂಬಿಕೆ ರೈತ ಮತ್ತು ಬಡಿಗರಲ್ಲಿದೆ. ಕುಂಟೆ-ಎಡೆಗುಂಟೆಗಳಿಗೂ ತಾಳನ್ನು ಹಾಸಲಾಗುತ್ತದೆ. ಮೇಲ್ತುದಿ ಚಪ್ಪಟೆಯಾಗಿ ಕೆತ್ತಲಾಗುತ್ತಿದ್ದು, ಕೆಳತುದಿ ದುಂಡಾಗಿರುತ್ತದೆ. ಕೆಳ ತುದಿಗೆ ಗುಂಡು ಬಳೆಯನ್ನು ಬಡಿಗರು ಹೊಂದಿಸುತ್ತಾರೆ. ತಾಳಿನ ಹೊರಬದಿಗೆ ಕುಡದ ಕಿವಿ ಸೇರುವಷ್ಟು ೧ ಇಂಚು ಉದ್ದ ಅರ್ಧ ಇಂಚು ಅಗಲ ರಂಧ್ರ ತೆಗೆದಿರುತ್ತಾರೆ.

ಮೇಳಿ : ಕೃಷಿ ಉಪಕರಣಗಳಿಗೆ ತಾಳುಗಳು ಎಷ್ಟು ಮುಖ್ಯವೋ ಅಷ್ಟೇ ಮೇಳಿಯು ಮುಖ್ಯವಾಗಿರುತ್ತದೆ. ತಾಳ ಮೇಳಿಗಳಿಲ್ಲದಿದ್ದರೆ ರೈತನ ಬದುಕೆ ಅತಂತ್ರ. 'ರೈತನ ಬದುಕಿಗೆ ತಾಳ-ಮೇಳಗಳು ಬೇಕು' ಎಂದು ರೈತ ಸಮುದಾಯ ಹೇಳುತ್ತದೆ. ಮೇಳಿ ದಿಂಡುಗಳಿಗೆ ಹೊಂದಿಕೊಂಡು ರೈತನಿಗೆ ಆಸರೆ ಗೋಲಾಗಿರುತ್ತದೆ. ೨ ಅಡಿ ಎತ್ತರವಿರುತ್ತದೆ. ಮೇಲ್ತುದಿಯಲ್ಲಿ ರೈತನು ಹಿಡಿಯಲು ಅನುಕೂಲವಾಗು ವಂತೆ ಬಡಿಗೇರರು ಕೆತ್ತಿರುತ್ತಾರೆ. ಮೇಲ್ಭಾಗ ಟಿ T ಆಕಾರದಲ್ಲಿರುತ್ತದೆ.

ನೊಗ : ರೈತ ಹೊಲದಲ್ಲಿ ಕೃಷಿ ಕೆಲಸಗಳನ್ನು ಮಾಡುವಾಗ, ಉಳುವಾಗ-ಬಿತ್ತುವಾಗ ಎರಡು ಎತ್ತುಗಳು ಸಮಾನವಾಗಿ ಎಳೆದುಕೊಂಡು ಹೋಗಲು ನೊಗವನ್ನು ಬಳಸಲಾಗುತ್ತದೆ. ಎಂಟು(೮) ಗೇಣು ೧ ಗೇಣ-೮ ಇಂಚು, ೮ ಗೇಣೂ X೮=೬೪ ಇಂಚು=೫ ಅಡಿ ೪ ಇಂಚು ಉದ್ದವಿರುವ ನೊಗ ಬಳಕೆಯಲ್ಲಿದೆ. ಕುಂಟೆ-ಕೂರಿಗೆಗೆ ನೊಗ ದುಂಡಾಗಿ ಬಾಚಿಯಿಂದ ಕೆತ್ತಲಾಗುತ್ತದೆ. ಎತ್ತುಗಳ ಹೆಗಲಿಗೆ ತೊಂದರೆಯಾಗದಂತೆ ಬಡಿಗೇರರು ಉಚುಗೊಡ್ಡದಿಂದ ನುನುಪುಗೊಳಿಸಿರುತ್ತಾರೆ. ನೊಗದ ಎರಡು ತುದಿಗಳಲ್ಲಿ ಎರಡೆರಡು ರಂಧ್ರಗಳಿದ್ದು, ಮಧ್ಯ ಈಸುಗಳನ್ನು ಕಟ್ಟಲು ಅನುಕೂಲವಾಗುವಂತೆ ಉಳಿಯಿಂದ ಎರಡು ದಪ್ಪ ಗೆರೆ(ಪಡು) ಕೆತ್ತಿರುತ್ತಾರೆ. ಬಂಡಿಯ ನೊಗ ಮಧ್ಯದಲ್ಲಿ ಚೌಕಾಕಾರವಿದ್ದು

ಎರಡು ಬದಿಗೆ ದುಂಡಾಗಿರುತ್ತದೆ. ಚರ್ಮದ ಜತಿಗಿಕಟ್ಟಲು ಎರಡೆರಡು ರಂಧ್ರಗಳಿರುತ್ತವೆ. ಮಧ್ಯದಲ್ಲಿ ಒಂದು ರಂಧ್ರ ತೆಗೆದು ಗುಂಡು ಬಳೆ ಬಡಿಯುತ್ತಾರೆ. ಮಧ್ಯದ ಮೇಲ್ಭಾಗದಲ್ಲಿ ಹೂವು, ಲಿಂಗ ಮತ್ತು ಚಿತ್ರಗಳನ್ನು ಬಡಿಗೇರರು ಕೆತ್ತಿರುವುದು ಅವರ ಸೃಜನಶೀಲತೆಯನ್ನು ತೋರಿಸುತ್ತದೆ.

ಬಾರಕೋಲು : ರೈತ ಎತ್ತುಗಳನ್ನು ಹೊಡೆಯಲು ಬಳಸುವ ಸಾಧನವಾಗಿದೆ. ಒಂದು ಮೊಳ=೧೮ ಇಂಚು=೧ ಅಡಿ ೬ ಇಂಚು ಉದ್ದದ ೧ ಇಂಚು ದಪ್ಪವಿರುವ ಕೋಲಿನಲ್ಲಿ ಇದನ್ನು ಬಡಿಗೇರರು ತಯಾರಿಸುತ್ತಾರೆ. ಉಳಿ-ಬಾಚಿಯಿಂದ ದುಂಡಾಗಿ ಕೆತ್ತಿ ಸಣ್ಣ ಉಚಗೊಡ್ಡದಿಂದ ನುನುಪುಗೊಳಿಸ ಲಾಗಿರುತ್ತದೆ. ಕೋಲಿನ ಮುಂಭಾಗದಲ್ಲಿ ಒಂದು ರಂಧ್ರ ತೆಗೆಯಲಾಗಿರುತ್ತದೆ. ರಂಧ್ರ ತೆಗೆದ ಕೋಲಿಗೆ ಚರ್ಮದ ಬಾರನ್ನು ಕಟ್ಟಿದಾಗ ಬಾರಕೋಲು ಎತ್ತುಗಳನ್ನು ನಿಯಂತ್ರಿಸಲು ರೂಪ ತಾಳುತ್ತದೆ.

ಜಂತಗುಂಟಿ : ರೈತರು ಬೆಳೆದ ಬೆಳೆಯನ್ನು ಬೆಳೆದು ರಾಶಿ ಮಾಡುವಾಗ ಜಂತಗುಂಟಿಯನ್ನು ಬಳಸುತ್ತಾರೆ. ೧ ಅಡಿ ಉದ್ದದ ೪ X ೩ ಇಂಚು ಅಳತೆಯ ದಪ್ಪವಿರುವ ಕಟ್ಟಿಗೆಯಲ್ಲಿ ದಿಂಡನ್ನು ತಯಾರಿಸುತ್ತಾರೆ. ದಿಂಡಿಗೆ ೬-೮ ರಂಧ್ರಗಳನ್ನು ತೆಗೆದು ಹಲ್ಲುಗಳನ್ನು ಜೋಡಿಸಲಾಗುತ್ತದೆ. ತೆನೆಗಳನ್ನು ಕಣದಲ್ಲಿ ಜಗ್ಗುವಾಗ, ಹೊಟ್ಟನ್ನು ತುಂಬುವಾಗ ಇದನ್ನು ಉಪಯೋಗಿಸಲಾಗುತ್ತದೆ. ೫-೬ ಅಡಿ ಉದ್ದದ ಈಸನ್ನು ಜಂತಗುಂಟಿಗೆ ಹಾಸಲಾಗಿರುತ್ತದೆ.

ಮೇಟಿ : ರಾಶಿ ಮಾಡುವಾಗ ರೈತರು ಕಣವನ್ನು ಮಾಡಲೇ ಬೇಕಾಗುತ್ತಿತ್ತು. ಇಂದಿನ ಹಾಗೆ ಹಾಲರ್ ಮಶೀನ್‌ಗಳು ಇದ್ದಿರಲಿಲ್ಲ. ಕಣ ಸಾರನೆ ಮಾಡಿ ಅಂದವಾಗಿಸಿ ತೆನೆಗಳನ್ನು ಸುರಿದು ಉರುಳು ಕಲ್ಲಿನಿಂದ ಸುತ್ತಾಡಿಸುತ್ತಿದ್ದರು. ಕಣದ ರಾಶಿಗೆ ಮುಖ್ಯವಾಗಿ ಮೇಟಿ ಅವಶ್ಯಕವಾಗಿರುತ್ತದೆ. ಇದು ಕಣದ ಮಧ್ಯದಲ್ಲಿ ತಗ್ಗು ಅಗೆದು ನಿಲ್ಲಿಸಲಾಗಿರುತ್ತದೆ. ಕಣದ ಮೇಲ್ಭಾಗದಿಂದ ೬ ಅಡಿ ಎತ್ತರವಿರುತ್ತದೆ. ದುಂಡಾಗಿ ಬಾಚಿಯಿಂದ ಬಡಿಗೇರರು ಕೆತ್ತಿರುತ್ತಾರೆ.

ಗ್ವಾರಿ : ರಾಶಿಯ ಕಾಲದಲ್ಲಿ ಇದರ ಬಳಕೆ ಹೆಚ್ಚಾಗಿರುತ್ತದೆ. ತೆನೆಯಿಂದ ಕಾಳುಗಳು ಪ್ರತ್ಯೇಕಗೊಂಡಾಗ ಬಳಸುವ ಉಪಕರಣವಾಗಿದೆ. ೧ ಅಡಿ ಅಗಲ ೯ ಇಂಚು ಎತ್ತರವಿರುವ ಮರದ ಹಲಗೆಯಲ್ಲಿ ಅರ್ಧ ಚಂದ್ರಾಕೃತಿಯಲ್ಲಿ ತಯಾರಿಸಲಾಗಿರುತ್ತದೆ. ೧ ಇಂಚು ದಪ್ಪವಿರುತ್ತದೆ. ತಳ ಸರಳ ರೇಖೆಯಂತಿದ್ದು, ಮೇಲ್ಭಾಗ ಅರ್ಧಚಂದ್ರದಂತಿರುತ್ತದೆ. ಮೇಲ್ಭಾಗದಲ್ಲಿ ಒಂದು ರಂಧ್ರವಿರುತ್ತದೆ. ರಂಧ್ರಕ್ಕೆ ಕೋಲನ್ನು ಹಾಸುತ್ತಾರೆ.

ಬಂಡಿ : ರೈತ ಮನೆಯಿಂದ ಹೊಲಕ್ಕೆ; ಹೊಲದಿಂದ ಮನೆಗೆ ತಿರುಗಾಡಲು ಬಂಡಿಯನ್ನು ಬಳಸುತ್ತಾನೆ. ರಾಶಿಯಾದ ಮೇಲೆ ಬಣವಿ ಒಟ್ಟಲು ಕನಿಕೆ ತರಲು ಬಂಡಿಯ ಅವಶ್ಯಕತೆಯಿದೆ.

೬–೮ ಕಳಗಿನ ಬಂಡಿಯನ್ನು ರೈತರು ಬಡಿಗೇರದಿಂದ ತಯಾರಿಸಿಕೊಳ್ಳುತ್ತಾರೆ. ೪–೬ ಇಂಚಿನ ಅಳತೆಯ ಜಾಲಿ ಕಟ್ಟಿಗೆಯ ತೋಳುಗಳಲ್ಲಿ ಬಂಡಿಯ ಚಟ್ಟನ್ನು ಬಡಿಗೇರರು ತಯಾರಿಸುತ್ತಾರೆ. ಎರಡು ತೋಳುಗಳ ನಡುವೆ ೫ ಅಡಪಟ್ಟಿ ಜೋಡಿಸುತ್ತಾರೆ. ಮೇಲ್ಭಾಗಕ್ಕೆ ೧ ೧/೨ ಇಂಚು ಅಳತೆಯ ದುಂಡು ರಂಧ್ರಗಳನ್ನು ತೆಗೆದು, ಕಳಗನ್ನು ಜೋಡಿಸಲಾಗುತ್ತದೆ. ಕಳಗುಗಳ ಮೇಲೆ ಡಂಬರಿಗೆ ರಂಧ್ರಗಳನ್ನು ತೆಗೆದು ಬಡಿಗೇರರು ಜೋಡಿಸುತ್ತಾರೆ. ಎರಡು–ಕಳಗಿನ ಮಧ್ಯೆ ಕಬ್ಬಿಣ ಸಲಾಕೆ ಅಳವಡಿಸಲಾಗಿರುತ್ತದೆ. ಬಂಡಿ ಚಟ್ಟಿನ ಮಧ್ಯದಲ್ಲಿ ಬರುವಂತೆ ತೇಗಿನ ಈಸನ್ನು ಹಾಸುತ್ತಾರೆ. ಈಸಿನ ಮುಂದೆ ನೊಗ ಜೋಡಿಸುತ್ತಾರೆ. ಈಸಿನ ಕೆಳಗೆ ಕುದುರೆ(ಕಟ್ಟಿಗೆಯಿಂದ ತಯಾರಿಸಿದ್ದು) ಜೋಡಿಸುತ್ತಾರೆ. ಈಸು–ಬಂಡಿ ಚಟ್ಟು ಇವುಗಳನ್ನು ಅಚ್ಚಿಗೆ ಜೋಡಿಸಿ ಚಕ್ರ ಅಥವಾ ಗಾಲಿ ಅಳವಡಿಸಲು ಹಾರೆ ಹೊಂದಿಸಲಾಗಿರುತ್ತದೆ. ಬಂಡಿಯ ಅರ್ಧಕೆಲಸ ವರ್ಷದ ಯಾವ ದಿನಗಳಲ್ಲಾದರೂ ಬಡಿಗೇರರು ಮಾಡುತ್ತಾರೆ. ಆದರೆ ಬಂಡಿಯ ಗಾಲಿಗಳನ್ನು ಮಾತ್ರ ಬೇಸಿಗೆ ಕಾಲದಲ್ಲಿ ತಯಾರಿಸುತ್ತಾರೆ. ಬಂಡಿಗೆ ಗಾಲಿಗಳು ಆಧಾರವಾಗಿರುವಂತೆ ಅವುಗಳ ತಾಳಿಕೆಯು ಮುಖ್ಯವಾಗಿರುತ್ತದೆ. ಬಂಡಿಯ ಚಟ್ಟನ್ನು ಯಾವ ಬಡಿಗನು ಜೋಡಿಸಬಹುದು. ಆದರೆ ಬಂಡಿಯ ಗಾಲಿಗಳನ್ನು ಅನುಭವ ಕುಶಲಕರ್ಮಿ ಮಾತ್ರ ತಯಾರಿಸಲು ಸಾಧ್ಯವಿರುತ್ತದೆ.

ಗಾಡಕ್ಕೆ ಹಚ್ಚಿ ಗಾಲಿಯ ಗಡ್ಡೆಯನ್ನು ತಯಾರಿಸುವುದು ಬಡಿಗೇರನ ಅನುಭವ ಜ್ಞಾನಕ್ಕೆ ಹಿಡಿದ ಸಾಕ್ಷಿಯಾಗಿರುತ್ತದೆ. ಗಡ್ಡೆ ತಯಾರಿಸಿದ ನಂತರ ಕೈವಾರದಿಂದ ೧೨ ಭಾಗ ಮಾಡುತ್ತಾರೆ. ೧೨ ರಂಧ್ರಗಳನ್ನು ತೆಗೆಯುತ್ತಾರೆ. ಕೈಯಿಂದ ಬಡಿದರೆ ಕಣ್ ಕಣ್ ಎಂದು ಶಬ್ದ ಮಾಡುವ ಹಲ್ಲನ್ನು ಜೋಡಿಸುತ್ತಾರೆ. ಹಲ್ಲು ಬಡೆಯುವಾಗ ಬಡಿಗೇರ ಬೆವರು ಸುರಿಯುವಷ್ಟು ದೈಹಿಕ ಶ್ರಮ ಮಾಡುತ್ತಾನೆ. ನಡದಲ್ಲಿ ನೇಟಿದ್ದ ಬಡಿಗ ಗಾಲಿಯನ್ನು ನೀಟಾಗಿಸುತ್ತಾನೆ ಎಂಬ ಮಾತು ರೈತರಲ್ಲಿ ಬಳಕೆಯಿದೆ. 'ಹೆರೆ ಸೋರದ ಗಾಲಿ'ಯಾಗಲು ಬಡಿಗೇರರು ಶ್ರಮಪಡುತ್ತಾರೆ. ಎರಡೆರಡು ಹಲ್ಲುಗಳಿಗೆ ಹೊಂದಾಣಿಕೆಯಾಗುವಂತೆ ೬ ಪುಟೆಗಳನ್ನು ಜೋಡಿಸಲಾಗಿರುತ್ತದೆ. ಗಾಲಿಗಳನ್ನು ಜೋಡಿಸುವಾಗ ಬಡಿಗೇರರು ಅತೀ ಸೂಕ್ಷ್ಮತೆಯಿಂದ ಕೆಲಸ ಮಾಡುತ್ತಾರೆ. ಗಡ್ಡೆ–ಹಲ್ಲು ಪುಟೆ ಹೊಂದಾಣಿಕೆ ಆಗುವವರೆಗೂ ಹಲವಾರು ಬಾರಿ ಕಳಾಸ ಕಟ್ಟುವುದು ಬಡಿಗರ ವಿಶಿಷ್ಟ ಜ್ಞಾನವಾಗಿದೆ. ಗಾಲಿಗೆ ಹಳಿ ಬಿಗಿದ ನಂತರ ಪುಟೆ–ಹಲ್ಲನ್ನು ಬಾಚಿಯಿಂದ ಕೆತ್ತಿ, ಉಚುಗೊಡ್ಡದಿಂದ ನುನುಪು ಗೊಳಿಸಲಾಗುತ್ತದೆ. ಪ್ರತಿ ಹಲ್ಲುಗಳ ಮೇಲೆ ಸೂರ್ಯ–ಚಂದ್ರ–ನಂದಿ ಚಿತ್ರ ಕೆತ್ತಲಾಗುತ್ತದೆ. ಪುಟೆಯ ಮೇಲೆ ಎರಡು–ಮೂರು ಗೆರೆಗಳನ್ನು ಕಟ್ಟುತ್ತಾರೆ. ಬಡಿಗೇರರ ನಿಜವಾದ ಕಲಾ ಕೌಶಲ್ಯತೆಯನ್ನು ಕಾಣುವುದು ಹಳಿ ಬಿಗಿದ ಪುಟ್ಟೆ–ಹಲ್ಲುಗಳನ್ನು ಕೆತ್ತುವ ಸಂದರ್ಭದಲ್ಲಿ. ಒಂದು ಸಾರಿಯೂ ಬಾಚಿಯ ಬಾಯಿ ಮೊಂಡಾಗದಂತೆ ಪುಟೆಗಳನ್ನು ಯಾವ ಬಡಿಗ ಕೆತ್ತುವನೋ ಅವನೇ ನಿಜವಾದ ಬಡಿಗ ಎಂದು ಬಡಿಗ ಸಾಲಿಯ ರೈತರು ಹೇಳುತ್ತಾರೆ. ಬಾಚಿಯ ಅಗತ್ಯತೆ ಬಡಿಗೇರರಿಗೆ ಇದೆ

ಎಂಬುದನ್ನು ಈ ಮಾತುಗಳು ತಿಳಿಸಿ ಕೊಡುತ್ತವೆ. ಇತ್ತೀಚೆಗೆ ಬಂಡಿಯ ಕೆಲಸಗಳು ನಿಂತು ಹೋಗಿವೆ. ಬಾಚಿ ಬಡಿಗರ ಮನೆಯ ಮೂಲ ಸೇರಿದ. ಗಡ್ಡೆಗೆ ಬಾಯ ಬಳೆಯನ್ನು ಬಡೆದು ರಂಧ್ರವನ್ನು ಆರುಪಾರು ಮಾಡಿ, ಹಾರೆ ಜೋಡಿಸಿದಾಗ ಬಂಡೆ ಉರುಳುತ್ತದೆ.

ಗೃಹೋಪಕರಣಗಳು

ತೊಟ್ಟಿಲು

ಹುಟ್ಟು

ಹೊರಸಲು

ಒನಕೆ

ಕ್ವಾಮಣಿಗಿ

ಸ್ಯಾಂಡಿಗೆಮಣೆ

ಸ್ಯಾಂವಿಗೆ ಮಣೆ

ಚಪಾತಿ ಮಣೆ

ಕೂಡ್ರುಮಣೆ

ಲತ್ತಿಗುಣಿ

ಕಡಗೋಲು

ಕಡಬಿನ ಮಣೆ

ದೇವರ ಮಂಟಪ

ಬಾಗಿಲು

ಕಿಟಕಿ

ಸಂದುಕ

ಟೇಬಲು

ಕುರ್ಚಿ

ತೊಟ್ಟಿಲು : ಹುಟ್ಟಿದ ಮಗುವಿನ ನಾಮಕರಣದ ಸಂದರ್ಭದಿಂದಿಡಿದು ಒಂದು ವರ್ಷದವರೆಗೆ ಮಗುವಿನ ಬೆಳವಣಿಗೆಗೆ ಬಳಸುವ ಉಪಕರಣ ತೊಟ್ಟಿಲು. ನಾಲ್ಕು ಕಂಬಗಳಲ್ಲಿ ಎರಡು ಉದ್ದ ಎರಡು ಸಣ್ಣ ಸಾಟಾ ಮಾಡಿ ಜೋಡಿಸಲಾಗಿರುತ್ತದೆ. ಸಾಟಾದ ಮಧ್ಯ ದುಂಡಾಗಿರುವ ಸಣ್ಣ ಕಟ್ಟಿಗೆಗಳನ್ನು ಅಳವಡಿಸಿರುತ್ತಾರೆ. ತಳದಲ್ಲಿ ಪ್ಲಾವುಡ್ ಅಥವಾ ಹಲಗೆಗಳನ್ನು ಕೂಡ್ರಿಸಲಾಗಿರುತ್ತದೆ. ಜಂತಿ–ತೋಲೆಗೆ ಕಟ್ಟಲು ನಾಲ್ಕು ಬಳೆಗಳನ್ನು ಬಡೆಯುತ್ತಾರೆ.

ಹುಟ್ಟು : ಅಡುಗೆ ಮಾಡುವ ಸಂದರ್ಭದಲ್ಲಿ ಬಳಸುವ ಉಪಕರಣವಾಗಿದೆ. ಕಾಯಿಪಲ್ಯ, ಹುಗ್ಗಿ, ಸಾರು, ಅನ್ನ ಬಡಿಸುವಾಗ ಇದರ ಬಳಕೆಯಿರುತ್ತದೆ. ೪ ಇಂಚು ಅಗಲದ ೧ ೧/೨ ಅಡಿ ಉದ್ದ, ೧ ಇಂಚು ದಪ್ಪವಿರುವ ಇಂಗಳ ಜಾತಿಯ ಮರದ ತುಂಡಿನಲ್ಲಿ ಬಡಿಗೇರರು ತಯಾರಿಸುತ್ತಾರೆ. ಹುಟ್ಟು ಹಾಕಿದ ಅಡುಗೆ ಹಳಸುವುದಿಲ್ಲ ಎಂಬ ಮಾತಿದೆ. ಇಂಗಳ ಜಾತಿಯ ಕಟ್ಟಿಗೆಗೆ ಅಡುಗೆ ಹಳಸದ ಗುಣವಿರುತ್ತದೆಂಬುದು ರೈತರ ಮತ್ತು ಬಡಿಗೇರರ ನಂಬಿಕೆಯಾಗಿದೆ. ಮದುವೆ-ಮುಂಜಿ, ದೊಡ್ಡ ಸಭೆ-ಸಮಾರಂಭದ ಅಡುಗೆಗೆ ದೊಡ್ಡ ಹುಟ್ಟನ್ನು ಬಳಸುತ್ತಾರೆ. ವಿರಾಟ ರಾಜನ ಅರಮನೆಯಲ್ಲಿ ಭೀಮನಿಗೆ ಬಡಿಗೇರರು ಮಾಡಿಕೊಟ್ಟ ಹುಟ್ಟು ಗದೆಯಾಗಿತ್ತೆಂಬುದನ್ನು ಮಹಾಭಾರತ ತಿಳಿಸಿಕೊಡುತ್ತದೆ.

ಹೊರಸಲು : ಹೆರಿಗೆಯಾದ ಮೇಲೆ ಬಾಣಂತಿಯನ್ನು ಮಲಗಿಸಲು ಈ ಹೊರಸಲು ಬಳಸಲಾಗುತ್ತದೆ. ಬೇರೆ ಸಂದರ್ಭಗಳಲ್ಲಿಯೂ ಇದರ ಬಳಕೆ ಇತ್ತೀಚೆಗೆ ಆಗುತ್ತದೆ. ಮೃದು ದೇಹಕ್ಕೆ ಹೊರಸಲು ಉಪಯುಕ್ತ ವಸ್ತುವಾಗಿದೆ. ೨ ೧/೨ ಅಡಿ ಎತ್ತರದ ೨ ಇಂಚು ದಪ್ಪವಿರುವ ದುಂಡು ಬಾರಿ ಜಾತಿಯ ಕಟ್ಟಿಗೆಯಲ್ಲಿ ನಾಲ್ಕು ಕಾಲುಗಳನ್ನು ಬಡಿಗೇರರು ತಯಾರಿಸಿಕೊಳ್ಳುತ್ತಾರೆ. ಅಡ್ಡ-ತಿಡ್ಡ(ಪೂರ್ವ-ಪಶ್ಚಿಮ: ದಕ್ಷಿಣ-ಉತ್ತರ) ಆರು ಪಾರು ರಂಧ್ರಗಳನ್ನು ತೆಗೆದು ೨ ೧/೨ ಅಡಿ ಮತ್ತು ೫ ಅಡಿ ಉದ್ದವಿರುವ ಎರಡೆರಡು ಕೋಲುಗಳನ್ನು ಜೋಡಿಸಲಾಗುತ್ತದೆ. ಹೊರಸಲ ಚೌಕಾಕಾರ ಹೊಂದಿದ ಮೇಲೆ ಮೇದೆಯ ಹುಲ್ಲಿನ ಹಗ್ಗದಿಂದ ನಿಪುಣ ರೈತರು ಬಡಿಗ ಸಾಲಿಯಲ್ಲಿಯೇ ಹೆಣೆದು ಪೂಜೆ-ಪುನಸ್ಕಾರಗಳನ್ನು ಮುಗಿಸಿ, ಕೊಬ್ಬರಿ-ಚುರುಮರಿ ಹಂಚಿ, ಬಡಿಗನಿಗೆ ಮತ್ತು ಬಡಿಗ ಸಾಲಿಗೆ ನಮಸ್ಕರಿಸಿ ಹೊರಸನ್ನು ಒಯ್ಯುತ್ತಾರೆ. ಬಡಿಗನು ತಯಾರಿಸಿದ ಹೊರಸಲಿ ತನ್ನ ಮಗಳು, ಸೊಸೆ ಪುನರ್ಜನ್ಮ ಪಡೆಯಲಿ ಎಂಬುದು ರೈತನ ಆಸೆ ಎಂಬುದನ್ನು ಇದು ತಿಳಿಸುತ್ತದೆ. ಬ್ರಹ್ಮ ಬಡಿಗನ ಕೈ ಶುದ್ಧ ಎಂಬ ಮಾಹಿತಿಯನ್ನು ವಿಶ್ವಕ್ಕೆ ಸಾರಿ ಹೇಳುತ್ತದೆ. 'ಬ್ರಾಹ್ಮಣನ ಬಾಯಿ ಶುದ್ಧ; ಪಂಚಾಳನ ಕೈಶುದ್ದ' ಎಂಬುದು ಪಂಚಾಳ ಕುಶಲಕರ್ಮಿಗಾಗಿಯೇ ಹುಟ್ಟಿದ ನಾಣ್ಣುಡಿಯಾಗಿದೆ.

ಒನಕೆ : ಮನೆಗಳಲ್ಲಿ ಶುಭ ಕಾರ್ಯಗಳು ಜರುಗುವ ಸಂದರ್ಭದಲ್ಲಿ ಮೊದಲ ಪೂಜೆಯೇ ಈ ಒನಕೆಗೆ ಸಲ್ಲುತ್ತದೆ. ಜೋಳ, ಗೋಧಿ, ಭತ್ತಗಳನ್ನು ಕುಟ್ಟಲು ಬಳಸುವ ಉಪಕರಣವಾಗಿದೆ. ೨ ಇಂಚು ಸುತ್ತಳತೆಯಗಲದ, ೨ ಅಡಿ ಎತ್ತರವಿರುತ್ತದೆ. ಬಾಚಿಯಿಂದ ದುಂಡಾಗಿ ಕೆತ್ತಿ, ಉಚುಗೊಡ್ಡದಿಂದ ನುನುಪಾಗಿಸಿರುತ್ತಾರೆ. ಕೆಳ ತುದಿಗೆ ಕಬ್ಬಿಣದ ಬಳೆಯನ್ನು ಬಡೆಯಲಾಗಿರುತ್ತದೆ. ಇದು ಒಳ್ಳದ ಜೊತೆ ಒಡನಾಟವಿರಿಸಿಕೊಂಡಿರುತ್ತದೆ. ರೈತಾಪಿ ವರ್ಗದವರು ಒನಕೆ-ಒಳ್ಳನ್ನು ಸತಿ-ಪತಿಯಂದೆ ಪೂಜಿಸುತ್ತಾರೆ. ಓಬವ್ವ ಐತಿಹಾಸಿಕವಾಗಿ ಪ್ರಸಿದ್ಧವಾಗಿರುವುದು ಚಿತ್ರದುರ್ಗದ ಬಡಿಗೇರನು ತಯಾರಿಸಿಕೊಟ್ಟ ಒನಕೆಯಿಂದಲೇ ಎಂಬುದು ಇತಿಹಾಸ. ಆದರೆ ಚಿತ್ರದುರ್ಗದ ಬಡಿಗೇರ ಕುಶಲಕರ್ಮಿಯ ಹೆಸರು ಎಲ್ಲಿಯೂ ದಾಖಲಾಗಿರುವ ಸಂಗತಿ ತಿಳಿದುಬಂದಿಲ್ಲ.

ಕ್ವಾಮಣಿಗಿ : ರೊಟ್ಟಿ ಉತ್ತರ ಕರ್ನಾಟಕದ ಗಟ್ಟಿ ಆಹಾರ ಪದಾರ್ಥ. ಬಿಳಿಜೋಳ, ಗೋವಿನ ಜೋಳ, ಸಜ್ಜಿ ರೊಟ್ಟಿ ಮಾಡಲು ಕ್ವಾಮಣಿಗಿಯನ್ನು ಬಳಸಲಾಗುತ್ತದೆ. ಇದು ಇಲ್ಲದಿದ್ದರೆ ಹೆಂಗಸರಿಗೆ ರೊಟ್ಟಿ ಮಾಡುವುದು ಕಷ್ಟ. ಕ್ವಾಮಣಿಗಿ ಮುರಿದು ಹೋಗಿದ್ದರೆ ಮನೆಯಲ್ಲಿ ಆ ದಿನ ರೊಟ್ಟಿಯೇ ಇರುವುದಿಲ್ಲ. ಹೊಟ್ಟೆ ತುಂಬದ ಗಂಡ ನೇರವಾಗಿ ಬಡಿಗ ಸಾಲಿಗೆ ಬಂದು ಬಡಿಗೇರನಿಗೆ ವಿನಂತಿಸಿಕೊಳ್ಳುವ ಪ್ರಸಂಗಗಳು ಹಳ್ಳಿಗಳಲ್ಲಿ ಹೆಚ್ಚಾಗಿ ನಡೆಯುತ್ತಿರುತ್ತವೆ. ೧ ೧/೨ ಅಡಿ ಸುತ್ತಳತೆಯಗಲದ ೩ ಇಂಚು ದಪ್ಪವಿರುತ್ತದೆ. ಪರಸ್ಪರ ವಿರುದ್ಧವಾಗಿ ಎರಡು ಕಿವಿ ಇರುತ್ತವೆ. ಒಳಮೈ ೧ ಇಂಚು ಆಳವಾಗಿ ಉಳಿ-ಬಾಚಿಯಿಂದ ತೋಡಲಾಗಿರುತ್ತದೆ. ತಗ್ಗು ಇದ್ದರೆ ಮಾತ್ರ ರೊಟ್ಟಿ ಮಾಡಲು ಅನುಕೂಲವಾಗುತ್ತದೆ.

೩.೩. ಕಂಚುಗಾರ

ವಿಶ್ವಕರ್ಮನ ಮೂರನೆಯ ಮಗ ತ್ವಷ್ಟಾ ಈ ವೃತ್ತಿಯ ಮೂಲ ಪುರುಷನಾಗಿದ್ದಾನೆ. ತ್ವಷ್ಟ್ರನ ಗೋತ್ರ ಅಹಭೂನ. ಈತನ ಪತ್ನಿ ಕೌಶಿಕ ಋಷಿಯ ಮಗಳು ಜಯಂತಿ. ಈ ಗೋತ್ರದ ಕುಶಲಕರ್ಮಿಗಳು ಲೋಹಶಿಲ್ಪಿಗಳಾಗಿದ್ದಾರೆ. ತಾಮ್ರ, ಹಿತ್ತಾಳೆ, ಕಂಚು ಲೋಹಗಳ ವಿದ್ಯೆಯಲ್ಲಿ ಪ್ರವೀಣರಾಗಿದ್ದಾರೆ. ತಾಮ್ರ, ಹಿತ್ತಾಳೆ, ಕಂಚನ್ನು ಕರಗಿಸಿ ವಿವಿಧ ಬಗೆಯ ಧಾರ್ಮಿಕ ಆಚರಣೆ ಪೂಜೆ-ಪುನಸ್ಕಾರಗಳಿಗೆ ಬಳಸುವ ದೇವತಾಮೂರ್ತಿ, ಆರತಿ ತಟ್ಟೆ, ಪಂಚಪಾತ್ರೆ, ಉದ್ಧರಣೆಯಂತಹ ವಸ್ತುಗಳನ್ನು ಕಲಾತ್ಮಕವಾಗಿ ತಯಾರಿಸುವ ಕುಶಲಕರ್ಮಿಗಳಾಗಿದ್ದಾರೆ.

ಕಂಚುಗಾರರನ್ನು ತಾಂಬಟಗಾರ, ಅಚ್ಚುಗಾರ ಕಾಸಾರ ಎಂದು ಕಯಲಾಗುತ್ತದೆ. ಕಂಚು ಎಂಬ ಲೋಹದ ಕೆಲಸವನ್ನು ಹೆಚ್ಚಾಗಿ ಮಾಡುವ ಕುಶಳಕರ್ಮಿಗೆ ಕಂಚುಗಾರನೆಂದು ಕರೆಯುವ ರೂಢಿಯಾಗಿದೆ. 'ಕಂಚುಗಾರ ಎಂಬ ಪದವು ಕಾಂಸ್ಯಗಾರ ಸಂಸ್ಕೃತ ಪದದ ನಿಷ್ಪತ್ತಿಯಾಗಿದೆ. ಮರಾಠಿಯಲ್ಲಿರುವ ಕಾಸಾರ ಪದವು ಕಂಚುಗಾರ ಎಂಬ ಕನ್ನಡದ ಪದಕ್ಕೆ ಸಮಾನವಾಗಿದೆ. ತಾಮ್ರ, ಹಿತ್ತಾಳೆಯ ಪಾತ್ರೆಗಳನ್ನು ತಯಾರಿಸುವವರಿಗೆ 'ಕಾಸಾರ'ರು ಎಂದು ಕರೆಯುವ ಪದ್ಧತಿಯಿದೆ.

ಕಂಚುಗಾರ ವೃತ್ತಿ ಭಕ್ತಿ ಮತ್ತು ಶ್ರದ್ಧೆಯ ಕರ್ಮವಾಗಿದೆ. ಪಂಚಲೋಹದ ವಿಗ್ರಹಗಳನ್ನು ತಯಾರಿಸುವುದು. ಹೋಮ-ಹವನಗಳಿಗೆ ಅವಶ್ಯವಿರುವ ಗಂಟೆ-ಜಾಗಟೆಗಳನ್ನು ತಯಾರಿಸುವ ವೃತ್ತಿದಾರರು ಕಂಚುಗಾರರಾಗಿದ್ದಾರೆ. ದೇವರ ವಿಗ್ರಹಗಳ ಹಿಂದಿರುವ ಪ್ರಭಾವಳಿಗಳು, ದೇವತಾ ವಾಹನಗಳಾದ ಆನೆ, ನಂದಿ, ಗರುಡ, ಸಿಂಹ, ನವಿಲು, ಸರ್ಪ ಮೊದಲಾದ ವಿಗ್ರಹಗಳನ್ನು ತಯಾರಿಸುತ್ತಾರೆ. ಕಂಚುಗಾರರು ಲೋಹಶಿಲ್ಪಕಾರ ಕುಶಲಕರ್ಮಿಗಳಾಗಿದ್ದು, ಗಣೇಶ, ಶಿವ, ಸರಸ್ವತಿ ಮುಂತಾದ ವಿಗ್ರಹಗಳು ಜನಮನ್ನಣೆಯನ್ನು ಪಡೆದುಕೊಂಡಿವೆ. ಕಂಚುಗಾರಿಕೆಯ ಕುರಿತಾಗಿ ಶಾಸನಗಳಲ್ಲಿಯೂ ಉಲ್ಲೇಖಗಳಿವೆ. ೧೮ನೇ ಶತಮಾನ ಹಂಪಿ ಶಾಸನಗಳಲ್ಲಿ ಕಂಚುಗಾರ ಬಸ್ವಯ್ಯನ

ಕೆಲಸದ ಕುರಿತು ಉಲ್ಲೇಖಿಸಲಾಗಿದೆ. ಹಂಪಿ ವಿರೂಪಾಕ್ಷ ದೇವಸ್ಥಾನದ ರಂಗಮಂಟಪದ ಗಂಟೆಯ ಮೇಲೆ ಪ್ರಭವ ಸಂವತ್ಸರದಲ್ಲಿ ಈ ಗಂಟೆಯನ್ನು ಮಲಣರಸ ಮಾಡಿಸಿದನೆಂದು, ಗಂಟೆಯನ್ನು ಬೊಂಮ್ಮಜ ಚಿಬಸ್ವಯನ ಮಗ ವೀರಣ ಮಾಡಿಸಿದ್ದು, ಕಂಚಗಾರ ಬಸ್ವಯನು ಮಾಡಿದನು ಎಂದು ತಿಳಸುತ್ತದೆ. ಹಾಗೆ ಗದಗ ಜಿಲ್ಲೆಯ ಹೊಂಬಳ ಗ್ರಾಮದ ಕ್ರಿ.ಶ.೧೧೮೯ರ ಶಾಸನದಲ್ಲಿ "ಕಂಚಗಾಱ ದೇವರ ಉಪಕರಣಗಳೆಲ್ಲವೂ ಕೂಲಿಯಂ ಕೊಳ್ಳದೆ ಮಾಡಿಕೊಡುವಂತಾಗಿ ಬಿಟ್ಟರು"[೨೬] ಎಂದು ತಿಳಿಸುತ್ತದೆ. ಕಂಚುಗಾರರು ಮಾಡಿಕೊಡುವ ವಿಗ್ರಹ, ವಸ್ತುಗಳು ಕಲಾತ್ಮಕತೆಯಿಂದ ಕೂಡಿದವಾಗಿದ್ದವು. ಅವರು ಕಾಸಿಗಿಂತ ಕಂಚಿಗೆ; ಕಂಚಿನ ವಿಗ್ರಹ ತಯಾರಿಸಿಕೊಡುವುದಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದ್ದರು. ದುಡ್ಡು ಇಲ್ಲದಿದ್ದಾಗ ಬಿಟ್ಟಿಯಾಗಿಯೂ ದೇವತಾ ವಿಗ್ರಹಗಳನ್ನು ತಯಾರಿಸಿ ಕೊಡುವ ಸಾಮಾಜಿಕ ಕಳಕಳಿಯುಳ್ಳ ಕುಶಲಕರ್ಮಿಗಳಾಗಿದ್ದರು ಎಂಬುದನ್ನು ಶಾಸನಗಳೇ ಹೇಳುತ್ತವೆ.

ಕಂಚುಗಾರರ ಕಾರ್ಯ ವೈಖರಿಯನ್ನು ದೇವಸ್ಥಾನೋಪಯೋಗಿ, ಗೃಹೋಪಯೋಗಿ ಮತ್ತು ಯುದ್ಧೋಪಯೋಗಿ ಎಂದು ಗುರುತಿಸಬಹುದಾಗಿದೆ. ದೇವಸ್ಥಾನೋಪಯೋಗಿ ವಿಭಾಗದಲ್ಲಿ ದೇವತೆಗಳ ವಿಗ್ರಹಗಳು, ದೇವಸ್ಥಾನದ ಕಳಸ, ಗರ್ಭ ಬಾಗಿಲು, ವಿಗ್ರಹಗಳ ಪ್ರಭಾವಳಿಗಳು ದೊಡ್ಡ ದೊಡ್ಡ ಗಂಟೆಗಳು ಮುಂತಾದವುಗಳನ್ನು ಕಂಚಿನಿಂದ ತಯಾರಿಸುತ್ತಾರೆ. ದೇವತಾ ವಿಗ್ರಹ ಕಳಸಗಳಿಗೆ ಕಂಚನ್ನು ಬಳಸುತ್ತಾರೆ. ಇದು ತುಂಬಾ ಗಟ್ಟಿಯಾದ ಲೋಹವಾಗಿದ್ದು, ತುಕ್ಕು ಹಿಡಿಯುವುದಿಲ್ಲ. ಕಂಚಿಗೆ ಹೊಳಪಿನ ಶಕ್ತಿ ಹೆಚ್ಚಾಗಿರುತ್ತದೆ. ಹೀಗಾಗಿ ಈ ಲೋಹದ ಬಳಕೆ ಹೆಚ್ಚಾಗಿದೆ. ತೊಳೆದಂತೆ ಹೊಳೆಯುವ ಶಕ್ತಿ ಕಂಚಿಗಿದೆ. ಗೃಹೋಪಯೋಗಿ ವಸ್ತುಗಳಾಗಿ ಗಂಟೆ–ಜಾಗಟೆ, ಪಾತ್ರೆ, ಪೂಜಾ ಸಾಮಗ್ರಿಗಳನ್ನು ಕಂಚುಗಾರರು ತಯಾರಿಸುತ್ತಾರೆ.

ಯುದ್ಧೋಪಯೋಗಿ ವಸ್ತುಗಳನ್ನು ಪ್ರಾಚೀನ ಕಾಲದಲ್ಲಿ ಕಂಚುಗಾರರು ತಯಾರಿಸುತ್ತಿದ್ದರು. ಕತ್ತಿ, ಗುರಾಣಿ, ಭರ್ಜಿ, ಬಿಲ್ಲು, ಬಾಣ, ಗದೆ ಮುಂತಾದವುಗಳನ್ನು ಲೋಹಶಿಲ್ಪಿಗಳು ಅರಸರಿಗೆ ತಯಾರಿಸಿಕೊಡುತ್ತಿದ್ದರು. ಅಮರಾವತಿಯ ಇಂದ್ರನ ಬಳಿ ವಜ್ರಾಯುಧವಿತ್ತೆಂದು ಪುರಾಣಗಳು ಹೇಳುತ್ತವೆ. ಅಂತ ಗದೆಗಳನ್ನು ಯುದ್ಧದ ಸಂದರ್ಭದಲ್ಲಿ ಕಂಚುಗಾರರು ಅರಸರುಗಳಿಗೆ ತಯಾರಿಸಿ ಕೊಡುತ್ತಿದ್ದರು ಎಂಬುದು ತಿಳಿದುಬರುತ್ತದೆ. ಕಂಚುಗಾರರು ಯಾವುದೇ ವಸ್ತುಗಳನ್ನು ತಯಾರಿಸುವ ಪೂರ್ವದಲ್ಲಿ ಆಯಾ ವಸ್ತುಗಳ ಆಕಾರ ವಿನ್ಯಾಸ–ಗಾತ್ರಗಳನ್ನು ಮನಸ್ಸಿನಲ್ಲಿ ಗುರುತಿಸಿಕೊಳ್ಳುತ್ತಾರೆ. ಆ ವಸ್ತುವಿಗೆ ಸಂಬಂಧಿಸಿದಂತೆ ಜೇಡಿ ಮಣ್ಣಿನಿಂದ ವಿಗ್ರಹರೂಪವನ್ನು ತಯಾರಿಸಿಕೊಳ್ಳುತ್ತಾರೆ. ಇದಕ್ಕೆ ಅಚ್ಚುಪಡಿ ಅಥವಾ ಪಡಿಯಚ್ಚು ಎಂದು ಕರೆಯುತ್ತಾರೆ. ನಂತರ ಕಂಚನ್ನು ಕರಗಿಸಿ ಅಚ್ಚುಪಡಿಯ ಮೇಲೆ ಸುರಿಯುತ್ತಾರೆ. ಕುಂಬಾರರ ಗಡಿಗೆ ಕಾಯಿಸು ಆವಿಗೆಯಂತೆ ಕಂಚುಗಾರರು ತಗ್ಗು ಪ್ರದೇಶದಲ್ಲಿ ದೊಡ್ಡ ದೊಡ್ಡ ಆವಿಗೆಗಳನ್ನು ತಯಾರಿಸಿರುತ್ತಾರೆ. ಅದರಲ್ಲಿ ಇಟ್ಟು ಜೇಡಿ

ಮಣ್ಣಿನ ವಸ್ತುವನ್ನು ಕಾಯಿಸಿ, ಕಂಚು ಘನ ರೂಪ ತಾಳಿದ ಮೇಲೆ ಮಣ್ಣು ತಾನಾಗಿಯೇ ಉದುರಿ ಕಂಚಿನ ವಿಗ್ರಹ ಮಾತ್ರ ಉಳಿಯುತ್ತದೆ. ಹೀಗೆ ಕಂಚುಗಾರ ವಸ್ತುಗಳನ್ನು ತಯಾರಿಸುವಾಗ ಕೆಲವು ವಿಧಾನಗಳನ್ನು ಅನುಸರಿಸುತ್ತಾನೆ. ಇದು ಅನುಭವದಿಂದ ಮಾತ್ರ ಸಾಧ್ಯವಾಗುತ್ತದೆ. ಈ ಕ್ಷೇತ್ರಕ್ಕೆ ಹೊಸಬರು ಬಂದಿದ್ದರೆ ನೂರು ದಿನಗಳು ಕಳೆದರೂ ಮೂರು ವಿಗ್ರಹಗಳನ್ನು ತಯಾರಿಸಲು ಸಾಧ್ಯವಾಗುವುದಿಲ್ಲ. ಕಂಚುಗಾರ ವೃತ್ತಿಯೂ ಇತರ ವೃತ್ತಿಗಳಂತೆ ಸೂಕ್ಷ್ಮವಾದುದ್ದಾಗಿದೆ.

ಜಗತ್ತಿನ ಯಾವುದೇ ಒಂದು ಲೋಹದ ವಸ್ತು ಸುಂದರವಾಗಿತ್ತೆಂದರೆ ಅದು ಕಂಚುಗಾರನ ಕಲಾಕೌಶಲ್ಯವೇ ಕಾರಣವಾಗಿರುತ್ತದೆ. ಜೇಡಿ ಮಣ್ಣಿನಲ್ಲಿ ಸುಂದರವಾಗಿ ವಿಗ್ರಹದ ಪಡಿಯಚ್ಚು ತಯಾರಿಸುವಲ್ಲಿಯೇ ಕಂಚುಗಾರ ತನ್ನ ಜ್ಞಾನ–ಅನುಭವ ಮತ್ತು ಕೌಶಲ್ಯತೆಯನ್ನು ಬಳಸಿಕೊಳ್ಳುತ್ತಾನೆ. ತಯಾರಿಸಿದ ವಿಗ್ರಹದ ಮೇಳೆ ಸಾಕಷ್ಟು ಪ್ರಮಾಣದಲ್ಲಿ ಮಡಿ ಸುರಿಯುವುದನ್ನು ಮರೆಯುವುದಿಲ್ಲ. ಮಡಿ ಸುರಿಯುವುದು ಮರೆತರೆ ಲೋಹ ಮತ್ತು ಮಣ್ಣು ಬೇರ್ಪಡುವುದು ತುಂಬಾ ಕಷ್ಟವಾಗುತ್ತದೆ. ಪಡಿಯಚ್ಚು ಮೇಲೆ ಲೋಹವನ್ನು ಕರಗಿಸಿ, ಸುರಿಯುವಾಗ ಕಂಚುಗಾರ ತುಂಬಾ ಜಾಗ್ರತೆ ಹೊಂದಿರುತ್ತಾನೆ. ಪಡಿಯಚ್ಚಿನ ಎಲ್ಲ ಭಾಗಗಳಲ್ಲಿ ಲೋಹ ಸಮಾನ ರೀತಿಯಲ್ಲಿ ಸುರಿಯುವಂತೆ ನೋಡಿಕೊಳ್ಳುತ್ತಾನೆ. ಒಂದು ಕಡೆ ಹೆಚ್ಚು, ಒಂದು ಕಡೆ ಕಡಿಮೆ ಲೋಹ ಸುರಿದರೆ ವಿಗ್ರಹ ದಪ್ಪ–ಸಣ್ಣವಾಗಿ ಹೆಚ್ಚು ತಾಳಿಕೆಯಲ್ಲದ ವಸ್ತುವಾಗುವ ಸಾಧ್ಯ ಇರುತ್ತದೆ. ಹೀಗಾಗಿ ಪಡಿಯಚ್ಚಿನ ಮೇಲೆ ಸರಿಪ್ರಮಾಣದಲ್ಲಿ ಕರಗಿದ ಲೋಹ ಸುರಿಯಬೇಕಾಗುತ್ತದೆ. ಕೆಲವೊಂದು ಗಂಟೆಯ ನಂತರ ಕರಗಿದ ಲೋಹ ಘನ ರೂಪ ಪಡೆಯುತ್ತದೆ. ಆದರೆ ಇದಕ್ಕೂ ಮುನ್ನ ಲೋಹ ಕರಗಿಸುವಾಗ ಬೇಗ ದ್ರವರೂಪ ತಾಳದಿದ್ದರೆ ಪಂಚಲೋಹಗಳಾದ ತವರ, ತಾಮ್ರ, ಕಬ್ಬಿಣ ಮುಂತಾದ ಲೋಹಗಳನ್ನು ಕರಗಿಸಿ ಮಿಶ್ರಣಗೊಳಿಸಲಾಗುತ್ತದೆ. ಲೋಹವನ್ನು ಕರಗಿಸಿ, ಕಂಚುಗಾರ ಕೆಲಸ ಮಾಡುವಾಗ ಮೈಯೆಲ್ಲಾ ಕಣ್ಣಾಗಿಸಿಕೊಳ್ಳುತ್ತಾನೆ. ಕರಗಿದ ಲೋಹ ಪಡಿಯಚ್ಚಿನ ಮೇಲೆ ಬೀಳದೆ ತನ್ನ ಕೈ–ಕಾಲು ವಿವಿಧ ಅಂಗದ ಮೇಲೆ ಬಿದ್ದರೆ ಅನಾಹುತ ಆಗುವ ಸಾಧ್ಯತೆಗಳಿರುತ್ತವೆ. "ಆಯ್ದುಕೊಂಡು ತಿನ್ನುವ ಕೋಳಿ ಕಾಲು ಮುರಿದಂತೆ" ಆಗುತ್ತದೆ. ಹೀಗಾಗಿ ಕುಶಲಕರ್ಮಿ ತಾನು ಮಾಡುವ ಕೆಲಸದ ಬಗೆಗ ತುಂಬಾ ಮುನ್ನೆಚ್ಚರಿಕೆಯನ್ನು ಹೊಂದಿರುತ್ತಾನೆ.

ಕಂಚನ್ನು ಒಳಗೊಂಡಂತೆ ಜನಸಮುದಾಯದಲ್ಲಿ ಪಂಚಲೋಹಗಳ ಬಗ್ಗೆ ತುಂಬಾ ನಂಬಿಕೆ, ಆಚರಣೆ, ಸಂಪ್ರದಾಯಗಳು ಬೆಳೆದುಬಂದಿದೆ. ಅನುಕೂಲಸ್ಥರು ಪಂಚಲೋಹ ಬಂಗಾರ, ಬೆಳ್ಳಿ, ತಾಮ್ರ, ಕಬ್ಬಿಣ, ತವರನಿಂದ ವಿಗ್ರಹಗಳನ್ನು ತಯಾರಿಸಿಕೊಳ್ಳುತ್ತಾರೆ. ಮಧ್ಯಮ ಮತ್ತು ಕೆಳ ವರ್ಗದವರು ಕಂಚು ಅಥವಾ ತಾಮ್ರ ಲೋಹದಿಂದ ವಿಗ್ರಹ, ಸಾಮಗ್ರಿಗಳನ್ನು ಪಡೆಯುತ್ತಾರೆ. ಇದರಿಂದ ತಮ್ಮ ಮನೆ–ಮನೆತನ–ಮನಸ್ಸುಗಳು ಶಾಂತಿ–ಸಮೃದ್ಧಿಯಿಂದ ಕೂಡಿರುತ್ತವೆ ಎಂಬ ಭಾವನೆ ಜನರಲ್ಲಿ

ಇರುವುದರಿಂದ ಈ ಲೋಹಗಳಿಂದ ಹೆಚ್ಚಾಗಿ ಕಂಚುಗಾರರು ವಿಗ್ರಹ ಮತ್ತು ಪೂಜಾ ಸಾಮಗ್ರಿಗಳನ್ನು ತಯಾರಿಸುತ್ತಾರೆ.

೩.೪. ಶಿಲ್ಪಿ

ವಿಶ್ವಕರ್ಮನ ನಾಲ್ಕನೆಯ ಮಗ ಶಿಲ್ಪಿ. ಈ ವೃತ್ತಿಯ ಮೂಲ ಪುರುಷ ಶಿಲ್ಪಿಯು ಪ್ರತ್ನಸ ಗೋತ್ರದವನಾಗಿದ್ದಾನೆ. ಈತನ ಪತ್ನಿ ಕರುಣಾದೇವಿ. ಈಕೆಯು ಭೃಗು ಋಷಿಯ ಮಗಳು. ಈ ಗೋತ್ರದ ಕುಶಲಕರ್ಮಿಗಳ ಕಾಯಕ ಶಿಲ್ಪಗಾರಿಕೆ. ಸಮಾಜಕ್ಕೆ ಸುಂದರವಾದ ಕಲ್ಲಿನ ಮೂರ್ತಿಗಳನ್ನು ಶಿಲ್ಪಿಗಳು ತಯಾರಿಸಿಕೊಡುತ್ತಾರೆ. ಶಿಲೆ ಅಥವಾ ಕಲ್ಲಿನಲ್ಲಿ ಕೆಲಸ ಮಾಡುವವನು ಶಿಲ್ಪಿಯಾಗಿದ್ದಾನೆ. ವಿಶ್ವಪ್ರಸಿದ್ಧ ಶಿಲ್ಪಕೃತಿಗಳನ್ನು ನಿರ್ಮಿಸಿದವನು ಶಿಲ್ಪಿ. ಶಿಲ್ಪಿಯನ್ನು ಸಂಕೃತಿಕಾ ಎಂದು ಕರೆಯಲಾಗುತ್ತದೆ. ಶ್ರೇಷ್ಠತಮ ನಿರ್ಮಾಣಗಳನ್ನು ಮಾಡುವವನನ್ನು ಸಂಕೃತಿಕಾರ ಎನ್ನುತ್ತಾರೆ. "ಸಪ್ರಥಂ ಸ್ಸಂಕೃತಿರಿಶ್ವಕರ್ಮಾ" ಶ್ರೇಷ್ಠವಾದ ಶಿಲ್ಪಕೃತಿಗಳು ಜಗತ್ತಿನಲ್ಲಿ ವಿಶ್ವಕರ್ಮನಿಂದ ಮಾತ್ರ ಸಾಧ್ಯವೆಂಬುದು ಸತ್ಯ. ಅವನು ಸಮ್ಯಕ್ ಕೃತಿ ನಿರ್ಮಾತೃ ಆಗಿದ್ದಾನೆ. ಅಂದರೆ ಅತ್ಯಂತ ಪರಿಪೂರ್ಣವಾದ ಶಿಲ್ಪ ಸೃಷ್ಟಿಗಳನ್ನು ಮಾಡುವವನಾಗಿದ್ದಾನೆ. ಶಿಲ್ಪ ರಚನಾಕಾರನೇ ಶಿಲ್ಪಿಯಾಗಿದ್ದು, ಶಾಸ್ತ್ರ, ಪಾಂಡಿತ್ಯ, ಸಿದ್ಧಿಗಳನ್ನು ಪಡೆದವನಾಗಿರುತ್ತಾನೆ. ಶಿಲ್ಪಶಾಸ್ತ್ರದ ಎಲ್ಲಾ ಮುಖಗಳನ್ನು ಸಂರಚಿಸಬಲ್ಲ ಶಕ್ತಿವಂತನಾಗಿದ್ದು, ಈತನನ್ನು ಸ್ಥಪತಿ ಎಂದು ಕರೆಯಲಾಗುತ್ತದೆ.

"ಶಿಲ್ಪವೆನ್ನುವ ಪದವು ಮೂರ್ತಿಶಿಲ್ಪವೆಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. "ಶಿಲ್ಪಂ ಕರ್ಮಕಲಾಧಿಕಂ" ಇದು ಅಮರಸಿಂಹನ ಅಮರ ಕೋಶದ ವಿವರಣೆ."[೨೭] ಶಿಲ್ಪಗಾರಿಕೆಯ ಕೆಲಸವು ಎಲ್ಲ ಕಲೆಗಳಲ್ಲಿ ಶ್ರೇಷ್ಠವಾದಂಥದ್ದು ಎಂಬುದು ತಿಳಿಯಲಾಗಿದೆ. ಶಿಲ್ಪಿಯ ಅತ್ಯುತ್ತಮವಾದ ಕುಶಲಕಲೆಗಾರಿಕೆಯೊಳಗೊಂಡ ಕರ್ಮ ಮತ್ತು ಕ್ರಿಯೆಯನ್ನು ಶಿಲ್ಪವೆಂದು ಕರೆಯಲಾಗುತ್ತದೆ. ಶಿಲ್ಪವು ಮನಸ್ಸಿಗೆ ನೆಮ್ಮದಿಯನ್ನು ತಂದುಕೊಡುವ ಕ್ರಿಯೆಯಾಗಿದ್ದು, ಕಲೆಯ ಪ್ರತಿಬಿಂಬವನ್ನು ಸೂಚಿಸುತ್ತದೆ. ಸೌಂದರ್ಯವನ್ನುಂಟು ಮಾಡುವ ಕ್ರಿಯೆ ಈ ಶಿಲ್ಪಗಾರಿಕೆಯಲ್ಲಿದೆ.

'ಶಿಲ್ಪ' ಎಂಬ ಪದವು 'ಶೀಲ ಸಮಧೌ' ಎಂಬುದರ ವಿವರಣಾರ್ಥವಾಗಿದೆ. 'ಸಮಾಧಿ' ಎಂಬುದು ತನ್ಮಯತೆಯನ್ನು ಅಂದರೆ ತಪಸ್ಸನ್ನು ಸೂಚಿಸುತ್ತದೆ. ಶಿಲ್ಪಗಾರಿಕೆ ಎಂಬುದು ಒಂದು ತಪಸ್ಸು ಇದ್ದಂತೆ. ತಪಸ್ಸಿನ ಪ್ರಭಾವದಿಂದ ಮಾಡುವ ಕ್ರಿಯೆಯು ಸರ್ವೋತ್ತಮವಾಗಿದ್ದು, ಆತ್ಮ ಸಂತೋಷವನ್ನುಂಟು ಮಾಡುವುದು ಶಿಲ್ಪಗಾರಿಕೆಯ ಕೆಲಸವಾಗಿದೆ. ಕಠಿಣವಾದ ಶಿಲೆಯಲ್ಲಿ ತನ್ನ ಕಲಾ ಕೌಶಲ್ಯತೆಯನ್ನು ವ್ಯಕ್ತಪಡಿಸಿ ಸುಂದರ ಮೂರ್ತಿಯನ್ನು ತಯಾರಿಸುವವರನ್ನು ಶಿಲ್ಪಿಗಳೆಂದು

ಕರೆಯಲಾಗುತ್ತದೆ. ಗಡಸು ಕಲ್ಲಿನಲ್ಲಿಯೂ ಸೃಜನತೆಯನ್ನು ಶಿಲ್ಪಿ ಮೂಡಿಸಿರುತ್ತಾನೆ. ಶಿಲ್ಪಿಯು ತಾಂತ್ರಿಕ ಪರಿಣಿತಿಯುಳ್ಳವನಾಗಿದ್ದಾನೆ. ಈತನಿಗೆ ತಾಂತ್ರಿಕ ಜ್ಞಾನ, ಅನುಭವ ತುಂಬಾ ಇರುತ್ತದೆ. ಆ ತಾಂತ್ರಿಕ ಜ್ಞಾನ ಮತ್ತು ಅನುಭವವನ್ನು ಕ್ರಿಯಾತ್ಮಕಗೊಳಿಸಿದಾಗ ಶಿಲ್ಪ ನಿರ್ಮಾಣವಾಗುತ್ತದೆ. ಶಿಲ್ಪಶಾಸ್ತ್ರ ಮತ್ತು ತಾಂತ್ರಿಕತೆಯಲ್ಲಿ ಕೂದಲೆಳೆಯಷ್ಟು ಅಂತರವಿದ್ದು, ಅವೆರಡು ಪರಸ್ಪರ ಒಂದಕ್ಕೊಂದು ಪೂರಕವಾಗಿ ಶಿಲ್ಪಿಯಲ್ಲಿ ಕೆಲಸ ಮಾಡುತ್ತವೆ. ಶಿಲ್ಪಿಯನ್ನು ಸ್ಥಪತಿ, ಸಕಲ ಜ್ಞಾನಿಯೆಂದು ಕರೆಯಲಾಗುತ್ತದೆ. ಶಿಲ್ಪಿಗೆ ಸಾಮುದ್ರಿಕೆ, ಗಣಿತ, ಜೋತಿಷ್ಯ, ಛಂದ, ಶಿಲ್ಪ ಈ ಎಲ್ಲ ವಿದ್ಯೆ ಬಲ್ಲವನಾಗಿರುವುದರಿಂದ ಸ್ಥಪತಿ ಎಂದು ಕರೆಸಿಕೊಳ್ಳುತ್ತಾನೆ. 'ಸ್ಥಪತಿಃ ಸ್ಥಾಪಯೇತ್ ಸ್ಥಿರಂ'[೨೮] ಸ್ಥಪತಿಯಿಂದ ತಯಾರಿಸಲ್ಪಟ್ಟ ಆಕೃತಿಯು ಸರ್ವಕಾಲಿಕ ಮೌಲ್ಯವುಳ್ಳದ್ದಾಗಿರುತ್ತದೆ. ಏಕಚಿತ್ತತೆಯಿಂದ, ತಪಸ್ಸಿನಂತೆ ತನ್ನ ಶಿಲ್ಪ ಕರ್ಮವನ್ನು ಜ್ಞಾನ, ಕ್ರಿಯೆಗಳೊಂದಿಗೆ, ಶ್ರದ್ಧೆ ಮತ್ತು ಭಕ್ತಿಯಿಂದ ಯಾರು ಜಗತ್ತಿಗೆ ಅದ್ಭುತವಾದ ಪ್ರತಿಮಾಕೃತಿಯನ್ನು ನಿರ್ಮಿಸಿಕೊಡುವ ಶಕ್ತಿವುಳ್ಳವನಾಗಿರುತ್ತಾನೋ ಅವನೇ ಶಿಲ್ಪಿ. ಅವಿಸ್ಮರಣೀಯವಾದುದೇ ಶಿಲ್ಪ.

ಭಾರತಕ್ಕೆ ಆಗಮಿಸಿದ ವಿದೇಶಿಯರಿಗೆ ಇಲ್ಲಿಯ ಕಲಾಪೂರ್ಣ ಜಗತ್ತು ಅಚ್ಚರಿಯನ್ನು ಮೂಡಿಸಿತ್ತು. ಪ್ರಾಚೀನ ಭಾರತದಲ್ಲಿ ದೇವಸ್ಥಾನಗಳು ಸಮುದಾಯದ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಬೇಲೂರು-ಹಳೆಬೀಡು, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಹಂಪಿ, ಶ್ರವಣ ಬೆಳಗೊಳ ಮೊದಲಾದ ದೇವಸ್ಥಾನಗಳ ಶಿಲ್ಪಿಯ ಕಲಾಕೌಶಲ್ಯತೆಯನ್ನು ಸಾರಿ ಸಾರಿ ಹೇಳುತ್ತದೆ. ಶತಮಾನಗಳ ಇತಿಹಾಸವಿರುವ ಈ ದೇವಸ್ಥಾನಗಳು ಕಲಾತ್ಮಕವಾಗಿ ಬೆಳೆದು ಹಲವಾರು ಶೈಲಿ ಸಂಪ್ರದಾಯಗಳಿಗೆ ಕಾರಣವಾಗಿವೆ. ಭಾರತದಲ್ಲಿ ಶಿಲ್ಪಕಲೆ ಎಷ್ಟೊಂದು ಉತ್ತುಂಗದಲ್ಲಿದೆಯೆಂದರೆ ಭಾರತೀಯ ಶಿಲ್ಪಕಲೆಯನ್ನು ಕುರಿತು ಮೂರು ನೂರು ಗ್ರಂಥಗಳು ದೊರೆಯುತ್ತವೆಂದು ಶಿಲ್ಪಶಾಸ್ತ್ರಜ್ಞ ಶ್ರೀಧರ್ ಭಾಸ್ಕರ್ ವರ್ಣೇಕರ ತಿಳಿಸುತ್ತಾರೆ. ಕ್ರಿ.ಶ.೧೧೧೭ರಲ್ಲಿ ಬೇಲೂರಿನಲ್ಲಿ ಸ್ಥಾಪಿತವಾದ ಚನ್ನಕೇಶವ ದೇವಾಲಯ ಶಿಲ್ಪಿ ಜಕ್ಕಣಾಚಾರ್ಯ ಶಿಲ್ಪಕಲೆಯ ಶ್ರೇಷ್ಠ ಕುಶಲಕರ್ಮಿಯಾಗಿದ್ದನು. ಭಾರತೀಯ ಶಿಲ್ಪಕಲೆಯಲ್ಲಿ ಅಮರಶಿಲ್ಪಿಯಾಗಿ ಜಕ್ಕಣಾಚಾರ್ಯರು ವಿಶಿಷ್ಟ ಸ್ಥಾನ ಪಡೆದುಕೊಂಡಿ ದ್ದಾರೆ. ಈ ಬಗೆಯ ಒಬ್ಬೊಬ್ಬ ಕುಶಲಕರ್ಮಿಗಳ ಕುರಿತಾಗಿಯೇ ಹೆಚ್ಚಿನ ಸಂಶೋಧನಾಧ್ಯಯನಗಳು ನಡೆಯಬೇಕಿದೆ.

ಶಿಲ್ಪಕಲೆ ಬೆಳೆದಂತೆ ಸಾಕಷ್ಟು ಪ್ರಮಾಣದಲ್ಲಿ ವೈವಿಧ್ಯತೆಗಳು ಕಂಡುಬಂದಿರುವುದು ತಿಳಿಯುತ್ತದೆ. ವಿವಿಧ ಬಗೆಯ ಮೂರ್ತಿಗಳನ್ನು ತಯಾರಿಸುವಲ್ಲಿ ಶಿಲ್ಪ ಶಾಸ್ತ್ರಗಳಲ್ಲಿಯ ವಿಚಾರಗಳು ಸಹಾಯಕವಾಗಿ ನಿಂತಿವೆ. ವಿಗ್ರಹಗಳನ್ನು ಹೇಗೆ ತಯಾರಿಸಬೇಕೆಂದು ಶಿಲ್ಪಶಾಸ್ತ್ರವು ಕೆಲವು ನಿಯಮಗಳನ್ನು ಹೇಳಿತು. ಶಿಲ್ಪ ಶಾಸ್ತ್ರ ಪ್ರಕಾರ ನಿರ್ಮಿಸಿದ ವಿಗ್ರಹಗಳಿಂದ ಉತ್ತಮೋತ್ತಮ ಫಲ, ದೈವ ಸಾಕ್ಷಾತ್ಕಾರ ದೊರೆಯುತ್ತದೆಂಬ ಶ್ರದ್ಧೆ, ಭಕ್ತಿ, ನಂಬಿಕೆ ಜನಮಾನಸದಲ್ಲಿ ಬೇರೂರಿದೆ. ಕಲ್ಲಿನ ಮೂರ್ತಿ ಕೇವಲ

ಮೂರ್ತಿಯಷ್ಟೇ ಅಲ್ಲ! ಅದರಲ್ಲಿ ದೈವಶಕ್ತಿ, ದೈವಿಕ ಸ್ವರೂಪವನ್ನು ಶಿಲ್ಪಿಗಳೂ ತುಂಬಿದ್ದಾರೆನ್ನುವಷ್ಟು ಕಳಾಯುಕ್ತವಾಗಿರುವವು ಶಿಲ್ಪಗಳು.

ಶಿಲ್ಪಶಾಸ್ತ್ರದ ನಿಯಮಗಳಂತೆಯೇ ದೇವತಾಮೂರ್ತಿಗಳನ್ನು ಶಿಲ್ಪಿಗಳು ತಯಾರಿಸುತ್ತಾರೆ. ದೇವತಾ ಮೂರ್ತಿಗಳಲ್ಲಿ ಗರ್ಭಗೃಹದ ಮೂರ್ತಿ ಮತ್ತು ಉತ್ಸವ ಮೂರ್ತಿಗಳೆಂದು ಎರಡು ವಿಧದಲ್ಲಿ ವಿಗ್ರಹ ತಯಾರಿಸಲಾಗುತ್ತದೆ. ದೇವತೆಗಳ ಅಂಗಾಂಗ, ಕೈಬೆರಳ ಮುದ್ರೆ, ಮುಖ ಭಾವ, ಕಣ್ಣು ಮೊದಲಾದವುಗಳ ಸೂಕ್ಷ್ಮ ಕೆತ್ತನೆಯ ಕುರಿತು ಶಿಲ್ಪ ಶಾಸ್ತ್ರಗಳಲ್ಲಿ ವಿವರಣಾತ್ಮಕವಾಗಿ ತಿಳಿಸಲಾಗಿದೆ. ದೇವತಾ ವಿಗ್ರಹಗಳನ್ನು ತಯಾರಿಸಲು ಕಲ್ಲಿನ ಆಯ್ಕೆಯಲ್ಲಿ ಶಿಲ್ಪಿಯು ಮಹತ್ವದ ನಿಯಮಗಳನ್ನು ಸೂಕ್ಷ್ಮತೆಯನ್ನು ಪಾಲಿಸುತ್ತಾನೆ. ಶಿಲೆ, ಅಕಾರ, ಪ್ರಮಾಣ ಮೊದಲಾದವುಗಳನ್ನು ನೋಡಿದ ತಕ್ಷಣವೇ ತಿಳಿದುಕೊಳ್ಳುತ್ತಾನೆ. ತಾನಂದುಕೊಂಡ ಶಿಲ್ಪ ಕಲ್ಲಿನಲ್ಲಿ ಸಾಧ್ಯವಿದೆಯೋ ಇಲ್ಲವೊ? ಎಂಬುದನ್ನು ಶಿಲ್ಪಿ ಆಗಲೇ ತೀರ್ಮಾನಿಸುತ್ತಾನೆ. ಹೀಗಾಗಿ ಶಿಲ್ಪಿಗೆ ಶಿಲ್ಪಶಾಸ್ತ್ರದ ತಿಳಿವಳಿಕೆ ಅಗತ್ಯವಾಗಿರುತ್ತದೆ. ಶಿಲೆಯನ್ನು ಶಿವ, ಕೃಷ್ಣ, ಬುದ್ಧ, ಬಸವ, ರಾಮ ಮೊದಲಾದ ಪುರುಷ ವಿಗ್ರಹಗಳ ತಯಾರಿಕೆಗೆ ಹೊಂದಾಣಿಕೆಯಾಗುವ ಶಿಲೆಯನ್ನು ಪುರುಷ ಶಿಲೆಯೆಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ದುರ್ಗೆ, ಶಂಕರಿ, ಲಕ್ಷ್ಮೀ, ಸರಸ್ವತಿ ಮೊದಲಾದ ಸ್ತ್ರೀ ವಿಗ್ರಹಗಳಿಗೆ ಹೊಂದುವ ಶಿಲೆಯನ್ನು ಸ್ತ್ರೀ ಶಿಲೆಯೆಂದು ಕರೆಯಲಾಗುತ್ತದೆ. ಇವುಗಳಲ್ಲದೆ ಬೇರೆ ಬಗೆಯ ಪ್ರಾಣಿಗಳ ಮೂರ್ತಿಗಳನ್ನು ತಯಾರಿಸುವಾಗ ಈ ಎರಡು ಬಗೆಯ ಶಿಲೆಗಳಿಗಿಂತ ಗಡುಸಾದ ಶಿಲೆಯನ್ನು ಶಿಲ್ಪಿ ಆಯ್ಕೆ ಮಾಡಿಕೊಳ್ಳುತ್ತಾನೆ. ಶಿಲ್ಪಿಯಾದವನು ಎಲ್ಲ ಬಗೆಯ ಶಿಲೆಯ ಗುಣ-ಲಕ್ಷಣಗಳನ್ನು ತಿಳಿದವನಾಗಿರುತ್ತಾನೆ.

ಶಿಲ್ಪಿ ತಯಾರಿಕೆ ಸಂದರ್ಭದಲ್ಲಿ ಅಳತೆಗಳ ಪ್ರಮಾಣ ನಿರ್ಣಯಗಳನ್ನು ಶಿಲ್ಪಿ ಅರ್ಥೈಸಿ ಕೊಂಡಿರುತ್ತನೆ. ಸಾಮಾನ್ಯವಾಗಿ ಶಿಲ್ಪಶಾಸ್ತ್ರಗಳಲ್ಲಿ ಹೇಳಿರುವಂತೆ ಮೂರ್ತಿಗಳ ನಿರ್ಮಾಣದಲ್ಲಿ ಆರು ರೀತಿಯ ಅಳತೆಗಳನ್ನು ಗುರುತಿಸಲಾಗುತ್ತದೆ.

“೧. ಮಾನ-ಉದ್ದದ ಅಳತೆ, ೨. ಪ್ರಮಾಣ-ಅಗಲದ ಅಳತೆ, ೩. ಉನ್ಮಾನ-ದಪ್ಪದ ಅಳತೆ, ೪. ಪರಿಮಾಣ-ಸುತ್ತಳತೆ, ೫. ಉಪಮಾನ-ಅಂಗಗಳ ಮಧ್ಯ ಇರುವ ಅಂತರ, ೬. ಲಂಬಮಾನ-ಬ್ರಹ್ಮಸೂತ್ರದ ಅಳತೆ(Plumb).”[೨೯] ಈ ಹಿನ್ನೆಲೆಯಲ್ಲಿ ವಿಗ್ರಹದ ತಾಲಮಾನವನ್ನು ನಿರ್ಧರಿಸಲಾಗುತ್ತದೆ. ಇಲ್ಲಿ ‘ತಾಲ’ವೆಂದರೆ ಹನ್ನೆರಡು ಅಂಗುಲಳತೆ ಎಂದರ್ಥ. ಇದು ಶಿಲ್ಪಶಾಸ್ತ್ರದ ಪಾರಿಭಾಷಿಕ ಪದವಾಗಿದೆ. ಶಿಲ್ಪಿ ಯಾವುದಾದರೂ ಒಂದು ಮೂರ್ತಿಯನ್ನು ತಯಾರಿಸಲು ಆರಂಭಿಸುವ ಮುಂಚೆ ಶಿಲ್ಪಕ್ಕೆ ತಕ್ಕಂಥ ಶಿಲೆಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಶುಭ ಮೂಹೂರ್ತದಲ್ಲಿ ಶಿಲೆಯನ್ನು ಜೊತೆಗೆ ತನ್ನ ಉಪಕರಣಗಳಾದ ಉಳಿ, ಚಾಣ, ಸುತ್ತಿಗೆ, ಮಟವಲಗೆ(ಅಳತೆಮಾಪನ) ಮುಂತಾದವುಗಳನ್ನು ಭಕ್ತಿ-ಗೌರವದಿಂದ ಪೂಜಿಸಲಾಗುತ್ತದೆ. ಪಂಚಾಳರ ಕುಲದೈವ ಕಾಳಮ್ಮನನ್ನು

ಸ್ಮರಿಸುತ್ತಾರೆ. ಸ್ಮರಣೆಯನ್ನು ಶಿಲ್ಪದ ಸಂಪೂರ್ಣ ಆಕೃತಿಯನ್ನು ಮನಸ್ಸಿನಲ್ಲಿ ಅಚ್ಚಳಿಯದೆ ಶಿಲ್ಪಿ ಮೂಡಿಸಿಕೊಳ್ಳುತ್ತಾನೆ. ಸಮುದಾಯದವರು ನೀಡಿದ ಹಣಕ್ಕಾಗಿ ದುಡಿಯುತ್ತಿದ್ದೇನೆ ಎನ್ನುವುದಕ್ಕಿಂತ ಶಿಲ್ಪಿ ಸುಂದರವಾದ ಶಿಲ್ಪ ರಚನೆಗಾಗಿ ದುಡಿಯುತ್ತಿದ್ದೇನೆ ಎಂಬ ಮನೋಭಾವವನ್ನು ಶಿಲ್ಪಿಗಳು ಮನಸ್ಸಿನಲ್ಲಿ ಮೂಡಿಸಿಕೊಂಡಿರುತ್ತಾರೆ. ಉತ್ತಮ ಮನಸ್ಸುಳ್ಳ ಶಿಲ್ಪಿಯ ಮೂರ್ತಿಯೂ ಸರ್ವೋತ್ತಮವಾಗಿ ನಿರ್ಮಾಣವಾಗುತ್ತದೆ. 'ಮನಸ್ಸಿದ್ದರೆ ಮಾರ್ಗ' ಎಂಬಂತೆ ಶುದ್ಧ ಮನಸ್ಸಿನಿಂದ ಕೆಲಸ ಆರಂಭಿಸಿದರೆ ವಿಶ್ವವೇ ಮೆಚ್ಚುವಂಥ ಅದ್ಭುತ ಶಿಲಾಕೃತಿ ತಯಾರಾಗುತ್ತದೆ. ಇಂತಹ ಅದ್ಭುತ ಶಿಲಾಕೃತಿಗೆ ಶಿಲ್ಪಾಚಾರಿ ಪ್ರಾಣ ಪ್ರತಿಷ್ಠೆಯನ್ನು ಮಾಡುತ್ತಾನೆ. ಶಿಲ್ಪಿಯ ಯಾವುದೇ ಮೂರ್ತಿಯು ಪೂಜೆಗೆ ಅರ್ಹವಾಗಬೇಕಾದರೆ ಅದು ಪ್ರಾಣ ಪ್ರತಿಷ್ಠೆಗೊಳ್ಳ ಬೇಕಾಗುತ್ತದೆ. ಶಿಲ್ಪಶಾಸ್ತ್ರದ ನಿಯಮಗಳಂತೆ ಸರಿಯಾದ ಅಳತೆ–ಪ್ರಮಾಣಗಳಲ್ಲಿ ತಯಾರಾದ ಮೂರ್ತಿಗಳು ಸಮುದಾಯಕ್ಕೆ ಸುಖ–ಶಾಂತಿ, ನೆಮ್ಮದಿಯನ್ನು, ಧನ–ಕನಕಾದಿ, ಸಂಪತ್ತು–ಸಂತಾನವನ್ನು ನೀಡುತ್ತವೆ ಎಂಬ ನಂಬಿಗೆ ಶಿಲ್ಪಿ ಮತ್ತು ಜನಸಮುದಾಯದಲ್ಲಿ ಅಚಲವಾಗಿದೆ. ಮೂರ್ತಿ ರಚನೆಯಲ್ಲಿ ಅಳತೆ–ಪ್ರಮಾಣಗಳಲ್ಲಿ ಶಿಲ್ಪಿ ದೋಷವನ್ನುಂಟು ಮಾಡಿದ್ದರೆ ಸಮಾಜಕ್ಕೆ ಅದರಿಂದ ಕೇಡು ಉಂಟಾಗುತ್ತದೆಂಬ ವಿಚಾರವು ಜನರಲ್ಲಿ ಉಳಿದುಕೊಂಡು ಬಂದಿದೆ. ಹೀಗಾಗಿ ಶಿಲ್ಪಿ ತನ್ನ ಕಾರ್ಯಾಗಾರವನ್ನು ಒಂದು ಪ್ರಶಾಂತವಾದ ಸ್ಥಳದಲ್ಲಿ ನಿರ್ಮಿಸಿ ಏಕಾಗ್ರತೆಯಿಂದ ಕೆಲಸ ಮಾಡುತ್ತಾನೆ.

ಮೂರ್ತಿ ತಯಾರಿಕೆಯಲ್ಲಿ ಶಿಲ್ಪಿಯ ಕರಕೌಶಲ ಸಂಸ್ಕಾರಕ್ಕಿಂತ ಮನಸಂಸ್ಕಾರ ಪ್ರಮುಖವಾಗಿರುತ್ತದೆ. ಕೈ, ಉಳಿ, ಚಾಣ, ಸುತ್ತಿಗೆ ಪೂರಕ ಸಾಧನಗಳು. ನಿಜವಾದ ಪ್ರತಿಮಾ ಕೃತಿಯನ್ನು ರೂಢಿಸುವುದು ಶಿಲ್ಪಿಯ ಮನಸ್ಸು. ಮನಸ್ಸಿನಲ್ಲಿ ಮೂರ್ತಿ ಸುಂದರವಾಗಿ ನಿರ್ಮಾಣವಾದರೆ ಕೈ ಉಳಿ, ಚಾಣದಿಂದಲೂ ಮೂರ್ತಿ ಸೌಂದರ್ಯಯುಕ್ತವಾಗಿ ರೂಪಗೊಳ್ಳುತ್ತದೆ. ಇದರಿಂದ ಶಿಲ್ಪಿ ವಿಶ್ವದಲ್ಲೇ ಖ್ಯಾತನಾಗುತ್ತಾನೆ. ಇಂತವರಿಗೆ ಪ್ರಾಚೀಣ ಕಾಲದಲ್ಲಿ ರಾಜರುಗಳು ಆಶ್ರಯವನ್ನು ನೀಡುತ್ತಿದ್ದರು. ರಾಜಾಶ್ರಯ ಹೊಂದಿದ ಶಿಲ್ಪಿಗಳು ಕರ್ನಾಟಕದಲ್ಲಿ ಶಿಲ್ಪಕಲೆಗೆ ಅಗಾಧವಾದ ಕೊಡುಗೆ ನೀಡಿದ್ದಾರೆ. ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರ ಅರಸರುಗಳ ಕಾಲದಲ್ಲಿ ಶಿಲ್ಪಕಲೆ ಸಮೃದ್ಧಿಯಾಗಿ ಬೆಳೆದಿತ್ತು. ಬಾದಾಮಿ ೩ನೇ ಗುಹೆ ಮತ್ತು ಪಟ್ಟದಕಲ್ಲಿನಲ್ಲಿರುವ ದಂಪತಿಗಳ ಮೂರ್ತಿಗಳು ಮತ್ತು ಪಟ್ಟದಕಲ್ಲಿನಲ್ಲಿರುವ ದಂಪತಿಗಳ ಮೂರ್ತಿಗಳು ಕಲ್ಲಿನ ಜಡತ್ವ ಬಿಟ್ಟು ಆಕಾರದಲ್ಲಿ ವಿಹರಿಸುವ ನೈಜ ಕಾಯಗಳಂತೆ ಆ ಶಿಲ್ಪಗಳಿವೆ. "ಕೇವಲ ಈ ಲೋಕದ ಮರ್ತ್ಯ ಪ್ರಜ್ಞೆಗೆ ಅವು ಬಂದಿತವಾದಂತಿಲ್ಲ. ಅದಕ್ಕೆ ಅತೀತವಾದ ಇನ್ನಾವುದೋ ದರ್ಶನದಿಂದ ದೀಪ್ತನಾದ ಶಿಲ್ಪಿ ಅವುಗಳನ್ನು ಕಂಡರಿಸಿದಂತೆ ತೋರುತ್ತದೆ. ಕಲ್ಲಿನ ಸ್ಥೂಲ ಶರೀರದಿಂದ ಪಾರುಮಾಡಿ ಕಲೆಯ ಸೂಕ್ಷ್ಮ ಶರೀರವನ್ನು ಅವುಗಳಿಗೆ ಕರುಣಿಸಿದ್ದಾನೆ ಶಿಲ್ಪಿ."[೩೦] ಇಲ್ಲಿಯ ಮೂರ್ತಿಗಳು, ಕೆತ್ತನೆಯ ಶಿಲ್ಪಗಳಂತೆ ಎನಿಸದೆ

ನಿಜವಾದ ಮನುಷ್ಯ ದೇಹಗಳಂತೆ, ದಂಪತಿಗಳಂತೆ ನೋಡುಗರ ಮನಸ್ಸಿನಲ್ಲಿ ಉಳಿಯುತ್ತವೆ. ಇಲ್ಲಿ ಶಿಲ್ಪಿಯ ಕೈಚಳಕದ ಜೊತೆ ವಾಸ್ತವಿಕತೆಯ ಮನೋಭೂಮಿಕೆ ಪರಿಶುದ್ಧ, ಪರಿಪೂರ್ಣತೆಯಿಂದ ಕೂಡಿದ್ದಾಗಿತ್ತು ಎಂಬುದನ್ನು ಈ ದಂಪತಿ ಶಿಲ್ಪಗಳು ತಿಳಿಸುತ್ತವೆ.

ರಾಷ್ಟ್ರಕೂಟರ ಅವಧಿಯಲ್ಲಿ ನಿರ್ಮಾಣವಾದ ಎಲ್ಲೋರಾದ ರಾಮೇಶ್ವರ, ದಶಾವತಾರ, ಕೈಲಾಸ ಗುಹೆಗಳಲ್ಲಿರುವ ಶಿಲ್ಪಗಳು ಶಿಲ್ಪಿಯ ಕಲಾಕೌಶಲ್ಯವನ್ನು ತಿಳಿಸುತ್ತವೆ. ಕೈಲಾಸ ದೇವಾಲಯದ ಶಿಲ್ಪಗಳು ಎಂಥವರನ್ನೂ ಮೂಕವಿಸ್ಮಿತರನ್ನಾಗಿಸುತ್ತವೆ. ದೇವಸ್ಥಾನದ ಮುಂದಿನ ಬಲಭಾಗದಲ್ಲಿ ರಾವಣೇಶ್ವರ ಕೈಲಾಸವನ್ನೆತ್ತುತ್ತಿರುವುದು ಶಿಲ್ಪಕಲೆಯ ಉತ್ಕೃಷ್ಟತೆಯನ್ನು ಸೂಚಿಸುತ್ತದೆ. ಶ್ರವಣ ಬೆಳಗೊಳದ ಗೊಮ್ಮಟೇಶ್ವರನ ಭವ್ಯ ಮೂರ್ತಿಶಿಲ್ಪಗಳ ಶಿಲ್ಪಕಲೆಗೆ ಹಿಡಿದ ಕೈಗನ್ನಡಿಯಾಗಿದೆ. ೫೭ ಅಡಿಗಳ ಎತ್ತರವಿರುವ ಈ ವಿಗ್ರಹವು ವಿಶ್ವಮಾನವನ ಭವ್ಯಕೃತಿ ಬಾಹುಬಲಿ, ದೃಢ ನಿಷ್ಠೆಯಿಂಥ ತಪಸ್ಸನ್ನು ಕೈಗೊಂಡಿರುವುದರ ಸಾಂಕೇತಿಕ ನಿರೂಪಣೆಯನ್ನು ಶಿಲ್ಪಿ ಸಾಧಿಸಿ ತೋರಿಸಿದ್ದಾನೆ. ಈ ಮೂರ್ತಿಯಲ್ಲಿ ವಿಶೇಷ ಕಾಣುವಂತದ್ದು ಅದರ ಮುಖಭಾವ, ಮೂರ್ತಿಯ ಧ್ಯಾನಸ್ಥಿತಿ, ದಿವ್ಯದೃಷ್ಟಿಯನ್ನು ಸೂಚಿಸುವ ಕಣ್ಣುಗಳು ಮಂದಹಾಸ ಸೂಸುತ್ತಿರುವ ಮುಖ ಇವೆಲ್ಲವುಗಳನ್ನು ಬ್ರಹದಾಕಾರದ ಮೂರ್ತಿಯಲ್ಲೂ ಶಿಲ್ಪಿ ಅದ್ವೀತಿಯವಾದುದನ್ನು ಸಾಧಿಸಿದ್ದಾನೆ. ಹೊಯ್ಸಳರ ಕಾಲದಲ್ಲಿ ಸಣ್ಣ-ಸಣ್ಣ ಕುಸುರಿ ಕೆಲಸವನ್ನು ಮಾಡಿ, ಶಿಲ್ಪಕಲೆಯನ್ನು ವಿಶ್ವಕ್ಕೆ ಪರಿಚಯಿಸಿದ ಶಿಲ್ಪಿಗಳ ಕಲಾಕೌಶಲ್ಯತೆಯನ್ನು ಗುರುತಿಸುತ್ತೇವೆ.

ಮೃದುವಾದ ಬಳಪದ ಕಲ್ಲನ್ನು ಬಳಸುತ್ತಿದ್ದ ಶಿಲ್ಪಿಗಳು ಚಾಣದ ತುದಿಯು ಮೇಣದ ಮೇಲೆ ಚಿತ್ರ ಬಿಡಿಸಿದಂತೆ ಹರಿದಾಡಿ ಶಿಲ್ಪ ನಿರ್ಮಾಣವಾಗುತ್ತಿತ್ತು. ಭಾವನೆಗಳ ಅಭಿವ್ಯಕ್ತಿಯನ್ನು ಕಲ್ಪನೆಗಳ ಕಣ್ಣಿನ ಮೂಲಕ ತೋರಿಸುವ ಪ್ರಯತ್ನಗಳನ್ನು ಶಿಲ್ಪಿಗಳು ಮಾಡಿದ್ದಾರೆ. ಬೇಲೂರಿನ ಚನ್ನಕೇಶವ ದೇವಾಲಯದ ವಿಗ್ರಹಗಳನ್ನು ಗಮನಿಸಿದರೆ ಈ ಮಾತು ಸತ್ಯವೆನಿಸುತ್ತದೆ. ಗರ್ಭಗುಡಿಯ ವಿಗ್ರಹಕ್ಕಿಂತ ಕೆಲವೊಮ್ಮೆ ಹೊರಗಿರುವ ಶಿಲಾಬಾಲಿಕೆಯರ ಮೂರ್ತಿಗಳು ಅತೀ ಸುಂದರವೆನಿಸುತ್ತವೆ. ಒಂದಕ್ಕಿಂತ ಮತ್ತೊಂದು ಮೂರ್ತಿಗಳನ್ನು ಸುಂದರಗೊಳಿಸುವಲ್ಲಿ ಶಿಲ್ಪಿಯ ಕಲಾ ನೈಪುಣ್ಯತೆ, ಕಲೋಪಾಸನೆ, 'ಕಲೆಗಾಗಿ ಕಲೆ' ಎಂಬುದನ್ನು ಸ್ಪಷ್ಟಪಡಿಸುತ್ತದೆ.

ವಿಜಯನಗರ ಅರಸರ ಕಾಲದಲ್ಲಿ ಹೆಚ್ಚಾಗಿ ಬೆನಚು ಕಲ್ಲುಗಳೇ ಶಿಲ್ಪಿಗಳಿಗೆ ದೊರೆಯುತ್ತಿರುವುದ ರಿಂದ ಸಣ್ಣ-ಸಣ್ಣ ಕುಸುರಿ ಕೆಲಸದ ಬದಲಾಗಿ, ಉಗ್ರ ನರಸಿಂಹ, ಕಡಲೇಕಾಳು ಗಣೇಶ, ಸಾಸಿವೆ ಗಣೇಶ, ಶಿವನ ವಿಗ್ರಹ ಮೊದಲಾದ ಚೈತನ್ಯಯುಕ್ತ ಶಿಲ್ಪಗಳನ್ನು ಶಿಲ್ಪಿಗಳೂ ತಯಾರಿಸುತ್ತಿದ್ದರು. ರಾಮಾಯಣ ಮತ್ತು ಕೃಷ್ಣ ಬಾಲಲೀಲೆಗಳನ್ನು ನಿರೂಪಿಸುವ ಶಿಲ್ಪವಸ್ತುಗಳು ಅಂದಿನ ಶಿಲ್ಪಗಳಿಗೆ ಪ್ರಿಯವಾಗಿದ್ದವು ಎಂಬುದು ತೋರಿಸುತ್ತದೆ. ಪ್ರಾಚೀನ ಕಾಲದಿಂಡಿದು ಇಲ್ಲಿಯವರೆಗೂ ಕರ್ನಾಟಕದ

ಶಿಲ್ಪಗಾರಿಕೆಯನ್ನು ಅವಲೋಕಿಸಿದರೆ ಹೆಚ್ಚಿನ ಪಾಂಚಾಳ ಕುಲದ ಶಿಲ್ಪಗಳೇ ಶಿಲ್ಪಕಲೆಯನ್ನು ಉನ್ನತಕ್ಕೇರಿಸಿರುವುದು ಕಂಡುಬರುತ್ತದೆ. ಶಿಲ್ಪದಿಂದ ಶಿಲ್ಪಿ, ಶಿಲ್ಪಿಯಿಂದ ಶಿಲ್ಪ ಮಹೋನ್ನತ ಸ್ಥಾನ ಪಡೆದುಕೊಳ್ಳುತ್ತದೆ. ಶಿಲ್ಪಿಯ ನೂರು ಉಳಿ ಪೆಟ್ಟಿನಿಂದ ಒಂದು ಶಿಲೆ ಸುಂದರ ಶಿಲ್ಪವಾಗುತ್ತದೆ.

೩.೫. ಅಕ್ಕಸಾಲಿಗ(ಪತ್ತಾರ)

ವಿಶ್ವಕರ್ಮನ ಐದನೆಯ ಹಾಗೂ ಕಿರಿಯ ಮಗ ವಿಶ್ವಜ್ಞ ಅಥವಾ ದೈವಜ್ಞ. ಈ ವೃತ್ತಿಯ ಮೂಲ ಪುರುಷ ವಿಶ್ವಜ್ಞ ಸುಪರ್ಣಸ ಗೋತ್ರದವನಾಗಿದ್ದಾನೆ. ಈತನ ಪತ್ನಿ ಚಂದ್ರಿಕಾದೇವಿ. ಈಕೆಯು ಜೈಮಿನಿ ಋಷಿಯ ಮಗಳು. ಈ ಗೋತ್ರದ ಕುಶಲಕರ್ಮಿಗಳ ಕೆಲಸ ಬೆಳ್ಳಿ-ಬಂಗಾರದ ಆಭರಣ ಮೂರ್ತಿಗಳನ್ನು ತಯಾರಿಸುವುದಾಗಿದೆ. ಬೆಳ್ಳಿ-ಬಂಗಾರದ ಕೆಲಸಗಳನ್ನು ಮಾಡುವ ಕುಶಲಕರ್ಮಿಯೇ ಅಕ್ಕಸಾಲಿಗ ಅಥವಾ ಪತ್ತಾರ. ಚಿನ್ನಾಭರಣಗಳನ್ನು ತಯಾರಿಸುವ ಕುಶಲಕರ್ಮಿಗಳನ್ನು ಚಿನಿವಾರರು, ಸುವರ್ಣಕಾರರು, ಸೋನಾರರೆಂದು ಕರೆಯಲಾಗುತ್ತದೆ. ಬಂಗಾರ-ಬೆಳ್ಳಿ, ವಜ್ರ, ಮಣಿ, ರತ್ನ ಮೊದಲಾದ ಶ್ರೇಷ್ಠ ಆಭರಣಗಳನ್ನು ತಯಾರಿಸುವಲ್ಲಿ, ಸೂಕ್ಷ್ಮ ಕುಶಲಕರ್ಮಿಗಳಾದ ಅಕ್ಕಸಾಲಿಗರು ನಿಪುಣರು. ಅರ್ಕ ಎಂದರೆ ಅರಗು, ಅರಗನ್ನು ಕರಗಿಸುವುದು ಅಥವಾ ಕರಗಿಸುವ ಶಕ್ತಿ-ಸೂರ್ಯ ಎಂದರ್ಥ. 'ಸಾಲೆ' ಎನ್ನುವುದು ಅರಗು ತುಂಬುವ, ಬಂಗಾರ ಕೆಲಸ ಮಾಡುವ ಕಾರ್ಯಾಗಾರದ ಸ್ಥಳವಾಗಿದೆ. ಇನ್ನೊಂದರ್ಥದಲ್ಲಿ 'ಅಕ್ಷಸಾಲೆ' ಅರ್ಕಸಾಲೆ>ಅಕ್ಕಸಾಲಿ ಎಂದು ಕರೆಯಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಅಕ್ಕಸಾಲಿಗ ವಿವಿಧ ವಿನ್ಯಾಸಗಳಲ್ಲಿ ಆಭರಣಗಳನ್ನು ತಯಾರಿಸಿರುವುದು ಕಂಡುಬರುತ್ತದೆ. ಅಕ್ಕಸಾಲಿಗರು ಜನರಿಂದ ಬೆಳ್ಳಿ-ಬಂಗಾರವನ್ನು ಪಡೆದು ಅವರಿಗೆ ಅವಶ್ಯಕವಾದ ಆಭರಣಗಳನ್ನು, ನಾಣ್ಯಗಳನ್ನು ತಯಾರಿಸಿಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಇದಕ್ಕೆ ಉದಾಹರಣೆ ಎಂಬಂತೆ ಸಿಂಧೂ ಕಣಿವೆ ನಾಗರಿಕತೆಯಲ್ಲಿ ಬೆಳ್ಳಿ-ಬಂಗಾರದಾಭರಣಗಳನ್ನು ಅಕ್ಕಸಾಲಿಗರು ತಯಾರಿಸುತ್ತಿದ್ದರೆಂಬುದು ತಿಳಿದುಬರುತ್ತದೆ. 'ಆಡು ಮುಟ್ಟದ ಸೊಪ್ಪಿಲ್ಲ; ಅಕ್ಕಸಾಲಿಗನಿಲ್ಲದೇ ಬದುಕಿಲ್ಲ' ಎಂಬಂತೆ ಪ್ರತಿ ಹಳ್ಳಿ-ಪಟ್ಟಣಗಳಲ್ಲಿ ಅಕ್ಕಸಾಲಿಗರು ಚಿನ್ನ-ಬೆಳ್ಳಿಯ ಆಭರಣಗಳನ್ನು ತಯಾರಿಸಿ ಕೊಡುವುದರ ಮೂಲಕ ಸಮಾಜದ ಒಂದು ಭಾಗವಾಗಿ ಉಳಿದುಕೊಂಡಿದ್ದಾರೆ.

ರಾಜ-ಮಹಾರಾಜರುಗಳ ವಿಶೇಷ ಗೌರವಕ್ಕೆ ಪಾತ್ರರಾಗಿದ್ದ ಅಕ್ಕಸಾಲಿಗರು, ರಾಜ-ರಾಣಿ, ರಾಜಕುಮಾರಿ-ರಾಜಕುಮಾರರಿಗೆ ಬೇಕಾಗುವ ಬಂಗಾರದ ಆಭರಣಗಳನ್ನು ತಯಾರಿಸುತ್ತಿದ್ದರು. ರಾಜನ ಗೌರವಕ್ಕೆ ಪಾತ್ರನಾದ ಅಕ್ಕಸಾಲಿಗನಿಗೆ ರಾಜಬೀದಿಗಳ ಮಳಿಗೆಗಳಲ್ಲಿ ಅಂಗಡಿಗಳು ದೊರೆಯುತ್ತಿದ್ದವು. ಕೆಲವು ನಂಬಿಗಸ್ಥ ಅಕ್ಕಸಾಲಿಗರು ರಾಜನ ಟಂಕಸಾಲೆಯಲ್ಲಿ ಬಂಗಾರದ ನಾಣ್ಯಗಳನ್ನು ತಯಾರಿಸುತ್ತಿದ್ದರು ಎಂಬ ಮಾಹಿತಿಗಳು ಶಾಸನಗಳಿಂದ ತಿಳಿಯುತ್ತವೆ. ಕಡೂರ

ತಾಲೂಕು ಸೋಮನಹಳ್ಳಿ ಕ್ರಿ.ಶ.೧೨೪೨ರಲ್ಲಿ ಶಾಸನದಲ್ಲಿ ಅಕ್ಕಸಾಲೆ ಮಾರೋಜ, "ಕ್ರಿ.ಶ.೧೮೯೮–೯೯ರ ಒಂದು ಶಾಸನದಲ್ಲಿ ಅಕ್ಕಸಾಲಿ ಭಾಗೋಜಿ"[೩೧] ಎಂದು ಹೆಸರುಗಳು ಉಲ್ಲೇಖಗೊಂಡಿವೆ. ಕೊಪ್ಪಳದ ಅಗಡಿ ಸಂಗಣ್ಣನವರ ಮನೆಯಲ್ಲಿದ್ದ ತಾಮ್ರಶಾಸನದಲ್ಲಿ ಅಕ್ಕಸಾಲಿ ಸಿರಿಮಂಣನ ಉಲ್ಲೇಖ ಬರುತ್ತದೆಂದು ಡಾ.ವಿರೇಶ ಬಡಿಗೇರ ಅವರು ಶಾಸನಗಳಲ್ಲಿ 'ಆಯಗಾರಿಕೆ ಸಂಸ್ಕೃತಿ' ಕೃತಿಯಲ್ಲಿ ತಿಳಿಸಿದ್ದಾರೆ. ಶಾಸನ, ಸಾಹಿತ್ಯ ಕೃತಿಗಳಿಂದ ತಿಳಿದು ಬರುವ ಮಹತ್ವದ ಸಂಗತಿಯೆಂದರೆ, ಅಕ್ಕಸಾಲಿ ಕುಶಲಕರ್ಮಿಗಳು ಇತರ ಕುಶಲಕರ್ಮಿಗಳಂತೆ ಜನರ ನಂಬಿಕೆ–ಪ್ರೀತಿಗೆ ಪಾತ್ರರಾಗಿದ್ದರು. ಅತೀ ಬೆಲೆಯುಳ್ಳ ಲೋಹ ಬಂಗಾರದ ವಿಷಯದಲ್ಲಿ ಅಕ್ಕಸಾಲಿಗರು ಕುಶಲ ಕಲೆಯಷ್ಟೇ ಜನರ ನಂಬಿಕೆಯನ್ನು ಉಳಿಸಿಕೊಳ್ಳುವ ಕಲಾ ನಿಪುಣರಾಗಿದ್ದರು. ಜನಮಾನಸದಲ್ಲಿ ಉನ್ನತ ಸ್ಥಾನಮಾನ ಗಳನ್ನು ಪಡೆದುಕೊಂಡಿದ್ದರೆಂಬುದು ಸ್ಪಷ್ಟವಾಗುತ್ತದೆ. ಅಕ್ಕಸಾಲಿಗನ ಜೊತೆ ಜನ ಯಾವುದೇ ಕರಾರು ಪತ್ರಗಳಿಲ್ಲದೇ ಬಂಗಾರವನ್ನು ಮುಂಗಡವಾಗಿ ಆಭರಣಗಳನ್ನು ತಯಾರಿಸಲು ನೀಡುತ್ತಿದ್ದರು. ಇಲ್ಲಿ ಪರಸ್ಪರರಲ್ಲಿ ನಂಬಿಕೆಯೇ ಮುಖ್ಯವಾಗಿತ್ತು. ಅಕ್ಕಸಾಲಿ ಕುಶಲಕರ್ಮಿ ಉತ್ತಮ ಸಂಸ್ಕಾರವಂತ, ಸದಾಚಾರಿ, ಬಂಗಾರದ ಗುಣಕ್ಕಿಂತಲೂ ಬಂಗಾರದ ಆಭರಣ ತಯಾರಿಸುವವನ ಗುಣ ಶ್ರೇಷ್ಠವೆಂದು ಜನ ಭಾವಿಸುತ್ತಿದ್ದರು. ಜನರ ಈ ಭಾವನೆ–ನಂಬಿಕೆಗಳಿಗೆ ಕಿಂಚಿತ್ತು ದ್ರೋಹವಾಗದಂತೆ ಅಕ್ಕಸಾಲಿಗರು ಸರಿಯಾದ ಸಮಯಕ್ಕೆ ಆಭರಣಗಳನ್ನು ತಯಾರಿಸಿಕೊಡುತ್ತಿದ್ದರು.

ಬೆಳ್ಳಿ–ಬಂಗಾರದ ಆಭರಣಗಳನ್ನು ತಯಾರಿಸುವ ಕುಶಲಕರ್ಮಿಗಳು ಪರಂಪರಾಗತವಾಗಿ ಕಲಿತುಕೊಂಡ ಕರಕೌಶಲಿಗಳಾಗಿದ್ದರು. ಅಕ್ಕಸಾಲಿಗರು ದೇವರಿಗೆ, ಧರ್ಮಕಾರ್ಯಗಳಿಗೆ ಅವಶ್ಯಕವಾದ ಮೂರ್ತಿ, ಆಭರಣಗಳನ್ನು ಶಾಸ್ತ್ರೋಕ್ತವಾಗಿ ಶ್ರದ್ಧೆಯಿಂದ ತಯಾರಿಸುತ್ತಾರೆ. ಇವರು ಅನುಭವಿಗಳು, ಶಾಸ್ತ್ರಜ್ಞರು, ಯಂತ್ರ–ಮಂತ್ರ–ತಾಂತ್ರಿಕ ತಜ್ಞರು ಆಗಿರುತ್ತಾರೆ. ಪ್ರಾಚೀನ ಕಾಲದ ಆಭರಣಗಳೊಂದಿಗೆ ಆಧುನಿಕ ನಾಗರೀಕರ ಅಭಿಲಾಷೆಗಳಿಗೆ ತಕ್ಕಂಥ ವೈವಿಧ್ಯಮಯ ಆಭರಣ ತಯಾರಿಸುವುದನ್ನು ಕಲಿತುಕೊಂಡು ಜನರ ಪ್ರೀತಿಯನ್ನು ಉಳಿಸಿಕೊಳ್ಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತದೆ. ದೇವರಿಗೆ ಸಂಬಂಧಿಸಿದ ಆಭರಣ, ಕಿರೀಟ ಮತ್ತು ಮನುಷ್ಯರಿಗೆ ಸಂಬಂಧಿಸಿದ ಮಂಗಳಸೂತ್ರ ಅಥವಾ ತಾಳಿ ತಯಾರಿಸುವಲ್ಲಿ ಅಕ್ಕಸಾಲಿಗರು ಧಾರ್ಮಿಕ ವಿಧಿ–ವಿಧಾನಗಳನ್ನು ಪೂಜೆ–ಪುನಸ್ಕಾರಗಳನ್ನು ನೆರವೇರಿಸಿ, ಆಭರಣಗಳನ್ನು ತಯಾರಿಸಲು ಆರಂಭಿಸುತ್ತಾರೆ. ತನ್ನ ಕೈಯಾರ ಮಾಡಿದ ಕಿರೀಟ, ಆಭರಣಗಳನ್ನು ದೇವರು ಅಲಂಕರಿಸಿದ್ದನ್ನು ಅಕ್ಕಸಾಲಿಗರು ಹೆಮ್ಮೆಪಡುವುದ ರೊಂದಿಗೆ ವೃತ್ತಿ ಸಾರ್ಥಕತೆಯನ್ನು ಹೊಂದಿದಂತಾಯಿತೆಂದು ಭಾವಿಸುತ್ತಾರೆ.

ಹಿಂದೂ ಸಂಸ್ಕೃತಿಯಲ್ಲಿ 'ತಾಳಿ' ಹೆಣ್ಣಿಗೆ ಅತೀ ಬೆಲೆಯುಳ್ಳ ಜೀವರಕ್ಷಕ ಆಭರಣವಾಗಿದೆ. ಇಂದಿಗೂ ಹಳ್ಳಿಗಳಲ್ಲಿ ಮದುವೆ ಕಾರ್ಯಗಳು ಆರಂಭಗೊಂಡರೆ ಅಕ್ಕಸಾಲಿಗರ ಮನೆ–ಅಂಗಡಿಗಳು

ತುಂಬಿರುತ್ತವೆ. ಹೆಣ್ಣು ಮತ್ತು ಗಂಡಿನವರು ಸಮಾನ ಪಾಲಿನಲ್ಲಿ ಅಕ್ಕಸಾಲಿಗನಲ್ಲಿ ತಾಳಿ ಮಾಡಿಸುವ ಪದ್ಧತಿಯಿದೆ. ಪಟ್ಟಣಗಳಲ್ಲಿ ಪ್ರಖ್ಯಾತಿ ಹೊಂದಿದ ಜ್ಯುವೇಲರ್ಸ್ ಬಂಗಾರದ ಅಂಗಡಿಗಳಿದ್ದರೂ ಸಾಂಪ್ರದಾಯಿಕ ಕುಟುಂಬಸ್ಥರು, ಅಕ್ಕಸಾಲಿಗರ ಮನೆ, ಅಂಗಡಿಗೆ ಬಂದು ಶುಭ ಮೂಹೂರ್ತ ದಲ್ಲಿಯೇ ತಮ್ಮ ಮಗಳು, ಸೊಸೆಗೆ ತಾಳಿ ಮಾಡಿಕೊಡಲು ತಿಳಿಸುತ್ತಾರೆ. ಅಕ್ಕಸಾಲಿಗನು ಅಷ್ಟೇ ಶ್ರದ್ಧೆ-ನಂಬಿಕೆಯಿಂದ ಶುಭ ಘಳಿಗೆಯಲ್ಲಿ ಪ್ರತ್ಯೇಕವಾಗಿ ತಾಳಿಯನ್ನು ತಯಾರಿಸುತ್ತಾನೆ. ತಾಳಿ ತಯಾರಿಸುವಾಗ ಅಕ್ಕಸಾಲಿಗ ಎಷ್ಟು ತಾಳ್ಮೆಯಿಂಧ ಆಭರಣ ತಯಾರಿಸುತ್ತಾನೆಯೇ ಅದರ ಎರಡಷ್ಟು ಆ ತಾಳಿಯನ್ನು ಧರಿಸಿದ ಹೆಣ್ಣು ತಾಳ್ಮೆಯಿಂದ ಬದುಕಿ ತನ್ನ ಜೀವನವನ್ನು ಬಂಗಾರ ವಾಗಿಸಿಕೊಳ್ಳುತ್ತಾಳೆ ಎಂದು ನಮ್ಮೂರಿನ ಹಿರಿಯ ಅಕ್ಕಸಾಲಿಗ ದಿವಂಗತ ಭಗವಂತಪ್ಪ ಮಹಾದೇವ ಪತ್ತಾರ ಸೌ.ಕೌಜಲಗಿ ಇವರು ಹೇಳುತ್ತಿದ್ದರು. 'ತಾಳಿ' ತಯಾರಿಸುವವನಿಗೂ ಮತ್ತು ಧರಿಸುವವಳಿಗೂ ಬದುಕಿನಲ್ಲಿ ತಾಳ್ಮೆಯನ್ನು ತಂದು ಕೊಡುತ್ತದೆ ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಭಾರತೀಯರ ಸಾಂಸ್ಕೃತಿಕ ಬದುಕಿನಲ್ಲಿ ಆಭರಣಗಳು ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಆಭರಣ ಮನುಷ್ಯನ ಅಲಂಕಾರಿಕ ಸಾಧನವಾಗಿದ್ದರೂ ಆರೋಗ್ಯ ಪೂರಕವೆನಿಸುತ್ತದೆ. ಈಗಲೂ ಚರ್ಮಕ್ಕೆ ಹುಣ್ಣಾದರೆ ಬಂಗಾರದ ತಾಳಿಯಿಂದ ಚರ್ಮವನ್ನು ತೇಯುತ್ತಾರೆ. ಆಭರಣಗಳೆಂದರೆ ಎಲ್ಲರಿಗೂ ಪ್ರಿಯವಾಗುತ್ತದೆ. ವಿಶೇಷವಾಗಿ ಮಹಿಳೆಯರು ಚಿನ್ನ-ಬೆಳ್ಳಿ ಆಭರಣ ಪ್ರಿಯರು. ಮುತ್ತೈದೆಯರ ಸಂಕೇತವಾಗಿ ಬೆಳ್ಳಿ-ಬಂಗಾರದ ಆಭರಣಗಳು ಭಾರತೀಯ ಮಹಿಳೆಯರನ್ನು ಅಲಂಕರಿಸಿವೆ. ಮದುವೆ-ಮುಂಜಿ, ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಮದುವೆ ನಿಶ್ಚಿತಾರ್ಥ ಮತ್ತು ಇತ್ತೀಚೆಗೆ ಹುಡುಗ-ಹುಡುಗಿಯರ ಹುಟ್ಟುಹಬ್ಬದ ಸಂದರ್ಭಗಳಲ್ಲಿಯೂ ಬಂಗಾರದ ಆಭರಣಗಳು ಬಳಕೆಯಾಗುತ್ತಿವೆ. ಮಲ್ಲಿನಾಥ ಕವಿ ಆಭರಣಗಳನ್ನು ಕೇಶಾಭರಣ ಮತ್ತು ದೇಹಾಭರಣಗಳೆಂದು ಎರಡು ಬಗೆಯಾಗಿ ವಿಂಗಡಿಸುತ್ತಾನೆ. ಕಿವಿ, ಕೈ, ಕಾಲು, ಮೂಗು, ಬೆರಳು-ಕೊರಳು ಆಭರಣಗಳು ಅಂಗಕ್ಕೆ ಧರಿಸುವ ಆಭರಣಗಳು, ತಲೆ, ಬೈತಲೆ, ಜಡೆಗೆ ಧರಿಸುವ ಆಭರಣಗಳು ಕೇಶಾಭರಣಗಳಾಗಿವೆ.

ಅಂಗಕ್ಕೆ ಧರಿಸುವ ಆಭರಣಗಳಲ್ಲಿ 'ಉಂಗುರ' ಮಹತ್ವದ್ದಾಗಿದೆ. ಗಂಡು-ಹೆಣ್ಣಿಗೂ ಬೇಕಾಗಿರುವ ಆಭರಣವಾಗಿದ್ದು, ಕನ್ನಡ, ಸಂಸ್ಕೃತ, ಇಂಗ್ಲೀಷ್ ಕಾವ್ಯ, ನಾಟಕಗಳಲ್ಲಿಯೂ ಉಂಗುರದ ಪ್ರಸ್ತಾಪ ಬರುತ್ತದೆ. ರಾಮಾಯಣ, ಕಾಳಿದಾಸ ಅಭಿಜ್ಞನ ಶಾಕುಂತಲ ಹಾಗೂ ಷೇಕ್ಸ್‌ಪಿಯರನ ನಾಟಕಗಳಲ್ಲಿ 'ಉಂಗುರ' ಅಭರಣವಿಲ್ಲದೇ ಕಥೆಯೇ ಸಾಗುವುದಿಲ್ಲ. ರಾಮಾಯಣದ ಸೀತಾಪಹರಣದ ಸಂದರ್ಭದಲ್ಲಿ 'ಉಂಗುರ' ಸೀತೆಯನ್ನು ಶೋಧಿಸುವಲ್ಲಿ ಸಹಾಯ ಮಾಡುತ್ತದೆ. ಶಾಕುಂತಲೆಯೊಂದಿಗೆ ಜೋಡನೆಯಾದ ಅಭಿಜ್ಞಾನ ಪದ 'ಉಂಗುರ'ವನ್ನು ಸಂಕೇತಿಸುತ್ತದೆ. ರಾಜರ ಕಾಲದಲ್ಲಿ ಕಿರೀಟ, ಎದೆ, ಬಾಹು, ಮುಂಗೈ ಕಟ್ಟು, ನಡಪಟ್ಟಿ, ಕಾಲ್ಗಡಗ ಮುಂತಾದ ಪುರುಷರು ಧರಿಸುವ ಆಭರಣಗಳನ್ನು ಅಕ್ಕಸಾಲಿಗರು

ತಯಾರಿಸುತ್ತಿದ್ದರು. ಸ್ತ್ರೀಯರು ಧರಿಸುವ ಆಭರಣಗಳಲ್ಲಿ ತಲೆ, ಕಿವಿ, ಜಡೆ, ಮೂಗು, ಕೊರಳು, ತೋಳು, ಕೈ, ಸೊಂಟ, ಕಾಲು ಮುಂತಾಗಿ ವಿಭಾಗಿಸಲಾಗುತ್ತದೆ.

ತಲೆ ಅಥವಾ ತಲೆಗೂದಲಿಗೆ ಸಂಬಂಧಿಸಿದ ಆಭರಣಗಳನ್ನು ಶಿರೋಭೂಷಣಗಳೆಂದು ಕರೆಯಲಾಗುತ್ತದೆ. ಇದನ್ನೇ ಮಲ್ಲಿನಾಥ ಕವಿ ಕಚಾದಾರ್ಯ ಆಭರಣಗಳೆಂದು ಕರೆಯುತ್ತಾನೆ. 'ಕಚ' ಎಂದರೆ ಇಲ್ಲಿ ತಲೆಗೂದಲು ಎಂದರ್ಥವನ್ನು ನೀಡುತ್ತದೆ. 'ಸ್ತ್ರೀಯರು ತಮ್ಮ ತಲೆಗೂದಲು ಹಿಂಭಾಗದಲ್ಲಿರುವ ಗಂಟಿಗೆ ಚಿನ್ನದ ಸರಪಳಿಯನ್ನು ಹೊಂದಿಸಿ ಅದು ಬೈತಲೆಯ ಗುಂಟ ಹಣೆಯ ಮೇಲೆ ನೇತಾಡುವಂತೆ ಇಳಿ ಬಿಟ್ಟಿರುತ್ತಾರೆ. ಇದನ್ನೂ ನೊಸಲ ಪದಕ, ಸೀಮಂತ, ಹಂಸತಿಲಕ ಎಂದು ಮುಂತಾಗಿ ಕರೆಯುತ್ತಾರೆ. ಇದರಲ್ಲಿ ಬಾಲಚಂದ್ರನನ್ನು ಅಳವಡಿಸಿಕೊಳ್ಳುವುದು ವಿಶೇಷವಾದದ್ದು ಎಂದು ಡಾ.ಶೀಲಕಾಂತ ಪತ್ತಾರ ಅವರು 'ಕೇಶಾಭರಣಗಳು' ಲೇಖನದಲ್ಲಿ ತಿಳಿಸುತ್ತಾರೆ. ಚಿನ್ನದ ಸರಪಳಿಗೆ ಪೂರಕವಾಗಿ ಬೈತಲೆ ಬೊಟ್ಟು, ಅರ್ಧಚಂದ್ರ ಜೋಡನೆಯಾಗಿರುತ್ತದೆ. ಇದರ ಜೊತೆ ಜಡೆಗೆ ಅರಳೆ ಎಲೆ, ಕೇದಗೆ, ಸೂರ್ಯ-ಚಂದ್ರ, ಪಿಂಪಿನಿ, ಚಿಕ್ಕ ಸೇವಂತಿ, ದೊಡ್ಡ ಸೇವಂತಿ, ರಾಕಿಣಿ-ಬಾಲಚಂದ್ರ ಮುಂತಾದವುಗಳಿಂದ ಅಲಂಕರಿಸಿಕೊಂಡ ಜಡೆ ನಾಗರ ಹೆಡೆಯಂತೆ ಕಂಗೊಳಿಸುತ್ತದೆ. ಸ್ತ್ರೀಯರ ಸೌಂದರ್ಯವನ್ನು ದ್ವಿಗುಣಗೊಳಿಸುವ ತಲೆಯ ಆಭರಣಗಳು ಅಕ್ಕಸಾಲಿಗನ ಕೈಚಳಕದ ರಹಸ್ಯವನ್ನು ತಿಳಿಸುತ್ತವೆ.

ಅಕ್ಕಸಾಲಿಗರು ತಯಾರಿಸುವ ಆಭರಣಗಳು ಚಿಕ್ಕವು ಮತ್ತು ಸೂಕ್ಷ್ಮತೆಯಿಂದ ಕೂಡಿದ್ದಾಗಿರುತ್ತವೆ. ಅವು ಕಣ್ಣಿಗೆ ಚಿಕ್ಕವೆನಿಸಿದರೂ ಅದರ ಮಹತ್ವ ದೊಡ್ಡದು. ಮೂಗಿಗೆ ಧರಿಸುವ ನತ್ತು, ಮೂಗುತಿ, ಚಿಕಳಿ, ಚಂದ್ರ, ರಿಂಗು ಮತ್ತು ಇತ್ತೀಚೆಗೆ ಬಳಕೆಯಾಗುತ್ತಿರುವ ಶೋಲೆ ಮುಗುಬಟ್ಟು, ಶ್ರೀದೇವಿ ಮೂಗುಬಟ್ಟು, ಹರಳಿನತ್ತು, ಹೆಣ್ಣಿಗೆ ಗೌರವ ತಂದುಕೊಡುವಂತಹ ಆಭರಣಗಳಾಗಿವೆ. ಕೊರಳಿಗೆ ಮಾಂಗಲ್ಯದ ಜೊತೆ ಚಂದ್ರಹಾರ, ಚಪಲಹಾರ, ಕಂಠಿಸರ, ಬೋರವಾಳ, ಕಾಸಿನ ಸರ ಮುಂತಾದ ಚಿನ್ನದ ಆಭರಣಗಳ ತಯಾರಿಕೆ ಅಕ್ಕಸಾಲಿಗನ ಸಾಧನೆಗೆ ಪ್ರತೀಕಗಳಾಗಿವೆ. ತೋಳಬಂದಿ, ಬಾಜುಬಂದಿ, ವಂಕಿ, ನಾಗಮುರಿಗೆ, ರಟ್ಟೆ ಕಡಗ, ಎಡಗೈಮುರಿ ಮುಂತಾದ ಕೆಲವು ಆಭರಣಗಳ ತಯಾರಿಕೆಯನ್ನು ಇತ್ತೀಚೆಗೆ ಅಕ್ಕಸಾಲಿಗರು ನಿಲ್ಲಿಸಿಬಿಟ್ಟಿದ್ದಾರೆ. ತೋಳಿಗೆ ಸಂಬಂಧಿಸಿದ ಆಭರಣಗಳನ್ನು ಆಧುನಿಕ ಮಹಿಳೆಯರು ಧರಿಸದಿರುವುದು ಇದಕ್ಕೆ ಪ್ರಮುಖ ಕಾರಣವಾಗಿರಬಹುದಾಗಿದೆ. ಆದರೆ ಚಿನ್ನದ ಬಳೆಗಳು ಮುತ್ತಿನ ಬಳೆಗಳು, ಹರಳಿನ ಬಳೆಗಳೂ, ಬಿಲ್‌ವಾರ, ಪಾಟ್ಲಿ ಮತ್ತು ತೊಡೆ, ಕೈಯ ಆಭರಣಗಳನ್ನು ಅಕ್ಕಸಾಲಿಗರು ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಸುವುದು ಕಂಡುಬರುತ್ತದೆ.

ಕಾಲ್ಗೆಜ್ಜೆ, ಸರ, ಕಾಲ್ಗಡಗ, ಚೈಣು, ಕಾಲುಂಗುರ, ಸುತ್ತುಂಗುರ, ಪಿಲ್ಲೆ, ಮಕ್ಕಳಿಗೆ ತೊಡಿಸುವ ಮುರು ಮೊದಲಾದ ಚಿಕ್ಕ ಆಭರಣಗಳನ್ನು ಅಕ್ಕಸಾಲಿಗರು ಸೂಕ್ಷ್ಮವಾಗಿ ತಯಾರಿಸುತ್ತಾರೆ. ಕೈಯಲ್ಲಿ

ಹಿಡಿಯಲಾರದಷ್ಟು ಚಿನ್ನದ ತಂತಿ ಮತ್ತು ತಗಡು ಅಕ್ಕಸಾಲಿಗನ ಕಣ್ಣಿನಿಂದ ಮರೆಯಾದರೆ ಅವನ ವೃತ್ತಿ ಬದುಕೆ ನಿಂತು ಹೋಗುತ್ತದೆ. ಚಿಕ್ಕ-ಚಿಕ್ಕ ಆಭರಣ ತಯಾರಿಸುವಲ್ಲಿ ಅಕ್ಕಸಾಲಿಗರು ತುಂಬಾ ಮುತುವರ್ಜಿ ವಹಿಸುತ್ತಾರೆ. ಇವರಿಗೆ ತೀಕ್ಷ್ಣವಾದ ದೃಷ್ಟಿ ಅವಶ್ಯಕವಾಗಿರುತ್ತದೆ. ದೃಷ್ಟಿ ದೋಷವಾದರೆ ಕುಶಲಕರ್ಮಿಗಳ ವೃತ್ತಿಯೇ ನಿಲ್ಲುತ್ತದೆ. ಮೂಗು ಮಾಡಿದವನಿಗಿಂತ 'ಮೂಗುತಿ' ಮಾಡಿದವನ ಶ್ರೇಷ್ಠತೆ ನಿಲ್ಲಬಾರದು. ದೃಷ್ಟಿ ನಿಂತರು ಅಕ್ಕಸಾಲಿಗನ ಸಾಧನೆ ಶಾಶ್ವತವಾಗಿರುತ್ತದೆ.

ಅಕ್ಕಸಾಲಿಗರು ತಯಾರಿಸದ ಆಭರಣಗಳೇ ಇಲ್ಲ. ಅಂಗದ ಮೇಲೆ ಧರಿಸುವ ಬಂಗಾರದ ಆಭರಣಗಳನ್ನು ತಯಾರಿಸುವುದು ಸಾಮಾನ್ಯ. ಆದರೆ ಬಂಗಾರದ ಅಂಗಿಯನ್ನು ಅಕ್ಕಸಾಲಿಗರು ತಯಾರಿಸಿದ್ದಾರೆ. ಬಂಗಾರದ ಅಂಗಿ ತಯಾರಿಸುವುದು ಸಾಮಾನ್ಯ ಕೆಲಸವಲ್ಲ. ಸೂಕ್ಷ್ಮ ಮತ್ತು ಜವಾಬ್ದಾರಿಯ ಕಸುಬುದಾರಿಕೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಬಂಗಾರದ ಕೆಲಸ ಮಾಡುವ ೧೫ ಜನ ಅಕ್ಕಸಾಲಿಗರು ಕೂಡಿಕೊಂಡು ೩.೫ ಕೆ.ಜಿ ತೂಕದ ಚಿನ್ನದ ಅಂಗಿ ತಯಾರಿಸಿದ್ದಾರೆ. ಒಂದು ಅಂಗಿಯನ್ನು ೧೫ ಜನ ಅಕ್ಕಸಾಲಿಗರು ೧೫ ದಿನಗಳವರೆಗೆ ದಿನಕ್ಕೆ ೧೬ ಗಂಟೆಗಳ ಕಾಲ ಕೆಲಸ ಮಾಡಿ ಚಿನ್ನದ ಅಂಗಿಯನ್ನು ತಯಾರಿಸಿದ್ದಾರೆ. ಚಿನ್ನದ ಅಂಗಿಯ ಬಂಗಾರದ ಬೆಲೆ ಸುಮಾರು ೧.೨೭ ಕೋಟಿಯಷ್ಟಿದೆ. ಅಂಗಿ, ಕೊರಳ ಸರಗಳು, ಅಗಲವಾದ ಕೈ ಬಳೆಗಳನ್ನು ಸೂಕ್ಷ್ಮವಾಗಿ ಅಕ್ಕಸಾಲಿಗರು ತಯಾರಿಸಿದ್ದಾರೆ. ಬಂಗಾರದ ಅಂಗಿಯನ್ನು ತಯಾರಿಸುವಾಗ ಅಕ್ಕಸಾಲಿಗರು ಒಂದು ವಿಶಿಷ್ಟವಾದ ಪ್ರಯೋಗ ಮಾಡಿದ್ದಾರೆ. ಅದು ಚಿನ್ನದ ಅಂಗಿಗೆ ಆರು ಸ್ವರೋಸ್ಕಿ ಸ್ಫಟಿಕದ ಗುಂಡಿ(Button)ಗಳನ್ನು ಅಳವಡಿಸಲಾಗಿತ್ತು. ಈ ಚಿನ್ನದ ಅಂಗಿಯ ಮಾಲೀಕ ಪುಣೆಯ ಪಿಂಪ್ರಿ ಚಿಂಚವಾಡ್ ಕೈಗಾರಿಕಾ ಪ್ರದೇಶದ ಉದ್ಯಮಿ ದತ್ತಾತ್ರೇಯ ಪುಗ್ ಅವರು ೨೦೧೨ರಲ್ಲಿ ತಯಾರಿಸಿಕೊಂಡಿದ್ದಾರೆ.

ಅಕ್ಕಸಾಲಿಗರು ಮನುಷ್ಯರಿಗೆ ಸಂಬಂಧಪಟ್ಟ ಆಭರಣಗಳನ್ನಷ್ಟೇ ತಯಾರಿಸದೇ ದೇವರಿಗೆ ಸಂಬಂಧಿಸಿದ ಆಭರಣಗಳನ್ನು ತಯಾರಿಸುತ್ತಾರೆ. ದೇವತಾ ಮೂರ್ತಿ, ದೇವತಾ ಪೀಠ ಪ್ರಭಾವಳಿಗಳು, ಛತ್ರಿ, ಬೀಸಣಿಕೆ, ಬೆಳ್ಳಿಯ ಪಾತ್ರೆ, ಪಗಡ, ಲಾಂಛನ ಮೊದಲಾದವುಗಳನ್ನು ಶಾಸ್ತ್ರ ಸಮ್ಮತವಾಗಿ ತಯಾರಿಸುತ್ತಾರೆ. ದೇವಾಲಯದ ಬಾಗಿಲು ಚೌಕಟ್ಟುಗಳಿಗೂ ಬೆಳ್ಳಿ-ಬಂಗಾರದ ತಗಡಿನ ಲೇಪನ ಮಾಡುತ್ತಾರೆ.

ಮಣ್ಣಿನಲ್ಲಿ ಚಿನ್ನವನ್ನು ಶೋಧಿಸುವ ಕಲೆ ಅಕ್ಕಸಾಲಿಗನಿಗೆ ಪರಂಪರಾಗತವಾಗಿ ಬೆಳೆದು ಬಂದಿದೆ. ಶುದ್ಧ ಬಂಗಾರ ೨೪ ಕ್ಯಾರೆಟ್ಟುದಾಗಿದ್ದು, ಅದಕ್ಕೆ ಅಪರಂಜಿ ಚಿನ್ನವೆಂದು ಕರೆಯಲಾಗುತ್ತದೆ. ಅರಿಷಿನ ಬಣ್ಣವಿರುವ ಈ ಚಿನ್ನದಲ್ಲಿ ಆಭರಣ ತಯಾರಿಸುವಾಗ ೮.೨೨% ಶೇಕಡಾ ತಾಮ್ರ ಮಿಶ್ರಣವಾಗಿ, ಚಿನ್ನ ೨೨ ಕ್ಯಾರೆಟ್‌ಗೆ ಇಳಿಯುತ್ತದೆ. ತಾಮ್ರ ಸೇರ್ಪಡೆಯಿಂದ ಚಿನ್ನ ಸ್ವಲ್ಪ ಪ್ರಮಾಣದಲ್ಲಿ

ಗಟ್ಟಿಗೊಂಡು ಆಭರಣ ಕೆತ್ತನೆ ಕೆಲಸಕ್ಕೆ ಹೊಂದಾಣಿಕೆಯಾಗುತ್ತದೆ. ಚಿನ್ನವನ್ನು ಶುದ್ಧಗೊಳಿಸುವುದು ಎಂದರೆ ಪುಟವಿಟ್ಟಂತೆ ಅಥವಾ ಭಟ್ಟಿ ಇಳಿಸುವುದಾಗಿದೆ. ಪ್ರಾಚೀಣ ಕಾಲದಲ್ಲಿ ಚಿನ್ನವನ್ನು ಶುದ್ಧಗೊಳಿಸುವ ಪ್ರದ್ಧತಿ ಒಂದು ಬಗೆಯದಾಗಿತ್ತು. ಹೇಗೆಂದರೆ ಅಶುದ್ಧ ಚಿನ್ನವನ್ನು ಸಣ್ಣಗೆ ಪುಡಿಮಾಡಿ ಅದರ ಜೊತೆ ಕೆಂಪು ಕಲ್ಲಿನ ಪುಡಿ ಬೆರಸಬೇಲು. ಅವೆರಡು ಬೆರೆಸಿದ ಪುಡಿಯನ್ನು ಮಣ್ಣಿನ ಪಾತ್ರೆಯಲ್ಲಿ ಕುಲುಮೆಯಲ್ಲಿ ಬಹಳಷ್ಟು ಸಮಯ ಕುದಿಸಿದಾಗ ಶುದ್ಧ ಚಿನ್ನ ದೊರೆಯುತ್ತಿತ್ತು. ಆದರೆ ಈಗ ರಾಸಾಯನಿಕತೆ ಬಂದ ಮೇಲೆ ಚಿನ್ನ ಶುದ್ಧೀಕರಣಗೊಳ್ಳುವುದು ಭಿನ್ನವಾಗಿದೆ.

ನೈಟ್ರಿಕ್ ಆ್ಯಸಿಡ್‌ದಿಂದ ಚಿನ್ನ ಶುದ್ಧವಾಗುತ್ತದೆ. "ಒಂದು ಪಾಲು ಚಿನ್ನಕ್ಕೆ ಎರಡು ಪಾಲು ಬೆಳ್ಳಿ ಬೆರಸಿ ತಗಡು ಮಾಡಿ, ತಗಡನ್ನು ಚೂರು ಚೂರುಗೊಳಿಸಿ ಆ್ಯಸಿಡ್‌ನಲ್ಲಿ ಹಾಕಿ ಚೆನ್ನಾಗಿ ಕುದಿಸುತ್ತಾರೆ. ಕುದಿಯುವಾಗ ಚಿನ್ನದ ಹೊರತು ಉಳಿದ ಎಲ್ಲಾ ಲೋಹಗಳು ಕರಗಿ ಹೋಗುತ್ತವೆ. ಕುದಿದ ಬಳಿಕ ಅದಕ್ಕೆ ನೀರು ಹಾಕಿ ಲೋಹ ಬೆರೆತ ದುರ್ಬಲ್ ಆ್ಯಸಿಡ್‌ನ್ನು ಇನ್ನೊಂದು ಗಾಜಿನ ಪಾತ್ರೆಗೆ ನಿಧಾನವಾಗಿ ಬಸಿಯುತ್ತಾರೆ. ಪೂರ್ತಿ ನೀರನ್ನು ಬಸಿದಾಗ ಪಾತ್ರೆಯ ತಳದಲ್ಲಿ ಶುದ್ಧ ಚಿನ್ನದ ಗಟ್ಟಿ ಸಿಗುತ್ತದೆ."[೩] ಜಾಗತೀಕರಣದ ಜಂಜಾಟದಲ್ಲಿರುವ ಅಕ್ಕಸಾಲಿಗ ಚಿನ್ನವನ್ನು ಭಟ್ಟಿ ಇಳಿಸುವಿಕೆಯ ಕಾರ್ಯಕ್ಕೆ ಮುಂದಾಗುತ್ತಿಲ್ಲ. ಆತನಿಗೆ ಸಮಯವೂ ಸಿಗುತ್ತಿಲ್ಲ. ಸಿದ್ಧ ಚಿನ್ನದತ್ತ ಅಕ್ಕಸಾಲಿಗ ಕೈ ಮಾಡುತ್ತಿದ್ದಾನೆ. ಆಭರಣಗಳನ್ನು ತಯಾರಿಸುವಾಗ ಚಿನ್ನವನ್ನು ಗಟ್ಟಿಯಾಗಿ ಕಾಯಿಸಿ, ಕರಗಿಸಿ ಬಡಿದು ತೆಳುವಾದ ತಗಡನ್ನು ಮಾಡುತ್ತಾರೆ. ತಯಾರಿಸುವ ಆಭರಣಕ್ಕೆ ಸರಿಹೊಂದುವಂತೆ ತಗಡನ್ನು ಕತ್ತರಿಸಿ ಅತ್ತ-ಇತ್ತ ಮಣಿಸಿ ಬೆಸುಗೆ ಹಾಕುವ ಕೆಲಸವನ್ನು ಅಕ್ಕಸಾಲಿಗರು ಮಾಡುತ್ತಾರೆ. ಕತ್ತರಿಸಿದ ತಗಡನ್ನು ಅಚ್ಚಿನಲ್ಲಿ ಹಾಕಿ ಗುಂಡನ್ನು ತಯಾಸುತ್ತಾರೆ. ಗುಂಡಿನಲ್ಲಿ ಅರಗನ್ನು ಕಾಯಿಸಿ ಸುರುವುತ್ತಾರೆ. ಕೆಲವು ಆಭರಣಗಳಿಗೆ ಹರಳನ್ನು ಜಾಣ್ಮೆಯಿಂದ ಜೋಡಿಸುತ್ತಾರೆ. ಅಕ್ಕಸಾಲಿಗರ ಚಿನ್ನ-ಬೆಳ್ಳಿಯ ಕೆಲಸ ಕೇವಲ ಕೆಲಸವಾಗದೇ ಅದೊಂದು ದೈವಿಕ ಕಲೆಯಾಗಿದೆ.

ಅಕ್ಕಸಾಲಿಗರು ಬಳಸುವ ಉಪಕರಣಗಳು ಆಗ್ಗಿಷ್ಟಿಕೆ, ಊದು ಕೊಳವೆ, ಹಿಡಿ ಅಥವಾ ದಂಡಾಸು, ಜಲಪಾತ್ರೆ, ಅಡಿಗಲ್ಲು, ಮೂಸೆ ಅಥವಾ ಕೋವೆ, ಎರಕದ ಕಲ್ಲು ಅಥವಾ ರೇಜ, ಸುತ್ತಿಗೆ, ಕಡ್ಡಿಗಳು, ಅಚ್ಚುಗಳು, ಬಳೆ ಮಾಡುವ ಸಾಧನ, ಬಾಗಿದ ನಳಿಗೆ ಸ್ರಾವಣ ಅಥವಾ ಚಿಮಟಿ, ದಿಮ್ಮಿ, ಇಕ್ಕಳ, ಅರ, ತಿದಿ, ಮೌಲ್ಡಿಂಗ್ ಪೆಟ್ಟಿಗೆ, ಪೋಗರ ಮಸಗಲ್ಲು, ಚಾಣ, ಕತ್ತರಿ, ದೀಪ ಅಥವಾ ಚಿಮಣಿ ಗ್ರೀಸ್‌ದಾರ, ಬ್ರಷ್ ಮೊದಲಾದ ಉಪಕರಣಗಳ ಬಳಕೆಯಿಂದ ಅಕ್ಕಸಾಲಿಗರು ಸಮಾಜಕ್ಕೆ ಅವಶ್ಯವಾಗಿರುವ ಆಭರಣಗಳನ್ನು ತಯಾರಿಸಿಕೊಡುತ್ತಾರೆ. ಸುಂದರವಾದ ಚಿನ್ನಾಭರಣಗಳನ್ನು ತಯಾರಿಸುವ ಅಕ್ಕಸಾಲಿಗನಿಗೆ ಈ ಉಪಕರಣಗಳೂ ಜೀವನಾಧಾರವಾಗಿವೆ. ಒಂದೇ ಒಂದು ಉಪಕರಣ ಕಣ್ಣಿಗೆ ಕಾಣದಿದ್ದರೆ ಆಭರಣ ತಯಾರಿಕೆಯೇ ನಿಲ್ಲುವುದು.

ಅಕ್ಕಸಾಲಿಗ ವೃತ್ತಿಯಲ್ಲಿ ಮೌಲ್ಡಿಂಗ್ ಮಾಡುವಿಕೆ ಅಥವಾ ಅಚ್ಚುಹಾಕುವಿಕೆ ವಿಶೇಷವಾದದ್ದು ಮತ್ತು ಪರಿಣಿತಿಯ ಕೆಲಸವೆಂದು ತಿಳಿಯಲಾಗಿದೆ. ವಿವಿಧ ವಿನ್ಯಾಸದ ಅಚ್ಚಿನ ಮಣಿಗಳಿರುತ್ತವೆ. ಅಚ್ಚಿನ ಮನೆಗೆ ಮೌಲ್ಡಿಂಗ್ ಮಣ್ಣನ್ನು ಅಂದರೆ ಶುದ್ಧಗೊಳಿಸಿದ ಮಣ್ಣನ್ನು ತುಂಬಲಾಗುತ್ತದೆ. ಎರಡು ಕವಾಟದ ಮಧ್ಯೆ ಆಭರಣ ಆಕಾರದ ಮಾದರಿಗಳನ್ನಿಟ್ಟು ಅಚ್ಚು ಒತ್ತಲಾಗುತ್ತದೆ. ನಂತರ ಮಾದರಿ ಆಭರಣ ಹೊರ ತೆಗೆಯಲಾಗುವುದು. ಕವಾಟದ ಮಣ್ಣಿಗೆ ಪುಡಿ ಸಿಂಪಡಿಸಲಾಗುವುದು, ಬಂಗಾರ ಕರಗಿಸಿ ಅದರಲ್ಲಿ ಸುರಿಯುವುದು. ದ್ರವರೂಪದ ಬಂಗಾರ ಗಟ್ಟಿಗೊಂಡ ಮೇಲೆ ಕವಾಟ ಬೇರ್ಪಡಿಸಲಾಗುತ್ತದೆ. ಚಿನ್ನದ ಆಭರಣ ಮಣ್ಣಿಗೆ ಅಂಟಿಕೊಳ್ಳುವುದಿಲ್ಲ. ಅಂಟಿಕೊಳ್ಳದಂತೆ ಮೊದಲೇ ಪುಡಿ ಸಿಂಪಡಿಸಲಾಗಿರುತ್ತದೆ. ಆಭರಣ ಹೊರತೆಗೆದು ಅರದಿಂದ ನಯಗೊಳಿಸಿ, ತಮಗೆ ಬೇಕಾಗಿರುವ ಆಕಾರ, ಗಾತ್ರ, ತೂಕಗಳಿಗೆ ಹೊಂದಾಣಿಕೆಯಾಗುವಂತೆ ತಯಾರಿಸಲಾಗುತ್ತದೆ. ಮೌಲ್ಡಿಂಗ್ ಮಾಡುವಿಕೆ ಅಥವಾ ಅಚ್ಚು ಹಾಕುವಿಕೆ ಶ್ರಮದಾಯಕ ಮತ್ತು ಚಾಣಾಕ್ಷತೆ ಕುಶಲ ಕಲೆಯಾಗಿದೆ.

ಚಿನ್ನ-ಬೆಳ್ಳಿಯ ಆಭರಣಗಳು ಒಂದು ಕಾಲದಲ್ಲಿ ಪ್ರತಿ ಹಳ್ಳಿಗಳ ಅಕ್ಕ ಸಾಲಿಗರ ಮನೆಯಲ್ಲಿ ತಯಾರಾಗುತ್ತಿದ್ದವು. ಆದರೆ ಇಂದು ಚಿನ್ನಾಭರಣಗಳ ತಯಾರಿಕೆ ಪ್ರಮುಖವಾಗಿ ನಗರಗಳಲ್ಲಿಯೇ ಆರಂಭವಾಗಿ, ಒಂದು ಉದ್ಯಮವಾಗಿ ಬೆಳೆದಿದೆ. ಹಳ್ಳಿಗಳಲ್ಲಿದ್ದ ಕುಶಲಕರ್ಮಿಗಳು ನಗರದಲ್ಲಿ ಉದ್ಯೋಗ ಹುಡುಕುತ್ತ ನಗರವಾಸಿಗಳಾಗಿದ್ದಾರೆ. ನಗರಗಳಲ್ಲಿ ಶ್ರೀಮಂತ ವರ್ಗದವರು ಬಂಗಾರದ ಅಂಗಡಿಗಳನ್ನು ತೆರೆಯುವುದರ ಮೂಲಕ ಗ್ರಾಹಕ ಮತ್ತು ಅಕ್ಕಸಾಲಿಗನ ಮಧ್ಯೆ ದಲ್ಲಾಳಿಯ ಕೆಲಸವನ್ನು ಮಾಡುತ್ತಿದ್ದಾರೆ. ನಿಜವಾದ ದುಡಿಮೆದಾರ ಅಕ್ಕಸಾಲಿಗನಿಗೆ ಗ್ರಾಹಕನಿಂದ ದುಡಿಮೆಯ ಒಟ್ಟು ಫಲ ದೊರೆಯುತ್ತಿಲ್ಲ. ದಲ್ಲಾಳಿಗಳು ಹೆಚ್ಚಿನ ಹಣವನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ಗ್ರಾಹಕ ಮತ್ತು ಅಕ್ಕಸಾಲಿಗ ಮೋಸ-ವಂಚನೆಗೆ ಒಳಗಾಗುತ್ತಿದ್ದುದು ತಿಳಿದುಬರುತ್ತದೆ. ಭಾರತ ಸರ್ಕಾರ ೧೯೬೨ರಲ್ಲಿ ಸುವರ್ಣ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದಿತು. ಇದರಿಂದ ಅಕ್ಕಸಾಲಿಗರು ಹೆಚ್ಚು ಬಂಗಾರವನ್ನು ಸಂಗ್ರಹಿಸಿಡದಂತಾಯಿತು. ೧೪ ಕ್ಯಾರೆಟ್‌ಗಳಿಗಿಂತ ಹೆಚ್ಚು ಶುದ್ಧ ಬಂಗಾರ ಬಳಸಿ ಆಭರಣ ತಯಾರಿಸಲು ಅಸಾಧ್ಯವಾಯಿತು. ಈ ಶಾಸನ ಅಕ್ಕಸಾಲಿಗರ ವೃತ್ತಿಗೆ ಮಾರಕವಾಗಿ, ಆರ್ಥಿಕ ದುಸ್ಥಿತಿ ಕಾಣಬೇಕಾಯಿತು. ಕುಲಕಸುಬನ್ನಾಗಿ ಮಾಡಿಕೊಂಡಿದ್ದ ಅಕ್ಕಸಾಲಿಗರು ವೃತ್ತಿಯನ್ನು ತೊರೆಯಬೇಕಾಯಿತು. ಇತ್ತೀಚಿನ ೨೦೧೬ ನವೆಂಬರ್ ೮ರ ೫೦೦, ೧೦೦೦ ರೂ ನೋಟುಗಳ ರದ್ಧತಿ ಭಾರತೀಯ ರಿಜರ್ವ್ ಬ್ಯಾಂಕ್ ಮಾಡಿತು. ಇದರಿಂದ ಚಿನ್ನ-ಬೆಳ್ಳಿ ಮಾರುಕಟ್ಟೆಯಲ್ಲಿ ಕುಸಿದ ಉಂಟಾಗಿದೆ. ಚಿನ್ನ-ಬೆಳ್ಳಿ ಆಭರಣಗಳನ್ನು ಖರೀದಿಸುವವರ ಪ್ರಮಾಣ ಕಡಿಮೆಯಾದುದರ ಪರಿಣಾಮವಾಗಿ ಚಿನ್ನ-ಬೆಳ್ಳಿ ಆಭರಣ ತಯಾರಿಸುವ ಅಕ್ಕಸಾಲಿಗ ಕುಶಲಕರ್ಮಿಗಳು ಕೆಲಸವಿಲ್ಲದೆ ಪರಿತಪಿಸುವಂತಾಗಿದೆ. ಇದರಿಂದ ಕಸುಬುದಾರರು ವೃತ್ತಿ ಬದಲಾವಣೆ ಮಾಡಿಕೊಂಡರೆ ಪ್ರಾಚೀನ ಕುಶಲಕಲೆಯೇ ನಿಂತು ಹೋಗುವ ಆಂತಕವಿದೆ.

ಸ್ವರ್ಣಕಾರರು ಪ್ರಾಚೀನ ಕಾಲದಲ್ಲಿ ಉನ್ನತ ಸ್ಥಾನದಲ್ಲಿದ್ದರು. ಆದರೆ ಇಂದು ಅವನೊಬ್ಬ ಸಾಮಾನ್ಯ ಕೂಲಿಕಾರನಂತೆ ಕೆಲಸ ಮಾಡುತ್ತಿದ್ದಾನೆ. ನಗರಗಳಲ್ಲಿ ಬಂಗಾರದ ಆಭರಣಗಳನ್ನು ತಯಾರಿಸುವ ಕಾರ್ಖಾನೆ ಆರಂಭಗೊಂಡಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಬಂಗಾರದ ಬೆಲೆ ಏರು-ಪೇರಾಗುತ್ತಿರುವುದರಿಂದ ಅದರ ಪರಿಣಾಮ ಅಕ್ಕಸಾಲಿಗರ ಮೇಲೂ ಬೀರುತ್ತದೆ. ಅವರ ವೃತ್ತಿಯಲ್ಲೂ ಏರು-ಪೇರುತನವಾಗುತ್ತದೆ. ಗ್ರಾಹಕರು ಇಂದು ಅಕ್ಕಸಾಲಿಗ ಬಳಿ ಆಭರಣಗಳನ್ನು ತಯಾರಿಸಿಕೊಳ್ಳುವ ಸ್ಥಿತಿ ಬದಲಾಗಿದೆ. ಎಲ್ಲರೂ ನಗರ-ಪಟ್ಟಣಗಳಿಗೆ ತೆರಳಿ ಬಂಗಾರದ ಅಂಗಡಿಗಳಿಗೆ ತೆರಳಿ ಆಭರಣಗಳನ್ನು ಖರೀದಿಸುತ್ತಾರೆ(ಬಂಗಾರದ ಅಂಗಡಿಗಳಲ್ಲಿಯೇ ಚಿನ್ನಾಭರಣಗಳನ್ನು ಖರೀದಿಸಬೇಕೆಂದು ಚಲನಚಿತ್ರ ನಟಿಯರು ಅಭಿಮಾನಿಗಳಿಗೆ ಹೇಳುತ್ತಿರುವುದು ಕಾರಣವಾಗಿರ ಬಹುದು). ಇದರಿಂದ ಮನೆಯಲ್ಲಿ ಸ್ವತಂತ್ರ ಕೆಲಸ ಮಾಡುವ ಕುಶಲಕರ್ಮಿಗಳು ಮಜೂರಿಗಾಗಿ ಕೆಲಸ ಮಾಡುವ ಅಕ್ಕಸಾಲಿಗರಾಗಿದ್ದಾರೆ.

ಪಾಂಚಾಳರ ಕುಲಕಸುಬು ಇಂದಿನ ಕಾಲದಲ್ಲಿ ಉಳಿಯಬೇಕಾದರೆ ಸರಕಾರದ ಮತ್ತು ಸಮಾಜದ ಉದಾರಾಶ್ರಯ ಅವಶ್ಯವಾಗಿದೆ. ಇತ್ತೀಚೆಗೆ ಕರ್ನಾಟಕ ಸರಕಾರ ಪಾಂಚಾಳರ ಕುಲಕಸುಬು ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನು ತಂದಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಪಾಂಚಾಳರನ್ನು ಬೇರ್ಪಡಿಸಿ, ಐದು ಬಗೆಯ ವೃತ್ತಿಗಳಿಗೆ ಅನುಕೂಲವಾಗಲೆಂದು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದಾರೆ. ಇದು ಕೆಲವೇ ಕೆಲವು ಕುಶಲಕರ್ಮಿಗಳಿಗೆ ಮಾತ್ರ ಅನುಕೂಲ ಮಾಡಿ ಕೊಡುತ್ತದೆ. ಸರಕಾರ ಈ ನಿಗಮಕ್ಕೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅನುದಾನ ನೀಡುತ್ತಿರುವುದು ಪ್ರಮುಖ ಕಾರಣವಾಗಿದೆ. ಹೆಚ್ಚಿನ ಅನುದಾನ ನೀಡಿದಲ್ಲಿ ಪಾಂಚಾಳರ ಕುಲಕಸುಬುಗಳು ಉಳಿಯುವುದು, ಬೆಳೆಯುವುದು ಸಾಧ್ಯವಾಗುತ್ತದೆ. ಕೇವಲ ಕರ್ನಾಟಕದ ಕುಶಲಕರ್ಮಿಗಳಿಗೆ ಅನುಕೂಲವಾಗುವ ಯೋಜನೆಗಳು ರೂಪಿತಗೊಂಡರೆ ಸಾಲದು ದೇಶದ ಎಲ್ಲ ಪಾಂಚಾಳ ಕುಲಕಸುಬುಗಳ ಹಿತ ರಕ್ಷಣೆಗಾಗಿ ಭಾರತ ಸರಕಾರವು ಭಾರತ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿಗಾಗಿ ಸೂಕ್ತ ಯೋಜನೆಗಳನ್ನು ರೂಪಿಸುವತ್ತ ಯೋಚಿಸಬೇಕಾಗಿದೆ.

ಪಾಂಚಾಳ ಕುಶಲಕರ್ಮಿಗಳ ಕಾಳಮ್ಮನ ಆರಾಧನೆ

ಕಸಬುಗಾರಿಕೆ ಮತ್ತು ಧಾರ್ಮಿಕ ಸಂಪ್ರದಾಯಗಳು ಪಾಂಚಾಳರಲ್ಲಿ ಮಾತ್ರ ಪರಸ್ಪರ ಸಂಬಂಧಿಸಿಕೊಂಡಿವೆ. ಕುಲಕಸುಬುದಾರಿಕೆಗೆ ಪೂರಕವಾಗಿ ಧಾರ್ಮಿಕ ವಿಧಾನಗಳು ಹಾಗೂ ಧಾರ್ಮಿಕ ಆಚರಣೆಗಳ ತಳಹದಿಯ ಮೇಲೆ ಕುಲಕಸುಬು ಮುಂದುವರೆಸಿಕೊಂಡು ಬಂದುದು ಪಾಂಚಾಳರ ವಿಶೇಷ ಗುಣವಾಗಿದೆ. ಕುಲಕಸುಬು ಮತ್ತು ಧಾರ್ಮಿಕ ಸಂಪ್ರದಾಯಗಳನ್ನು ಬದುಕಿನ ಒಂದೇ ಹಳಿಯ ಮೇಲೆ ಸಾಗಿಸುತ್ತಿರುವುದು ಪಾಂಚಾಳ ಕುಶಲಕರ್ಮಿಗಳಲ್ಲಿ ಮಾತ್ರ ಕಂಡುಬರುತ್ತದೆ.

ಪ್ರಾಚೀನ ಕಾಲದಿಂದಲೂ ಕಲೆ, ವಾಸ್ತುಶಿಲ್ಪ ಶಾಸ್ತ್ರ, ವಿಜ್ಞಾನ, ಕೃಷಿ, ಯುದ್ಧ, ಸ್ವರ್ಣಗಾರಿಕೆ ಮುಂತಾದ ಕಸುಬುಗಳಿಗೆ ಪಾಂಚಾಳ ವರ್ಗಗಳ ಕೊಡುಗೆ ಅನುಪಮವಾಗಿದೆ. ಧಾರ್ಮಿಕ ಆಚರಣೆಗಳಲ್ಲಿ ಪ್ರಮುಖ ಪಾತ್ರವಹಿಸುವ ಪಾಂಚಾಳ ಕುಶಲಕರ್ಮಿಗಳು ಕಸುಬುದಾರಿಕೆಯಲ್ಲಿಯೂ ಸಿದ್ಧಹಸ್ತರು. "ಬ್ರಾಹ್ಮಣನ ಬಾಯಿ ಶುದ್ಧ; ಪಂಚಾಳನ ಕೈ ಶುದ್ಧ" ಎಂಬ ಗಾದೆ ಮಾತಿನಂತೆ, ಪಾಂಚಾಳ ಕುಶಲಕರ್ಮಿ ಬ್ರಾಹ್ಮಣನು ಹೌದು ಮತ್ತು ಕಸುಬುದಾರನು ಆಗಿರುವುದರಿಂದ ಕೈ ಬಾಯ್‌ಗಳಲ್ಲಿ(ನಡೆ-ನುಡಿ) ಶುದ್ಧನಾಗಿರುತ್ತಾನೆ. ಆದುದರಿಂದಲೇ ಧಾರ್ಮಿಕ ಚಟುವಟಿಕೆಗಳಲ್ಲಿ ಮತ್ತು ಕಸಬುದಾರಿಕೆಯಲ್ಲಿ ಪ್ರಮುಖ ವ್ಯಕ್ತಿಯಾಗಿ ಗ್ರಾಮ ಸಂಸ್ಕೃತಿಯ ರೂವಾರಿಯಾಗುತ್ತಾನೆ.

ಪಾಂಚಾಳ ಕುಶಲಕರ್ಮಿಗೆ ಧಾರ್ಮಿಕ ಆಚರಣೆ ಪರಂಪರಾಗತವಾಗಿ ಬೆಳೆದು ಬಂದಿರುತ್ತದೆ. ಉತ್ತಮ ಸಂಸ್ಕಾರವೆಂಬುದು ತಾಯಿ ಗರ್ಭದಲ್ಲಿಯೇ ಪಡೆದಿರುತ್ತಾನೆ. ಆಚಾರ-ವಿಚಾರಗಳು ಅವನ ಒಂದು ಮಗ್ಗುಲವಾದರೆ, ಕಲಾ ಕೌಶಲ್ಯತೆ ಇನ್ನೊಂದು ಮಗ್ಗುಲವಾಗಿರುತ್ತದೆ. ಈತ ಉತ್ತಮ ಸಂಸ್ಕಾರವಂತ ನಾಗಿರುವುದರಿಂದಲೆ ಕೈರಚನೆಯ ಪ್ರತಿ ವಸ್ತುವು ಶ್ರೇಷ್ಠವಾಗುತ್ತವೆ. ವಸ್ತುವಿನಲ್ಲಿ ಜೀವ ತುಂಬಿರುವಂತೆ ಪಾಂಚಾಳರು ವಸ್ತುಗಳನ್ನು ಸೃಷ್ಟಿಸುತ್ತಾರೆ. ಸೃಷ್ಟಿ ಅಥವಾ ರಚನೆ ಪಾಂಚಾಳನಿಗೆ ಅಗಾಧವಾದುದ್ದೇನಲ್ಲ. ಅವನೇ ಸೃಷ್ಟಿಕಾರನಾಗಿರುವುದರಿಂದ ಹಸ್ತಸ್ಪರ್ಷವಾದರೆ ಸಾಕು ಸ್ವಯಂ ಸಾಕೃತಗೊಳ್ಳುತ್ತದೆ.

ವಸ್ತುಗಳು ಪಾಂಚಾಳನಲ್ಲಿ ಸ್ವಯಂ ರಚನೆಗೊಳ್ಳಲು ಅವನ ದಿವ್ಯಶಕ್ತಿಯೇ ಕಾರಣ. ದಿವ್ಯಶಕ್ತಿ ಉಂಟಾಗಬೇಕಾದರೆ ಧಾರ್ಮಿಕ ಆಚರಣೆಗಳು, ವಿಧಿ-ವಿಧಾನಗಳು, ಪೂಜೆ-ಪುನಸ್ಕಾರಗಳು, ನಂಬಿಕೆ-ಶ್ರದ್ಧೆಗಳು ಪಾಂಚಾಳ ಕುಶಲಕರ್ಮಿಯ ಮನಸ್ಸಿನಲ್ಲಿ ಬೇರೂರಿಸುತ್ತವೆ. ಆತ್ಮವನ್ನು ಸಂಸ್ಕರಿಸಿಕೊಂಡ ಅಂದರೆ ಆತ್ಮಶುದ್ಧಿಯಾದ ಪಾಂಚಾಳ ಕುಶಲಕರ್ಮಿ ತಾನು ತಯಾರಿಸುವ ವಸ್ತುವನ್ನು ಸುಸಂಸ್ಕೃತಗೊಳಿಸುತ್ತಾನೆ. ಸಮಾಜಯೋಗ್ಯವನ್ನಾಗಿಸುತ್ತಾನೆ. ಲೋಕ ಪ್ರಿಯಗೊಳಿಸುತ್ತಾನೆ. ಪಾಂಚಾಳ ರಚಿಸಿದ ವಸ್ತು ಲೋಕಪ್ರಿಯವಾಗಬೇಕಾದರೆ ಅವನ ಹಿಂದೆ ಒಂದು ದಿವ್ಯ ಶಕ್ತಿಯಿದೆ. ಆ ಶಕ್ತಿಯೇ ಪ್ರತಿವಸ್ತುಗಳನ್ನು ಲೋಕ ಪೂಜ್ಯಗೊಳಿಸುತ್ತದೆ. ಆ ಮಂಗಳ ಶಕ್ತಿಯೇ ಕಾಳಮ್ಮ ದೇವಿ.

ಪಾಂಚಾಳ ಕುಶಲಕರ್ಮಿ ವರ್ಗಗಳ ವೃತ್ತಿ ಬೇರೆ ಬೇರೆಯಾಗಿದ್ದರೂ ಅವರ ಧರ್ಮಾಚರಣೆ, ದೈವಿಕ ಆರಾಧನೆ ಮಾತ್ರ ಒಂದೇ ಆಗಿದೆ. ಒಂದು ವೃತ್ತಿಯವರು ಐದು ಬಗೆಯ ವೃತ್ತಿ ಮಾಡದಿರಬಹುದು. ಆದರೆ ಕನಿಷ್ಠ ಮೂರು ವೃತ್ತಿಯನ್ನಾದರೂ ಮಾಡುತ್ತಾರೆ. ಸಂದರ್ಭಕ್ಕಾನು ಗುಣವಾಗಿ ಕಸುಬುಗಾರಿಕೆಯನ್ನು ಬದಲಾಯಿಸಿಕೊಳ್ಳುತ್ತಾರೆ. ನಿತ್ಯ ಮಾಡುವುದು ಮೂಲ ಕಸುಬಾದರೆ ಉಳಿದವು ಪಾಂಚಾಳರಿಗೆ ಉಪಕಸುಬು ಆಗುತ್ತವೆ. ಕಂಬಾರರು, ಬಡಿಗತನ ಅಕ್ಕಸಾಲಿತನವನ್ನು ಉಪಕಸುಬು ಮಾಡಿಕೊಳ್ಳುವ ಅವಕಾಶಗಳಿರುತ್ತವೆ. ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ,

ಅಕ್ಕಸಾಲಿಗರ ಗೋತ್ರಗಳು ಒಂದೇ ಆಗಿರುವುದಿಲ್ಲ. ಐದು ಕಸುಬುದಾರರ ಗೋತ್ರ ಬೇರೆಯಾಗಿರುತ್ತವೆ. ಈ ಐದು ಬಗೆಯ ಕಸಬುದಾರರ ಒಂದು ಸಮೂಹವನ್ನು ಪಂಚಾಳರು ಎಂದು ಕರೆಯಲಾಗುತ್ತದೆ.

"ಕುಲುಮೆ ಹುಟ್ಟಿದ ಮೇಲೆಯೇ ಕುಲ ಹುಟ್ಟಿತು" ಎಂಬ ಪಾಂಚಾಳರ ಕುರಿತಾದ ಗಾದೆ ಮಾತಿದೆ. ಪಾಂಚಾಳರ ಐದು ವರ್ಗಗಳ ಕಸಬು ಆರಂಭವಾಗುವುದೇ ಕುಲುಮೆಯಿಂದ. ಐದು ಕಸಬುದಾರರಿಗೆ ಕುಲುಮೆ ಅವಶ್ಯಕವಾದ ಸಾಧನೋಪಕರಣವಾಗಿದೆ. ಕಂಬಾರನಿಗೆ ಕಬ್ಬಿಣ, ಬಡಿಗೇರನಿಗೆ ಉಳಿ–ಬಾಚಿ ಕಂಚುಗಾರನಿಗೆ ಕಂಚು–ತಾಮ್ರ, ಶಿಲ್ಪಿಗೆ ಉಳಿ–ಚಾಣ ಮತ್ತು ಅಕ್ಕಸಾಲಿಗನಿಗೆ ಬಂಗಾರ ವಸ್ತುಗಳನ್ನು ತಯಾರಿಸಲು ಕುಲುಮೆ ಮೂಲಾಧಾರವಾಗಿದೆ. ಪಾಂಚಾಳರ ಕಸಬು ಆರಂಭವಾಗುವುದೇ ಕುಲುಮೆಯಿಂದ. 'ಕುಲುಮೆ'ಯಲ್ಲಿ ಹುಟ್ಟುವ ಬೆಂಕಿ–ಶಕ್ತಿ ಎಂದು ಕರೆಯಲಾಗುತ್ತದೆ. ಬೆಂಕಿ(ಅಗ್ನಿ)ಯಲ್ಲಿ ತಯಾರಾಗುವ ವಸ್ತುಗಳು ಸಮುದಾಯದ ಕೃಷಿ, ಕೃಷಿಯೇತರ ಚಟುವಟಿಕೆಗಳಿಗೆ ಆಯುಧಗಳಾಗುತ್ತವೆ. ಶ್ರೇಷ್ಠ ವಸ್ತುಗಳಾಗುತ್ತವೆ. ಲೋಕಪ್ರಿಯ ಮತ್ತು ಲೋಕ ಪೂಜ್ಯಗೊಳ್ಳುತ್ತವೆ.

ಕುಲುಮೆಯಲ್ಲಿ ಕುಶಲಕರ್ಮಿ ಹೂವನ್ನಾದರೂ ಅರಳಿಸಬಹುದು, ಹಾವನ್ನಾದರೂ ಮಾಡಿ ಕೆರಳಿಸುವ ಶಕ್ತಿಯನ್ನು ಪಡೆದುಕೊಂಡಿರುತ್ತಾನೆ. ಕುಲುಮೆಯಲ್ಲಿ ಅರಳುವ ವಸ್ತು ಶ್ರೇಷ್ಠ ವಾಗಿರುವುದರಿಂದ, ಬೆಂಕಿಯಲ್ಲಿ ತಯಾರಾದ ವಸ್ತುವಿಗೆ ದೈವಿಕ ಶಕ್ತಿ ಪ್ರಾಪ್ತವಾಗಿರುವುದರಿಂದ ಬೆಂಕಿಯನ್ನು ಪಾಂಚಾಳರು ಕಾಳಮ್ಮನೆಂದು ಪೂಜಿಸಿ ಆರಾಧಿಸುತ್ತಾರೆ. ಪಾಂಚಾಳರು ತಾವು ತಯಾರಿಸುವ ವಸ್ತುಗಳ ಹಿಂದೆ ಕಾಳಿ ಎಂಬ ಶಕ್ತಿಯಿದೆ ಎಂಬ ನಂಬಿಕೆಯಿದೆ. ವಸ್ತು ತಯಾರಿಕೆ ಹಂತದಲ್ಲಿ ಬಳಸುವ ಉಪಕರಣಗಳನ್ನು ಕಾಳಮ್ಮನೆಂದು ಈಗಲೂ ಭಾವಿಸಲಾಗುತ್ತಿದೆ. ನಿತ್ಯ ಕಾಯಕ ಆರಂಭಿಸುವಾಗ ಉಪಕರಣಗಳಿಗೆ ನಮಸ್ಕರಿಸುತ್ತಾರೆ. ಅದು ಕಾಳಮ್ಮನಿಗೆ ಸಲ್ಲುತ್ತದೆ ಎಂಬ ಗಾಢವಾದ ನಂಬಿಕೆ ಪಾಂಚಾಳ ಕುಶಲಕರ್ಮಿಗಳಲ್ಲಿದೆ. ಪಾಂಚಾಳರು ವೈದಿಕ ಆಚರಣೆಕಾರ ರಾಗಿದ್ದಾರೆ. ಕಾಳಮ್ಮ ಇವರಿಗೆ ಮಾತೃ ದೇವತೆ ಶಕ್ತಿ ದೇವತೆ ಇವನ್ನೂ ಮೀರಿದ ಕುಲದೇವತೆಯೂ ಆಗಿದ್ದಾಳೆ. ಹೆಣ್ಣಿಗೆ ಜೀವ ಸೃಷ್ಟಿಯ ಶಕ್ತಿಯಿದೆ. ಆಕೆ ಮಾತೆಯ ಸ್ವರೂಪಳು. ಇಷ್ಟಾರ್ಥಗಳನ್ನು ಈಡೇರಿಸುವ ಮಾತೃದೇವತೆಯಾಗಿ ಪೂಜಿತವಾಗಿದ್ದಾಳೆ. ಕಾಳಮ್ಮನನ್ನು ಪಾಂಚಾಳ ಕುಶಲಕರ್ಮಿಗಳು ತಾಯಿಯೆಂದು ಪೂಜಿಸುತ್ತಾರೆ. ಶಿಲಾಯುಗದಿಂದಲೂ ಬೆಂಕಿ–ಕುಲುಮೆಯ ಬಳಕೆ ಮಾಡುತ್ತ ಬಂದ ಪಾಂಚಾಳ ಸಮುದಾಯ ಕಾಳಮ್ಮನನ್ನು ಆರಾಧಿಸುತ್ತ ಬಂದಿದೆ.

ಪಾಂಚಾಳರು ಸಕಲ ಕಲಾ ಪ್ರವೀಣರು, ಯಂತ್ರ–ತಂತ್ರ–ಮಂತ್ರಗಳಲ್ಲಿ ಸಿದ್ಧ ಹಸ್ತರು. ಈ ಸಾಧನೆಗೆ ಕಾಳಮ್ಮನ ಅನುಗ್ರಹ ಬೇಕೆ ಬೇಕಾಗುತ್ತದೆ. ವೃತ್ತಿಯಲ್ಲಿ ವಸ್ತು ತಯಾರಿಕೆಯಲ್ಲಿ ಕಾಳಮ್ಮನ ಕರುಣೆ ಅತ್ಯಂತ ಅವಶ್ಯಕವಾಗಿರುವುದರಿಂದ ಪಾಂಚಾಳರು ಶಕ್ತಿಯ ಅಂದರೆ ಕಾಳಮ್ಮನ

ಆರಾಧಕರಾದರು. ಕಾಳಮ್ಮನನ್ನು ಕುಲದೇವತೆಯನ್ನಾಗಿ ಮಾಡಿಕೊಂಡು ಪ್ರಾಚೀನ ಕಾಲದಿಂದಲೂ ಆರಾಧಿಸುತ್ತಿದ್ದಾರೆ. ಕ್ರಿ.ಪೂ.ಮೊದಲೇ ಕಾಳಮ್ಮನನ್ನು ಪಾಂಚಾಳರು ಕುಲದೇವತೆಯನ್ನಾಗಿ ಆರಾಧಿಸುತ್ತಿದ್ದರು ಎಂಬುದು ತಿಳಿಯುತ್ತದೆ. ಚೋಳರ ಆಳ್ವಿಕೆಯಲ್ಲಿ ಅವರು ಕಾಳಿಯ ಉಪಾಸಕ ರಾಗಿದ್ದರು. ಚೋಳ ಅರಸನು ಪಾಂಚಾಳರನ್ನು ಪುರೋಹಿತರನ್ನಾಗಿ ನೇಮಕ ಮಾಡಿಕೊಂಡಿದ್ದನೆಂಬ ವಿಚಾರಗಳು ಇತಿಹಾಸದಿಂದ ತಿಳಿದುಬರುತ್ತವೆ.

'ಬೆಂಕಿಯ ಜೊತೆ ಸರಸವಲ್ಲ' ಎಂಬ ಮಾತಿದೆ. ಆದರೆ ಪಾಂಚಾಳರಿಗೆ ಬೆಂಕಿ ಅಂದರೆ ಅಗ್ನಿ ಆರಾಧನೆಯ ದೇವತೆ. ಬೆಂಕಿ ಇರದೆ ಪಾಂಚಾಳರ ಬದುಕೆ ಇಲ್ಲ. ಪಾಂಚಾಳರಿಗೆ ಬೆಂಕಿಯೇ ಬದುಕು ಭಂಡಾರ, ಬಂಗಾರವಾಗಿದೆ. ಕಾಳಮ್ಮನ ಬೆಂಕಿ ರೂಪದಲ್ಲಿ ಪಾಂಚಾಳರ ಕಾಯುವ, ಬದುಕು ಹಸನಾಗಿಸುವ ದೈವಿಕ ಶಕ್ತಿಯಾಗಿದ್ದಾಳೆ.

'ಶೈವ ಸಿದ್ಧಾಂತದಲ್ಲಿ ಕಾಳಿಕಾದೇವಿಯು(ಶಕ್ತಿದೇವತೆಯು) ಶುದ್ಧಮಾಯೆ ಆಗಿದ್ದಾಳೆ. ಶಿವಶಕ್ತಿ ಸಂಪುಟವೇ ಲಿಂಗವು. ವಿಜ್ಞಾನದ ವಸ್ತು(Matter) ಶಿವನು, ಅದರಲ್ಲಿರುವ ಶಕ್ತಿಯು(energy) ಕಾಳಿಕಾದೇವಿಯಾಗಿದ್ದಾಳೆ. ಈಕೆ ಕಲೆಗಳ ದೇವತೆಯಾಗಿದ್ದಾಳೆ. ೬೪ ವಿದ್ಯೆಯನ್ನು ಪಡೆಯಲು ಕಲಾರಾಧಕರಾದ ಪಂಚಾಳರು ಕಾಳಮ್ಮನನ್ನು ಪೂಜಿಸುತ್ತಿದ್ದರು. ಅದರಿಂದ ಕಾಳಮ್ಮ ಪಾಂಚಾಳರ ಕುಲದೇವತೆಯಾಗಿದ್ದಾಳೆಂದು ಪ್ರೊ.ವಿ.ಜಿ.ದೀಕ್ಷಿತ ಅವರು ಅಭಿಪ್ರಾಯಿಸುತ್ತಾರೆ. ಪಾಂಚಾಳರು ವೈದಿಕ ಸಂಪ್ರದಾಯಸ್ಥರಾಗಿದ್ದರೂ ಇತರ ದೇವತೆಗಳನ್ನು ಪೂಜಿಸುತ್ತಾರೆ. ಹೆಣ್ಣು ಮಾಯೆಯಲ್ಲ; ಮಾತೆ, ಶಕ್ತಿಯೆಂದು ಭಾವಿಸಿ ಪೂಜಿಸುತ್ತಾರೆ. ಶಕ್ತಿಯನ್ನು ಬೆಂಕಿಯೆಂದು; ಬೆಂಕಿಯನ್ನು ಬದುಕೆಂದು ಜೀವನ ಸಾಗಿಸುತ್ತಿರುವ ಪಾಂಚಾಳರಿಗೆ ಶಕ್ತಿ-ಕಾಳಮ್ಮನಾಗಿ ಆರಾಧನೆಯ ದೇವತೆಯಾಗಿದ್ದಾಳೆ.

ಕಾಳಮ್ಮ ಪಾಂಚಾಳ ಕುಶಲಕರ್ಮಿಗಳ ಆರಾಧನೆಯ ದೇವತೆಯಾಗಿರಲು ಪುರಾಣ-ಐತಿಹ್ಯಗಳು ಕಥೆಗಳನ್ನು ತಿಳಿಸುತ್ತವೆ. ಶಿವ-ಪಾರ್ವತಿಯರು ಕೈಲಾಸ ಮಂಟಪದಲ್ಲಿ ಆಸನರಾಗಿದ್ದರು. ತಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು? ಎಂದು ಪರಸ್ಪರ ಪ್ರಶ್ನಿಸತೊಡಗಿದರು. ತಮಗೆ ತಾವೇ ಶ್ರೇಷ್ಠರೆನಿಸಿ ಕೊಳ್ಳುತ್ತಿರುವುದರಿಂದ ಸತಿ-ಪತಿಗಳಲ್ಲಿ ವೈಮನಸ್ಸು ಉಂಟಾಯಿತು.

ಗಂಡ-ಹೆಂಡಿರ ಜಗಳದಲ್ಲಿ ಜಗತ್ತಿನ ಕಾರ್ಯ ಚಟುವಟಿಕೆಗಳು ನಿಂತು ಹೋದವು. ಎಲ್ಲ ದೇವತೆಗಳು ವಿಶ್ವಕರ್ಮನಲ್ಲಿ ಬಂದು ಪ್ರಾರ್ಥಿಸುತ್ತಾರೆ. ಇಬ್ಬರಲ್ಲಿ ಯಾರು ಶ್ರೇಷ್ಠರೆಂಬುದನ್ನು ತೂಗಿ ನೋಡವ ಅವಕಾಶ ವಿಶ್ವಕರ್ಮನ ಪಾಲಿಗೆ ಬಂದಿತು. ಸತ್ಯ ಮತ್ತು ಧರ್ಮ ಎಂಬ ಎರಡು ಪರಡೆಗಳನ್ನು ತಯಾರಿಸಿ ತಕ್ಕಡಿಯನ್ನು ತಯಾರಿಸುತ್ತಾನೆ. ಒಂದೊಂದು ಪರಡೆಯಲ್ಲಿ ಒಬ್ಬೊಬ್ಬರು ಕುಳಿತುಕೊಳ್ಳಲು ತಿಳಿಸುತ್ತಾನೆ. ಅವರಿಬ್ಬರು ಕುಳಿತುಕೊಳ್ಳಲು ವಿಶ್ವಕರ್ಮ ತಕ್ಕಡಿ ತೂಗುವಾಗ ಶಿವನು ಕುಳಿತ ಪರಡಿ ಮೇಲಕ್ಕೆ ಬರುತ್ತದೆ. ಶಿವ ಕೊಪಗೊಳ್ಳುವ ಮೊದಲೇ ಸೂಕ್ಷ್ಮತೆಯನ್ನು

ಅರಿತುಕೊಂಡು ತನ್ನ ಬಳಿಯಿದ್ದ ಕೆಂಪು ಬಟ್ಟೆಗೆ ಚಿಕ್ಕ ಗುಂಡುಕಲ್ಲನ್ನು ಕಟ್ಟುತ್ತಾನೆ. ಕಲ್ಲು ವಿಶ್ವದಷ್ಟು ಭಾರವಿದೆ ಎಂದು ಹೇಳಿ ವಿಶ್ವಕರ್ಮನು ಶಿವನ ಕೊರಳಿಗೆ ಧಾರಣೆ ಮಾಡುತ್ತಾನೆ. ಆಗ ಶಿವ-ಪಾರ್ವತಿಯರ ಪರಡೆಗಳು ಸಮಾನವಾಗಿ ನಿಲ್ಲುತ್ತವೆ. ಇಡೀ ವಿಶ್ವಕ್ಕೆ ಇಬ್ಬರೂ ಸಮಾನರೆಂದು ತಿಳಿಸಿಕೊಡುತ್ತಾನೆ. ಇಬ್ಬರೂ ಶ್ರೇಷ್ಠರೆಂದು ತಿಳಿಸಿಕೊಟ್ಟ ವಿಶ್ವಕರ್ಮನಿಗೆ ಶಿವ-ಪಾರ್ವತಿಯರು ಆಶೀರ್ವದಿಸುತ್ತಾರೆ. ಪಾರ್ವತಿ ಹರ್ಷಚಿತ್ತಳಾಗಿ ಪಾಂಚಾಳರ ಆರಾಧ್ಯ ದೇವತೆಯಾಗಿ, ಸಮಾಜವನ್ನು ಉದ್ಧರಿಸುವುದಾಗಿ ವಚನ ನೀಡುತ್ತಾಳೆ. ಭೂಲೋಕಕ್ಕೆ ಪಾರ್ವತಿಯು ಕಾಳಮ್ಮನಾಗಿ ಅವತರಿಸಿ, ಪಾಂಚಾಳರ ಆರಾಧಕಳಾಗುತ್ತಾಳೆ.

ಪುರಾಣ-ಐತಿಹ್ಯಗಳ ಹಿನ್ನೆಲೆಯಲ್ಲಿ ಕಾಳಮ್ಮನನ್ನು ಗುರುತಿಸುವುದಾದರೆ ಪಾಂಚಾಳ ಕುಶಲಕರ್ಮಿಗಳ ಕುಲವನ್ನು ಉದ್ಧರಿಸಲು ಭೂಲೋಕಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಕಾಳಮ್ಮ ಒಂದೆಡೆ ನೆಲೆ ನಿಂತು, ಪಾಂಚಾಳ ಭಕ್ತರನ್ನು ಆ ಕ್ಷೇತ್ರಕ್ಕೆ ಕರೆಸಿಕೊಂಡು ಕ್ಷೇತ್ರವನ್ನು ಪುಣ್ಯ ಕ್ಷೇತ್ರವನ್ನಾಗಿಸಿದ ಕಥೆ ರಾಮಾಯಣ ಕಾಲದಲ್ಲಿ ನಡೆದಿದೆ ಎಂಬ ಸಂಗತಿಯೊಂದು ಋಷ್ಯಶೃಂಗ ಋಷಿಯ ವೃತ್ತಾಂತದಿಂದ ತಿಳಿದು ಬರುತ್ತದೆ. 'ಮಲಪ್ರಭೆ ನದಿಯ ಪಕ್ಕದ ಅರಣ್ಯದಲ್ಲಿ ೧೦ ವರ್ಷಗಳ ಕಾಲ ಋಷ್ಯಶೃಂಗ ಘೋರ ತಪಸ್ಸನ್ನು ಮಾಡುತ್ತಿದ್ದನು. ಈತನು ಲೋಕ ಕಲ್ಯಾಣಾರ್ಥ ಯಜ್ಞ-ಯಾಗಾದಿಗಳನ್ನು ಮಾಡುತ್ತಿದ್ದನು. ವರುಣದೇವನಿಂದ ವರ ಪಡೆದುಕೊಂಡಿದ್ದ ಋಷಿ, ಅಯೋಧ್ಯೆಯ ದಶರಥನು ಸಂತಾನವಿಲ್ಲದೇ ಇರುವುದರಿಂದ 'ಪುತ್ರ ಕಾಮೇಷ್ಠಿ'ಯಾಗ ಆರಂಭಿಸಿದ್ದನು. ಆ ಯಾಗದಲ್ಲಿ ಋಷ್ಯಶೃಂಗ ಮುನಿಯೇ ಮುಖ್ಯ ಪುರೋಹಿತನಾಗಿ ಕಾರ್ಯ ನಿರ್ವಹಿಸಿದವನು. ಇಂತಹ ಮಹಿಮಾ ಪುರುಷ ಋಷಿಯು ಕಾಲಕಾಲಕ್ಕೆ ಯಾಗ ಮಾಡುವಾಗ ನರುಂದಾಸುರ, ನಲುಂದಾಸುರ, ಹಿರೇಕುಂಬಾಸುರ, ಚಿಕ್ಕುಂಬಾಸುರ ಮೊದಲಾದ ಅಸುರರು ಯಾಗಕ್ಕೆ ತೊಂದರೆಯುಂಟು ಮಾಡುತ್ತಿದ್ದರು. ಋಷಿಯು ದೇವಿಯನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ಋಷ್ಯಶೃಂಗನ ಭಕ್ತಿಗೆ ಮೆಚ್ಚಿ ದೇವಿಯು ಕಾಳಮ್ಮನ ರೂಪ ತಾಳಿ ಅಸುರರನ್ನು ಸಂಹರಿಸುತ್ತಾಳೆ. ಋಷ್ಯಶೃಂಗದ ಆಶಯದಂತೆ ಅವನು ಕೈಕೊಂಡ ಯಾಗದ ಪ್ರದೇಶದಲ್ಲಿ ನೆಲೆಗೊಳ್ಳುತ್ತಾಳೆ ಎಂಬುದು ಪುರಾಣ-ಐತಿಹ್ಯಗಳು ನಮಗೆ ಹೇಳುತ್ತವೆ.

ಈ ಎರಡು ಸಂಗತಿಗಳನ್ನು ಅವಲೋಕಿಸಿದಾಗ, ಕಾಳಮ್ಮನ ಅವತಾರಕ್ಕೆ ಕಾರಣ ಮತ್ತು ಅವಳು ನೆಲೆಗೊಂಡ ಪ್ರದೇಶ ರಿಷಿಶೃಂಗನ ನೆಲೆ ಶಿರಸಂಗಿಯ ಸಂಬಂಧಗಳು ಪಾಂಚಾಳರ ಜೊತೆ ಬೆರೆತುಕೊಂಡಿವೆ. ಶಿವ-ಪಾರ್ವತಿಯರು ಸಮಾನರೆಂದು ವಿಶ್ವಕ್ಕೆ ಸಾರಿದ ವಿಶ್ವಕರ್ಮನಿಗೆ ಪಾರ್ವತಿ ಮಾತುಕೊಟ್ಟಿರುವುದು ಮತ್ತು ಲೋಕಕಲ್ಯಾಣಕ್ಕಾಗಿ ನಿಸ್ವಾರ್ಥಿಯಾಗಿ ಯಜ್ಞಮಾಡುವ ಋಷ್ಯಶೃಂಗನ ಭಕ್ತಿ ಇವೆರಡು ಒಂದಕ್ಕೊಂದು ಪೂರಕವಾಗಿವೆ. ಏಕಕಾಲದಲ್ಲಿಯೇ ಪಾರ್ವತಿಯು ಎರಡು

ಸಂದರ್ಭಗಳನ್ನು ಏಕೀಕರಣಗೊಳಿಸುತ್ತಾಳೆ. ಕಾಳಮ್ಮನ ಅವತಾರಿಯು ಆಗುತ್ತಾಳೆ. ಋಷಿಯ ಆಶಯದಂತೆ ಶಿರಸಂಗಿಯಲ್ಲಿಯು ನೆಲೆಗೊಳ್ಳುತ್ತಾಳೆ. ಇದರಿಂದ ಶೃಂಗ ಋಷಿಯ ಕ್ಷೇತ್ರ ಕಾಳಮ್ಮನ ನೆಲೆಯಿಂದಾಗಿ ಪುಣ್ಯಕ್ಷೇತ್ರವಾಗಿ ಶಿರಸಂಗಿಯೆಂದು ಪ್ರಸಿದ್ಧವಾಗಿದೆ.

ಕಾಳಮ್ಮ ದುಷ್ಟತನವನ್ನು ನಾಶ ಮಾಡಿ, ಶಿಷ್ಟತವನ್ನು ಶಾಶ್ವತವಾಗಿ ಉಳಿಸಲು ಕಂಕಣ ಬದ್ಧಳಾಗಿ ಶಿರಸಂಗಿಯಲ್ಲಿ ನೆಲೆಗೊಳ್ಳುತ್ತಾಳೆ. ಕಾಳಮ್ಮ ಶಿರಸಂಗಿಯಲ್ಲಿ ನೆಲೆಗೊಂಡಿರುವುದರಿಂದ ಪ್ರದೇಶವೆಲ್ಲವೂ ಶಕ್ತಿಯ ಕೇಂದ್ರವಾಯಿತು. ಶಕ್ತಿಯನ್ನೇ ನಂಬಿಕೊಂಡ ಕಸಬುದಾರರ ಗುಂಪೊಂದು ಈ ನೆಲದಲ್ಲಿ ಉಳಿದುಕೊಂಡಿತು. ಪ್ರಾಚೀನ ಕಾಲದಿಂದಲೂ ಈ ಕಸಬುದಾರರ ಗುಂಪು ಬೆಂಕಿಯನ್ನು ದೇವಿಯನ್ನಾಗಿ ಕಾಳಮ್ಮನೆಂದು ಪೂಜಿಸುತ್ತದೆ. ಪರಂಪರಾಗತವಾಗಿ ಕಸಬನ್ನು ಕುಲಕಸಬುನ್ನಾಗಿ ಮಾಡಿಕೊಂಡು ಬಂದ ವರ್ಗವೇ ಪಾಂಚಾಳ ವರ್ಗ. ಇದರಿಂದ ಕಾಳಮ್ಮ ಪಾಂಚಾಳ ಕುಶಲ ಕರ್ಮಿಗಳ ಆರಾಧಕಳಾಗಿ ಇಂದಿನವರೆಗೂ ಪೂಜೆಗೊಳ್ಳುತ್ತಿದ್ದಾಳೆ. ಪಾಂಚಾಳ ವರ್ಗದ ಎಂತಹ ಕಡು ಬಡ ಕುಶಲಕರ್ಮಿಯಿದ್ದರೂ ಕೂಡ ಜೀವನದಲ್ಲಿ ಒಮ್ಮೆಯಾದರೂ ಶಿರಸಂಗಿಗೆ ಹೋಗಿ ಕಾಳಮ್ಮನ ದರ್ಶನ ಪಡೆದುಕೊಳ್ಳುತ್ತಾನೆ. ಕಾಳಮ್ಮನ ದರುಶನದಿಂದ ಪಾಂಚಾಳರಿಗೆ ದಿವ್ಯಾನಂದ ವಾಗುತ್ತದೆ. ಈ ಆನಂದವೇ ಕಾಳಮ್ಮನ ಆರಾಧನೆಗೆ ಕಾರಣ. ಪಾರ್ವತಿಯನ್ನು ಕಾಳಮ್ಮನೆಂದು ಒಪ್ಪಿಕೊಂಡ ಪಾಂಚಾಳರು ಶಿವನನ್ನು ದೂರೀಕರಿಸಿದವರಲ್ಲ. ಈಶ್ವರ ಕಮ್ಮಟೇಶ್ವರನೆಂದು, ಪಾಂಚಾಳರು ತಾವು ಮಾಡುವ ಕೆಲಸದ ಸ್ಥಳವನ್ನು ಕರ್ಮಟ, ಕಮ್ಮಟ ಕಾರ್ಯಾಗಾರವೆಂದು 'ಅಡ್ಡಿಬಡ್ಡಿ'ಯನ್ನು ಇಂದಿಗೂ ಪೂಜಿಸುತ್ತಾರೆ.

ಪಾಂಚಾಳರ ಐದು ವರ್ಗಗಳ ಧಾರ್ಮಿಕ ಆಚರಣೆ ಒಂದೇ ಬಗೆಯದಾಗಿದೆ. ಕಸಬು ಮತ್ತು ಕಸಬಿನ ಉಪಕರಣಗಳು ಭಿನ್ನವಾಗಿದ್ದರೂ ಅವೆರಡರ ಮೂಲಕ ಕಾಣುವ ದೈವ ಕಾಳಮ್ಮ ಒಬ್ಬಳೇ ಆಗಿದ್ದಾಳೆ. ಕಂಬಾರ ವರ್ಗದವರು ಕಬ್ಬಿಣವನ್ನು ಕಾಳಮ್ಮನೆಂದು ಪೂಜಿಸುತ್ತಾರೆ. ಕಸಬುಗಾರಿಕೆಗೆ ಅವಶ್ಯವಾಗಿರುವ ಉಪಕರಣಗಳು ಕಬ್ಬಿಣದವು ಆಗಿರುತ್ತವೆ. ಕುಲುಮೆ, ತಿದಿ, ಅಡಿಗಲ್ಲು, ದೊಡ್ಡಸುತ್ತಿಗೆ, ಸಣ್ಣಸುತ್ತಿಗೆ, ಇಕ್ಕಳ, ಚಾಣಗಳು, ಚಮ್ಮಟಿಗೆ, ಪೋಗರ್, ಸರಗೋಲು ಮುಂತಾದ ಉಪಕರಣಗಳು ಕಬ್ಬಿಣದಿಂದ ಕುಶಲಕರ್ಮಿ ತಯಾರಿಸಿಕೊಂಡಿರುತ್ತಾನೆ. ಉದ್ಯೋಗಕ್ಕೆ ಸಾಧನೋಪಕರಣಗಳು ಇರದಿದ್ದರೆ ಕಸಬುಗಾರಿಕೆಯನ್ನು ಮಾಡುವುದು ಕಷ್ಟವಾಗುತ್ತದೆ. ಕಂಬಾರ ಕುಶಲಕರ್ಮಿಗಳಿಗೆ ಸುತ್ತಿಗೆ, ಚಾಣ, ಇಕ್ಕಳು ಮೊದಲಾದವು ವೃತ್ತಿ ಸಂಗಾತಿಗಳಾಗಿವೆ. ಈ ಉಪಕರಣಗಳು ಪ್ರಾಣಕ್ಕಿಂತ ಹೆಚ್ಚಾಗಿವೆ. ಇವುಗಳನ್ನು ಪೂಜ್ಯ-ಗೌರವದಿಂದ ಕಾಣಲಾಗುತ್ತದೆ. ಕಂಬಾರನಿಗೆ ಈ ಉಪಕರಣಗಳು ಪ್ರಾಣಮಯವಾದರೆ ಉಳಿದವರಿಗೆ ರೈತಾಪಿ ವರ್ಗಕ್ಕೆ ಅಪಾಯಕಾರಿ ವಸ್ತುಗಳಾಗಿ ಕಾಣುತ್ತವೆ. ಕಂಬಾರರು ಸುತ್ತಿಗೆ, ಇಕ್ಕಳು, ಚಾಣ ಮೊದಲಾದವುಗಳನ್ನು ದಿನದ

ಆರಂಭದಲ್ಲಿ ಕೈಗೆ ತೆಗೆದುಕೊಳ್ಳುವಾಗ ನಮಸ್ಕರಿಸುತ್ತಾರೆ. ಉಪಕರಣಗಳಿಂದ ತನಗಾವ ತೊಂದರೆ ಯಾಗದಂತೆ ಕುಶಲಕರ್ಮಿ ಪ್ರಾರ್ಥಿಸುತ್ತಾನೆ. ಒಂದು ಸುತ್ತಿಗೆ ಪೆಟ್ಟು, ಬೆರಳನ್ನು ನಾಶಗೊಳಿಸಬಹುದು, ಕೈಯನ್ನು ಮುರಿಯಬಹುದಾಗಿದೆ. ಕಂಬಾರ ವೃತ್ತಿಯಲ್ಲಿ ಅಜಾಗರೂಕನಾದರೆ ಅಡಗಲ್ಲಿನ ಮೇಲೆ ಬೀಳುವ ಗನ್ ಅಥವಾ ದೊಡ್ಡ ಸುತ್ತಿಗೆ ಪೆಟ್ಟು ತನ್ನ ತಲೆಯ ಮೇಲೆ ಬೀಳುತ್ತದೆಂದು ತಿಳಿದವನಾಗಿರುತ್ತಾನೆ. ಇಕ್ಕಳು ತನ್ನ ಹಿಡಿತ ಸಡಿಲಿಸಿಕೊಂಡರೆ ಕಾದ ಕಬ್ಬಿಣ ತುಕಡಿ ಕಂಬಾರನ ಅಂಗದ ಮೇಲೆ ಬಿದ್ದು ಸುಟ್ಟುಕೊಳ್ಳುವ ಸ್ಥಿತಿ ಇರುತ್ತದೆ. ವೃತ್ತಿ ಉಪಕರಣಗಳು ಸೂಕ್ಷ್ಮವಾಗಿರುತ್ತವೆ. ಕೆಲವೊಮ್ಮೆ ಅಪಾಯಕಾರಿಯಾಗಿರುತ್ತವೆ. ಉಪಕರಣಗಳಿಂದ ನಿತ್ಯವು ಅಪಾಯ ಎದುರಿಸುವುದಾದರೆ ಕಂಬಾರಿಕೆ ಕಸಬು ಮಾಡುವುದೇ ಕಷ್ಟವಾಗುತ್ತದೆ. ಈ ಎಲ್ಲ ಕಾಳಜಿಯನ್ನು ಅರಿತ ಕಂಬಾರನು, ತನ್ನ ಸುತ್ತ-ಮುತ್ತ ಇರುವ ವೃತ್ತಿ ಸಾಧನೋಪಕರಣಗಳು ಕಣ್ಣು ಮುಚ್ಚಿದರೆ ಸಾವು; ಕಣ್ಣು ತೆರೆದರೆ ಜೀವ ಕೊಡುತ್ತವೆಂದು ಉಪಕರಣಗಳನ್ನು ಪೂಜಿಸುತ್ತಾನೆ. ಈ ಉಪಕರಣಗಳಿಂದ ಅದ್ಭುತ ವಸ್ತುಗಳು ತಯಾರಾಗುತ್ತವೆ. ವಸ್ತು ಜನಪ್ರಿಯವಾಗುವುದರೊಂದಿಗೆ ಕಂಬಾರನು ಲೋಕಪೂಜ್ಯನಾಗುತ್ತಾನೆ.

ಕಂಬಾರನಿಗೆ ಸಮಾಜದಲ್ಲಿ ಉನ್ನತ ಸ್ಥಾನ ಲಭಿಸಿದರೆ ಅದು ಕಸಬುಗಾರಿಕೆಯಿಂದ, ಕಸಬುಗಾರಿಕೆ ಉಪಕರಣಗಳಿಂದ ಮಾತ್ರ ಸಾಧ್ಯ ಎಂಬ ಅರಿವು ಸತ್ಯ ಕಂಬಾರ ಕುಶಲಕರ್ಮಿಗಳಿಗೆ ತಿಳಿದಿರುತ್ತದೆ. ಇದರಿಂದ ಉಪಕರಣಗಳು ದೈವ ಸಮಾನವೆಂದು ಭಾವಿಸಲಾಗುತ್ತದೆ. ಕಾಳಮ್ಮನೆಂದು ಪೂಜಿಸಲಾಗುತ್ತದೆ. ನಿತ್ಯ ಕೆಲಸ ಮುಗಿಸುವ ಹೊತ್ತಿಗೆ ಉಪಕರಣಗಳನ್ನು ಸ್ವಚ್ಛವಾಗಿ ತೊಳೆದು, ಯಾರ ಕಾಲಿಗೂ ತಾಕದಂತೆ ಎತ್ತರವಾದ ಪೆಟ್ಟಿಗೆಯಲ್ಲಿ ಇರಿಸಲಾಗುತ್ತದೆ. ಉಪಕರಣಗಳನ್ನು ಇಡುವ ಪೆಟ್ಟಿಗೆ ಶ್ರೀಮಂತರ ಮನೆಯ ದೇವರ ಜಗಲಿಯಂತೆ ಕಾಣುತ್ತಿರುತ್ತದೆ. ಕಂಬಾರನಿಗೆ ತನ್ನ ಮನೆಯ ದೇವರ ಜಗಲಿ ಬೇರೆಯಲ್ಲ; ವೃತ್ತಿ ಉಪಕರಣಗಳನ್ನಿಡುವ ಪೆಟ್ಟಿಗೆ ಬೇರೆಯಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಕೊಂಡವನಾಗಿರುತ್ತಾನೆ. ಪ್ರತಿ ಅಮವಾಸ್ಯೆಗೆ ಈ ಉಪಕರಣಗಳಿಗೆ ಬಿಡುವು ಇರುತ್ತದೆ. ಇವು ಕಾಳಮ್ಮನ ಸ್ವರೂಪವಾಗಿರುವುದರಿಂದ ಅಮವಾಸ್ಯೆ ದಿನ ಕುಶಲಕರ್ಮಿ ಕೆಲಸ ಮಾಡುವುದಿಲ್ಲ. ಉಪಕರಣಗಳನ್ನು ಪ್ರತಿದಿನಕ್ಕಿಂತ ಹೆಚ್ಚಾಗಿ ಸ್ವಚ್ಛಗೊಳಿಸಿ ಹೂ-ಮಾಲೆ, ಕುಂಕುಮ-ಅರಿಶಿಣಾದಿಗಳಿಂದ ಅಲಂಕರಿಸುತ್ತಾನೆ. ಸಿಹಿ ಅಡುಗೆಯನ್ನು ನೈವೇದ್ಯ ಮಾಡಿ, ಕರ್ಪೂರ-ಊದಬತ್ತಿ ಬೆಳಗಲಾಗುತ್ತದೆ. ಅಮವಾಸ್ಯೆ ದಿನದಂದು ಉಪಕರಣಗಳಿಗೆ ವಿಶೇಷ ಶಕ್ತಿ ಒದಗಿರುತ್ತದೆಂಬ ನಂಬಿಕೆ ಕುಶಲಕರ್ಮಿಗಳಲ್ಲಿದೆ.

ಅಮವಾಸ್ಯೆಯಂದು ಕಂಬಾರಸಾಲೆಯಲ್ಲಿ ಉಪಕರಣಗಳನ್ನು ಪೂಜಿಸಿದ ನಂತರ ಕೆಲವರು ಶಿರಸಂಗಿ ಕಾಳಮ್ಮನ ದರುಶನಕ್ಕೆ ಹೋಗುತ್ತಾರೆ. ದೂರದ ಊರಿನವರಿಗೆ ಪ್ರತಿ ಅಮವಾಸ್ಯೆಗೆ ಸಾಧ್ಯವಾಗುವುದಿಲ್ಲ. ಯುಗಾದಿಗೊಮ್ಮೆ ಶಿರಸಂಗಿಗೆ ಹೋಗಿ ಬರುತ್ತಾರೆ. ಅಮವಾಸ್ಯೆ ದಿನದಂದು

ಕೆಲಸ ಮಾಡಿ ಉಪಕರಣಗಳಿಂದ ತೊಂದರೆ ಅನುಭವಿಸಿದ್ದೇವೆ ಎಂದು ಕೆಲವು ಕುಶಲಕರ್ಮಿಗಳು ಹೇಳುತ್ತಾರೆ. ಇದು ಸತ್ಯವು ಆಗಿದೆ. ಅಮವಾಸ್ಯೆ ದಿನ ಸಾವಿರ ಹೊನ್ನು ಕೊಡುತ್ತೇನೆಂದರೂ ಸಾವು ತರಿಸಿಕೊಳ್ಳುವ ಕೆಲಸವನ್ನು ಕುಶಲಕರ್ಮಿಗಳು ಮಾಡುವುದಿಲ್ಲ. ಇದು ನನ್ನ ಅಭಿಪ್ರಾಯವು ಆಗಿದೆ. ಕಂಬಾರರ ಕುಲುಮೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಪ್ರತಿಷ್ಠಾನಗೊಂಡ ಕಾಳಮ್ಮನ ಮೂರ್ತಿ ಎಂಬಂತೆ ಕಾಣುತ್ತದೆ. ಕಲ್ಲು ಮಣ್ಣಿನಿಂದ ಕುಲುಮೆಯನ್ನು ನಿರ್ಮಿಸಲಾಗಿರುತ್ತದೆ. ಮೇಲ್ಭಾಗ ಕಿರೀಟ ಧಾರಣೆಯಾದ ಕಾಳಮ್ಮನ ಮುಖವೆನ್ನುವಂತೆ ಕಂಬಾರ ಕುಲುಮೆಯನ್ನು ತಯಾರಿಸಿಕೊಂಡಿರುತ್ತಾನೆ. ಇದರಿಂದ ಪಂಚಾಳ ಕುಶಲಕರ್ಮಿಗಳ ಕಾಳಮ್ಮನ ಆರಾಧನೆ ಎಷ್ಟು ಅನನ್ಯವಾದದ್ದು ಎಂಬುದು ತಿಳಿಯುತ್ತದೆ. ಕುಶಲರ್ಮಿಗಳಿಗೆ ಉಪಕರಣ ಕಲ್ಲು, ಮಣ್ಣು, ಕಬ್ಬಿಣ, ಕಟ್ಟಿಗೆ ಯಾವುದೇ ವಸ್ತುವಿನಿಂದ ತಯಾರಾಗಿದ್ದರೂ ಅದು ಕಾಳಮ್ಮನೆಂದು ಪೂಜಿತಗೊಳ್ಳುತ್ತದೆ.

ಬಡಿಗೇರ ಕುಶಲಕರ್ಮಿ ವರ್ಗಗಳು ಕಾಳಮ್ಮನನ್ನು ಆರಾಧಿಸುತ್ತಾರೆ. ಕಂಬಾರರಂತೆ ಪೂಜಾ ವಿಧಾನಗಳು ಒಂದೇ ಆಗಿದ್ದರೂ ಉಪಕರಣಗಳಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸಗಳು ಕಂಡುಬರುತ್ತವೆ. ಕಂಬಾರರಲ್ಲಿ ಹೆಚ್ಚಾಗಿ ಕಬ್ಬಿಣದ ಉಪಕರಣಗಳನ್ನು ಬಳಸುವುದು ಕಂಡುಬಂದರೆ, ಬಡಿಗೇರರಲ್ಲಿ ಕಟ್ಟಿಗೆ ಮತ್ತು ಕಬ್ಬಿಣದಿಂದ ತಯಾರಿಸಿದ ಉಪಕರಣಗಳ ಬಳಕೆ ಕಂಡುಬರುತ್ತದೆ. ಉಳಿ, ಬಾಚಿ, ಸಣ್ಣ ಉಳಿ, ದೊಡ್ಡ ಉಳಿ, ಕೋಡಕುಳಿ, ಅಗಲ ಬಾಯಿ ಉಳಿ, ಗುಂಡು ಬಾಯಿ ಉಳಿ, ಮಟ್ಟಲಿಗೆ(ಮಟವಾಲಿಗೆ) ಅರನ, ಅಗಲರನ, ಮುರೇನಿನ ಅರನ, ದೊಡ್ಡಕೊಡತಿ, ಸಣ್ಣ ಕೊಡತಿ, ಚೌಕಕೊಡತಿ, ಗುಂಡುಕೊಡತಿ, ಉಚುಗೊಡ್ಡ, ಕೈವಾರ, ಸುತ್ತಿಗೆ, ಸಳ್ ಇತ್ತೀಚಿನ ಡ್ರೀಲ್ ಮಸೀನ್, ಸ್ಕೂಡ್ರಾವರ್, ಟೇಪು, ರಂಧಾಮಸಿನ್, ಪಾಲೀಸ್ ಮಸೀನ್, ಕಟರ್ ಮಸೀನ್, ಗರಗಸ ಮುಂತಾದ ಉಪಕರಣಗಳು ಕೇವಲ ಉಪಕರಣಗಳಷ್ಟೇ ಅಲ್ಲ ಶಕ್ತಿಯ ಪ್ರತೀಕಗಳಾಗಿವೆ. ಉಳಿ, ಬಾಚಿ ಇವು ಹರಿತವಾದ ಸಾಧನೋಪಕರಣಗಳಾಗಿವೆ. ಬಡಿಗೇರ ಕುಶಲಕರ್ಮಿಗಳ ನಿತ್ಯ ಕಾಯಕ ಆರಂಭ ವಾಗುವುದೇ ಈ ಉಪಕರಣಗಳಿಂದ. ಇವುಗಳಿಂದ ಕುಶಲಕರ್ಮಿ ಸಾಧಕನಾಗುತ್ತಾನೆ.

ಬಡಿಗೇರ ಕುಶಲಕರ್ಮಿಗಳಿಗೆ ಉಳಿ, ಬಾಚಿ, ಕೊಡಲೆ ಜೀವಾತ್ಮವಿದ್ದಂತೆ. ಇವುಗಳಿಂದಲೇ ಪರಮಾತ್ಮನನ್ನೂ ಸೃಷ್ಟಿಸಬಲ್ಲವರಾಗಿದ್ದಾರೆ. ಉಳಿ, ಬಾಚಿಯಿಂದಲೇ ಏನೆಲ್ಲವನ್ನು ತಯಾರಿಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಕುಶಲಕರ್ಮಿಗಳು ಜಗತ್ತಿಗೆ ತಿಳಿಸಿ ಕೊಡುತ್ತಾರೆ. ಬಡಿಗೇರ ವೃತ್ತಿಯ 'ಬಾಚಿಕಾಯಕದ ಬಸವಯ್ಯ'ನೆಂಬ ವಚನಕಾರ ತನ್ನ ಒಂದು ವಚನದಲ್ಲಿ ಸಾಧನ ಉಪಕರಣಗಳ ಕುರಿತು ಈ ರೀತಿ ಉಲ್ಲೇಖಿಸುತ್ತಾನೆ.

"ಆರು ದರ್ಶನವೆಲ್ಲ ಎನ್ನ ಬಾಚಿಯ ಕಲೆ
ಮಿಕ್ಕಾದ ಮೀರಿದ ಅವದೂತರುಗಳೆಲ್ಲ

ಎನ್ನ ಉಳಿಯೊಳಗಣ ಒಡಪು
ಇಂತಿವ ಮೀರಿ ವೇದಿಸಿ ಭೇದಿಸಿಹೆನೆಂಬರೆಲ್ಲ
ಎನ್ನ ಕೊಡತೆಯಡಿಯಲ್ಲಿ ಬಡೆಯಿಸಿಕೊಂಬ ಬಡಿಹೋರಿಗಳು...."[೩೩]

ಶ್ರಮ ಮೂಲದಿಂದ ಸಾಕ್ಷಾತ್ಕಾರತೆಯನ್ನು ತಂದು ಕೊಡುವ ಶಕ್ತಿ ಉಪಕರಣಗಳಿಗಿದೆ. ಇದರಿಂದ ಕಸುಬುದಾರ ಉಪಕರಣಗಳನ್ನು ದೈವವಾಗಿ, ಶಕ್ತಿಯಾಗಿ, ಕಾಳಮ್ಮನೆಂದು ಆರಾಧಿಸುತ್ತಿದ್ದಾನೆ. ಕುಶಲಕರ್ಮಿಗಳಿಗೆ ಉಪಕರಣಗಳು ಶಕ್ತಿಯಂತೆ ಯುಕ್ತಿ ಪ್ರಧಾನವು ಆಗಿವೆ. ನಿತ್ಯ ಕಾಯಕದೊಂದಿಗಿರುವ ಕಸಬುದಾರ ಅಜಾಗರೂಕನಾದರೆ ಕೈಕಾಲುಗಳನ್ನು ಉಳಿ, ಬಾಚಿಯಿಂದ ತುಂಡರಿಸಿಕೊಳ್ಳುವ ಸಾಧ್ಯತೆಯಿರುತ್ತದೆ.

ಪುಣ್ಯ ಸ್ತ್ರೀ ಕಾಳವ್ವೆ ಎಂಬ ವಚನಗಾರ್ತಿ "ಕೈ ತಪ್ಪಿ ಕೆತ್ತಲು ಕಾಲಿಂಗೆ ಮೂಲ" ಎಂದು ಹೇಳುತ್ತಾಳೆ. ಅಂದರೆ ಹರಿತವಾದ ಉಳಿ, ಬಾಚಿಗಳ ಜೊತೆ ಕೆಲಸ ಮಾಡುವಾಗ ಯುಕ್ತಿವಂತರಾಗಿಯೂ ಏಕಾಗ್ರತೆಯಿಂದ ಕೆಲಸ ಮಾಡಬೇಕಾಗುತ್ತದೆ. ಉಳಿ, ಬಾಚಿಯಂತಹ ಹಲವಾರು ಬಡಿಗ ವೃತ್ತಿಯ ಉಪಕರಣಗಳು ಕಸಬುದಾರನಿಗೆ ಪ್ರಧಾನವು ಮತ್ತು ಆರಾಧನವು ಆಗಿವೆ. ಬಡಿಗಸಾಲಿಯಲ್ಲಿ ಕುಳಿತ ರೈತಾಪಿ ವರ್ಗದವರು ಬಡಿಗೇರರು ಕೆಲಸ ಮುಗಿಸಿ ಕೊಡುವವರೆಗೂ ಖಾಲಿ ಕುಳಿತುಕೊಳ್ಳುವುದು ಅವರಿಗೆ ಸಾಧ್ಯವಾಗುವುದಿಲ್ಲ. ಬಡಿಗೇರರ ಸುತ್ತ ಮುತ್ತಲಿನ ಉಪಕರಣಗಳನ್ನು ತೆಗೆದುಕೊಂಡು ಏನಾದರೂ ಮಾಡುವುದಕ್ಕೆ ಹೋಗುತ್ತಾರೆ. ಆಗ ಬಡಿಗೇರರು ರೈತನನ್ನು ಗದರಿಸಿ ಉಪಕರಣಗಳನ್ನು ತಮ್ಮ ಬಳಿ ಇರಿಸಿಕೊಳ್ಳುತ್ತಾರೆ. ನನ್ನ ತಂದೆ ಕಂಬಾರಿಕೆ ಜೊತೆ ಬಡಿಗೇರ ವೃತ್ತಿಯನ್ನು ಮಾಡುತ್ತಿದ್ದುದರಿಂದ ಈ ಸಂಗತಿ ನನ್ನ ಗಮನಕ್ಕೂ ಹಲವಾರು ಬಾರಿ ಬಂದಿದೆ. ಕೆಲವು ರೈತರು ಅಗಲಬಾಯಿ ಉಳಿಯಿಂದ ಕಾಲೊಳಗಿನ ಉಗುರು ತೆಗೆಯಲು ಉಪಕರಣ ಬಳಸಿದಾಗ ಕಸಬುದಾರರು ಹಿಗ್ಗಾ-ಮುಗ್ಗಿ ಬೈಯುತ್ತಾರೆ. 'ಅವು ನಮ್ಮ ಪಾಲಿನ ಕಾಳಮ್ಮ ದೇವರು. ಅವುಗಳನ್ನು ನಿನ್ನ ಕಾಲಿಗೆ ಮುಟ್ಟಿಸಿಕೊಳ್ಳುವುದು ಸರಿಯಲ್ಲವೆಂದು ತಿಳಿವಳಿಕೆ ನೀಡುವ ಜ್ಞಾನಿಗಳು ಕುಶಲಕರ್ಮಿಗಳಾಗಿದ್ದರು. ವಿಶ್ವದಲ್ಲಿ ಅನ್ನವೇ ಪ್ರಾಣವಾದರೆ, ಪಂಚಾಳ ಕುಶಲಕರ್ಮಿಗಳಿಗೆ ಸಾಧನೋಪಕರಣಗಳೇ ಪ್ರಾಣ.

ಕಂಚುಗಾರ ಕುಶಲಕರ್ಮಿಗಳು ನಿತ್ಯ ಕಾಯಕಕ್ಕೆ ಬಳಸುವ ಉಪಕರಣಗಳನ್ನು ಕಾಳಮ್ಮನ ಸ್ವರೂಪವೆಂದು ಪೂಜಿಸುತ್ತಿದ್ದರು. ಕಂಬಾರ, ಬಡಿಗೇರ ಕುಶಲಕರ್ಮಿಗಳಂತೆ ಇವರ ಆರಾಧನೆಯ ಶಕ್ತಿ ಕಾಳಮ್ಮನೇ ಆಗಿದ್ದಾಳೆ. ಇವರ ವೃತ್ತಿಯ ಉಪಕರಣಗಳಾದ ಕುಲುಮೆ ಅಥವಾ ಇತ್ತೀಚಿನ ಪಂಕಾ, ಕತ್ತರಿ, ಸುತ್ತಿಗೆ, ಚಾಣ, ಕಬ್ಬಿಣ ಹಾರೆ, ಕಬ್ಬಿಣ ಗುಂಡ, ಅಚ್ಚುಮಣಿಗಳೂ, ಪಾಲಿಸ್ ಮಸೀನ್, ಕಂಚು, ತಾಮ್ರ, ಹಿತ್ತಾಳೆ ಕರಗಿಸುವ ಪಾತ್ರೆ, ಮೊದಲಾದ ಉಪಕರಣಗಳಿಂದ ಕಂಚುಗಾರ

ಕುಶಲಕರ್ಮಿಗಳು ಜನಸಮುದಾಯಕ್ಕೆ ಅಗತ್ಯವಿರುವ ವಸ್ತುಗಳನ್ನು ತಯಾರಿಸುತ್ತಾರೆ. ದೇವರ ಮೂರ್ತಿಗಳನ್ನು ತಯಾರಿಸುವ ಕಸಬುದಾರನ ಈ ಉಪಕರಣಗಳೇ ದೇವರು, ಕಾಳಮ್ಮ ಆಗಿದೆ. ಗುಡಿ ಗುಂಡಾರ, ದೇವಾಲಯಗಳಿಗೆ ಕಳಶ ಮಾಡುವ ಕಬ್ಬಿಣದ ಉಪಕರಣಗಳು ಕಂಚುಗಾರನ ಆರಾಧನೆಯ ಮೂಲವಾಗಿವೆ. ಇವುಗಳನ್ನು ನಿತ್ಯ ಪೂಜಿಸುವುದರ ಮೂಲಕ ಕಸಬುಗಾರಿಕೆಯನ್ನು ಕಂಚುಗಾರ ಆರಂಭಿಸುತ್ತಾನೆ. ಸುತ್ತಿಗೆ, ಚಾಣ, ಕತ್ತರಿ, ಕುಲುಮೆ ಮೊದಲಾದ ಸಾಧನೋಪಕರಣಗಳನ್ನು ಕುಶಲಕರ್ಮಿ ತಪ್ಪಿಯೂ ಕಾಲ ಮುಟ್ಟಿಸುವುದಿಲ್ಲ. ಈ ಉಪಕರಣಗಳು ತಪ್ಪಿ ಕಾಲಿಗೆ ಬಡಿದರೆ ತಕ್ಷಣವೇ ಕೆಲಸ ಬಿಟ್ಟು ಅವುಗಳನ್ನು ಕೈಯಿಂದ ಎತ್ತಿ ನಮಸ್ಕರಿಸುತ್ತಾನೆ. ಸೂಕ್ತ ಸ್ಥಳದಲ್ಲಿ ಉಪಕರಣಗಳನ್ನು ಇರಿಸುತ್ತಾನೆ. ಕುಶಲಕರ್ಮಿ ತನ್ನನ್ನು ತಾನು ಗೌರವಿಸಿಕೊಳ್ಳುವುದರ ಜೊತೆ ತನ್ನೊಂದಿಗಿರುವ ಪ್ರತಿ ವಸ್ತುವನ್ನು ಗೌರವಿಸುವ ವ್ಯಕ್ತಿಯಾಗಿದ್ದಾನೆ. ರೈತಾಪಿ ವರ್ಗ, ಜನಸಮುದಾಯ ವನ್ನು ಗೌರವಿಸುವುದಷ್ಟೇ ಅಲ್ಲ, ತನ್ನ ಸಂಗ ಬಯಸಿದ ಪ್ರತಿವಸ್ತುವು ಗೌರವಯುತವಾದದ್ದು ಎಂದು ಭಾವಿಸುತ್ತಾನೆ. ಈ ಗುಣವೇ ತನ್ನೊಂದಿಗಿರುವ ಉಪಕರಣಗಳನ್ನು ದೈವಿ ಶಕ್ತಿಯೆಂದು, ಕಾಳಮ್ಮನೆಂದು ಆರಾಧಿಸಲು ಕಾರಣವಾಗಿದೆ. ಸಂಗೀತಗಾರನಿಗೆ ಜಗತ್ತಿನ ಸಣ್ಣ ಕಣಕಣವು ಶಾರದೆ, ಸರಸ್ವತಿಯಾಗಿ ಕಾಣುವಂತೆ, ಪಾಂಚಾಳ ಕುಶಲಕರ್ಮಿಗಳಿಗೂ ತಮ್ಮ ಸಾಧನೆಗೆ ಸಾಕ್ಷಿಯಾಗಿರುವ ಉಪಕರಣಗಳು ಕಾಳಮ್ಮನಾಗಿ ಕಾಣುತ್ತವೆ. ಕಾಳಮ್ಮನಾಗಿ ಆರಾಧಿಸಿಕೊಳ್ಳುತ್ತವೆ. ಉಪಕರಣಗಳಿಗೆ ಸಲ್ಲಿಸುವ ಕುಶಲರ್ಮಿಯ ಪೂಜೆ, ಶಿರಸಂಗಿಯ ಕಾಳಮ್ಮನಿಗೆ ಸಲ್ಲುತ್ತದೆ ಎಂಬ ಅಚಲ ನಂಬಿಕೆ ಪಾಂಚಾಳರ ಕಾಳಮ್ಮ ಆರಾಧನೆಯನ್ನು ಸಾಕ್ಷಿಕರಿಸುತ್ತದೆ.

ಶಿಲ್ಪಿ ಕುಶಲಕರ್ಮಿಗಳು ಇತರ ಪಾಂಚಾಳ ಕುಶಲಕರ್ಮಿಗಳಂತೆ ಕಾಳಮ್ಮನ ಆರಾಧಕ ರಾಗಿದ್ದಾರೆ. ಇವರು ದೇವರ ಮೂರ್ತಿಗಳನ್ನೇ ಹೆಚ್ಚಾಗಿ ತಯಾರಿಸುತ್ತಾರೆ. ಉಳಿ, ಚಾಣ, ಸುತ್ತಿಗೆ, ಮಟ್ಟಲಗೆ, ಪಾಲಿಸ್ ಮಸಿನ್ ಮುಂತಾದ ಉಪಕರಣಗಳು ಶಿಲ್ಪಿ ಸಾಧನೆಯ ಮಹಾ ಅಸ್ತ್ರಗಳಾಗಿವೆ. ಶಿಲ್ಪಿಯಿಂದ ತಯಾರಾಗುವ ಶಿಲ್ಪವು ನಿರ್ಮಾಣದ ಹಂತದಲ್ಲಿ ಶಿಲ್ಪಿಯ ಕೈ-ಕಾಲುಗಳ ಹಿಡಿತದಲ್ಲಿರುತ್ತದೆ. ನಿರ್ಮಾಣದ ವಸ್ತುಗಳೇ ಕೈ-ಕಾಲು ತುಳಿತದಲ್ಲಿರುವಾಗ, ಉಪಕರಣಗಳು ಲೆಕ್ಕಕ್ಕೆ ಉಳಿಯುವುದಿಲ್ಲ. ಹಾಗಂತ ಶಿಲ್ಪಿ ನಿರ್ಮಾಣದ ವಸ್ತುವನ್ನು ಮತ್ತು ತನ್ನ ಉಪಕರಣಗಳನ್ನು ಕಡೆಗಣಿಸಿದ್ದಾನೆಂದು ಹೇಳಲು ಸಾಧ್ಯವಿಲ್ಲ. ಕೆಲಸ ಆರಂಭಿಸುವಾಗ ಉಪಕರಣಗಳ ಜೊತೆ ತಯಾರಿಕೆ ಶಿಲ್ಪವನ್ನು ಶಿಲ್ಪಿ ಗೌರವದಿಂದ ನಮಸ್ಕರಿಸುತ್ತಾನೆ. ದಿನದ ಕೆಲಸ ಮುಗಿದ ಮೇಲೆಯೂ ನಮಸ್ಕರಿಸುತ್ತಾನೆ. ಇತರ ಪಾಂಚಾಳ ಕುಶಲಕರ್ಮಿಗಳಂತೆ ಶಿಲ್ಪಿಯು ತನ್ನ ಉಪಕರಣಗಳನ್ನು ಗೌರವದಿಂದ ಕಾಣುತ್ತಾನೆ. ಉಪಕರಣಗಳಿಲ್ಲದಿದ್ದರೆ ಕಗ್ಗಲ್ಲನ್ನು ಶಿಲ್ಪವಾಗಿಸಲು ಸಾಧ್ಯವಿಲ್ಲ ಎಂಬ ಸತ್ಯ ಶಿಲ್ಪಿ ತಿಳಿದುಕೊಂಡವನಾಗಿರುತ್ತಾನೆ. ವಿಶ್ವದಲ್ಲಿ ಎಷ್ಟು ಶಿಲ್ಪಗಳೂ ಪ್ರಖ್ಯಾತಿ ಹೊಂದಿವೆಯೋ ಅಷ್ಟೇ

ಪ್ರಖ್ಯಾತತನವನ್ನು ಅವುಗಳನ್ನು ತಯಾರಿಸಿದ ಶಿಲ್ಪಿಗಳು ಪಡೆದಿದ್ದಾರೆ. ಶಿಲ್ಪಿಗಳ ಪ್ರಸಿದ್ಧತನಕ್ಕೆ ಅವರ ಉಪಕರಣಗಳು ಅರ್ಧಪಾಲು ಪಡೆಯುತ್ತವೆ. ಪಾಂಚಾಳ ಕುಶಲಕರ್ಮಿಗಳಿಗೆ ಉಪಕರಣಗಳೂ ಜಗತ್ತಿನಲ್ಲಿ ಹೆಸರನ್ನು ತಂದುಕೊಟ್ಟ ದೈವ ಸಾಧನಗಳಾಗಿವೆ.

ಬಂಗಾರದ ಜೊತೆ ಬಂಗಾರದಂತಾಗಿರುವ ಅಕ್ಕಸಾಲಿಗನ ಸಾಧನೋಪಕರಣಗಳೂ ಅವನ ಬದುಕನ್ನೇ ಬಂಗಾರವಾಗಿಸಿದ ಸ್ಪರ್ಷಮಣಿಯಾಗಿವೆ. ಕಬ್ಬಿಣವನ್ನು ಚಿನ್ನವಾಗಿಸುವ ಶಕ್ತಿ ಸ್ಪರ್ಷಮಣಿ ಗಿರುವಂತೆ ಪಾಂಚಾಳರ ದಾರಿದ್ರ್ಯವನ್ನು ಹೋಗಲಾಡಿಸಿ ಶ್ರೀಮಂತಿಕೆಯನ್ನು ತಂದು ಕೊಡುವ ಶಕ್ತಿ ಅಕ್ಕಸಾಲಿ ಕಸಬುದಾರಿಕೆ ಉಪಕರಣಗಳಲ್ಲಿದೆ. ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ, ಕುಶಲಕರ್ಮಿ ವರ್ಗಗಳಂತೆ ಅಕ್ಕಸಾಲಿ ವರ್ಗದವರೂ ಕಾಳಮ್ಮನ ಆರಾಧಕರಾಗಿದ್ದಾರೆ. ಪಾಂಚಾಳ ವರ್ಗಗಳಲ್ಲಿಯೇ ಆರ್ಥಿಕವಾಗಿ ಪ್ರಬಲವಾಗಿರುವ ಅಕ್ಕಸಾಲಿಗರು ಚಿನ್ನ-ಬೆಳ್ಳಿ, ವಜ್ರ ಅಂದರೆ ಶ್ರೀಮಂತ ಲೋಹಗಳ ಸಹವಾಸದಿಂದಾಗಿ ಸಹಜ ಶ್ರೀಮಂತಿಕೆ ಪ್ರಾಪ್ತವಾಗಿರುತ್ತದೆ. ಇದಕ್ಕೆ ಕಾರಣ ಕಾಳಮ್ಮನ ಆರಾಧನೆ, ಪೂಜೆ-ಪುನಸ್ಕಾರಗಳು ಮುಖ್ಯವೆನಿಸುತ್ತವೆ. ಇತರ ಪಾಂಚಾಳ ಕುಶಲಕರ್ಮಿ ಗಳಂತೆ ಅಕ್ಕಸಾಲಿಗರು ತಮ್ಮ ಕಸಬುದಾರಿಕೆ ಉಪಕರಣಗಳನ್ನು ಗೌರವದಿಂದ ಕಾಣುತ್ತಾರೆ. ಅಗ್ಗಿಷ್ಟಿಕೆ, ಜಲಪಾತ್ರೆ, ಅಡಿಗಲ್ಲು, ಊದುಕೊಳವೆ, ಹಿಡಿ, ಮೂಸೆ, ಎರಕದ ಕಲ್ಲು, ಸುತ್ತಿಗೆ, ಅಚ್ಚುಗಳು, ಇಕ್ಕಳ, ಅರ, ತಿದಿ, ಪೋಗರ್, ಮಸಗಲ್ಲು, ಚಾಣ, ಕತ್ತರಿ ಚಿಮಣಿ ಮೊದಲಾದ ಉಪಕರಣಗಳು ಅಕ್ಕಸಾಲಿಗರ ಪಾಲಿಗೆ ಜೀವ ಶಕ್ತಿಯಾಗಿವೆ. ನಿತ್ಯವು ಈ ಉಪಕರಣಗಳ ಕಸಬುದಾರನಿಗೆ ಬೇಕೆ ಬೇಕಾಗುತ್ತವೆ. ಉಪಕರಣಗಳಿಲ್ಲದಿದ್ದರೆ ಕಸಬು ಇಲ್ಲ. ಕಸಬುದಾರನು ಇಲ್ಲವಾಗುತ್ತಾನೆ. ಕುಲುಮೆ ಕುಲದವರಿಗೆ ಅಂದರೆ ಪಾಂಚಾಳ ವರ್ಗಗಳಿಗೆ ಕಾಳಮ್ಮ ಒಬ್ಬಳೇ ದೈವ. ಅವಳಿಲ್ಲದಿದ್ದರೆ ಯಾವ ವಸ್ತುಗಳೂ ತಯಾರಾಗುವುದಿಲ್ಲ ಎಂಬ ಭಾವನೆ ಪಾಂಚಾಳ ಕುಶಲಕರ್ಮಿಗಳಲ್ಲಿದೆ.

ಪಾಂಚಾಳ ಕುಶಲಕರ್ಮಿಗಳ ಮಹಿಳೆಯರು ಕಾಳಮ್ಮನನ್ನು ಆರಾಧಿಸುತ್ತಾರೆ. ಕುಶಲಕರ್ಮಿಗಳ ಕಾಳಮ್ಮನ ಆರಾಧನೆಗೆ ಮಹಿಳೆಯರು ಪೂರಕವಾಗಿ ಕೆಲಸ ಮಾಡುತ್ತಾರೆ. ಕುಶಲಕರ್ಮಿಗಳು ಕೆಲಸ ಮಾಡುವ ಪ್ರದೇಶವನ್ನು ಸುಂದರವಾಗಿ ಅಲಂಕರಿಸಿ, ರಂಗೋಲಿ ಬಿಡಿಸುತ್ತಾರೆ. ಹಬ್ಬ-ಹರಿದಿನಗಳಲ್ಲಿ ಸೂರ್ಯೋದಯ ಮುನ್ನವೇ ಎದ್ದು, ಮಡಿಯಿಂದ ಅಡುಗೆ ಮಾಡಿ ನೈವೇದ್ಯ ತಯಾರಿಸುತ್ತಾರೆ. ಇವರಿಗೆ ಆಚಾರ-ವಿಚಾರಗಳು ಬಾಲ್ಯದಿಂದಲೇ ಬೆಳೆಯುತ್ತಾ ಬಂದಿರುತ್ತವೆ. ಮೊದಲಿನ ಮಹಿಳೆಯರು ಹಣೆಗೆ ಅಡ್ಡಕುಂಕುಮವಿಡುತ್ತಿದ್ದರು. ಆದರೆ ಈಗ ಅದು ಕಡಿಮೆಯಾಗಿದೆ. ಕಾಳಮ್ಮನ ಆರಾಧನೆ ಪ್ರಧಾನವಾಗಿದ್ದರೂ ಗೌರಿ-ಗಣೇಶ, ನಾಗರ ಪಂಚಮಿ, ಲಕ್ಷ್ಮೀ ಪೂಜೆ, ತುಳಸಿ ಪೂಜೆ, ಶಿವರಾತ್ರಿ ಮೊದಲಾದ ದೇವತೆಗಳ ಆರಾಧನೆ ಪಾಂಚಾಳ ಕುಶಲಕರ್ಮಿ ಕುಟುಂಬಗಳಲ್ಲಿ ಕಂಡುಬರುತ್ತದೆ. ಪಾಂಚಾಳ ಕುಶಲಕರ್ಮಿಗಳು ಕಾಳಮ್ಮನ ಮೇಲೆ ಅದೆಷ್ಟು ಶ್ರದ್ಧೆ-ಭಕ್ತಿಯೆಂದರೆ

ತಮ್ಮ ಗಂಡು ಮಕ್ಕಳಿಗೆ ಶಿರಸಂಗಿ ಕಾಳಮ್ಮನ ಸನ್ನಿಧಿಯಲ್ಲಿಯೇ ಉಪನಯನ ಕಾರ್ಯಕ್ರಮ ನಡೆಸುತ್ತಾರೆ. ವೈಧಿಕ ಸಂಪ್ರದಾಯದ ಷೋಡಶಕರ್ಮಗಳನ್ನು ಆಚರಿಸುತ್ತಾರೆ. ಐದು ಬಗೆಯ ವಿಭಿನ್ನ ಗೋತ್ರಗಳಲ್ಲಿ ಸಂಪ್ರದಾಯ ಬದ್ಧವಾಗಿ ಪಾಂಚಾಳ ಕುಶಲಕರ್ಮಿಗಳ ವಿವಾಹಗಳು ಜರುಗುತ್ತವೆ. ಕುಶಲ ಕರ್ಮಿಗಳು ಪ್ರಧಾನವಾಗಿ ಕಾಳಮ್ಮನ ಆರಾಧಕರಾಗಿದ್ದರೂ ವೀರಭದ್ರನ ಭಕ್ತರಾಗಿ ಒಡುಬುಗಳನ್ನು ಪಠಿಸುವ ಪುರವಂತಗಾರರಾಗಿದ್ದಾರೆ. ಕೆಲವು ಕುಶಲಕರ್ಮಿ ಕುಟುಂಬಗಳು ಪುರವಂತಗಾರಿಕೆ ಕುಟುಂಬಗಳೆಂದು ಪ್ರಸಿದ್ಧವಾಗಿವೆ. ಪುರುವಂತಿಕೆಯ ಗುಗ್ಗಳ ಗಡಿಗೆ ತಯಾರಿಸುವಾಗ ಪಾಂಚಾಳ ಕುಶಲರ್ಮಿಗಳು ಸ್ನಾನಮಾಡಿ, ಮಡಿ ಬಟ್ಟೆ ಧರಿಸಿ ಗುಗ್ಗಳ ಸೆಕ್ಕೆಯನ್ನು ಕೆತ್ತಿ ಗಡಿಗೆ ಅಲಂಕರಿಸುತ್ತಾರೆ. ಕೆಲವರು ಒಡಬುಗಳನ್ನು ಹೇಳುವ ಪದ್ಧತಿ ರೂಢಿಯಲ್ಲಿದೆ. ಗ್ರಾಮದ ಜಾತ್ರೆ ಉತ್ಸವದ ರಥಗಳಲ್ಲಿ ಕುಳಿತು ಕೊಳ್ಳುವ ಹಕ್ಕನ್ನು ಪ್ರಾಚೀನ ಕಾಲದಿಂದಲೂ ಪಡೆದುಕೊಂಡಿದ್ದಾರೆ. ತೇರ(ರಥ)ಕಳಶದ ಪೂಜೆಯನ್ನು ಪಾಂಚಾಳ ಕುಶಲಕರ್ಮಿಗಳು ನೆರವೇರಿಸುತ್ತಾ ಬಂದಿದ್ದಾರೆ. ತೇರ ಎಳೆಯುವಾಗ ಕಳಶದ ರಕ್ಷಣೆಯ ಹೊಣೆಗಾರಿಕೆಯು ಕುಶಲಕರ್ಮಿ ಗಳದಾಗಿದೆ.

> ಊರ ತೇರ ಮ್ಯಾಲಿನ ಕಳಸ
> ಯಾರ ಹಿಡಿದಾರಣ್ಣ\ಗಟ್ಟ್ಯಾಳ್ಳ ಬಡಿಗ ಭೀ
> ಮರಾಯನ ಶಿಷ್ಯ ಕಂಬಾರ ನಾಗಪ್ಪ ಹಿಡಿದಾನಣ್ಣ ।

ಆಯಾ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಈ ತ್ರಿಪದಿಗಳು ಕುಶಲಕರ್ಮಿಗಳ ಊರಗಾರಿಕೆ ಹೊಣೆಗಾರಿಕೆಯನ್ನು ಸೂಚಿಸುತ್ತವೆ. ಗ್ರಾಮೀಣ ಜನರಿಗೆ ಸರ್ಪ ಹುಣ್ಣಾದರೆ ಕಡಿಮೆಗೊಳಿಸಲು ಇಂದಿಗೂ ಪಾಂಚಾಳ ಕುಶಲಕರ್ಮಿಗಳೇ ಅವಶ್ಯಕ. ದೇಹದ ಮೇಲೆ ಮುಂದೆ ಮುಂದೆ ಚಿಗುರುವ ಸರ್ಪಕ್ಕೆ, ಗರುಡನನ್ನು ಚಿತ್ರಿಸಿ ಕಾಳಮ್ಮನನ್ನು ಪ್ರಾರ್ಥಿಸುತ್ತಾರೆ. ಒಂದು ವಾರದಲ್ಲಿ ಹುಣ್ಣು ಕಡಿಮೆಯಾಗುತ್ತದೆ. ಮೂಕ ಪ್ರಾಣಿಗಳ ರೋಗ–ರುಜಿನಿಗಳಿಗೆ ತೊಪ್ಪಲನ್ನು ಅರೆದು ಔಷಧಿ ನೀಡುತ್ತಾರೆ. ಗ್ರಾಮೀಣರು ಮನೆ ಕಟ್ಟುವಾಗ ಆಯ ನೋಡಿ, ಪಾಯ ಹಾಕಿ, ಬಾಗಿಲು ಕೂಡ್ರಿಸಿ ಪೂಜೆ ನೆರವೇರಿಸಲು ಪಾಂಚಾಳ ಕುಶಲಕರ್ಮಿಗಳು ಬೇಕಾಗುತ್ತಾರೆ. ಹುಟ್ಟಿದಾಗ ತೊಟ್ಟಿಲು ತಯಾರಿಸಿ ಕೊಡುವುದರೊಂದಿಗೆ ಸತ್ತಾಗ ಚಟ್ಟ ಕಟ್ಟುವವರೆಗೂ ಪಾಂಚಾಳ ಕುಶಲ ಕರ್ಮಿಗಳ ಸೇವೆ ಗ್ರಾಮೀಣ ಪ್ರದೇಶದಲ್ಲಿದೆ. ಪಾಂಚಾಳರು ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರು ಆ ಕಾರ್ಯದ ಹಿಂದೆ ಕಾಳಮ್ಮನ ಶಕ್ತಿ ಇರುತ್ತದೆ.

ವಿಜಯ ದಶಮಿಯ ಸಂದರ್ಭದಲ್ಲಿ ಪಾಂಚಾಳ ಕುಶಲಕರ್ಮಿಗಳು ಕಾಳಮ್ಮನ ಸ್ವರೂಪವಾಗಿ ರುವ ಉಪಕರಣಾಯುಧಗಳನ್ನು ಪೂಜಿಸುತ್ತಾರೆ. ಇವರಲ್ಲಿ ಆಯುಧ ಪೂಜೆ ವಿಶೇಷವಾಗಿರುತ್ತದೆ. ನಿತ್ಯ ಕೆಲಸಕ್ಕೆ ಬಳಸುವ ಆಯುಧ ಉಪಕರಣಗಳನ್ನು ಆಯುಧ ಪೂಜೆಯಂದು ಸ್ವಚ್ಛವಾಗಿ

ತೊಳೆದು, ಹೂ, ಹಾರ, ಕುಂಕುಮಾದಿಗಳಿಂದ ಅಲಂಕರಿಸುತ್ತಾರೆ. ಮಾತೃ ದೇವತೆಯ ಆರಾಧಕರಾದ ಪಾಂಚಾಳರು ಗ್ರಾಮಗಳಲ್ಲಿಯ ದ್ಯಾಮವ್ವ ದೇವಿ ಪೂಜಾರಿಗಳಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪಾಂಚಾಳ ಕುಶಲಕರ್ಮಿಯ ಸೇವೆ ಅವಶ್ಯಕವಾಗಿದೆ. ಪಾಂಚಾಳ ಗ್ರಾಮಾಭಿವೃದ್ಧಿಯ ಮೂಂಚೂಣಿಕಾರನಾಗಿದ್ದಾನೆ. ಪಾಂಚಾಳನ ಮಹತ್ವವನ್ನು ಬಲ್ಲ ಸರ್ವಜ್ಞ ತನ್ನ ಒಂದು ವಚನದಲ್ಲಿ ಹೀಗೆ ಹೇಳುತ್ತಾನೆ.

"ಕಂಚಿಯ ಫಲಲೇಸು ಮಿಂಚು ಮುಗಿಲಿಗೆ ಲೇಸು
ಕೆಂಚನ ಹೆಣ್ಣು ಇರಲೇಸು/ಊರಿಗೊಬ್ಬ
ಪಂಚಾಳ ಲೇಸು ಸರ್ವಜ್ಞ"[೩೪]

ವಿಶ್ವದ ಕಲೆಯ ಮೂಲವಾಗಿರುವ ಐದು ಬಗೆಯ ಕುಲಕಸಬುದಾರರು ಕಲಾ-ಸಂಸ್ಕೃತಿಯ ಪ್ರವರ್ತಕರು. ಸುಪ್ತವಾದ ಕಲಾ ಪ್ರತಿಭೆಯನ್ನು ಅಭಿವ್ಯಕ್ತಿಸಿದ, ಜಗತ್ತಿನ ಜ್ಞಾನ: ವಿಜ್ಞಾನದ ಆಗರ ಕುಶಲಕರ್ಮಿಗಳು. ಕಂಬಾರ ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿಗ ಈ ಐದು ವೃತ್ತಿಗಳನ್ನು ನಿರ್ವಹಿಸುವವರು ಪಾರಂಪರಿಕ ಕುಶಲಕರ್ಮಿಗಳು; ವಿಶ್ವಕರ್ಮ ಸಮುದಾಯದ ಕುಲ ಕಸಬುದಾರರು. ಐದು ಬಗೆಯ ವೃತ್ತಿಗಳನ್ನು ಆದಿಕಾಲದಿಂದಲೂ ಪಂಚಾಳರೇ ನಿರ್ವಹಿಸಿ ಕೊಂಡು ಬಂದಿದ್ದಾರೆ. ಐದು ವೃತ್ತಿದಾರರು ಕಸಬಿನಲ್ಲಿ ಭಿನ್ನವೆನಿಸಿದರೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇವರೆಲ್ಲರೂ ಅಭಿನ್ನರು. ಕಲೆ ಆನುವಂಶಿಕವಾಗಿ ಪಾಂಚಾಳರಲ್ಲಿ ಹರಿದು ಬಂದಿರುತ್ತದೆ. ಒರ್ವ ಕುಶಲಕರ್ಮಿ ಕಂಬಾರಿಕೆ ಕಸಬು ನಿರ್ವಹಿಸುತ್ತಿದ್ದರೆ ಆತನಿಗೆ ಉಳಿದ ನಾಲ್ಕು ವೃತಿಯ ಜ್ಞಾನ ಅಗಾಧವಾಗಿರುತ್ತದೆ. ನಾಡಿಗೆ ಇಡೀ ವಿಶ್ವಕ್ಕೆ ಕುಲಕಸಬುದಾರರು ಕಲೆ-ವಾಸ್ತುಶಿಲ್ಪ, ಗೃಹಕೈಗಾರಿಕೆ, ಲೋಹ ಕಾಷ್ಟ, ಶಿಲೆ ಮುಂತಾವುಗಳಲ್ಲಿ ಶಾಶ್ವತವಾದ ಕುಶಲಕಲೆಗಾರಿಕೆ ಬಿತ್ತರಿಸಿದ್ದಾರೆ. ವೃತ್ತಿಯ ಹಿನ್ನೆಲೆಯಲ್ಲಿ ಪಂಚಾಳ ಸಮುದಾಯದವರಲ್ಲಿ ರಹಸ್ಯಾತ್ಮಕ ತತ್ವಗಳು ಅಡಕವಾಗಿರುತ್ತವೆ. ಪರಂಪರಾಗತವಾಗಿ ಬೆಳೆದುಬಂದ ಕಸಬಿನ ರಹಸ್ಯವನ್ನು ಸುಲಭವಾಗಿ ಕುಶಲಕರ್ಮಿಗಳು ಬಿಟ್ಟು ಕೊಡುವುದಿಲ್ಲ.

ಶಿಲಾಯುಗದಿಂದಲೂ ಐದು ವೃತ್ತಿಗಳನ್ನು ಪರಂಪರಾಗತವಾಗಿ ವಿಶ್ವಕರ್ಮ ಸಮುದಾಯ ನಿರ್ವಹಿಸಿಕೊಂಡು ಬರುತ್ತಿದೆ. ಐದು ವೃತ್ತಿಯ ರಹಸ್ಯ ಕುಶಲಕರ್ಮಿಗಳಲ್ಲಿ ಪ್ರಿಷ್ಟಿಯ ರಹಸ್ಯದಂತೆ ಅಡಕವಾಗಿದೆ. ತಾತನಿಂದ ತಂದೆಗೆ; ತಂದೆಯಿಂದ-ಮಗನಿಗೆ ಕಸಬಿನ ಗೌಪ್ಯತೆ ಬೆಳೆದುಬಂದಿದೆ. ಈ ಗೌಪ್ಯತೆಯ ಕಾರಣವಾಗಿಯೇ ಕುಶಲಕರ್ಮಿಗಳಲ್ಲಿ ಬಂಧುತ್ವ ಗಟ್ಟಿಗೊಳ್ಳುತ್ತ ಬಂದಿದೆ. ಪರಸ್ಪರರಲ್ಲಿ ಆಚಾರ-ವಿಚಾರ, ಸಂಪ್ರದಾಯ, ಕಸಬಿನ ಉಪಕರಣಗಳ ಕೊಡು-ಕೊಳ್ಳುವಿಕೆ ಬೆಳೆಯಿತು. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಕುಲಕಸಬುಗಳು ಬೇಡಿಕೆಯ ವೃತ್ತಿಗಳಾದವು ಇಂದಿಗೂ ಹಳ್ಳಿಗಳಲ್ಲಿ ವಿಶ್ವಕರ್ಮ ಸಮುದಾಯದ ಅಗತ್ಯತೆಯಿದೆ. ಒಂದೆರಡು ವಿಶ್ವಕರ್ಮ ಕುಟುಂಬಗಳು ಹಳ್ಳಿಗಳಲ್ಲಿದ್ದರೆ

ಅವರ ವೃತ್ತಿಗೆ ತುಂಬಾ ಬೇಡಿಕೆ, ಇದರಿಂದಾಗಿ ಕುಶಲಕರ್ಮಿಗಳನ್ನು ಹಳ್ಳಿಗರು ಗೌರವದಿಂದ ಕಾಣುತ್ತಿದ್ದರು. ಜನ್ಮತಃ ಬ್ರಾಹ್ಮಣರಾದ ಕುಲಕಸಬುದಾರರು, ಜ್ಞಾನವನ್ನು ಕ್ರಿಯಾತ್ಮಕಗೊಳಿಸಿ ಭಾರತದ ಬೆನ್ನೆಲುಬಾದ ರೈತನಿಗೆ ಕೃಷಿಯೋಪಕರಣಗಳನ್ನು ತಯಾರಿಸಿ, ಕೊಡಲಾರಂಭಿಸಿದರು. ನಿಜವಾಗಿಯೂ ರೈತನ ಬೆನ್ನೆಲುಬಾಗಿ ಕುಲಕಸಬುದಾರರು ಭಾರತದಲ್ಲಿ ಉನ್ನತ ಸ್ಥಾನ-ಮಾನ; ಗೌರವವನ್ನು ಹೊಂದಿದ್ದಾರೆ.

ಶಿರಸಂಗಿ ಪ್ರದೇಶದಲ್ಲಿ ಕುಲಕಸಬುದಾರರನ್ನು ಪಂಚಾಳರೆಂದು ಕರೆಯಲಾಗುತ್ತದೆ. ಪಂಚಾಳ (Smith) ಪದವು ಕಬ್ಬಿಣ, ಮರ, ಲೋಹ, ಶಿಲೆ ಮತ್ತು ಚಿನ್ನ-ಬೆಳ್ಳಿ ವೃತ್ತಿಗಳಲ್ಲಿ ನಿರತರಾಗಿರುವ ಕುಶಲಕರ್ಮಿವರ್ಗವಾಗಿದೆ. ಕುಲಕಸಬುದಾರರಾದ ಇವರು ಮೂಲತಃ ಬ್ರಾಹ್ಮಣರು. 'ಪಾಂಚಾಳ ಬ್ರಾಹ್ಮಣೋತ್ಪತ್ತಿ' ಎಂದು ಬ್ರಾಹ್ಮಣೋತ್ಪತ್ತಿ ಮಾರ್ತಾಂಡ ಗ್ರಂಥದಲ್ಲಿರುವಂತೆ ಐದು ಬಗೆಯ ಕಸಬುದಾರರು ಬ್ರಾಹ್ಮಣರಲ್ಲಿಯ ಒಂದು ವರ್ಗ. ಬ್ರಾಹ್ಮಣರಲ್ಲಿ ಜ್ಞಾನಮಾರ್ಗ ಮತ್ತು ಕರ್ಮಮಾರ್ಗಗಳು ಹುಟ್ಟಿಕೊಂಡವು. ವೇದಾಧ್ಯಯನ, ಜಪ-ತಪ; ಯಾಗಗಳನ್ನು ನಿರ್ವಹಿಸುವ ಪೌರೋಹಿತ್ಯಗಾರರಿಗೆ ಜ್ಞಾನ ಮಾರ್ಗಿಗಳೆಂದು ಕರೆಯಲಾಯಿತು. ವೇದಾಧ್ಯಯನದ ಜ್ಞಾನದೊಂದಿಗೆ ಜಗತ್ತಿನ ಕಲೆ-ಶಿಲ್ಪಕಲೆ ವಾಸ್ತುಶಿಲ್ಪ, ಬೆಳ್ಳಿ-ಚಿನ್ನಾಭರಣ, ಕಬ್ಬಿಣ, ಮರ ಮತ್ತು ಹಿತ್ತಾಳೆ ಲೋಹಗಳಲ್ಲಿ ಕಲೆಯರಳಿಸಿದ ಕುಶಲಗಾರರಿಗೆ 'ಕರ್ಮಮಾರ್ಗಿ'ಗಳೆಂದು ಕುಶಲಕರ್ಮಿ-ವಿಶ್ವಕರ್ಮರೆಂದು ಕರೆಯಲಾಗುತ್ತಿದೆ.

ಕುಶಲಕರ್ಮಿ ವಿಶ್ವಕರ್ಮ ಸಮುದಾಯ ವಿಶ್ವದ ಶ್ರೇಷ್ಠ ಸಮುದಾಯಗಳಲ್ಲಿ ಒಂದು. ಸಮುದಾಯದವರ ಸ್ಥಾನ-ಮಾನವು ಉನ್ನತವಾದುದು. ಇತರರಿಗೆ ಆದರ್ಶವಾದಿಗಳು ಕಾಯಕ ಜೀವಿಗಳು ಕಲೆಯ ಮೂಲಕ ಇಡೀ ವಿಶ್ವದ ಜನತೆಯ ಪ್ರೀತಿ-ವಿಶ್ವಾಸವನ್ನು ಸಮುದಾಯ ಹೊಂದಿದೆ. ಪಂಚಾಳ ಕುಶಲಕರ್ಮಿಗಳ ಇತಿಹಾಸ ನಾಡಿನ ಜನಜೀವನದಲ್ಲಿ, ಶಾಸನಗಳಲ್ಲಿ, ಕಲೆ-ಸಾಹಿತ್ಯದಲ್ಲಿ ಹಾಸು ಹೊಕ್ಕಾಗಿದೆ. ವಿಶ್ವದ ಸೃಷ್ಟಿಕರ್ತ ವಿಶ್ವಕರ್ಮನು ಐದು ಕಸಬಿನ ಕುಶಲಕರ್ಮಿಗಳ ಪಿತಾಮಹ. ಸಿಂಧೂ ಕೊಳ್ಳದ ನಾಗರೀಕತೆಯ ಕಾಲದಿಂದಲೂ ವಿಶ್ವಕರ್ಮ ಕುಶಲಕರ್ಮಿಗಳ ಮೂಲ ಗುರುತಿಸಬಹುದಾಗಿದೆ. ವಿಶ್ವಕರ್ಮನ ಮಕ್ಕಳಾದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞರೆಂದು ಕರೆಯುತ್ತಾರೆ. ದೇವರು ಇವರಿಗೆ ಕ್ರಮವಾಗಿ ಕಬ್ಬಿಣ, ಮರ, ತಾಮ್ರ-ಕಂಚು-ಹಿತ್ತಾಳೆ, ಶಿಲ್ಪ ಮತ್ತು ಚಿನ್ನ ಬೆಳ್ಳಿ ಕಸಬುಗಳ ವಿಕಾಸದ ಜವಾಬ್ದಾರಿಯನ್ನು ನೀಡಿದನೆಂದು ಪುರಾಣಗಳು ತಿಳಿಸುತ್ತವೆ. ವಿಶ್ವಕರ್ಮ ಪುರಾಣದಲ್ಲಿ ವಿಶ್ವಕರ್ಮನೂ ದೇವತೆಗಳ ಪರಮ ಒಡೆಯನೆಂದು ಪರಿಗಣಿಸಲಾಗಿದೆ. ಇದರಿಂದಾಗಿ ವಿಶ್ವಕರ್ಮನ ಅನುಯಾಯಿಗಳಾದ ಕುಶಲಕರ್ಮಿಗಳು ಶೋಡಷ ಆಚರಣೆಗಳಂತಹ ಶಾಸ್ತ್ರ ವಿಧಿಗಳನ್ನು ಅನುಸರಿಸುತ್ತಾರೆ. ಇದು ಪುರಾತನ ಕಾಲದಿಂದಲೂ ಆಚರಿಸಲಾಗುತ್ತಿದೆ.

ಮೂಲ ಸಾಮಾಜಿಕ ಏಣಿ-ಶ್ರೇಣಿಯಲ್ಲಿರುವ ವಿಶ್ವಕರ್ಮ ಕುಶಲಕರ್ಮಿ ಸಮುದಾಯ ಕಾಲಾಂತರದಲ್ಲಿ ಮೂಲವಿದ್ದ ಉನ್ನತ ಶ್ರೇಣಿಯಿಂದ ಕೆಳಮುಖವಾಯಿತು. ಕರ್ಮಮಾರ್ಗದತ್ತ ಸಮುದಾಯ ಹೆಚ್ಚು ಸಮಯ ಕಳೆಯಿತು. ಜ್ಞಾನಮಾರ್ಗದ ಶಾಸ್ತ್ರವಿಧಿಗಳ ಸ್ವಲ್ಪಮಟ್ಟಿಗೆ ಕುಶಲಕರ್ಮಿ ಸಮುದಾಯದಿಂದ ದೂರ ಉಳಿದವು. ರೈತ ಸಮುದಾಯ ಹಾಗೂ ಇತರೆ ಸಮುದಾಯದೊಂದಿಗೆ ಬೆರೆಯತೊಡಗಿದರು. ಕೃಷಿ ಕಾರ್ಯಗಳಿಗೆ ಪೂರಕವಾದ ಉಪಕರಣಗಳನ್ನು ತಯಾರಿಸಿಕೊಡ ಲಾರಂಭಿಸಿದರು. ಕುಶಲಕರ್ಮಿ ಸಮುದಾಯದ ಬದುಕು ರೈತ ಸಮುದಾಯದ ಮೇಲೆ ಅವಲಂಭಿತವಾಯಿತು. ರೈತರಿಂದ 'ಆಯಾ' ಪಡೆಯುವ ಪದ್ಧತಿ ಬೆಳೆದು ಊರಿನ 'ಆಯಗಾರ'ರ ಸಮುದಾಯವೆಂದು ಪರಿಗಣಿಸಲ್ಪಟ್ಟಿತು. ಕರ್ಮಮಾರ್ಗದಿಂದ ಕುಶಲಕರ್ಮಿ- ವಿಶ್ವಕರ್ಮ ಸಮುದಾಯ 'ಆಯಗಾರ'ರಾದರು. ವೇದಾಧ್ಯಯನ, ಶಾಸ್ತ್ರವಿಧಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ ಜ್ಞಾನಮಾರ್ಗಿಗಳು ಬ್ರಾಹ್ಮಣರಾದರು. ಶ್ರಮ ಸಂಸ್ಕೃತಿಯನ್ನು ಪ್ರಧಾನವಾಗಿಟ್ಟುಕೊಂಡು ಕುಶಲಕರ್ಮಿ ಸಮುದಾಯ ವಿಶ್ವಕರ್ಮ ಬ್ರಾಹ್ಮಣ ಸಮುದಾಯವೆಂದು ಗುರುತಿಸಲ್ಪಟ್ಟಿದೆ.

ಶಾಸನಗಳಲ್ಲಿ ಕುಶಲಕರ್ಮಿ ಸಮುದಾಯ ಕರ್ನಾಟಕದ ಕುಶಲಕರ್ಮಿ-ವಿಶ್ವಕರ್ಮ ಸಮುದಾಯದವರ ಕುರಿತಾಗಿ ೧೦೦೦ ವರ್ಷಗಳ ಒಳಗಿನ ಶಾಸನಗಳಲ್ಲಿ ಪ್ರಸ್ತಾಪಗಳು ದೊರೆಯುತ್ತವೆ. ಕಲ್ಯಾಣ ಚಾಲುಕ್ಯ, ಹೊಯ್ಸಳ, ಯಾದವ ಕಾಲದ ಶಾಸನಗಳಲ್ಲಿ ಓಜ, ಕಮ್ಮಾರ, ಅಕ್ಕಸಾಲಿ, ಬಡಗಿಗಳ ಮಾಹಿತಿ ಸಿಗುತ್ತದೆ. ಕ್ರಿ.ಶ. ೧೧೪೮ರ ಶಿರಸಂಗಿ ಶಾಸನದಲ್ಲಿ ಪ್ರಸ್ತಾಪಿಸಿದಂತೆ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕ ಮಲ್ಲನ ಆಳ್ವಿಕೆಯಲ್ಲಿ ಕೇಶಿಮಯ್ಯ ದಂಡನಾಯಕನಾಗಿದ್ದ ಸಂದರ್ಭದಲ್ಲಿ ಶಾಸನ ಕೆತ್ತಿಸಲಾಗಿದೆ. ದೇವಸ್ಥಾನಕ್ಕೆ ಭೂದಾನ ಸ್ವೀಕರಿಸಿದವರು ಸ್ಥಾನಾಚಾರ್ಯ-ರುದ್ರದೇವ ಮತ್ತು ಆತನ ಶಿಷ್ಯವಾಮಶಕ್ತಿ ಹಾಗೂ ಶಾಸನ ಕೆತ್ತಿದ ರೂವಾರಿ ಚಕ್ರವರ್ತಿ ಸುಮತೋಜನ ಹೆಸರುಗಳು ಬಳಸಲ್ಪಟ್ಟಿವೆ. ಈ ಮೂವರು ವಿಶ್ವಕರ್ಮರಾಗಿದ್ದರೆಂದು ಹೇಳಲಾಗುತ್ತಿದೆ. ಆಚಾರ್ಯ, ಓಜ ನಾಮಪದದ ಉತ್ತರ ಪದಗಳು ವಿಶ್ವಕರ್ಮರೆಂದು ಸ್ಪಷ್ಟಪಡಿಸುತ್ತವೆ.

ಕ್ರಿಶ ೧೧೮೬ರ ಮತ್ತೊಂದು ಶಿರಸಂಗಿ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ೧೪ನೇ ಸೋಮೇಶ್ವರನ ಆಳ್ವಿಕೆಗೆ ಒಳಪಟ್ಟ ಸ್ಥಳೀಯ ನಾಯಕ ಹಬ್ಬೆನಾಯಕನ ವರ್ಣನೆಯೊಂದಿಗೆ ಸ್ಥಾನಾಚಾರ್ಯ ವಾಮಶಕ್ತಿ ಮತ್ತು ಶಾಸನವನ್ನು ರೂವಾರಿ ಚಕ್ರವರ್ತಿ ಚಂಡೋಜನ ಮೊಮ್ಮಗ ಸಾತೋಜನು ಕೆತ್ತಿದನೆಂದು ಪ್ರಸ್ತಾಪಿಸಲಾಗಿದೆ. ಸಾತೋಜನ ಅಜ್ಜ ಚಂಡೋಜನ ಹೆಸರು ಪ್ರಸ್ತಾಪಿಸಲ್ಪಟ್ಟಿದೆ.

ಕ್ರಿ.ಶ. ೧೧೩೪ರ ಧಾರವಾಡ ಸಮೀಪದ ಮತ್ತೂರ ಶಾಸನದಲ್ಲಿ ವಿವರಿಸಿದಂತೆ ಮತ್ತೂರಿನ ಕಮ್ಮಾರ ಮಾಚನ ಸಾಹಸದ ವಿಷಯ ಬರುತ್ತದೆ. ಕಮ್ಮನವಳ್ಳಿಯ ಜಕ್ಕಿ ಶೆಟ್ಟಿಯು ಮತ್ತೂರಿನ

ಮೇಲೆ ದಾಳಿ ಮಾಡಿ ಅಪಹರಿಸಲು ಸಂಚು ಹೂಡಿದಾಗ ಗ್ರಾಮದ ಕಮ್ಮಾರ ಮಾಚನು ಜಕ್ಕಿ ಶೆಟ್ಟಿಯೊಂದಿಗೆ ಹೋರಾಡಿ ಅನ್ಯಹೆಣ್ಣುಗಳ ಮೇಲೆ ಕಣ್ಣಿಟ್ಟವರ ಗತಿ ಏನು? ಎಂಬುದನ್ನು ಶೆಟ್ಟಿಯನ್ನು ಕೊಲ್ಲುವುದರ ಮೂಲಕ ಕಮ್ಮಾರ ಮಾಚ ಪರನಾರಿ ಸಹೋದರತ್ವ ತೋರುತ್ತಾನೆ. ಹಾಗೆಯೇ ಹೋರಾಟದಲ್ಲಿ ತಾನು ಅಸುನೀಗಿ ವೀರಯೋಧತನವನ್ನು ನಾಡಿಗೆ ತೋರಿಸಿಕೊಡುತ್ತಾನೆ. ಈ ಕಾರಣವಾಗಿ ಮಾಚನ ಅಣ್ಣನಿಗೆ ಗ್ರಾಮದ ಜಕ್ಕಿಗೌಡ, ಕಂಕಗೌಡ ಮೊದಲಾದವರು ೨೨ ಕಮ್ಮ ಭೂಮಿ ಮತ್ತು ೫೦ ಕಮ್ಮ ಹಕ್ಕಲನ್ನು ದಾನ ನೀಡಿದ ವಿಷಯ ತಿಳಿದುಬರುತ್ತದೆ.

ಕ್ರಿ.ಶ. ೧೧೮೫ರ ಲಕ್ಕುಂಡಿ ಶಾಸನದಲ್ಲಿ ಪಾಂಚಾಳ ಕುಶಲಕರ್ಮಿಗಳ ಕುರಿತಾಗಿ ಹಲವು ವಿವರಗಳು ದೊರೆಯುತ್ತವೆ. ಗ್ರಾಮದಲ್ಲಿ ಪಾಂಚಾಳರ ಒಂದು ಸಂಘ ಇದ್ದಿತೆಂದು ತಿಳಿಸುತ್ತ. "ಅಲ್ಲಿಯ ನೂರಿಪ್ಪತ್ತು ಶಿಲ್ಪಿಗಳಲ್ಲಿ ಅಚ್ಚಿನ ಮೊಳೆಯವರು ಬೆಳ್ಳಿ ಗಮ್ಮಟದವರು, ಬಡಿಗ, ಕಮ್ಮಾರರು"[೩೫] ಇದ್ದರು ಎಂಬುದನ್ನು ತಿಳಿಸುತ್ತದೆ. ಕ್ರಿ.ಶ. ೧೧೫೨ರ ಧಾರವಾಡ ಸಮೀಪದ ಶಾಸನದಲ್ಲಿ "ಕಮ್ಮಾರ ಗಳಯಾನೆಂಬ ಮಹಾಯೋಧನು ಯುದ್ಧದಲ್ಲಿ ಹೋರಾಡಿ ಸ್ವರ್ಗವೇರಿದನೆಂದು ಹೇಳಿದೆ"[೩೬] ಕುಶಲಕರ್ಮಿಗಳು ಕೇವಲ ಖಡ್ಗ ತಯಾರಕರಷ್ಟೇ ಅಲ್ಲ. ಪ್ರಾಸಂಗೀಕವಾಗಿ ತಯಾರಿಸಿದ ಖಡ್ಗ ಹಿಡಿದು ಯುದ್ಧದಲ್ಲಿ ಹೋರಾಡಿದ ಸಂಗತಿ ತಿಳಿದುಬರುತ್ತದೆ.

ಕ್ರಿ.ಶ.೧೧೮೯ರ ಗದಗ ಸಮೀಪದ ಹೊಂಬಳದಲ್ಲಿಯ ಶಾಸನದಲ್ಲಿ ಉಲ್ಲೇಖಿಸಿದಂತೆ "ಕಂಚಗಾರ ದೇವರ ಉಪಕರಣಗಳೆಲ್ಲವುಂ ಕೂಲಿಯಂ ಕೊಳ್ಳದೆ ಮಾಡಿ ಕೊಡುವಂತಾಗಿ ಬಿಟ್ಟರು"[೩೭] ಎಂದಿದೆ. ಕುಶಲಕರ್ಮಿಗಳಿಗೆ ತಾವು ಉತ್ಪಾದಿಸುವ ವಸ್ತುವಿನ ಬಗ್ಗೆ ಕಾಳಜಿಯಿದೆ. ಕೂಲಿಯ ಬಗ್ಗೆ ಯಾವ ವಿಚಾರಗಳನ್ನು ಮಾಡದ ನಿಸ್ವಾರ್ಥಿಗಳಾಗಿದ್ದಾರೆಂಬುದು ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೧೨ನೇ ಶತಮಾನದ ಹುಬ್ಬಳ್ಳಿ ಸಮೀಪದ ಮಂಟೂರು ಗ್ರಾಮದಲ್ಲಿ ದೊರೆತ ಹೊಯ್ಸಳ ೨ನೇ ವೀರ ಬಲ್ಲಾಳನ ತಾಮ್ರ ಪಟದಲ್ಲಿರುವಂತೆ "ಹಿಟ್ಟಿನ ಕಮ್ಮಾರ ದೇವೋಜ ಮತ್ತು ಹಿಟ್ಟಿನ ಅಕ್ಕಸಾಲೆ ಪಾರಿಸೋಜ ಇವರುಗಳಿಗೆ ಭೂಮಿಯನ್ನು ಕೊಟ್ಟ ಉಲ್ಲೇಖಗಳು ದೊರೆಯುತ್ತದೆ"[೩೮] ಹಿಟ್ಟಕಾರಿ ಬಡಗಿ ಹಿರೋಜನ ಪ್ರಸ್ತಾಪವು ಬರುತ್ತದೆ. ಕ್ರಿ.ಶ. ೧೨೦೫ರ ಗದಗ ಸಮೀಪದ ನಾಗಾವಿ ಶಾಸನದಲ್ಲಿ ಗ್ರಾಮದ ಮಹಾಬಳೇಶ್ವರ ದೇವರಿಗೆ ದುಡಿದ ಆದಾಯವನ್ನು ದೇವಸ್ಥಾನಕ್ಕೆ ದಾನವಾಗಿ ನೀಡಿದ ಪ್ರಸ್ತಾಪವಿದೆ. "ಕಮ್ಮಾರ ಬೋಮ್ಮಜನು ತನ್ನ ಕಮತದ ಕೆಲಸದಿಂದ ಬಂದ ಆದಾಯವನ್ನು ದಾನವಾಗಿ ಇದನ್ನು ಊರ ಗೌಡ ಮತ್ತು ಸಮಸ್ತ ಪ್ರಜೆಗಳು ಕಾಪಾಡಬೇಕೆಂದು ಹೇಳಿದೆ"[೩೯]

ಕ್ರಿ.ಶ.೧೨ ಶತಮಾನದ ಹಾವೇರಿ ಸಮೀಪದ ದೇವಿ ಹೊಸೂರು ಗ್ರಾಮದ ವೀರಗಲ್ಲು ಶಾಸನದಲ್ಲಿ ಪ್ರಸ್ತಾಪಿತವಾದ "ಸರ್ವನಮಸ್ಯದನಾದಿಯಗ್ರಹಾರಂದೆಯ್ವದ ಪೊಸವೊರಂ ಶ್ರೀ ಮನ್ಮಹಾಮಂಡಳೇಶ್ವರಂ ಕೀರ್ತಿ ದೇವರಸನಿಟಿದು ತಟುವ ಕೊಂಡಹೋಹಲ್ಲಿ ಅಕ್ಕಸಾಲಿ ದಾಸೋಜಂ

ಮಾಚಿಯಂ ತಿದಿರ್ಚ್ಛಿಕಾದಿ ಶ್ರೀ ಸಾಸಿರ್ವ್ವರ ಶ್ರೀಪಾದ ಶರಣೆಂದು ಸುರಲೋಕ ಪ್ರಾಪ್ತನಾದ"[೮೦] ಉಲ್ಲೇಖವಿದೆ. ಕೀರ್ತಿ ದೇವರಸನು ದೇವಿ ಹೊಸೂರಿಗೆ ಮುತ್ತಿಗೆ ಹಾಕಿ ಅಲ್ಲಿಯ ಗೋವುಗಳನ್ನು ಒಯ್ಯುವಾಗ ಗ್ರಾಮದ ಅಕ್ಕಸಾಲಿ ದಾಸೋಜನು ಅರಸನೊಂದಿಗೆ ಹೋರಾಡಿ ವೀರಸ್ವರ್ಗ ಪಡೆದ ಸ್ಮರಣೆಗಾಗಿ ವೀರಗಲ್ಲು ಹಾಕಿಸಲಾಗಿದೆ.

ಕುಶಲಕರ್ಮಿ ವಿಶ್ವಕರ್ಮ ಸಮುದಾಯದವರು ಶ್ರಮಜೀವಿಗಳು, ದಾನಿಗಳು, ವೀರಯೋಧರು, ಊರಿನ ಪ್ರಮುಖರಾಗಿದ್ದರೆಂಬುದನ್ನು ಶಾಸನಗಳು ಹೇಳಿಕೊಡುತ್ತವೆ. ಇಲ್ಲಿ ಪ್ರಾತಿನಿಧಿಕವಾಗಿ ಕೆಲವು ಶಾಸನಗಳನ್ನು ಪ್ರಸ್ತಾಪಿಸಲಾಗಿದೆ.

ಜನಪದರು ಮತ್ತು ಕುಶಲಕರ್ಮಿ ಸಮುದಾಯ

ಭಾರತದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕುಶಲಕರ್ಮಿಗಳು ಜನರ ಸೇವೆ ಸಲ್ಲಿಸುತ್ತ, ಊರಿನ 'ಆಯಗಾರ'ರಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಪಂಚಾಳ ಕುಶಲಕರ್ಮಿಗಳು ನಿತ್ಯವೂ ರೈತ ಸಮುದಾಯದ ಕೃಷಿ ಉಪಕರಣಗಳನ್ನು ತಯಾರಿಸಿ ಕೊಡುತ್ತಿದ್ದರು. ರೈತ ಸಮುದಾಯಕ್ಕೆ ಕುಶಲಕರ್ಮಿಗಳು ಮನೆಯ ಮಕ್ಕಳಂತೆ, ನೋವು-ನಲಿವು, ಸುಖ-ದುಃಖ, ಜಾತ್ರೆ-ಉತ್ಸವ, ಹಬ್ಬ-ಹರಿದಿನಗಳಲ್ಲಿ ಒಂದಾಗಿರುತ್ತಿದ್ದರು. ಕರಕುಶಲ ಕಲೆಗಾರರಾದ ಪಂಚಾಳ ಕುಶಲಕರ್ಮಿಗಳು ಗ್ರಾಮೀಣರ ಜೀವ ನಾಡಿಗಳಾಗಿದ್ದಾರೆ. ಕಲೆಗಾರಿಕೆಗೆ ಹೆಸರು ವಾಸಿಯಾದ ಸಮುದಾಯವು ಬಯಲಾಟ, ಗೀಗೀ, ಭಜನೆ- ಕೀರ್ತನೆ ಮುಂತಾದ ಕಲೆಗಳ ಮೂಲಕ ಜನಪದರ ಮನಸ್ಸುಗಳಲ್ಲಿ ಬೇರೂರಿದ್ದಾರೆ. ಗುಡಿ-ಗೋಪುರ, ಚಿನ್ನ-ಬೆಳ್ಳಿ ಆಭರಣ, ಕಂಚು-ತಾಮ್ರ ಹಿತ್ತಾಳೆ ವಸ್ತುಗಳನ್ನು ತಯಾರಿಸಿ ಕೊಡುತ್ತಿದ್ದುದನ್ನು ಜನಪದರು ಕಥೆ-ಕಾವ್ಯಗಳಲ್ಲಿ, ಮೌಖಿಕ ಪರಂಪರೆಯಲ್ಲಿ ಕುಶಲಕರ್ಮಿ ಸಮುದಾಯದ ಸಮಗ್ರ ಇತಿಹಾಸವನ್ನು ಕಟ್ಟಿದ್ದಾರೆ.

ಹೊಲ ಗದ್ದೆಗಳಲ್ಲಿ ನಿತ್ಯವು ದುಡಿವ ರೈತ ಸಮುದಾಯ, ಕೃಷಿ ಚಟುವಟಿಕೆಗಳಿಗೆ ಕುಶಲಕರ್ಮಿ ಸಮುದಾಯವನ್ನು ಅವಲಂಭಿಸಿದೆ. ಆಕಾಶದಲ್ಲಿ ಮೋಡಗಳು ಕಟ್ಟುತ್ತಿರುವಂತೆ ಒಂದೊಂದು ಹನಿ ಭೂಮಿಗೆ ಉದುರುತ್ತಿರುವಂತೆ, ರೈತರು ಬಡಿಗ ಸಾಲಿ. ಕಂಬಾರ ಸಾಲಿಯ ಕಡೆ ಮುಖಮಾಡುತ್ತಾರೆ. ಕುಶಲಕರ್ಮಿಯು ಹೊತ್ತೊತ್ತಿಗೆ ಕೃಷಿ ಉಪಕರಣಗಳನ್ನು ತಯಾರಿಸಿಕೊಡುತ್ತಾನೆ. ಸಮಯಕ್ಕೆ ಸರಿಯಾಗಿ ಉಪಕರಣಗಳನ್ನು ತಯಾರಿಸಿಕೊಟ್ಟ ಕುಶಲಕರ್ಮಿ ಸಮುದಾಯವನ್ನು ರೈತರು ಕೃತಜ್ಞತೆಯ ಭಾವದಿಂದ ನೆನೆಯುವ ಪರಿಯನ್ನು ಜನಪದರು ಸೊಗಸಾಗಿ ಹಾಡಿದ್ದಾರೆ.

"ಕಡಗೋಲು ಕುಡಗೋಲು ಸೆಡ್ಡಿಮಂಡೆಯ ಕೋಲು
ಬಡಗಿ ಬ್ಯಾಕೋಲು ಬಾರ್ಕೋಲು/ ಊರ್ಗೋಲು

ಚಿತ್ರದಕೋಲು ರಾಘೋಲು/ ಮತ್ಯಾರ ಮಾಡ್ಯಾರ

ಚಿತ್ತಾರದ ಬಡಿಗ ಪದುಮಣ್ಣ/ ಮಾಡಿರುವ ಚಿತ್ರ ರಾಘೋಲು ಎಳಿಲ್ಯಾಕೋ"

ಕುಶಲಕರ್ಮಿ ರೈತನಿಗೆ ಮಜ್ಜಿಗೆ ಕಡೆಯಲು ಕಡಗೋಲು ಕಸ ತೆಗೆಯಲು ಕುಡಗೋಲು, ಬಿತ್ತನೆಗೆ ಸೆಡ್ಡಿ ಮಂಡೆಕೋಲು ಕಬ್ಯಾಕೋಲು, ಬಾರಕೋಲು, ಊರುವಕೋಲು, ಸುಂದರವಾಗಿ ಚಿತ್ರ ಚಿತ್ರಿಸಿದ ರಾಘೋಲು ದಿಂಡು ಮುಂತಾದ ಕೃಷಿ ಹಾಗೂ ಗೃಹಬಳಕೆಗೆ ಅವಶ್ಯಕವಾಗಿರುವ ಉಪಕರಣಗಳನ್ನು ತಯಾರಿಸಿಕೊಟ್ಟ ಕುಶಲಕರ್ಮಿಯನ್ನು ಮನದುಂಬಿ ನೆನೆಯುವ ಧರ್ಮ ನೇಗಿಲಯೋಗಿಗೆ ಇದೆ. ಪ್ರತಿಫಲಾಪೇಕ್ಷೆ ಬಯಸದೇ ದುಡಿವ ಧರ್ಮ ಕುಶಲಕರ್ಮಿ ಸಮುದಾಯ ದಾಗಿದೆ.

ಜನಪದರಲ್ಲಿ ಕುಶಲಕರ್ಮಿ ಎಂತಹ ಶಕ್ತಿವಂತ ಎಂಬುದನ್ನು ತಿಳಿಸಲು ಭೂಮಿ ಹೊತ್ತವರ ಕುರಿತು ಚರ್ಚೆ ನಡೆಯುತ್ತದೆ. ಭೂಮಿ ಹೊತ್ತವನು ಯಾರೆಂದು ಪ್ರಶ್ನಿಸುತ್ತ ಕುರುಬ, ಕುಶಲಕರ್ಮಿ, ಒಕ್ಕಲಿಗ ಕೊನೆಗೆ ಬಸವ (ಎತ್ತು) ಸಮರ್ಥರು ಎಂದು ಹೇಳುವ ಜನಪದರು.

"ಕುರುಬ ಕೂರಿಗೆ ಹೊತ್ತ ಬಡಿಗ್ಯಾ ಬಾಚಿ ಹೊತ್ತ

ಒಕ್ಕಲಿಗ ಹೊತ್ತ ಕುಡಮಿಣಿಯ/ ಬಾರಕೋಲ

ಬಸವಣ್ಣ ಹೊತ್ತ ಭೂಮಿ ತಾಯೆ ॥

ಕುರುಬ ಕುಶಲಕರ್ಮಿ, ಒಕ್ಕಲಿಗರು ಹಾಗೂ ರೈತನ ಮಿತ್ರ ಎತ್ತುಗಳು ಸರ್ವಶ್ರೇಷ್ಠವಾದವು ಎಂದು ಹಾಡಿ ಬಡಿಗನ ಬಾಚಿಯ ಪ್ರಸ್ತಾಪ ಮಾಡುತ್ತಾರೆ. 'ಬಾಚಿ ಇಲ್ಲದ ಬಡಿಗನಿಲ್ಲ' ಎಂಬ ಮಾತು ಸರ್ವಕಾಲಿಕವಾಗಿತ್ತು. ಆದರೆ ಈಗ ಬಾಚಿ ಬಳಕೆ ಕಡಿಮೆಯಾಗುತ್ತಿದೆ.

ರೈತ ಸಮುದಾಯದ ಕೃಷಿ ಚಟುವಟಿಕೆ ಆರಂಭವಾಗುವುದೇ ಮುಂಗಾರು ಮಳೆಯಿಂದ. ರೋಹಿಣಿ ಮಳೆ ಆರಂಭಗೊಳ್ಳುತ್ತಿದ್ದಂತೆ ಕುಶಲಕರ್ಮಿಗಳ ಬಡಿಗಸಾಲಿ, ಕಂಬಾರ ಸಾಲಿಗೆ ಎಡತಾಕುವ ಪರಿಯನ್ನು ಜನಪದರು ಅರ್ಥಗರ್ಭಿತವಾಗಿ ಹೇಳಿದ್ದಾರೆ.

"ರೋಣಿ ಮಿರುಗದ ಮಳೆ ಬಿದ್ದು ಭೂಮಿಮ್ಯಾಲೆ

ಎದ್ದಾನು ಒಕ್ಕಲಿಗ ಬೆಳತಾನ/ ಕೂರಿಗೆಕುಂಟೆ

ಬಿದ್ದಾವು ಬಡಿಗೇರ ಮನಿಮುಂದ

ಕೂರಿಗೆ, ಕುಂಟೆ, ತಾಳ, ಮೇಳಿಗಳನ್ನು ಕುಶಲಕರ್ಮಿ ಬಾಚಿಯಿಂದ ಕೆತ್ತಿ ಹಾಸಿದಾಗ ರೈತರು ಬಿತ್ತನೆ ಆರಂಭಿಸುತ್ತಾರೆ.

ಕುಶಲಕರ್ಮಿಗಳ ಕಸಬಿನ ಪದಗಳನ್ನು ಕಟ್ಟಿಕೊಟ್ಟ ಡಾ. ಎಸ್.ಎಸ್. ಅಂಗಡಿ ಅವರು ಬಡಿಗೇರರ ಕುರಿತು 'ಬಡಗಿ ವೃತ್ತಿಪದ ಮಂಜರಿ'ಯಲ್ಲಿ ಮಾರ್ಮಿಕವಾಗಿ ಚರ್ಚೆಮಾಡಿದ್ದಾರೆ. ಕುಶಲಕರ್ಮಿಗಳು ಶ್ರಮ ಸಂಸ್ಕೃತಿಯ ಪ್ರತೀಕ ರೈತರ ಪ್ರತಿಯೊಂದು ಉಪಕರಣಗಳನ್ನು ವರ್ಷದುದ್ದಕ್ಕೂ ತಯಾರಿಸಿಕೊಡುತ್ತಾರೆ ಎಂಬ ಅಭಿಪ್ರಾಯದ ಧ್ವನಿ ಡಾ. ಅಂಗಡಿಯವರದ್ದಾಗಿದೆ. ರೈತ ಸಮುದಾಯ ಕುಶಲಕರ್ಮಿಗಳನ್ನು ಸ್ಮರಿಸಿ ಧನ್ಯತಾ ಭಾವ ಸಮರ್ಪಿಸುವ ರೀತಿ ಹೀಗಿದೆ.

"ಯರಝುರವಿ ಬಡಿಗ್ಯಾನ ಬೇಗಾನೆ ಬರಹೇಳಿ
ಭಾರೀಯ ಉಳಿಬಾಚಿ ಸಹವಾಗಿ/ ದ್ಯಾಮಣ್ಣ
ಬಾರಿಯ ತೇರ ಕಡೆದಾರು ॥
ಬೂದಿಗೊಪ್ಪ ಬಡಿಗ್ಯಾನ ತಟ್ಟನೆ ಬರಹೇಳಿ
ಕಟ್ಟೆ ಉಳಿಬಾಚಿ ಸಹವಾಗಿ/ ಶ್ಯಾಸಪ್ಪ
ಭಾರೀಯ ತೇರು ಕಡಿದಾರು ॥
ಬಡಿಗ್ಯಾನ ಬಂದವನ ಬಿಡಿವಾರ ನೋಡಿರೆ
ಬಡಬಾಯಿ ತುಂಬ ಎಲಿ ಅಡಕೆ/ ಹಣೆಮ್ಯಾಲ
ಬಂಡಿಗಾಲಿಂಥ ಕುಂಕುಮ ॥
ಬಡಿಗ್ಯಾರ ಓಣ್ಯಾಗ ಸೆಡಗೀನ್ನೇನ್ಹೇಳಲಿ
ಬಿಳಿಯಂಗಿ ಬೆಳ್ಳಿ ಉಡದಾರ/ ಹಾಕ್ಕೊಂಡು
ಬಡಿಗಣ್ಣ ಸೆಡ್ಡೆ ಬಿಗಿದಾನೋ ॥
ಉಕ್ಕಿನ ಉಳಿಬಾಚಿ ಹತ್ತೆಳೆಯ ಜನಿವಾರ
ಮುತ್ತ ಸುರದಂಗ ಬೆವತನ/ ಮಾನಪ್ಪ
ಅಚ್ಚ ಬಡಿಗ್ಯಾನ ಮಗನವ್ವ ॥
ಜಾಲಿಯ ಗಿಡಕಡಿದ ಮಾರುದ್ದ ನಗಾ ಮಾಡಿ
ಯರಗಟ್ಟಿ ಬಡಿಗ್ಯಾ ಮಾಡ್ಯಾಣ/ ನಗಾ ನೋಡಿ
ಮಂದಿ ಹೌಹಾರಿ ನಿಂತಾರೊ ॥"[೪೧]

ಮಳೆಗಾಲದ ಸಂದರ್ಭದಲ್ಲಿ ಕುಶಲಕರ್ಮಿಗಳಿಗೆ ಯಾವುದಕ್ಕೂ ಪುರಸೊತ್ತು ಇರುವುದಿಲ್ಲ. ಕೃಷಿ ಚಟುವಟಿಕೆಗಳನ್ನು ತೀವ್ರಗೊಳಿಸಿದ ರೈತರಿಗೆ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವಲ್ಲಿ

ಮಗ್ನನಾಗಿರುತ್ತಾನೆ. ಕೆಲಸದ ಒತ್ತಡ ಎಷ್ಟೇ ಇದ್ದರೂ ತನ್ನ ಉಡುಗೆ– ತೊಡುಗೆ; ರೀತಿ ರೀವಾಜುಗಳಲ್ಲಿ ಭರ್ಜರಿಯಾಗಿರುತ್ತಾನೆ. ಯರಝುರವಿ ಬಡಿಗನ ಮೂಲಕ ಒಟ್ಟು ಕುಶಲಕರ್ಮಿ ಸಮುದಾಯದ ಬದುಕಿನ ಚಿತ್ರಣವನ್ನು ಜನಪದರು ಕಟ್ಟಿದ್ದಾರೆ.

ಬಿತ್ತನೆ ಮಾಡಿ ಬೆಳೆ ತೆಗೆದು ರಾಶಿ ಮಾಡುವಷ್ಟರಲ್ಲಿ ಬೇಸಿಗೆ ಬಂದಿರುತ್ತದೆ. ಊರಿನಲ್ಲಿ ಜಾತ್ರೆ– ಉತ್ಸವಗಳು ಹಳ್ಳಿಗರಲ್ಲಿ ಹುರುಪು ತುಂಬುತ್ತವೆ. ತೇರಿನ ಜಾತ್ರೆಗೆ ಬಂದಾಗ ಕಳಶದ ಭದ್ರತೆ ಕುರಿತು ಜನಪದರು

"ಊರ ತೇರ ಮ್ಯಾಲಿನ ಕಳಸ
ಯಾರಹಿಡಿದಾರಣ್ಣ/ ಗಟ್ಟ್ಯಾಳ ಬಡಿಗ ಭೀ
ಮರಾಯನ ಶಿಷ್ಯ ಕಂಬಾರ ನಾಗಪ್ಪ ಹಿಡಿದಾನಣ್ಣ ॥

ತೇರಿನ ಕಳಶವನ್ನು ಗಟ್ಟಿಯಾಗಿ ಹಿಡಿದ ಗಟ್ಟ್ಯಾಳ ಬಡಿಗನ ಕುರಿತಾಗಿ ಜನಪದರು ಹಾಡು ಕಟ್ಟಿದ್ದಾರೆ.

ಸಾಹಿತ್ಯದಲ್ಲಿ ಕುಶಲಕರ್ಮಿ–ವಿಶ್ವಕರ್ಮ ಸಮುದಾಯ

ಸಾಹಿತ್ಯ ಒಂದು ಧರ್ಮದ ಜೀವಾಳ ವೇದ ಆಗಮ ಉಪನಿಷತ್ತು ಶಾಸ್ತ್ರ– ಪುರಾಣಾದಿ ಧರ್ಮಸ್ಮೃತಿಗಳು ಸಾಹಿತ್ಯವನ್ನು ಅವಲಂಭಿಸಿವೆ. ರಾಮಾಯಣ– ಮಹಾಭಾರತ ಭಾರತೀಯರ ಸಾಂಸ್ಕೃತಿಕ ಜೀವನಾಡಿಗಳಾಗಿವೆ. ಈ ಎಲ್ಲ ಸಾಹಿತ್ಯ ಕೃತಿಗಳಲ್ಲಿ ವಿಶ್ವಕರ್ಮ ಕುಶಲಕರ್ಮಿಗಳ ಬಗೆಗೆ ಅಲ್ಲಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಋಗ್ವೇದ ಮತ್ತು ಯಜುರ್ವೇಧಗಳಲ್ಲಿ ಬರುವ ವಿಶ್ವಕರ್ಮ ಸೂಕ್ತದಲ್ಲಿ ವಿಶ್ವಕರ್ಮನು ಪರಬ್ರಹ್ಮನೆಂದು ಹೇಳಿದೆ. "ಯ ಇಮಾವಿಶ್ವಾ ಭುವನಾನಿ ಜುಹ್ವ ದೃಷ್ಠಿ ಹೋರ್ತಾನ್ಯಸೀದತ್ವತಾನಃ। ಸ ಆಶಿಷಾ ದ್ರವಿಣ ಮಿಚ್ಛಮಾನಃ ಪ್ರಥಮಚ್ಛೆದವರಾ ಆವಿವೇಶ"॥ ಲೋಕದ ಸರ್ವಜ್ಞಾನಿ, ಹೋಮ ಸಂಪಾದಕನಾದ ವಿಶ್ವಕರ್ಮನು ಯಜ್ಞರೂಪದಿಂದ ಸರ್ವಲೋಕವನ್ನು ನಿರ್ಮಿಸಿ ಜಗತ್ತಿಗೆ ಅರ್ಪಿಸಿದವನು. ಮನಕುಲ ಸೃಷ್ಟಿಕಾರನಾದ ವಿಶ್ವಕರ್ಮನು ಸತ್ಪಾತ್ರ ಧನ ಸ್ವೀಕರಿಸಿ, ಅಗ್ನಿ ರೂಪದಲ್ಲಿ ಜೀವರಾಶಿಗಳ ಶರೀರವನ್ನು ಪ್ರವೇಶಿಸಿದವನು ವಿಶ್ವಕರ್ಮನಾಗಿದ್ದಾನೆಂದು ಹೇಳುತ್ತದೆ.

ಶ್ವೇತಾಶ್ವತರ ಉಪನಿಷತ್ತಿನಲ್ಲಿ "ಏಷ ದೇವೋ ವಿಶ್ವಕರ್ಮ" ಅಂದರೆ ಇವನೇ ದೇವ ವಿಶ್ವಕರ್ಮನಾಗಿದ್ದು ಇವನು ಮಹಾತ್ಮ ಸರ್ವರ ಹೃದಯದಲ್ಲಿ ವಾಸವಾಗಿರುವ ಪರಮಾತ್ಮನಾಗಿದ್ದಾನೆ ಎಂದು ಹೇಳಿದೆ. ವಿಷ್ಣು, ಶಿವ, ಇಂದ್ರ, ಅಗ್ನಿ, ವರುಣ ಮೊದಲಾದ ದೇವತೆಗಳಿಂತ ಮೊದಲು ವಿಶ್ವಕರ್ಮನಿಗೆ ಯಾಗದ ಹವಿಸ್ಸನ್ನು ಅರ್ಪಿಸಲಾಗುತ್ತಿತ್ತು.

ವಿಶ್ವಕರ್ಮ ಸಮುದಾಯದ ಪ್ರವರ್ತಕನಾದ ವಿಶ್ವಕರ್ಮನು ಜಗತ್ ಸೃಷ್ಟಿಕರ್ತನಷ್ಟೇ ಅಲ್ಲ! ಪ್ರಥಮಯಜ್ಞ ಕರ್ತನು, ಪ್ರಥಮ ಧರ್ಮದರ್ಶಿಯು, ಜಗದ ಆಚಾರ್ಯನೂ, ಜಗದ್ಗುರುವು ಆಗಿದ್ದಾನೆಂದು ಋಗ್ವೇದ ಸಂಹಿತೆಯ ದಶಮಂಡಲದ ೮೧ ಮತ್ತು ೮೨ ನೇ ಸೂಕ್ತಗಳ ಹದಿನಾಲ್ಕು ಮಂತ್ರಗಳಲ್ಲಿ ಉಕ್ತವಾಗಿದೆ. ವಿಶ್ವಕರ್ಮನು ದೇವಾನು ದೇವತೆಗಳಿಗೆ ಆಚಾರ್ಯನಾಗಿದ್ದನು. ಈಗಲೂ ವಿಶ್ವಕರ್ಮರು ಗ್ರಾಮದೇವತೆಗಳ ಆಚಾರ್ಯ ಪೂಜಾರಿಗಳಾಗಿದ್ದಾರೆ. 'ವಿಶ್ವಕರ್ಮ ಪುರಾಣ'ದಲ್ಲಿ 'ಸ್ವಯಂಭು ಎಂದು ಕರೆದರೆ, 'ಮೂಲಸ್ಥಂಭ ಪುರಾಣ'ದಲ್ಲಿ ಅಮರ ಸಿಂಹನು ವಿಶ್ವಕರ್ಮರ ವೇದೋಕ್ತ ಶಾಸ್ತ್ರ ವಿಧಿಗಳ ಸಂಪ್ರದಾಯಗಳ ಮತ್ತು ನೈಜ ಬ್ರಾಹ್ಮಣರೆಂದು ಹೇಳಿದ್ದಾನೆ. ಎ.ಇ. ರಾಬರ್ಟ್ಸ್ ಅವರ ಪ್ರಕಾರ ಈ ಪುರಾಣವು ವಿಶ್ವಕರ್ಮ ಕುಶಲಕರ್ಮಿ ಸಮುದಾಯದ ಶಾಸ್ತ್ರ ವಿಧಿಗಳು ಮತ್ತು ಅವರ ಸಾಮಾಜಿಕ ಸ್ಥಾನ-ಮಾನಗಳನ್ನು ವಿವರಿಸುವ ಪ್ರಾಚೀನ ದಾಖಲೆ ಎಂದು ಅಭಿಪ್ರಾಯಿಸಿದ್ದಾರೆ.

ವಿನ್‌ಸ್ಲೊ ನಿಘಂಟಿನಲ್ಲಿ ಜಗದ್ಗುರು- ಲೋಕಗುರು ಈ ವಿಶೇಷ ಅಭಿದಾನಕ್ಕೆ ವಿಶ್ವಕರ್ಮಕುಶಲ ಕರ್ಮಿಗಳು ಪಾತ್ರರು ಎಂದಿದೆ. 'ಶಂಕರ ವಿಜಯ' ಗ್ರಂಥದಲ್ಲಿ

ಆಚಾರ್ಯೋ ಶಂಕರನಾಮ/ತ್ವಷ್ಟ್ರಪುತ್ರೋನ ಸಂಶಯಃ॥

ವಿಪ್ರಕುಲ ಗುರುದೀಕ್ಷಾ/ವಿಶ್ವಕರ್ಮಾಂತು ಬ್ರಾಹ್ಮಣಃ॥

"ನನ್ನ ಹೆಸರು ಶಂಕರಾಚಾರ್ಯ ನಾನು ತ್ವಷ್ಟ್ರವಿನ ಮಗ ವಿಪ್ರರಿಗೆ ನಾನು ಪವಿತ್ರ ಯಜ್ಞೋಪವೀತಧಾರಣ ವಿಧಿಗಳನ್ನು ಬೋಧಿಸಲು ಬಂದಿದ್ದೇನೆ. ನಾನು ವಿಶ್ವಕರ್ಮಕುಲೋತ್ಪನ್ನ ಬ್ರಾಹ್ಮಣ"[೮೨] ಎಂದು ಹೇಳಲಾಗಿದೆ. ವಿಶ್ವಕರ್ಮನು ಜಗತ್ತಿನ ಸೃಷ್ಟಿಕರ್ತನಾಗಿದ್ದು, ಜಗದ್ಗುರುವಾಗಿದ್ದಾನೆ. ಈತನ ಅನುಯಾಯಿಗಳು ಉನ್ನತ ಗುಣಹೊಂದಿದ ಕಾಯಕಯೋಗಿಗಳಾಗಿದ್ದಾರೆ.

೧೦ನೇ ಶತಮಾನದ ಮಹಾಕವಿ ಪಂಪ-ರನ್ನರ ಕಾವ್ಯಗಳಲ್ಲಿ 'ಕಮ್ಮಯೋಜ' ಪದ ಸಿಗುತ್ತದೆ. 'ಅಭಿನವಾಭಿ ದಾನಂ' ಗ್ರಂಥದಲ್ಲಿ "ಕಮ್ಮಾರರು ತಯಾರಿಸುತ್ತಿದ್ದ ಬಾಣಗಳು ಮುಂತಾದವುಗಳ ಬಗ್ಗೆ ಉಲ್ಲೇಖ ದೊರೆಯುತ್ತದೆ"[೮೩] ಯುದ್ಧದಲ್ಲಿ ವೈರಿಗಳನ್ನು ಗೆಲ್ಲಲು ರಾಜನಿಗೆ ಸೈನಿಕರಿಗೆ ಬಾಣಗಳು ಅತ್ಯಂತ ಅವಶ್ಯವಾಗಿದ್ದವು. ಇದರಿಂದಾಗಿ ಕುಶಲಕರ್ಮಿಗಳು ರಾಜನ ಮಾನ- ಸನ್ಮಾನಗಳಿಗೆ ಪಾತ್ರರಾಗಿದ್ದರೆಂಬುದು ತಿಳಿಯುತ್ತದೆ.

ವಚನ ಸಾಹಿತ್ಯ ಪ್ರಕಾರದಲ್ಲಿ ಅನೇಕ ವಚನಕಾರರು ಕುಶಲಕರ್ಮಿಗಳ ಜೀವನ- ಸಾಧನೆ, ಕಸಬಿಗೆ ಬಳಸುವ ಉಪಕರಣಗಳ ಕುರಿತು ಪ್ರಸ್ತಾಪಿಸಿದ್ದಾರೆ.

ಬಾಚಿಕಾಯಕದ ಬಸವಯ್ಯ ತನ್ನೊಂದು ವಚನದಲ್ಲಿ

ಆರುದರ್ಶನವೆಲ್ಲ ಎನ್ನ ಬಾಚಿಯಕಲೆ
ಮಿಕ್ಕಾದ ಮೀರಿದ ಅವಧೂತರುಗಳೆಲ್ಲ
ಎನ್ನ ಉಳಿಯೋಳಗಣ ಒಡಪು
ಇಂತಿವ ಮೀರಿವಂದಿಸಿ ಬೇದಿಸಿಹೆನೆಂಬುವರೆಲ್ಲ ಎನ್ನ
ಕೊಡತಿಯಡಿಯಲಿ ಬಡೆಯಿಸಿಕೊಂಬ ಬಡಿಹೋರಿಗಳು"॥೪೪

ಕುಶಲಕರ್ಮಿ ಸಮುದಾಯದ ಕಸಬಿನ ಉಪಕರಣಗಳನ್ನು ಪ್ರಸ್ತಾಪಿಸಿದ್ದನ್ನು ಕಾಣುತ್ತೇವೆ.

ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಪಂಚಾಳ ಕುಶಲಕರ್ಮಿಯ ಅವಶ್ಯಕತೆಯನ್ನು ಹೇಳುತ್ತ

ಕಂಚಿಯ ಫಲಲೇಸು ಮಿಂಚು ಮುಗಿಲಿಗೆ ಲೇಸು
ಕೆಂಚನ ಹೆಣ್ಣು ಇರಲೇಸು/ಊರಿಗೊಬ್ಬ
ಪಾಂಚಾಳಲೇಸು ಸರ್ವಜ್ಞ

ರೈತರ ಕೃಷಿಯೋಪಕರಣಗಳನ್ನು ತಯಾರಿಸಿ ಕೊಡಲು ಪಂಚಾಳ ಕುಶಲಕರ್ಮಿ ಊರಿಗೆ ಒಬ್ಬನಾದರೂ ಬೇಕು ಎಂಬುದನ್ನು ತಿಳಿಯ ಪಡಿಸುತ್ತಾನೆ.

ತಿಂಥಣಿ ಮೌನೇಶ್ವರ, ಕರಸ್ಥಳ ನಾಗಲಿಂಗ ಸ್ವಾಮಿ ಲಚ್ಚಾಣದ ಸಿದ್ದಲಿಂಗ ಮಹಾರಾಜರು (ಮುಗಳಖೋಡ) ಕಾಳವ್ವ, ಗುಡ್ಡಾಪುರದ ದಾನಮ್ಮ, ಹೊಳೆ ಆಲೂರು ಎಚ್ಚರೇಶ್ವರ ಮುರನಾಳ ಗಂಗಾಧರ ಸ್ವಾಮಿ ಮೊದಲಾದ ಸಮುದಾಯದ ಸಿದ್ದಿಪುರುಷರು, ಸ್ತ್ರೀಶಿರೋಮಣಿಗಳು ತಮ್ಮ ಸಾಹಿತ್ಯ ಗ್ರಂಥಗಳಲ್ಲಿ ಮಾತುಗಳಲ್ಲಿ ಕುಶಲಕರ್ಮಿ ಸಮುದಾಯದ ಮಹತ್ವವನ್ನು ಅರುಹಿದ್ದಾರೆ.

ಕುಶಲಕರ್ಮಿ ಸಮುದಾಯ ಮತ್ತು ಇತರ ಸಮುದಾಯದ ಗ್ರಂಥ ಕರ್ತನು ತಮ್ಮ ತಮ್ಮ ಸಾಹಿತ್ಯದಲ್ಲಿ ಕುಶಲಕರ್ಮಿ ಪಂಚಾಳ ಸಮುದಾಯದ ಕುರಿತಾಗಿ ಪ್ರಸ್ತಾಪ ಮಾಡಿದ್ದು ಕಂಡುಬರುತ್ತವೆ. ಕೆಲವು ಗ್ರಂಥಗಳಲ್ಲಿ ತಪ್ಪದೇ ಪಂಚಾಳ ಕುಶಲಕರ್ಮಿಗಳ ಜೀವನ ಮೌಲ್ಯ ಸಾಮಾಜಿಕ ಸ್ಥಾನಮಾನಗಳು ಚರ್ಚಿತವಾಗಿವೆ. ಅಂತಹ ಕೆಲವು ಗ್ರಂಥಗಳು ಇಲ್ಲಿ ಪ್ರಮುಖವೆನಿಸುತ್ತವೆ.

೧. ಚತುರ್ವೇದಗಳು
೨. ಉಪನಿಷತ್ತುಗಳು
೩. ಆಗಮಗಳು
೪. ವಿಶ್ವಕರ್ಮ ಸಂಹಿತ (ಲಭ್ಯವಿಲ್ಲ)
೫. ವಿಶ್ವಕರ್ಮಾಗಮ
೬. ಮೂಲ ಸ್ಥಂಭ ಪುರಾಣ

೭. ವಿಶ್ವಕರ್ಮಪುರಾಣ

೮. ವಿಶ್ವಕರ್ಮ ವ್ರತಕಲ್ಪ

೯. ವಿಶ್ವಕರ್ಮಾ ಪಾಖ್ಯಾನ

೧೦. ವಿಶ್ವಕರ್ಮ ವಂಶಾಗಮಮು

೧೧. ವಿಶ್ವಕರ್ಮನ್ವಯ ಪ್ರದೀಪಿಕಾ

೧೨. ವಿಶ್ವಬ್ರಹ್ಮಕುಲೋತ್ಸವ

೧೩. ವಿಶ್ವಕರ್ಮೋಪನಿಷತ್ತು

೧೪. ವಿಶ್ವಬ್ರಹ್ಮೋಪನಿಷತ್ತು

೧೫. ಪಂಚಬ್ರಹ್ಮೋಪನಿಷತ್ತು

೧೬. ಶಿಲ್ಪೋಪನಿಷತ್ತು

೧೭. ಭರದ್ವಾಜ ವಿರಚಿತ 'ವಿಮಾನಶಾಸ್ತ್ರ'

೧೮. ವಿಶ್ವಕರ್ಮ ವಂಶವೃಕ್ಷ

೧೯. ಮನುಸೂತ್ರ ಪ್ರಯೋಗ

೨೦. ಶಿಲ್ಪ ದರ್ಶನ

೨೧. ಶಿಲ್ಪ ವಿದ್ಯಾಭರಣ

೨೨. ವಾಸ್ತು ಪೂಜಕಲ್ಪ

೨೩. ವಿಶ್ವಕರ್ಮ ರಹಸ್ಯ

೨೪. ಮಧುವಿದ್ಯಾ

೨೫. ವಿಶ್ವಕರ್ಮ ನಿತ್ಯ ಪೂಜಾ ವಿಧಾನಮು

೨೬. ವಿಶ್ವಕರ್ಮ ಪಂಚಯಜ್ಞ

೨೭. ಧರ್ಮಪಾಲ ವಿಜಯ

೨೮. ಶ್ರೀ ಮದ್ವಿಶ್ವಕರ್ಮ ಸುಪ್ರಭಾತ

೨೯. ವಿಶ್ವಕರ್ಮದಂಡಕ

೩೦. ವಿಶ್ವಕರ್ಮನ್ವಯ ಭೂಷಣಂ

೩೧. ನಾಗರಖಾಂಡ

೩೨. ರಥಕಾರಾಧಿಕರಣ ವಿಚಾರಂ

೩೩. ಪೌರುಷೇಯ ಬ್ರಾಹ್ಮಣ ಸಿದ್ಧಾಂತ

೩೪. ಪೌರುಷೇಯ ಬ್ರಾಹ್ಮಣ ನಿರ್ಣಯ

೩೫. ಪಂಚಋಷಿ ಸಂಪ್ರದಾಯ

೩೬. ಸಮರಾಂಗಣ ಸೂತ್ರಧಾರ

೩೭. ಶಿಲ್ಪರ್ಷಿ ಸಂಪ್ರದಾಯ

೩೮. ಋಗ್ವೇದ ದಿಗ್ದರ್ಶನಮು

೩೯. ಯಜುವೇದ ದಿಗ್ದರ್ಶನಮು

೪೦. ಸಾಮವೇದ ದಿಗ್ದರ್ಶನಮು

೪೧. ಅಥರ್ವವೇದ ದಿಗ್ದರ್ಶನಮು

೪೨. ವಾಯು ಪುರಾಣ

೪೩. ಕಂಚಿ ಪುರಾಣ

೪೪. ವಶಿಷ್ಠ ಪುರಾಣ

೪೫. ಬ್ರಹ್ಮಾಂಡ ಪುರಾಣ

೪೬. ಸ್ಕಂದ ಪುರಾಣ

೪೭. ಯಜುಶತಾರ್ವ ಮಹಾಶಿಲ್ಪೋಪನಿಷತ್

೪೮. ಸರಸ್ವತಿಯ ಚಿತ್ರಕರ್ಮಶಾಸ್ತ್ರ

೪೯. ಕಾಶ್ಯಪ ಶಿಲ್ಪಶಾಸ್ತ್ರ

೫೦. ಬ್ರಾಹ್ಮೀಯ ಚಿತ್ರ ಕರ್ಮಶಾಸ್ತ್ರ

೫೧. ನಾರದೀಯ ಶಿಲ್ಪ

೫೨. ಅಪರಾಜೀತ ಪುಚ್ಛ

೫೩. ಗಾರ್ಗೇಯಾಗಮ

ಹೀಗೆ ನೂರಾರು ಸಾಹಿತ್ಯಕ ಗ್ರಂಥಗಳಲ್ಲಿ ವಿಶ್ವಕರ್ಮ ಕುಶಲಕರ್ಮಿ ಸಮುದಾಯದ ಕುರಿತು ಉಲ್ಲೇಖಗಳು ಕಂಡುಬರುತ್ತವೆ. ಇವುಗಳಲ್ಲದೆ ಇನ್ನೂ ನೂರಾರು ಸಾಹಿತ್ಯಕ ಕೃತಿಗಳಲ್ಲಿ ಸಮುದಾಯದ ಪ್ರಸ್ತಾಪಗಳು ಬಂದಿವೆ. ಕನ್ನಡದ ಜೊತೆ ಸಂಸ್ಕೃತ ಭಾಷೆಯ ಜ್ಞಾನ ಕುಶಲಕರ್ಮಿಗಳಲ್ಲಿ ಅಗಾಧ ವಾಗಿತ್ತೆಂಬುದು ತಿಳಿಯುತ್ತದೆ.

ಪಾಂಚಾಳ ಕುಶಲಕರ್ಮಿಗಳು ಗ್ರಾಮೀಣ ಸಮುದಾಯಕ್ಕೆ ಅವಶ್ಯಕವಾಗಿರುವಂತೆ, ಅವರಿಗೆ ಕಾಳಮ್ಮನ ಆರಾಧನೆಯು ಅವಶ್ಯಕವಾಗಿದೆ. ಪಾಂಚಾಳರಲ್ಲಿಯ ಪವಾಡ ಪುರುಷರಾಗಿದ್ದ ಜಗದ್ಗುರು ತಿಂಥಣಿ ಮೌನೇಶ್ವರ, ನವಲಗುಂದ ನಾಗಲಿಂಗಸ್ವಾಮಿ ಹೊಳೆ ಆಲೂರಿನ ಶ್ರೀ ಸದ್ಗುರು ಎಚ್ಚರೇಶ್ವರಸ್ವಾಮಿ

ಮೊದಲಾದವರೆಲ್ಲ ಕಾಳಮ್ಮನ ಆರಾಧಕರಾಗಿದ್ದರು. ಇವರು ಶಿರಸಂಗಿಗೆ ಬಂದು ಪವಾಡಗಳನ್ನು ಮಾಡಿರುವುದು ತಿಳಿದುಬರುತ್ತದೆ. "ಪ್ರಾಚೀನ ಕರ್ನಾಟಕದ ಪಂಚಾಳರು ಕಾಳಿಕಾದೇವಿ ಯನ್ನು ಪೂಜಿಸುತ್ತಿದ್ದರೆಂಬುದನ್ನು ೧೨ನೆಯ ಶತಮಾನದ ಅಬ್ಬಲೂರು ಚರಿತ್ರೆ ಮತ್ತು ಕಂಚಿ ಪುರಾಣ ಕಾವ್ಯಗಳು ಸಾಕ್ಷಿ ನುಡಿಯುತ್ತವೆ."[೪೫] ಚರಿತ್ರೆ, ಇತಿಹಾಸ, ಜನಪದ, ಐತಿಹ್ಯ, ಪುರಾಣ ಕಾವ್ಯಗಳು ಪಾಂಚಾಳ ಕುಶಲಕರ್ಮಿಗಳು ಮತ್ತು ಕಾಳಮ್ಮನ ಸಂಬಂಧಗಳ ಅನನ್ಯತೆಯನ್ನು ವಿವರಿಸುತ್ತವೆ. ಪಾಂಚಾಳರ ಸೃಷ್ಟಿಶೀಲ ಕ್ರಿಯೆಗೆ ಕಾಳಮ್ಮನ ಆರಾಧನೆ ಪ್ರೇರಕ; ವೃತ್ತಿ ಪೂರಕ ಶಕ್ತಿಯಾಗಿದೆ.

ಕೊನೆ ಟಿಪ್ಪಣಿ

೧. ವಿಜಯಶ್ರೀ ಇಟ್ಟಣ್ಣವರ, **ಹದಿನೆಂಟು ಜಾತಿಗಳು**, ೨೦೧೧, ಪು.೩

೨. ಡಾ.ಎಂ.ಚಿದಾನಂದ ಮೂರ್ತಿ, **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ**, ೧೯೮೫, ಪು.೨೩

೩. ಸಮಗ್ರ ವಚನ ಸಂಪುಟ, **ಜನಪ್ರಿಯ ಆವೃತ್ತಿ, ಸಂ–೯**, ಪು.೨೬೯

೪. ಡಾ.ಕೆ.ವಿ.ಕೃಷ್ಣಮೂರ್ತಿ(ಮೂಲ), ಸೂರ್ಯನಾರಾಯಣಚಾರ್ ವಿ.ಎಸ್(ಅನು)., **ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು**, ೨೦೧೨, ಪು.೮

೫. ಡಾ.ದಸ್ತಗೀರ ಅಲ್ಲೀಬಾಯಿ, **ಉತ್ತರ ಕರ್ನಾಟಕದ ಬಡಿಗವೃತ್ತಿ, ಗ್ರಾಮೀಣ ವೃತ್ತಿಗಳು**, ೨೦೦೦, ಪು.೧೯೪.

೬. ಭೀಮಶೇನ ಬಡಿಗೇರ(ಸಂ), **ಶ್ರೀ ನಾ.ಭಾ..ಕೃತಿ ಸಂಪುಟ ೨**, ೨೦೦೪, ಪು.೧೮

೭. ಡಾ.ದಸ್ತಗೀರ ಅಲ್ಲೀಬಾಯಿ, **ಉತ್ತರ ಕರ್ನಾಟಕದ ಬಡಿಗ ವೃತ್ತಿ, ಗ್ರಾಮೀಣ ವೃತ್ತಿಗಳು**, ೨೦೦೦, ಪು.೧೯೪.

೮. ಡಾ.ವೀರೇಶ ಬಡಿಗೇರ, **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ**, ೨೦೧೦, ಪು.೧೨

೯. ಅದೇ, ಪು.೧೦

೧೦. ವಿಜಯಶ್ರೀ ಇಟ್ಟಣ್ಣವರ, **ಹದಿನೆಂಟು ಜಾತಿಗಳು**, ೨೦೧೧, ಪು.೨೫

೧೧. ಡಾ.ಶೇಖರಾಚಾರಿ ಕೆ., **ಪಾಂಚಾಳರ ಬದುಕು ಮತ್ತು ಸಂಸ್ಕೃತಿ**, ೨೦೧೧, ಪು.೧೭

೧೨. ಡಾ.ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ**, ೨೦೧೨, ಪು.೨೭

೧೩. ಡಿ.ಡಿ.ಕೊಸಾಂಬಿ(ಮೂಲ), ವೇಣುಗೋಪಾಲ್ ಟಿ.ಎಸ್.(ಅನು), **ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ**, ೨೦೧೧, ಪು.೧೫೧

೧೪. ಅದೇ, ಪು.೧೯೯

೧೫. ಇರ್ಫಾನ್ ಹಬೀಬ್(ಮೂಲ), ಪ್ರದೀಪ ಬೆಳಗಲ್, ಎಚ್.ಎಸ್.ಜೈಕುಮಾರ(ಅನು), **ಸಿಂಧೂ ನಾಗರಿಕತೆ**, ೨೦೧೧, ಪು.೧೦೩

೧೬. ಅದೇ, ಪು.೮೧

೧೭. ಡಾ.ದಸ್ತಗೀರ ಅಲ್ಲೀಭಾಯಿ, **ಉತ್ತರ ಕರ್ನಾಟಕದ ಬಡಗಿ ವೃತ್ತಿ**, ಸಂ: ಗ್ರಾಮೀಣ ವೃತ್ತಿಗಳು, ೨೦೦೦, ಪು.೧೯೭

೧೮. ಡಾ.ಕೆ.ವಿ.ಕೃಷ್ಣಮೂರ್ತಿ(ಮೂಲ), ಸೂರ್ಯನಾರಾಯಣಚಾರ ವಿ.ಎ.ಸ್.(ಅನು), **ದಕ್ಷಿಣ ಭಾರತದ ಪಾರಂಪರಿಕ ಕುಶಲರ್ಮಿಗಳು**, ೨೦೧೨, ಪು.೮

೧೯. ಡಾ.ವೀರೇಶ ಬಡಿಗೇರ, **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ**, ೨೦೧೦, ಪು.೫

೨೦. ಅದೇ, ಪು.೬

೨೧. ಡಾ.ದಸ್ತಗೀರ ಅಲ್ಲೀಭಾಯಿ, **ಉತ್ತರ ಕರ್ನಾಟಕದ ಬಡಗಿ ವೃತ್ತಿ**, ಸಂ: ಗ್ರಾಮೀಣ ವೃತ್ತಿಗಳು, ೨೦೦೦, ಪು.೨೦೦

೨೨. ಮೌನೇಶ್ವರ ಆಚಾರ್ಯ, **ರಥಶಿಲ್ಪ ಪ್ರವೀಣ ಶ್ರೀ ಈಶ್ವರಪ್ಪ ಬಡಿಗೇರ**, ಸಂ: ವಿಶ್ವರಥ, ೨೦೧೨, ಪು.೪೫

೨೩. ಡಾ.ದಸ್ತಗೀರ ಅಲ್ಲೀಭಾಯಿ, **ಉತ್ತರ ಕರ್ನಾಟಕದ ಬಡಗಿ ವೃತ್ತಿ**, ಸಂ: ಗ್ರಾಮೀಣ ವೃತ್ತಿಗಳು, ೨೦೦೦, ಪು.೨೦೦

೨೪. ಡಾ.ವೀರೇಶ ಬಡಿಗೇರ, **ಬಾಚಿ ಕಾಯಕದ ಬಸವಯ್ಯ: ವೃತ್ತಿ ಹಾಗೂ ತತ್ವ ಮೀಮಾಂಸೆ**, ೨೦೦೭, ಪು.೬೯

೨೫. ಜೀವಣ್ಣ ಮಸಳಿ(ಸಂ), ಮೌನೇಶ್ವರರ ವಚನ ಸಂಗ್ರಹ, ೧೯೮೫, ಪು.೪೪, ವಚನ–೩೩

೨೬. ಡಾ.ವೀರೇಶ ಬಡಿಗೇರ, **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ**, ೨೦೧೦, ಪು.೧೪

೨೭. ಎಂ.ಎನ್.ಪ್ರಭಾಕರ್, **ದೇವಾಲಯ, ವಾಸ್ತು**, ೨೦೧೧, ಪು.೪

೨೮. ಅದೇ, ಪು.೬

೨೯. ಡಾ.ಎಚ್.ತಿಪ್ಪೇರುದ್ರಸ್ವಾಮಿ, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ೨೦೧೧, ಪು.೬೨೮

೩೦. ಅದೇ, ಪು.೬

೩೧. ಡಾ.ವೀರೇಶ ಬಡಿಗೇರ, **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ,** ೨೦೧೦, ಪು.೧೨

೩೨. ಪಾಲ್ತಾಡಿ ರಾಮಕೃಷ್ಣ ಆಚಾರ್ (ಲೇ), ದಕ್ಷಿಣ ಕನ್ನಡದಲ್ಲಿ ಚಿನಿವಾರಿಕೆ (ಸಂ) **ಗ್ರಾಮೀಣ ವೃತ್ತಿಗಳು,** ೨೦೦೦, ಪು.೧೭೨

೩೩. ವೀರೇಶ ಬಡಿಗೇರ, **ಬಾಚಿ ಕಾಯಕದ ಬಸವಯ್ಯ: ವೃತ್ತಿ ಹಾಗೂ ತತ್ವಮೀಮಾಂಸೆ,** ೨೦೦೭, ಪು.೪೨

೩೪. ಎಲ್.ಬಸವರಾಜ (ಸಂ), **ಸರ್ವಜ್ಞನ ವಚನಗಳು,** ೧೯೯೮, ಪು.೧೬೦

೩೫. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ೨೦೦೯, ಪು.೫೧೨

೩೬. ವಾಸುದೇವಾಚಾರ್ ಶಿವಮೊಗ್ಗ ಕೆ.(ಸಂ), **ಶಿಲ್ಪ ಸಹ್ಯಾದ್ರಿ,** ೧೯೯೧, ಪು.೩

೩೭. ಅದೇ, ಪು.೬

೩೮. ಅದೇ ಪು.೫

೩೯. ಅದೇ ಪು.೩

೪೦. ಅದೇ ಪು.೪

೪೧. ಅಂಗಡಿ ಎಸ್.ಎಸ್., **ಬಡಿಗ ವೃತ್ತಿಪದ ಮಂಜರಿ,** ೧೯೯೯, ಪು.೬೫-೬೭

೪೨. ಕೃಷ್ಣಮೂರ್ತಿ ಕೆ.ವಿ (ಮೂಲ) ಸೂರ್ಯನಾರಾಯಣಾಚಾರ್ಯ ವಿ.ಎಸ್ (ಅನು), **ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು,** ೨೦೧೨, ಪು.೩೯

೪೩. ಕುಮಾರಸ್ವಾಮಿ ಕೆ.ಎಸ್., **ಪ್ರಾಚೀನ ಕಾಲದಲ್ಲಿ ಶಿಲ್ಪಾಚಾರಿಯರು,** ೧೯೯೪, ಪು.೬೯

೪೪. ವೀರೇಶ ಬಡಿಗೇರ, **ಬಾಚಿ ಕಾಯಕದ ಬಸವಯ್ಯ: ವೃತ್ತಿ ಹಾಗೂ ತತ್ವಮೀಮಾಂಸೆ,** ೨೦೦೭, ಪು.೭೭

೪೫. ಕುಮಾರಸ್ವಾಮಿ ಕೆ.ಎಸ್., **ಪ್ರಾಚೀನ ಕಾಲದಲ್ಲಿ ಶಿಲ್ಪಾಚಾರಿಯರು,** ೧೯೯೪, ಪು.೬೯

ಅಧ್ಯಾಯ ನಾಲ್ಕು

ಅನ್ಯಕುಶಲಕರ್ಮಿ ವರ್ಗಗಳು ಮತ್ತು ಜನಸಮುದಾಯಗಳು: ಕಾಳಮ್ಮನ ಆರಾಧನೆ

ಅಧ್ಯಾಯ ನಾಲ್ಕು

ಅನ್ಯಕುಶಲಕರ್ಮಿ ವರ್ಗಗಳು ಮತ್ತು ಜನಸಮುದಾಯಗಳು: ಕಾಳಮ್ಮನ ಆರಾಧನೆ

ಭಾರತ ಕೃಷಿ ಪ್ರಧಾನವಾದ ರಾಷ್ಟ್ರ. ಇಲ್ಲಿ ಪಟ್ಟಣಗಳಿಗಿಂತ ಹಳ್ಳಿಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕೃಷಿ ಚಟುವಟಿಕೆಗಳು ಸದಾ ನಡೆದಿರುತ್ತವೆ. ಕೃಷಿಯನ್ನು ಅವಲಂಬಿಸಿದ ರೈತ ಸಮುದಾಯವನ್ನು ಈ ದೇಶದಲ್ಲಿ ಕಾಣುತ್ತೇವೆ. ನೇಗಿಲು ಹಿಡಿದು ಹೊಲದಲ್ಲಿ ಉಳುವ ಯೋಗಿಗೆ ದೇಶದಲ್ಲಿ ಪ್ರಥಮ ಸ್ಥಾನ-ಮಾನ-ಗೌರವಗಳಿವೆ. "ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು" ಎಂಬ ಗಾದೆ ಮಾತಿದೆ. ಅದು ಈ ದೇಶದ ರೈತನ ನಿಸ್ವಾರ್ಥ ಕೃಷಿ ಕಾರ್ಯಗಳನ್ನು ಗಮನಿಸಿ ಬಳಕೆಯಾಗುತ್ತಿದೆ. ರೈತ ದೇಶದ ಬೆನ್ನೆಲುಬು ರೈತನನ್ನು ನಂಬಿಕೊಂಡು ಗ್ರಾಮೀಣ ಪ್ರದೇಶದ ಅನ್ಯ ಸಮುದಾಯ ಮತ್ತು ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಕುಶಲಕರ್ಮಿಗಳು ಜೀವನ ಸಾಗಿಸುತ್ತಾರೆ.

ಕುಶಲಕರ್ಮಿಗಳು ರೈತ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಕೆಲಸ ಮಾಡುತ್ತಾರೆ. ರೈತನ ಭೂಮಿ ಕೆಲಸಕ್ಕೆ ಅವಶ್ಯಕವಾಗಿರುವ ಕುಶಲಕರ್ಮಿಗಳಲ್ಲಿ ಕಂಬಾರ, ಬಡಿಗೇರ ಕಂಚುಗಾರ, ಶಿಲ್ಪಿ, ಅಕ್ಕಸಾಲಿಗರು ಪ್ರಮುಖರಾಗಿದ್ದಾರೆ. ಕಂಚುಗಾರ ಮತ್ತು ಶಿಲ್ಪಿ ಕುಶಲಕರ್ಮಿಗಳಿಗಿಂತ ಹೆಚ್ಚಾಗಿ ರೈತನು ಕಂಬಾರ ಅಥವಾ ಕಮ್ಮಾರ, ಬಡಿಗೇರ ಮತ್ತು ಕುಟುಂಬದ ಮಹಿಳೆಯರ ಆಭರಣಗಳಿಗಾಗಿ ಅಕ್ಕಸಾಲಿಗರನ್ನು ಅವಲಂಬಿಸಿರುತ್ತಾನೆ. ಕಬ್ಬಿಣದಿಂದ ವ್ಯವಸಾಯ ಮಾಡಲು ಕಂಬಾರನು ತಯಾರಿಸುವ ಕೃಷಿ ಉಪಕರಣಗಳು ಮಹತ್ವದ್ದಾಗಿರುತ್ತವೆ. ಪಿಕಾಸಿ, ಹಾರೆ, ಕತ್ತಿ, ಸಲಿಕೆ, ಗುದ್ದಲಿ, ಕೊಡಲಿ, ಕುಡಗೋಲು, ನೇಗಿಲು, ಕುಳ, ಕುರುಪಿ, ಕುಡ, ಚಕ್ಕಡಿಗೆ ಅವಶ್ಯವೆನಿಸುವ ಗಾಲಿ ಚಕ್ರದ ಬಾಯಬಳೆ ಗುಂಬದ ಕಟ್ಟುಬಳೆ(ಗುಮಕಟ್ ಬಳೆ), ಬಂಡಿಕೀಲು, ಬಂಡಿಹಾರೆ, ಈ ಎಲ್ಲ ಕಬ್ಬಿಣದ ಉಪಕರಣಗಳು ರೈತನ ಕೃಷಿ ಬದುಕಿನ ಸಂಗಾತಗಳಾಗಿವೆ.

ಕಬ್ಬಿಣದ ವಸ್ತುಗಳೊಂದಿಗೆ ಕಟ್ಟಿಗೆಯ(ಮರದ) ವಸ್ತುಗಳನ್ನು ತಯಾರಿಸಿಕೊಡಲು ಬಡಿಗೇರ ಕುಶಲಕರ್ಮಿ ರೈತನಿಗೆ ಮುಖ್ಯವಾಗುತ್ತಾನೆ.

ಬಡಿಗೇರರು ರೈತನಿಗೆ ಕೃಷಿಗೂ ಮತ್ತು ಮನೆ-ಗುಡಿ-ಗುಂಡಾರುಗಳನ್ನು ನಿರ್ಮಿಸಲು ಅವಶ್ಯಕವಾಗಿದ್ದಾರೆ. ಸರ್ವಜ್ಞ ಕವಿ ಹೇಳುವಂತೆ-

"ಹಡಗು ಗಾಳಿಗೆ ಲೇಸು ಗುಡುಗುಮುಗಿಲಿಗೆ ಲೇಸು
ಒಡ ಹುಟ್ಟಿದಣ್ಣ ಇರಲೇಸು/ಊರಿಗೊಬ್ಬ
ಬಡಿಗಿಯೇ ಲೇಸು ಸರ್ವಜ್ಞ"[೧]

ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಬಡಿಗೇರರು, ರೆಂಟೆ, ಕುಂಟೆ, ಕೂರಿಗೆ, ಎಡಿಗುಂಟಿ, ಈಸು, ತಾಳು, ಮೇಳಿ, ನೊಗ, ಬಾರಕೋಲ, ಬ್ಯಾಕೋಲ, ಜಂತಗುಂಟಿ, ಮೇಟಿಗ್ವಾರಿ, ಬಂಡಿ ಅಥವಾ ಚಕ್ಕಡಿಯನ್ನು ತಯಾರಿಸಿ ರೈತ ವರ್ಗಕ್ಕೆ ನೀಡುತ್ತಾರೆ. ಬಡಿಗೇರ ಕಸಬುದಾರರು ಕೃಷಿಯ ಜೊತೆಗೆ ಕೃಷಿಕರ ಮನೆಯೆಲ್ಲೂ ಬಳಸುವ ಗೃಹೋಪಕರಣಗಳನ್ನು ತಯಾರಿಸಿಕೊಡುತ್ತಾರೆ. ತೊಟ್ಟಿಲು, ಹುಟ್ಟು, ಹೊರಸಲು, ಒನಕೆ, ಕ್ವಾಮಣಿಗೆ, ಸ್ಯಾಂಡಿಗೆಮಣೆ, ಕೂಡ್ರುಮಣೆ, ಲತ್ತಿಗುಣಿ, ಕಡಗೋಲು, ಕಡಬಿನ ಮಣಿ, ದೇವರ ಮಂಟಪ ಬಾಗಿಲು, ಕಿಟಕಿ, ಸಂದುಕ, ಟೇಬಲು ಮತ್ತು ಕುರ್ಚಿಗಳನ್ನು ತಯಾರಿಸುತ್ತಾರೆ. ರೈತನ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಕಂಬಾರ ಮತ್ತು ಬಡಿಗೇರ ಕುಶಲಕರ್ಮಿಗಳ ಸೇವೆ ಅವಶ್ಯಕವಾಗಿರುತ್ತದೆ. ರೈತ ದೇಶದ ಬೆನ್ನೆಲುಬು ಆದರೆ, ರೈತನಿಗೆ ಕಂಬಾರ-ಬಡಿಗೇರ ಕುಶಲಕರ್ಮಿಗಳೇ ಬೆನ್ನೆಲುಬು.

ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ಕೃಷಿಕಾರ್ಯಗಳು ಚುರುಕುಗೊಳ್ಳುತ್ತವೆ. ಬಡಿಗೇರರ ಅಡ್ಡಿಬಡ್ಡಿಗೆ ಕಟ್ಟಿಗೆಗಳು ಬಂದು ಬೀಳುತ್ತವೆ. ಹಿಂಗಾರು ಬಿತ್ತನೆಯ ಕಾಲಕ್ಕೆ ಕೂರಿಗೆ ಪೂಜೆ ಬಡಿಗರಸಾಲಿ(ಬಡಿಸಾಲಿ)ಯಲ್ಲಿ ಆಗುತ್ತದೆ. ಬಡಿಗೇರ ಕುಶಲಕರ್ಮಿಗಳಿಗೆ ಈ ಹಂತದಲ್ಲಿ ಯಾವುದಕ್ಕೂ ಸಮಯ ಸಿಗುವುದಿಲ್ಲ. ಬಹುಬೇಡಿಕೆಯ ಕಸಬಾಗಿ ಬಡಿಗತನ ಬೆಳೆದು ಬಂದಿದೆ. ಹಳ್ಳಿಗಳಲ್ಲಿ ರೈತರು ಹೆಚ್ಚಿನ ಪ್ರಮಾಣದಲ್ಲಿರುತ್ತಾರೆ. ಆದರೆ ಬಡಿಗೇರ ಕುಶಲಕರ್ಮಿಗಳ ಕುಟುಂಬಗಳು ಕಡಿಮೆ. ಇದರಿಂದ ಕುಶಲಕರ್ಮಿಗಳ ಮೇಲೆ ಕೆಲಸದ ಒತ್ತಡ ಹೆಚ್ಚಾಗುತ್ತದೆ. ಮಳೆಯನ್ನು ನಂಬಿ ವ್ಯವಸಾಯ ಮಾಡುವ ರೈತನಿಗೆ ತೊಂದರೆಯಾಗಬಾರದು ಎಂಬ ಕಳಕಳಿ ಬಡಿಗೇರ ಕುಶಲಕರ್ಮಿಗಳಿಗೆ ಇರುತ್ತದೆ. ಎಲ್ಲ ರೈತರಿಗೂ ಸಮಯಕ್ಕೆ ಸರಿಯಾಗಿ ಕೃಷಿ ಉಪಕರಣಗಳನ್ನು ತಯಾರಿಸಿ ಕೊಡುತ್ತಾನೆ. ಕೆಲಸಗಳು ಹೆಚ್ಚಳವಾದರೆ ಪಕ್ಕದ ಊರಿನ ಸಂಬಂಧಿ ಕುಶಲಕರ್ಮಿಗಳನ್ನು ಕರೆತರುಸುತ್ತಾರೆ. ರೈತನಿಗೆ ಬಿತ್ತನೆಯ ಕೆಲಸಕ್ಕೆ ತೊಂದರೆಯಾಗದಂತೆ ಎಲ್ಲವನ್ನು ಎಲ್ಲರನ್ನು ಸಂಬಾಳಿಸಿ ಕೆಲಸ ನಿಭಾಯಿಸುತ್ತಾರೆ.

ಕಂಬಾರ, ಬಡಿಗೇರ, ಅಕ್ಕಸಾಲಿಗ ಇತರೆ ಕುಶಲಕರ್ಮಿಗಳಿಲ್ಲದ ಹಳ್ಳಿಗಳೇ ಇಲ್ಲ. ಪ್ರತಿ ಗ್ರಾಮಗಳಲ್ಲಿಯೂ ಈ ಎಲ್ಲ ಕಸಬುದಾರರು ಗ್ರಾಮ ಸಂಸ್ಕೃತಿ ಕಟ್ಟಲು ಪ್ರಮುಖರಾಗುತ್ತಾರೆ. ಕುಶಲಕರ್ಮಿಗಳು ಒಬ್ಬಂಟಿಗರಾಗಿ ಕೆಲಸ ನಿರ್ವಹಿಸುತ್ತಿದ್ದರೆ ಅವರಿಗೆ ಸಹಾಯಕರಾಗಿ ರೈತರು ಜೊತೆ ಗೂಡುತ್ತಾರೆ. ಕಂಬಾರ ಕುಲುಮೆಯ ತಿದಿ ಜಗ್ಗುವುದು. ಕಾದ ಕಬ್ಬಿಣ ಹೊಡೆಯುವುದು, ಗರಗಸದಿಂದ ಕಟ್ಟಿಗೆ ಕತ್ತರಿಸುವುದು, ಕಟ್ಟಿಗೆ ನುನುಪುಗೊಳಿಸಲು ಉಚ್ಚುಗೊಡ್ಡ ಜಗ್ಗುವುದು ಮುಂತಾದ ಕೆಲಸದಲ್ಲಿ ಕಂಬಾರ, ಬಡಿಗೇರ ಕುಶಲಕರ್ಮಿಗಳಿಗೆ ರೈತಾಪಿ ವರ್ಗದವರು ಸಹಾಯಕರಾಗಿ ನಿಲ್ಲುತ್ತಾರೆ. ಇದರಿಂದ ಸಹಾಯಕರಾಗಿ ಕೆಲಸ ಮಾಡುವವರಿಗೂ ಕಂಬಾರಿಕೆ ಬಡಿಗತನದ ಕೆಲಸಗಳು ಸ್ವಲ್ಪ ಮಟ್ಟಿಗೆ ಪರಿಚಿತವಾಗುತ್ತವೆ. ಕಸಬಿನ ಆಂತರಿಕ ಕಲೆ ತಿಳಿಯದಿದ್ದರೂ ಬಾಹ್ಯ ಕಲೆಯನ್ನು ಅನ್ಯರು ರೂಢಿಗತಗೊಳಿಸಿಕೊಳ್ಳುತ್ತಾರೆ.

ಶಿಲಾಯುಗದ ಪಂಚಾಳೇತರರ ಕಾಲದಿಂದಲೂ ಕುಲುಮೆಯ ಚಟುವಟಿಕೆಗಳು ಹೆಚ್ಚಾಗಿರುವುದು ತಿಳಿದುಬರುತ್ತದೆ. ಲೋಹವನ್ನು ಕರಗಿಸಿ ಉಪಕರಣಗಳನ್ನು ತಯಾರಿಸಲಾಗುತ್ತಿತ್ತು. ಈ ಸಂಗತಿಗಳನ್ನು ಗಮನಿಸಿದರೆ, ಕಂಬಾರ-ಬಡಿಗೇರ ಮತ್ತು ಅಕ್ಕಸಾಲಿಗರ ವೃತ್ತಿಗಳು ಪಾಂಚಾಳರ ಕುಲಕಸುಬುಗಳಲ್ಲಿಯೇ ಹೆಚ್ಚು ಬೇಡಿಕೆಯ ಕಸಬುಗಳಾಗಿದ್ದವೆಂಬುದು ಸ್ಪಷ್ಟವಾಗುತ್ತದೆ. ಬಡಿಗತನದ ಜೊತೆಗೆ "ಕಮ್ಮಾರಿಕೆಯು ಮುಖ್ಯವಾದ ಮತ್ತು ಬಹುಬೇಡಿಕೆಯ ಕಸಬಾದುದರಿಂದ, ಜಾತಿ ಮತಗಳ ಕಟ್ಟುಪಾಡುಗಳಿಲ್ಲದೆ, ವಿವಿಧ ಜಾತಿ ಮತಗಳವರೂ ಸಹಾ ಜೀವನೋಪಾಯಕ್ಕಾಗಿ ಈ ಕಸಬನ್ನು ಆಯ್ದುಕೊಂಡರು. ಹೀಗಾಗಿ ಕಮ್ಮಾರರಲ್ಲಿ ವಿವಿಧ ಜಾತಿಗಳ ಹಿಂದೂಗಳನ್ನು ಮುಸ್ಲಿಂರನ್ನು ಮತ್ತು ಕ್ರೈಸ್ತರನ್ನು ಕಾಣಬಹುದಾಗಿದೆ."[೨] ಕುಲಕಸಬುಗಳೆಂದು ಪಾಂಚಾಳರು ಕೆಲಸಗಳನ್ನು ನಿರ್ವಹಿಸಿಕೊಂಡು ಬಂದರೆ ಪಂಚಾಳೇತರ ಕುಶಲಕರ್ಮಿಗಳು ಜೀವನೋಪಾಯಕ್ಕಾಗಿ ಕಂಬಾರಿಕೆ-ಬಡಿಗತನದಂತಹ ಕಸಬನ್ನು ಮಾಡುತ್ತಿದ್ದಾರೆ.

ಪಾಂಚಾಳ ಕಸಬುದಾರರು ಕಡಮೆ ಪ್ರಮಾಣದಲ್ಲಿರುವ ಊರುಗಳಲ್ಲಿ ಅನ್ಯಕುಶಲ ಕರ್ಮಿಗಳು ಕಂಬಾರಿಕೆ-ಬಡಿಗತನ ಕಸಬನ್ನು ಹೆಚ್ಚಾಗಿ ನಿರ್ವಹಿಸುತ್ತಿದ್ದಾರೆ. ಇಂದಿಗೂ ಪ್ರತಿ ಹಳ್ಳಿಗಳಿಗೆ ಕುಲ ಕಸಬುದಾರರಿದ್ದರೂ ಬೈಲು ಕಂಬಾರರು ೧೦-೧೫ ದಿನಗಳ ಕಾಲ ಹಳ್ಳಿಯಲ್ಲಿಯೇ ಬೀಡುಬಿಟ್ಟಿರುತ್ತಾರೆ. ಗಂಡು-ಹೆಣ್ಣು ಭೇದವಿಲ್ಲದೆ, ಬಿಸಿಲು-ಮಳೆಯನ್ನದೇ ಅನ್ಯ ಕುಶಲಕರ್ಮಿಗಳು ಕೆಲಸ ಮಾಡುತ್ತಾರೆ. ರೈತಾಪಿ ವರ್ಗಕ್ಕೆ ಅನ್ಯ ಕುಶಲಕರ್ಮಿಗಳಿಂದ ಕೆಲಸ ತುರ್ತಾಗುತ್ತದೆಂಬ ಅನಿಸಿಕೆಗಳಿವೆ. ಕುಲಕಸಬುದಾರರಂತೆ ಅನ್ಯರು ಕೃಷಿ-ಗೃಹ ಇತರೆ ಕೆಲಸಗಳನ್ನು ನಿರ್ವಹಿಸುತ್ತಾರೆ. ಅವಶ್ಯಕತೆಯೆನಿಸಿದಾಗ ಪಾಂಚಾಳರ ಜೊತೆ ಕೆಲಸ ಮಾಡುತ್ತಾರೆ. ಇವರ ಜೊತೆ ಕೆಲಸ ಮಾಡುವಾಗ ಅನ್ಯರು ತಮ್ಮ ಜಾಣತನವನ್ನು ಬದಿಗೆ ತಳ್ಳುತ್ತಾರೆ.

ಕುಲಕಸುಬುದಾರರಿಗಿಂತ ತಮ್ಮ ಜ್ಞಾನ ಹಿರಿದಲ್ಲವೆಂಬ ಭಾವನೆ ಅನ್ಯ ಕುಶಲಕರ್ಮಿಗಳಲ್ಲಿದೆ. ಈ ಅಂಶವನ್ನು ಸ್ವತಃ ನಾನೇ ಕಂಡಿದ್ದೇನೆ. ಅನ್ಯ ಕುಶಲಕರ್ಮಿಗಳು ಕಸಬಿನಲ್ಲಿ ಮುಂದುವರೆಯಲು ಜೀವನೋಪಾಯವು ಪ್ರಮುಖ ಕಾರಣವಾಗಿ ಕಂಡುಬರುತ್ತದೆ. ಅನ್ಯರಿಗೆ ಬೇರೆ ಕಸಬಿನ ಪರಿಚಯ ಇಲ್ಲದಿರಬಹುದು. ಇದ್ದರೂ ಬೇರೆ ಕೆಲಸದಲ್ಲಿ ಆಸಕ್ತಿ ಮೂಡದಿರಬಹುದು. ಇಲ್ಲವೆಂದರೆ ಒಂದು ವೃತ್ತಿಯಲ್ಲಿ ಗುರುತಿಸಿಕೊಂಡ ಮೇಲೆ ಮತ್ತೊಂದು ವೃತ್ತಿಗೆ ಹೋಗುವುದು ಉಚಿತವೆನಿಸಲಾರದು. ವೃತ್ತಿಗಳ ಬದಲಾವಣೆ ಲಾಭದಾಯಕವೂ ಆಗಲಾರದು. ಹೀಗಾಗಿ ಅನಿವಾರ್ಯವಾಗಿ ಪಂಚಾಳೇತರರು ಕಂಬಾರಿಕೆ–ಬಡಿಗತನ–ಅಕ್ಕಸಾಲಿ ಕಸಬಿನಲ್ಲಿ ಮುಂದುವರೆದಿದ್ದಾರೆ.

ಅನ್ಯ ಕುಶಲಕರ್ಮಿಗಳಲ್ಲಿ ಈ ಕಸಬು ಮೊದಲನೆಯದಿಂದ ಮೂರನೆಯ ತಲೆಮಾರಿನ ವರೆಗೂ ಮುಂದುವರೆದುದು ಕಂಡುಬರುತ್ತದೆ. ತಂದೆ–ತಾತನಿಂದ ಮುಂದುವರೆದ ಕಸಬನ್ನು ಈಗೀನ ತಲೆ ಮಾರಿನವರು ಸಾಗಿಸಿಕೊಂಡು ಬಂದಿರುವುದು ತಿಳಿಯುತ್ತದೆ. ಇಂತಹ ಅನ್ಯ ಕುಶಲಕರ್ಮಿಗಳು ವೃತ್ತಿಯಲ್ಲಿ ಚಾಣಾಕ್ಷರು ಮತ್ತು ಕುಶಲಮತಿಗಳು ಆಗಿದ್ದಾರೆ. ಆದರೆ ಅನ್ಯಕುಶಲಕರ್ಮಿಗಳು ಪಾಂಚಾಳರ ಕಸಬನ್ನು ಅನುಕರಿಸಿದರೂ ಆಚಾರ–ವಿಚಾರಗಳು ಭಿನ್ನವಾಗುತ್ತವೆ. ಪಾಂಚಾಳರಂತೆ ಷೋಡಶಕರ್ಮಗಳನ್ನು ಅನ್ಯಕುಶಲಕರ್ಮಿಗಳಾರು ಅನುಸರಿಸುವುದಿಲ್ಲ. ವೃತ್ತಿ ಅನುಸರಣೆ ಮಾತ್ರ ಅನ್ಯರಲ್ಲಿ ಕಂಡುಬರುತ್ತದೆ.

ಅನ್ಯ ಕುಶಲಕರ್ಮಿಗಳು ಶುದ್ಧ ಶಾಖಾಹಾರಿಗಳಲ್ಲ. ಆಹಾರ ಪದ್ಧತಿಯಲ್ಲಿ ಯಾವುದನ್ನು ನಿರ್ಬಂಧಿಸಿಕೊಂಡಿಲ್ಲ. ಕುಲಕಸಬುದಾರರಿಗೆ ಆಹಾರದಲ್ಲಿ ನಿರ್ಬಂಧವಿದೆ. ಉಡುಗೆ–ತೊಡುಗೆಗಳಲ್ಲಿಯೂ ಅನ್ಯಕುಶಲಕರ್ಮಿ ಭಿನ್ನವಾಗುತ್ತಾನೆ. ಕುಂಕುಮ ಬೆಂಕಿ ಸ್ವರೂಪ. ಕುಲಕಸಬುದಾರರು ನಿತ್ಯವು ಹಣೆಗೆ ಧಾರಣೆ ಮಾಡುತ್ತಾರೆ. ಕೆಲವು ಹಿಂದೂ ಅನ್ಯ ಕುಶಲಕರ್ಮಿಗಳು ಹಣೆಗೆ ಕುಂಕುಮ ಧರಿಸುವುದನ್ನು ರೂಢಿಸಿಕೊಂಡಿರುವುದು ಕಂಡುಬರುತ್ತದೆ. ಅನ್ಯರು ಕುಶಲಕರ್ಮಿಗಳಾದ ಮೇಲೆ ಕಸಬಿನ ಬಗ್ಗೆ ಪ್ರೀತಿ ಗೌರವವನ್ನು ಹೊಂದುತ್ತಾರೆ. ಬಳಸುವ ವೃತ್ತಿ ಉಪಕರಣಗಳ ಕುರಿತು ಪೂಜ್ಯ ಭಾವನೆಯಿರುತ್ತದೆ. ತಮ್ಮಿಂದ ತಯಾರಿಸಲ್ಪಡುವ ವಸ್ತುಗಳು ತಾಳಿಕೆಯಿಂದ ಕೂಡಿರಲಿ ಎಂಬ ಭಾವನೆ ಅನ್ಯ ಕುಶಲಕರ್ಮಿಗಳಲ್ಲಿರುತ್ತದೆ. ಕುಲಕಸಬುದಾರರಂತೆ ತಾವು ವೃತ್ತಿಯಲ್ಲಿ ಪ್ರಸಿದ್ಧರಾಗಬೇಕೆಂಬ ಮನಸ್ಸುಳ್ಳವರಾಗಿರುತ್ತಾರೆ. ಇದರಿಂದ ವೃತ್ತಿಯ ಕುರಿತು ಶ್ರದ್ಧೆ, ನಿಷ್ಠೆ, ಗೌರವಗಳು ಹೆಚ್ಚಾಗುತ್ತ ಹೋಗುತ್ತವೆ. ಈ ಎಲ್ಲ ಹಿನ್ನೆಲೆಯಲ್ಲಿ ಪಂಚಾಳೇತರರು ಕುಶಲಕರ್ಮಿಗಳಾಗಿ ಪಾಂಚಾಳರಂತೆ ವೃತ್ತಿ ನೈಪುಣ್ಯದಾರರಾಗಿ ಕಂಡುಬರುತ್ತಾರೆ. ಅನ್ಯಕುಶಲ ಕರ್ಮಿಗಳಲ್ಲಿ ವೃತ್ತಿ ನೈಪುಣ್ಯತೆ ದೊರೆಯಲು ಅವರ ಕಲಾ ಕೌಶಲ್ಯವು ಕಾರಣವಾಗುತ್ತದೆ. ಇವರಿಗೆ ಸೂಕ್ಷ್ಮವಾದ ಕಲಾ ಕೌಶಲ್ಯತೆ ಲಭಿಸಬೇಕಾದರೆ ಪಾಂಚಾಳರ ಸಹಾಯ–ಸಹಕಾರ–

ಮಾರ್ಗದರ್ಶನಗಳು ಮುಖ್ಯವಾಗುತ್ತವೆ. ಅನ್ಯರು ಕುಶಲಕರ್ಮಿಗಳಾಗಲು ಕುಲಕಸಬುದಾರರ ಕೊಡುಗೆ ಅನನ್ಯವಾದದ್ದು. ಅನ್ಯರು ಕುಶಲಕರ್ಮಿಗಳಾಗಲು ಪ್ರಮುಖವಾಗಿ ಕಾರಣಗಳನ್ನು ಗುರುತಿಸಲಾಗಿದೆ.

ಅನ್ಯರು ಕುಶಲಕರ್ಮಿಗಳಾಗಲು ಪ್ರಮುಖ ಕಾರಣಗಳು.

೧. ಕುಲಕಸಬುದಾರರ ಸಂಪರ್ಕದಿಂದ ಅನ್ಯರು ಕುಶಲಕರ್ಮಿಗಳಾಗಿರಬೇಕು.

೨. ಕಂಬಾರಿಕೆ, ಬಡಿಗತನ ಇತರ ಕಸಬನ್ನು ಕಲಿಯಬೇಕೆಂದು ಹಂಬಲಿಸಿ ಅನ್ಯರು ಕುಶಲ ಕರ್ಮಿಗಳಾಗಿರಬೇಕು.

೩. ಕುಲ ಕಸಬುದಾರರ ಧಾರ್ಮಿಕ ಸಾಮರಸ್ಯತೆ ಔದಾರ್ಯದಿಂದ ಅನ್ಯರು ಕುಶಲಕರ್ಮಿ ಗಳಾಗಿರಬೇಕು.

೪. ಅನ್ಯ ಸಮುದಾಯದ ಮೇಲೆ ಕಸಬುದಾರರ ಪ್ರಭಾವ ಬೀರಿದುದರ ಪರಿಣಾಮವಾಗಿ ಕುಶಲಕರ್ಮಿಗಳಾಗಿರಬೇಕು.

೫. ಕುಲಕಸಬುದಾರರ ಕಾಯಕ ಪವಿತ್ರ ಮತ್ತು ಶ್ರೇಷ್ಠವಾದುದುರ ಕಾರಣವಾಗಿ ಅನ್ಯರು ಕುಶಲಕರ್ಮಿಗಳಾಗಿರಬೇಕು.

೬. ವಾರಸುದಾರನಿಲ್ಲದ ಕುಲಕಸಬುದಾರ ಹಳ್ಳಿಯಲ್ಲಿ ಅನ್ಯರನ್ನು ಶಿಷ್ಯರನ್ನಾಗಿಸಿಕೊಂಡಿರಬೇಕು.

ಈ ಎಲ್ಲ ಕಾರಣಗಳಿಂದಾಗಿ ಅನ್ಯಜಾತಿಯವರು ಕುಶಲಕರ್ಮಿಗಳಾಗಲು ಸಾಧ್ಯವಾಗಿದೆ. ಹಳ್ಳಿಗಳಲ್ಲಿ ಪರಸ್ಪರ ಅವಲಂಭನಾ ಪದ್ಧತಿಯಿಂದಾಗಿ ಅನಿವಾರ್ಯವಾಗಿ ಅನ್ಯಸಮುದಾಯದವರು ಕುಶಲಕಲೆಯನ್ನು ರೂಢಿಸಿಕೊಂಡರು. ಸಹಾಯಕರಾಗಿ ದುಡಿಯಲು ಆರಂಭಿಸಿದ ಅನ್ಯರು ಕಾಲಕ್ರಮೇಣ ಸ್ವತಃ ಕುಶಲಕರ್ಮಿಗಳಾಗಿ ಕಸಬನ್ನೂ ಪ್ರಾರಂಭಿಸುತ್ತಾರೆ. ಶಿಷ್ಯ ಗುರುವನ್ನು ಮೀರಿಸಬೇಕೆನ್ನುವಂತೆ ಕೆಲವೊಮ್ಮೆ ಅನ್ಯ ಕುಶಲಕರ್ಮಿಗಳು ಕುಲಕಸಬುದಾರರಿಗೆ ಸ್ಪರ್ಧಿಗಳಾಗಿಯೂ ಬೆಳೆದಿರುವುದು ಕಂಡುಬರುತ್ತದೆ. "ಸಾಂಪ್ರದಾಯಿಕ ಕಸಬುಗಳಾದ, ಬಡಗಿಗಾರಿಕೆ, ಕಮ್ಮಾರಿಕೆ ಅಥವಾ ಮತ್ತಾವುದೇ ಕಸಬು, ವಿಶ್ವಕರ್ಮರ ಹೊರತಾಗಿ ಬೇರೆ ಬೇರೆ ಜಾತಿ–ಜನಾಂಗಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುವುದು. ನಾವು ಗಮನಿಸಬೇಕಾದ ಮತ್ತೊಂದು ಬದಲಾವಣೆ."[೩] ಕಾಲಕಾಲಕ್ಕಾದ ಬದಲಾವಣೆಯಿಂದ ಪಾರಂಪರಿಕವಾಗಿ ಬೆಳೆದು ಬಂದ ಕುಶಲಕಲೆಗಳಲ್ಲಿ ಅನ್ಯರು ಪ್ರವೇಶಗೊಳ್ಳುತ್ತಾರೆ. ಇದರಿಂದ ಸಾಂಪ್ರದಾಯಿಕರು ಕಟ್ಟಿಕೊಂಡ ಬಂದ ವೃತ್ತಿಪಾವಿತ್ರ್ಯತೆ ಅನ್ಯರ ಆಗಮನದಿಂದಾಗಿ ಸಡಿಲುಗೊಳ್ಳುತ್ತದೆ. ಶ್ರಮ ಯಥಾಸ್ಥಿತಿಯಾದರೂ ಆರ್ಥಿಕ ಕುಸಿತ

ಕಂಡುಬರುತ್ತದೆ. ತಯಾರಿಸಿದ ವಸ್ತುಗಳ ಬೆಲೆಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಬೆಲೆಗಳಲ್ಲಿ ಬದಲಾವಣೆಗಳು ಕಂಡುಬಂದಾಗ, ವಸ್ತುಗಳ ಗುಣಾತ್ಮಕತೆಯಲ್ಲಿಯೂ ಬದಲಾವಣೆಯಾಗುತ್ತದೆ.

ಸ್ಪರ್ಧೆಯೂ ಕಂಬಾರಿಕೆ-ಬಡಿಗತನದ ಜೊತೆಗೆ ಅಕ್ಕಸಾಲಿ ಅಥವಾ ಚಿನ್ನ-ಬೆಳ್ಳಿ ತಯಾರಿಕೆ ಕಸಬಿನಲ್ಲಿಯೂ ಮುಂದುವರೆದುಕೊಂಡು ಬಂದಿದೆ. ಪ್ರಾಚೀನ ಕಾಲದಲ್ಲಿ ಚಿನ್ನ-ಬೆಳ್ಳಿ ಆಭರಣ ತಯಾರಿಸುವ ಅಕ್ಕಸಾಲಿಗನಿಗೆ ಹಳ್ಳಿ-ಪಟ್ಟಣಗಳಲ್ಲಿ ಶ್ರೇಷ್ಠವಾದ ಸ್ಥಾನ-ಮಾನಗಳಿದ್ದವು. ಆದರೆ ಅನ್ಯಕುಶಲಕರ್ಮಿಗಳ ಪ್ರವೇಶದಿಂದ ಸಾಂಪ್ರದಾಯಿಕ ಕುಶಲಕರ್ಮಿಗಳ ಆದ್ಯತೆಯ ಪ್ರಮಾಣ ಕಡಿಮೆಯಾಯಿತು. ಅನ್ಯಮತೀಯರು ಬಂಗಾರದ ಗ್ರಾಮೀಣ ಉದ್ಯೋಗವನ್ನು ಉದ್ದಿಮೆಯಾಗಿ ಪರಿವರ್ತಿಸಿಕೊಂಡರು. ಕುಲಕಸಬುದಾರ ಇಲ್ಲಿ ದುಡಿಯುವ ಕಾರ್ಮಿಕನಂತೆ ಜೀವನ ಸಾಗಿಸಬೇಕಾಯಿತು. ಸ್ವರ್ಣಗಾರಿಕೆ ಉದ್ದಿಮೆಯಾದ ನಂತರ ಅನ್ಯಮತೀಯರು ಬಂಡವಾಳ ತೊಡಗಿಸಿ ಲಾಭಗಳಿಸಲು ಮುಂದಾದರು. ಕುಲಕಸಬುದಾರ ಕೂಲಿ ಕಾರ್ಮಿಕನಾಗುತ್ತಾನೆ. ಅನ್ಯ ಮತೀಯರು ಮಾಲೀಕರಾಗಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲುಳಿಯುತ್ತಾರೆ.

ಜಾತಿಯೆಂಬುದು ಹುಟ್ಟಿನಿಂದ ನಿರ್ಧಾರವಾಗುತ್ತದೆ. ಇದು ಕುಲಕಸಬುದಾರರಿಗೂ ಅನ್ವಯಿಸುತ್ತದೆ. ಇವರನ್ನು ಹುಟ್ಟಿನಿಂದಲೇ ಪಾಂಚಾಳರೆಂದು ಗುರುತಿಸಲಾಗುತ್ತದೆ. ಕುಶಲಕರ್ಮಿತನ ಮಾಡಲಿ ಬಿಡಲಿ ಇವರು ಸಮಾಜದಲ್ಲಿ ಕಂಬಾರ-ಬಡಿಗೇರ ಅಕ್ಕಸಾಲಿಗರಾಗಿಯೇ ಕರೆಸಿಕೊಳ್ಳುತ್ತಾರೆ. ಆದರೆ ಅನ್ಯಕುಶಲಕರ್ಮಿಗಳನ್ನು ಕಸಬುದಾರಿಕೆಯಿಂದ ಕಂಬಾರ-ಬಡಿಗೇರರೆಂದು ಗುರುತಿಸಲಾಗುತ್ತಿದೆ. ವಿನಃ ಜಾತಿಯಿಂದ ಇವರು ಅನ್ಯರಾಗಿ ಉಳಿಯುತ್ತಾರೆ. ಅನ್ಯಕುಶಲಕರ್ಮಿಗಳಿಗೆ ಕಸಬುದಾರಿಕೆ ಕಲಿಕೆಯಿಂದ ದೊರೆತಿರುತ್ತದೆ. ಇವರು ಹುಟ್ಟಿನಿಂದ ಬೇರೆ ಬೇರೆ ಸಮುದಾಯದವರಾಗಿರುತ್ತಾರೆ. ತಮ್ಮ ಜಾತಿಯ ಆಚಾರ-ವಿಚಾರಗಳನ್ನು ಆರಂಭದಿಂದಲೂ ಮೈಗೂಡಿಸಿಕಂಡು ಬೆಳೆದುಬಂದಿರುತ್ತಾರೆ. ನಂತರದಲ್ಲಿ ಜೀವನೋಪಾಯಕ್ಕಾಗಿ ಕುಶಲಕರ್ಮಿಗಾರಿಕೆಯನ್ನು ರೂಢಿಸಿಕೊಳ್ಳುತ್ತಾರೆ. ಹೀಗಾಗಿ ಅನ್ಯಕುಶಲಕರ್ಮಿಗಳನ್ನು ಅವರವರ ಜಾತಿ-ಪಂಗಡಗಳಿಂದ ಗುರುತಿಸಬೇಕಾಗುತ್ತದೆ. ಎಮಿಲಿ ಸೆನಾಟ್ ಅಭಿಪ್ರಾಯಿಸಿದಂತೆ "ಒಂದು ಕಸಬುಗಾರಿಕೆಯ ಹೆಸರಿನಡಿಯಲ್ಲೆ ವಿಭಿನ್ನ ಜಾತಿ-ಪಂಗಡಗಳನ್ನೆ ಕಾಣಬಹುದಾಗಿದೆ." ಕಸಬುದಾರಿಕೆ ಒಂದೇ ಆದರೂ ಅದನ್ನು ನಿರ್ವಹಿಸುವ ಕಸಬುದಾರರು ಬೇರೆ ಬೇರೆ ಜಾತಿ-ಪಂಗಡದವರಾಗಿದ್ದಾರೆ. ಸಾಂಪ್ರಾದಾಯಿಕ ಕುಶಲಕರ್ಮಿಗಳ ಕಸಬುದಾರಿಕೆಯ ಕೋಟೆಯನ್ನು ಒಡೆದು ಒಳನುಸುಳಿದ ಪಂಚಾಳೇತರ ಕುಶಲಕರ್ಮಿಗಳ ವರ್ಗಗಳಿವೆ.

ಶಿರಸಂಗಿಯನ್ನು ಪ್ರಾದೇಶಿಕ ನೆಲೆಯಾಗಿರಿಸಿಕೊಂಡು ಇಲ್ಲಿ ಕುಶಲಕರ್ಮಿಗಳನ್ನು ಅಧ್ಯಯನಿಸಲಾಗಿದೆ. ಈ ಪ್ರದೇಶದ ಸಾಂಪ್ರದಾಯಿಕ ಕುಶಲಕರ್ಮಿಗಳ ಕಸಬುದಾರಿಕೆಯ ಜೊತೆಗೆ ಹಳ್ಳಿ-ಪಟ್ಟಣಗಳಲ್ಲಿ ದುಡಿಯುವ ಅನ್ಯಕುಶಲಕರ್ಮಿ ವರ್ಗಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

ಪ್ರಮುಖ ಅನ್ಯಕುಶಲಕರ್ಮಿ ವರ್ಗಗಳು.

೧. ಹಿಂದೂ ಕುಶಲಕರ್ಮಿಗಳು

೨. ಮುಸ್ಲಿಂ ಕುಶಲಕರ್ಮಿಗಳು

೩. ಕ್ರೈಸ್ತ ಕುಶಲಕರ್ಮಿಗಳು

ಅನ್ಯಕುಶಲಕರ್ಮಿ ವರ್ಗಗಳು

- ಹಿಂದೂ ಕುಶಲಕರ್ಮಿ
  - ಕುರುಬರು
  - ಕ್ಷತ್ರೀಯ
  - ಲಿಂಗಾಯತ
  - ಮಾದರ
  - ಮರಾಠ
  - ಇತರೆ
- ಮುಸ್ಲಿಂ ಕುಶಲಕರ್ಮಿ
- ಕ್ರೈಸ್ತಕುಶಲಕರ್ಮಿ

೧. ಹಿಂದೂ ಕುಶಲಕರ್ಮಿ ವರ್ಗಗಳು

ಕರ್ನಾಟಕ-ಶಿರಸಂಗಿ ಪ್ರಾದೇಶಿಕ ನೆಲೆಯಲ್ಲಿ ಪ್ರತಿಶತ ೮೦ ರಿಂದ ೮೫ ರಷ್ಟು ಹಿಂದೂಗಳು ವಾಸವಾಗಿದ್ದಾರೆ. ಪ್ರತಿ ಹಳ್ಳಿಗಳಲ್ಲಿಯೂ ಪ್ರಮುಖವಾಗಿ ವ್ಯವಸಾಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದಾರೆ. ವ್ಯವಸಾಯದೊಂದಿಗೆ ತಮಗೆ ಪರಿಚಿತವಿರುವ ಕೆಲಸವನ್ನು ಮಾಡುತ್ತ ಬಂದಿದ್ದಾರೆ.ಕೃಷಿ ಉಪಕರಣಗಳ ಜ್ಞಾನವಿರುವ ಹಿಂದೂಗಳು ಹೊಲ-ತೋಟ-ಗದ್ದೆಗಳಲ್ಲಿ ಕೃಷಿ ಉಪಕರಣಗಳು ತುಂಡರಿಸಿಗೊಂಡು ಕೆಲಸ ನಿಂತು ಹೋದಾಗ ತಾವೇ ಕಟ್ಟಿಗೆ ಕೆತ್ತಿ ಹಾಸಿ ಕೆಲಸ ಸಾಗಿಸುತ್ತಾರೆ. ಇದು ಹಿಂದೂಗಳು(ಪಾಂಚಾಳರನ್ನು ಹೊರತುಪಡಿಸಿ) ಕಲಿತುಕೊಂಡು ಪ್ರಾಥಮಿಕ ಕುಶಲಕರ್ಮಿಗಾರಿಕೆ, ರೆಂಟೆ-ಕುಂಟೆಗಳ ಈಸು-ತಾಳುಗಳನ್ನು 'ಪಾಂಚಾಳರು' ಹಾಸುವಾಗ ರೈತಾಪಿ ವರ್ಗವಾದ ಹಿಂದೂಗಳು 'ಕಡದು-ಬಳದು'ಗಳ ಜ್ಞಾನವಂತಿಕೆಯನ್ನು ತಿಳಿಸುವವರಾಗಿದ್ದಾರೆ. ಗ್ರಾಮಗಳ ಜಾತ್ರೆ-ಉತ್ಸವಗಳಲ್ಲಿ ತೇರನ್ನು ತಯಾರಿಸುವುದು ಪಾಂಚಾಳರ ಕೆಲಸವಾದರೂ ಹಿಂದೂಗಳೇ ತೇರಿನ ಸ್ವರೂಪ-ಮಜಲುಗಳನ್ನು ವಿವರಿಸುವ ಜ್ಞಾನಿಗಳಾಗಿದ್ದಾರೆ. ಸಾಂಸ್ಕೃತಿಕ ಸಂದರ್ಭಗಳಲೆಲ್ಲ ಪಾಂಚಾಳರ ಜೊತೆ ಹಿಂದೂಗಳೇ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಅನುಭವ ಜ್ಞಾನವನ್ನು ಹಂಚಿ ಕೊಳ್ಳುತ್ತಾರೆ. ಕಂಬಾರ, ಬಡಿಗೇರ, ಕಂಚುಗಾರ ಶಿಲ್ಪಿ ಮತ್ತು ಅಕ್ಕಸಾಲಿಗರ ಕಸಬಿನ ಪೋಷಕ ಮತ್ತು ಸಾಂದರ್ಭಿಕ ಕರ್ಮಕಾರರು ಹಿಂದೂಗಳಾಗಿದ್ದಾರೆ.

ಶ್ರಮ ಸಂಸ್ಕೃತಿಯ ಹರಿಕಾರರಾದ ಪಾಂಚಾಳ ಕುಶಲಕರ್ಮಿಗಳು ಹಿಂದೂಗಳಲ್ಲಿಯೇ ಒಂದು ವರ್ಗ, ಇವರ ಮತ್ತು ಇತರ ಹಿಂದೂಗಳ ಆಚಾರ-ವಿಚಾರಗಳಲ್ಲಿ ಸ್ವಲ್ಪ ಮಟ್ಟಿಗೆ ಸಾಮ್ಯತೆಗಳು ಕಂಡುಬರುತ್ತವೆ. ಪಾಂಚಾಳರು ಪ್ರಧಾನವಾಗಿ ವೈಧಿಕ ಸಂಪ್ರದಾಯಿಗಳು, ಇತರ ಹಿಂದೂಗಳು ಸಾಮಾನ್ಯವಾಗಿ ವೈದಿಕತೆಯ ಜೊತೆಗೆ ಶೈವ ಸಂಪ್ರದಾಯಿಗಳಾಗಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಗೃಹ ಕೈಗಾರಿಕೆಗಳನ್ನು ನಿರ್ವಹಿಸಿಕೊಂಡು ಬಂದವರು ಹಿಂದೂಗಳು. ಅದರಲ್ಲಿ ಪಂಚ ಕಸಬುಗಳನ್ನು ಕುಲಕಸಬಾಗಿಸಿಕೊಂಡವರು ಹಿಂದೂಗಳು. ಹೀಗಾಗಿ ಕಂಬಾರ, ಬಡಿಗೇರ, ಕಂಚುಗಾರ ಶಿಲ್ಪಿ ಮತ್ತು ಅಕ್ಕಸಾಲಿ ಕಸಬುಗಳು ಸಾಮಾನ್ಯವಾಗಿ ಎಲ್ಲ ಹಿಂದೂಗಳಿಗೂ ಪರಿಚಿತ ಮತ್ತು ಬದುಕಿಗೆ ಸಮೀಪವಾದ ಕಸಬಾಯಿತು. ಇದರಿಂದ ಹಿಂದೂಗಳಾದ ಕುರುಬರು, ಕ್ಷತ್ರೀಯರು, ಲಿಂಗಾಯತ, ಮಾದರ, ಮರಾಠ ಮತ್ತು ಇತರೆ ವರ್ಗದವರು ತಮ್ಮ ಜೀವನೋಪಾಯಕ್ಕಾಗಿ ಪಂಚಾಳೇತರ ಸಮುದಾಯದ ಕುಶಲಕರ್ಮಿಗಳಾಗಿ ಸಮಾಜದಲ್ಲಿ ಗುರುತಿಸಿಕೊಂಡರು.

೧. **ಕುರುಬರು:** ಕರ್ನಾಟಕದ ಪ್ರಮುಖ ಜನ ಸಮುದಾಯಗಳಲ್ಲಿ ಹಾಲುಮತ ಸಮುದಾಯ ಒಂದಾಗಿದೆ. ಇವರನ್ನು 'ಕುರುಬರು' ಎಂದು ಕರೆಯುತ್ತಾರೆ. ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಾಡಿಗೆ ನೀಡಿದ ಕೊಡುಗೆ ಕುರುಬರದು ಅನನ್ಯವಾಗಿದೆ. ಕೃಷಿಯು ಕುರುಬರ ಪ್ರಧಾನ ಉದ್ಯೋಗ, ಇದರ ಜೊತೆ ಕುರಿ ಸಾಕಾಣಿಕೆ, ಪಶುಪಾಲನೆ ಸಹ-ಉದ್ಯೋಗಗಳಾಗಿವೆ. ಕುರುಬರಿಗೂ ಒಂದು ಜೀವನ ಪದ್ಧತಿಯಿದೆ. ನಾಡಿನ ಸಂಸ್ಕೃತಿಯ ನಿರ್ಮಾಣದಲ್ಲಿ ಪ್ರಮುಖರಾಗಿದ್ದಾರೆ. ಜಾತ್ರೆ-ಉತ್ಸವ, ಹಬ್ಬ-ಹರಿದಿನಗಳನ್ನು ಆಚರಿಸುತ್ತಾರೆ. ಕುರುಬರು ಮೌಖಿಕ ಪರಂಪರೆಯ ರೂವಾರಿಗಳಾಗಿದ್ದಾರೆ. ಒಂದು ವಿಷಯವನ್ನು ಒಮ್ಮೆ ಹೇಳಿದರೆ ಮತ್ತೆಂದು ಮರೆಯುವುದಿಲ್ಲ. ಜ್ಞಾಪಕಶಕ್ತಿ ಅಪಾರವಾದುದು. ಕಲೆಗಳ ಕಲಿಕೆ ಇವರಿಗೆ ಅಂತರ್ಗತವಾಗಿದೆ. ಸ್ವಭಾವತಃ ಕುರುಬರು ಮುಗ್ಧರು. ಆರ್ಥಿಕವಾಗಿ ಹಿಂದುಳಿದವರು. ಕೃಷಿ ಮತ್ತು ಕುರಿ ಸಾಕಾಣಿಕೆ ಜೀವನೋಪಾಯ ಮಾಡಲು ಕಷ್ಟ ಸಾಧ್ಯವಾಗಿರುವಾಗ ಬೇರೆ ಬೇರೆ ವೃತ್ತಿಗಳನ್ನು ಕುರುಬರು ಆಯ್ಕೆ ಮಾಡಿಕೊಂಡರು. ಇದರಿಂದ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಸಾಧ್ಯವಾಯಿತು. ಕುರುಬರು "ಕಾಲಾಂತರದಲ್ಲಿ ಕುರಿಗಳನ್ನು ಸಾಕುವುದರ ಜೊತೆ ಜೊತೆಗೆ ಇತರ ವೃತ್ತಿಗಳಿಗೆ ನಿಧಾನವಾಗಿ ಬಂದವರು ಸದ್ಯದ ಸ್ಥಿತಿಯಲ್ಲಿ ಹಾಲುಮತ ಅಥವಾ ಕುರುಬರು. ಮೂಲ ವಲಯವಾದ ಬೇಸಾಯ, ದ್ವಿತೀಯ ವಲಯವಾದ ಕೈಗಾರಿಕೆ ಗುಡಿ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ."[೪]


ಕುರುಬರು ಆರ್ಥಿಕವಾಗಿ ಬೆಳೆಯಲು ಮೂಲ ವಲಯವೆಂದು ವ್ಯವಸಾಯವನ್ನು ಪರಿಗಣಿಸಿದ್ದಾರೆ. ಮತ್ತಷ್ಟು ಆರ್ಥಿಕವಾಗಿ ಸುಧಾರಿಸಲು ಎರಡನೆಯ ವಲಯವಾಗಿ ಗುಡಿ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. ಕುರುಬರು ಆರ್ಥಿಕ ಸುಧಾರಣೆಗಾಗಿ ಪ್ರಮುಖವಾಗಿ ನಾಲ್ಕು(೪) ಆರ್ಥಿಕ ವಲಯಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಡಾ.ಕೆ.ಸಿದ್ದಪ್ಪ ಅವರು 'ಆರ್ಥಿಕ ವಿಚಾರಗಳು' ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

೧. ಪಶುಪಾಲನೆ(ಕುರಿ, ಮೇಕೆಗಳ ಸಾಕಾಣಿಕೆ)

೨. ವ್ಯವಸಾಯ-ಜೇನು ಸಾಕಾಣಿಕೆ

೩. ಗುಡಿ ಕೈಗಾರಿಕೆ

೪. ಸೇವಾ ವಲಯ



ಇವರ ಪ್ರಮುಖ ಉದ್ಯೋಗ ವ್ಯವಸಾಯ ಪಶುಪಾಲನೆ, ನಂತರದಲ್ಲಿ ಗುಡಿ ಕೈಗಾರಿಕೆ, ಸರ್ಕಾರಿ, ಖಾಸಗಿ ನೌಕರಿ ಸೇವಾವಲಯಗಳಾಗಿವೆ.

ಕುರುಬರು ಗುಡಿ ಕೈಗಾರಿಕೆಯನ್ನು ಮಾಡುತ್ತ ಬಂದಿರುವುದರಿಂದ ಗ್ರಾಮೀಣ ಕುಶಲಕರ್ಮಿಗಳ ಭಾಗವಾಗಿದ್ದಾರೆ. ಕುಶಲಕಲೆ ಈ ಸಮುದಾಯದಲ್ಲಿಯೂ ಉನ್ನತವಾದುದ್ದಾಗಿತ್ತು. ಕುರಿಯ ಉಣ್ಣೆಯಿಂದ ಕಲಾತ್ಮಕ ಮತ್ತು ಉತ್ಕೃಷ್ಟ ಕಂಬಳಿಗಳನ್ನು ನೇಯುವುದು ಇವರ ಪ್ರಮುಖ ಕುಶಲಕಲೆಯಾಗಿದೆ. ಈ ಕಲೆಯ ಅರಿವಿನಿಂದಾಗಿ ಪಾಂಚಾಳರ ಕುಲಕಸಬನ್ನು ಕಲಿತುಕೊಂಡು ಜೀವನೋಪಾಯ ಕಂಡುಕೊಂಡಿದ್ದಾರೆ.

ಕುರುಬ ಸಮುದಾಯದ ಕುಶಲಕರ್ಮಿಗಳ ಪ್ರಮಾಣ ಕಡಿಮೆ. ಪಾಂಚಾಳರ ಐದು ಬಗೆಯ ಕಸಬನ್ನು ನಿರ್ವಹಿಸುವುದಿಲ್ಲ. ಪ್ರಮುಖವಾಗಿ ಕಂಬಾರಿಕೆ ಮತ್ತು ಬಡಿಗತನ ಕಸಬನ್ನು ಮಾಡುತ್ತಿದ್ದಾರೆ. ಅವಶ್ಯಕವೆನಿಸುವ ಕಸಬುದಾರಿಕೆಯ ಉಪಕರಣಗಳನ್ನು ತಯಾರಿಸುವಲ್ಲಿ ಕಂಬಾರ ವೃತ್ತಿಯಲ್ಲಿ ತೊಡಗುತ್ತಾರೆ. ಹೆಚ್ಚಾಗಿ ಬಡಿಗತನ ಕಸಬನ್ನು ಮಾಡುತ್ತಾರೆ. ಪಾಂಚಾಳರಂತೆ ಕುರುಬ ಕುಶಲಕರ್ಮಿಗಳೂ ರೈತನಿಗೆ ಅನುಕೂಲವಾಗುವ ಕೃಷಿ ಉಪಕರಣ, ಗೃಹೋಪಕರಣ ಮತ್ತು ಆಧುನಿಕ ವಸ್ತುಗಳನ್ನು ತಯಾರಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಬಡಿಗತನದ ಕಸಬು ಬೇಡಿಕೆಯ ಕಸಬಾಗಿರುವುದರಿಂದ ಕುರುಬ ಕುಶಲಕರ್ಮಿಗಳು ಬಡಿಗತನ ವೃತ್ತಿಯ ರೆಂಟೆ-ಕುಂಟೆ, ಕೂರಿಗೆ, ಮೇಳಿ ಮುಂತಾದ ಉಪಕರಣಗಳನ್ನು ರೈತರಿಗೆ ತಯಾರಿಸಿಕೊಡುತ್ತ ಬಂದಿದ್ದಾರೆ. ಸಕಾಲದಲ್ಲಿ ಕೃಷಿ ಉಪಕರಣಗಳು ದೊರೆಯುತ್ತಿರುವುದರಿಂದ ರೈತ ವರ್ಗದ ಕೆಲವರು ಕುರುಬ ಕುಶಲಕರ್ಮಿಯಲ್ಲಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಪಾಂಚಾಳ ಕುಶಲಕರ್ಮಿಗೆ ಕೆಲಸದ ಒತ್ತಡ ಕಡಿಮೆಯಾಗುತ್ತದೆ. ಹಳ್ಳಿಯ ಕೆಲವು ಕುಟುಂಬಗಳು ಕುರುಬ ಕುಶಲಕರ್ಮಿಗಳಲ್ಲಿ ಕೆಲಸ ಮಾಡಿಸಿಕೊಂಡು ಅವನಿಗೆ ಧವಸ-ಧಾನ್ಯಗಳನ್ನು ನೀಡುತ್ತ ಬಂದಿದ್ದಾರೆ.

ಪಾಂಚಾಳ ಕುಶಲಕರ್ಮಿಗಳನ್ನು 'ಆಯಗಾರ'ರೆಂದು ಕರೆಯಲಾಗುತ್ತದೆ. ವರ್ಷದ ಉದ್ದಕ್ಕೂ ದುಡಿದು ವರ್ಷಕ್ಕೊಮ್ಮೆ ಸುಗ್ಗಿಯಲ್ಲಿ ಧವಸ-ಧಾನ್ಯಗಳನ್ನು ಆಯಗಾರರು ರೈತನಿಂದ ಪಡೆಯುತ್ತಿದ್ದರು. ಇದು ಕುರುಬ ಕುಶಲಕರ್ಮಿಗೂ ಅನ್ವಯವಾಯಿತು. ಕ್ರಮೇಣ ಅನ್ಯಕುಶಲಕರ್ಮಿಯೂ ಆಯಗಾರನಾಗುತ್ತಾನೆ. ಊರ ರೈತರ ಸ್ನೇಹ-ಸಹಕಾರ, ಗೌರವ

ಪಡೆಯುತ್ತಾನೆ. ಪಾಂಚಾಳರಲ್ಲಿ ಕಸಬಿನ ಉಪಕರಣಗಳು ಹೇರಳವಾಗಿರುತ್ತವೆ. ಅನ್ಯ ಕುಶಲಕರ್ಮಿಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಯಾರಿಸಿಕೊಂಡ ಉಪಕರಣಗಳು ಕಡಿಮೆ ಪ್ರಮಾಣದಲ್ಲಿರುತ್ತವೆ. ಇದರಿಂದ ಅನ್ಯಕುಶಲಕರ್ಮಿಯಾದ ಕುರುಬರು ಪಾಂಚಾಳರನ್ನು ಅವಲಂಬಿಸುವುದು ಅನಿವಾರ್ಯವಾಗುತ್ತಿತ್ತು. ಕುರುಬರು ತಾವು ಅನ್ಯಕುಶಲಕರ್ಮಿಗಳೆಂಬ ಭಾವದಿಂದಲೇ ಕುಲಕಸಬುದಾರರ ಸಹಾಯ ಪಡೆಯುತ್ತಿದ್ದರು. ಕುರುಬ ಕುಶಲಕರ್ಮಿಗಳು ಕಂಬಾರಿಕೆ-ಬಡಿಗತನದಲ್ಲಿ ನಿಷ್ಣಾತರಾಗಿದ್ದರೂ ಕಸಬುದಾರಿಕೆಯ ಮಹತ್ವದ ಉಪಕರಣಗಳನ್ನು ತಯಾರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಪಾಂಚಾಳರ ಕುಲಕಸಬುಗಾರಿಕೆಯನ್ನು ಆರಂಭಿಸಿ ಮುಂದುವರೆಸಿಕೊಂಡು ಬಂದಿರುವ ಕುರುಬ ಸಮುದಾಯದ ಕುಶಲಕರ್ಮಿಗಳ ಕುಟುಂಬಗಳನ್ನು ಗಮನಿಸಲಾಗಿದೆ. ಕುರುಬರಲ್ಲಿ ಮೂರು ತಲೆಮಾರಿನವರೆಗೂ ಕುಶಲಕರ್ಮಗಾರಿಕೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಬೆಳಗಾವಿ ಜಿಲ್ಲೆಯ ಕೌಜಲಗಿ-ಬಾಗೋಜಿಕೊಪ್ಪ ರಸ್ತೆಯಲ್ಲಿರುವ ಮೂರು ಮುಖದವ್ವ ತೋಟದಲ್ಲಿ ಹುಚ್ಚಾಡಿ ಮನೆತನದವರು ಉದ್ಯೋಗದಲ್ಲಿ ಮುಂದುವರೆದಿದ್ದಾರೆ. ಹುಚ್ಚಾಡಿ ಕುರುಬ ಮನೆತನವನ್ನು ಇಲ್ಲಿ ಉಲ್ಲೇಖಿಸುವುದು ನನಗೆ ಮಹತ್ವದೆನಿಸುತ್ತದೆ.

ಹುಚ್ಚಾಡಿ ಕುಟುಂಬದಲ್ಲಿ ಇಂದಿಗೂ ಮೂರನೆಯ ತಲೆಮಾರಿನವರು ಕುಶಲಕರ್ಮಿಯಾಗಿ ರೈತರ ಸೇವೆ ಸಲ್ಲಿಸುತ್ತಿದ್ದಾರೆ. ಮೊದಲನೆ ತಲೆಮಾರಿನ ಕುರುಬ ಸಮುದಾಯದ ಕುಶಲಕರ್ಮಿ ಸಿದ್ದಪ್ಪ, ಕಲ್ಲಪ್ಪ ಹುಚ್ಚಾಡಿ(೧೯೧೫ ಅಂದಾಜು). ಈತನಿಂದ ಹುಚ್ಚಾಡಿ ಕುಟುಂಬದಲ್ಲಿ ಕುಶಲ ಕರ್ಮಗಾರಿಕೆ ಆರಂಭವಾಗುತ್ತದೆ. ಸಿದ್ದಪ್ಪ ಸ್ವಾತಂತ್ರ್ಯಪೂರ್ವದ ವ್ಯಕ್ತಿ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಕಂಡವನು. ಶಿಕ್ಷಣವಂತೂ ಶೂನ್ಯ ಅನಕ್ಷರಸ್ಥನಾಗಿದ್ದರೂ ಸ್ಮರಣಶಕ್ತಿ ಅಗಾಧವಾಗಿತ್ತು. ಈ ಬಲದಿಂದ ಸಿದ್ದಪ್ಪ ಕುಶಲಕರ್ಮಗಾರಿಕೆ ಕಲಿಯಲು ಸಾಧ್ಯವಾಗಿರಬೇಕು. ತಂದೆ ಕಲ್ಲಪ್ಪ ಜಮೀನುದಾರರ ಹೊಲಗಳಲ್ಲಿ ಕೂಲಿಯಾಗಿದ್ದವನು. ಸಿದ್ದಪ್ಪ ಕೂಲಿಯಾಳಾಗುವುದು ಕಲ್ಲಪ್ಪನಿಗೆ ಇಷ್ಟವಿರಲಿಲ್ಲ. ಕುಶಲಕರ್ಮಿ ಸಿದ್ದಪ್ಪ ಮೊದಲು ಗ್ರಾಮದಲ್ಲಿ ವಾಸವಾಗಿದ್ದನು. ಈತನು ಮನೆ ಪಾಂಚಾಳರ ಮನೆಯ ಹತ್ತಿರವಿತ್ತು. ಸಿದ್ದಪ್ಪನ ಬಾಲ್ಯವೆಲ್ಲ ಕುಲಕಸಬುದಾರ ಹುಡುಗರೊಂದಿಗೆ ಕಳೆಯಿತು. ಸಿದ್ದಪ್ಪನಿಗೆ ಕೇಳಿರುವುದನ್ನು ನೆನಪಿಟ್ಟುಕೊಳ್ಳುವುದು, ಮಾಡಿರುವುದು ಕಲಿತುಕೊಳ್ಳುವುದು ರೂಢಿಯಾಯಿತು. ಇದರಿಂದ ಕಸಬುದಾರಿಕೆಯನ್ನು ಬಡಿಗೇರ ಓಣಿಯಲ್ಲಿಯೇ ಇದ್ದುಕೊಂಡು ಕಲಿತುಕೊಳ್ಳುತ್ತಾನೆ. ಗ್ರಾಮದಲ್ಲಿ ಹಲವು ರೈತ ಕುಟುಂಬಗಳ ಆಯಗಾರನಾಗಿ ಕಸಬಿನಲ್ಲಿ ತೊಡಗುವುದರ ಮೂಲಕ ಅನ್ಯಕುಶಲಕರ್ಮಿಯಾಗಿ ರೂಪಗೊಳ್ಳುತ್ತಾನೆ.

ಕಾಲಾಂತರದಲ್ಲಿ ಸಿದ್ದಪ್ಪ ಕುಶಲಕರ್ಮಿಯಾಗಿ ಮುಂದುವರೆದಂತೆ ಒಂದು ಗಂಡು ಮಗು ಜನಿಸುತ್ತದೆ. ಮಗನಿಗೆ ತಂದೆಯ ಹೆಸರು ಕಲ್ಲಪ್ಪನೆಂದು ನಾಮಕರಣವಾಗುತ್ತದೆ. ಕುರುಬ ಸಮುದಾಯದ ಕುಶಲಕರ್ಮಿ ಸಿದ್ದಪ್ಪನ ರಕ್ತ ಹಂಚಿಕೊಂಡು ಹುಟ್ಟಿದ ಕಲ್ಲಪ್ಪನಿಗೆ ಕುಶಲಕರ್ಮಿತನ ಮತ್ತಷ್ಟು ಆಸಕ್ತಿಯ ಕ್ಷೇತ್ರವಾಗುತ್ತದೆ. ಕಲ್ಲಪ್ಪ(೧೯೪೫-೪೭) ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿದರೂ ಸ್ವಾತಂತ್ರ್ಯ ನಂತರದಲ್ಲಿಯೇ ಕುಶಲಕರ್ಮಿಯಾಗಿ ಬೆಳೆಯುತ್ತಾನೆ. ತಂದೆಗಿಂತ ಹೆಚ್ಚು ಪಾಂಚಾಳ ಹುಡುಗರ ಜೊತೆ ಕಲ್ಲಪ್ಪ ಬೆಳೆಯಲು ಸಾಧ್ಯವಾಗುತ್ತಿದೆ. ಕಲ್ಲಪ್ಪನ ಕಾಲಕ್ಕೂ ವಾಸದ ಮನೆ ಬದಲಾಗಲಿಲ್ಲ. ಗ್ರಾಮದ ಬಡಿಗೇರ ಓಣಿಯ ದ್ಯಾಮವ್ವನ ಗುಡಿ ಹತ್ತಿರವೇ ಇತ್ತು. ಕಲ್ಲಪ್ಪನಿಗೆ ಕಿರಿಯ ಸಹೋದರ ಬಸಪ್ಪನು ಒಡನಾಡಿಯಾಗಿ ಬೆಳೆಯುತ್ತಾನೆ. ತಂದೆಯಂತೆ ಕಲ್ಲಪ್ಪ-ಬಸಪ್ಪ ಕುಶಲಕರ್ಮಿಗಳಾಗಿ ಬೆಳೆಯುತ್ತಾರೆ. ಕೆಲಸ ಮಾಡಿಸಿಕೊಳ್ಳುವ ರೈತ ಕುಟುಂಬಗಳ ಪ್ರಮಾಣ ಹೆಚ್ಚಾಗುತ್ತದೆ. ಸಿದ್ದಪ್ಪನ ಮನೆಯ ಮುಂದಿರುವ ಬಡಿಗ ಸಾಲಿಯ ಒಂದು ಅಡ್ಡಿಬಡ್ಡಿ ಎರಡಾಗುತ್ತವೆ. ವೈಚಿತ್ರ್ಯವೆಂದರೆ ಸಿದ್ದಪ್ಪನ ಕೊನೆಯ ಎರಡು ಮಕ್ಕಳು ನಾಗಪ್ಪ ಮತ್ತು ವೆಂಕಪ್ಪ ಬಡಿಗೇರ ಓಣಿಯಲ್ಲಿ ಹುಟ್ಟಿ ಬೆಳೆದರೂ ಕುಶಲಕರ್ಮಿ ಗಳಾಗುವುದಿಲ್ಲ. ವ್ಯವಸಾಯಗಾರರಾಗುತ್ತಾರೆ. ಕಲ್ಲಪ್ಪ ಮತ್ತು ಬಸಪ್ಪ ಮಾತ್ರ ಕುಶಲಕರ್ಮಿ ಗಳಾಗುತ್ತಾರೆ. ಹುಟ್ಟಿನಿಂದ ಯಾರುಕಸಬುದಾರರು ಆಗುವುದಿಲ್ಲ. ಹುಟ್ಟಿದ ಮೇಲೆ ಕಸಬುದಾರಿಕೆ ಕಲಿತುಕೊಳ್ಳಲಾಗುತ್ತದೆ ಎಂಬ ಸಂಗತಿಯನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕಾಗುತ್ತದೆ. ಪಾಂಚಾಳನಿಗೆ ಕಸಬು ಹುಟ್ಟಿನಲ್ಲಿಯೇ ರಕ್ತಗತವಾದರೆ, ಅನ್ಯ ಸಮುದಾಯದ ಕುಶಲಕರ್ಮಿಗೆ ಹುಟ್ಟಾದ ಮೇಲೆ ಕಲಿಕೆಯಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

೧೯೭೫-೭೭ರ ಹೊತ್ತಿಗೆ ಕುಶಲಕರ್ಮಿಗಳಾಗಿದ್ದ ಕಲ್ಲಪ್ಪ-ಬಸಪ್ಪ ಇಬ್ಬರೂ ಸಹೋದರರಿಗೆ ಒಂದೊಂದು ಗಂಡು ಮಕ್ಕಳು ಜನಿಸುತ್ತಾರೆ. ಕಲ್ಲಪ್ಪ ತನ್ನ ಮಗನಿಗೆ ತಂದೆಯ ಹೆಸರು ಸಿದ್ದಪ್ಪ ಎಂದು ನಾಮಕರಣ ಮಾಡುತ್ತಾರೆ. ಬಸಪ್ಪನ ಮಗ ಮಹಾಂತೇಶ. ಸಿದ್ದಪ್ಪ ಮತ್ತು ಮಹಾಂತೇಶ ಹುಚ್ಚಾಡಿ ಕುಟುಂಬದ ಮೂರನೆಯ ತಲೆಮಾರಿನ ಕುಶಲಕರ್ಮಿಗಳು ಅಜ್ಜ-ಅಪ್ಪನಂತೆ ಇವರ ಬಾಲ್ಯವು ಪಾಂಚಾಳರ ಜೊತೆ ಕಳೆಯುತ್ತದೆ. ಹತ್ತಾರು ವರ್ಷಗಳ ಕಾಲ ಈ ಹುಡುಗರು ತಾವು ಪಾಂಚಾಳರೆಂದೇ ಭಾವಿಸಿಕೊಂಡಿದ್ದರು. ಅರಿವು ಮೂಡಿದಾಗ ಕುರುಬರೆಂಬುದು ಸಿದ್ದಪ್ಪ-ಮಹಾಂತೇಶರ ಗಮನಕ್ಕೆ ಬರುತ್ತದೆ. ಆಗಲೇ ಅವರು ೩೦ ವರ್ಷದ ಯುವಕರಾಗಿ ತಂದೆ-ಅಜ್ಜನಿಂದ ಬಳುವಳಿಯಾಗಿ ಬಂದ ಕುಶಲಕರ್ಮಗಾರಿಕೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ೬೦ರ ದಶಕದಲ್ಲಿ ಕಲ್ಲಪ್ಪನ ಸಹೋದರ ಬಸಪ್ಪ ಕುಟುಂಬ ಸಮೇತ ಬೀರನಗಡ್ಡಿ ಗ್ರಾಮದಲ್ಲಿ ವಾಸಮಾಡುತ್ತಾನೆ. ಅಲ್ಲಿಯೇ ರೈತರ

ಕೃಷಿಯೋಪಕರಣಗಳನ್ನು ತಯಾರಿಸಿ ಕೊಡುತ್ತಾನೆ. ಯುವಕ ಸಿದ್ದಪ್ಪ ತಂದೆ ಅಜ್ಜನಕ್ಕಿಂತಲೂ ಹೆಚ್ಚಾಗಿ ಉದ್ಯೋಗದಲ್ಲಿ ಚತುರತೆಯನ್ನು ತೋರುತ್ತಾನೆ. ರೈತರ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವುದರ ಜೊತೆಗೆ ಮನೆಯ ಕಟ್ಟಡಗಳನ್ನು ತಯಾರಿಸುವುದು, ಬಾಗಿಲು-ಕಿಟಕಿ, ಮೇಜು-ಕುರ್ಚಿಗಳನ್ನು ತಯಾರಿಸಿಕೊಡುವುದನ್ನು ಕಲಿತುಕೊಳ್ಳುತ್ತಾನೆ. ನೌಕರಸ್ಥರ ಮನೆಗಳಲ್ಲಿ ಪ್ಲಾವುಡ್, ಸನ್‌ಮಾಯಿಕ್, ಗ್ಲಾಸ್ ಜೋಡಿಸುವ ಆಧುನಿಕ ಕುಶಲಕರ್ಮಗಾರಿಕೆಯನ್ನು ಕಲಿತುಕೊಂಡು ಕಸಬಿನಲ್ಲಿ ಮುಂದುವರೆಯುತ್ತಾನೆ. ಈಗಾಗಲೇ ಅನೇಕ ದೇವಾಲಯಗಳಿಗೆ ಪಲ್ಲಕ್ಕಿಗಳನ್ನು ಮಂಟಪಗಳನ್ನು ತಯಾರಿಸಿಕೊಡುತ್ತಿದ್ದಾನೆ. ಆಧುನಿಕ ಉಪಕರಣಗಳಾದ ಕಟರ್, ಡ್ರೀಲ್ ಮಸೀನ್, ಪಾಲಿಸ್ ಮಷೀನಗಳನ್ನು ಕಸಬಿನಲ್ಲಿ ಬಳಸುತ್ತಿದ್ದಾನೆ. ಪಾಂಚಾಳ ಕುಶಲಕರ್ಮಿಗಳಂತೆ ೨ನೇ ಸಿದ್ದಪ್ಪನು ಅನ್ಯ ಸಮುದಾಯದ ಕುಶಲಕರ್ಮಿಯಾಗಿದ್ದಾನೆ. ಉದ್ಯೋಗವನ್ನು ತನ್ನ ಸ್ವಂತದ ತೋಟದ ಜಾಗದಲ್ಲಿ ನಡೆಸುತ್ತಿದ್ದಾನೆ.

ಕುಶಲಕರ್ಮಿ ಹುಚ್ಚಾಡಿ ಕುಟುಂಬ ವಿವರ

ಿನೇ ಸಿದ್ದಪ್ಪ(೧೯೧೫)

ಕಲ್ಲಪ್ಪ(೧೯೪೫) ಬಸಪ್ಪ ನಾಗಪ್ಪ(ವ್ಯವಸಾಯಗಾರ) ವೆಂಕಪ್ಪ(ವ್ಯವಸಾಯಗಾರ)

೨ನೇ ಸಿದ್ದಪ್ಪ(೧೯೭೫) ಮಹಾಂತೇಶ

ಆನಂದ(೨೦೦೧)(ಶಿಕ್ಷಣ)

ಕುರುಬ ಸಮುದಾಯದ ಕುಶಲಕರ್ಮಿಗಳು ಪಾಂಚಾಳರಂತೆ ಎಲ್ಲ ವಸ್ತುಗಳನ್ನು ತಯಾರಿಸಿದರೂ ಕೆಲವು ಪ್ರಮುಖವಾದವುಗಳನ್ನು ನಿರಾಕರಿಸುತ್ತಿದ್ದರು. ಊರಲ್ಲಿ ಯಾರಾದರೂ ತೀರಿಕೊಂಡಾಗ, ಆ ಹೊತ್ತಿನಲ್ಲಿ ಪಾಂಚಾಳ ಕುಶಲಕರ್ಮಿಗಳು ಊರಲ್ಲಿ ದೊರೆಯದಿದ್ದಾಗಲೂ ಶವ ಹೊರುವ ಛಟ್ಟಪಲ್ಲಕ್ಕಿ ಅಥವಾ ಛಟ್ಟವನ್ನು ತಯಾರಿಸುತ್ತಿರಲಿಲ್ಲ. ಇದನ್ನು ಪಾಂಚಾಳರೇ ತಯಾರಿಸಬೇಕೆಂದು ರೈತರಿಗೆ ಕಲ್ಲಪ್ಪ ಹೇಳುತ್ತಿದ್ದುದು ನಾನೇ ಕೇಳಿಸಿಕೊಂಡಿದ್ದೇನೆ. ಅನ್ಯ ಸಮುದಾಯದ ಕುಶಲಕರ್ಮಿಗಳು ಕೆಲವು ವಸ್ತುಗಳನ್ನು ತಯಾರಿಸಲು ಕುಲಕಸಬುದಾರರಿಗೆ ಬಿಟ್ಟು ಬಿಡುತ್ತಿದ್ದರು. "........ಪಾಂಚಾಳನ ಕೈಸುದ್ಧ" ಎನ್ನುವಂತೆ ಶವಕ್ಕೂ ಮೋಕ್ಷವನ್ನು ಪಾಂಚಾಳರೇ ನೀಡಬೇಕೆಂಬುದು ಇದರ ಉದ್ದೇಶವಾಗಿರಬೇಕು. ಇದರಿಂದ ಅನ್ಯ ಕುಶಲ ಕರ್ಮಿಗಳು ಕಸಬುದಾರರಾದರೂ ತಮ್ಮದೇ ಆದ ಕೆಲವು ತತ್ವಗಳನ್ನು ಪಾಲಿಸುತ್ತಾರೆ ಎಂಬ ಸಂಗತಿಯ ಮೇಲೆ ಬೆಳಕು ಚಲ್ಲಬೇಕಾಯಿತು.

ಕುರುಬ ಕುಶಲಕರ್ಮಿಗಳು ಮುಖ್ಯವಾಗಿ ಶಿವನನ್ನು ಆರಾಧಿಸುತ್ತಾರೆ. ಬೀರಪ್ಪ, ವಿಠ್ಠಪ್ಪ, ಉದ್ದಮ್ಮ, ಮಾಳಿಂಗರಾಯ, ಮೈಲಾರ, ಲಕ್ಷ್ಮೀ, ಮಾಯಮ್ಮ, ಎಲ್ಲಮ್ಮ ದೇವತೆಗಳನ್ನು ಪೂಜಿಸುತ್ತಾರೆ. ಇವರ ದೇವರ ಮನೆಯಲ್ಲಿ ಈ ಎಲ್ಲ ದೇವರ ಫೋಟೋಗಳಿರುತ್ತವೆ. ಜೊತಗೆ ಕಾಳಮ್ಮನ ಫೋಟೋ ಇರುವುದನ್ನು ಕಂಡಿದ್ದೇನೆ. ಹಣೆಗೆ ಭಂಡಾರ ಧರಿಸುವುದರೊಂದಿಗೆ ಎರಡು ಹುಬ್ಬುಗಳ ಮಧ್ಯ ಪಾಂಚಾಳರಂತೆ ಕುಂಕುಮ ಬೊಟ್ಟು ಇಟ್ಟುಕೊಳ್ಳುತ್ತಾರೆ. ಕೊರಳಲ್ಲಿ ತಾಯತವಿರುತ್ತದೆ. ಜನಿವಾರ ಧಾರಣೆಯಿಲ್ಲ. ಪಾಂಚಾಳರ ಮುಂಜಿವೆ(ಉಪನಯನ) ಕಾರ್ಯಕ್ರಮದಲ್ಲಿ ಭಾಗಿಯಾದರೂ ತಮ್ಮ ಮಕ್ಕಳಿಗೆ ಮುಂಜವೆ ಕಾರ್ಯ ಮಾಡಿಸುವುದಿಲ್ಲ. ಪ್ರತಿ ಅಮವಾಸ್ಯೆಯಂದ ಕಸಬಿನ ಉಪಕರಣಗಳನ್ನು ಸ್ವಚ್ಛವಾಗಿಸಿ ವಿಭೂತಿ, ಕುಂಕುಮ ಧಾರಣೆ ಮಾಡಿ, ಹೂವಿನಿಂದ ಅಲಂಕರಿಸಿ ಪೂಜಿಸುತ್ತಾರೆ. ಅನುಕೂಲವಾದಾಗಲ್ಲೆಲ್ಲ ಅಮವಾಸ್ಯೆ ಯೆಂದು ಶಿರಸಂಗಿ ಕಾಳಮ್ಮನ ದರ್ಶನ ಪಡೆದುಕೊಳ್ಳುತ್ತಾರೆ. ಯುಗಾದಿಗೆ ತಪ್ಪದೇ ಶಿರಸಂಗಿ ಜಾತ್ರೆಗೆ ಹೋಗಿ ಬರುತ್ತಾರೆ. ಅನ್ಯ ಕುಶಲಕರ್ಮಿ ಮಹಿಳೆಯರು ತಮ್ಮ ಜಾತಿಪದ್ಧತಿಯಂತೆ ಧಾರ್ಮಿಕ ಕಾರ್ಯಕ್ರಮಗಳನ್ನು ಅಚರಿಸುತ್ತಾರೆ. ಗ್ರಾಮ ದೇವತೆ ದ್ಯಾಮವ್ವನ ಜಾತ್ರೆಯಲ್ಲಿ ಪುರುಷರು–ಮಹಿಳೆಯರು ಸಕ್ರೀಯವಾಗಿ ಭಾಗವಹಿಸುತ್ತಾರೆ. ಪಾಂಚಾಳ ಮಹಿಳೆಯರಂತೆ ಅನ್ಯಕುಶಲಕರ್ಮಿ ಮಹಿಳೆಯರು ಹಣೆಗೆ ಅಡ್ಡ ಕುಂಕುಮ ಧರಿಸುವುದಿಲ್ಲ. ರೂಪಾಯಿ ಅಗಲದಷ್ಟು ದುಂಡಗೆ ಇರುತ್ತದೆ.

೨. ಕ್ಷತ್ರಿಯರು: ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮವಿಭಾಗಶಃ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಗುಣ ಮತ್ತು ಕರ್ಮಗಳಿಗೆ ಅನುಗುಣವಾಗಿ ಮನುಕುಲವು ನಾಲ್ಕು ವರ್ಣಗಳಲ್ಲಿ ವಿಂಗಡಿಸಲ್ಪಟ್ಟಿದೆ. ಈ ಚಾತುರ್ವರ್ಣದಲ್ಲಿ ಎರಡನೆಯ ವರ್ಣವೇ ಕ್ಷತ್ರೀಯ. ಇವರು ಭುಜಬಲ ಪರಾಕ್ರಮಿಗಳು ಶಸ್ತ್ರಾಸ್ತ್ರ ವಿದ್ಯಾ ಪಾರಂಗತರು. ದಾನ–ಧರ್ಮಾದಿ ಕಾರ್ಯಗಳನ್ನು ಮಾಡುವುದು, ಜನರನ್ನು ರಕ್ಷಿಸುವುದು ಇವರ ಆದ್ಯ ಕರ್ತವ್ಯವಾಗಿತ್ತು. ಪ್ರಜಾಪಾಲನೆ ದೃಷ್ಟಿಯಿಂದ ಜನರನ್ನು ಸುರಕ್ಷಿತವಾಗಿರುವಂತೆ ನೋಡಿಕೊಳ್ಳು ತ್ತಿದ್ದರು. ಕಾಲಾಂತರಲ್ಲಿ ವರ್ಣ ಸಂಕರ ಉಂಟಾಗಿ ವರ್ಣವ್ಯವಸ್ಥೆಯಲ್ಲಿ ಎರಡನೆಯದು ಕ್ಷತ್ರೀಯ ಒಂದು ಜಾತಿಯಾಗಿ ರೂಪಗೊಂಡಿತು. ಮೂಲ ಕರ್ತವ್ಯಗಳು ಬದಲಾದವು. ವಿವಿಧ ಕೆಲಸ–ಕಾರ್ಯಗಳಲ್ಲಿ ಕ್ಷತ್ರೀಯರು ತೊಡಗಿದರು. ಆ ಕೆಲಸದಲ್ಲಿ ಪ್ರಾವೀಣ್ಯತೆ ಪಡೆದು ಕೊಳ್ಳುತ್ತ ಸಾಮಾಜಿಕ ಜೀವನವನ್ನು ಹೊಸದಾಗಿ ಕಟ್ಟಿಕೊಂಡರು. ಹೊಸ ಕಸಬಿನಲ್ಲಿ ತನ್ನದೇ ಆದ ಕೌಶಲ್ಯತೆಯನ್ನು ಕಸಬುದಾರ ಪಡೆದುಕೊಳ್ಳುತ್ತಾನೆ. ಒಂದೇ ಜಾತಿಗೆ ಮೀಸಲಾಗಿದ್ದ ಗುಡಿಕೈಗಾರಿಕೆಗಳಲ್ಲಿ ಕಸಬುದಾರ ಸೇರಿಕೊಳ್ಳುತ್ತಾನೆ. ಕಸಬು ಕುಲದ ಗೂಡಿನಿಂದ ಆಚೆಗೆ

ಬಂದು ಅನ್ಯರ ಅಂಗಳದಲ್ಲಿ ಬೀಳುತ್ತದೆ. ಇಂತಹ ಕುಶಲತೆಯ ಕೆಲಸಗಳಾದ ಕಂಬಾರಿಕೆ, ಬಡಿಗತನ, ಕಂಚುಗಾರಿಕೆ, ಶಿಲ್ಪ, ಅಕ್ಕಸಾಲಿಗತನ ಕಲೆಯನ್ನು ಕಲಿತು ಸಮಾಜದಲ್ಲಿ ಕುಶಲಕರ್ಮಿಯಾಗಿ ಗುರುತಿಸಿಕೊಂಡವರಲ್ಲಿ ಕ್ಷತ್ರೀಯರು ಪ್ರಮುಖರಾಗಿದ್ದಾರೆ.

'ಯುದ್ಧ ಮಾಡುವುದು ಕ್ಷತ್ರೀಯರ ಧರ್ಮ' ಎಂಬ ಮಾತು ಒಂದಾನೊಂದು ಕಾಲದಲ್ಲಿ ಮುಖ್ಯವಾಗಿತ್ತು. ಪ್ರಭುತ್ವ-ಅಳಿದು, ಪ್ರಜಾಪ್ರಭುತ್ವ ಸ್ಥಾಪನೆಯಾದ ಮೇಲೆ ಎಲ್ಲರನ್ನು ರಕ್ಷಿಸುವ ಕ್ಷತ್ರೀಯರು ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕಾಯಿತು. ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕಲು ವಿವಿಧ ವೃತ್ತಿಯನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಯಿತು. ರಾಜವಾಡೆಗಳಲ್ಲಿ ಸೈನಿಕರಾಗಿ, ಸೇವಕರಾಗಿ ಕೆಲಸ ನಿರ್ವಹಿಸುತ್ತಿದ್ದ ಈ ಸಮುದಾಯದವರು, ಅನಿವಾರ್ಯವಾಗಿ ಅನ್ಯ ಕೆಲಸ ಕಾರ್ಯಗಳತ್ತ ಸಾಗಿದರು. ಮೂಲ ಕೆಲಸಗಾರರ ಸಂಪರ್ಕ ಬಯಸಿದರು. ಉದ್ಯೋಗ ಕಲಿಕಾ ದೃಷ್ಟಿಯಿಂದ ಕೊಡು-ತೆಗೆದುಕೊಳ್ಳುವಿಕೆ ಕ್ಷತ್ರಿಯರಲ್ಲಿ ಜರುಗತೊಡಗಿತು. ಇದರಿಂದ ಕ್ಷತ್ರೀಯರು ವಿವಿಧ ಕಸಬುಗಳನ್ನು ಕಲಿತುಕೊಂಡು, ಕಲಾ ನೈಪುಣ್ಯತೆಯನ್ನು ಪಡೆದುಕೊಳ್ಳುತ್ತ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಿಕೊಂಡರು. ಕಲಿತುಕೊಂಡ ಕಸಬನ್ನು ತಲೆತಲಾಂತರವಾಗಿ ಮುಂದುವರೆಸಿಕೊಂಡರು. ಕಲಿಕೆಯ ಮನೋಭಾವದ ಕ್ಷತ್ರೀಯರು ಕಷ್ಟವೆನಿಸಿದರೂ ಕಲಿತು ತೋರಿಸುವ ಸಾಹಸ ಪ್ರವೃತ್ತಿಯವರಾಗಿದ್ದಾರೆ. ಇದರಿಂದ ಪಾಂಚಾಳರ ಕುಲಕಸಬನ್ನು ಕಲಿತುಕೊಳ್ಳುವುದು ಕ್ಷತ್ರೀಯರಿಗೆ ಕಷ್ಟಸಾಧ್ಯವೆನಿಸಲಿಲ್ಲ. ಪಾಂಚಾಳರ ಕುಶಲಕಲೆಯನ್ನು ಕಲಿತುಕೊಂಡು ಜೀವನೋಪಾಯಕ್ಕೆ ಒಂದು ಮಾರ್ಗವನ್ನು ಕಂಡುಕೊಂಡರು.

ಕುಶಲಕರ್ಮಗಾರಿಕೆಯನ್ನು ಕ್ಷತ್ರೀಯರು ಕಡಿಮೆ ಪ್ರಮಾಣದಲ್ಲಿ ಮುಂದುವರೆಸಿಕೊಂಡಿದ್ದಾರೆ. ಪಾಂಚಾಳರ ಐದು ಬಗೆಯ ಕೆಲಸವನ್ನು ಕ್ಷತ್ರೀಯರು ಮಾಡಿರುವ ಮತ್ತು ಮಾಡುತ್ತಿರುವ ಉದಾಹರಣೆಗಳಿಲ್ಲ. ಕಂಬಾರಿಕೆ ಮತ್ತು ಬಡಿಗತನ ಕಸಬನ್ನು ಮಾಡುತ್ತಿದ್ದಾರೆ. ಮುಂಜಾನೆ ಹೊತ್ತು ಕಂಬಾರಿಕೆ ಮತ್ತು ಮಧ್ಯಾಹ್ನ ಬಡಿಗತನ ಕಸಬನ್ನು ನಿರ್ವಹಿಸುತ್ತಾರೆ. ಕುಲಕಸಬುದಾರರಂತೆ ಕ್ಷತ್ರೀಯರು ರೈತಮಿತ್ರನಾಗಿ ಅವನಿಗೆ ಅನುಕೂಲವಾಗುವ ಉಪಕರಣಗಳನ್ನು ತಯಾರಿಸಿಕೊಡುತ್ತಾರೆ. ಕೃಷಿ, ಗೃಹ ಮತ್ತು ಆಧುನಿಕ ವಸ್ತುಗಳನ್ನು ತಯಾರಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಬಡಿಗ-ಕಂಬಾರರಿಲ್ಲದೇ ಜೀವನ ಸಾಗಿಸುವುದು ಕಷ್ಟ. ಹೀಗಿರುವಾಗ ಕಂಬಾರಿಕೆ ಮತ್ತು ಬಡಿಗತನ ಬಹು ಬೇಡಿಕೆಯ ಕಸಬಾಗಿದೆ. ಇಂತಹ ಉದ್ಯೋಗವನ್ನು ಕ್ಷತ್ರೀಯರು ಆಯ್ಕೆ ಮಾಡಿಕೊಂಡರು. ರೈತರಿಗೆ ಅವಶ್ಯಕವಾಗಿರುವ ಉಪಕರಣಗಳನ್ನು ತಯಾರಿಸಿಕೊಡುತ್ತ ಬಂದಿದ್ದಾರೆ. ಪಾಂಚಾಳರು ಗಳಿಸಿರುವ ರೈತರ ಪ್ರೀತಿಯನ್ನು ಕ್ಷತ್ರೀಯ ಕುಶಲಕರ್ಮಿಗಳು ಗಳಿಸತೊಡಗಿದರು. ಕೆಲವು ರೈತರು ಆಯಗಾರರಾಗಿ ಅನ್ಯ ಕುಶಲಕರ್ಮಿಗಳು ಗುರುತಿಸಿಕೊಂಡರು.

ಪಾಂಚಾಳ ಆಯಗಾರರಂತೆ, ಕ್ಷತ್ರೀಯ ಕುಶಲಕರ್ಮಿಗಳು ಅನ್ಯ ಸಮುದಾಯದ ಆಯಗಾರರಾಗಿ ಧವಸ-ಧಾನ್ಯಗಳನ್ನು ಪಡೆಯುತ್ತಾರೆ. ಕಸಬು ಸಂಬಂಧವಾಗಿ ಪಾಂಚಾಳರೊಂದಿಗೆ ಅನ್ಯೂನ್ಯವಾಗಿರುತ್ತಾರೆ. ಮೂಲತಃ ಪಾಂಚಾಳರಲ್ಲಿ ಕಸಬಿನ ಉಪಕರಣಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ಇವರಲ್ಲಿ ಉಪಕರಣಗಳ ಪ್ರಮಾಣ ಕಡಿಮೆ. ಹೆಚ್ಚಿನ ಮತ್ತು ಸೂಕ್ಷ್ಮ ಉಪಕರಣಗಳ ಬಳಕೆಗಾಗಿ ಪಾಂಚಾಳರನ್ನು ಕ್ಷತ್ರೀಯ ಕುಶಲಕರ್ಮಿಗಳು ಅವಲಂಭಿಸಿದ್ದಾರೆ. ಇದು ಅನಿವಾರ್ಯವೂ ಆಗಿರುತ್ತದೆ. ಕುಶಲಕಲೆಯ ಮೂಲ ಒಡೆಯ ಪಾಂಚಾಳನಾಗಿರುವುದರಿಂದ ಅನ್ಯ ಕುಶಲಕರ್ಮಿಗಳು ಒಂದಲ್ಲ ಒಂದು ರೀತಿಯಲ್ಲಿ ಸ್ನೇಹ ಬಾಂಧವ್ಯವನ್ನು ಉಳಿಸಿ ಕೊಂಡಿರುತ್ತಾರೆ.

ಪಾಂಚಾಳರ ಕುಲಕಸಬುಗಳನ್ನು ಆರಂಭಿಸಿ-ಮುಂದುವರೆಸಿಕೊಂಡು ಬಂದವರಲ್ಲಿ ಕ್ಷತ್ರೀಯ ಸಮುದಾಯದ ಕುಶಲಕರ್ಮಿಗಳ ಕುಟುಂಬಗಳನ್ನು ವಿಶೇಷವಾಗಿ ಗಮಿನಿಸಲಾಗಿದೆ. ಕ್ಷತ್ರೀಯರಲ್ಲಿ ತಲೆ-ತಲೆಮಾರಿನವರೆಗೂ ಕುಲಕಸಬನ್ನು ನಿರ್ವಹಿಸುತ್ತಿದ್ದಾರೆ. ಬೆಳಗಾವಿ ಜಿಲ್ಲೆಯ ಗೋಕಾಕದ ಹತ್ತಿರವಿರುವ ಕೌಜಲಗಿ ಹುಡೇದ ಮೇಲೆ(ವಾಡೆ) ಎತ್ತರ ಪ್ರದೇಶದಲ್ಲಿ ಜೋತೆನ್ನವರ(ಜೋತಿನವರ) ಕುಟುಂಬದವರು ಕುಶಲಕರ್ಮಗಾರಿಕೆಯಲ್ಲಿ ಮುಂದುವರೆದಿದ್ದಾರೆ. ಜೋತೆನ್ನವರ ಕ್ಷತ್ರೀಯ ಕುಶಲಕರ್ಮಿಗಳ ಕುಟುಂಬವನ್ನು ಉಲ್ಲೇಖಿಸುವುದು ಅವಶ್ಯವೂ ಮತ್ತು ಮಹತ್ವಪೂರ್ಣವೆನಿಸುತ್ತದೆ.

ಜೋತೆನ್ನವರ(ಜೋತಿನವರ) ಮನೆತನದಲ್ಲಿ ಇಂದಿಗೂ ಮೂರು ತಲೆಮಾರಿಗಿಂತಲೂ ಹೆಚ್ಚಿನ ಕುಶಲಕರ್ಮಿಗಳಾಗಿ ಕಾಯಕದಲ್ಲಿ ನಿರತರಾಗಿದ್ದಾರೆ. ನಾನು ಸಂಗ್ರಹಿಸಿದ ಮಾಹಿತಿ ಪ್ರಕಾರ ಈ ಕುಟುಂಬದ ಪೂರ್ವಿಕರು ಕೌಜಲಗಿ ರಾಜವಾಡೆಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಕೋಟೆಯಲ್ಲಿಯ ಪ್ರಮುಖ ಭಾಗಗಳಲ್ಲಿ ಬೆಳಕು ಕಾಣಿಸುವುದು, ಜ್ಯೋತಿ ಬೆಳಗಿಸುವುದು ಈ ಕುಟುಂಬದ ಕೆಲಸವಾಗಿತ್ತು. ಇವರನ್ನು ಕೌಜಲಗಿ ದೇಸಗತಿಯವರು ಜೋತಿ ಕಾಣಿಸುವವರು. ಜೋತಿ ಅವರು ಜೋತಿನವರು ಎಂದು ಕರೆಯುತ್ತಿದ್ದರು. ಜೋತಿ+ನ್+ಅವರು, ಜೋತಿನವರು>ಜೋತೆನ್ನವರ ಎಂದು ರೂಢಿಯಲ್ಲಿ ಬಳಕೆಯಾಗುತ್ತಿದೆ. ಸಂಜೆ ಹೊತ್ತು ವಾಡೆಗೆ ಜೋತಿ(ದೀಪ), ಬೆಳಕು ಮೂಡಿಸುವ ಪ್ರಮುಖ ಕೆಲಸ ಜೋತೆನ್ನವರ ಕುಟುಂಬದಾಗಿತ್ತು. ಕೋಟೆ-ಕೊತ್ತಲುಗಳಿಗೆ ಬೆಳಕನ್ನು ಹರಿಸುವ ಈ ಕುಟುಂಬ ಸ್ವತಂತ್ರ ಭಾರತ ಅನಂತರದ ಕಾಲಘಟ್ಟದಲ್ಲಿ ಸಾಮಾನ್ಯ ರೈತವರ್ಗಕ್ಕೆ ಜ್ಯೋತಿಯಾದರು ಜೋತೆನ್ನವರ ಕುಟುಂಬ.

ಜೋತೆನ್ನವರ ಕುಟುಂಬದ ಹಿರಿಯ ಕುಶಲಕರ್ಮಿ ಲಕ್ಷ್ಮಣನು ತಮ್ಮ ಪೂರ್ವಿಕರಂತೆ ರಾಜವಾಡೆಗಳಲ್ಲಿ ಸಹಾಯಕನಾಗದೆ ಕುಶಲ ಕಲೆಯತ್ತ ಗಮನಹರಿಸುತ್ತಾನೆ. ಜೀವನೋಪಾಯಕ್ಕಾಗಿ

ಗ್ರಾಮದ ಪಾಂಚಾಳ ಕುಶಲಕರ್ಮಿಗಳ ಸಹಾಯ ಪಡೆದುಕೊಂಡು ಕಂಬಾರಿಕೆ-ಬಡಿಗತನ ಕಸಬನ್ನು ಕಲಿಯುತ್ತಾನೆ. ಕಲಿಕೆಯಲ್ಲಿ ನಿಷ್ಣಾತರಾದ ಕ್ಷತ್ರೀಯ ಕುಟುಂಬದ ಲಕ್ಷ್ಮಣನೂ ಕುಶಲ ಕಲೆಯನ್ನು ಸಂಪೂರ್ಣವಾಗಿ ಕಲಿತುಕೊಳ್ಳುತ್ತಾನೆ. ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಸಂದರ್ಭದಲ್ಲಿ ೧೯೪೦ರ ಹೊತ್ತಿಗೆ ಲಕ್ಷ್ಮಣನು ಪೂರ್ಣಪ್ರಮಾಣದ ಕುಶಲಕರ್ಮಿಯಾಗಿ ಸ್ವತಂತ್ರ ಕಸಬನ್ನು ಆರಂಭಿಸುತ್ತಾನೆ. ಲಕ್ಷ್ಮನನು ಆಧುನಿಕ ವಸ್ತು ತಯಾರಿಕೆಗಿಂತ ಕೃಷಿಗೆ ಸಂಬಂಧಿಸಿದ ಉಪಕರಣ-ವಸ್ತುಗಳನ್ನು ತಯಾರಿಸಿಕೊಡುತ್ತಿದ್ದನು. ರೈತರು ಹೆಚ್ಚು-ಹೆಚ್ಚಾಗಿ ಲಕ್ಷ್ಮಣನ ಬಡಿಗಸಾಲಿಗೆ ಬಂದು ತಮಗೆ ಅವಶ್ಯವಾಗಿರುವ ವಸ್ತುಗಳನ್ನು ತಯಾರಿಸಿಕೊಡಲು ಕೋರುತ್ತಿದ್ದರು. ರೈತರು ಸಹಾಯಕರಾಗಿ ನಿಲ್ಲುತ್ತಿದ್ದರು.

ಗ್ರಾಮದಲ್ಲಿ ಪಾಂಚಾಳ ಕುಶಲಕರ್ಮಿಗಳ ದೊಡ್ಡ ಸಮುದಾಯವೇ ಇದೆ. ಹೀಗಿರುವಾಗ ಕ್ಷತ್ರೀಯ ಕುಟುಂಬದ ಲಕ್ಷ್ಮಣನು ಕಂಬಾರಿಕೆ-ಬಡಿಗತನ ಕಲಿತುಕೊಂಡು ಸ್ವತಂತ್ರ ಕಸಬುದಾರ ನಾಗುವುದು ಸುಲಭದ ಕಾರ್ಯವಾಗಿರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪಾಂಚಾಳ ಕುಶಲಕರ್ಮಿಗಳ ಪ್ರೀತಿ-ಸಹಕಾರವನ್ನು ಸಂಪಾದಿಸಿಕೊಂಡು ಅನ್ಯ ಕುಶಲಕರ್ಮಿಯಾಗಿ ಮುಂದುವರೆಯುತ್ತಾನೆ. ಆರಂಭದಲ್ಲಿ ರೈತಾಪಿ ವರ್ಗದವರು ಇವರಿಗೆ ಎರಡನೆಯ ಆಧ್ಯತೆ ನೀಡುತ್ತಿದ್ದರು. ಇದರಿಂದ ಕಸಬು ಸುಲಭವಾಗಿ ದೊರೆಯುತ್ತಿರಲಿಲ್ಲ. ದೊರೆತ ಕಸಬನ್ನು ಇವರು ಬಿಡುತ್ತಿರಲಿಲ್ಲ. ಇದನ್ನು ಅರಿತ ರೈತವರ್ಗದವರು ಅನ್ಯಕುಶಲಕರ್ಮಿಗಳಿಗೆ ಕಡಿಮೆ ಪಗಾರ(ಸಂಬಳ) ನೀಡುವುದು. ಹೆಚ್ಚಿನ ಶ್ರಮದಾಯಕ ಕೆಲಸ ಮಾಡಿಸಿಕೊಳ್ಳುವ ಪ್ರಯತ್ನಗಳು ನಡೆದವು. ಹೀಗಾಗಿ ಜೀವನೋಪಾಯಕ್ಕಾಗಿ ಕೈಕೊಂಡ ಕುಶಲಕರ್ಮಗಾರಿಕೆಯು ಲಕ್ಷ್ಮಣನ ಭವಿಷ್ಯದ ಒಂದು ಕಸಬಾಯಿತು. ಆದರೆ ಕುಟುಂಬ ಆರ್ಥಿಕವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಈ ಹಂತದಲ್ಲಿ ಲಕ್ಷ್ಮಣನಿಗೆ ಕುಟುಂಬವನ್ನು ಆರ್ಥಿಕವಾಗಿ ಬೆಳೆಸುವುದಕ್ಕಿಂತ ಹೆಚ್ಚಾಗಿ ಕಲಿತ ಕಸಬನ್ನು ಮುಂದುವರೆಸಿಕೊಂಡು ಹೋಗುವುದೇ ಮುಖ್ಯವಾಗಿತ್ತು. 'ಊಣ್ಣುದಕ್ಕ ತಿನ್ನುದಕ ಸಾಟಿ" ಎಂಬ ಜನಪದರ ಮಾತಿನಂತೆ ಇವರ ಕುಶಲ ಕರ್ಮಗಾರಿಕೆಯ ಜೀವನ ಮಂದಗತಿ ಯಲ್ಲಿಯೇ ಸಾಗಿತು.

ಲಕ್ಷ್ಮಣನಿಗೆ ೧೯೪೦-೪೫ರ ಹೊತ್ತಿಗೆ ಭೀಮಶೆಪ್ಪ, ವೆಂಕಪ್ಪ, ವಿಷ್ಣು, ಅರ್ಜುನ ಮತ್ತು ಸುರೇಶ ಎಂಬ ಪುತ್ರರು ಜನಿಸುತ್ತಾರೆ. ಸ್ವತಂತ್ರ ಭಾರತದ ಬಾಲಕರಾದರೂ ಇವರಿಗೆ ಹೆಚ್ಚಾಗಿ ಶಿಕ್ಷಣ ಪಡೆಯುವ ಅನುಕೂಲತೆಗಳು ಕಡಿಮೆ ಪ್ರಮಾಣದಲ್ಲಿದ್ದವು. ಬಡತನವೂ ಅದಕ್ಕೆ ಕಾರಣವಾಗಿತ್ತು. ತಂದೆಯಿಂದ ಕಸಬಿನಲ್ಲಿ ಪ್ರಭಾವಿತನಾದ ಭೀಮಶೆಪ್ಪ ಕಂಬಾರಿಕೆ ಮತ್ತು ಬಡಿಗತನವನ್ನು ರೂಢಿಮಾಡಿಕೊಳ್ಳುತ್ತಾನೆ. ಚಿಕ್ಕಂದಿನಿಂದಲೂ ಕಸಬಿನ ಒಳ-ಹೊರಗಿನ ಮರ್ಮವನ್ನು

ಭೀಮಶೆಪ್ಪ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುತ್ತಾನೆ. ತಂದೆ ಲಕ್ಷ್ಮಣನು ಕಸಬನ್ನು ಕಲಿಯಲು ಪಟ್ಟ ತೊಂದರೆಗಳು ಭೀಮಶೆಪ್ಪನಿಗೆ ಇರಲಿಲ್ಲ. ಇದರಿಂದ ಭೀಮಶೆಪ್ಪ ತಂದೆಗಿಂತ ಹೆಚ್ಚಾಗಿ ವೃತ್ತಿಯಲ್ಲಿ ಪ್ರಾವೀಣ್ಯತೆಯನ್ನು ಪಡೆಯುತ್ತಾನೆ. ರೈತರು ಹೆಚ್ಚಿನ ಪ್ರಮಾಣದಲ್ಲಿ ಕೃಷಿಯೋಪಕರಣ ಗಳನ್ನು ಸಿದ್ಧಪಡಿಸಿಕೊಳ್ಳಲು ಬರುತ್ತಾರೆ. ಅನ್ಯ ಸಮುದಾಯದ ಕುಶಲಕರ್ಮಿ ಭೀಮಶೆಪ್ಪ ಬಹುರೈತರ ಆಯಗಾರನಾಗುತ್ತಾನೆ. ಕಂಬಾರಿಕೆ ಮತ್ತು ಬಡಿಗತನದ ಕಸಬಿನಿಂದ ಭೀಮಶೆಪ್ಪ ಬಡಿಗೇರ(ಜೋತೆನ್ನವರ) ಎಂದು ಜನ ಕರೆಯುವುದು ರೂಢಿಯಾಯಿತು. ತಂದೆ ಲಕ್ಷ್ಮಣನಿಗಿಂತ ಸ್ವಲ್ಪ ಮಟ್ಟಿಗೆ ಈತನ ಕುಟುಂಬ ಆರ್ಥಿಕ ಮತ್ತು ಸಾಮಾಜಿಕವಾಗಿ ಸುಧಾರಣೆ ಕಂಡಿತು.

ಆರ್ಥಿಕವಾಗಿ ಕುಟುಂಬವನ್ನು ಸುಧಾರಿಸಿಕೊಂಡ ಭೀಮಶೆಪ್ಪ, ಕಸಬಿನಲ್ಲಿ ಮತ್ತು ಹಲವಾರು ಉಪಕರಣಗಳಲ್ಲಿ ಬದಲಾವಣೆಗಳನ್ನು ತಂದುಕೊಳ್ಳುತ್ತಾನೆ. ೧೯೭೬ರ ಅವಧಿಯಲ್ಲಿ ಭೀಮಶೆಪ್ಪನಿಗೆ ಚತುರ, ೧೯೮೬ರಲ್ಲಿ ಮಲ್ಲಿಕಾರ್ಜುನ ಮತ್ತು ೧೯೯೦ರಲ್ಲಿ ರಾಮಕೃಷ್ಣ ಎಂಬ ಮೂರು ಜನ ಗಂಡು ಮಕ್ಕಳು ಜನಿಸುತ್ತಾರೆ. ಚತುರ, ಚದುರ, ಚಂದ್ರಪ್ಪನೆಂದು ಕರೆಯಲಾಗುತ್ತದೆ. ಈತನು ಅಜ್ಜ-ಅಪ್ಪನಿಂದ ಬಳುವಳಿಯಾಗಿ ಬಂದ ಕಂಬಾರಿಕೆ ಮತ್ತು ಬಡಿಗತನವನ್ನು ಕಲಿತುಕೊಳ್ಳುತ್ತಾನೆ. ಚತುರನಿಗಿಂತ ೧೦ ವರ್ಷ ಚಿಕ್ಕವನಾದ ಸಹೋದರ ಮಲ್ಲಿಕಾರ್ಜುನ ಬೇಗ ಕಸಬನ್ನು ಕಲಿತು, ಹೊಸ ಸಹಸ್ರಮಾನದ ಕುಶಲಕರ್ಮಿಯಾಗಿ ರೂಪಗೊಂಡಿದ್ದಾನೆ. ರಾಮಕೃಷ್ಣ ಈಗ ೨೫ ವರ್ಷದ ಯುವ ಕುಶಲಕರ್ಮಿ. ತಂದೆ ಮತ್ತು ಸಹೋದರರ ಸಹಾಯದಿಂದ ಕುಶಲಕಲೆಯಲ್ಲಿ ಪ್ರಾವೀಣ್ಯತೆ ಪಡೆಯುತ್ತಿದ್ದಾನೆ. ರಾಮಕೃಷ್ಣನನ್ನು ರೈತಾಪಿ ವರ್ಗದವರು ಪ್ರೀತಿಯಿಂದ 'ಹೆಗಡೆ ಬಡಿಗ' ಎಂದು ಕರೆಯುತ್ತಾರೆ. ಹಿರಿಯ ಕುಶಲಕರ್ಮಿ ಭೀಮಶೆಪ್ಪನ ಮೂರು ಜನ ಗಂಡು ಮಕ್ಕಳು ಆಧುನಿಕ ಉಕರಣಗಳ ಸಹಾಯದೊಂದಿಗೆ ಕಂಬಾರಿಕೆ ಮತ್ತು ಬಡಿಗತನ ಕಸಬಿನಲ್ಲಿ ನಾವಿಣ್ಯತೆ ತಂದುಕೊಳ್ಳುತ್ತಿರುವ ಅನ್ಯ ಸಮುದಾಯದ ಕುಶಲಕರ್ಮಿಗಳಾಗಿದ್ದಾರೆ.

ಲಕ್ಷ್ಮಣನ ಎರಡನೆಯ ಮಗ ವೆಂಕಪ್ಪ ಕುಶಲಕರ್ಮಗಾರಿಕೆಯನ್ನು ಅಷ್ಟಕಷ್ಟೇ ಕಲಿತು ಕೊಳ್ಳುತ್ತಾನೆ. ವೆಂಕಪ್ಪನ ಹಿರಿಯ ಮಗ ಕೃಷ್ಣಾ ಈಗ ಪೂರ್ಣ ಪ್ರವಾಣದ ಕುಶಲಕರ್ಮಿಯಾಗಿದ್ದಾನೆ. ತಂದೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಬಡಿಗತನ ಕೆಲಸಗಳನ್ನು ಮಾಡುತ್ತಿದ್ದಾನೆ. ಕೃಷ್ಣಾನ ಕಿರಿಯ ಸಹೋದರ ಶಂಕರ ಯುವ ರಾಜಕಾರಣಿಯಾಗಿ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದಾನೆ.


ಲಕ್ಷ್ಮಣನ ಮೂರನೆಯ ಮಗ ವಿಷ್ಣು(೧೯೫೫) ಹಿರಿಯ ಅಣ್ಣ ಭೀಮಶೆಪ್ಪ ಮತ್ತು ತಂದೆಯಂತೆ ಕುಶಲಕರ್ಮಿಯಾಗಿ ಕಸಬಿನಲ್ಲಿ ಮುಂದುವರೆದಿದ್ದಾನೆ. ವಿಷ್ಣು ಹೆಚ್ಚಾಗಿ ಕಂಬಾರಿಕೆ ಕಸಬನ್ನು ಮಾಡುತ್ತಿದ್ದಾನೆ. ರೈತರ ವ್ಯವಸಾಯಕ್ಕೆ ಅಗತ್ಯವಾದ ಉಪಕರಣಗಳನ್ನು ತಯಾರಿಸಿ

ಕೊಡುತ್ತಿದ್ದಾನೆ. ವಿಷ್ಣು ಕುಶಲಕರ್ಮಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಹಿರಿಯ ಮಗ ಸಂಜೀವ ಕಿರಿಯ ಮಗ ಮಂಜುನಾಥ. ಇವರು ಈಗ ಕುಶಲಕರ್ಮಗಾರಿಕೆಯಲ್ಲಿ ಮುಂದು ವರೆದಿದ್ದಾರೆ. ಸಂಜೀವ, ಕಂಬಾರಿಕೆ ಮತ್ತು ಬಡಿಗತನ ಕಸಬಿನಲ್ಲಿ ಕೃಷಿ ಹಾಗೂ ಗೃಹೋಪಕರಣ ಗಳನ್ನು ತಯಾರಿಸಿಕೊಡುತ್ತಿದ್ದಾನೆ. ಮಂಜುನಾಥ ಹೆಚ್ಚಾಗಿ ಕಂಬಾರಿಕೆ ವೃತ್ತಿಯಲ್ಲಿ ಪ್ರಾವೀಣ್ಯತೆಯನ್ನು ಸಾಧಿಸುತ್ತಿದ್ದಾನೆ.

ಲಕ್ಷ್ಮಣನ ನಾಲ್ಕನೆಯ ಮಗ ಅರ್ಜುನ(೧೯೬೧). ಈತ ಬಡಿಗತನ ವೃತ್ತಿಯಲ್ಲಿ ಮುಂದುವರೆದಿದ್ದಾನೆ. ರೈತರ ಹಾಗೂ ಆಧುನಿಕ ವಸ್ತುಗಳನ್ನು ತಯಾರಿಸುತ್ತಾನೆ. ಅರ್ಜುನ ಕುಶಲಕರ್ಮಿಗೆ ಜಗದೀಶ ಎಂಬ ಒಬ್ಬನೇ ಮಗ ಇದ್ದಾನೆ. ಜಗದೀಶನು ಕಂಬಾರಿಕೆ ಮತ್ತು ಬಡಿಗತನದ ಕಸಬಿನಲ್ಲಿ ಮುಂದುವರೆದಿಲ್ಲ. ಗೌಂಡಿ(ಕಟ್ಟಡ) ಕಾರ್ಮಿಕನಾಗಿದ್ದಾನೆ.

ಕೊನೆಯವ ಸುರೇಶ. ಈತನು ಕುಶಲಕರ್ಮಿಯಾಗಿದ್ದಾನೆ. ಹೆಚ್ಚಾಗಿ ಫೋಟೋಗಳಿಗೆ ಚೌಕಟ್ಟನ್ನು ತಯಾರಿಸುತ್ತಾನೆ. ಈಗ ಮಹಾಲಿಂಗಪುರದಲ್ಲಿ ವಾಸವಾಗಿದ್ದಾನೆ. ಒಟ್ಟಾಗಿ ಕುಶಲ ಕರ್ಮಗಾರಿಕೆಯು ಜೋತೆನ್ನವರ ಸಹೋದರರಿಗೆ ಆರ್ಥಿಕವಾಗಿ ಜೀವನೋಪಾಯವನ್ನು ಮತ್ತು ಸಾಮಾಜಿಕವಾಗಿ ಒಂದು ಸ್ಥಾನ-ಮಾನವನ್ನು ತಂದುಕೊಟ್ಟಿದೆ. ಈಗಲೂ ಈ ಕುಟುಂಬದ ಕುಶಲಕರ್ಮಿಗಳನ್ನು 'ಜೋತೆನ್ನವರ ಬಡಿಗೇರ' ಎಂದು ಜನಪದರು 'ಹುಡೇದ ಮ್ಯಾಲಿನ ಬಡಿಗ್ಯಾರು' ಎಂದು ಕರೆಯುತ್ತಾರೆ. ಹುಡೇ ಅಂದರೆ ಕೋಟೆಯ ಬುರುಜಿನ ಪಕ್ಕದಲ್ಲಿಯೇ ಇವರ ಮನೆಗಳಿವೆ. ಇದರಿಂದ ಇವರನ್ನು 'ಹುಡೇದ ಮ್ಯಾಲಿನ ಬಡಿಗ್ಯಾರು' ಎಂದು ಕರೆಯುವುದು ರೂಢಿಯಾಗಿದೆ.

ಕುಶಲಕರ್ಮಿ ಜೋತೆನ್ನವರ ಕುಟುಂಬದ ವಿವರ



ಕ್ಷತ್ರೀಯ ಸಮುದಾಯದ ಕುಶಲಕರ್ಮಿಗಳು ಪಾಂಚಾಳ ಕುಶಲಕರ್ಮಿಗಳಂತೆ ಎಲ್ಲ ವಸ್ತುಗಳನ್ನು ತಯಾರಿಸುತ್ತಾರೆ. ಈ ಸಮುದಾಯದ ಕುಶಲಕರ್ಮಿಗಳು ಯಾರಾದರೂ ತೀರಿದಾಗ ಛಟ್ಟಪಲ್ಲಕ್ಕಿ ಅಥವಾ ಛಟ್ಟ ತಯಾರಿಸುವುದಿಲ್ಲ. ಕ್ಷತ್ರೀಯರೂ ಇದು ಪಾಂಚಾಳರ ಕೆಲಸವಾಗಿದೆಯೆಂದು ಭಾವಿಸುತ್ತಾರೆ. ಹುಟ್ಟಿದಾಗ ತೊಟ್ಟಿಲು, ಸತ್ತಾಗ ಛಟ್ಟ ಕಟ್ಟುವ ಪಾರಂಪರಿಕ ಹಕ್ಕನ್ನು ರೈತ

ಸಮುದಾಯ ಪಾಂಚಾಳ ಕುಶಲಕರ್ಮಿಗಳಿಗೆ ನೀಡಿರುವುದು ಇದರಿಂದ ತಿಳಿದುಬರುತ್ತದೆ. ಇಂಥಹ ಕಾರ್ಯಗಳು ಕೇವಲ ಕಸಬು ಮಾತ್ರವಲ್ಲ. ಮನುಷ್ಯ ಸಂಸ್ಕಾರದ ಸಂಕೇತಗಳಾಗಿವೆ.

ಕ್ಷತ್ರೀಯ ಕುಶಲಕರ್ಮಿಗಳು ಮುಖ್ಯವಾಗಿ ಶ್ರೀರಾಮ-ಹನುಮಂತರನ್ನು ಆರಾಧಿಸುತ್ತಾರೆ. ಶಿವವೆಂಕಟೇಶ್ವರ, ಮಹಾಲಕ್ಷ್ಮೀ, ದುರ್ಗಾ, ಅಂಬಾಭವಾನಿ ಎಲ್ಲಮ್ಮ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ. ಈ ಎಲ್ಲ ದೇವರುಗಳ ಫೋಟೋಗಳು ಈ ಸಮುದಾಯದವರ ದೇವರ ಮನೆಗಳಲ್ಲಿರುತ್ತವೆ. ಇದರ ಜೊತೆ ಕ್ಷತ್ರೀಯ ಕುಶಲಕರ್ಮಿಗಳ ಮನೆಯಲ್ಲಿ ಶಿರಸಂಗಿ ಕಾಳಮ್ಮನ ಫೋಟೋ ಪೂಜಿಸಲ್ಪಡುತ್ತದೆ. ಕ್ಷತ್ರೀಯ ಕುಶಲಕರ್ಮಿಗಳು ಪಾಂಚಾಳರಂತೆ ಹಣೆಗೆ ಕುಂಕುಮ ಧರಿಸುತ್ತಾರೆ. ಪಾಂಚಾಳರಂತೆ ಜನಿವಾರ ಧಾರಣೆ ಮಾಡುತ್ತಾರೆ. ಶ್ರದ್ಧಾ ಭಕ್ತಿಯಿಂದ ಪೂಜೆ-ಪುನಸ್ಕಾರ, ಯಜ್ಞ-ಯಾಗಾದಿಗಳನ್ನು ನಡೆಸುತ್ತಾರೆ. ಅಮವಾಸ್ಯೆಯೆಂದು ಕಸಬಿಗೆ ಬಳಸುವ ಉಪಕರಣಗಳನ್ನು ಸ್ವಚ್ಛವಾಗಿಸುತ್ತಾರೆ. ವಿಭೂತಿ, ಕುಂಕುಮ, ಹೂಗಳಿಂದ ಅಲಂಕರಿಸಿ, ಉಳಿ, ಬಾಚಿ, ಸುತ್ತಿಗೆ, ಕೊಡಲೆಗಳನ್ನು, ಕುಲುಮೆ, ಅಡಿಗಲ್ಲನ್ನು ಪೂಜಿಸುತ್ತಾರೆ. ಅಮವಾಸ್ಯೆಗೆ ಅನುಕೂಲ ಮಾಡಿಕೊಂಡು ಶಿರಸಂಗಿಗೆ ಹೋಗಿ ಕಾಳಮ್ಮನ ದರ್ಶನವನ್ನು ಪಡೆದುಕೊಳ್ಳುತ್ತಾರೆ. ಅಲ್ಲಿ ನಡೆಯುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಾರೆ. "ನಾವ್ ಶಿರಸಂಗಿ ಕಾಳಮ್ಮಗ ಹ್ವಾದರ ನಮಗ ಬ್ಯಾರೆ ಜಾತಿ ಬಡಿಗ್ಯಾರು ಅಂತ ಅನಸೂದ ಇಲ್ಲ" ಎಂದು ಕ್ಷತ್ರೀಯ ಸಮುದಾಯ ಕುಶಲಕರ್ಮಿ ಕೃಷ್ಣಾ ವೆಂಕಪ್ಪ ಜೋತೆನ್ನವರ ಅನುಭವದ ಮಾತನ್ನಾಡುತ್ತಾರೆ. ಯುಗಾದಿ ಪ್ರತಿಪದ ಪಾಡ್ಯೆಯಂದು ಕ್ಷತ್ರೀಯ ಸಮುದಾಯದ ಕುಶಲಕರ್ಮಿ ಕುಟುಂಬದವರು ಶಿರಸಂಗಿ ಕಾಳಮ್ಮನ ದರ್ಶನ ಪಡೆದುಕೊಳ್ಳುತಾನೆ. ಅನ್ಯ ಕುಶಲಕರ್ಮಿ ಮಹಿಳೆಯರು ತಮ್ಮ ಜಾತಿ-ಪದ್ಧತಿ ಸಂಪ್ರದಾಯಂತೆ ಧಾರ್ಮಿಕ ಆಚರಣೆಯಲ್ಲಿ ತೊಡಗುತ್ತಾರೆ. ಕಾಳಮ್ಮ ಮತ್ತು ದ್ಯಾಮವ್ವ ಜಾತ್ರೆಯಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ. ಈ ಸಮುದಾಯದ ಮಹಿಳೆಯರು ಹಣೆಗೆ ಉದ್ದ ಕುಂಕುಮ ಧಾರಣೆ ಮಾಡುವುದು ವಿಶೇಷವಾಗಿದೆ.

೩. ಲಿಂಗಾಯತರು: ಕರ್ನಾಟಕ ಸಮುದಾಯಗಳಲ್ಲಿ ಲಿಂಗಾಯತ ಅಥವಾ ಲಿಂಗವಂತರು ಪ್ರಮುಖರಾಗಿದ್ದಾರೆ. ಶೈವ ಧರ್ಮದ ಎಲ್ಲ ಸಿದ್ಧಾಂತಗಳನ್ನು ಬಹುತೇಕ ಸಾಧಿಸಿಕೊಂಡವರು ವೀರಶೈವರು. ಸಿದ್ಧಾಂತಗಳಲ್ಲಿಯ ಮಹತ್ವದ ಅಂಶಗಳನ್ನು ತಮ್ಮೊಳಗೆ ಸಮಾವೇಶಗೊಳಿಸಿಕೊಂಡಿದ್ದಾರೆ. ಇದರ ಮೂಲಕ ಒಂದು ತತ್ವ ಸಿದ್ಧಾಂತವನ್ನು ಲಿಂಗಾಯತರು ರೂಪಿಸಿಕೊಂಡರು. ಬಸವಣ್ಣನವರ ಕಾಲಕ್ಕೆ ಲಿಂಗಾಯತರ ಆಚರಣೆಗಳು ಒಂದು ನಿರ್ದಿಷ್ಟ ಸ್ವರೂಪ ಪಡೆದುಕೊಳ್ಳುತ್ತವೆ. ಸರ್ವ ಸಮಾನತೆಯ ತತ್ವಾಚರಣೆಯನ್ನು ಪ್ರಧಾನವಾಗಿರಿಸಿಕೊಳ್ಳುತ್ತಾರೆ. ಕಾಯಕ ಸಿದ್ಧಾಂತವನ್ನು ಹೆಚ್ಚಾಗಿ ನಂಬಿಕೊಂಡು ಜೀವನದಲ್ಲಿ ಅಳವಡಿಸಿಕೊಂಡವರು ಲಿಂಗಾಯತರು. ಲಿಂಗವನ್ನೇ

ಶಿವನೆಂದು ಆಯತವ ಮಾಡಿಕೊಂಡು ನಿತ್ಯ ಕಾಯಕ ಮಾಡಿ, ಬಂದುದನ್ನೇ ಮಹಾಪ್ರಸಾಧವೆಂದು ಸ್ವೀಕರಿಸುತ್ತಾರೆ. ರಕ್ಷಣೆ ಕಾರ್ಯದೊಂದಿಗೆ ಪರಧರ್ಮ ಸಹಿಷ್ಣುತೆಯನ್ನು ಗೌರವಿಸುವುದು ಲಿಂಗಾಯತ ಅಥವಾ ಲಿಂಗವಂತರ ವಿಶೇಷ ಗುಣವಾಗಿದೆ. ಆಧ್ಯಾತ್ಮಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೆ. ಭಕ್ತಿ-ಶ್ರದ್ಧೆ, ದಾನ-ಧರ್ಮಾದಿ ಕಾರ್ಯಗಳನ್ನು ಸಮರ್ಪಣಾ ಮನೋಭಾವದಿಂದ ಜರುಗಿಸುವ ರೂಢಿಯನ್ನು ಬೆಳೆಸಿಕೊಂಡವರು ಕರ್ನಾಟಕದ ಲಿಂಗಾಯತರು.

ಕರ್ನಾಟಕದಲ್ಲಿ ಈ ಸಮುದಾಯದವರು ವ್ಯಾಪಾರ, ಕೃಷಿ, ಉದ್ದಿಮೆಗಳನ್ನು ನಿರ್ವಹಿಸುತ್ತಿದ್ದಾರೆ. ಆಧುನಿಕ ಸಂದರ್ಭದಲ್ಲಿ ತಮಗೆ ಅನುಕೂಲವಾಗುವ ಉದ್ಯೋಗವನ್ನು ಮಾಡುತ್ತಿದ್ದಾರೆ. ಕೆಲವು ಕುಟುಂಬಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಆ ಕೆಲಸದಲ್ಲಿ ಅನುಭವ ಜ್ಞಾನವನ್ನು ಪಡೆದುಕೊಂಡಿದ್ದಾರೆ. ತಾವು ನಿರ್ವಹಿಸುತ್ತಿರುವ ಕಸಬನ್ನು ತಲೆ-ತಲಾಂತರವಾಗಿ ಮುಂದುವರೆಸಿಕೊಂಡು ಬಂದಿವೆ. ಆಯ್ಕೆ ಮಾಡಿಕೊಂಡ ಕಸಬಿನಿಂದ ಸಾಮಾಜಿಕ ಜೀವನವನ್ನು ಹೊಸದಾಗಿ ರೂಪಿಸಿಕೊಳ್ಳುತ್ತಾರೆ. ಕಸಬಿನಲ್ಲಿ ಪ್ರಾವೀಣ್ಯತೆ-ನಾವಿಣ್ಯತೆ ಪಡೆಯುವುದರೊಂದಿಗೆ ಕುಲ ಕಸಬುದಾರರ ಉದ್ಯೋಗವನ್ನು ರೂಢಿಸಿಕೊಂಡವರಲ್ಲಿ ಲಿಂಗಾಯತರೂ ಪ್ರಮುಖರು.

ಇವರು ಕುಶಲ ಕಲೆಗಾರಿಕೆಯನ್ನು ಕಲಿತುಕೊಂಡು ಜೀವನೋಪಾಯವನ್ನು ಸಾಗಿಸುತ್ತಿದ್ದಾರೆ. ಕಂಬಾರಿಕೆ, ಬಡಿಗತನ, ಕಂಚುಗಾರಿಕೆ, ಶಿಲ್ಪಗಾರಿಕೆ, ಅಕ್ಕಸಾಲಿಗತನ ಕಸಬನ್ನು ಮುಂದುವರೆಸಿಕೊಂಡ ಅನ್ಯ ಸಮುದಾಯದ ಕುಶಲಕರ್ಮಿಗಳಲ್ಲಿ ಲಿಂಗಾಯತರು ಮುಖ್ಯವಾಗಿದ್ದಾರೆ.

> ಕಾಯಕದಲ್ಲಿ ನಿರತನಾದರೆ
> ಗುರು ದರುಶನವಾದರೂ ಮರೆಯಬೇಕು
> ಲಿಂಗ ಪೂಜೆಯಾದರೂ ಮರೆಯಬೇಕು
> ಜಂಗಮ ಮುಂದಿದ್ದರೂ ಹಂಗ ಹರಿಯಬೇಕು
> ಕಾಯಕವೇ ಕೈಲಾಸವಾದ ಕಾರಣ
> ....

ವಚನಕಾರರ ಅನುಭವದ ಈ ಮಾತಿನಂತೆ ಕಾಯಕ ತತ್ವ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡ ಲಿಂಗಾಯತ ಕೆಲ ಕುಟುಂಬಗಳು ಕಾಯಕಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದವು. ಶ್ರಮ ಸಂಸ್ಕೃತಿಯನ್ನು ರೂಢಿಸಿಕೊಂಡು, ಜೀವನೋಪಾಯಕ್ಕಾಗಿ ಕುಶಲಕಲೆಗಳಂತಹ ಕಸಬನ್ನು

ಹುಡುಕಿಕೊಂಡವು. ವ್ಯಾಪಾರ, ಕೃಷಿಯಂತಹ ಉದ್ಯೋಗಗಳನ್ನು ಆರ್ಥಿಕವಾಗಿ ಅನುಕೂಲವಿರುವ ಮತ್ತು ಸಾಗುವಳಿಗೆ ಭೂಮಿ ಹೊಂದಿದ ಲಿಂಗಾಯತರು ಅದೇ ಉದ್ಯೋಗಗಳಲ್ಲಿ ಮುಂದುವರೆಯುತ್ತಾರೆ. ಬಡ ಮತ್ತು ಭೂಮಿಯಿಲ್ಲದ ಕೆಲ ಲಿಂಗಾಯತ ಕುಟುಂಬಗಳು ಕಂಬಾರಿಕೆ–ಬಡಿಗತನದಂತಹ ಕಸಬನ್ನು ಆರಂಭಿಸಿದವು. ಈ ಕುಟುಂಬದವರು ಕುಲ ಕಸಬುದಾರರ ಸ್ನೇಹ ಬೆಳೆಸುತ್ತಾರೆ. ಪರಿಚಯವಿಲ್ಲದ ಕಸಬನ್ನು ಕಲಿತುಕೊಳ್ಳುವಾಗ ಸಾಕಷ್ಟು ಅನುಭವಗಳನ್ನು ಪಡೆಯುತ್ತಾರೆ. ಕಸಬಿನಲ್ಲಿ ನಿಪುಣರಾಗುತ್ತಾರೆ. ಈ ಕಸಬಿನಿಂದ ಆರ್ಥಿಕ ಸುಧಾರಣೆ ಕಂಡುಕೊಂಡಿದ್ದಾರೆ. ಉದ್ಯೋಗವನ್ನು ತಲೆ–ತಲಾಂತರವಾಗಿ ಮುಂದುವರೆಸಿಕೊಂಡು, ಜೀವನ ನಿರ್ವಹಣೆಗೆ ದಾರಿ ಕಂಡುಕೊಂಡಿದ್ದಾರೆ.

ಕುಶಲಕರ್ಮಗಾರಿಕೆ ವೃತ್ತಿಯ ಲಿಂಗಾಯತರು ಕಡಿಮೆ ಪ್ರಮಾಣದಲ್ಲಿದ್ದಾರೆ. ಲಿಂಗವಂತ ಅಥವಾ ಲಿಂಗಾಯತ ಕುಶಲಕರ್ಮಿಗಳು ಕಂಬಾರಿಕೆ ಮತ್ತು ಬಡಿಗತನ ಕಸಬನ್ನು ಹೆಚ್ಚಾಗಿ ನಿರ್ವಹಿಸುತ್ತಿದ್ದಾರೆ. ಕಂಚುಗಾರಿಕೆ, ಶಿಲ್ಪಗಾರಿಕೆ, ಅಕ್ಕಸಾಲಿಗತನ ಉದ್ಯೋಗಗಳನ್ನು ಮಾಡುತ್ತಿಲ್ಲ. ಕಬ್ಬಿಣದ ಕೆಲಸಗಳು ಬಹಳವಿದ್ದಾಗ ಕಂಬಾರಿಕೆಯನ್ನು ಮತ್ತು ಕಟ್ಟಿಗೆಯ ಕೆಲಸವಿರುವಾಗ ಬಡಿಗತನ ಕಸಬನ್ನು ನಿರ್ವಹಿಸುತ್ತಾರೆ. ರೈತನ ಕಬ್ಬಿಣ ಮತ್ತು ಕಟ್ಟಿಗೆಯಿಂದ ಕೃಷಿಯೋಪಕರಣಗಳನ್ನು ತಯಾರಿಸುತ್ತಾರೆ. ಇದರಿಂದ ಲಿಂಗಾಯತ ಕುಶಲಕರ್ಮಿಗಳು ರೈತರ ಪ್ರೀತಿಯನ್ನು ಸಂಪಾದಿಸುತ್ತಾರೆ. ಈ ಮೂಲಕ ರೈತರ ಆಯಗಾರರಾಗಿ ಜೀವನ ನಿರ್ವಹಿಸುತ್ತಾರೆ.

ಪಾಂಚಾಳರು ರೈತ ಸಮುದಾಯದ ಆಯಗಾರರಾಗಿರುವಂತೆ ಲಿಂಗಾಯತ ಕುಶಲಕರ್ಮಿಗಳು ಪ್ರತಿ ವರ್ಷ ಸುಗ್ಗಿಯ ಕಾಲಕ್ಕೆ ರೈತರಿಂದ ಸೊಲಗಿ ತೂಕ ಮಾಪನದಲ್ಲಿ ಧವಸ–ಧಾನ್ಯಗಳನ್ನು ಪಡೆಯುತ್ತಾರೆ. ಈಗ ಈ ಪದ್ಧತಿ ಕಡಿಮೆಯಾಗಿದೆ. ಹಣ ಪಡೆಯುತ್ತಾರೆ. ಉದ್ಯೋಗ ನಿರಾಂತಕವಾಗಿ ಸಾಗಲು ಪಾಂಚಾಳರ ಜೊತೆಗೆ ಒಳ್ಳೆಯ ಬಾಂಧವ್ಯದಿಂದ ಇರುತ್ತಾರೆ. ಪಾಂಚಾಳರಲ್ಲಿ ಪಾರಂಪರಿಕವಾಗಿ ಬೆಳೆದು ಬಂದ ಕಸಬಿನ ಉಪಕರಣಗಳು ಅಸಂಖ್ಯಾತವಾಗಿರುತ್ತವೆ. ಆದರೆ ಲಿಂಗಾಯತ ಅನ್ಯ ಕುಶಲಕರ್ಮಿಗಳಲ್ಲಿ ಉಪಕರಣಗಳ ಕೊರತೆಯಿರುತ್ತದೆ. ಅವಶ್ಯಕತೆ ಎನಿಸಿದಾಗ ಪಾಂಚಾಳರ ಉಪಕರಣಗಳನ್ನು ಅನ್ಯ ಕುಶಲಕರ್ಮಿ ಉಪಯೋಗಿಸುತ್ತಾನೆ.

ಕಂಬಾರ–ಬಡಿಗೇರರ ಕಸಬುಗಳನ್ನು ಮುಂದುವರೆಸಿಕೊಂಡು ಬಂದವರಲ್ಲಿ ಲಿಂಗವಂತ ಅಥವಾ ಲಿಂಗಾಯತ ಸಮುದಾಯದ ಕುಶಲಕರ್ಮಿಗಳನ್ನು ವಿಶೇಷವಾಗಿ ಗಮನಿಸಲಾಗಿದೆ. ಎರಡು–ಮೂರು ತಲೆಮಾರಿನವರ ಮಾಹಿತಿ ಕಸಬಿನ ಹಿನ್ನೆಲೆಯಲ್ಲಿ ಸಂಗ್ರಹಿಸಲಾಗಿದೆ. ಬೆಳಗಾವಿ ಜಿಲ್ಲೆಯ ಕುಲಗೋಡದ ಕಂಬಾರ(ಲಿಂಗವಂತ) ಕುಟುಂಬದವರು ಕುಶಲಕರ್ಮಗಾರಿಕೆಯಲ್ಲಿ ಮುಂದುವರೆದಿದ್ದಾರೆ. ಕಂಬಾರ ಲಿಂಗವಂತ ಕುಶಲ ಕರ್ಮಿಗಳ ಕುಟುಂಬವನ್ನು ಇಲ್ಲಿ ವಿವೇಚಿಸಿದ್ದೇನೆ.

ಕಂಬಾರ(ಲಿಂಗವಂತ) ಕುಟುಂಬದಲ್ಲಿ ಈವರೆಗೂ ನಾಲ್ಕನೇಯ ತಲೆಮಾರಿನ ಕುಶಲಕರ್ಮಿಗಳು ಕಸಬು ನಿರ್ವಹಿಸುತ್ತಿದ್ದಾರೆ. ಕುಲಗೋಡ ಗ್ರಾಮದ ಕಂಬಾರ ಮನೆತನದ ಹಿರಿಯರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಂಬಾರಿಕೆ ಕಸಬನ್ನು ಆರಂಭಿಸಿದ್ದಾರೆ. ಇವರು ಕಂಬಾರಿಕೆ ವೃತ್ತಿಯನ್ನು ಹೆಚ್ಚಾಗಿ ನಿರ್ವಹಿಸುತ್ತಿದ್ದರಿಂದ ಇವರನ್ನು ಜನರು ಕಂಬಾರ ಎಂದು ಕರೆಯುವುದು ರೂಢಿಯಲ್ಲಿದೆ. ಈಗ ಶಾಲಾ ದಾಖಲಾತಿಗಳಲ್ಲಿಯೂ 'ಕಂಬಾರ' ಎಂದು ಅಡ್ಡ ಹೆಸರು ಬಳಸಲಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು ೧೮೯೦ರ ಅವಧಿಯಲ್ಲಿ ಜನಿಸಿದ ಅಲ್ಲಪ್ಪ, ಯುವಕನಾದಂತೆ ಕಂಬಾರಿಕೆ ಕಸಬನ್ನು ಆರಂಭಿಸುತ್ತಾನೆ. ಶ್ರಮಜೀವಿಯಾಗಿದ್ದ ಅಲ್ಲಪ್ಪ, ಕುಶಲ ಕಲೆಗಾರನಾಗಿದ್ದನು. ಗ್ರಾಮದಲ್ಲಿ ಬಹುಬೇಡಿಕೆಯ ಕಸಬಾಗಿದ್ದ ಕಂಬಾರಿಕೆಯನ್ನು ಜಾಣ್ಮೆಯಿಂದ ನಿರ್ವಹಿಸುತ್ತಿದ್ದನು. ಶರಣರ ಕಾಯಕ ತತ್ವ ಅಲ್ಲಪ್ಪನ ಮೇಲೆಯೂ ಪ್ರಭಾವ ಬೀರಿರಬೇಕು. "ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ' ಎನ್ನುವಂತೆ ಕಂಬಾರ ಸಾಲಿಯಲ್ಲಿ ಅಡಿಗಲ್ಲಿನ ಬಳಿ ಅಲ್ಲಪ್ಪ ಕುಳಿತರೆ, ರೈತರು ಓಡೋಡಿ ಬರುತ್ತಿದ್ದರು. ಅಲ್ಲಪ್ಪನನ್ನು ಸುತ್ತುವರೆದು ತಮ್ಮ ತಮ್ಮ ಕೆಲಸವನ್ನು ಬೇಗ ಮುಗಿಸಿಕೊಡಬೇಕೆಂದು ಪ್ರೀತಿಯಿಂದ ಆಗ್ರಹಿಸುತ್ತಿದ್ದರೆಂದು ತಿಳಿದರೆ ಕಂಬಾರ ಸಾಲಿ 'ಕರ್ತಾರನ ಕಮ್ಮಟ'ವಾಗಿರಬೇಕು. ಅಲ್ಲಪ್ಪ ರೈತರ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವುದರ ಮೂಲಕ ರೈತರ ಸ್ನೇಹವನ್ನು ಪಡೆದುಕೊಂಡಿದ್ದನು. ಕಂಬಾರಿಕೆ ಕಾಯಕದ ಕುರಿತು ಅಭಿಮಾನ ಹೊಂದಿದ್ದು, ಅದರ ಪಾವಿತ್ರ್ಯತೆಯ ಮಹತ್ವವನ್ನು ಅಲ್ಲಪ್ಪ ಕುಶಲಕರ್ಮಿ ಬಲ್ಲವನಾಗಿದ್ದನು.

ಅಲ್ಲಪ್ಪ ಗ್ರಾಮದ ಬಲಭೀಮನ ಪರಮಭಕ್ತ. ಕಸಬನ್ನು ಆರಂಭಿಸುವ ಮೊದಲು ಬಲಭೀಮನ ದರ್ಶನ ಪಡೆದುಕೊಂಡು, ಹಣೆಗೆ ಅಗಲವಾದ ವಿಭೂತಿ ಧರಿಸಿ, ಕಾಳಮ್ಮನ ಮುಂದೆ ಅಂದರೆ ಬೆಂಕಿಯ ಮುಂದೆ ಕುಳಿತು ಕಾಯಕ ಆರಂಭಿಸುತ್ತಿದ್ದನು. ಈತನಿಗೆ ೧೯೨೦ರ ಹೊತ್ತಿಗೆ ಒಂದು ಗಂಡು ಮಗು ಜನಿಸುತ್ತದೆ. ಹುಟ್ಟಿನಿಂದಲೇ ಗಟ್ಟಿಮುಟ್ಟಾದ, ಸದೃಢ ದೇಹದ ಮಗು, ಇದು ಬಲಭೀಮ ಮಹಾಪ್ರಸಾಧವೆಂದೇ ಅಲ್ಲಪ್ಪ ಭಾವಿಸಿ ಮಗನಿಗೆ ಭೀಮಪ್ಪನೆಂದು ನಾಮಕರಣಗೊಳಿಸುತ್ತಾನೆ. ಶರಣರ ಮನಸ್ಸು ಬಹಳ ವಿಶಾಲವಾದದ್ದು. ಪಾಲಿಗೆ ಬಂದುದು ಪ್ರಸಾಧವೆಂದು ಸ್ವೀಕರಿಸುವಂತವರು. ಇಂತಹ ಗುಣವನ್ನು ಹೊಂದಿದ್ದ ಅಲ್ಲಪ್ಪನಿಗೆ ಭೀಮಪ್ಪ ಹುಟ್ಟಿದ್ದು ಹತ್ತಾನೆಗಳ ಬಲ ಬಂದಂತಾಯಿತು.

ಭೀಮಪ್ಪನಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ಪಡೆಯುವಷ್ಟು ಅನುಕೂಲತೆಗಳು ದೊರೆಯುವುದಿಲ್ಲ. ತಂದೆಯ ಜೊತೆ ಕಂಬಾರಿಕೆ ವೃತ್ತಿಯನ್ನು ಕಲಿಯಲು ಆರಂಭಿಸುತ್ತಾನೆ.

ದಿನದಿಂದ ದಿನಕ್ಕೆ ರೈತರ ಪ್ರಮಾಣ ಹೆಚ್ಚಾಗುತ್ತ ಹೋಗುತ್ತದೆ. ಭೀಮಪ್ಪನಿಗೆ ಕಂಬಾರಿಕೆ ಕಸಬು ಕಲಿಯುವುದು ಕಷ್ಟವೆನಿಸಲಿಲ್ಲ. ತಂದೆಯಿಂದ ಚಿಕ್ಕಂದಿನಿಂದಲೂ ನೋಡಿ–ಮಾಡಿ ಕಲಿತ ವಿದ್ಯೆ ಕಂಬಾರಿಕೆಯಾಗಿತ್ತು. ಕಂಬಾರಿಕೆ ಕಸಬಿಗೆಂದೆ ಹೇಳಿ ಮಾಡಿಸಿದ ಅಂಗಸೌಷ್ಠವ ಭೀಮಪ್ಪನದಾಗಿತ್ತು. ತಂದೆ ಅಲ್ಲಪ್ಪನಿಗೆ ವಯಸ್ಸಾಗುತ್ತಿದ್ದಂತೆ ಎಲ್ಲ ಬಗೆಯ ಕೃಷಿ ಹಾಗೂ ಗೃಹೋಪಕರಣಗಳನ್ನು ತಯಾರಿಸುವುದನ್ನು ಕಲಿತುಕೊಂಡನು. ಸ್ವತಂತ್ರವಾಗಿ ಈ ಎಲ್ಲ ಉಪಕರಣಗಳನ್ನು ತಯಾರಿಸುತ್ತಿದ್ದನು. ಶ್ರಮದಾಯಕವಾದ ಬಂಡೆಹಾರೆ, ಹಳಿ ಬೆಸೆಯುವುದು, ಕುಡ ತಯಾರಿಸುವುದು ಭೀಮಪ್ಪನಿಗೆ ಸಲೀಸಾಗಿತ್ತು. ಸಲಿಕೆ, ಗುದ್ದಲಿ, ಕುಡಗೋಲು, ಕುರುಪಿ ಮುಂತಾದವುಗಳನ್ನು ಆಯಾಸವಿಲ್ಲದೆ ರೈತರಿಗೆ ತಯಾರಿಸಿಕೊಡುತ್ತಿದ್ದನು.

ಭೀಮಪ್ಪ ೧೯೪೦–೪೨ರ ಹೊತ್ತಿಗೆ ಪೂರ್ಣ ಪ್ರಮಾಣದ ಕಂಬಾರಿಕೆ ಕಸಬುದಾರನಾಗಿದ್ದನು. ಈ ಅವಧಿಯಲ್ಲಿ ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಉಗ್ರವಾಗಿತ್ತು. ಭಾರತ ಬಿಟ್ಟು ತೊಲಗಿ ಚಳುವಳಿ ಭರಾಟೆಯಲ್ಲಿತ್ತು. ಈ ಹಂತದಲ್ಲಿ ಭೀಮಪ್ಪ ರೈತರ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವುದರೊಂದಿಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಸ್ಫೂರ್ತಿದಾಯಕ ವ್ಯಕ್ತಿಯಾಗಿರಬೇಕು. ದೇಶಾಭಿಮಾನಿಯಾದ ಭೀಮಪ್ಪ ಬ್ರಿಟೀಷರ ವಿರುದ್ಧ ಹೋರಾಡಲು, ದೇಶದ ಹೋರಾಟಗಾರರಿಗೆ ನಾಡಪಿಸ್ತೂಲಗಳನ್ನು ತಯಾರಿಸಿರಬೇಕು. ಆದರೆ ಅವುಗಳ ಕುರಿತಾಗಿ ಎಲ್ಲಿಯೂ ದಾಖಲೆಗಳು ದೊರೆಯುವುದಿಲ್ಲ. ಭೀಮಪ್ಪನ ಕಬ್ಬಿಣ ಸಲಕರಣೆಗಳನ್ನು ತಯಾರಿಸುವ ತಾಂತ್ರಿಕ ವಿದ್ಯೆ ಗಮನಿಸುವುದಾದರೆ ನಾಡ ಪಿಸ್ತೂಲಗಳನ್ನು ತಯಾರಿಸುವಷ್ಟು ವಿದ್ಯಾ ಕೌಶಲ್ಯವಂತನಾಗಿದ್ದನೆಂಬುದು ತಿಳಿಯುತ್ತದೆ.

ಭೀಮಪ್ಪನ ನಾಡಪಿಸ್ತೂಲ್ ತಯಾರಿಕೆ ಕುರಿತು ಈ ಬಗೆಯ ಅಭಿಪ್ರಾಯ ಮೂಡುವುದಕ್ಕೆ ಕಾರಣವಿದೆ. ಕಂಬಾರಿಕೆ ಕಸಬು ಒಂದು ಹಂತದಲ್ಲಿ ಹುಂಬರ ವೃತ್ತಿ; ಇನ್ನೊಂದ ಹಂತದಲ್ಲಿ ಸೂಕ್ಷ್ಮಮತಿಗಳ ಉದ್ಯೋಗ. ಹುಂಬರ ಜೊತೆಯಲ್ಲಿಯೇ ಇದ್ದುಕೊಂಡು ಜಾಣತನದಿಂದ ಕೆಲಸ ಮಾಡುವುದು ಕಂಬಾರಿಕೆಯಾಗಿದೆ. ಇಂತಹ ಸೂಕ್ಷ್ಮತಿ ಸೂಕ್ಷ್ಮವನ್ನು ಬಲ್ಲವರಲ್ಲಿ ಭೀಮಪ್ಪ ಕುಶಲಕರ್ಮಿಯಾಗಿರಬೇಕು. ಪಕ್ಕದ ಗ್ರಾಮ ಕೌಜಲಗಿಯಲ್ಲಿ ಕಂಬಾರ ಮಾನಪ್ಪ ಸ್ವಾತಂತ್ರ ಹೋರಾಟಗಾರರಿಗೆ ನಾಡ ಪಿಸ್ತೂಲಗಳನ್ನು ತಯಾರಿಸಿಕೊಡುತ್ತಿದ್ದನೆಂದು, ಆತನನ್ನು ೧೯೪೩ರಲ್ಲಿ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ೩ ತಿಂಗಳು ಬಂಧಿಸಲಾಗಿತ್ತು ಎಂಬುದರ ಮಾಹಿತಿ ದೊರೆಯುತ್ತದೆ. ಪಕ್ಕದ ಊರಿನ ಮಾನಪ್ಪ ಕಂಬಾರನ ಪ್ರಭಾವ ಭೀಮಪ್ಪನ ಮೇಲೆಯೂ ಬೀರಿರಬೇಕು. ಆದರೆ ಅದರ ಕುರಿತಾಗಿ ಒಂದೂ ದಾಖಲಾತಿಗಳು ಲಭ್ಯವಿಲ್ಲ. ಆದರೆ ಜನಮಾನಸ

ದಾಖಲಾತಿಗಳಲ್ಲಿ ಭೀಮಪ್ಪ ರೈತರ ಉಪಕರಣಗಳನ್ನು ತಯಾರಿಸುತ್ತಿದ್ದನೆಂದು ಶಾಶ್ವತವಾಗಿ ಉಳಿದಿದೆ. ಈ ಕಾಲಾವಧಿಯಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಭೀಮಪ್ಪನ ಕುಟುಂಬ ಸುಧಾರಣೆಯ ಹಂತದಲ್ಲಿತ್ತು. ೪ ಜನ ಕುಶಲಕರ್ಮಿಗಳು ಮಾಡುತ್ತಿದ್ದ ಕೆಲಸವನ್ನು ಭೀಮಪ್ಪ ೪೦ ವರ್ಷಗಳವರೆಗೆ ಒಬ್ಬನೇ ನಿರ್ವಹಿಸಿದ್ದು ಅವನ ಕಾಯಕದ ಮೇಲಿರುವ ನಿಷ್ಠೆಯನ್ನು ತೋರಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂಭ್ರಮದಲ್ಲಿರುವ ಭೀಮಪ್ಪನಿಗೆ ಮೊದಲ ಗಂಡು ಮಗು ಜನಿಸಿದ್ದು ಮತ್ತಷ್ಟು ಸಂಭ್ರಮವನ್ನು ಇಮ್ಮಡಿಸಿತು. ೧೯೫೦ರ ಹೊತ್ತಿಗೆ ಭೀಮಪ್ಪನಿಗೆ ಕೃಷ್ಣಾ, ವೀರಭದ್ರಪ್ಪ, ಈಶ್ವರ ಮತ್ತು ಮಾರುತಿ ಎಂಬ ನಾಲ್ಕು ಜನ ಗಂಡು ಮಕ್ಕಳು ಜನಿಸುತ್ತಾರೆ. ಕೃಷ್ಣಾ ತಂದೆಯಿಂದ ಬಳುವಳಿಯಾದ ಕಂಬಾರಿಕೆ ಕಸಬನ್ನು ಮುಂದುವರೆಸಿಕೊಳ್ಳುತ್ತಾನೆ. ಅದರ ಜೊತೆಗೆ ಜಾನಪದ ಕಲಾವಿದನಾಗಿ ರೂಪುಗೊಂಡಿದ್ದಾನೆ. ಈತನ ಮಗ ಹನುಮಂತನು ಕಂಬಾರಿಕೆಯನ್ನು ಮುಂದುವರೆಸಿದ್ದಾನೆ. ಆಧುನಿಕ ಸಲಕರಣೆಗಳನ್ನು ವೃತ್ತಿಗೆ ಅನುಗುಣವಾಗಿ ಬಳಸಲಾಗುತ್ತಿದೆ. ಹನುಮಂತನು ಆಧುನಿಕ ಸಂದರ್ಭದ ಯುವಕನಾಗಿದ್ದರೂ ಶಿಕ್ಷಣ ಹೊಂದುವುದಕ್ಕೆ ಸಾಕಷ್ಟು ಅನುಕೂಲತೆಗಳಿದ್ದರೂ ಜೀವನೋಪಾಯಕ್ಕಾಗಿ ಕಂಬಾರಿಕೆ ಕಸಬನ್ನು ನಿರ್ವಹಿಸುತ್ತಿದ್ದಾನೆ. ಹನಮಂತನಿಗೆ ಸಿದ್ದವ್ವ ಎಂಬುವಳು ಸಹೋದರಿಯಿದ್ದಾಳೆ.

ಭೀಮಪ್ಪನ ಎರಡನೆಯ ಮಗ ವೀರಭದ್ರ. ಈ ಕುಶಲಕರ್ಮಿ ಹೆಸರಿಗೆ ಮಾತ್ರ ವೀರಭದ್ರ. ಜೀವನದಲ್ಲಿ ಎಂದಿಗೂ ರುದ್ರನಾಗಿರುವ ಉದಾಹರಣೆಗಳಿಲ್ಲ. ತಂದೆಯ ಕಂಬಾರಿಕೆ ವೃತ್ತಿಯನ್ನು ವೀರಭದ್ರಪ್ಪ ಮುಂದುವರೆಸುತ್ತಾನೆ. ಕಂಬಾರ ಸಾಲಿಯಲ್ಲಿ ಕುಳಿತನೆಂದರೆ ಗುಣಮಟ್ಟದ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದನು. ಶರಣರ 'ದಾಸೋಹ' ಪ್ರವೃತ್ತಿಯ ವೀರಭದ್ರ ಕುಶಲಕರ್ಮಿಯು, ರೈತರು ನೀಡಿದ್ದಷ್ಟನ್ನೇ ಪ್ರಸಾದವೆಂದು ಸ್ವೀಕರಿಸುತ್ತಿದ್ದನು. ಕೆಲವು ರೈತರು ಉಚಿತವಾಗಿ ಉಪಕರಣಗಳನ್ನು ತಯಾರಿಸಿಕೊಂಡು ಹೋಗುತ್ತಿದ್ದರು. 'ಕೊಟ್ಟವರೆನ್ನ ಬಂಧುಗಳು, ಕೊಡದವರೆನ್ನ ಬಂಧುಗಳೆಂದು' ಭಾವಿಸುವ ವೀರಭದ್ರಪ್ಪನ ಕುಟುಂಬ ಮಾತ್ರ ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿರಬೇಕು. ವೀರಭದ್ರಪ್ಪನ ಕೈಗಳೆರಡು ತುಂಬಾ ಚುರುಕಾಗಿದ್ದವು. ಸುತ್ತಿಗೆ–ಇಕ್ಕಳುಗಳನ್ನು ಹಿಡಿದ ವೀರಭದ್ರಪ್ಪನ ಕೈಗಳು ಕೇವಲ ಕಂಬಾರಿಕೆಗೆ ಮಾತ್ರ ಮೀಸಲಾಗಲಿಲ್ಲ. ಸಪ್ತ ಸ್ವರಗಳನ್ನು ನುಡಿಸುವ ಹಾರ್ಮೋನಿಯಂ ವಾದಕನಾಗಿ ರೂಪಿಸಿದವು. ಸುತ್ತಿಗೆ ಮೇಲೆ ಕೈಯಿಟ್ಟರೆ ಅಡಗಲ್ಲು ನಡಗುವಂತೆ, ಸ್ವರಗಳ ಮೇಲೆ ಕೈಬೆರಳಾಡಿಸಿದರೆ ಗಾಂಧರ್ವಲೋಕವೇ ನಿರ್ಮಾಣವಾಗಿಸುವ ವಿಶಿಷ್ಠ ಕಲೆ ವೀರಭದ್ರಪ್ಪನದಾಗಿತ್ತು. ಈತನಿಗೆ ಇಬ್ಬರು ಮಕ್ಕಳು, ಮಗಳು

ವಿಶಾಲಾಕ್ಷಿ ಒಬ್ಬನೇ ಮಗ ಕಾಳಪ್ಪ. ಈತನು ಕಂಬಾರಿಕೆ-ಬಡಿಗತನ ವೃತ್ತಿಯನ್ನು ನಿರ್ವಹಿಸುತ್ತಿದ್ದಾನೆ. ಜೀವನ ನಿರ್ವಹಣೆಗೆ ಕಾಳಪ್ಪನಿಗೆ, ಕಂಬಾರಿಕೆ-ಬಡಿಗತನದ ಕಸಬುದಾರಿಕೆಯೇ ಮೂಲಾಧಾರವಾಗಿದೆ.

ಭೀಮಪ್ಪನ ಮೂರನೆಯ ಮಗ ಈಶ್ವರ. ತಂದೆ ಮತ್ತು ಸಹೋದರರಂತೆ ಕಂಬಾರಿಕೆಯನ್ನು ನಿರ್ವಹಿಸಿದವರು. ಅಜ್ಜ-ಅಪ್ಪನಿಂದ ಬಳುವಳಿಯಾದ ಕಂಬಾರಿಕೆ ವೃತ್ತಿಯು ಈಶ್ವರನ ಕುಟುಂಬದಲ್ಲಿಯೂ ಮುಂದುವರೆಯಿತು. ಭೀಮಪ್ಪನ ಒಟ್ಟು ರೈತ ವರ್ಗದವರು ನಾಲ್ಕು ಜನ ಸಹೋದರರಲ್ಲಿ ವಿಂಗಡನೆಗೊಂಡರು. ಈಶ್ವರಪ್ಪ ತನಗೆ ದೊರೆತ ರೈತರ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವುದರ ಮೂಲಕ ಜೀವನೋಪಾಯ ಕೈಕೊಂಡನು. ಕುಟುಂಬದ ಆರ್ಥಿಕ ಸುಧಾರಣೆಗಳು ಮಂದಗತಿಯಲ್ಲಿ ನಡೆದವು. ಈಶ್ವರಪ್ಪನ ನಂತರ ಮಗ ಶ್ರೀಶೈಲ ಕಸಬನ್ನು ಮುಂದುವರೆಸಿಕೊಂಡಿದ್ದಾನೆ. ಶ್ರೀಶೈಲನಿಗೆ ಶೈಲಾ ಎಂಬುವಳು ಒರ್ವ ಸಹೋದರಿಯಿದ್ದಾಳೆ.

ಭೀಮಪ್ಪನ ಕಿರಿಯ ಮಗ ಮಾರುತಿ. ನಾಲ್ಕು ಜನ ಸಹೋದರರಲ್ಲಿಯೇ ಅತೀ ಹೆಚ್ಚು ಆಸಕ್ತಿ ಮತ್ತು ಕಾಳಜಿ ಪೂರ್ವಕವಾಗಿ ಕುಶಲಕರ್ಮಗಾರಿಕೆಯನ್ನು ಮುಂದುವರೆಸಿಕಂಡು ಬಂದಿದ್ದಾರೆ. ವಿನಯಶೀಲರಾದ ಮಾರುತಿ ಪೂರ್ಣಪ್ರಮಾಣದ ಕಂಬಾರಿಕೆ ಕಸಬು ನಿರ್ವಹಿಸುತ್ತಿದ್ಧಾನೆ. ಭೀಮಪ್ಪನ ಕಂಬಾರ ಸಾಲಿಯಲ್ಲಿ ಮೂರು ಜನ ಮಕ್ಕಳಿರದಿದ್ದರೂ ಮಾರುತಿ ಮಾತ್ರ ಖಾಯಂ ಆಗಿ ಇರುತ್ತಾರೆ. ದಿನದ ಹೆಚ್ಚಿನ ಸಮಯವನ್ನು ರೈತರಿಗಾಗಿ ಮಾರುತಿ ಮೀಸಲಿಟ್ಟಿರುತ್ತಾರೆ. ಇತ್ತೀಚಿನ ಸಂದರ್ಭದಲ್ಲಿ ಧವಸ-ದಾನ್ಯದ ಆಯಗಾರಿಕೆ ಹೋರಟು ಹೋಗಿದೆ. ಮಾರುತಿ ರೈತರ ಕೆಲಸಗಳನ್ನು ಮಾಡಿಕೊಡುತ್ತಾರೆ. ಪ್ರತಿಯಾಗಿ ಹಣ ಪಡೆಯುತ್ತಾರೆ. ಕಸಬಿಗೆ ಪೂರಕವಾಗಿ ಹೊಸ ಹೊಸ ಯಂತ್ರಗಳನ್ನು ಬಳಸುತ್ತಿದ್ದಾನೆ. ಕಬ್ಬಿಣ ಬೆಸೆಯುವ ವೆಲ್ಡಿಂಗ್ ಮಸೀನ್, ಡ್ರೀಲ್, ಕಟರ್ ಮಸೀನ್‌ಗಳಿಂದ ಕೆಲಸಗಳು ತುರ್ತಾಗುತ್ತವೆ. ಇವುಗಳ ಬಳಕೆಯಿಂದಾಗಿ ಮಾರುತಿ ಕುಶಲಕರ್ಮಿಯ ಆರ್ಥಿಕ ಜೀವನ ಮಟ್ಟ ಸ್ವಲ್ಪಮಟ್ಟಿಗೆ ಸುಧಾರಿಸುತ್ತಿದೆ. ೫೦ರ ಹರೆಯದಲ್ಲೂ ಮಾರುತಿ ಉತ್ಸಾಹದಿಂದ ಕಂಬಾರಿಕೆ ಕಸಬನ್ನು ಮಾಡುತ್ತಿದ್ದಾರೆ. ಮಾರುತಿಗೆ ಮೂರು ಮಕ್ಕಳು. ವಿದ್ಯಾ, ಗೀತಾ ಹೆಣ್ಣುಮಕ್ಕಳು. ವಿನಾಯಕ ಒಬ್ಬನೇ ಗಂಡು ಮಗ. ತಂದೆಯಷ್ಟೇ ಉತ್ಸಾಹ ಮತ್ತು ಶ್ರದ್ಧೆಯಿಂದ ವಿನಾಯಕ ಕಂಬಾರಿಕೆ ವೃತ್ತಿಯನ್ನು ಕಲಿಯುತ್ತಿದ್ದಾನೆ. ಅಲ್ಲಪ್ಪ ಕುಟುಂಬದ ನಾಲ್ಕನೆ ತಲೆಮಾರಿನ ಕುಶಲಕರ್ಮಿಯಾಗಿ ಮಾರುತಿಯ ಮಗ ವಿನಾಯಕ ರೂಪಗೊಳ್ಳುವುದರ ಮೂಲಕ ಅನ್ಯ ಸಮುದಾಯದ ಕುಶಲಕರ್ಮಿಗಳು ಇಂದಿಗೂ ಪಾಂಚಾಳರಂತೆ ವೃತ್ತಿಯನ್ನು ಮುಂದುವರೆಸಿಕೊಂಡಿದ್ದಾರೆ.

ಹೀಗೆ ಕಂಬಾರ(ಲಿಂಗವಂತ) ಕುಟುಂಬವು ಸ್ವಾತಂತ್ರ್ಯ ಪೂರ್ವದಿಂದ ಆರಂಭಿಸಿದ ಕಸಬು ಇಲ್ಲಿಯವರೆಗೂ ಮುಂದುವರೆದಿದೆ. ಅಲ್ಲಪ್ಪನ ಕುಟುಂಬದ ನಾಲ್ಕನೇಯ ತಲೆಮಾರಿನ ಹನುಮಂತ, ಕಾಳಪ್ಪ, ಶ್ರೀಶೈಲ ಮತ್ತು ವಿನಾಯಕ ಯುವ ಕುಶಲಕರ್ಮಿಗಳು ವೃತ್ತಿ ಮುಂದುವರಿಕೆಯ ಸಾಕ್ಷಿಗಳಾಗಿದ್ದಾರೆ.

ಅನ್ಯಕುಶಲಕರ್ಮಿ ಕಂಬಾರ(ಲಿಂಗವಂತ)ಕುಟುಂಬದ ವಿವರ

ಅಲ್ಲಪ್ಪ

ಭೀಮಪ್ಪ

ಕೃಷ್ಣಾ ವೀರಭದ್ರ ಈಶ್ವರ ಮಾರುತಿ

ಹನಮಂತ ಸಿದ್ದವ್ವ ಕಾಳಪ್ಪ ವಿಶಾಲಾಕ್ಷಿ ಶ್ರೀಶೈಲ ಶೈಲಾ ವಿನಾಯಕ ವಿದ್ಯಾ ಗೀತಾ

ಲಿಂಗಾಯತ ಕಂಬಾರ–ಬಡಿಗ ಕುಶಲಕರ್ಮಿಗಳು ಕುಲಕಸಬುದಾರ ಪಾಂಚಾಳರಂತೆ ಎಲ್ಲ ರೀತಿಯ ಉಪಕರಣಗಳನ್ನು ರೈತರಿಗೆ ತಯಾರಿಸಿಕೊಡುತ್ತಾರೆ. ಈ ಸಮುದಾಯದ ಕುಶಲಕರ್ಮಿಗಳು ಅವಶ್ಯಕ ಉಪಕರಣಗಳನ್ನು ತಯಾರಿಸುತ್ತಾರೆ. ಆದರೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂದರ್ಭದ ವಸ್ತುಗಳನ್ನು ತಯಾರಿಸುವುದಿಲ್ಲ. ಇಂತಹ ವಸ್ತುಗಳ ತಯಾರಿಕೆಯ ವಾರಸುದಾರಿಕೆ ಪಾಂಚಾಳರದಾಗಿದೆ ಎಂದು ನಿರಾಕರಿಸುತ್ತಾರೆ. ತೊಟ್ಟಿಲು ಮತ್ತು ಛಟ್ಟದಂತಹ ವಸ್ತುಗಳನ್ನು ಎಷ್ಟೇ ದುಡ್ಡು ಕೊಡುತ್ತೇನೆಂದು ಜನ ಹೇಳಿದರೂ ಲಿಂಗವಂತ ಕುಶಲಕರ್ಮಿಗಳು ತಯಾರಿಸುವುದಿಲ್ಲ. ಪಾಂಚಾಳರ ಸಾಮಾಜಿಕ ಕರ್ತವ್ಯಗಳನ್ನು ಪಡೆದುಕೊಂಡಿರುವುದಕ್ಕೆ ಪೂರಕವಾಗಿ ಧಾರ್ಮಿಕ, ಸಾಂಸ್ಕೃತಿಕ ಕಾಯಕ ಧರ್ಮವನ್ನು ಅನ್ಯ ಸಮುದಾಯದವರು ಪಾಂಚಾಳರಿಗೆ ಉಳಿಸಿದ್ದಾರೆ. ಇದಕ್ಕೆ ಸಾಕ್ಷಿಯನ್ನುವಂತೆ ರಾಯಭಾಗ ತಾಲೂಕು ಮಂಟೂರು ಗ್ರಾಮದಲ್ಲಿ ನೂರಾರು ವರ್ಷಗಳಿಂದ ಮಲ್ಲಾಪೂರೆ ಕುಟುಂಬದವರು ಬಡಿಗತನ ಕಾಯಕ ಮಾಡುವ ಅನ್ಯ ಸಮುದಾಯದ ಕುಶಲಕರ್ಮಿಗಳಾಗಿದ್ದಾರೆ.

ಮಲ್ಲಾಪೂರೆ ಕುಟುಂಬದ ಹಿರಿಯ ಕುಶಲಕರ್ಮಿ ಈರಪ್ಪ ೧೯೨೦ರ ಅವಧಿಯಲ್ಲಿ ಜನಿಸಿದವನು. ಶರಣರ ವಿಚಾರಗಳಿಗೆ, ಕಾಯಕ ತತ್ವಕ್ಕೆ ಮಾರು ಹೋಗಿ ಈರಪ್ಪ ಬಡಿಗತನ ಕಸಬನ್ನು ಕಲಿತುಕೊಳ್ಳುತ್ತಾನೆ. ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ನೆಲೆಯಾದ ಮಂಟೂರು ಗ್ರಾಮದಲ್ಲಿ ಶರಣರ ಪ್ರಭಾವ ಬೇರೂರಿದೆ. ಇಂತಹ ಗ್ರಾಮದಲ್ಲಿ ಈರಪ್ಪನು ಕುಶಲಕರ್ಮಿಯಾಗಿ ರೈತೋಪಕರಣಗಳು, ಮನೆ ನಿರ್ಮಿಸುವುದು, ಬಾಗಿಲು ಚೌಕಟ್ಟುಗಳನ್ನು ತಯಾರಿಸುವುದರ

ಮೂಲಕ ರೈತರ ನೆಚ್ಚಿನ ಬಡಿಗೌಡನಾಗುತ್ತಾನೆ. ಕುಶಲಕರ್ಮಗಾರಿಕೆಯು ಈರಪ್ಪನಿಗೆ ಜೀವನೋಪಾಯವನ್ನು ತಂದುಕೊಟ್ಟಿತು. ಸ್ವಾತಂತ್ರ್ಯಾನಂತರದಲ್ಲಿ ಈರಪ್ಪನಿಗೆ ಮೂರು ಜನ ಗಂಡು ಮಕ್ಕಳು ಜನಿಸುತ್ತಾರೆ. ೧೯೫೬ರಲ್ಲಿ ರಾಮಪ್ಪ, ಭೀಮಪ್ಪ ಮತ್ತು ಫೀರಪ್ಪ ಎಂಬ ಮೂರು ಮಕ್ಕಳಲ್ಲಿ ಹಿರಿಯ ಮಗ ರಾಮಪ್ಪ ತಂದೆಯಂತೆ ಬಡಿಗತನ ಕಸಬು ಮುಂದುವರೆಸುತ್ತಾನೆ. ಎರಡನೆಯ ಮತ್ತು ಕಿರಿಯ ಮಗ ಭೀಮಪ್ಪ, ಫೀರಪ್ಪ ಒಕ್ಕಲುತನವನ್ನು ಆರಂಭಿಸುತ್ತಾನೆ.

ತಂದೆಯ ಕಸಬನ್ನು ಮುಂದುವರೆಸಿದ ರಾಮಪ್ಪ ಸಂಪೂರ್ಣವಾಗಿ ಬಡಿಗತನ ವೃತ್ತಿಗೆ ಉಳಿದುಕೊಳ್ಳುತ್ತಾನೆ. ಈರಪ್ಪನಿಗಿದ್ದ ರೈತರೆಲ್ಲ ರಾಮಪ್ಪನ ರೈತರಾಗುತ್ತಾರೆ. ಹೊಸದಾಗಿ ಕೆಲವು ರೈತರು ಸೇರುತ್ತಾರೆ. ತಂದೆಗಿಂತ ಹೆಚ್ಚಿನ ರೈತರ ಕೃಷಿಯೋಪಕರಣಗಳನ್ನು ರಾಮಪ್ಪ ತಯಾರಿಸಿ ಕೊಡುವುದರ ಮೂಲಕ ಆಯಗಾರನಾಗುತ್ತಾನೆ. ಕೃಷಿಯ ಜೊತೆ ಗೃಹ ಮತ್ತು ಶಾಲಾ-ಕಾಲೇಜು-ಕಚೇರಿಗಳಲ್ಲಿಯ ಕುರ್ಚಿ-ಮೇಜು ಆಧುನಿಕ ವಸ್ತುಗಳನ್ನು ತಯಾರಿಸುವುದನ್ನು ರೂಢಿಸಿಕೊಳ್ಳುತ್ತಾನೆ. ರಾಮಪ್ಪನಿಗೆ ೧೯೮೬ರಲ್ಲಿ ಮಲ್ಲಿಕಾರ್ಜುನ ಮತ್ತು ಬಸವರಾಜ ಎಂಬ ಎರಡು ಗಂಡು ಮಕ್ಕಳು ಜನಿಸುತ್ತಾರೆ. ಕಿರಿಯ ಮಗ ಬಸವರಾಜ ಕೃಷಿಯ ಕಡೆಗೆ ಒಲವು ತೋರಿಸುತ್ತಾನೆ. ಮಲ್ಲಿಕಾರ್ಜುನ ಅಜ್ಜ-ಅಪ್ಪನಂತೆ ಬಡಿಗತನ ಉದ್ಯೋಗದಲ್ಲಿ ಮುಂದುವರೆದಿದ್ದಾನೆ.

೩೦ನೇ ವಯಸ್ಸಿನಲ್ಲಿಯೇ ಮಲ್ಲಿಕಾರ್ಜುನ ಬಡಿಗತನ ಕಸಬಿನಲ್ಲಿ ಅಗಾಧವಾದ ಕೆಲಸಗಳನ್ನು ಸಾಧಿಸಿದ್ದಾನೆ. ಆಧುನಿಕ ಕಾಲದಲ್ಲಿ ಆಯ ಪದ್ಧತಿ ಕಡಿಮೆಯಾಗಿರುವುದರಿಂದ ರೈತರ ಕೆಲಸಗಳನ್ನು ಮಾಡಿಕೊಟ್ಟು ಹಣ ಪಡೆಯುತ್ತಾನೆ. ಆಧುನಿಕ ವಸ್ತುಗಳ ತಯಾರಿಕೆಯಲ್ಲಿ ಮಲ್ಲಿಕಾರ್ಜುನ ಕುಶಲಕರ್ಮಿ ಸಿದ್ಧಹಸ್ತನಾಗಿದ್ದಾನೆ. ಗ್ರಾಮದ ಸಿದ್ಧಾರೂಡ ಮಠದಲ್ಲಿರುವ, ಸಿಂಹಾಸನ, ಗದ್ದುಗೆ ಮಂಟಪ, ಪಲ್ಲಕ್ಕಿಗಳಲ್ಲಿ ಸೂಕ್ಷ್ಮವಾದ ಸುಳಿವು ಕೆತ್ತನೆಯ ಕೆಲಸ ಮಾಡಿದ್ದಾನೆ. ಸಿಂಹಾಸನದ ಪ್ರಭಾವಳಿಯಲ್ಲಿ ಹೂ-ಬಳ್ಳಿಯ ಸುಳಿವಿನ ಕೆತ್ತನೆಯಿದ್ದು, ಮಧ್ಯದಲ್ಲಿ ೮ ಇಂಚು ವೃತ್ತಾಕಾರ ನಿರ್ಮಿಸಿದ್ದು ಅಲ್ಲಿ ಸಿದ್ಧಾರೂಡರ ಚಿತ್ರ ಚಿತ್ರಿಸಲಾಗಿದೆ. ಕೆಳಗೆ 'ಓಂ ನಮಃ ಶಿವಾಯ' ಪಂಚಾಕ್ಷರಿ ಮಂತ್ರವನ್ನು ಉಬ್ಬು ಅಕ್ಷರದಲ್ಲಿ ಕೆತ್ತಲಾಗಿದೆ. ನಾಲ್ಕು ಕಂಬಗಳಿಂದ ತಯಾರಿಸಿದ ಸಿದ್ಧಾರೂಢರ ಗದ್ದುಗೆ ಮಂಟಪ ಆಕರ್ಷಕವಾಗಿದೆ. ಶಿಖರ ಭಾಗದಲ್ಲಿ ೮ ಇಂಚು ವರ್ತುಲದಲ್ಲಿ ಓಂಕಾರವನ್ನು ಉಬ್ಬು ಲಿಪಿಯಲ್ಲಿ ಕೆತ್ತಿರುವುದು ಅನ್ಯ ಸಮುದಾಯದ ಕುಶಲಕರ್ಮಿ ಮಲ್ಲಿಕಾರ್ಜುನನ ಕುಶಲಕಲೆಗೆ ಸಾಕ್ಷಿಯೆನಿಸುತ್ತವೆ. ಈತನಿಗೆ ಒಬ್ಬ ಮಗನಿದ್ದಾನೆ. ಸಿದ್ಧಾರೂಢ ಶಿಕ್ಷಣ ನೀಡುವ ಆಸೆ ಮಲ್ಲಿಕಾರ್ಜುನಿಗೆ ಇದೆ. ಆಧುನಿಕ ಶಿಕ್ಷಣದೊಂದಿಗೆ ಸಿದ್ಧಾರೂಢ ತಂದೆಯ ಕುಶಲಕಲೆಯ ಕಡೆಗೂ ಗಮನಹರಿಸುವ ಲಕ್ಷಣ ಹೊಂದಿದ್ದಾನೆ.

ಹೀಗೆ ಮಲ್ಲಾಪೂರೆ(ಪಂಚಮಸಾಲಿ) ಲಿಂಗಾಯತ ಕುಟುಂಬವು ನಾಲ್ಕನೆಯ ತಲೆಮಾರಿನಿಂದಲೂ ಬಡಿಗತನದ ಕಸಬನ್ನು ಮುಂದುವರೆಸಿದ್ದಾರೆ.

ಕುಶಲಕರ್ಮಿ ಮಲ್ಲಾಪುರೆ ಕುಟುಂಬದ ವಿವರ

ಈರಪ್ಪ

ರಾಮಪ್ಪ ಭೀಮಪ್ಪ ಫೀರಪ್ಪ

ಮಲ್ಲಿಕಾರ್ಜುನ ಬಸವರಾಜ

ಸಿದ್ಧಾರೂಡ

ಲಿಂಗಾಯತ ಸಮುದಾಯದ ಕುಶಲಕರ್ಮಿಗಾರಿಕೆಯ ಕಂಬಾರ ಮತ್ತು ಮಲ್ಲಾಪೂರೆ ಕುಟುಂಬಗಳನ್ನು ಕಸಬುದಾರಿಕೆಯ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗಮನಿಸಲಾಗಿದೆ. ತಾವು ಅನ್ಯ ಸಮುದಾಯದ ಕುಶಲಕರ್ಮಿಗಳಾಗಿದ್ದರೂ ಪಾಂಚಾಳ ಕುಶಲಕರ್ಮಿಯರ ಜೊತೆ ಒಳ್ಳೆಯ ಸ್ನೇಹ, ಬಾಂಧವ್ಯಗಳನ್ನು ಇಟ್ಟುಕೊಂಡಿರುವುದು ಹಾಗೂ ಕುಲಕಸಬುದಾರರಿಗೆ ಗೌರವ ನೀಡುತ್ತಿರುವುದು ತಿಳಿದುಬರುತ್ತದೆ. ಇವರು ಶಿವನನ್ನು ಮತ್ತು ಬಸವಣ್ಣನವರನ್ನ ಪ್ರಧಾನವಾಗಿ ಆರಾಧಿಸುತ್ತಾರೆ. ಮಠ–ಮಾನ್ಯಗಳ ಸಂಪರ್ಕ ಹೊಂದಿದ್ದಾರೆ. ಮನೆಗಳಲ್ಲಿ ಧಾರ್ಮಿಕ ಕಾರ್ಯಗಳು ಜರುಗಿದರೆ ಮಠಾಧೀಶರುಗಳನ್ನು ಸತ್ಕರಿಸುತ್ತಾರೆ. ಮನೆಯಲ್ಲಿ ಶಿವ, ಬಸವ, ಚನ್ನಬಸವಣ್ಣ, ಮಹಾಬಲೇಶ್ವರ, ಮುರ್ಡೇಶ್ವರ ಮುಂತಾದ ಫೋಟೋಗಳಿರುತ್ತವೆ. ಇವುಗಳ ಜೊತೆ ಈ ಕುಶಲಕರ್ಮಿಗಳು ಕಸಬು ಮೂಲ ಸಂಬಂಧವಾಗಿ ಶಿರಸಂಗಿ ಕಾಳಮ್ಮನ ಫೋಟೋವನ್ನು ಪೂಜಿಸುತ್ತಾರೆ. ಪಾಂಚಾಳರಂತೆ ಜನಿವಾರ ಧಾರಣೆಯಿಲ್ಲ, ಬದಲಾಗಿ ಲಿಂಗಧಾರಣೆ ಬಳಕೆಯಿದೆ. ಈ ಕುಟುಂಬಗಳಲ್ಲಿ ಶೈವ ಪದ್ಧತಿಯ ಆಚರಣೆಗಳು ರೂಢಿಯಲ್ಲಿವೆ. ಪಾಂಚಾಳ ಕುಶಲಕರ್ಮಿಗಳಂತೆ ಅಮವಾಸ್ಯೆಯಂದು ಕಸುಬಿಗೆ ಸಂಬಂಧಿಸಿದ ಎಲ್ಲ ಉಪಕರಣಗಳನ್ನು ಸ್ವಚ್ಛವಾಗಿರಿಸಿ ವಿಭೂತಿ ಕುಂಕುಮ ಧರಿಸಿ, ಹೂಗಳಿಂದ ಅಲಂಕರಿಸುತ್ತಾರೆ. ಸಿಹಿ ಅಡುಗೆಯನ್ನು ನೈವೇದ್ಯೆ ಮಾಡುತ್ತಾರೆ. ಇಲ್ಲಿ ಉಲ್ಲೇಖಿಸಿದ ಅನ್ಯ ಕುಶಲಕರ್ಮಿಗಳು ಶಿರಸಂಗಿ ಪರಿಸರದವರಾಗಿರುವುದರಿಂದ ಅಮವಾಸ್ಯೆ ಮತ್ತು ಯುಗಾದಿಗೆ ಶಿರಸಂಗಿ ಜಾತ್ರೆಗೆ ತೆರಳಿ ಕಾಳಮ್ಮನ ದರ್ಶನ ಪಡೆದುಕೊಳ್ಳುವುದರ ಮೂಲಕ ಲಿಂಗಾಯತ ಸಮುದಾಯದ ಕುಶಲಕರ್ಮಿಗಳು ಕಂಬಾರಿಕೆ–ಬಡಿಗತನ ಕಸಬನ್ನು ಇಂದಿಗೂ ಮುಂದುವರೆಸಿ ಕೊಂಡು, ಜೀವನೋಪಾಯಕ್ಕಾಗಿ ಮಹಾಮಾರ್ಗವನ್ನು ಕಂಡುಕೊಂಡಿದ್ದಾರೆ.

೪. ಮಾದರರು: ಭಾರತೀಯ ಮನುಕುಲ ವ್ಯವಸ್ಥೆಯಲ್ಲಿ ಚತುರ್ವರ್ಣ ಪದ್ಧತಿ ಜಾರಿಯಲ್ಲಿತ್ತು. ನಾಲ್ಕು ವರ್ಣಗಳಲ್ಲಿ ಅತ್ಯಂತ ಕಟ್ಟಕಡೆಯ ವರ್ಣದವರು ಶೂದ್ರರು. ಪ್ರಾಚೀನ ಕಾಲದಿಂದಲೂ ಬ್ರಾಹ್ಮಣ, ಕ್ಷತ್ರೀಯ, ವೈಶ್ಯರ ಪಾದ ಸೇವಕರಂತೆ, ಜೀತದಾಳುವಿಗಿಂತ ಕಡೆಯಾಗಿ ಸಮಾಜದ

ನಿರ್ಲಕ್ಷ್ಯಕ್ಕೆ ಮೂಕ ಸಾಕ್ಷಿಯಾದವರು ಕೆಳವರ್ಗದವರು. ಇವರನ್ನು ಅಸ್ಪೃಶ್ಯರು, ಹೊಲೆಯರು, ಮಾದಿಗರು, ಮಾದರರು ಎಂದು ಕರೆಯಲಾಗುತ್ತದೆ. ಶೂದ್ರ ವರ್ಣದಲ್ಲಿ ಹಲವಾರು ವರ್ಗಗಳು ಸೇರ್ಪಡೆಗೊಂಡಿವೆ. ಕನಿಷ್ಠರಲ್ಲಿಯೇ ಅತ್ಯಂತ ಕನಿಷ್ಠರಾದವರು ಮಾದರರು. ಇವರು ತಮ್ಮನ್ನು ತಾವು ಐದನೆಯ ವರ್ಣದವರೆಂದು ಗುರುತಿಸಿಕೊಳ್ಳುತ್ತಾರೆ. ಹೀಗಾಗಿ ಮಾದರರನ್ನು 'ಪಂಚಮ'ರೆಂದು ಕರೆಯಲಾಗುತ್ತದೆ. ಮೇಲ್ವರ್ಗದವರು ಊರಲ್ಲಿ ವಾಸಿಸಿದರೆ; ಕೆಳವರ್ಗದ ಮಾದರರು ಊರ ಹೊರಗಿನ ಕೇರಿಯಲ್ಲಿ ವಾಸವಾಗಿರುತ್ತಾರೆ. ಯಾರನ್ನು ಮುಟ್ಟದ ಮುಟ್ಟಿಸಿಕೊಳ್ಳದ ಅಸಹನೀಯ ಬದುಕು ಮಾದರರದಾಗಿದೆ. ಇವರಿಗೆ ಉನ್ನತ ಮಟ್ಟದ ಕಾಯಕ ವ್ಯವಸ್ಥೆ ಇರಲಿಲ್ಲ. ಪ್ರಾಣಿಗಳ ಚರ್ಮ ಸುಲಿಯುವುದು, ಪಾದರಕ್ಷೆಗಳನ್ನು ಹೊಲೆಯುವುದು, ಊರ ಶುಚಿಗೊಳಿಸುವುದು, ಕನಿಷ್ಠದ ಕೆಲಸಗಳನ್ನು ಮಾದರರು ಮಾಡುತ್ತಿದ್ದರು. ಹುಟ್ಟಿನಿಂದಲೇ ಬಡತನದ ಶಾಪವನ್ನು ಕಟ್ಟಿಕೊಂಡು ಬಂದ ಮಾದರರು, ಹೊಟ್ಟೆ ಪಾಡಿಗಾಗಿ ಎಂತಹ ಶ್ರಮದಾಯಕ ಕೆಲಸವನ್ನಾದರೂ ಮಾಡುವ ಧನನೀಯ ಸ್ಥಿತಿಯನ್ನು ತಲುಪಿದ್ದರು. ಇವರ ನಿಕೃಷ್ಟ ಬದುಕನ್ನು ಬದಲಿಸಲು ಕಾಲ ಕಾಯುತ್ತಿತ್ತು. ಯುಗ ಯುಗಗಳು ಉರುಳಿ, ಶರಣ ಶತಮಾನಗಳು ಪ್ರವೇಶಿಸುತ್ತಿದ್ದಂತೆ ಮಾದರರ ಬದುಕಿನ ಬದಲಾವಣೆಯ ಸೂಚನೆಗಳು ಮೂಡತೊಡಗಿದವು.

ಕರ್ನಾಟಕದಲ್ಲಿ ಮಾದರರ ಬದುಕಿನ ಬದಲಾವಣೆಗೆ ನಾಂದಿ ಹಾಡಿದ ಕಾಲವನ್ನು ೧೨ನೇ ಶತಮಾನವೆಂದು ಗುರುತಿಸಲಾಗುತ್ತದೆ. ಶರಣರ ಕಾಲದಲ್ಲಿ ಮಾದರರು ಮಹಾಶರಣರಾಗಿ ಸಾಮಾಜಿಕ ಜೀವನದಲ್ಲಿ ಸಮಾನತೆಯ ದಾರಿ ತುಳಿಯಲು ಪ್ರಯತ್ನಿಸಿದವರು. ಈ ಪ್ರಯತ್ನಕ್ಕೆ ಬಸವಣ್ಣ ಮಹಾ ಪ್ರೇರಕನಾಗಿ ಕೆಳವರ್ಗದವರಿಗೆ ಲಿಂಗದೀಕ್ಷೆ ನೀಡಿ, ಶರಣರಾಗಿಸಿ, ಕಾಯಕ ತತ್ವವನ್ನು ಬೋಧಿಸಿದನು. ಮಾದರರಂತೆ ನಿರ್ಲಕ್ಷಿತ ಮಹಿಳಾ ಸಂಕುಲವೂ ಸಮಾಜದಲ್ಲಿ ಹೊಸ ಬೆಳಕು ಕಂಡಿತು. "ಸ್ತ್ರೀ-ಪುರುಷರಿಬ್ಬರೂ ಸಮಾನರೆಂದು ಪ್ರತಿಪಾದಿಸಿದ ಹನ್ನೆರಡನೆಯ ಶತಮಾನದ ಬಶವಣ್ಣನವರು "ಸಕಲ ಜೀವಾತ್ಮರಿಗೆ ಲೇಶ ಬಯಸುವಾತನೇ ಕುಲಜ" ಎಂದು ಹೇಳುವ ಮೂಲಕ ಉದಾರ ದೃಷ್ಟಿಕೋನವನ್ನು ಮೆರೆದರು. ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಕಾಳವ್ವೆ ಮುಂತಾದ ಶರಣ-ಶರಣೆಯರು ಬಸವಣ್ಣನೆಂಬ ಆಲದ ನೆರಳಲ್ಲಿ ಬೆಳೆದರು."[೫] ಸೂಳೆ ಸಂಕವ್ವೆ, ಚಿಕ್ಕಯ್ಯ, ಮಾದಾರ ಚೆನ್ನಯ್ಯನಂತಹ ಮಾದರರ ಸ್ತ್ರೀ-ಪುರುಷರು ಶರಣರ ದಾರಿ ತುಳಿದು, ಶುದ್ಧ ಕಾಯಕವ ಮಾಡಿ ಬಂದುದನ್ನು ಪ್ರಸಾದವಾಗಿರಿಸಿಕೊಂಡವರು ಮಾದರರು.

ಕರ್ನಾಟಕದಲ್ಲಿ ೧೨ನೇ ಶತಮಾನದವರೆಗೂ ಮಾದರರಿಗೆ ತಮ್ಮ ಮೂಲ ಕಾಯಕದಿಂದ ಹೊರಬರಲು ಸಾಧ್ಯವಾಗಲಿಲ್ಲ. ಪಾದರಕ್ಷೆ ಹೊಲೆಯುವಿಕೆ. ಪ್ರಾಣಿ ಚರ್ಮ ಸುಲಿಯುವಿಕೆ ಇವರ ಪ್ರಧಾನ ಕಾಯಕವಾಗಿತ್ತು. ಕಾಯಕ ಮತ್ತು ಅದರಿಂದ ಹುಟ್ಟಿದ ಜಾತಿಗಳು ಈ ಶತಮಾನದಿಂದ ಹೊಸ ಸ್ವರೂಪ ಪಡೆದುಕೊಳ್ಳಲು ಆರಂಭಿಸಿದವು. ಮಾದರರು ಶರಣರಾದ

ಮೇಲೆ ಕಾಯಕಗಳಲ್ಲಿಯೂ ಕೂಡ ಬದಲಾವಣೆಗಳಾದವು. ಕಳ್ಳ, ಕೊಲೆ, ಸುಲಿಗೆಗಾರರು ಶುದ್ಧ ಕಾಯಕ ಜೀವಿಗಳಾದರು. ನಿಕೃಷ್ಟ ಕೆಲಸಗಳಿಗೆ ಮೀಸಲಾಗಿದ್ದ ಮಾದರರು ಉಪಜೀವನಕ್ಕಾಗಿ ಶುದ್ಧ ಕಾಯಕದ ಕಡೆಗೆ ಒಲವು ತೋರಿಸಿದರು. ದೈಹಿಕ ಶ್ರಮದ ಬದಲಾಗಿ, ತಾರ್ಕಿಕ ಶ್ರಮದಾಯಕ ಸಂಸ್ಕೃತಿಯ ಕಡೆಗೆ ಮುಖ ಮಾಡುತ್ತಾರೆ. ಜ್ಞಾನ ಮೂಲ ಕ್ರಿಯೆಗಳಾದ ಕಂಬಾರ ಬಡಿಗೇರ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗ ಕಸಬಿನತ್ತ ಕಾಯಕವನ್ನು ಬದಲಾಯಿಸಿ ಕೊಂಡಿರಬೇಕು. ಮೇಲ್ವರ್ಗದವರು ಮಾಡುವ ಕೆಲಸವನ್ನು ಮಾದರರು ಮಾಡಲು ಆರಂಭಿಸಿರ ಬೇಕು. ಒಟ್ಟಾಗಿ ಮಾದರರು ಅನ್ಯ ಕಾಯಕವನ್ನು ಆರಂಭಿಸಲು ೧೨ನೇ ಶತಮಾನದ ಕಾಲಘಟ್ಟವೇ ಪ್ರೇರಕವಾಗಿತ್ತೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮಾದರರು ಶರಣರ ಪ್ರಭಾವದಿಂದಾಗಿ ಕಂಬಾರಿಕೆ-ಬಡಿಗತನದಂತಹ ಕಸಬನ್ನು ಆಯ್ದು ಕೊಂಡರು. ಕುಲಕಸಬುದಾರ ಬಡಿಗ, ಕಂಬಾರಸಾಲಿ ಸದಾ ರೈತರಿಂದ ತುಂಬಿರುತ್ತಿತ್ತು. ಅಲ್ಲಿ ಮಾದರರು ಹಾಜರಿರುತ್ತಿದ್ದು, ಕುಲ ಕಸಬುದಾರರು ನಿತ್ಯ ತಯಾರಿಸುವ ವಸ್ತುಗಳ, ಕಾಯಕದ ಅರಿವನ್ನು ಮೂಡಿಸಿಕೊಳ್ಳುತ್ತಾರೆ. ಪರಿಚಿತವಿಲ್ಲದ ಕೆಲಸ ಪರಿಚಯವಾದ ಮೇಲೆ ಮಾದರರು ತಮ್ಮ ಕೇರಿಯಲ್ಲಿಯೇ ಕಸಬು ಆರಂಭಿಸುತ್ತಾರೆ. ತಮ್ಮ ಮೂಲ ಕಸಬಿಗೆ ದೊರೆಯುವ ಹಣ, ಗೌರವಕ್ಕಿಂತ ಕಂಬಾರಿಕೆ ಬಡಿಗತನ ಕಸಬಿನಿಂದ ಹಣ, ಗೌರವವನ್ನು ಹೆಚ್ಚಿಸಿಕೊಳ್ಳುತ್ತಾರೆ. ನಮ್ಮೂರು ಕೌಜಲಗಿಯಲ್ಲಿ ನನ್ನ ತಂದೆ ನಿತ್ಯ ಕಂಬಾರಿಕೆ-ಬಡಿಗತನ ಕಾಯಕ ಮಾಡುತ್ತಿದ್ದರು. ಅದನ್ನು ನೋಡಿ-ಕಲಿತ ಮಾದರರ ಹನಮಂತ ಕೊಡಲಿಕಾಂವನ್ನು ಹಾಯಿಸುವುದನ್ನು ಕಲಿತಿದ್ದನು. ಮಾದರರು ಈ ಕಸಬನ್ನು ಮುಂದುವರೆಸುವುದರ ಮೂಲಕ ಆರ್ಥಿಕ ಸುಧಾರಣೆ ಕಂಡುಕೊಳ್ಳುತ್ತಾರೆ. ಉಪಜೀವನಕ್ಕಾಗಿ ಕಂಬಾರಿಕೆ ಬಡಿಗತನವನ್ನು ತಲೆ-ತಲಾಂತರವಾಗಿ ಮುಂದುವರೆಸಿದ ಕುಟುಂಬಗಳಲ್ಲಿ ಮಾದರರು ಮುಖ್ಯವೆನಿಸುತ್ತಾರೆ.

ಮಾದರರು ಕುಶಲಕರ್ಮಗಾರಿಕೆಯನ್ನು ಕಡಿಮೆ ಪ್ರಮಾಣದಲ್ಲಿ ಮುಂದುವರೆಸಿದ್ದಾರೆ. ಪಾಂಚಾಳರ ಕುಲಕಸಬನ್ನು ಮುಂದುವರೆಸಿದ ಮಾದರರು ಕಂಬಾರಿಕೆ ಮತ್ತು ಬಡಿಗತನವನ್ನು ಹೆಚ್ಚಾಗಿ ನಿರ್ವಹಿಸುತ್ತಿದ್ದಾರೆ. ಕಂಚುಗಾರಿಕೆ, ಶಿಲ್ಪಿ, ಅಕ್ಕಸಾಲಿಗ ವೃತ್ತಿಗಳಿಂದ ದೂರವಿದ್ದಾರೆ. ಕಂಬಾರಿಕೆಯ ಬಳಕೆಯೂ ತೀರ ಕಡಿಮೆಯಿದೆ. ಬಡಿಗತನ ಹೆಚ್ಚು ಮಾದರಲ್ಲಿ ಕಂಡುಬರುತ್ತದೆ. ಭೂಮಿ ಸಾಗುವಳಿಗೆ, ವ್ಯವಸಾಯಕ್ಕೆ ಅನುಕೂಲವಾಗುವ ಕೃಷಿ ಉಪಕರಣಗಳನ್ನು, ತಯಾರಿಸುತ್ತಾರೆ. ಆದರೆ ರೈತರ ಪ್ರಮಾಣ ಮಾದರರಲ್ಲಿ ಕಡಿಮೆ ಕಂಡುಬರುತ್ತದೆ. ಈ ಉದ್ಯೋಗದಿಂದ ಜೀವನ ನಿರ್ವಹಣೆಯಾಗುತ್ತಿದೆ. ಮಾದರರು ಪಾಂಚಾಳರ ಜೊತೆ ಉತ್ತಮ ಸೇವಾಬಾಂಧವ್ಯ

ಇಟ್ಟುಕೊಂಡಿದ್ದಾರೆ. ಇವರಲ್ಲಿ ವೃತ್ತಿಗೆ ಸಂಬಂಧಿಸಿದ ಉಪಕರಣಗಳು ಕಡಿಮೆ ಪ್ರಮಾಣ ದಲ್ಲಿರುವುದರಿಂದ ಅಗತ್ಯಕ್ಕನುಗುಣವಾಗಿ ಪಾಂಚಾಳರಲ್ಲಿಯ ಉಪಕರಣಗಳ ಸಹಾಯವನ್ನು ಪಡೆದುಕೊಳ್ಳುತ್ತಾರೆ.

ಕಂಬಾರ-ಬಡಿಗೇರರ ಕಸಬುಗಳನ್ನು ನಿರ್ವಹಿಸಿಕೊಂಡು ಬಂದವರಲ್ಲಿ ಮಾದರ ಸಮುದಾಯದ ಕುಶಲಕರ್ಮಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಮಾದರರಲ್ಲಿಯೂ ತಲೆ-ತಲಾಂತರವಾಗಿ ಬಡಿಗತನ ಕಸಬನ್ನು ಮುಂದುವರೆಸಿದ್ದಾರೆ. ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಕಾತ್ರಾಳ ಗ್ರಾಮದ ಮಾದರ ಕುಟುಂಬದವರು ಕುಶಲಕರ್ಮಿಗಾರಿಕೆಯಲ್ಲಿ ಮುಂದುವರೆದಿದ್ದಾರೆ. ಮಾದರ ಕುಟುಂಬದ ಕುಶಲಕರ್ಮಿಗಳನ್ನು ಉಲ್ಲೇಖಿಸುವುದು ಅವಶ್ಯವೆನಿಸುತ್ತದೆ.

ಮಾದರ ಕುಟುಂಬದಲ್ಲಿ ಇಂದಿಗೂ ನಾಲ್ಕು ತಲೆಮಾರಿಗಿಂತ ಹೆಚ್ಚಿಗೆ ಕುಶಲಕರ್ಮಿಗಳಾಗಿ ಶ್ರಮಿಸುತ್ತಿದ್ದಾರೆ. ನಾನು ಸಂದರ್ಶಿಸಿದ ಮಾದರ ಕುಟುಂಬದ ಪೂರ್ವಜರು ನೂರಾರು ವರ್ಷಗಳ ಪೂರ್ವದಲ್ಲಿಯೇ ಬಡಿಗತನ ಕಸಬನ್ನು ಆರಂಭಿಸಿದ್ದಾರೆ. ನಾನು ಗುರುತಿಸಿದ ಮಾದರ ಕುಟುಂಬದ ಸೆಟ್ಟೆಪ್ಪ ಹಿರಿಯ ತಲೆಮಾರಿನ ಕುಶಲಕರ್ಮಿ. ಈತ ಬ್ರಿಟಿಷರು ಭಾರತಕ್ಕೆ ಆಗಮಿಸಿದ ಸಂದರ್ಭದಲ್ಲಿ ಬದುಕಿರಬೇಕು. ಅಂದಾಜು ೧೮೭೦ರ ಅವಧಿಯಲ್ಲಿ ಜನಿಸಿದ್ದ ಸೆಟ್ಟೆಪ್ಪ ಯುವಕನಾಗುತ್ತಿದ್ದಂತೆ ಬಡಿಗತನ ಕಸಬನ್ನು ಆರಂಭಿಸುತ್ತಾನೆ. ಸವದತ್ತಿ ತಾಲೂಕು ಕಾತ್ರಾಳ ಒಂದು ಚಿಕ್ಕ ಗ್ರಾಮ. ಸುಮಾರು ೪೦ ಕುಟುಂಬಗಳು ವಾಸವಿದ್ದ ಊರು. ಊರಿನ ಗಾತ್ರಕ್ಕೆ ಸಂಬಂಧಿಸಿದಂತೆ ಬೆರಳೆಣಿಕೆ ಕುಟುಂಬಗಳಷ್ಟು ಕೂಡಿದ ಕೇರಿ. ಇಲ್ಲಿ ಕುಶಲಕರ್ಮಗಾರಿಕೆ ಯನ್ನು ಸೆಟ್ಟೆಪ್ಪ ಸ್ವಾತಂತ್ರ್ಯ ಪೂರ್ವದಲ್ಲಿಯೇ ಮುಂದುವರೆಸಿದ್ದರು. ಮಾದರಕೇರಿಗೆ ಮೇಲ್ವರ್ಗದವರು ಹೋಗುವುದೇ ಅತೀ ವಿರಳ. ಇಂತಹ ಸಂದರ್ಭದಲ್ಲಿ ರೈತರು ಕೃಷಿ ಉಪಕರಣಗಳನ್ನು ತಯಾರಿಸಿಕೊಂಡು ಬರುವುದು ಅಪರೂಪವೆನಿಸುತ್ತದೆ. ಮೇಲ್ವರ್ಗದ ರೈತರು ಬೇರೆ ಊರಿಗೆ ಹೋಗಿ ಕೃಷಿ ಉಪಕರಣಗಳನ್ನು ತಯಾರಿಸಿಕೊಂಡು ಬರುತ್ತಿದ್ದರೇ ವಿನಃ ಸೆಟ್ಟಪ್ಪನ ಬಳಿ ಬರುವುದು ತುಂಬಾ ಕಡಿಮೆಯಾಗಿತ್ತು. ಉಪಜೀವನಕ್ಕಾಗಿ ಸೆಟ್ಟೆಪ್ಪ ಬಡಿಗತನವನ್ನು ಮುಂದುವರೆಸುವುದು ಅನಿವಾರ್ಯವಾಗಿತ್ತು. ತನ್ನ ಸಮುದಾಯದ ಕೃಷಿಕರಿಗಾದರೂ ಅನುಕೂಲವಾಗ ಲೆಂದು ಸೆಟ್ಟೆಪ್ಪ ಬಡಿಗತನ ಕಸಬಿನಲ್ಲಿ ಮುಂದುವರೆದನು. ದಲಿತ ಸಮುದಾಯದ ರೈತರಿಗೆಲ್ಲ ಸೆಟ್ಟೆಪ್ಪ ಆಯಗಾರನಾದನು. ಉದ್ಯೋಗದಲ್ಲಿ ಪ್ರಾವೀಣ್ಯತೆಯನ್ನು ಪಡೆದನು. ಕೊಲ್ಲುವವನೇ ಮಾದಿಗ. ಹೊಲಸು ತಿಂಬುವವನೇ ಹೊಲೆಯ" ಶರಣರ ವಿವೇಚನ ರಸಭಾವವನ್ನು ಸೆಟ್ಟೆಪ್ಪ ಅರ್ಥ ಮಾಡಿಕೊಂಡಿರಬೇಕು. ಸಮುದಾಯದ ರೈತರಿಗೆಲ್ಲ ಬಡಿಗತನ ಕೆಲಸ ಮಾಡುತ್ತಲೇ

ಶುದ್ಧ ವಿಚಾರಗಳನ್ನು ಅರಹುತ್ತಿದ್ದನು. ೫೦೦ ವರ್ಷಗಳ ಹಿಂದಿನ ವಚನ ವಿಚಾರಗಳೆಲ್ಲ ಸೆಟ್ಟೆಪ್ಪನ ಮೇಲೆ ಪ್ರಭಾವ ಬೀರಿರಬೇಕೆನಿಸುತ್ತದೆ. ಶರಣರಂತೆ ವಿಭೂತಿಧಾರಣೆ ಮಾಡಿ ಕಾಯಕದಲ್ಲಿ ಸೆಟ್ಟೆಪ್ಪ ತೊಡಗುತ್ತಿದ್ದವನು. ಅವನ ನಡೆ-ನುಡಿ ಕಾಯಕ ಶುದ್ಧತೆಯನ್ನು ಗಮನಿಸಿದ ಕೆಲ ಮೇಲ್ವರ್ಗದ ರೈತರು ಅತೀ ಅನಿವಾರ್ಯತೆ ಎನಿಸಿದಾಗ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಕಾಲಾಂತರದಲ್ಲಿ ಸೆಟ್ಟೆಪ್ಪ ಬಹುರೈತರ ಆಯಗಾರನಾಗಿ ಕುಶಲಕರ್ಮಗಾರಿಕೆಯನ್ನು ನಿರ್ವಹಿಸುತ್ತಾನೆ.

ಮಾದರರು ಸಹಜವಾಗಿ ಸ್ತ್ರೀ ದೇವತೆಗಳ ಮೇಲೆ ಅಪಾರ ಭಕ್ತಿ ಭಾವವಿರುವವರು. ಸೆಟ್ಟೆಪ್ಪನು ಸ್ತ್ರೀ-ದೇವತೆಗಳ ಆರಾಧಕನಾಗಿದ್ದನು. ದುರ್ಗವ್ವ, ಲಕ್ಕವ್ವ, ಕರೆವ್ವ ದೇವತೆಗಳಂತೆ ಕಾಳಮ್ಮನನ್ನು ವೃತ್ತಿ ಸಂಬಂಧವಾಗಿಯಾಗಿಯಾದರೂ ಪೂಜಿಸುತ್ತಿದ್ದನು. ಈ ಶರಣ ಸಂಪ್ರದಾಯದ ಮಾದರರ ಸೆಟ್ಟೆಪ್ಪನಿಗೆ ೧೯೦೦ರ ಹೊತ್ತಿಗೆ ದುರ್ಗಪ್ಪ, ಲಕ್ಕಪ್ಪ ಮತ್ತು ಕರೆಪ್ಪ ಎಂಬ ಮೂರು ಜನ ಗಂಡುಮಕ್ಕಳು ಜನಿಸುತ್ತಾರೆ. ಹಿರಿಯ ಮಗ ದುರ್ಗಪ್ಪ ಮತ್ತು ಎರಡನೆಯ ಮಗ ಲಕ್ಕಪ್ಪ ಭೂಮಿಯ ಕೆಲಸದಲ್ಲಿ ತೊಡಗುತ್ತಾರೆ. ತಂದೆಯಂತೆ ಕುಶಲಕರ್ಮಿಗಳಾಗದೆ ರೈತರಾಗುತ್ತಾರೆ. ಸೆಟ್ಟೆಪ್ಪನಿಗೆ ತನ್ನ ಕಾಲಕ್ಕೆ ಬಡಿಗತನ ಕಸಬು ನಿಂತು ಹೋಗುತ್ತೆದೆಂಬ ಆತಂಕ ಮೂಡಿರಬೇಕು. ಈ ಸಂದರ್ಭದಲ್ಲಿ ಕರೆಪ್ಪ ಜನಿಸಿದಾಗ ಸೆಟ್ಟೆಪ್ಪ ಖುಷಿ ಪಟ್ಟು ಬಡಿಗತನವನ್ನು ಕರೆಪ್ಪನಿಗೆ ಕಲಿಸುತ್ತಾನೆ.

೧೯೧೦ರ ಅವಧಿಯಲ್ಲಿ ಜನಿಸಿದ್ದ ಕರೆಪ್ಪ ಸುಮಾರು ೭೦ ವರ್ಷಗಳ ಕಾಲ ಬದುಕಿದ್ದವನು. ಪಾಂಚಾಳ ಕುಶಲಕರ್ಮಿಗಳ ಜೊತೆ ಒಳ್ಳೆಯ ಒಡನಾಟ ಇಟ್ಟುಕೊಂಡವನು. ಸೆಟ್ಟೆಪ್ಪನ ಕಸಬಿನ ವಾರಸುದಾರನಾಗಿ ಕರೆಪ್ಪ ಬಡಿಗತನವನ್ನು ಮುಂದುವರೆಸುತ್ತಾನೆ. ತಂದೆಯಿಂದ ದೊರೆತ ಕುಶಲಕಲೆಯನ್ನು ರೂಢಿಸಿಕೊಳ್ಳುತ್ತಾನೆ. ತನ್ನ ಕೇರಿಯ ಸಮುದಾಯದ ಜೊತೆ ಊರ ರೈತರ ಪ್ರೀತಿಯನ್ನು ಗಳಿಸುತ್ತಾನೆ. ನೇಗಿಲಯೋಗಿ ಕೃಷಿಕೆಲಸಗಳಿಗೆ ತೊಂದರೆಯಾಗದಂತೆ ಬಡಿಗತನ ವೃತ್ತಿಯನ್ನು ಗೌರವದಿಂದ ನಿರ್ವಹಿಸಿಕೊಳ್ಳುತ್ತಾನೆ. ಉಪಕರಣಗಳ ಅವಶ್ಯಕತೆ ಎನಿಸಿದಾಗ ಪಾಂಚಾಳ ಕಸಬುದಾರರ ಸಹಾಯ ಪಡೆದು ಉದ್ಯೋಗಗಕ್ಕೆ ತೊಂದರೆಯಾಗದಂತೆ ನೋಡಿ ಕೊಳ್ಳುತ್ತಿದ್ದನು. ಕರೆಪ್ಪ ಕುಶಲಕಲೆಗಾರನಾಗುವುದಷ್ಟೇ ಅಲ್ಲ ಕಲಾವಂತನು ಆಗಿದ್ದನು. ದೊಡ್ಡಾಟ-ಬಯಲಾಟಗಳ ಅಭಿರುಚಿಯಿತ್ತು. ಹಳ್ಳಿಗಳಲ್ಲಿ ಕರೆಪ್ಪನನ್ನು 'ಆಟದ ಮಾಸ್ತರ' ಎಂದು ಕರೆಯುತ್ತಿದ್ದರು. ಜಾನಪದ ಕಲಾವಿದನಾಗಿದ್ದರೂ ಬಡಿಗತನ ವೃತ್ತಿಯನ್ನು ಮುಂದುವರೆಸಿ ಕೊಂಡು ಉಪಜೀವನವನ್ನು ಸಾಗಿಸುತ್ತಿದ್ದನು. ೧೯೪೫-೪೬ರ ಹೊತ್ತಿಗೆ ಕರೆಪ್ಪನಿಗೆ ರುದ್ರಪ್ಪ, ಮಹಾದೇವಪ್ಪ ೨ನೇ ಸೆಟ್ಟೆಪ್ಪ ಮತ್ತು ಹೂವಪ್ಪ ಎಂಬ ನಾಲ್ಕು ಜನ ಗಂಡು ಮಕ್ಕಳು ಜನಿಸುತ್ತಾರೆ.

ಕರೆಪ್ಪನ ಹಿರಿಯ ಮಗ ರುದ್ರಪ್ಪ ತಂದೆಯಂತೆ ಸದೃಢ ಕಾಯನಾಗಿ ಬಡಿಗತನ ಕಾಯಕದಲ್ಲಿ ಮುಂದುವರೆಯುತ್ತಾನೆ. ರುದ್ರಪ್ಪ ಸ್ವಾತಂತ್ರ್ಯ ನಂತರದ ವೃತ್ತಿಕಾರನಾಗಿರುವುದರಿಂದ ಕೃಷಿಯೋಪಕರಣಗಳ ಜೊತೆಯಲ್ಲಿ ಆಧುನಿಕ ವಸ್ತುಗಳನ್ನು ತಯಾರಿಸುತ್ತಿದ್ದನು. ತೊಲಿ ಜಂತಿ, ಜೇಷ್ಟಾ ಮಡಿಗೆಯ ಮೇಲಮುದ್ದಿ ಮನೆಗಳನ್ನು ನಿರ್ಮಿಸುತ್ತಿದ್ದಾನೆ. ಇತ್ತೀಚಿನ ದಿನಗಳಲ್ಲಿ ಆಯಗಾರಿಕೆ ಕಡಿಮೆಯಾಗಿರುವುದರಿಂದ ರುದ್ರಪ್ಪ ಎಲ್ಲ ಕೆಲಸವನ್ನು ಮಾಡಿ ಹಣವನ್ನು ಪಡೆಯುತ್ತಿದ್ದಾನೆ. ಊರಿನ ಬಹುತೇಕ ಎಲ್ಲ ರೈತ ಸಮುದಾಯದವರು ರುದ್ರಪ್ಪನ ಬಳಿ ಕೆಲಸ ಮಾಡಿಸಿಕೊಂಡಿದ್ದಾರೆ. ಅಜ್ಜ-ಅಪ್ಪನಿಗಿಂತಲೂ ರುದ್ರಪ್ಪ ಊರ ಜನರ ಪ್ರೀತಿ-ಸ್ನೇಹವನ್ನು ಸಂಪಾದಿಸಿದ್ದಾನೆ. ಈತನಿಗೆ ೧೯೭೬ರ ಅವಧಿಯಲ್ಲಿ ಜನಿಸಿದ ಫಕೀರಪ್ಪ ಎಂಬ ಗಂಡು ಮಗನಿದ್ದಾನೆ. ಫಕೀರಪ್ಪನು ಊರಲ್ಲಿ ಮತ್ತು ಪರ ಊರುಗಳಲ್ಲಿಯೂ ಈಗ ಬಡಿಗತನ ಕಸಬನ್ನು ನಿರ್ವಹಿಸುತ್ತಿದ್ದಾನೆ. ತನಗೆ ಅವಶ್ಯಕವಾಗಿರುವ ಎಲ್ಲ ವೃತ್ತಿ ಉಪಕರಣಗಳನ್ನು ಫಕೀರಪ್ಪ ಹೊಂದಿದ್ದಾನೆ. ಪೂರ್ವಜರ ಉಪಕರಣಗಳು ಮತ್ತು ಜ್ಞಾನವನ್ನು ಬಡಿಗತನ ಕಸಬಿನಲ್ಲಿ ಬಳಸುತ್ತಿದ್ದಾನೆ. ಆಧುನಿಕ ಯಂತ್ರಗಳನ್ನು ಅಳವಡಿಸಿಕೊಂಡಿದ್ದಾನೆ. ಯಂತ್ರಗಳ ಸಹಾಯದಿಂದ ಫಕೀರಪ್ಪ ಕೈತುಂಬ ಉದ್ಯೋಗಗಳನ್ನ ಹೊಂದಿದವನಾಗಿದ್ದಾನೆ. ಇದರಿಂದ ಉಪಜೀವನ ನಿರ್ವಹಿಸಿಕೊಳ್ಳುತ್ತಿದ್ದಾನೆ. ಮಾದರರ ಫಕೀರಪ್ಪ ಈ ಕುಟುಂಬದ ನಾಲ್ಕನೆಯ ತಲೆಮಾರಿನ ಕುಶಲಕರ್ಮಿಯಾಗಿ ತನ್ನ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುತ್ತಿದ್ದಾನೆ. ಬಡಗತನವು ಫಕೀರಪ್ಪನ ಜೀವನ ನಿರ್ವಹಣೆಯ ಮೂಲಾಧಾರವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಕರೆಪ್ಪನ ಎರಡನೆಯ ಮಗ ಮಹಾದೇವಪ್ಪ ೬೫ ವರ್ಷದವನು. ಈತ ಚಿಕ್ಕಂದಿನಲ್ಲಿ ಸ್ವಲ್ಪಮಟ್ಟಿಗೆ ತಂದೆ-ಅಣ್ಣನ ಜೊತೆ ಬಡಿಗತನ ಕಲಿಯಲು ಪ್ರಯತ್ನಿಸಿದನು. ಸರಿಯಾಗಿ ಬಾಚಿ ಹಿಡಿಯಲು ಬಾರದ ಮಹಾದೇವನನ್ನು ಬಾಲಕನಾಗಿರುವಾಗ ರೈತರು ಅಪಹಾಸ್ಯ ಮಾಡುತ್ತಾರೆ. ಇದರಿಂದ ಮನನೊಂದು ಮಹಾದೇವಪ್ಪ ಕುರಿಕಾಯುವ ಕೆಲಸಕ್ಕೆ ತೊಡಗುತ್ತಾನೆ. ಆದರೆ ವೈಚಿತ್ರ್ಯತೆಯೆಂದರೆ ಕುರಿಕಾಯುವ ಮಹಾದೇವಪ್ಪನ ಕಿರಿಯಮಗ ಮಂಜುನಾಥ ಬಡಿಗತನ ಉದ್ಯೋಗವನ್ನು ಆರಂಭಿಸಿದ್ದಾನೆ. ಈತ ೧೯೮೫ರಲ್ಲಿ ಜನಿಸಿದ್ದಾನೆ. ಶಿಕ್ಷಣ ಪಿ.ಯು.ಸಿ. ಕಲಾ ವಿಭಾಗದಲ್ಲಿ ಸರ್ಕಾರಿ ಪದವಿಪೂರ್ವಕಾಲೇಜು ಯಕ್ಕುಂಡಿಯಲ್ಲಿ ಓದಿದ್ದಾನೆ. ಈಗ ೪-೫ ವರ್ಷಗಳಿಂದ ಬಡಿಗತನ ಕಸಬನ್ನು ಆರಂಭಿಸಿದ್ದಾನೆ. ದೊಡ್ಡಪ್ಪ ರುದ್ರಪ್ಪ ಮತ್ತು ದೊಡ್ಡಪ್ಪನ ಮಗ ಅಣ್ಣ ಫಕೀರಪ್ಪನ ಸಹಾಯದಿಂದ ಬಡಿಗತನ ಉದ್ಯೋಗವನ್ನು ಕಲಿತುಕೊಂಡಿದ್ದಾನೆ. ಈ ಉದ್ಯೋಗವು ನನ್ನ ಉಪಜೀವನ ಸಾಗಿಸುವುದಕ್ಕೆ ಸಹಾಯವಾಗುತ್ತದೆ ಎನ್ನುತ್ತಾನೆ ಮಂಜುನಾಥ.

"ಅಣ್ಣನ ಜೋಡಿನ ಇರುತ್ತಿದ್ನಿ ಕಾಲೇಜಿನಿಂದ ಬಂದ ಮ್ಯಾಲ ಅಲ್ಲೇ ಕುಂತ ನೋಡಿ ನೋಡಿ ಕಲಿತನು" ಅಣ್ಣ, ಚಿಕ್ಕಪ್ಪ, ದೊಡ್ಡಪ್ಪನು ತಯಾರಿಸುವ ಸುಳಿವಿನ ವಿನ್ಯಾಸದ ಬಾಗಿಲು-ಕಿಟಕಿ ಇತರೆ ವಸ್ತುಗಳನ್ನು ನೋಡಿ ಮಂಜುನಾಥ ಅಜ್ಜನ ಉದ್ಯೋಗವನ್ನು ಮುಂದುವರೆಸಲು ಆಸಕ್ತಿ ತೋರಿದನು. ಈಗ ಸ್ವತಂತ್ರವಾಗಿ ಉದ್ಯೋಗ ಕೈಕೊಂಡಿದ್ದಾನೆ. ಮಂಜುನಾಥನಿಗೆ ಒಬ್ಬ ಅಣ್ಣ ಫಕೀರಪ್ಪ ಇದ್ದಾನೆ. ದೊಡ್ಡಪ್ಪನ ಮಗನ ಹೆಸರು ಫಕೀರಪ್ಪ ಮತ್ತು ಮಹಾದೇವಪ್ಪನ ಹಿರಿಯ ಮಗನು ಫಕೀರಪ್ಪ. ಈತನು ತಂದೆಯಂತೆ ಕುರಿಕಾಯುವ ಕೆಲಸ ಮಾಡುತ್ತಿದ್ದಾನೆ.

ಕರೆಪ್ಪನ ಮೂರನೆಯ ಮಗ ೨ನೇ ಸೆಟ್ಟೆಪ್ಪ ಮತ್ತು ನಾಲ್ಕನೆಯ ಮಗ ಹೂವಪ್ಪ ಬಡಿಗತನ ಕಸಬಿನಲ್ಲಿ ಮುಂದುವರೆದಿದ್ದಾನೆ. ರುದ್ರಪ್ಪ ಈತನ ಮಗ ಫಕೀರಪ್ಪ ಮತ್ತು ಸೆಟ್ಟೆಪ್ಪ ಈಗ ಕಾತ್ರಾಳದಲ್ಲಿ ಉದ್ಯೋಗ ನಿರ್ವಹಿಸುತ್ತಿದ್ದಾರೆ. ಮಹಾದೇವಪ್ಪ ಮತ್ತು ಮಂಜುನಾಥ ಉಪಜೀವನಕ್ಕಾಗಿ ಬೆನಕಟ್ಟಿಯಲ್ಲಿ ವಾಸವಾಗಿದ್ದು, ಮಂಜುನಾಥ ಬಡಿಗತನ ಉದ್ಯೋಗದಲ್ಲಿ ಮುಂದುವರೆದಿದ್ದಾನೆ. ನಾಲ್ಕನೆಯ ಸಹೋದರ ಹೂವಪ್ಪ ಈಗ ರಾಮದುರ್ಗ ತಾಲೂಕಿನ ಕಲ್ಲಾಳದಲ್ಲಿ ಬಡಿಗತನವನ್ನು ನಿರ್ವಹಿಸುತ್ತಿದ್ದಾನೆ. ಹೂವಪ್ಪ ಬಡಿಗತನದಲ್ಲಿ ಸೂಕ್ಷ್ಮವಾದ ಕೆಲಸಗಳನ್ನು ಮಾಡುತ್ತಿದ್ದಾನೆ. ಕಲ್ಲಾಳ ಗ್ರಾಮದಲ್ಲಿ ಮುಸ್ಲಿಂ ಸಮುದಾಯದ ಮೊಹರಂ ಹಬ್ಬಗಳಲ್ಲಿ ಆಚರಿಸುವ ಬಳಸುವ 'ಡೋಲಿ'ಯನ್ನು ತಯಾರಿಸಿದ್ದಾನೆ.

ಹೀಗೆ ಮಾದರ(ಪರಿಶಿಷ್ಟ) ಕುಟುಂಬವು ನೂರಾರು ವರ್ಷಗಳ ಮುಂಚೆ ಪ್ರಾರಂಭಿಸಿದ ಬಡಿಗತನದ ಕಸಬು ಇಲ್ಲಿಯವರೆಗೂ ಮುಂದುವರೆದಿದೆ. ಸೆಟ್ಟೆಪ್ಪನ ಕುಟುಂಬದ ನಾಲ್ಕನೆಯ ತಲೆಮಾರಿನ ಫಕೀರಪ್ಪ ಮಂಜುನಾಥ ಯುವ ಕುಶಲಕರ್ಮಿಗಳಾಗಿ ಮುಂದುವರೆದಿದ್ದಾರೆ. ಕೆಳವರ್ಗದವರು ಮೇಲ್ವರ್ಗದವರ ಕಾಯಕವನ್ನು ಮಾಡುವುದು ತೀರಾ ವಿರಳವಾಗಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿಯೂ ಕಾತ್ರಾಳ ಗ್ರಾಮದ ಮಾದರ ಕುಟುಂಬವು ಊರಿನ ಎಲ್ಲ ಜನತೆಗೂ ಕುಶಲಕರ್ಮಿಗಾರಿಕೆಯ ಸೇವೆಯನ್ನು ನೀಡುತ್ತಿರುವುದು ಅಪರೂಪವೆನಿಸುತ್ತದೆ.

ಅನ್ಯಕುಶಲಕರ್ಮಿ ಮಾದರ(ಪರಿಶಿಷ್ಟ) ಕುಟುಂಬದ ವಿವರ

ಸೆಟ್ಟೆಪ್ಪ(ಕುಶಲಕರ್ಮಿ)

ದುರ್ಗಪ್ಪ(ಕೃಷಿಕರು) ಲಕ್ಕಪ್ಪ(ಕೃಷಿಕರು) ಕರೆಪ್ಪ(ಕುಶಲಕರ್ಮಿ)

ರುದ್ರಪ್ಪ ಮಹಾದೇವಪ್ಪ ೨ನೇ ಸೆಟ್ಟೆಪ್ಪ ಹೂವಪ್ಪ

ಕುಶಲಕರ್ಮಿ (ಕುರಿಕಾಯುವಿಕೆ) ಕುಶಲಕರ್ಮಿ ಕುಶಲಕರ್ಮಿ

ಫಕೀರಪ್ಪ

ಫಕೀರಪ್ಪ(ಕೃಷಿಕ) ಮಂಜುನಾಥ

ಮಾದರ ಸಮುದಾಯದ ಕುಶಲಕರ್ಮಿಗಳು ಕುಲಕಸಬುದಾರರಂತೆ ಎಲ್ಲ ಬಗೆಯ ಉಪಕರಣ ಮತ್ತು ವಸ್ತುಗಳನ್ನು ರೈತರಿಗೆ ತಯಾರಿಸಿಕೊಡುತ್ತಾರೆ. ಆದರೆ ಇವರು ಕೂಡ ಇತರ ಅನ್ಯ ಸಮುದಾಯದ ಕುಶಲಕರ್ಮಿಗಳಂತೆ ಶವಸಂಸ್ಕಾರದ ಛಟ್ಟ ಅಥವಾ ಛಟ್ಟಪಲ್ಲಕ್ಕಿಯನ್ನು, ತೊಟ್ಟಿಲುಗಳನ್ನು ತಯಾರಿಸುವುದಿಲ್ಲ. ಬಡಿಗತನದ ಎಲ್ಲ ಆಯಾಮಗಳಲ್ಲಿ ಮಾದರರು ಕೆಲಸ ಮಾಡಿದರೂ ಕೆಲವು ಧಾರ್ಮಿಕತೆಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುವುದನ್ನು ಪಾಂಚಾಳರಿಗೆ ನೀಡಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಂದಿಗುಂದ ಗ್ರಾಮದ ಮಾದರ ಸಮುದಾಯದ ಹೊಸಾಲಿ ಕುಟುಂಬವನ್ನು ವಿಶೇಷವಾಗಿ ಗಮನಿಸಲಾಯಿತು. ಹೊಸಾಲಿ ಕುಟುಂಬದ ಹಿರಿಯ ಕುಶಲಕರ್ಮಿ ಲಕ್ಷ್ಮಣ ಈತ ೧೮೮೦ರ ಅವಧಿಯಲ್ಲಿ ಜನಿಸಿರಬೇಕು. ಶರಣ ಜೀವಿಯಾದ ಲಕ್ಷ್ಮಣ ತನ್ನ ಬದುಕನ್ನು ಕಟ್ಟಿಗೆ ಅಥವಾ ಮರದ ಕೆಲಸದೊಂದಿಗೆ ಆರಂಭಿಸುತ್ತಾನೆ. ಕಟ್ಟಿಗೆ ಕೊರೆಯುವ ಮಿಲ್ ಅಥವಾ ಸಾಮಿಲ್‌ಗಳು ಸಾರ್ವಜನಿಕ ಸೇವೆಗೆ ಬರುವುದಕ್ಕಿಂತ ಮುಂಚೆ ತಗ್ಗಿನಲ್ಲಿ ಮರ ಕೊರೆಯುವ ಪದ್ಧತಿ ಬಳಕೆಯಲ್ಲಿತ್ತು. ಅದಕ್ಕೆ ತಗ್ಗಿನ ಅಡ್ಡೆ ಎಂದು ಗ್ರಾಮೀಣರು ಕರೆಯುತ್ತಿದ್ದರು. ಲಕ್ಷ್ಮಣ ತಗ್ಗಿನಲ್ಲಿ ಕುಳಿತು ಕಟ್ಟಿಗೆ ಕೊರೆಯುವ ಕೆಲಸ ನಿರ್ವಹಿಸುತ್ತ, ಪಾಂಚಾಳರ ಸ್ನೇಹ ಬಯಸುತ್ತಾನೆ. ಗರಗಸದಿಂದ ಕಟ್ಟಿಗೆ ಕೊರೆಯಲು ಸಾಮಾನ್ಯವಾಗಿ ಇಬ್ಬರು ಕೆಲಸಗಾರರು ಇರುತ್ತಾರೆ. ಒಬ್ಬರು ಗರಗಸ ಬಿಡುವುದು, ಇನ್ನೊಬ್ಬರು ಗರಗಸ ಜಗ್ಗುವುದು. ಪಾಂಚಾಳ ಕುಶಲಕರ್ಮಿ ಗರಗಸ ಬಿಡುತ್ತಿದ್ದರೆ, ಲಕ್ಷ್ಮಣ ತಗ್ಗಿನಲಿ ಕುಳಿತು ಗರಗಸ ಜಗ್ಗುವ ಕಾಯಕವಾಗಿತ್ತು. ಹೀಗಾಗಿ ಲಕ್ಷ್ಮಣನಿಗೆ ಪಾಂಚಾಳರ ಕುಶಲಕರ್ಮಿಗಳ ಸ್ನೇಹ ಹತ್ತಿರವಾಗುತ್ತದೆ. ಕೊರೆದ ಕಟ್ಟಿಗೆಯ ತುಂಡನ್ನು ಲಕ್ಷ್ಮಣ ಕೊಡಲಿಯಿಂದ ಚೌಕಾಕಾರಗೊಳಿಸಿ ಹಸನಗೊಳಿಸಲು ಕಲಿಯುತ್ತಾನೆ. ಕೆಲವು ವರ್ಷ ಪಾಂಚಾಳರ ಜೊತೆ ದುಡಿದ ಲಕ್ಷ್ಮಣ ಅನಂತರದಲ್ಲಿ ಸ್ವತಂತ್ರ ಕುಶಲಕರ್ಮಿಯಾಗಿ ರೂಪಗೊಳ್ಳುತ್ತಾನೆ. ಹಲವಾರು ರೈತರ ಕೆಲಸಗಳನ್ನು ತಯಾರಿಸಿಕೊಡುತ್ತಾನೆ. ಇದರಿಂದ ರೈತರು ಲಕ್ಷ್ಮಣನಿಗೆ ಆಯ ಕೊಡಲು ಆರಂಭಿಸುತ್ತಾರೆ. ಕುಶಲಕರ್ಮಗಾರಿಕೆ ಲಕ್ಷ್ಮಣನ ಬದುಕಿಗೆ ಆಧಾರವಾಗುತ್ತದೆ. ೧೯೧೦ರ ಅವಧಿಯಲ್ಲಿ ಬಸಪ್ಪ, ಲಕ್ಕಪ್ಪ, ಸಿದ್ದಪ್ಪ ಮತ್ತು

ಹನಮಂತ ಎಂಬ ನಾಲ್ಕು ಜನ ಗಂಡು ಮಕ್ಕಳು ಜನಿಸುತ್ತಾರೆ. ಬಸಪ್ಪ, ಲಕ್ಕಪ್ಪ ಮತ್ತು ಸಿದ್ದಪ್ಪ ತಂದೆಯಂತೆ ಕುಶಲಕರ್ಮಿಗಳಾಗುತ್ತಾರೆ. ಹನಮಂತ ಕೂಲಿ ಕೆಲಸಕ್ಕೆ ತೊಡಗುತ್ತಾನೆ.

ಲಕ್ಷ್ಮಣನ ನಂತರದಲ್ಲಿ ಹೆಚ್ಚು ಕುಶಲಕರ್ಮಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳಲ್ಲಿ ಲಕ್ಕಪ್ಪ ಒಬ್ಬನು. ಲಕ್ಕಪ್ಪ ಸ್ವಾತಂತ್ರ್ಯ ಪೂರ್ವದ ಕುಶಲಕರ್ಮಿ. ತಂದೆಯ ಪ್ರಭಾವದಿಂದಾಗಿ ಚಿಕ್ಕಂದಿನಿಂದಲೂ ಕುಶಲಕಲೆಯನ್ನು ಕಲಿತುಕೊಳ್ಳುತ್ತಾನೆ. ಕಟ್ಟುಮಸ್ತು ದೇಹದ ಲಕ್ಕಪ್ಪ ಸುಮಾರು ೯೦ ವರ್ಷಗಳ ಕಾಲ ಬದುಕಿದ್ದವನು. ೬೦-೭೦ ವರ್ಷಗಳ ಕಾಲ ಕುಶಲಕರ್ಮಗಾರಿಕೆಯಲ್ಲಿ ತನ್ನ ಜೀವನ ಸವೆಸಿದವನು. ಬಡಿಗತನ ಕಸಬನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡವ ನಾಗಿದ್ದನು. ಹಂದಿಗುಂದ ಮತ್ತು ಅದರ ಸುತ್ತಲಿರುವ ಹಳ್ಳಿಗಳಿಗೂ ತೆರಳಿ ಮನೆ-ಮಹಡಿ, ಗುಡಿ-ಗುಂಡಾರ, ಕೃಷಿಯೋಪಕರಣಗಳನ್ನು ತಯಾರಿಸಿಕೊಡುತ್ತಿದ್ದನು. ಲಕ್ಕಪ್ಪನು ಅಪಾರ ಸಂಖ್ಯೆಯಲ್ಲಿ ರೈತರ ಸ್ನೇಹವನ್ನು ಹೊಂದಿದ್ದನು. ಲಕ್ಕಪ್ಪನ ಮಡದಿ ಫಕೀರವ್ವ ಸಾಧ್ವಿ ಶಿರೋಮಣಿ. ಲಕ್ಕಪ್ಪನ ಬಡಿಗತನದ ಬದುಕಿಗೆ ಸಹಾಯಕಳಾಗಿದ್ದಳು. ಲಕ್ಕಪ್ಪನಿಗೆ ೧೦ ಜನ ಮಕ್ಕಳು. ಏಳು ಗಂಡು, ಮೂರು ಹೆಣ್ಣು ಮಕ್ಕಳಿಗೆ ಕುಶಲಕರ್ಮಗಾರಿಕೆ ಜೀವನಾಧಾರವಾಗಿತ್ತು. ಲಕ್ಷ್ಮಣ, ಯಮನಪ್ಪ, ಮಾರುತಿ, ಮಹಾದೇವ ದಶರಥ, ತುಕಾರಾಮ, ಅರ್ಜುನ ಇವರು ಗಂಡು ಮಕ್ಕಳು. ಮಲ್ಲವ್ವ, ಚಂದ್ರವ್ವ, ಸುಶೀಲವ್ವ ಇವರು ಮೂರು ಜನ ಹೆಣ್ಣು ಮಕ್ಕಳು.

ಲಕ್ಕಪ್ಪನ ೭ ಜನ ಗಂಡು ಮಕ್ಕಳಲ್ಲಿ ಲಕ್ಷ್ಮಣ(ತಂದೆಯ ಹೆಸರನ್ನು ಲಕ್ಕಪ್ಪ ಮೊದಲ ಮಗನಿಗೆ ನಾಮಕರಣಗೊಳಿಸಿದ್ದಾನೆ) ಮಾರುತಿ, ದಶರಥ ಮತ್ತು ಅರ್ಜುನ ಇವರು ಕುಶಲಕರ್ಮಿ ಗಳಾಗಿದ್ದಾರೆ. ಯಮನಪ್ಪ, ಮಹಾದೇವ ಮತ್ತು ತುಕಾರಾಮ ಇವರು ಕೂಲಿಕೆಲಸದಲ್ಲಿ ತೊಡಗುತ್ತಾರೆ. ಲಕ್ಕಪ್ಪನ ಹಿರಿಯ ಮಗ ಲಕ್ಷ್ಮಣ ೧೯೪೦ರ ಅವಧಿಯಲ್ಲಿ ಜನಿಸಿದ್ದಾನೆ. ಈಗ ಈತನಿಗೆ ೭೬ ವರ್ಷಗಳು. ಈಗಲೂ ಕುಶಲಕರ್ಮಗಾರಿಕೆಯನ್ನು ಹಂದಿಗುಂದದಲ್ಲಿ ಮುಂದುವರೆಸಿದ್ದಾನೆ. ಹೊಸಾಲಿ ಕುಟುಂಬದ ಮೂರನೆ ತಲೆಮಾರಿನ ಕುಶಲಕರ್ಮಿ ಕೇವಲ ೩ನೇ ತರಗತಿ ಓದಿದ್ದಾನೆ. ಲೆಕ್ಕ-ಪತ್ರದಲ್ಲಿ ಚುರುಕು. ಮಾತಿನಲಿ, ಕಸಬಿನಲಿ, ಹಸನನಾದ ಲಕ್ಷ್ಮಣ ತಲೆ ತಲಾಂತರದ ಕುಶಲಕರ್ಮಗಾರಿಕೆ ಕಸಬನ್ನು ನಿರಂತರವಾಗಿ ಮುಂದುವರೆಸಿಕೊಂಡಿ ದ್ದಾನೆ. ೬೦ ವರ್ಷಗಳಿಂದ ಬಡಿಗತನ ಕಸಬನ್ನು ನಿರ್ವಸುತ್ತಿರುವ ಲಕ್ಷ್ಮಣನಿಗೆ ಕುಶಲಕರ್ಮ ಗಾರಿಕೆಯು ಕುಟುಂಬ ನಿರ್ವಹಣೆಗೆ ಮೂಲ ಆಧಾರವಾಗಿದೆ. ಲಕ್ಷ್ಮಣನು ಕಾಯಕದಲ್ಲಿ ಶ್ರದ್ಧೆ-ಭಕ್ತಿ ಇಟ್ಟು ಕೊಂಡಿದ್ದಾನೆ. ಇಂದಿಗೂ ಲಕ್ಷ್ಮಣನು ಮಾಂಸಾಹಾರಿ ಕುಟುಂಬದಲ್ಲಿ ಜನಿಸಿದ್ದರೂ ಕಸಬಿನ ಪ್ರಭಾವದಿಂದಾಗಿ ಶಾಖಾಹಾರಿಯಾಗಿರುವುದು ಲಕ್ಷ್ಮಣನ ಶುದ್ಧ ಕಾಯಕ ನಿಷ್ಠೆಯನ್ನು ತೋರಿಸುತ್ತದೆ. ಕುಶಲಕರ್ಮಗಾರಿಕೆಯಿಂದ ತಾನು ಸಂತೃಪ್ತ ಜೀವನ ಕಂಡಿದ್ದೇನೆಂದು ಲಕ್ಷ್ಮಣ ಹೇಳುತ್ತ, "ಮನಿಯೊಳಗ ತಾನಾಗ್ಯೆ ಬಂದ ಬೀಳತೈತಿ, ನನಗೇನ ಕೊರತಿ ಆಗಿಲ್ಲ" ಎಂಬ

ಮಾತು ಕೇಳಿದಾಗ ಬಡಿಗತನ ಕಸಬು ಬಡತನದ ಚಿತ್ರಣವನ್ನು ಬದಲಿಸುವ ಶಕ್ತಿ ಪಡೆದಿದೆ ಎಂದೆನಿಸುತ್ತದೆ. ಲಕ್ಷ್ಮಣನ ಹೆಂಡತಿ ಲಕ್ಷ್ಮೀಬಾಯಿ ಸರಳ ಜೀವಿ. ಆಧ್ಯಾತ್ಮಜೀವಿ, ನಿಜಗುಣ ಶಿವಯೋಗಿ ಕೈವಲ್ಯ ಪದಗಳ ಹಾಡುವ ಭಜನಾ ಕಲಾವಿದನಿಗೆ ಒಳ್ಳೆಯ ಜೊತೆಗಾರ್ತಿ. ಹುಣ್ಣಿಮೆ ಅಮವಾಸ್ಯೆ ದಿನಗಳಂದು ಕಡಲೆಬೆಳೆ-ಬೆಲ್ಲದ ಸಿಹಿ ಅಡುಗೆ ಮಾಡಿ ಉಳಿ-ಬಾಚಿ-ಕೊಡತಿ-ಸುತ್ತಿಗೆ ಉಪಕರಣಗಳಿಗೆ ನೈವೇದ್ಯ ಮಾಡುವ ರೂಢಿಯನ್ನು ಬೆಳೆಸಿಕೊಂಡು ಬಂದಿದ್ದಾಳೆ. ಅನುಕೂಲ ವಾದಾಗಲೆಲ್ಲ ಲಕ್ಷ್ಮಣ-ಲಕ್ಷ್ಮೀಬಾಯಿ ಶಿರಸಂಗಿ ಕಾಳಮ್ಮನ ಜಾತ್ರೆಗೆ ಹೋಗಿ, ದೇವಿ ದರ್ಶನ ಪಡೆದುಕೊಳ್ಳುತ್ತಾರೆ. ಲಕ್ಷ್ಮಣ ಕೆಳವರ್ಗದ ಕುಶಲಕರ್ಮಿಯಾಗಿರುವುದರಿಂದ ತನ್ನದೇ ಆದ ತತ್ವ ನಿಷ್ಠೆ ಹೊಂದಿದವನಾಗಿದ್ದಾನೆ. ಮೇಲ್ವರ್ಗದವರ ಮನೆಯ ಕೆಲಸಕ್ಕೆ ತೆರಳಿದರೆ ಮನೆಯ ತುಂಬಾ ಓಡಾಡಿ ಕೆಲಸ ಮಾಡುವ ಲಕ್ಷ್ಮಣ, ದೇವರ ಕೋಣೆಗೆ ಹೋಗುವುದಿಲ್ಲ. ಇದು ತಾನು ತಾನಾಗಿಯೇ ನಿರ್ಬಂಧಿಸಿಕೊಂಡಿರುವ ನಿಯಮ.

ಲಕ್ಷ್ಮಣ ಮತ್ತು ಲಕ್ಷ್ಮೀಬಾಯಿ ದಂಪತಿಗಳಿಗೆ ೫ ಜನ ಹೆಣ್ಣು ಮತ್ತು ೩ ಜನ ಗಂಡು ಮಕ್ಕಳು. ಬೊರಕ್ಕ, ಗಂಗವ್ವ, ಮಹಾದೇವಿ, ಸರಸೋತಿ(ಸರಸ್ವತಿ), ಶ್ರೀದೇವಿ ಮತ್ತು ರಾಮಚಂದ್ರ, ಲಕ್ಕಪ್ಪ(ಲಕ್ಷ್ಮಣನು ಮಗನಿಗೆ ತಂದೆಯ ಹೆಸರನ್ನ ನಾಮಕರಣಗೊಳಿಸಿದ್ದಾನೆ), ಕೊನೆಯವನು ನೆಹರು ರಾಮಚಂದ್ರ ಮತ್ತು ಲಕ್ಕಪ್ಪ ನಿಧನರಾಗಿದ್ದಾರೆ. ಲಕ್ಷ್ಮಣನ ಇಳಿವಯಸ್ಸಿಗೆ ಊರುಗೋಲಾಗಿ ನಿಂತವನು ಕೊನೆಯ ಮಗ. ನೆಹರು ಸ್ವಾತಂತ್ರ್ಯ ಸಂಗ್ರಾಮದ ಗಾಳಿ ಸಂಪೂರ್ಣ ಬಡಿಸಿಕೊಂಡಿದ್ದ ಲಕ್ಷ್ಮಣ ರಾಷ್ಟ್ರೀಯ ನಾಯಕ ಜವಾಹರಲಾಲ ನೆಹರೂರವರ ಹೆಸರನ್ನು ಕೊನೆಯ ಮಗನಿಗೆ ನಾಮಕರಣಗೊಳಿಸಿದ್ದಾನೆ. ಲಕ್ಷ್ಮಣನಿಗೆ ನಿಷ್ಠೆ ಎಂಬುದು ರಕ್ತಗತವಾಗಿತ್ತು. ಈತನು ಕಾಯಕ ನಿಷ್ಠೆ, ರಾಷ್ಟ್ರೀಯ ಪ್ರಜ್ಞೆ, ಆಧ್ಯಾತ್ಮಿಕ ಒಲವು ಸರಳ ಜೀವನವನ್ನು ಮೈಗೂಡಿಸಿಕೊಂಡಿದ್ದ ಅನ್ಯ ಸಮುದಾಯದ ಕುಶಲಕರ್ಮಿಯಾಗಿದ್ದಾನೆ.

ಕುಶಲಕರ್ಮಿ ಹೊಸಾಲಿ ಕುಟುಂಬದ ವಿವರ

೧ನೇ ಲಕ್ಷ್ಮಣ(೧೮೮೦)

ಬಸಪ್ಪ ಲಕ್ಕಪ್ಪ(೧೯೧೦) ಸಿದ್ಧಪ್ಪ ಹನಮಂತ

೨ನೇ ಲಕ್ಷ್ಮಣ(೧೯೪೦) ಯಮನಪ್ಪ, ಮಾರುತಿ, ಮಹಾದೇವ, ದಶರಥ, ತುಕಾರಾಮ,

ಅರ್ಜುನ, ಮಲ್ಲವ್ವ, ಚಂದ್ರವ್ವ, ಸುಶೀಲವ್ವ

ಬೊರಕ್ಕ ಗಂಗವ್ವ ಮಹಾದೇವಿ ಸರಸ್ವತಿ ಶ್ರೀದೇವಿ ರಾಮಚಂದ್ರ ೨ನೇ ಲಕ್ಕಪ್ಪ ನೆಹರು

(ಮದುವೆಯಾಗಿದ್ದಾರೆ) (ನಿಧನ) (ನಿಧನ) (ವಾಹನ ಚಾಲಕ)

ಈಗಿರುವ ಪರಿಸ್ಥಿತಿಯಲ್ಲಿ ಲಕ್ಷ್ಮಣನ ತಲೆಮಾರಿಗೆ ಕುಶಲಕರ್ಮಗಾರಿಕೆ ಕೊನೆಗೊಳ್ಳುತ್ತದೆ ಮೂರು ತಲೆಮಾರಿಗೂ ಜೀವನಕ್ಕೆ ಆಧಾರವಾಗಿದ್ದ ಬಡಿಗತನ ಕಲೆಗಾರಿಕೆ ಲಕ್ಷ್ಮಣನ ಮಕ್ಕಳಲ್ಲಿ ಮುಂದುವರಿಕೆಯ ಲಕ್ಷ್ಮಣಗಳಿಲ್ಲ. ಇಬ್ಬರು ಗಂಡು ಮಕ್ಕಳು ನಿಧನಾ ನಂತರ ಕೊನೆಯ ಮಗ ಕುಶಲಕರ್ಮಿಯಾಗದೇ ವಾಹನ ಚಾಲಕನಾಗಿದ್ದಾನೆ. ಹೀಗಾಗಿ ಹೊಸಾಲಿ ಕುಟುಂಬದಲ್ಲಿ ಮೂರು ತಲೆಮಾರಿನ ಕುಶಲಕರ್ಮಗಾರಿಕೆಯನ್ನು ಗುರುತಿಸಲಾಗಿದೆ.

ಮಾದರ ಕುಶಲಕರ್ಮಿಗಳು ಪ್ರಮುಖವಾಗಿ ಎಲ್ಲಮ್ಮ, ದುರ್ಗಮ್ಮ, ಕರೆಮ್ಮ, ಲಕ್ಕವ್ವ ಪರಮೇಶ್ವರ–ಪಾರ್ವತಿ, ಇಂದ್ರ–ಕುಬೇರ ಮುಂತಾದ ದೇವತೆಗಳ ಆರಾಧಕರಾಗಿದ್ದಾರೆ. ಈ ದೇವರ ಫೋಟೋಗಳು ಮಾದರ ಸಮುದಾಯದ ಕುಶಲಕರ್ಮಿಗಳಲ್ಲಿದ್ದುದು ಕಂಡುಬರುತ್ತವೆ. ಇದರ ಜೊತೆಯಲ್ಲಿ ಬಡಿಗತನ ವೃತ್ತಿ ಮಾಡುತ್ತಿರುವ ಕಾರಣದಿಂದ ಕುಶಲಕರ್ಮಿಗಳು ಶಿರಸಂಗಿ ಕಾಳಮ್ಮನ ಫೋಟೋವನ್ನು ಪೂಜಿಸುತ್ತಾರೆ. ಶರಣರ ಪ್ರಭಾವ ಇವರ ಮೇಲಿರುವುದು. 'ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ' ಎಂಬ ವಚನಕಾರರ ನುಡಿ ನೆರಳಿನಲ್ಲಿ ಬೆಳೆದವರಾಗಿದ್ದಾರೆ. ಇದರಿಂದ ಶಿವಶರಣರಂತೆ ಹಣೆಗೆ ವಿಭೂತಿ ಧರಿಸುತ್ತಾರೆ. ಪಾಂಚಾಳ ಕುಶಲಕರ್ಮಿಗಳ ರೀತಿಯಲ್ಲಿ ಜನಿವಾರ ಧಾರಣೆಯಿಲ್ಲ. ಅಮವಾಸ್ಯೆಯ ದಿನದಂದು ಬಡಿಗತನ ಕಸಬಿನ ಉಪಕರಣಗಳೆಲ್ಲವನ್ನು ಸ್ವಚ್ಛಗೊಳಿಸಿ, ಹೂ–ಪತ್ರಿಯಿಂದ ಅಲಂಕರಿಸಿ ಪೂಜಿಸುತ್ತಾರೆ. ಪೂಜೆ ದಲಿತರಿಗೆ ನಿಷಿದ್ಧವೆಂದು ಮೇಲ್ವರ್ಗದವರ ಕಟ್ಟಳೆಗಳನ್ನು ಮೀರಿದ್ದಾರೆ. ಆಧುನಿಕ ಭಾರತದ ಪ್ರಜೆಗಳಾಗಿ ಮಾದರರು ತಮ್ಮ ವೃತ್ತಿಯ ಉಪಕರಣಗಳನ್ನು ಭಕ್ತಿ–ಗೌರವದಿಂದ ಪೂಜಿಸುವ ರೂಢಿಯನ್ನು ಬೆಳೆಸಿಕೊಂಡಿದ್ದಾರೆ. ಇತ್ತೀಚೆಗೆ ಶಿರಸಂಗಿ ಕಾಳಮ್ಮ ತನ್ನೆಲ್ಲ ಕುಶಲಕರ್ಮಿ ಬಂಧುಗಳನ್ನೆಲ್ಲ ತನ್ನ ಭಕ್ತಿಯ ತೆಕ್ಕೆಗೆ ಸ್ವೀಕರಿಸಿಕೊಳ್ಳುತ್ತಿದ್ದಾಳೆ ಎಂದು ಹೇಳುವ ಭಕ್ತರ ಮಾತಿನಂತೆ, ಮಾದರರು ಶಿರಸಂಗಿ ಕಾಳಮ್ಮನ ಜಾತ್ರೆಯಲ್ಲಿ ಭಾಗವಹಿಸಿ ಭಕ್ತಿ ಸಮರ್ಪಿಸುತ್ತಿರುವುದು ಕಂಡುಬರುತ್ತಿದೆ. ಊರ ದ್ಯಾಮವ್ವನ ಜಾತ್ರೆಗೆ ಇಂದಿಗೂ ತಮ್ಮ ಅಳಿಲು ಸೇವೆಯನ್ನು ಮಾದರ ಕುಶಲಕರ್ಮಿಗಳು ಅರ್ಪಿಸುತ್ತಿದ್ದಾರೆ. ಈ ಕುಶಲಕರ್ಮಿ ಕುಟುಂಬದ ಮಹಿಳೆಯರು ಎಲ್ಲಮ್ಮನಷ್ಟೇ ಕಾಳಮ್ಮನಿಗೂ ಭಕ್ತಿ–ಗೌರವ ಸಲ್ಲಿಸುತ್ತಾರೆ.

ಮರಾಠಾ ಮತ್ತು ಇತರೆ ಕುಶಲಕರ್ಮಿಗಳು

ಶಿರಸಂಗಿ ಪರಿಸರದ ಕುಶಲಕರ್ಮಿಗಳನ್ನು ಅಧ್ಯಯನಿಸುವಾಗ ಮಹಾರಾಷ್ಟ್ರದಿಂದ ದುಡಿಮೆಗಾಗಿ ಕರ್ನಾಟಕಕ್ಕೆ ವಲಸೆಗಾರರಾಗಿ ಬಂದ ಕುಶಲಕರ್ಮಿಗಳನ್ನು ಕಾಣುತ್ತೇವೆ. "ಉದರ ನಿಮಿತ್ತಂ ಬಹುಕೃತ ವೇಷಂ" ಎಂಬಂತೆ ಹೊಟ್ಟೆಪಾಡಿಗಾಗಿ ರಾಜ್ಯ ಹೊರ ರಾಜ್ಯಗಳಲ್ಲಿ ಕುಶಲಕರ್ಮಿಗಳು ಕುಟುಂಬ ಸಮೇತ ದುಡಿಯಲು ಸಿದ್ಧರಾಗಿರಾಗಿರುತ್ತಾರೆ. ಮಕ್ಕಳ ಶೈಕ್ಷಣಿಕ

ಬೆಳವಣಿಗೆಯನ್ನೂ ಲೆಕ್ಕಿಸದೇ ಮಹಾರಾಷ್ಟ್ರದ ಹಲವಾರು ಕುಶಲಕರ್ಮಿ ಕುಟುಂಬಗಳು ಕರ್ನಾಟಕದ ಉತ್ತರ ಭಾಗದಲ್ಲಿ ಬಂದಿರುವುದನ್ನು ಕಾಣುತ್ತೇವೆ. ಮರಾಠಿ ಭಾಷೆಯನ್ನು ಮಾತನಾಡುವ ಕುಶಲಕರ್ಮಿಗಳನ್ನು ಮರಾಠಾ ಕುಶಲಕರ್ಮಿಗಳೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಇವರು ಕರ್ನಾಟಕದ ಗಡಿಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ವ್ಯವಹಾರಿಕ ದೃಷ್ಟಿಯಿಂದ ಕನ್ನಡವನ್ನು ಸ್ವಲ್ಪಮಟ್ಟಿಗೆ ಮಾತನಾಡುವುದನ್ನು ಕಲಿತಿದ್ದಾರೆ. ಕೆಲವು ಮರಾಠ ಕುಶಲಕಕರ್ಮಿಗಳು ಕಾಯಮಾಗಿ ಕರ್ನಾಟಕದಲ್ಲಿ ಕಸಬನ್ನು ಮುಂದುವರೆಸಿದ್ದಾರೆ. ಕೆಲ ಕುಟುಂಬಗಳು ಬೇಸಿಗೆಯ ಅವಧಿಯಲ್ಲಿ ಕರ್ನಾಟಕಕ್ಕೆ ಬಂದು ದುಡಿಯುತ್ತಾರೆ. ಮತ್ತೇ ಮಳೆಗಾಲ, ಚಳಿಗಾಲದಲ್ಲಿ ಮಹಾರಾಷ್ಟ್ರದಲ್ಲಿ ಉಳಿದುಕೊಳ್ಳುತ್ತಾರೆ. ಇಂತಹ ಕುಟುಂಬಗಳಲ್ಲಿ ಮರಾಠಾ ಕುಶಲಕರ್ಮಿ ಜಾಧವರಾವ್ ಚವ್ಹಾಣ ಒಬ್ಬರು.

ಚವ್ಹಾಣ ಅವರ ವಯಸ್ಸು ೫೬. ಮೂಲತಃ ಮಹಾರಾಷ್ಟ್ರದ ಕೊಲ್ಲಾಪೂರದವರು. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯರ ಸಹಾಯದಿಂದ ಸ್ಥಳಾವಕಾಶ ಪಡೆದುಕೊಂಡು ಕಂಬಾರಿಕೆ ವೃತ್ತಿಯನ್ನು ೩೦ ವರ್ಷಗಳಿಂದ ಮುಂದುವರೆಸಿಕೊಂಡು ಬಂದಿದ್ದಾನೆ. ಕಬ್ಬಿಣದ ಎಲ್ಲ ಬಗೆಯ ಕೃಷಿಯೋಪಕರಣಗಳನ್ನು ತಯಾರಿಸುತ್ತಾನೆ. ಚವ್ಹಾಣ ಕುಶಲಕರ್ಮಿಯು ಮೃಧು-ಮಿತ ಮಾತುಗಾರ. ಕಸಬಿನಲ್ಲಿ ಶ್ರದ್ಧೆ-ನಿಷ್ಠೆಯಿದೆ. ತಿದಿ ಜಗ್ಗುವುದಕ್ಕಾಗಿ ಪತ್ನಿಯ ಸಹಾಯ ಪಡೆಯುತ್ತಾನೆ. ಕೆಲವೊಮ್ಮೆ ತಿದಿ ಜಗ್ಗುವುದರ ಜೊತೆಗೆ ಕಾಯ್ದ ಕಬ್ಬಿಣ ಬಡಿಯಲು ಚವ್ಹಾಣನ ಪತ್ನಿ ಮುಂದಾಗಿರುವುದನ್ನು ನಾನು ಮಣ್ಣಿಕೇರಿ ಗ್ರಾಮದಲ್ಲಿ ಕಂಡಿದ್ದೇನೆ. ಈತನಿಗೆ 'ನಿರ್ದಿಷ್ಟ ಕಂಬಾರ ಸಾಲಿ' ಎಂಬುದು ಇಲ್ಲ. ಅನುಕೂಲವಾದ ಬಯಲು ಸ್ಥಳದಲ್ಲಿ ಕಮ್ಮಟ ನಿರ್ಮಿಸುತ್ತಾನೆ. ಇಂಥವರನ್ನು ಮರಾಠಾ ಕುಶಲಕರ್ಮಿಗಳೆಂದು, ಬಯಲು ಕಂಬಾರರೆಂದು ಕರೆಯಲಾಗುತ್ತದೆ.

ಮರಾಠಾ ಮತ್ತು ಬಯಲು ಕಂಬಾರ ವರ್ಗಕ್ಕೆ ಸೇರಿದ ಅನ್ಯ ಸಮುದಾಯದ ಕುಶಲ ಕರ್ಮಿಗಳು ಮಾಂಸಾಹಾರಿಗಳಾಗಿದ್ದಾರೆ. ಮಂಗಳವಾರ, ಶುಕ್ರವಾರ-ಹುಣ್ಣಿಮೆ ಅಮವಾಸ್ಯೆ ದಿನಗಳಂದು ಮಾಂಸವನ್ನು ಬಳಸುವುದಿಲ್ಲ. ಇಂತಹ ಕುಟುಂಬ ವರ್ಗಗಳಲ್ಲಿ ಹನುಮಂತ, ಅರ್ಜುನ ಪವಾರ ಕುಟುಂಬವೂ ಒಂದು. ಈತನು ಮೂಲತಃ ಮಹಾರಾಷ್ಟ್ರದವನಾಗಿದ್ದರೂ ನೂರಾರು ವರ್ಷಗಳ ಹಿಂದೆ ಪವಾರ ಕುಟುಂಬ ಬಾಗಲಕೋಟ ಜಿಲ್ಲೆಯ ಕಲಾದಗಿಯಲ್ಲಿ ವಾಸವಾಗಿದೆ. ಹನಮಂತ ಅರ್ಜುನ ಪವಾರ ಕುಶಲಕರ್ಮಿಯ ವಯಸ್ಸು ೫೮. ಜಾತಿ-ರಜಪೂತ, ಇವರನ್ನು ಇಸಾಡಿ ಕಂಬಾರರೆಂದು ಕರೆಯಲಾಗುತ್ತದೆ. ಇಸಾ ಅಂದರೆ ಕೆಟ್ಟ, ಹೊಲಸು, ಕೊಳಚೆ ಎಂದರ್ಥ. ಅಡಿ-ಪಕ್ಕದಲ್ಲಿ ಅಂದರೆ ಹೊಲಸು ಅಥವಾ ಕೊಳಚೆ ಪ್ರದೇಶದಲ್ಲಿದ್ದುಕೊಂಡು ಕಂಬಾರಿಕೆ ಕಸಬನ್ನು ನಿರ್ವಹಿಸುವವರನ್ನು ಇಸಾಡಿ ಕಂಬಾರನೆಂದು

ತಿಳಿಯಲಾಗುತ್ತದೆ. ಕಂಬಾರಿಕೆ ವೃತ್ತಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸುತ್ತಾನೆ. ಈತನಲ್ಲಿ ಕಬ್ಬಿಣ ಕಾಯಿಸಲು ತಿದಿ ಇಲ್ಲ. ಅದರ ಬದಲಾಗಿ ಚಕ್ರ ಅಥವಾ ಪಂಕಾ ಇದೆ. ಈತನ ಪತ್ನಿ ಮಂಜುಳಾ ಚಕ್ರ ಅಥವಾ ಪಂಕಾ ತಿರುಗಿಸಿ ಕಬ್ಬಿನ ಕಾಯಿಸುತ್ತಾಳೆ. ಕಾಯ್ದ ಕಬ್ಬಿಣವನ್ನು ಹನಮಂತನ ಹೆಂಡತಿಯೇ ಘನ್ ಅಥವಾ ದೊಡ್ಡ ಸುತ್ತಿಗೆಯಿಂದ ಜಡಿಯುತ್ತಾಳೆ. ಕುರುಪಿ, ಕುಡಗೋಲು, ಕೊಡಲಿ, ಗುದ್ದಲಿ, ಸನಿಕೆ, ಹಾರೆ ಬಾಯ ಹೆಣೆಯುವುದು ಅಂದರೆ ಹರಿತಗೊಳಿಸುವ ಕೆಲಸವನ್ನು ಹೆಚ್ಚಾಗಿ ನಿರ್ವಹಿಸುತ್ತಾನೆ.

ಮರಾಠಾ ಕುಶಲಕರ್ಮಿಗಳಂತೆ ಇತರೆ ಜಾತಿ ಉಪಜಾತಿಗೆ ಸೇರಿದ ಕುಟುಂಬಗಳು ಕುಶಲಕಲೆಯನ್ನು ಮುಂದುವರೆಸಿಕೊಂಡಿವೆ. ಬಾಗಲಕೋಟ ಜಿಲ್ಲೆಯ ರಬಕವಿ ಪಟ್ಟಣದಲ್ಲಿ ಕಾಡಾಪೂರ ಕುಟುಂಬದವರು ಬಡಿಗತನ ಕಸಬನ್ನು ನಿರ್ವಹಿಸುವ ಕುಶಲಕರ್ಮಿಗಳಾಗಿದ್ದಾರೆ. ಇವರು ಉಪ್ಪಾರ ಜಾತಿಯವರಾಗಿದ್ದಾರೆ. ಇವರಂತೆ ಹಾಲಕ್ಕಿಯವರು ನಾಡವರರು, ಅಗೇರರು, ನಾಮಧಾರಿಗಳು, ಗುಡಿಗಾರರು, ಕೊಮಾರ ಪಂಥರು, ಕೊಂಕಣರು, ಗ್ರಾಮೊಕ್ಕಲಿಗರು, ಕರಿಒಕ್ಕಲಿಗರು, ಗೌಳಿಗಳು, ಸಿದ್ಧಿಗಳು, ಮಲಬಾರಿಗಳು, ಗಿರಿಜನರು, ಕುಣಬಿ, ಹರಕಂತರು ಮುಂತಾದ ಸಮುದಾಯದವರು ಉತ್ತರ ಕನ್ನಡ ಜಿಲ್ಲೆಯಲ್ಲೂ ಕುಶಲಕರ್ಮಿಗಳಾಗಿದ್ದಾರೆಂದು ಸಂಶೋಧಕ ಆರ್.ಜಿ.ಶ್ಯಾನಭಾಗ ಹೇಳಿದ್ದಾರೆ.

ಮರಾಠಾ ಮತ್ತು ಇತರೆ ಸಮುದಾಯದ ಕುಶಲಕರ್ಮಿಗಳು ಪಾಂಚಾಳ ವೃತ್ತಿ ಕಲೆಯನ್ನು ಜೀವನೋಪಾಯಕ್ಕಾಗಿ ಬಳಸುತ್ತಿದ್ದಾರೆ. ಪಾಂಚಾಳರ ಸ್ನೇಹ ಸಲಿಗೆಯಿಂದಾಗಿ, ಪೂರ್ವಿಕರು ನಿರ್ವಹಿಸುತ್ತಿದ್ದ ಕುಶಲಕರ್ಮಗಾರಿಕೆಯನ್ನು ಅನ್ಯ ಸಮುದಾಯದ ಕುಶಲಕರ್ಮಿಗಳು ಒಂದು ಕಸಬನ್ನಾಗಿ ಸ್ವೀಕರಿಸಿ ಮುಂದುವರೆಸಿದ್ದಾರೆ.

ಪಾಂಚಳೇತರ ಕುಶಲಕರ್ಮಿಗಳಲ್ಲಿಯೂ ಕಸಬಿನ ಕುರಿತು ಪ್ರೀತಿ–ಅಭಿಮಾನ; ಶ್ರದ್ಧೆ–ಭಕ್ತಿಗಳಿವೆ. ಹುಣ್ಣಿಮೆ–ಅಮವಾಸ್ಯೆ ದಿನಗಳಲ್ಲಿ ಕೆಲಸ ನಿರ್ವಹಿಸುವುದಿಲ್ಲ ಗ್ರಾಮೀಣ ಪ್ರದೇಶಗಳಲ್ಲಿ 'ಮಳೆ–ಬೆಳೆ'ಗಾಗಿ 'ವಾರ' ಹಿಡಿಯುವ ಪದ್ಧತಿಯಿದೆ. ಮಂಗಳವಾರ ಅಥವಾ ಶುಕ್ರವಾರ ತಿಂಗಳ ಐದು ವಿಶೇಷ ವಾರಗಳಲ್ಲಿ ಪಾಂಚಾಳರಂತೆ ಅನ್ಯರು ಕಾರ್ಯ ನಿರ್ವಹಿಸುವುದಿಲ್ಲ. ಗ್ರಾಮ ದೇವತೆಯರಾದ ಲಕ್ಷ್ಮೀ–ದ್ಯಾಮವ್ವ, ಶಿರಸಂಗಿ ಕಾಳಮ್ಮನ ಜಾತ್ರೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಹರಕೆಗಳನ್ನು ತೀರಿಸುತ್ತಾರೆ. ಮರಾಠಾ ಮತ್ತು ಇತರೆ ಅನ್ಯಕುಶಲಕರ್ಮಿಗಳು ಕೊಲ್ಲಾಪುರ ಮಹಾಲಕ್ಷ್ಮೀ, ತುಳಜಾಪೂರ ಅಂಬಾಭವಾನಿ, ಗುಡ್ಡಾಪೂರ ದಾನಮ್ಮ, ಸವದತ್ತಿ ಎಲ್ಲಮ್ಮ, ಬ್ರಹ್ಮ, ವಿಷ್ಣು, ಮಹೇಶ್ವರ, ಭಗೀರಥ ದೇವತೆಗಳನ್ನು ಪೂಜಿಸುತ್ತಾರೆ. ಈ ಎಲ್ಲ ದೇವತೆಗಳೊಂದಿಗೆ ಕಸಬಿಗೆ ಪೂರಕವಾಗಿ ಶಿರಸಂಗಿ ಕಾಳಮ್ಮನನ್ನು ಅನ್ಯ ಸಮುದಾಯದ ಕುಶಲಕರ್ಮಿಗಳು ಪೂಜಿಸಿ ಆರಾಧಿಸುತ್ತಾರೆ.

೨. ಮುಸ್ಲಿಂ ಕುಶಲಕರ್ಮಿ ವರ್ಗ: ಭಾರತವು ಜಾತಿ ವ್ಯವಸ್ಥೆಯಿಂದಾಗಿ ಮೇಲ್ವರ್ಗ-ಕೆಳವರ್ಗಗಳೆಂಬ ತಾರತಮ್ಯತೆಯನ್ನು ಎದುರಿಸುತ್ತಿದ್ದ ಕಾಲ. ಜಾತಿ ಪದ್ಧತಿಯ ತತ್ವಗಳನ್ನು ಮೀರಿ ಬದುಕುವ ಜನಸಮೂಹ ಹುಟ್ಟುವಿಕೆಯ ಸಂದರ್ಭ ಆಗಲೇ ಓರಿಸ್ಸಾದಿಂದ ಖಜುಹಾರೋ ವರೆಗಿನ ದೇವಾಲಯಗಳೆಲ್ಲಲ್ಲ ಸ್ತ್ರೀ-ಪುರುಷರ ಸಂಭೋಗದ ಶಿಲ್ಪಗಳು ನಿರ್ಮಾಣ ವಾಗಿದ್ದವು. ಭಾರತದಲ್ಲಿ ಸಾಮಾಜಿಕ ವ್ಯವಸ್ಥೆ, ನೀತಿ-ನಿಯಮಗಳನ್ನು ಕೆಲವರು ಧಿಕ್ಕರಿಸಿದ್ದರು. ಇಂತಹ ಸಂದರ್ಭದಲ್ಲಿ ಭಾರತಕ್ಕೆ ಇಸ್ಲಾಮೀಯರು ಪ್ರವೇಶಿಸಿದರು. ಭಾರತ ಈ ಸಂದರ್ಭದಲ್ಲಿ ಒಂದು ಬದಲಾವಣೆಯನ್ನು ಬಯಸುತ್ತಿತ್ತು. ಇಸ್ಲಾಂ ಧರ್ಮವು ತನ್ನದಲ್ಲದ ರೀತಿಯಲ್ಲಿ ಭಾರತೀಯರಿಗೆ ಹೊಸತನ್ನು ನೀಡಿತು. ಇಸ್ಲಾಂ ಧರ್ಮವು ತನ್ನ ಅಸಂಪ್ರದಾಯಿಕ ನಂಬಿಕೆ ಮತ್ತು ಉದಾರವಾದಿತ್ವದಿಂದಾಗಿ 'ಸೂಫಿ' ತತ್ವವನ್ನು ಬೆಳಸುತ್ತಿತ್ತು. ಇದೇ ಸಂದರ್ಭವನ್ನು ಇಸ್ಲಾಂ ಧರ್ಮವು ಬಳಸಿಕೊಂಡು ಭಾರತೀಯರೊಂದಿಗೆ ಸ್ನೇಹ-ಸೌಹಾರ್ದತೆಯನ್ನು ಬೆಳೆಸಿಕೊಂಡಿತು. ಸೂಫಿ ತತ್ವವನ್ನು ಅನೇಕ ಭಾರತೀಯರು ಸ್ವೀಕರಿಸಿದರು. "ಭಾರತದಲ್ಲಿ ಇಸ್ಲಾಂ ಪ್ರಮುಖ ಪ್ರಭಾವಗಳೆಂದರೆ, ಇಸ್ಲಾಂನ ಸೂಫಿ ಸಂತರು ಹಿಂದೂ ಜನಸಮೂಹಗ ಳೊಂದಿಗೆ ಸಾಧಿಸಿದ ಸ್ನೇಹ" ಮುಸ್ಲಿಂ ಮತ್ತು ಹಿಂದೂಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೂಫಿ ಸಂತರು ಆಕರ್ಷಿಸಿದರು. ಭಾರತದ ಕೆಲವರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು. ಇಸ್ಲಾಂರು ಭಾರತದ ಹಿಂದು ಆಚಾರ-ವಿಚಾರ, ವ್ಯವಹಾರ, ಸಾಮಾಜಿಕ ನಡವಳಿಕೆ, ಚಿಂತನ-ಮಂಥನ, ಆದರ್ಶ, ಭಾಷೆ, ಸಾಹಿತ್ಯ, ಕಲೆಗಳ ಮೇಲೆ ಗಾಢವಾದ ಪ್ರಭಾವ ಬೀರಿದರು. ಇದರಿಂದಾಗಿ ಭಾರತದಲ್ಲಿ ಶಾಶ್ವತವಾಗಿ ಇಸ್ಲಾಂರು ನೆಲೆಯೂರಿ ಭಾರತೀಯರಾಗಲು ಸಾಧ್ಯ ವಾಯಿತು. ಒಂದು ಸಾವಿರಕ್ಕೂ ಹೆಚ್ಚು ವರ್ಷಗಳ ಕಾಲ ಹಿಂದೂಗಳೊಂದಿಗೆ ಜೀವಿಸಿ, ಹಿಂದುಗಳ ಕಲೆ-ಸಾಹಿತ್ಯದಲ್ಲಿ ಸೃಜನಾತ್ಮಕ ಪ್ರತಿಭೆಯಿಂದಾಗಿ ಹೊಸದನ್ನು ಕಲಿತು ಸಾಧಿಸಿದರು. ಕೆಲವೊಂದನ್ನು ಭಾರತಕ್ಕೆ ಪರಿಚಯಿಸಿದರು. "ಲೋಹಗಳಿಗೆ ಹೊಳಪು ನೀಡುತ್ತಿದ್ದ ವಿಧಾನವೇ ಕಲಾಯಿ. ಇದು ಇರಾನ್‌ದಿಂದ ಭಾರತಕ್ಕೆ ಬಂದಿತು." ಇಂದಿಗೂ ಭಾರತದಲ್ಲಿ ಕಲಾಯಿ ಕೆಲಸ ನಿರ್ವಹಿಸುವ ಮುಸ್ಲಿಂ ಕುಟುಂಬಗಳಿಗೆ ಕಲಾಯಿಗಾರ ರೆಂದು ಕರೆಯಲಾಗುತ್ತಿದೆ. ಇಂತಹ ಕುಟುಂಬಗಳು ಕರ್ನಾಟಕದಲ್ಲೂ ಕಸಬನ್ನು ಮುಂದುವರೆಸಿವೆ.

ಲಲಿತ ಕಲೆ-ಸಂಗೀತ, ನೃತ್ಯ-ವಾಸ್ತುಶಿಲ್ಪ ಚಿತ್ರಕಲೆಗಳಿಗೆ ಮುಸ್ಲಿಂರು ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ. ಮುಸ್ಲಿಂರು ಭಾರತಕ್ಕೆ ಹೊಸ ಮಾದರಿಯ ಮತ್ತು ವಿನ್ಯಾಸಗಳನ್ನು ವಾಸ್ತುಶಿಲ್ಪಕ್ಕೆ ನೀಡಿದರು. ಅರೇಬಿಯಾ, ಪರ್ಷಿಯಾ ಮುಂತಾಡೆಗಳಿಂದ ಮುಸ್ಲಿಂರು ಪಡೆದುಕೊಂಡಿದ್ದ ಮಾದರಿ ವಿನ್ಯಾಸಗಳಿಗೆ ಹಿಂದೂಗಳು ವಾಸ್ತುಶಿಲ್ಪಗಳಿಗೆ ಹೊಸ ಸ್ವರೂಪ ನೀಡಿ ಸೃಜನಾತ್ಮಕತೆಯನ್ನು

ತಂದುಕೊಂಡರು. ಹಾಲಿನಲ್ಲಿ ನೀರು ಬೆರೆಸಿದಂತೆ ಹಿಂದೂ-ಮುಸ್ಲಿಂರ ಕಲೆ-ಕಲಾವಿದರು ಒಂದಾದರು. ಕುಶಲಕಲೆ ದೇಶ-ಭಾಷೆ-ಜಾತಿ, ಸ್ಥಳ ಕಾಲವನ್ನು ಮೀರಿ ಬೆಳೆಯಿತು. ಹಿಂದೂ-ಮುಸ್ಲಿಂ ಕುಶಲಕಲೆಗಾರರಲ್ಲಿ ಅಪೂರ್ವವಾದ ಸೌಂದರ್ಯ ಪ್ರಜ್ಞೆ ಮತ್ತು ಭಾವ ಗಾಂಭೀರ್ಯತೆ ಮೈಗೂಡಿಸಿಕೊಂಡಿದ್ದು ಪ್ರಮುಖ ಕಾರಣವಾಗಿರಬೇಕು. ಒಟ್ಟಾಗಿ ಹಿಂದೂ-ಮುಸ್ಲಿಂರಲ್ಲಿ ಕಲೆಗಳ ಕೊಡು-ತೆಗೆದುಕೊಳ್ಳುವಿಕೆ ಉಂಟಾಗಿರುವುದು ಸತ್ಯ. ಇದರ ಪರಿಣಾಮವಾಗಿ ಭಾರತದಲ್ಲಿಯ ಹಲವು ಮುಸ್ಲಿಂ ಕುಟುಂಬಗಳು ಪಾಂಚಾಳರ ಕುಶಲಕಲೆಯನ್ನು ಕಲಿತು ಕೊಂಡಿದ್ದಾರೆ. ಕಂಬಾರಿಕೆ, ಬಡಿಗತನ, ಕಂಚುಗಾರಿಕೆ, ಶಿಲ್ಪ, ಅಕ್ಕಸಾಲಿ ಕಸಬುಗಳಲ್ಲಿ ಕಂಬಾರಿಕೆ-ಬಡಿಗತನ ಕುಶಲಕರ್ಮಗಾರಿಕೆಯು ಕೆಲ ಮುಸ್ಲಿಂ ಕುಟುಂಬಗಳಲ್ಲಿ ಬಳುವಳಿಯಾಗಿ ಬಂದುದನ್ನು ಇಲ್ಲಿ ವಿಶೇಷವಾಗಿ ಗಮನಿಸಲಾಗಿದೆ. ಮುಸ್ಲಿಂರಲ್ಲೂ ತಲೆತಲಾಂತರವಾಗಿ ಬಡಿಗತನ ಕಸಬನ್ನು ಮುಂದುವರೆಸಿದ್ದಾರೆ. ಬಾಗಲಕೋಟ ಜಿಲ್ಲೆಯ, ಮುಧೋಳ ತಾಲೂಕಿನ ಮಾರಾಪೂರ ಗ್ರಾಮದ 'ಮುಲ್ಲಾ' ಎಂಬ ಮುಸ್ಲಿಂ ಕುಟುಂಬದವರು ಕುಶಲಕರ್ಮಗಾರಿಕೆಯಲ್ಲಿ ಮುಂದುವರೆದಿದ್ದಾರೆ. 'ಮುಲ್ಲಾ' ಕುಟುಂಬದ ಕುಶಲಕರ್ಮಿಗಳನ್ನು ಇಲ್ಲಿ ಉಲ್ಲೇಖಿಸುವುದು ಅತ್ಯವಶ್ಯವೆನಿಸುತ್ತದೆ.

ಮುಲ್ಲಾ ಕುಟುಂಬದಲ್ಲಿ ಇಂದಿಗೂ ನಾಲ್ಕು ತಲೆಮಾರಿನ ಕುಶಲಕರ್ಮಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ನಾನು ಅಧ್ಯಯನಿಸಿದ ಮುಲ್ಲಾ ಕುಟುಂಬದ ಪೂರ್ವಜರು ಶತಮಾನಗಳ ಪೂರ್ವದಲ್ಲಿಯೇ ಬಡಿಗತನ ಕಸಬನ್ನು ಪ್ರಾರಂಭಿಸಿದ್ದಾರೆ. ನಾನು ಕಲೆಹಾಕಿದ ಮಾಹಿತಿಯಂತೆ ಮುಲ್ಲಾ ಕುಟುಂಬದ ಬಾಬುಸಾಬ ಇಮಾಮಸಾಬ ಮುಲ್ಲಾ ಹಿರಿಯ ತಲೆಮಾರಿನ ಕುಶಲಕರ್ಮಿಯಾಗಿದ್ದಾನೆ. ಅಂದಾಜು ೧೮೭೫ರ ಅವಧಿಯಲ್ಲಿ ಜನಿಸಿದ್ದ ಬಾಬುಸಾಬ ಯುವಕನಾದ ಮೇಲೆ ದುಡಿದು ಕುಟುಂಬ ನಿರ್ವಹಿಸಲು ಒಂದು ಉದ್ಯೋಗದ ಹುಡುಕಾಟದಲ್ಲಿದ್ದನು. ಕೃಷಿಕನಾಗಲು ಭೂಮಿಯ ಕೊರತೆಯಿತ್ತು. ಇದರಿಂದಾಗಿ ಮದಬಾವಿ ಗ್ರಾಮದ ಪಾಂಚಾಳರ ಸ್ನೇಹ ಪಡೆಯುತ್ತಾನೆ. ಕೆಲವು ವರ್ಷ ಅವರ ಜೊತೆ ಕೆಲಸ ಮಾಡಿ ಅನಂತರದಲ್ಲಿ ಸ್ವತಂತ್ರವಾಗಿ ಬಡಿಗತನ ಕಸಬಿನಲ್ಲಿ ಮುಂದುವರೆಯುತ್ತಾನೆ. ದುಡಿಯಲು ಅವಶ್ಯವಾಗಿರುವ ಕಟ್ಟುಮಸ್ತಾದ ದೇಹ ಹೊಂದಿದ ಬಾಬುಸಾಬ, ತೀಕ್ಷ್ಣ ಬುದ್ಧಿಯುಳ್ಳವನಾಗಿದ್ದನು. ಮದಬಾವಿ ಚಿಕ್ಕ ಗ್ರಾಮ ಗ್ರಾಮದಲ್ಲೆಲ್ಲ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬಾಬುಸಾಬ ಕೃಷಿಯೋಪಕರಣ, ಗೃಹೋಪಕರಣಗಳನ್ನು ತಯಾರಿಸಿಕೊಡಲು ಆರಂಭಿಸುತ್ತಾನೆ. ಗ್ರಾಮದ ಕೆಲ ರೈತರಿಗೆ ಬಾಬುಸಾಬ ಆಯಗಾರನಾಗುತ್ತಾನೆ. ಇದರಿಂದಾಗಿ ಬಾಬುಸಾಬ ಜಾತಿಯಲ್ಲಿ ಮುಸ್ಲಿಂನಾಗಿದ್ದರೂ ಅವನ ಮನೆ ಸಂಸ್ಕೃತಿ-ಸಂಸ್ಕಾರಗಳೆಲ್ಲ ಹಿಂದುಗಳಂತೆ ಮುಂದುವರೆಯುತ್ತವೆ. ಕೃಷಿ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುತ್ತಾನೆ. ಹಳ್ಳಿಗರ ಸಂಪರ್ಕದಿಂದಾಗಿ ಉಡುಗೆ-ತೊಡುಗೆಗಳು ಅಪ್ಪಟ

ದೇಶಿಯರಂತೆ ಧರಿಸುತ್ತಿದ್ದನು. ತಲೆಗೆ ರೇಶ್ಮೆ ಹಳದಿ ಬಣ್ಣದ ಪೇಟಾ(ಪಟಗಾ) ಸುತ್ತುತ್ತಿದ್ದನು. ಕೃಷಿಕರೊಂದಿಗೆ ಕೃಷಿಕನಂತಾದ ಬಾಬುಸಾಬ ಬಡಿಗತನ ಉದ್ಯೋಗವನ್ನು ತನ್ನ ಜೀವನಾಧಾರ ವಾಗಿಸಿಕೊಳ್ಳುತ್ತಾನೆ.

ಕುಶಲಕರ್ಮಗಾರಿಕೆ ಬಾಬುಸಾಬನ ಕುಟುಂಬ ನಿರ್ವಹಣೆಗೆ ಸಹಾಯಕವಾಗಿ ನಿಲ್ಲುತ್ತದೆ. ಬಾಬುಸಾಬ ದಿನಕಳೆದಂತೆಲ್ಲ ಕಸಬಿನಲ್ಲಿ ನೈಪುಣ್ಯತೆ ಸಾಧಿಸುತ್ತಾನೆ. ಪಾಂಚಾಳರಂತೆ ಮನೆಯ ಮುಂದೆ ಅಡ್ಡಿಬಡ್ಡಿ(ಮರದ ತುಂಡು) ಹೂಡುತ್ತಾನೆ. ಅದನ್ನು ಪೂಜಿಸಲು ತೊಡಗುತ್ತಾನೆ. ಮುಸ್ಲಿಂರಲ್ಲಿಯ ಸೂಫಿ ಸಂತರ ಪ್ರಭಾವ ಬಾಬುಸಾಬನ ಮೇಲೆಯೂ ಬೀರಿರಬೇಕು. ಕಬೀರದಾಸರ ದುವಾ(ಕೀರ್ತನೆ) ಮತ್ತು ಶಿಶುನಾಳ ಶರೀಫರ ಕೀರ್ತನೆಗಳ ನೆರಳು ಕಂಡಿರಬೇಕು. ಪಾಂಚಾಳರ ಪಾರಂಪರಿಕ ವಿದ್ಯೆ ಬಾಬುಸಾಬನಿಗೆ ಒಲಿದಿರುವುದು ಹಿಂದೂ-ಮುಸ್ಲಿಂರಲ್ಲಿಯ ಸಾಮರಸ್ಯತೆಯನ್ನು ಎತ್ತಿ ತೋರಿಸುತ್ತದೆ. ಬಾಬುಸಾಬ ಏಕದೇವೋಪಾಸಕನಾಗಿದ್ದರೂ ಹಳ್ಳಿಯ ಜಾತ್ರೆ-ಉತ್ಸವಗಳಲ್ಲಿ ಅವಶ್ಯವಾಗಿಯೋ? ಅನಿವಾರ್ಯ ವಾಗಿಯೋ? ಪಾಲ್ಗೊಳ್ಳಬೇಕಾದುದು ಮುಖ್ಯವೆನಿಸುತ್ತಿತ್ತು.

ಬಾಬುಸಾಬ ಕುಶಲಕರ್ಮಗಾರಿಕೆಯನ್ನು ಮುಂದುವರೆಸಿಕೊಂಡು ಜೀವನ ಸಾಗಿಸುತ್ತಿದ್ದನು. ಈತನಿಗೆ ೧೯೦೫ರ ಅವಧಿಯಲ್ಲಿ ಒಂದು ಗಂಡು ಮಗು ಜನಿಸುತ್ತದೆ. ಮಗುವಿಗೆ ದಾದಿಸಾಬ ಎಂದು ನಾಮಕರಣ ಮಾಡುತ್ತಾನೆ. ಅನಂತರದಲ್ಲಿ ಹಾಜಿಸಾಬ ಮತ್ತು ಬಾಪುಸಾಬ ಜನಿಸುತ್ತಾರೆ. ಹಿರಿಯ ಮಗ ದಾದಿಸಾಬ ತಂದೆಯ ಜೊತೆಗೂಡಿ ಬಡಿಗತನ ಕಸಬನ್ನು ಕಲಿತು ಮುಂದುವರೆಸು ತ್ತಾನೆ. ಈತನಿಗೆ ಕಸಬನ್ನು ಕಲಿಯಲು ಬಾಬುಸಾಬನಿಂದಾಗಿ ಹೆಚ್ಚಿನ ಅನುಕೂಲವಾಗುತ್ತದೆ. ವೃತ್ತಿಯಲ್ಲಿ ಇನ್ನಷ್ಟು ಜ್ಞಾನವನ್ನು ದಾದಿಸಾಬ ಪಡೆಯುತ್ತಾನೆ. ತನ್ನ ಜೊತೆ ಸಹೋದರರಾದ ಹಾಜಿಸಾಬ, ಬಾಪುಸಾಬರನ್ನು ಜೊತೆಗೂಡಿಸಿಕೊಂಡು ಕುಶಲಕರ್ಮಗಾರಿಕೆಯನ್ನು ಮುಂದುವರೆಸು ತ್ತಾನೆ. ರೈತರ ಪ್ರಮಾಣವು ಹೆಚ್ಚುತ್ತದೆ. ಮದಬಾವಿ ಗ್ರಾಮದ ಜನರ ಪ್ರೀತಿ-ಸ್ನೇಹವನ್ನು ಮತ್ತಷ್ಟು ಪ್ರಮಾಣದಲ್ಲಿ ಸಂಪಾದಿಸುತ್ತಾರೆ. ಊರಿನ ಅನೇಕ ಗುಡಿ-ಗುಂಡಾರ, ರೈತರ ಮನೆ ಗಳನ್ನು ಸಹೋದರತ್ರಯರು ನಿರ್ಮಿಸಿಕೊಡುತ್ತಾರೆ. ದಾದಿಸಾಬ ಕುಶಲಕರ್ಮಿಯಾಗಿ ಎಷ್ಟು ಪ್ರಸಿದ್ಧನಾಗಿದ್ದನೋ ಅಷ್ಟೇ ಹಿಂದೂ-ಮುಸ್ಲಿಂರ ಸಾಮರಸ್ಯತೆಯ ಸಂಕೇತವಾಗಿದ್ದನು. ಹಳ್ಳಿಗಳಲ್ಲಿ ಅಂದಿನ ಕಾಲಕ್ಕೆ ಬಯಲಾಟ ಕಲಿಯುವುದು ಸತ್ಸಂಪ್ರದಾಯವಾಗಿತ್ತು. ದಾದಿಸಾಬನು ರಾಮಾಯಣ ಬಯಲಾಟದ ಪಾತ್ರಧಾರಿಯಾಗಿದ್ದನು. ಕೈವಲ್ಯ ಪದ್ಧತಿಯ, ಪದಗಳು, ದಾಸರ ಪದಗಳನ್ನು ಹಾಡುವ ಭಜನಾ ಕಲಾವಿದನಾಗಿ ಎರಡು ಪ್ರಮುಖ ಧರ್ಮಗಳ ಸಾಂಸ್ಕೃತಿಕ ರೂವಾರಿಯಾಗಿ ದಾದಿಸಾಬ ಜೀವನ ಸಾಗಿಸಿದ್ದಾನೆ.

ಬಾಬುಸಾಬನ ಎರಡನೆಯ ಮಗ ಹಾಜಿಸಾಬ ತಂದೆ ಮತ್ತು ಸಹೋದರನ ನೆರವಿನೊಂದಿಗೆ ಬಡಿಗತನ ವೃತ್ತಿಯಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಸರಳ ಮತ್ತು

ಮೃಧು ಸ್ವಭಾವದ ಹಾಜಿಸಾಬ ಹೆಸರಿಗೆ ತಕ್ಕಂತೆ ಹ್ಞಾಂ ಜಿ ಎಂದೆನ್ನುತ ಮಾತಿಗಿಂತ ಕಸಬಿಗೆ ಒಲವು ತೋರಿಸುತ್ತಿದ್ದನು. ರೈತರಿಗೆ ಮತ್ತು ಮನೆಯ ಸಹೋದರರಿಗೂ ಹೆಚ್ಚಿನ ಪ್ರೀತಿ, ಗೌರವ ನೀಡುತ್ತಿದ್ದನು. 'ನನ್ನ ಚಿಂತೆಯೇ ನನಗೆ ಸಾಲದು ಪರರ ಚಿಂತೆ ನನಗೇತಕಯ್ಯಾ' ಎಂಬ ಹಿರಿಯರವಾಣಿಯಂತೆ, ಮತ್ತೊಬ್ಬರ ಗೊಡವೆಗೆ ಹೋಗದೆ ತನ್ನ ಬಗ್ಗೆ ತಾನು ಮಾತ್ರ ಯೋಚಿಸುವ ಶರಣಜೀವಿ ಹಾಜಿಸಾಬನಾಗಿದ್ದನು. ಹಾಜಿಸಾಬನ ಸರಳತೆ-ಮುಗ್ಧತೆ, ಶರಣತ್ವತೆಗಳೇ ತನ್ನ ಗ್ರಾಮ ಮದಬಾವಿಯಿಂದ ಮಾರಾಪೂರ ಗ್ರಾಮಕ್ಕೆ ಕರೆತಂದಿರಬೇಕು. ಹಾಜಿಸಾಬ ಪತ್ನಿ ಮಾಶಾಬಿಯೊಂದಿಗೆ ಮಾರಾಪೂರ ಗ್ರಾಮದಲ್ಲಿ ಕುಶಲಕರ್ಮಿಯಾಗಿ ಮುಂದುವರೆಯುತ್ತಾನೆ. ಹಾಜಿಸಾಬನ ಕುಟುಂಬ(ಇಬ್ಬರು ಸಹೋದರರ ಕುಟುಂಬ ಹೊರತುಪಡಿಸಿ) ಮಾರಾಪೂರಕ್ಕೆ ಸ್ಥಳಾಂತರಗೊಂಡು ನೆಲೆಯೂರಲು ಯಡೋಳ್ಳಿ ಸಾಹುಕಾರರು ಸಹಾಯ ಮಾಡಿದ್ದನ್ನು ಇಂದಿಗೂ ಹಾಜಿಸಾಬನ ಕುಟುಂಬ ಸ್ಮರಿಸುತ್ತದೆ.

ಹಾಜಿಸಾಬಿನಿಗೆ ೫ ಜನ ಗಂಡು ಮಕ್ಕಳು ಜನಿಸುತ್ತಾರೆ. ೧೯೪೦ರಲ್ಲಿ ಹಿರಿಯ ಮಗ ಇಮಾಮಸಾಬ ಅನಂತರದಲ್ಲಿ ೨ನೇ ಬಾಬುಸಾಬ, ಸೈದುಸಾಬ, ಮೌಲಾಸಾಬ ಮತ್ತು ಕೊನೆಯವನು ಹುಸೇನಸಾಬ. ಇಮಾಮಸಾಹೇಬ ಮಾರಾಪೂರದಲ್ಲಿ ವಾಸವಾಗಿದ್ದಾರೆ. ೪ ಜನ ಸಹೋದರರು ಮದಬಾವಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಹಾಜಿಸಾಬನ ೫ ಜನ ಮಕ್ಕಳು ಬಡಿಗತನ ಉದ್ಯೋಗದಲ್ಲಿ ಮುಂದುವರೆಯುತ್ತಾರೆ. ತಂದೆ-ತಾತನಿಂದ ಬಳುವಳಿಯಾಗಿ ಬಂದ ಕುಶಲಕರ್ಮ ಗಾರಿಕೆಯನ್ನು ಇಮಾಮಸಾಹೇಬನು ಕೃಷಿಯೋಪಕರಣಗಳನ್ನು ತಯಾರಿಸಿಕೊಡುವುದರ ಮೂಲಕ ಜೀವನಾಧಾರವಾಗಿಸಿಕೊಳ್ಳುತ್ತಾನೆ. ಇಮಾಮಸಾಹೇಬನಿಗೆ ಈಗ ೭೫ ವಯಸ್ಸು. ನಾಲ್ಕನೆ ತರಗತಿಯವರೆಗೆ ಓದಿದ್ದಾನೆ. ಈತನಿಗೆ ಇಬ್ಬರು ಪತ್ನಿಯರು. ಹಿರಿಯಳು ಕುತುಜಾಬಿ. ಇವಳಿಗೆ ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ಇಮಾಮ ಸಾಹೇಬನು ಬಾನುಬಿಯನ್ನು ಮದುವೆಯಾಗಿ ಸುಖ ಸಂಸಾರ ನಡೆಸುತ್ತಿದ್ದಾನೆ.

ಇಮಾಮಸಾಹೇಬರು ಇಂದಿಗೂ ಕಸಬಿನಲ್ಲಿ ಮುಂದುವರೆದಿದ್ದಾರೆ. ವಯೋಮಾನದ ಸಹಜತೆಯಿಂದಾಗಿ ಕಡಿಮೆ ಪ್ರಮಾಣದಲ್ಲಿ ಕಸಬು ನಿರ್ವಹಿಸುತ್ತಿದ್ದಾರೆ. ೫೦ ರಿಂದ ೬೦ ವರ್ಷಗಳ ಬಡಿಗತನ ಕಸಬಿನ ಅನುಭವವಿದೆ. ಇಮಾಮ ಸಾಹೇಬನಿಗೆ ಕೌಟುಂಬಿಕ ತಾಪತ್ರಯಗಳಿಲ್ಲ. ಲವಲವಿಕೆಯಿಂದ ಪತ್ನಿಯರೊಂದಿಗೆ ಬದುಕಿನ ಬಂಡಿ ಸಾಗಿಸುತ್ತಿದ್ದಾರೆ. ಇಮಾಮ ಸಾಹೇಬನು ಆರಂಭದಲ್ಲಿ ತನ್ನ ತಂದೆ, ಅನಂತರದಲ್ಲಿ ಮಗನೊಂದಿಗೆ ಗ್ರಾಮದ ಹಲವಾರು ರೈತರ ಮನೆ-ಮಹಡಿಗಳನ್ನು ನಿರ್ಮಿಸಿದ್ದಾರೆ. ಕೆಲವೊಂದು ಜೇಷ್ಠಾ ಮಡಿಗೆಯ ಮನೆಗಳನ್ನು ವರ್ಷದುದ್ದಕ್ಕೂ ತಯಾರಿಸಿದ್ದಾರೆ. ಇತ್ತೀಚೆಗೆ ತಗಡಿನ ಮನೆ, ಬಣ್ಣದ ಪತ್ರಾಸ್

ಮನೆಗಳನ್ನು ತಯಾರಿಸುತ್ತಿದ್ದಾನೆ. ಜನರ ಅಭಿರುಚಿಗೆ ತಕ್ಕಂತೆ ಬಡಿಗತನ ಉದ್ಯೋಗದಲ್ಲಿ ಹೊಸತನವನ್ನು ತಂದುಕೊಂಡಿದ್ದಾನೆ. ಹೊಸ ಮಾದರಿಯ ಬಾಗಿಲು, ಕಿಟಕಿ, ಮೇಜು, ಕುರ್ಚಿಗಳನ್ನು ತಯಾರಿಸುತ್ತಿದ್ದಾನೆ. ಇಮಾಮಸಾಹೇಬ ತನ್ನ ೨೦ನೇ ವಯಸ್ಸಿನಲ್ಲಿಯೇ ಬಡಿಗತನ ಕಸಬನ್ನು ಆರಂಭಿಸಿದವನು. ರೈತರ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವುದರ ಮೂಲಕ ಗ್ರಾಮದ ಆಯಗಾರನಾಗಿದ್ದಾನೆ. ಆರಂಭದಲ್ಲಿ ಇಮಾಮಸಾಹೇಬನಿಗೆ ಕೇವಲ ೨ ರೂಪಾಯಿ ಸಂಬಳ ದೊರೆಯುತ್ತಿತ್ತು. ಹತ್ತಾರು ವರ್ಷಗಳ ನಂತರ ಸಂಬಳ ೫ ರೂಪಾಯಿಗೆ ಏರಿಕೆಯಾದುದನ್ನು ನೆನಪಿಸುವಾಗ ಇಮಾಮಸಾಹೇಬರ ಕಣ್ಣಲ್ಲಿ ನೀರು ತುಂಬಿಕೊಂಡಿದ್ದವು.

ಇಮಾಮಸಾಹೇಬನ ಬಡಿಗತನ ಉದ್ಯೋಗಕ್ಕೆ ಚೈತನ್ಯವಾಗಿ ನಿಂತವರು ಅವರ ಪತ್ನಿಯರಾದ ಕುತಜಾಬಿ ಮತ್ತು ಬಾನುಬಿ ಅವರು. ನಾನು ಸಂದರ್ಶಿಸಿದ ಸಂದರ್ಭದಲ್ಲಿ ಬಾನುಬಿ. ಅವರು ಮಾತ್ರ ಇಮಾಮ ಸಾಹೇಬ ಪಕ್ಕದಲ್ಲಿದ್ದರು. ಕುತುಜಾಬಿ ಅವರು ಪರ ಊರಿಗೆ ಸಂಬಂಧಿಕರ ಬಳಿ ತೆರಳಿದ್ದರು. ಬಾನುಬಿ ಅವರು ಇಮಾಮ ಸಾಹೇಬರ ಬಡಿಗತನ ಉದ್ಯೋಗಕ್ಕೆ ನಿಜವಾಗಿಯೂ ಒಂದು ಶಕ್ತಿ. ೫೫-೬೦ ವರ್ಷಗಳ ಬಡಿಗತನ ಉದ್ಯೋಗದಲ್ಲಿ ಮುಂದುವರೆದಿರುವ ಇಮಾಮ ಸಾಹೇಬರ ವೃತ್ತಿಯನ್ನು ಗೌರವದಿಂದ ಕಂಡವರು ಬಾನುಬಿ. ಹುಣ್ಣಿಮೆ-ಅಮವಾಸ್ಯೆ-ಯುಗಾದಿ ದಿನಗಳಂದು ಕುಶಲಕರ್ಮಗಾರಿಕೆಗೆ ಸಂಬಂಧಿಸಿದ ಉಪಕರಣಗಳನ್ನು ಇಮಾಮಸಾಹೇಬನು ಸ್ವಚ್ಛವಾಗಿ ತೊಳೆದು ಹೂ-ಗಂಧಗಳಿಂದ ಅಲಂಕರಿಸಿ ಪೂಜಿಸುತ್ತಿದ್ದರು. ಬಾನುಬಿ ಅವರು ಕಡಲೆಬೆಳೆ ಕುದಿಸಿ, ಹೂರಣ ಮಾಡಿ, ಹೋಳಿಗೆ ಖಡಬುಗಳ ಸಿಹಿ ಆಹಾರ ಪದಾರ್ಥಗಳನ್ನು ನೈವೇದ್ಯ ನೀಡುತ್ತಿದ್ದರು. ಬಾಚಿ, ಉಳಿ, ಸುತ್ತಿಗೆ ಕೊಡತಿ ಮೂಲಕ ಶಿರಸಂಗಿ ಕಾಳಮ್ಮನನ್ನು ದಂಪತಿಗಳು ಕಾಣುತ್ತಿದ್ದರು. ಪೂಜೆಯ ಸಂದರ್ಭದಲ್ಲಿ ತೆಂಗಿನಕಾಯಿ ಒಡೆದು ಉದಬತ್ತಿ ಬೆಳಗುವ ಪದ್ಧತಿಯನ್ನು ಇಮಾಮಸಾಹೇಬನು ಜೀವನದಲ್ಲಿ ಅಳವಡಿಸಿಕೊಂಡಿದ್ದನು.

ತನ್ನದಲ್ಲದ ಕುಶಲಕರ್ಮಗಾರಿಕೆ ಜ್ಞಾನದಿಂದ ಇಸ್ಲಾಂ ಧರ್ಮಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಉತ್ಕಟವಾದ ಮನಸ್ಸು ಕಾಯುತ್ತಿತ್ತು. ಇಮಾಮಸಾಹೇಬನಿಗೆ ಜೀವನದಲ್ಲಿ ಮರೆಯಲಾರದ ಒಂದು ಕೊಡುಗೆ ನೀಡುವ ಅವಕಾಶ ಒದಗಿತು. ಇಮಾಮಸಾಹೇಬನ ಬಡಿಗತನ ಉದ್ಯೋಗ ಭರಾಟೆಯಿಂದ ಜರುಗುತ್ತಿರುವ ಸಂದರ್ಭದಲ್ಲಿ ಮಾರಾಪೂರದ ಮುಸ್ಲಿಂ ಬಂಧುಗಳು ಡೋಲಿ ತಯಾರಿಕೆಯ ಹಂತದಲ್ಲಿದ್ದರು. ಇಮಾಮ ಸಾಹೇಬರು ಇಸ್ಲಾಂ ಧರ್ಮದ ಡೋಲಿ(ಶವಸಂಸ್ಕಾರದ ಸಂದರ್ಭದಲ್ಲಿ ಬಳಸುವ ಸಾಧನ)ಯನ್ನು ಸಾಗವಾನಿ(ತೇಗು) ಮತ್ತು ಪ್ಲಾವುಡ್‌ನಲ್ಲಿ ತಯಾರಿಸಿದ್ದಾರೆ ಬೇರೆಯವರು ತಯಾರಿಸಿದ್ದರೆ

ಡೋಲಿಗೆ ೧೫೦೦ ರೂಪಾಯಿ ಖರ್ಚು ತಗುಲುತ್ತಿತ್ತು. ಇಮಾಮ ಸಾಹೇಬನು ಕೇವಲ ೨೦೦೦ ರೂಪಾಯಿ ಗೌರವ ಧನ ಪಡೆದು ಡೋಲಿ ತಯಾರಿಸಿಕೊಡುವುದರ ಮೂಲಕ ಧರ್ಮದ ಋಣವನ್ನು ತೀರಿಸಿದ್ದಾನೆ.

ಇಮಾಮಸಾಹೇಬನ ನಾಲ್ಕು ಜನ ಸಹೋದರರಲ್ಲಿ ಬಾಬುಸಾಬ ಕುಶಲಕರ್ಮಿಯಾಗಿದ್ದು, ಈಗ ಇಳಿವಯಸ್ಸಿನಲ್ಲಿ ಮದಬಾವಿಯಲ್ಲಿ ಕಿರಾಣಿ ಅಂಗಡಿಯನ್ನು ತೆರೆದಿದ್ದಾನೆ. ಸೈದುಸಾಬ ಮತ್ತು ಮೌಲಾಸಾಬ ಕುಶಲಕರ್ಮಿಯಾಗಿ ಮದಬಾವಿ ಗ್ರಾಮದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರಿಬ್ಬರು ನಿಧನರಾಗಿದ್ದಾರೆ. ಕೊನೆಯವ ಹುಸೇನಸಾಬ ಕುಶಲಕರ್ಮಿಯಾಗಿದ್ದಾರೆ. ಮುಲ್ಲಾ ಕುಟುಂಬದ ನಾಲ್ಕನೆಯ ತಲೆಮಾರಿನ ಕುಶಲಕರ್ಮಿಯಾಗಿ ಈಗ ಹಾಜಿಸಾಬ ಕಸಬು ಮುಂದುವರೆಸಿದ್ದಾರೆ. ಹಾಜಿಸಾಬ ಇಮಾಮ ಸಾಹೇಬರ ಏಕೈಕ ಸುಪುತ್ರ. ೨೫ ವರ್ಷದ ಹಾಜಿಸಾಬ ಕಳೆದ ೧೦ ವರ್ಷಗಳಿಂದ ಬಡಿಗತನ ಕಸಬನ್ನು ಆರಂಭಿಸಿದ್ದಾನೆ. ತಂದೆಯ ಜೊತೆಗೂಡಿ ಮಾರಾಪೂರ ಗ್ರಾಮದ ರೈತರ ಮನೆಗಳನ್ನು ತಯಾರಿಸಿದ್ದಾನೆ. ಡೋಲಿ ತಯಾರಿಸುವ ಕಲೆಯನ್ನು ತಂದೆಯಿಂದ ಕಲಿತುಕೊಂಡಿದ್ದಾನೆ. ಹಾಜಿಸಾಬನು ತಂದೆಯಷ್ಟು ಪ್ರಮಾಣದಲ್ಲಿ ಕೃಷಿ ಉಪಕರಣಗಳನ್ನು ತಯಾರಿಸುತ್ತಿಲ್ಲ. ಕಾರಣ ಆಧುನಿಕ ಸಂದರ್ಭ. ಜಾಗತೀಕರಣ ಕರಿನೆರಳಿನಿಂದಾಗಿ ಭಾರತದಲ್ಲಿ ಕೃಷಿ ವ್ಯವಸ್ಥೆ ನಿಂತು ಹೋಗುತ್ತಿರುವ ಕಾಲ. ಹೀಗಾಗಿ ಕೃಷಿ ಉಪಕರಣಗಳನ್ನು ಹಳ್ಳಿಯ ಕುಶಲಕರ್ಮಿ ತಯಾರಿಸುವುದು ಕಡಿಮೆಯಾಗಿದೆ. ಹಾಜಿಸಾಬನು ಉದ್ಯೋಗಕ್ಕೆ ಅವಶ್ಯವಾಗಿರುವ ಆಧುನಿಕ ಯಂತ್ರಗಳಾದ ಕಟರ್, ಪಾಲಿಸ್, ಉಚುಗೋಡ್ಡ(ರಂಧಾ ಮಸಿನ್) ಡ್ರೀಲ್ ಮುಂತಾದವುಗಳನ್ನು ಖರೀದಿಸಿ ಕಸಬಿನಲ್ಲಿ ಬಳಸುತ್ತಿದ್ದಾನೆ. ಈಗ ಇಮಾಮ ಸಾಹೇಬರ ಬಾಚಿ ಬಹಳ ಸವೆದಿದೆ. ಉಕ್ಕು ಹಿಡಿಸಿ ಬಾಚಿಗೆ ಹೊಸ ಸ್ವರೂಪ ನೀಡಬೇಕೆಂದರೆ ಬಾಚಿ ಬಳಕೆ ನಿಂತಿದೆ. ೨ ರೂಪಾಯಿ ೫ ರೂಪಾಯಿ ಸಂಬಳ ದೊರೆಯುವಾಗ ಇಮಾಮ ಸಾಹೇಬರು ಸಂತೃಪ್ತ ಜೀವನ ಸಾಗಿಸುತ್ತಿದ್ದರು. ಈಗ ಅವರೆ ಹೇಳುವಂತೆ "ತುಟ್ಟಿ ಕಾಲದಾಗ ಸಾವಿರ ತಂದ್ರು ಸಂತೃಪ್ತಿ ಜೀವ್ನ ಇಲ್ಲ" ಎಂದು ಹೇಳುವಾಗ ಕುಟುಂಬ ತನ್ನ ಬಡತನದ ನೆನಪುಗಳನ್ನು ಮೆಲಕು ಹಾಕಿತು. ಬಡಿಗತನ ಉದ್ಯೋಗದಿಂದ ಇಮಾಮಸಾಹೇಬ ಮುಲ್ಲಾ ಕುಟುಂಬ ೪ ಎಕರೆ ಭೂಮಿಯನ್ನು ಖರೀದಿಸಿ ಕೃಷಿಯ ಕಡೆಗೂ ಹಾಜಿಸಾಬ ಗಮನ ಹರಿಸುತ್ತಿದ್ದಾನೆ? ಪತ್ನಿ ಸಿರಿನಾಬಾನು ಮಕ್ಕಳಾದ ತಯಬ್ ಮತ್ತು ತಮ್ಜದ ತಂದೆ-ಇಮಾಮಸಾಹೇಬ, ತಾಯಿ ಬಾನುಬಿ ಮತ್ತು ಕುತುಜಾಬಿ ದೊಡ್ಡ ಕುಟುಂಬದೊಂದಿಗೆ ತೋಟದ ಮನೆಯಲ್ಲಿ ಕುಶಲಕರ್ಮಗಾರಿಕೆಯನ್ನು ಮುಂದುವರೆಸಿ ಕೊಂಡಿದ್ದಾನೆ.

ಹೀಗೆ ಮುಸ್ಲಿಂ ಕುಟುಂಬವು ಮಾರಾಪೂರ–ಮದಬಾವಿ ಗ್ರಾಮದಲ್ಲಿ ನೂರಾರು ವರ್ಷಗಳಿಂದ ಬಡಿಗತನದ ಕಸಬನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿದೆ. ಒಂದು ಕಾಲದಲ್ಲಿ ಈ ಮುಸ್ಲಿಂ ಕುಟುಂಬಕ್ಕೆ ಹೊಸ ವಿದ್ಯೆಯಾಗಿದ್ದ ಬಡಿಗತನ ಕಸಬು, ಕಾಲಾಂತರದಲ್ಲಿ ಕುಟುಂಬದ ಪಾರಂಪರಿಕ ಜ್ಞಾನನಿಧಿಯಾಗಿ ಮಾರ್ಪಟ್ಟಿರುವುದು ವಿಶೇಷ. ನನಗೆ ತಿಳಿದಂತೆ ಮುಲ್ಲಾ ಕುಟುಂಬದ ಬಾಬುಸಾಬನಿಂದ ಹಾಜಿಸಾಬನವರೆಗಿನ ನಾಲ್ಕನೆಯ ತಲೆಮಾರಿನವರು ಕುಶಲಕರ್ಮಿಗಳಾಗಿ ಮುಂದುವರೆದಿದ್ದಾರೆ. ಇದರ ಬಗ್ಗೆ ವೃತ್ತಿಯ ಜ್ಞಾನವನ್ನು ವೃದ್ಧಿಸಿಕೊಳ್ಳುತ್ತಲೇ ಇದ್ದಾರೆ. ಮುಸ್ಲಿಂ ಧರ್ಮ ತನ್ನದೇ ಆದ ರೀತಿ–ನೀತಿ–ರಿವಾಜುಗಳನ್ನು ಹೊಂದಿದೆ. ಹೀಗಿದ್ದರೂ ಮುಲ್ಲಾ ಕುಟುಂಬ ಜಾತಿ–ಧರ್ಮವನ್ನು ಮೀರಿ ಜೀವನೋಪಾಯಕ್ಕಾಗಿ ಅನುಕೂಲವಾದ ವೃತ್ತಿಯನ್ನೇ ದೈವದಂತೆ ಕಂಡು 'ಮನುಷ್ಯ ಜಾತಿ ತಾನೊಂದೆವಲಂ' ಎಂಬ ಕವಿವಾಣಿಗೆ ಸಾಕ್ಷಿಯಾಗಿ, ರೈತರೊಂದಿಗೆ ಅಪ್ಪಟ ರೈತರಾಗಿ, ಕುಶಲಕರ್ಮಿಗಳಾಗಿ ಸೇವೆ ಸಲ್ಲಿಸುತ್ತಿರುವ 'ಮುಲ್ಲಾ' ಕುಟುಂಬ ದೇಶದ ಐಕ್ಯತೆಗೆ ಸಾಕ್ಷಿಗಲ್ಲು.

ಅನ್ಯಕುಶಲಕರ್ಮಿ ಮುಲ್ಲಾ ಕುಟುಂಬದ ವಿವರ

ಬಾಬುಸಾಬ(ಕುಶಲಕರ್ಮಿ)

ದಾದಿಸಾಬ ಹಾಜಿಸಾಬ+ಮಾಶಾಬಿ ಬಾಪುಸಾಬ

ಇಮಾಮಸಾಹೇಬ ೨ನೇ ಬಾಬುಸಾಬ ಸೈದುಸಾಬ ಮೌಲಾಸಾಬ ಹುಸೇನಸಾಬ

(ಕುತುಜಾಬಿ+ಬಾನುಬಿ)

೨ನೇ ಹಾಜಿಸಾಬ+ಸಿರಿನಾಬಾನು

ತಯಬ(೫) ತಮ್ಜದ(೩)

ಮುಸ್ಲಿಂ ಕುಶಲಕರ್ಮಿಗಳು ಕೇವಲ ಹಳ್ಳಿಗಳಲ್ಲಿ ಮಾತ್ರ ಕಸಬು ನಿರ್ವಹಿಸುತ್ತಿಲ್ಲ. ಬಾಗಲಕೋಟ ಜಿಲ್ಲೆಯ ಸಮೀರವಾಡಿ ಶುಗರ್ ಫ್ಯಾಕ್ಟರಿಯಲ್ಲಿಯೂ ಅನ್ವರ ಮುಲ್ಲಾ ಎಂಬ ಕುಶಲಕರ್ಮಿ ಬಡಿಗತನ(Carpenter) ಉದ್ಯೋಗಿಯಾಗಿ ಪ್ರತಿ ತಿಂಗಳು ನಿಗದಿತ ಸಂಬಳ ಪಡೆಯುವ ಕುಶಲಕರ್ಮಿಯಾಗಿದ್ದಾನೆ. ಅನ್ವರ ಮುಲ್ಲಾ ಈಗ ಬೆಳಗಾವಿ ಜಿಲ್ಲೆ ಮೂಡಲಗಿಯಲ್ಲಿ ವಾಸವಾಗಿದ್ದಾರೆ. ಉದ್ಯೋಗವನ್ನು ಶುಗರ್ ಫ್ಯಾಕ್ಟರಿಯಲ್ಲಿ ಬಡಗಿತನ ವಿಭಾಗ(Carpenter Division)ದಲ್ಲಿ ಕಾರ್ಯನಿರ್ವಹಿಸುತ್ತಿದ್ದಾನೆ. ಅನ್ವರ ಮುಲ್ಲಾಗೆ ಕುಟುಂಬ ನಿರ್ವಹಣೆಗೆ ಕುಶಲಕರ್ಮಗಾರಿಕೆಯೇ ಮೂಲಾಧಾರವಾಗಿದೆ.

ಒಟ್ಟಾಗಿ ಪಾಂಚಾಳ ಪಾರಂಪರಿಕ ಕುಶಲಕರ್ಮಗಾರಿಕೆ ಮುಸ್ಲಿಂ ಕುಟುಂಬಗಳ ಜೀವನಾಧಾರವಾಗಿಯೂ ಬೆಳೆದಿದೆ. ಮುಸ್ಲಿಂರಿಗೆ ಅಲ್ಲಾ ಒಬ್ಬನೇ ದೇವರು. ಪೂಜೆ ನಿಷೇಧ. ಇಂತಹ ಹಲವಾರು ಧಾರ್ಮಿಕ ಕಟ್ಟುಪಾಡುಗಳ ನಡುವೆ ಮುಸ್ಲಿಂ ಕುಶಲಕರ್ಮಿ ಕುಟುಂಬಗಳು ತಮ್ಮ ತನವನ್ನು ಉಳಿಸಿಕೊಂಡಿರುವುದು ಸಾಧನೀಯವೆನಿಸುತ್ತದೆ. ಮನುಷ್ಯನಿಗೆ ಬದುಕು ಸಾಗಿಸುವ ಕಸಬು ಮುಖ್ಯ. ಅನಂತರದಲ್ಲಿ ಜಾತಿ ಧರ್ಮ, ಶ್ರೀಮಂತಿಕೆ ಇತ್ಯಾದಿಗಳು ಸಾಮಾಜಿಕ ವಲಯದಲ್ಲಿ ಅವಶ್ಯಕವಾಗುತ್ತವೆ. ಈ ದೆಸೆಯಲ್ಲಿ ಮುಲ್ಲಾ ಕುಟುಂಬಗಳ ಕುಶಲಕರ್ಮಗಾರಿಕೆ ಕಸಬಿಗೆ ಮೊದಲ ಆದ್ಯತೆ ನೀಡಿದ್ದಾರೆ. ಅನಂತರದಲ್ಲಿ ಜಾತಿ-ಧರ್ಮಗಳಿಗೆ ಮಹತ್ವ ನೀಡಿದ್ದನ್ನು ಈ ಕುಟುಂಬದ ಆಚಾರ-ವಿಚಾರ ಸಂಸ್ಕೃತಿಯೆಂದು ತಿಳಿಯಲಾಗುತ್ತದೆ. ಇವರು ಡೋಲಿ ತಯಾರಿಸುವ ಕಲೆ ಬಲ್ಲವರಾಗಿದ್ದರೂ ಹಿಂದೂಗಳ ಶವಸಂಸ್ಕಾರಕ್ಕೆ ಛಟ್ಟ ಪಲ್ಲಕ್ಕಿಯಂತ ಕೆಲವು ವಸ್ತುಗಳನ್ನು ತಯಾರಿಸಿದ ಉದಾಹರಣೆಗಳಿಲ್ಲವೆನ್ನುತ್ತಾರೆ. ಇಲ್ಲಿಯೂ ಕೆಲವು ವಸ್ತುಗಳ ತಯಾರಿಕೆಯನ್ನು ಪಾರಂಪರಿಕ ಕಲೆಗಾರರಾದ ಪಾಂಚಾಳರಿಗೆ ನೀಡಿರಬೇಕೆಂಬುದು ತಿಳಿಯಲಾಗುತ್ತದೆ. ಮುಸ್ಲಿಂರಿಗೆ ಹಜ್‌ಯಾತ್ರ ಪವಿತ್ರವೂ ಮತ್ತು ಪ್ರಮುಖವು ಆಗಿದೆ. ಅದರಂತೆ ಕುಶಲಕರ್ಮಿ ಮುಸ್ಲಿಂ ಕುಟುಂಬಗಳು ಜೀವನದಲ್ಲಿ ಒಮ್ಮೆಯಾದರೂ ಶಿರಸಂಗಿ ಕಾಳಮ್ಮನ ಜಾತ್ರೆಗೆ ಹೋಗಿ ಬರಬೇಕು ಎಂಬ ಇಂಗಿತ ವ್ಯಕ್ತಪಡಿಸುತ್ತಾರೆ. ಇಂದಿಗೂ ಶಿರಸಂಗಿಗೆ ಹಲವಾರು ಮುಸ್ಲಿಂ ಕುಟುಂಬಗಳು ಅಮವಾಸ್ಯೆಗೆ ಹೋಗಿ ಬರುತ್ತವೆ. ಮೌನೇಶ್ವರ ಹೊಂಡದ ಬಳಿ ದರ್ಗಾ ಇದೆ. ಮುಸ್ಲಿಂ ಕುಟುಂಬಗಳು ಕಾಳಮ್ಮನ ದೇವಸ್ಥಾನ ಮತ್ತು ದರ್ಗಾಕ್ಕೆ ಭೇಟಿ ನೀಡಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಶಿರಸಂಗಿ ಪರಿಸರದ ಮುಸ್ಲಿಂ ಕುಶಲಕರ್ಮಿ ಕುಟುಂಬಗಳು ಕಾಳಮ್ಮನನ್ನು ಪೂಜಿಸಿ ಆರಾಧಿಸುತ್ತಿದ್ದಾರೆ. ನನ್ನೂರಿನಲ್ಲಿ ನಮ್ಮ ಮನೆಯ ಹತ್ತಿರ ಟೀಪುಸಾಬ ಎಂಬ ಮುಸ್ಲಿಂ ಕುಶಲಕರ್ಮಿ ಇದಕ್ಕೆ ಸೂಕ್ತ ನಿದರ್ಶಕ. ಈಗ ಟೀಪುಸಾಬ ನಿಧನರಾಗಿದ್ದಾರೆ. ಕುಶಲಕರ್ಮಿಗಳು ಇಲ್ಲವಾದರೂ ಮುಸ್ಲಿಂರಲ್ಲಿ ಕುಶಲಕರ್ಮ ಗಾರಿಕೆ ಮುಂದುವರೆದಿರುವುದು ಸತ್ಯ.

೩. **ಕ್ರೈಸ್ತ ಕುಶಲಕರ್ಮಿ ವರ್ಗ:** ಕುಶಲಕರ್ಮಗಾರಿಕೆ ಎಂಬುದು ಕೇವಲ ಭಾರತೀಯರಷ್ಟೇ ಕಲಿತುಕೊಂಡ ಕಲೆಯಾಗಿರಲಿಲ್ಲ. ಅನ್ಯ ದೇಶದವರಿಗೂ ಒಲಿದ ಕಸಬಾಗಿತ್ತು. ಭಾರತದಲ್ಲಿ ಪಾಂಚಾಳರು ಪಾರಂಪರಿಕವಾಗಿ ಮುಂದುವರೆಸಿಕೊಂಡ ಕುಶಲಕರ್ಮಿಗಳು. ದೇಶ-ಭಾಷೆಯನ್ನು ಮೀರಿ ಭಾರತೀಯ ಪಾರಂಪರಿಕ ಕುಶಲಕಲೆ ಬೆಳೆಯುತ್ತದೆ. ವಿಶ್ವಕರ್ಮರು ವಿಶ್ವದಲ್ಲೆಡೆ ನೆಲೆಸಿರುವಂತೆ ಕುಶಲಕಲೆಯು ಜಗತ್ತಿನ ತುಂಬಾ ವ್ಯಾಪಿಸಿದೆ. ಅನ್ಯ ದೇಶಿಯರು ಭಾರತಕ್ಕೆ ಕಾಲಿಟ್ಟಾಗ ಅವರಲ್ಲಿಯೂ ಕುಶಲ ಕರ್ಮಗಾರಿಕೆ ಕಲೆ ಇದೆ ಎಂಬುದನ್ನು ಗುರುತಿಸಲಾಯಿತು.

ಮುಸ್ಲಿಂರು ಭಾರತಕ್ಕೆ ಆಗಮಿಸಿದಾಗ ಅವರಲ್ಲಿಯ ಕುಶಲಕಲೆಯನ್ನು ಪರಿಚಯಿಸಿಕೊಂಡು ಕೆಲವು ಅಂಶಗಳನ್ನು ಸ್ವೀಕರಿಸಿಕೊಳ್ಳಲಾಯಿತು. ಅದರಂತೆ ಕ್ರೈಸ್ತರು ಭಾರತಕ್ಕೆ ಕಾಲಿರಿಸುತ್ತಾರೆ.

ಮಧ್ಯ ಏಷ್ಯಾದ ಯೇಸು ಶಿಷ್ಯ ಸಂತ ಥೋಮಸ್ ಮತ್ತು ಬಾರ್ತಲೋಮೆವ್ ಇವರು ಮೊದಲ ಬಾರಿಗೆ ಭಾರತದ ಕರಾವಳಿ ಜನರಿಗೆ ಕ್ರೈಸ್ತ ಧರ್ಮ ಬೋಧಿಸುವುದರ ಮೂಲಕ ಕ್ರೈಸ್ತಧರ್ಮ ಭಾರತದಲ್ಲಿ ನೆಲೆಯೂರಲು ಸಾಧ್ಯ ಮಾಡಿಕೊಂಡರು. ಕರ್ನಾಟಕವು ಕ್ರೈಸ್ತರನ್ನು ಪ್ರೀತಿಯಿಂದ ಸ್ವಾಗತಿಸಿತು ಎಂಬ ಸಂಗತಿಯನ್ನು ತಿಳಿಯಲಾಗುತ್ತದೆ. ಕೇರಳದಲ್ಲಿಯೂ ಕ್ರೈಸ್ತರ ಪ್ರವೇಶವಾಗುತ್ತದೆ. ಅವರನ್ನು ಸಿರಿಯನ್ ಕ್ರೈಸ್ತರೆಂದು ಕರೆಯಲಾಗುತ್ತದೆ. ಅವರ ಜಾಕೋಬೈಟ್ಸ್ ಮತ್ತು ಮಾರ್ಥೋಮೈಟ್ಸ್‌ಗಳೆಂಬ ಉಪಪಂಥಗಳನ್ನು ಗುರುತಿಸಬಹುದಾಗಿದೆ. ಬೆಳಗಾವಿ ಶಿರಸಂಗಿ ಪ್ರದೇಶದಲ್ಲಿ ಅಸಂಖ್ಯಾತ ಕ್ರೈಸ್ತರು ಕಂಡುಬರುತ್ತಾರೆ.

ಮಾರ್ಟಿನ್ ಲೂಥರ್‌ನ ಬಂಡಾಯದಿಂದಾಗಿ ಪ್ರಾಟೆಸ್ಟಂಟ್(ಪ್ರತಿಭಟಕ) ವರ್ಗ ಜನ್ಮ ತಾಳುತ್ತದೆ. ಇವರು ಸಮಾನ ಸಂಖ್ಯೆಯಲ್ಲಿಯೇ ಭಾರತಕ್ಕೆ ಕಾಲಿರಿಸಿದ್ದರು. ಪೋರ್ಚ್‌ಗೀಸ್ ವಸಾಹತುಗಾರರು ಗೋವಾಕ್ಕೆ ಬಂದುಳಿದ ನಂತರ ಸ್ಥಳೀಯರನ್ನು ಒತ್ತಾಯ ಪೂರ್ವಕವಾಗಿ ಕೆಥೋಲಿಕ್ ಕ್ರೈಸ್ತರನ್ನಾಗಿ ಮತಾಂತರಿಸಲಾಯಿತು. ಗೋವೆಯಲ್ಲಿ ಕೊಂಕಣಿಗರು ವಾಸವಾಗಿರುವಂತೆ ಕರ್ನಾಟಕದ ಕನ್ನಡಿಗರು ಉದ್ಯೋಗಕ್ಕಾಗಿ ನೆಲೆಗೊಂಡಿದ್ದರು. ಹೀಗಾಗಿ ಕೊಂಕಣಿಗರ ಜೊತೆ ಗೋವೆಯ ಕನ್ನಡಿಗರು ಮತಾಂತರಗೊಂಡಿರುವ ಸಾಧ್ಯತೆಗಳಿವೆ. ಬಡತನ, ನಿರುದ್ಯೋಗ, ಬರಗಾಲ, ಪ್ಲೇಗ್‌ನಂತಹ ಸಾಮಾಜಿಕ ಪಿಡುಗುಗಳು ಬ್ರಹದಾಕಾರದಲ್ಲಿ ಈ ಸಂದರ್ಭದಲ್ಲಿ ಸ್ಥಳೀಯರನ್ನು ಕಾಡಿರಬೇಕು. ಮತಾಂತರಗೊಂಡರೆ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದೆಂಬ ಗಾಢ ನಂಬಿಕೆ ಗೋವೆ ಜನರಲ್ಲಿ ಬೇರೂರಿರಬೇಕು.

ಏಷ್ಯಾ ಖಂಡದಲ್ಲಿ ಹುಟ್ಟಿ-ಬೆಳೆದ ಕ್ರೈಸ್ತ ಧರ್ಮವು ಜಗತ್ತಿಗೆ ಶಾಂತಿ, ದಯೆ, ಕರುಣೆ, ಪ್ರೀತಿ, ನಿಷ್ಕಾಮ್ಯ ಸೇವೆಯಂತಹ ಮೌಲಿಕ ತತ್ವಗಳನ್ನು ಬೋಧಿಸಿದ ಯೇಸುಕ್ರಿಸ್ತನ ಅನುಯಾಯಿಗಳನ್ನು ವಿಶ್ವದೆಲ್ಲೆಡೆ ಗುರುತಿಸುವಂತಾಗಿದೆ. ಭಾರತಕ್ಕೆ ಯೇಸುಕ್ರಿಸ್ತನ ಬೋಧನೆಗಳು ಪ್ರವೇಶಗೊಂಡಿರುವಂತೆ ಅವನ ಕುಟುಂಬದ ಕುಶಲಕಲೆಗಾರಿಕೆಯೂ ಪ್ರವೇಶ ಮಾಡಿರುವುದನ್ನು ಸೂಕ್ಷ್ಮವಾಗಿ ಗಮನಿಸ ಬೇಕಾಗುತ್ತದೆ. ಯೇಸುಕ್ರಿಸ್ತ ಮಾನವೀಯ ಧರ್ಮದ ಶ್ರೇಷ್ಠ ಬೋಧಕ ನೆಂಬುದು ಎಷ್ಟು ಸತ್ಯವೊ? ಯೇಸು ಕ್ರಿಸ್ತನು ಕುಶಲಕರ್ಮಿ ಕುಟುಂಬದಲ್ಲಿ ಜನಿಸಿರುವುದು ಅಷ್ಟೇ ಸತ್ಯ. "ಏಸುಕ್ರಿಸ್ತನ ತಂದೆ ಜೋಸೆಫ್ ಸೇರಿದಂತೆ ಆತನೂ ಬಡಿಗ ವೃತ್ತಿಯನ್ನಾರಂಭಿಸಿದ ಎನ್ನುವುದಕ್ಕೆ ಬೈಬಲ್ ಸಾಕ್ಷಿ." ಈ ಸಂಗತಿಯನ್ನು ಗಮನಿಸುವಾಗ ಕ್ರೈಸ್ತರಲ್ಲಿಯೂ ಕೆಲವರು ಕುಶಲಕರ್ಮಿಗಳಾಗಿದ್ದರು. ಜೀವನ ನಿರ್ವಹಣೆಗಾಗಿ ಬಡಗಿ ವೃತ್ತಿಯನ್ನು ಮುಂದುವರೆಸಿಕೊಂಡಿರು ವುದು ತಿಳಿದುಬರುತ್ತದೆ.

ಇದರಿಂದಾಗಿ ಭಾರತದಲ್ಲಿ ಕ್ರೈಸ್ತರ ಕೆಲಕುಟುಂಬಗಳು ಕುಶಲಕರ್ಮಿ ವೃತ್ತಿಯನ್ನು ನಿರ್ವಹಿಸುತ್ತಿರಬೇಕೆಂಬ ಸಂಗತಿಯ ಮೇಲೆ ಬೆಳಕು ಚೆಲ್ಲಬೇಕಾಗುತ್ತದೆ.

ಕ್ರೈಸ್ತರ ಕೆಲ ಕುಟುಂಬಗಳು ಭಾರತಕ್ಕೆ ಬರುವ ಮುನ್ನವೇ ಕುಶಲಕರ್ಮಿ ಕುಟುಂಬ ಗಳಾಗಿದ್ದವು. ಇನ್ನೂ ಕೆಲವರು ಭಾರತೀಯ ಮೂಲದವರು ಮೊದಲೇ ಕುಶಲ ಕರ್ಮಗಾರಿಕೆ ಕಲಿತವರು. ಮತಾಂತರಗೊಂಡ ಮೇಲೆ ಕ್ರೈಸ್ತ ಸಮುದಾಯದ ಕುಶಲಕರ್ಮಿಗಳಾಗಿ ಗುರುತಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಕ್ರೈಸ್ತ ಧರ್ಮೀಯ ಕುಶಲಕರ್ಮಿಗಳು ದೊರೆಯುತ್ತಾರೆ. ಕರ್ನಾಟಕದ ಕರಾವಳಿಯ ಭಾಗದಲ್ಲಿ ಕ್ರೈಸ್ತ ಕುಶಲಕರ್ಮಿಗಳು ಹೆಚ್ಚಾಗಿ ಕಾಣಸಿಗುತ್ತಾರೆ. ಕರಾವಳಿ ಜಿಲ್ಲೆಗಳಲ್ಲಿ "ಕ್ರಿಶ್ಚಿಯನ್ನರು ಬಹುಸಂಖ್ಯಾತ ಬಡಿಗರು, ಗಾರೆ ಕೆಲಸದೊಂದಿಗೆ ಬಡಿಗತನ ಜೊತೆಗೂಡಿ ಮಾಡುವುದು ಅನಿವಾರ್ಯವಾಗಿದೆ."[೧೦] ಒಂದರೆ ಜೊತೆ ಮತ್ತೊಂದು ಕೆಲಸವನ್ನು ಕ್ರೈಸ್ತರು ನಿರ್ವಹಿಸುತ್ತಾರೆ. ಪಾಂಚಾಳರ ಪಾರಂಪರಿಕ ಕುಶಲಕರ್ಮಗಾರಿಕೆಯನ್ನು ಅನ್ಯ ಕ್ರೈಸ್ತ ಸಮುದಾಯದವರು ಜೀವನೋಪಾಯಕ್ಕಾಗಿ ನಿರ್ವಹಿಸಿ ಕೊಂಡು ಬಂದಿರುವುದನ್ನು ಕಾಣುತ್ತೇವೆ. ಆದರೆ ಪಾಂಚಾಳರಲ್ಲಿಯ ಐದು ಬಗೆಯ ವೃತ್ತಿಗಳು ಕ್ರೈಸ್ತರಲ್ಲಿ ಕಂಡುಬರುವುದಿಲ್ಲ. ಕೇವಲ ಬಡಿಗತನ(ಮರ) ಕಸಬು ಮಾತ್ರ ಹೆಚ್ಚಾಗಿ ನಿರ್ವಹಿಸುತ್ತಾರೆ.

ಕ್ರೈಸ್ತ ಗೋವೆಯ ಕೆಥೋಲಿಕರಲ್ಲಿ ಬಾಂಬನರು ಅಂದರೆ ಶೇಣವಿ ಬ್ರಾಹ್ಮಣ ವಂಶದವರು, ಚರೋಡ, ಸೂದಿಗರು ಅಂದರೆ ಶೂದ್ರರು, ರೆಂಡರ, ಗವಿಡ ಅಥವಾ ಗೌಡ ಮೊಡವಾಳ ಅಂದರೆ ಬಟ್ಟೆ ಒಗೆಯುವ ಅಗಸರು, ಕಾಫ್ರಿ ಅಂದರೆ ಸಿದ್ಧಿಕುಲ ಮತ್ತು ಕುಂಬರರನ್ನು ಒಳಗೊಂಡ ೮ ಬಗೆಯ ಒಳಜಾತಿಗಳಿವೆ ಎಂದು ಮುಂಬಯಿ ಇಲಾಖೆಗೆ ಸೇರಿದ ೧೮೯೨ರ ಕರ್ನಾಟಕ ಭಾಗದ ಗ್ಯಾಝೇಟೀಯರನಲ್ಲಿ ತಿಳಿಸಲಾಗಿದೆ. ಈ ಎಂಟು ಬಗೆಯ ಜಾತಿಯವರು ಕಾರಣಾಂತರದಿಂದ ಕ್ರೈಸ್ತ ಸಮುದಾಯಕ್ಕೆ ಮತಾಂತರಗೊಂಡಿರುವುದು ತಿಳಿದುಬರುತ್ತದೆ. ವಿವಿಧ ಉಪಜಾತಿಯ ಈ ಸಮುದಾಯ ಕ್ರೈಸ್ತಧರ್ಮ ಸ್ವೀಕರಿಸಿದ್ದರೂ ತಮ್ಮ ತಮ್ಮ ವೃತ್ತಿಗಳನ್ನು ಕ್ರೈಸ್ತರಾಗಿಯೂ ಮುಂದುವರೆಸಿಕೊಂಡಿದ್ದರು. "ಬಾಂಬನರಲ್ಲಿಯೂ ಚರೋಡರಲ್ಲಿಯೂ ಹಲಕೆಲವರು ವಿದ್ಯಾಭ್ಯಾಸ ಮಾಡಿ ನೌಕರಿಗಳನ್ನು ಸಂಪಾದಿಸುವರು; ಕಲಿಯದವರು ವೊಕ್ಕಲುತನ ಮಾಡುವರು. ಹೆಸರಾದ ವ್ಯಾಪಾರಸ್ಥರು ಖಿಸ್ತಿಗಳಲ್ಲಿ ಬಹುತರ ಇಲ್ಲ. ಸೂದಿಗರು ಸಿಂಪಿಗರ ಹೊರೆಯನ್ನು ಬಡಿಗರ ಹೋರೆಯನ್ನು ಮಾಡುವರು."[೧೧] ಕ್ರೈಸ್ತ ಸಮುದಾಯದ ಮತಾಂತರ ಗೊಂಡವರು ತಮ್ಮದೇ ಆದ ಬೇರೆ ಬೇರೆ ವೃತ್ತಿ ನಿರ್ವಹಿಸುತ್ತಿದ್ದರು.

ಸೂದಿಗರು ಅಂದರೆ ಶೂದ್ರರು ಸಿಂಪಿಗರ(ಟೇಲರ್) ಬಟ್ಟೆ ಹೊಲೆಯುವುದು ಮತ್ತು ಬಡಿಗರ(ಮರಗೆಲಸ) ಹೋರೆ>ಹ್ವಾರೆ>ಉದ್ಯೋಗದಲ್ಲಿ ಮುಂದುವರೆದಿದ್ದರೆಂಬುದು ಸ್ಪಷ್ಟವಾಗಿ

ತಿಳಿಯುತ್ತದೆ. ಕ್ರೈಸ್ತ ಕುಶಲಕರ್ಮಿಗಳು ರವಿವಾರದಂದು ಚರ್ಚುಗಳಿಗೆ ತೆರಳಿ ಪ್ರಾರ್ಥನೆ ಸಲ್ಲಿಸುತ್ತಾರೆ. ಎಲ್ಲ ಧರ್ಮೀಯರ ಜೊತೆ ಸ್ನೇಹ-ಸೌಹಾರ್ದತೆಯಿಂದ ಇರುತ್ತಾರೆ. ಕೆಲ ಕ್ರೈಸ್ತ ಕುಶಲಕರ್ಮಿ ಕುಟುಂಬಗಳು ಹಿಂದೂ ಧಾರ್ಮಿಕ ಜಾತ್ರೆ-ಉತ್ಸವಗಳಲ್ಲಿಯೂ ಭಾಗವಹಿಸುತ್ತಾರೆ. ಪಾಂಚಾಳ ಕುಶಲಕರ್ಮಿಗಳ ಕುಲದೇವತೆ ಶಿರಸಂಗಿ ಕಾಳಮ್ಮನ ಕುರಿತು ಅಷ್ಟಿಷ್ಟು ಕೇಳಿ ತಿಳಿದುಕೊಂಡವರಾಗಿರುತ್ತಾರೆ. ಕೆಲವರು ದೇವಿಯ ಫೋಟೋಗೆ ನಮಿಸುತ್ತಾರೆ. ಕ್ರೈಸ್ತರಲ್ಲಿ ನಿಧನರಾದಾಗ ಶವಪೆಟ್ಟಿಗೆ ತಯಾರಿಸಲಾಗುತ್ತದೆ. ಅದಕ್ಕೆ 'ಕಾಫಿನ್ ಪೆಟ್ಟಿಗೆ'ಯೆಂದು ಕರೆಯುತ್ತಾರೆ. ಈ ಶವಪೆಟ್ಟಿಗೆಯನ್ನು ಕ್ರೈಸ್ತ ಬಡಗಿಗಳು ತಯಾರಿಸುವುದು ಅತೀ ವಿರಳ. ಪಾಂಚಾಳ ಕುಶಲಕರ್ಮಿಗಳೇ ಕಾಫಿನ್ ಪೆಟ್ಟಿಗೆಯನ್ನು ತಯಾರಿಸುವುದನ್ನು ಕಂಡಿದ್ದೇನೆ. ಕ್ರೈಸ್ತ ಕುಶಲಕರ್ಮಿ ಮಹಿಳೆಯರು ಹಣೆಗೆ ಕುಂಕುಮ ಧರಿಸುವುದಿಲ್ಲ. ಮಂಗಳಸೂತ್ರ, ಕಿವಿಯೋಲೆಗಳು, ಚಿನ್ನಾಭರಣ, ಗಾಜಿನ ಬಳೆಗಳನ್ನು ಧರಿಸುತ್ತಾರೆ. ಹಿಂದೂ ಧರ್ಮದ ಷೋಡಶ ಆಚರಣೆಗಳನ್ನು ಹೋಲುವ ಕೆಲವೊಂದನ್ನು ಈ ಮಹಿಳೆಯರು ಆಚರಿಸುತ್ತಾರೆ. ಒಟ್ಟಾಗಿ ಕ್ರೈಸ್ತ ಸಮುದಾಯದಲ್ಲಿಯೂ ಬಡಿಗತನ ಕಸಬಿನ ಕುಶಲಕರ್ಮಿಗಳು ಕಂಡುಬರುತ್ತಾರೆ.

ಅನ್ಯಕುಶಲಕರ್ಮಿಗಳು ಮತ್ತು ಜನಸಮುದಾಯ

ಪಾಂಚಾಳರ ಪಾರಂಪರಿಕ ಕುಶಲಕರ್ಮಗಾರಿಕೆಯನ್ನು ಮುಂದುವರೆಸಿಕೊಂಡು ಬಂದಿರುವ ಹಿಂದೂ ಕುಶಲಕರ್ಮಿ ವರ್ಗ, ಮುಸ್ಲಿಂ ಕುಶಲಕರ್ಮಿ ವರ್ಗ ಮತ್ತು ಕ್ರೈಸ್ತ ಕುಶಲಕರ್ಮಿ ವರ್ಗಗಳನ್ನು ಇಲ್ಲಿ ಸೂಕ್ಷ್ಮವಾಗಿ ಅಧ್ಯಯನಿಸಲಾಗಿದೆ. ಹಿಂದು ಕುಶಲಕರ್ಮಿ ವರ್ಗಗಳಲ್ಲಿ ಕುರುಬರು ಲಿಂಗಾಯತರು, ಕ್ಷತ್ರೀಯರು, ಮರಾಠ, ಮಾದರ, ಇತರೆ ಸಮುದಾಯದ ಕುಶಲಕರ್ಮಿ ಕುಟುಂಬಗಳನ್ನು ಅಧ್ಯಯನದ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಪ್ರಮುಖವಾಗಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳಲ್ಲಿಯ ಒಂದೊಂದು ಕುಟುಂಬವನ್ನು ಪ್ರಾತಿನಿಧಿಕವಾಗಿ ಆಯ್ದುಕೊಳ್ಳಲಾಗಿದೆ. ಹಿಂದು ಕುಶಲಕರ್ಮಿ ವರ್ಗಗಳಲ್ಲಿ ೮ ಅನ್ಯ ಕುಶಲಕರ್ಮಿಗಳ ಕುಶಲಕಲೆ, ಕುಟುಂಬ, ಆಚಾರ-ವಿಚಾರ ಸಂಸ್ಕೃತಿಯನ್ನು ಗಮನಿಸಲಾಯಿತು. ಮುಸ್ಲಿಂ ಕುಶಲಕರ್ಮಿ ವರ್ಗದಲ್ಲಿ ಒಂದು ಕುಟುಂಬದ ಸಮಗ್ರ ಮಾಹಿತಿ ಪಡೆದುಕೊಂಡು ಕುಶಲಕಲೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಕ್ರೈಸ್ತ ಸಮುದಾಯದಲ್ಲಿಯೂ ಕುಶಲಕರ್ಮಿ ಕುಟುಂಬಗಳು ದೊರೆಯುತ್ತವೆ. ಕ್ರೈಸ್ತ ಮತ ಬೋಧಕ ಯೇಸು ಕ್ರಿಸ್ತನೇ ಮತ್ತು ಆತನ ತಂದೆ ಜೋಸೆಫ್ ಕುಶಲಕರ್ಮಿಯಾಗಿದ್ದನು ಎಂಬುದನ್ನು ಸಂಶೋಧಕರ ಮಾತುಗಳೊಂದಿಗೆ ಉಲ್ಲೇಖಿಸಿ ಚರ್ಚಿಸಲಾಗಿದೆ.

ಅನ್ಯ ಕುಶಲಕರ್ಮಿ ವರ್ಗಗಳಲ್ಲಿ ಕುರುಬರು ಲಿಂಗಾಯತರು, ಕ್ಷತ್ರೀಯ, ಮರಾಠಾ, ಮಾದರ ಇತರೇ ಸಮುದಾಯದವರು ಪಾಂಚಾಳ ಕುಶಲಕರ್ಮಿ ಕುಟುಂಬಗಳ ಆಚಾರ-ವಿಚಾರ, ಸಂಸ್ಕೃತಿಯನ್ನು ಸ್ವಲ್ಪಮಟ್ಟಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೆ. ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಕುಶಲಕರ್ಮಿ ಕುಟುಂಬಗಳು ಮಾತ್ರ ಇದರಿಂದ ಸ್ವಲ್ಪಮಟ್ಟಿಗೆ ದೂರವಾಗಿರುತ್ತಾರೆ. ಆದರೆ ಗ್ರಾಮೀಣ ಪರಿಸರದ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಕುಶಲಕರ್ಮಿಗಳಲ್ಲಿ ಅಷ್ಟೊಂದು ವ್ಯತ್ಯಾಸಗಳು ಕಂಡುಬರುವುದಿಲ್ಲ. ನಾನು ಅಧ್ಯಯನಿಸಿದ ಹುಚ್ಚಾಡಿ ಕಂಬಾರ, ಮಲ್ಲಾಪೂರೆ, ಜೋತೆನ್ನವರ, ಮಾದರ, ಹೊಸಾಲಿ, ಚವ್ಹಾಣ, ಪವಾರ, ಮುಲ್ಲಾ ಮತ್ತು ನದಾಫ ಕುಟುಂಬಗಳು ಸಮುದಾಯದಿಂದ ವಿಭಿನ್ನವಾಗಿದ್ದರೂ ಕಸಬಿನಲ್ಲಿ ಒಂದೇ ಆಗಿದ್ದಾರೆ. ಇವರೆಲ್ಲರದು ಕುಶಲಕರ್ಮಿಗಳ ಕುಟುಂಬ. ಈ ಕುಶಲಕರ್ಮಿ ಕುಟುಂಬಗಳಲ್ಲಿ ಹಲವಾರು ಈ ಅಂಶಗಳಲ್ಲಿ ಸಾಮ್ಯತೆ ಕಂಡುಬರುತ್ತವೆ.

೧. ನಿತ್ಯದ ಕಾಯಕ ಬಡಿಗತನ ಅಥವಾ ಕಂಬಾರಿಕೆ

೨. ಕಾಯಕದ ಉಪಕರಣಗಳನ್ನು ಪೂಜಿಸಿ ಗೌರವಿಸುವುದು.

೩. ಹುಣ್ಣಿಮೆ-ಅಮವಾಸ್ಯೆ-ಯುಗಾದಿ ದಿನಗಳಂದು ಉಪಕರಣಗಳಿಗೆ ವಿಶೇಷ ಪೂಜೆ ಸಲ್ಲಿಸಿ ಕಾಯಕಕ್ಕೆ ವಿಶ್ರಾಂತಿ ನೀಡುವುದು.

೪. ಜಗಲಿಯ ಮೇಲೆ ಅವರವರ ಮನೆದೇವರ ಫೋಟೊಗಳೊಂದಿಗೆ ಶಿರಸಂಗಿ ಕಾಳಮ್ಮನ ಫೋಟೊ ಪೂಜಿಸುವುದು.

೫. ಕಾಯಕದ ಉಪಕರಣಗಳಿಗೆ ಸಿಹಿ ಅಡುಗೆಯನ್ನೇ ನೈವೇದ್ಯ ಅರ್ಪಿಸುವುದು.

ಈ ಎಲ್ಲ ಅಂಶಗಳನ್ನು ಅನ್ಯ ಕುಶಲಕರ್ಮಿಗಳು ಪಾಂಚಾಳ ಕುಶಲಕರ್ಮಿ ಸಂಪರ್ಕದಿಂದ ಪಡೆದುಕೊಂಡಿದ್ದಾರೆ. ಆದರೆ ಮದುವೆ-ಮುಂಜಿಗಳಲ್ಲಿ ಸಾಮ್ಯತೆಗಳು ಕಂಡುಬರುವುದಿಲ್ಲ.

ಪಾಂಚಾಳೇತರ ಸಮುದಾಯದ ಕುಶಲಕರ್ಮಿಗಳು ಉದ್ಯೋಗದಾತರಾದ ಜನಸಮುದಾಯ ದೊಂದಿಗೆ ಉತ್ತಮವಾದ ಸಂಬಂಧವನ್ನು ಹೊಂದಿರುತ್ತಾರೆ. ಜನರೊಂದಿಗೆ ಇವರು ಎಷ್ಟು ಹತ್ತಿರವಾಗಿ ರುತ್ತಾರೊ? ಅಷ್ಟೇ ಉದ್ಯೋಗಗಳು ಇವರಿಗೆ ಹೆಚ್ಚಳವಾಗಿರುತ್ತವೆ. ರೈತರು ಮೊದಲು ಪಾಂಚಾಳ ಕುಶಲಕರ್ಮಿಗಳಿಗೆ ಆದ್ಯತೆ ನೀಡುತ್ತಾರೆ. ಅವರಿಂದ ಸಕಾಲಕ್ಕೆ ಕೆಲಸಗಳು ಸಾಧ್ಯವಿಲ್ಲ ವೆಂಬ ಸಂಗತಿ ಅರಿತಾಗ ಅನ್ಯ ಕುಶಲಕರ್ಮಿಗಳತ್ತ ತೆರಳಿರುತ್ತಾರೆ. ಹೀಗಾಗಿ ಅನ್ಯ ಕುಶಲಕರ್ಮಿಗಳು ರೈತರನ್ನು ತುಂಬಾ ಗೌರವದಿಂದ ಕಾಣುತ್ತಾರೆ. ಅನ್ಯೂನ್ಯವಾಗಿರುತ್ತಾರೆ. ಜನಸಮುದಾಯವು ಕೂಡಾ ಅನ್ಯ ಕುಶಲಕರ್ಮಿಗಳ ಜೊತೆಗೆ ಅನುಕೂಲವಾಗಿಯೇ ಇರುತ್ತಾರೆ. ರೈತರಿಗೆ ಹೊತ್ತು-

ಹೊತ್ತಿಗೆ ಕೃಷಿಯೋಪಕರಣಗಳನ್ನು ತಯಾರಿಸುವ ಕುಶಲಕರ್ಮಿಗಳ ಅವಶ್ಯಕವಿರುತ್ತದೆ. ಹದಮೀರಿ ಬಿತ್ತಿದರೆ ಭೂಮಿ ಫಲಕೊಡಲಾರದೆಂಬ ನಂಬಿಕೆಯಲ್ಲಿರುವ ರೈತರು, ಸರಿಯಾದ ಸಮಯಕ್ಕೆ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವ ಅನ್ಯ ಕುಶಲಕರ್ಮಿಗಳನ್ನು ಆಯಗಾರನನ್ನಾಗಿ ನೇಮಿಸಿಕೊಳ್ಳುತ್ತಾರೆ.

ಪಾಂಚಾಳ ಕುಶಲಕರ್ಮಿಗೆ ಸಲ್ಲುವ ಗೌರವಗಳನ್ನು ಜನಸಮುದಾಯ ಪಾಂಚಾಳೇತರ ಕುಶಲಕರ್ಮಿಗಳಿಗೆ ನೀಡುತ್ತಾರೆ. ಇದರಿಂದ ಅನ್ಯ ಕುಶಲಕರ್ಮಿ ಇತರೇ ಜನಸಮುದಾಯದ ಪ್ರೀತಿ-ನಂಬಿಕೆಗೆ ಪಾತ್ರನಾಗುತ್ತಾನೆ. ಜನಸಮುದಾಯವನ್ನು ಓಲೈಸಿಕೊಳ್ಳುತ್ತಾನೆ. ಈ ಓಲೈಕೆಯೇ ಅನ್ಯ ಕುಶಲಕರ್ಮಿಯ ಉದ್ಯೋಗ ಸೃಷ್ಟಿಗೆ ಕಾರಣವು ಆಗುತ್ತದೆ. ಜನಸಮುದಾಯಕ್ಕೆ ತುರ್ತಾಗಿ ಕೆಲಸಗಳ ಅವಶ್ಯಕತೆಯಿರುತ್ತದೆ. ಅನ್ಯ ಕುಶಲಕರ್ಮಿಗೆ ಉದ್ಯೋಗಗಳು ಬೇಕಾಗಿರುತ್ತವೆ. ಹೀಗಾಗಿ ಜನರ ಮತ್ತು ಅನ್ಯ ಕುಶಲಕರ್ಮಿಗಳ ಮಧ್ಯೆ ಸಮಯಾಸಮಯವೆಂಬ ಒಡಂಬಡಿಕೆ ಏರ್ಪಡುತ್ತದೆ. ಆದರೆ ಕೆಲಸದಲ್ಲಿ ಗುಣಾತ್ಮಕತೆ ಹಿಂದುಳಿಯುತ್ತದೆ. ಅವಸರವೆಂಬುದು ಅಪಘಾತ ಮತ್ತು ಆಘಾತ ನೀಡುವಂತೆ, ತುರ್ತಾಗಿ ಮಾಡುವ ಕೆಲಸಗಳು ಹೆಚ್ಚು ಬಾಳಿಕೆಯನ್ನು ಹೊಂದುವುದಿಲ್ಲ. ಇತ್ತೀಚೆಗೆ ಜನರು ತಾಳ್ಮೆ ಕಳೆದುಕೊಂಡಿರುವುದರಿಂದ ವಸ್ತುಗಳ ತಾಳಿಕೆಯ ಕಡೆಗೆ ಗಮನ ಹರಿಸುತ್ತಿಲ್ಲ. 'ತಾಳಿದವನು ಬಾಳಿಯಾನು' ಕವಿವಾಣಿ ಮರೆತು ಹೋಗಿದೆ. ಒಟ್ಟಾಗಿ ಅನ್ಯ ಕುಶಲಕರ್ಮಿ ವರ್ಗಗಳು ಜನ ಸಮುದಾಯದೊಂದಿಗೆ ನಿಕಟವಾಗಿ ಬೆರೆತುಕೊಂಡಿದ್ದಾರೆ. ಮಾನವೀಯ ಸಂಬಂಧವಾಚಕಗಳನ್ನು ತಂದುಕೊಂಡಿದ್ದಾರೆ. ಪಾಂಚಾಳನ ಮನೆಯ ಮುಂದಿರುವ ಅಡ್ಡಿಬಡ್ಡಿಗೆ ಗೌರವ ಕೊಡುವ ಜನಸಮುದಾಯ, ಅನ್ಯಕುಶಲಕರ್ಮಿಯ ಮನೆ ಮುಂದಿರುವ ಅಡ್ಡಿಬಡ್ಡಿಗೆ ಕೈಮುಗಿಯುತ್ತಾರೆ. ಇದರಿಂದಾಗಿ ಅನ್ಯಕುಶಲಕರ್ಮಿಗೆ ತಾನು ಅನ್ಯಸಮುದಾಯದ ಕುಶಲಕರ್ಮಿ ಎಂಬ ಭಾವನೆಯೇ ಮೂಡುವುದಿಲ್ಲ. ಕಸಬನ್ನು ಭಕ್ತಿ-ಶ್ರದ್ಧೆ-ನಂಬಿಕೆಯಿಂದ ನಿರ್ವಹಿಸುತ್ತಾನೆ. ಉಪಕರಣಗಳನ್ನು ಶಿರಸಂಗಿ ಕಾಳಮ್ಮನೆಂದು ಆರಾಧಿಸುತ್ತಾನೆ. ಹಾಗೆಯೇ ಜನ ಸಮುದಾಯವು ಈ ಕಸುಬುದಾರರನ್ನು ಅನ್ಯ ಕುಶಲಕರ್ಮಿ ಗಳೆಂದು ಭಾವಿಸುವುದಿಲ್ಲ. ಅನ್ಯಕುಶಲಕರ್ಮಿ ಮತ್ತು ಜನಸಮುದಾಯಗಳ ಮಧ್ಯೆ ತಂದೆ-ಮಕ್ಕಳ ಅವಿನಾಭಾವ ಸಂಬಂಧಗಳು ಏರ್ಪಟ್ಟಿರುವುದನ್ನು ಅಧ್ಯಯನದಿಂದ ತಿಳಿಯಲಾಗುತ್ತದೆ.

ಕಾಳಮ್ಮನ ಆರಾಧನೆ

ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿಗ ಪಂಚವೃತ್ತಿಗಳ ಮೂಲ ಶಕ್ತಿಯೇ ಕಾಳಮ್ಮ. ಕಾಳಮ್ಮ ಬೆಂಕಿ(ಅಗ್ನಿ) ಸ್ವರೂಪಳು. ಕಂಬಾರ ವೃತ್ತಿಗೆ ಈಕೆ(ಬೆಂಕಿ) ಶಕ್ತಿಯಾಗದಿದ್ದರೆ ಕಸಬು ಇರುವುದಿಲ್ಲ. ಕಂಬಾರ ವೃತ್ತಿಗೆ ಪೂರಕವಾಗಿ ಬಡಿಗತನ, ಕಂಚುಗಾರಿಕೆ,

ಶಿಲ್ಪಗಾರಿಕೆ ಮತ್ತು ಅಕ್ಕಸಾಲಿಗತನ ಕಸಬುಗಳು ಬೆಳೆಯುತ್ತವೆ. ಕಂಬಾರ ವೃತ್ತಿಗೆ ಬೆಂಕಿಯ ಬಳಕೆ ಅತ್ಯಂತ ಅವಶ್ಯಕ. ಬೆಂಕಿಯನ್ನು ಕಾಳಮ್ಮನನ್ನಾಗಿ ಕಾಣುವಂಥವರು ಕುಶಲಕರ್ಮಿಗಳು. ಪಂಚವೃತ್ತಿಯ ಕಲಾರಾಧಕಳಾದ ಕಾಳಮ್ಮನನ್ನು ಆರಾಧಿಸುವ ಭಕ್ತ ಸಮೂಹ, ಕಾಯಕ ಜೀವಿಗಳನ್ನು ಕುಶಲಕರ್ಮಿ ವರ್ಗಗಳೆಂದು ಗುರುತಿಸಲಾಗುತ್ತದೆ. ಊರಿಗೆ ನೂರು ದಾರಿ ಎಂಬುವಂತೆ, ಕುಶಲಕರ್ಮಿ ಬೇರೆ ಬೇರೆಯಾದರೂ ಕುಶಲಕಲೆ ಒಂದೆ. ಕಲೆಯ ಮೂಲ ಶಕ್ತಿ ಕಾಳಮ್ಮ ಒಬ್ಬಳೆಯಾಗಿದ್ದಾಳೆ. ಕಾಳಮ್ಮನನ್ನು ನೆನೆಯದೆ ಹೋದರೆ ಕುಶಲಕರ್ಮಿಯಲ್ಲಿ ಕಲೆ ಅರಳುವುದು ಕಷ್ಟ. ಕಗ್ಗಲಿರಲಿ ಮರದ ಕೆಚ್ಚಿರಲಿ, ಕಬ್ಬಿಣ–ಚಿನ್ನ–ತಾಮ್ರವೇ ಇರಲಿ ಕಸಬಿನಲ್ಲಿ ತೊಡಗಿರುವಾಗ ಶಕ್ತಿಯ ಮೂಲ ಕಾಳಮ್ಮನನ್ನು ಒಮ್ಮೆ ನೆನೆದರೆ ಸಾಕು! ಕಲ್ಲು ಕಲೆಯಾಗುತ್ತದೆ. ಮರದ ಕೆಚ್ಚಿನಲಿ ಗೊಂಬೆ ನಿರ್ಮಾಣವಾಗುತ್ತದೆ. ಕಬ್ಬಿಣ ಚಿನ್ನ–ತಾಮ್ರಗಳಲ್ಲಿ ಆಯುಧಗಳು ತಯಾರಾಗುತ್ತವೆ. ಪ್ರತಿವಸ್ತುವಿನಲ್ಲಿ ಕಾಳಮ್ಮ ತಾಳಿಕೆ–ಬಾಳಿಕೆಯ ಮೂಲವಾಗುತ್ತಾಳೆ. ಕಾಳಮ್ಮನನ್ನು ಸ್ಮರಿಸದೆ ಯಾವ ವಸ್ತುಗಳನ್ನು ಕುಶಲಕರ್ಮಿ ತಯಾರಿಸಲು ಮುಂದಾಗುವುದಿಲ್ಲ. ಈ ಐದು ಬಗೆಯ ವೃತ್ತಿಯಿಂದ ತಯಾರಾಗುವ ಪ್ರತಿವಸ್ತುವಿನಲ್ಲಿ ಕಾಳಮ್ಮ ಶಕ್ತಿಯಾಗಿ ನೆಲೆಯೂರಿರುತ್ತಾಳೆ. ಈ ನಂಬಿಕೆ ಕುಶಲಕರ್ಮಿಗಳಲ್ಲಿ ಗಾಢವಾಗಿ ಉಳಿದುಕೊಂಡಿದೆ. ಕುಶಲಕರ್ಮಿಗಳಲ್ಲಿಯ ನಂಬಿಕೆ ಜನಸಮುದಾಯದಲ್ಲಿಯೂ ಬೇರೂರಿದೆ.

ಕಸಬು ಮತ್ತು ಕಸಬಿನ ಮೂಲ ಶಕ್ತಿ ಕಾಳಮ್ಮ ಒಂದೇ ಆಗಿದ್ದರೂ ಅವಳನ್ನು ಆರಾಧಿಸುವ, ಕಸಬನ್ನು ನಿರ್ವಹಿಸುವ ಕುಶಲಕರ್ಮಿವರ್ಗಗಳು ಬೇರೆ ಬೇರೆಯಾಗಿವೆ. ಪಾರಂಪರಿಕ ಕಸಬುದಾರರಾದ ಪಾಂಚಾಳ ಕುಶಲಕರ್ಮಿ ವರ್ಗ ಕಸಬು ಮತ್ತು ಕಾಳಮ್ಮನನ್ನು ಆರಾಧಿಸದೆ ಕಾಯಕವನ್ನು ಆರಂಭಿಸುವುದಿಲ್ಲ. ಕಾಳಮ್ಮನ ಆರಾಧನೆ ಇವರಲ್ಲಿ ತಲೆತಲಾಂತರದಿಂದ ಬಂದಿದೆ. ಇದರ ಜೊತೆಗೆ ಪಾರಂಪರಿಕರಲ್ಲದ ಕಸಬುದಾರರಿದ್ದಾರೆ. ಇವರಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ವೃತ್ತಿದಾರರಿದ್ದಾರೆ. ಒಂದು, ಎರಡು ಅಥವಾ ಮೂರು ತಲೆಮಾರಿನವರೆಗೆ ಈ ಬಗೆಯ ವೃತ್ತಿಗಳನ್ನು ನಿರ್ವಹಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಇವರನ್ನು ಅನ್ಯ ಕುಶಲಕರ್ಮಿ ವರ್ಗಗಳೆಂದು ಕರೆಯಲಾಗುತ್ತದೆ. ಈ ಅನ್ಯ ಕುಶಲಕರ್ಮಿಗಳಿಗೆ ಕಸಬು ಮತ್ತು ಕಾಳಮ್ಮ ಹೊಸದು ಎಂದೆನಿಸುತ್ತದೆ. ಅನ್ಯರು ಕಸಬನ್ನು ಆಳವಾಗಿ ಅರಿತುಕೊಳ್ಳುವಾಗ ಮಾತ್ರ ಕಾಳಮ್ಮನ ಶಕ್ತಿ ಅವರಿಗೆ ಅರಿವಿಗೆ ಬರುತ್ತದೆ. ತಾವು ಕಲಿತುಕೊಳ್ಳುವ ಕಲೆಯ ಹಿಂದೆ ಕಾಳಮ್ಮ ಇದ್ದಾಳೆಂಬ ವಿಶೇಷ ಜ್ಞಾನ ಅನ್ಯಕುಶಲಕರ್ಮಿಗಳಿಗೆ ಹೊಳೆಯುತ್ತದೆ. ಇದರಿಂದಾಗಿ ಅನ್ಯಕುಶಲ ಕರ್ಮಿಗಳು ಕಸಬನ್ನು ಕಲಿತುಕೊಳ್ಳುವುದರ ಮೂಲಕ ಕಾಳಮ್ಮನನ್ನು ಆರಾಧಿಸಲು ಆರಂಭಿಸುತ್ತಾರೆ.

ಆರಾಧನೆ ಎಂಬುದು ನೂರೆಂಟು ಬಗೆಯಲ್ಲಿ ಬೆಳೆಯುತ್ತದೆ. ಪೂಜೆ-ಮುನಸ್ಕಾರ, ಆಚಾರ-ವಿಚಾರ, ನಡೆ-ನುಡಿ, ಮಡಿ-ಮೈಲಿಗೆ, ಮಂತ್ರ-ಯಂತ್ರ, ಉಡುಗೆ-ತೊಡುಗೆ, ಬೆವರು-ರಕ್ತ ಹೀಗೆ ವಿವಿಧ ಸ್ವರೂಪವನ್ನ ಆರಾಧನೆ ಪಡೆದುಕೊಳ್ಳುತ್ತದೆ. ಅನ್ಯ ಕುಶಲಕರ್ಮಿಗಳು ಆರಾಧನೆಯ ವಿವಿಧ ಸ್ವರೂಪಗಳಲ್ಲಿ ಯಾವುದು ಅನುಕೂಲವೆಂದೆನಿಸುತ್ತದೆಯೋ ಆ ರೀತಿಯಲ್ಲಿ ಕಾಳಮ್ಮನನ್ನು ಆರಾಧಿಸುತ್ತಾರೆ. ಹಿಂದೂ ಕುಶಲಕರ್ಮಿಗಳಲ್ಲಿ ನಾನು ಅಧ್ಯಯನಿಸಿದ ೮ ಬಗೆಯ ಅನ್ಯ ಕುಶಲಕರ್ಮಿಗಳ ಕಾಳಮ್ಮನ ಆರಾಧನೆ ಹೆಚ್ಚು ಕಡಿಮೆ ಒಂದೇ ಆಗಿದೆ. ಪಾರಂಪರಿಕ ಕುಶಲಕರ್ಮಿ ಪಾಂಚಾಳರಂತೆ, ಮೂರ್ತಿ ಫೋಟೋಗಳನ್ನು ಪೂಜಿಸುವುದು, ಕುಂಕುಮ-ಗಂಧ ವಿಭೂತಿ ಲೇಪಿಸುವುದು, ಹೂಗಳಿಂದ ಅಲಂಕರಿಸುತ್ತಾರೆ. ಜಗಲಿ ಅಥವಾ ಪೂಜಾ ಸ್ಥಳವನ್ನು ಮಡಿಗೊಳಿಸುತ್ತಾರೆ. ರಂಗೋಲಿ ಹೋಯ್ದಿರುತ್ತಾರೆ. ದೂಪ-ದೀಪದಿಂದ ಬೆಳಗುತ್ತಾರೆ. ಸಿಹಿ ಅಡುಗೆ ನೈವೇದ್ಯ ಅರ್ಪಿಸುವುದು, ಶ್ರದ್ಧೆ ಭಕ್ತಿಯಿಂದ ನಮಿಸುವುದು ಮತ್ತು ಅಮವಾಸ್ಯೆ-ಯುಗಾದಿ ದಿನಗಳಲ್ಲಿ ಕಾಳಮ್ಮನ ನೆಲೆಯಾದ ಶಿರಸಂಗಿ ಕ್ಷೇತ್ರಕ್ಕೆ ತೆರಳಿ ದರ್ಶನ ಪಡೆಯುವುದರ ಮೂಲಕ ಕಸಬು ಮತ್ತು ಕಾಳಮ್ಮನನ್ನು ಅನ್ಯ ಕುಶಲಕರ್ಮಿಗಳು ಆರಾಧಿಸುವ ರೂಢಿಯನ್ನು ಬೆಳೆಸಿಕೊಂಡಿದ್ದಾರೆ.

ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಕುಶಲಕರ್ಮಿಗಳು ಕಾಳಮ್ಮನ ಆರಾಧನೆ ಇತರ ಅನ್ಯ ಸಮುದಾಯದ ಕುಶಲಕರ್ಮಿಗಳಿಗಿಂತ ಸ್ವಲ್ಪಮಟ್ಟಿಗೆ ಭಿನ್ನವೆಂದೆನಿಸುತ್ತದೆ. ವಿಶೇಷವಾಗಿ ಈ ಎರಡು ಸಮುದಾಯದಲ್ಲಿ ಮೂರ್ತಿ ಪೂಜೆ ಇರುವುದಿಲ್ಲ. ಆದರೆ ಫೋಟೋಗಳನ್ನು ಮನೆಯಲ್ಲಿ ಅಳವಡಿಸುತ್ತಾರೆ. ಮುಸ್ಲಿಂರಲ್ಲಿ ಹತ್ತಿಪ್ಪತ್ತು ವರ್ಷಗಳ ಹಿಂದೆ ದೂಪ-ದೀಪ; ಫಲ-ಪುಷ್ಪ, ತೆಂಗಿನಕಾಯಿ-ಸಿಹಿ ಅಡುಗೆ ನೈವೇದ್ಯ ಪೂಜಾ-ವಿಧಾನಗಳು ಬಳಕೆಯಲ್ಲಿದ್ದವು. ಇತ್ತೀಚೆಗೆ ಅವು ಕಡಿಮೆಯಾಗಿವೆ. ಬಹುತೇಕ ಚಿಕ್ಕ-ಚಿಕ್ಕ ಹಳ್ಳಿಗಳಲ್ಲಿ ವಾಸವಾಗಿರುವ ಮುಸ್ಲಿಂ ಮತ್ತು ಕ್ರೈಸ್ತ ಕುಶಲಕರ್ಮಿಗಳು ತಮಗೆ ತಿಳಿದಂತೆ ಕಸಬು ಮತ್ತು ಕಾಳಮ್ಮನನ್ನು ಆರಾಧಿಸುತ್ತಾರೆ. ನಾನು ಅಧ್ಯಯನಿಸಿದ ಮುಲ್ಲಾ ಕುಟುಂಬವನ್ನು ಗಮನಿಸಿದಾಗ, ಅವರು ಕಸಬಿನ ಉಪಕರಣಗಳನ್ನು ಸ್ವಚ್ಛವಾಗಿ ತೊಳೆದು, ಪುಷ್ಪಾದಿಗಳಿಂದ ಅಲಂಕರಿಸಿ, ದೂಪ-ದೀಪದಿಂದ ಬೆಳಗಿ ತೆಂಗಿನಕಾಯಿ ಒಡೆದು ಬ್ಯಾಳಿ-ಬೆಲ್ಲ ಕುದಿಸಿ ಹೋಳಿಗೆ-ಕಡಬು ನೈವೇದ್ಯ ಅರ್ಪಿಸುತ್ತಿದ್ದರೆಂಬ ಸಂಗತಿಯ ಮೇಲೆ ಬೆಳಕು ಹರಿಸಲಾಗಿದೆ. ಅಷ್ಟೇ ಅಲ್ಲ! ಜೀವನದಲ್ಲಿ ಒಮ್ಮೆಯಾದರೂ ಶಿರಸಂಗಿ ಕಾಳಮ್ಮನ ಜಾತ್ರೆಗೆ ಹೋಗಿ ಬಂದಿರುವುದು ನಮಗೆ ತಿಳಿದುಬರುತ್ತದೆ. ಮುಸ್ಲೀಂ ಮತ್ತು ಕ್ರೈಸ್ತ ಕುಶಲಕರ್ಮಿಗಳು ಕ್ರಮವಾಗಿ ಶುಕ್ರವಾರ ಮಸೀದಿಗೆ, ರವಿವಾರ ಚರ್ಚಿಗೆ ಹೋಗಿ ಬಂದರೂ ಕಸಬಿನ ಕಾರಣವಾಗಿ ಕಾಳಮ್ಮನನ್ನು ಆರಾಧಿಸುತ್ತಾರೆ. ಕುಶಲಕರ್ಮಿ ವೃತ್ತಿಯ ಬಗ್ಗೆ ಅವರಲ್ಲಿ ಭಕ್ತಿ ಮತ್ತು ಕಾಳಜಿ. ಇದೆಯೆಂಬುದು ಕಂಡುಬರುತ್ತದೆ.

ಕುಶಲಕರ್ಮಿಗಳ ಕಾಳಮ್ಮನ ಆರಾಧನೆಯಲ್ಲಿ ಮಹತ್ವದೆನಿಸುವಂತದ್ದು ಬೆವರು–ರಕ್ತ ಸ್ವರೂಪದ ಆರಾಧನೆ, ಬೆವರು–ಶ್ರಮಜೀವಿಗಳ ಸಂಕೇತ, ಕುಶಲಕರ್ಮಿಗಳೆಲ್ಲ ಶ್ರಮದಾಯಕರು. ಕೈಯಲ್ಲಿ ಉಳಿ, ಬಾಚಿ, ಸುತ್ತಿಗೆ, ಕೊಡತಿ ಹಿಡಿದರೆ ಕುಶಲಕರ್ಮಿಯು ಬೆವರಿಗೆ ಆಹ್ವಾನ ನೀಡಿದಂತೆ ದುಡಿಯುವ ಪ್ರತಿಕ್ಷಣವು ಕುಶಲಕರ್ಮಿ ಭೂಮಿಗೆ ಬೆವರು ಸುರಿಸುತ್ತಿರುತ್ತಾನೆ. ರೈತ ಭೂಮಿಯಲ್ಲಿ ಬೆವರು ಸುರಿಸುವಂತೆ. ಆ ಬೆವರಿಗೆ ಒಂದು ಬೆಲೆಯಿದೆ. ರೈತನ ಬೆನ್ನೆಲುಬಾದ ಕುಶಲಕರ್ಮಿ ಬೆವರು ಸುರಿಸುವವನ ಸಹೋದರ. ಕುಶಲಕರ್ಮಿಯ ಪ್ರತಿಯೊಂದು ಬೆವರು ಹಣಿಗೆ ಬೆಲೆಯಿದೆ. ಕುಶಲಕರ್ಮಿಯ ಬೆವರು ಒಟ್ಟುಗೂಡಿದಾಗ ಅದೊಂದು ಕಲೆಯಾಗುತ್ತದೆ. ಬೆವರು ಸುರಿಸುವುದು, ಶ್ರಮವಹಿಸಿ ದುಡಿಯುವುದು ಕುಶಲಕರ್ಮಿಯ ವೃತ್ತಿಧರ್ಮವಾಗಿದೆ. ರಕ್ತಾರ್ಪಣೆಯೂ ಆರಾಧನೆಯ ಒಂದು ಸ್ವರೂಪ. ರಾಕ್ಷಸರ ರುಂಡವನ್ನು ಚಂಡಾಡಿದ ಕಾಳಮ್ಮ–ಮಹಾಕಾಳಿಯಾಗಿ ರಕ್ತವನ್ನು ಸ್ವೀಕರಿಸಿ ತೃಪ್ತಳಾದವಳು. ಕಾಳಮ್ಮನಿಗೆ ಆಗೀಗ ರಕ್ತ ಅರ್ಪಿಸುವುದು ಆರಾಧನೆಯ ಒಂದು ಭಾಗವಾಗಿ ಬೆಳೆದು ಬಂದಿರುವುದರ ಬಗ್ಗೆ ಸೂಕ್ಷ್ಮವಾಗಿ ಗಮನಿಸಲಾಗಿದೆ. ಕುಶಲಕರ್ಮಿಯ ರಕ್ತಾರ್ಪಣೆ ಆರಾಧನೆ ಇದು ಮೂಢನಂಬಿಕೆಯಿಂದ ಕೂಡಿದ್ದಲ್ಲ. ಈ ಆರಾಧನೆಗೆ ಪರಪ್ರಾಣಿಯ ರಕ್ತವನ್ನು ಕುಶಲಕರ್ಮಿ ಪಡೆಯುವುದಿಲ್ಲ ಇದು ಸ್ವರಕ್ತಾರ್ಪಣೆ. ಭಕ್ತಿ–ಭಾವದ ದ್ಯೋತಕ. ೧೨ನೇ ಶತಮಾನದಲ್ಲಿ ಬಸವಣ್ಣನವರಿಗೆ ಸ್ವಂತಃ ತೊಡೆಯ ಚರ್ಮದಿಂದ ಪಾದರಕ್ಷೆಗಳನ್ನು ಸಿದ್ಧಪಡಿಸಿಕೊಟ್ಟ ಹರಳಯ್ಯನ ಭಕ್ತಿ ಪರಾಕಾಷ್ಠೆಯನ್ನು ಸೂಚಿಸುತ್ತದೆ. ಹಾಗೆಯೇ ಕುಶಲಕರ್ಮಿಯ ಸ್ವರಕ್ತಾರ್ಪಣೆ ಆರಾಧನೆ ಅವರು ಕಾಳಮ್ಮನ ಮೇಲಿಟ್ಟಿರುವ ಭಕ್ತಿ–ಭಾವದ ಉತ್ತುಂಗತೆಯನ್ನು ಸೂಚಿಸುತ್ತದೆ. ರಕ್ತ ಅರ್ಪಣೆಯ ಮೂಲಕವು ಕುಶಲಕರ್ಮಿಗಳು ಕಾಳಮ್ಮನನ್ನು ಆರಾಧಿಸಿದ ಕ್ರಮವನ್ನು ವಿವೇಚಿಸುವುದಕ್ಕೆ ಪ್ರಯತ್ನಿಸಿದ್ದೇನೆ. ನಿತ್ಯವು ಕಾಯಕ ಆರಂಭಿಸುವ ಮುನ್ನ ಕುಶಲಕರ್ಮಿಗಳು ಉಪಕರಣಗಳನ್ನು ಹರಿತಗೊಳಿಸುತ್ತಾರೆ. ಪ್ರಾಸಂಗೀಕವಾಗಿ ದಿನಕ್ಕೆ ೨–೩ ಸಾರಿ ಉಪಕರಣಗಳನ್ನು ಹರಿತಗೊಳಿಸಲಾಗುತ್ತದೆ. ಉಪಕರಣಗಳನ್ನು ಈ ದೃಷ್ಟಿಯಿಂದಲೆ ಕಾಳಮ್ಮ ಎಂದು ಕರೆದಿರಬೇಕು. ಹರಿತವಾದ ಉಳಿಬಾಚಿ, ಉಚುಗೊಡ್ಡ ಅಲಗುಗಳು ಕಾಳಮ್ಮನ ಕೆನ್ನಾಲಿಗೆಯಂತೆ ಕಂಗೊಳಿಸುತ್ತವೆ. ಹರಿತವಾದ ಆಯುಧಗಳೊಂದಿಗೆ ಕುಶಲಕರ್ಮಿ ಸದಾ ಜಾಗೃತವಾಗಿ ಕಾರ್ಯನಿರ್ವಹಿಸ ಬೇಕಾಗುತ್ತದೆ. ತುಸು ಮನ ಜಾರಿದರೆ–

ಕೈ ತಪ್ಪಿ ಕೆತ್ತಲು ಕಾಲಿಂಗೆ ಮೂಲ
ಮಾತು ತಪ್ಪಿನಡೆಯಲು ಬಾಯಿಗೆ ಮೂಲ
ವ್ರತ ಹೀನನ ನೆರೆಯಲು ನರಕಕ್ಕೆ ಮೂಲ
ಕರ್ಮಹರ ಕಾಳೇಶ್ವರಾ[೧೧]

ಬಾಚಿ ಕಾಯಕದ ಬಸವಯ್ಯನ ಧರ್ಮಪತ್ನಿ ವಚನಕಾರ್ತಿ ಕಾಳವ್ವೆ ಹೇಳುವ ಈ ಅನುಭವದ ನುಡಿಗಳು ಕುಶಲಕರ್ಮಿಗೆ ಆಗುವ ಅನಾಹುತಗಳು ತಿಳಿಸುತ್ತವೆ. ಕೈ, ಕಣ್ಣು, ಮನ ಕಾಯಕದಲ್ಲಿ ನಿರತವಾಗಿರುವಾಗ ಏಕಾಗ್ರತೆಯನ್ನು ಕಳೆದುಕೊಂಡರೆ ಪ್ರಾಣಕ್ಕೂ ಅಪಾಯ ತಪ್ಪಿದ್ದಲ್ಲ. ಕುಶಲಕರ್ಮಗಾರಿಕೆ ಜಾಗ್ರತದ ಕಾಯಕ. ಕಾಯಕದಲ್ಲಿ ನಿರತನಾದಾಗ ಗುರು–ಲಿಂಗ–ಜಂಗಮರನ್ನು ಮರೆಯುವಂತೆ ಕಸಬಿನಲ್ಲಿ ತೊಡಗಿದಾಗ ಮೈತುಂಬ ಕಣ್ಣಾಗಿಸಬೇಕು. ಕಣ್ಣಲ್ಲಿ ನಿರ್ಮಿತ ವಸ್ತು ಮಾತ್ರ ತುಂಬಿಕೊಂಡಿರಬೇಕು. ಅಜಾಗರೂಕರಾದರೆ ಕಟ್ಟಿಗೆ ತುಂಡರಿಸುವ ಉಳಿ–ಬಾಚಿ ಕುಶಲಕರ್ಮಿಯ ದೇಹವನ್ನೇ ಕತ್ತರಿಸುತ್ತವೆ.

ಕುಶಲಕರ್ಮಿ ಗ್ರಾಮ ಸಂಸ್ಕೃತಿಯ ಭಾಗಿದಾರ. ಅವನಲ್ಲಿ ರೀತಿ–ನೀತಿ, ಧರ್ಮ, ಮಾನವೀಯತೆ ತುಂಬಿರುತ್ತದೆ. ಇಂತಹ ಕರ್ಮಕಾರನ ಮನಸ್ಸು ಜಾರಿದರೆ ಪ್ರಾಣಕ್ಕೆ ಮೂಲವಾಗುತ್ತದೆ. ಧರ್ಮದ ಕೊಡತಿಯ ಪೆಟ್ಟು ಉಳಿಯ ಮೇಲೆ ಬಿದ್ದರೆ ಕರ್ಮದ ಕಟ್ಟಿಗೆಯನ್ನು ತುಂಡರಿಸುತ್ತದೆ. ಅಧರ್ಮದ ಕೊಡತಿಯ ಪೆಟ್ಟು ಉಳಿಯ ಮೇಲೆ ಬಿದ್ದರೆ ಗರ್ವದ ದೇಹವನ್ನು ಕತ್ತರಿಸುತ್ತದೆ. ಕುಶಲಕರ್ಮಿಯ ದೇಹದ ರಕ್ತ ಚಿಲುಮೆಯಂತೆ ಪುಟಿದು ಭೂಮಿಗೆ ಬೀಳುತ್ತದೆ. ಕಾಳಮ್ಮನೆನ್ನುವ ಉಪಕರಣಗಳ ಕೆನ್ನಾಲಿಗೆಯಂತಿರುವ ಉಳಿ–ಬಾಚಿಗಳ ತುದಿ, ಕುಶಲಕರ್ಮಿಯ ರಕ್ತವನ್ನು ಸ್ವೀಕರಿಸುತ್ತದೆ. ಈ ಮೂಲಕ ಕುಶಲಕರ್ಮಿ ಕಾಳಮ್ಮನಿಗೆ ರಕ್ತಾರ್ಪಣೆಯ ಆರಾಧನೆಯನ್ನು ಮಾಡುತ್ತಾನೆ.

ಬೆವರು ಕಡ್ಡಾಯದ ಆರಾಧನೆಯಾದರೆ ರಕ್ತ ಆಕಸ್ಮಿಕದ ಅರ್ಪಣೆ. 'ಬೆವರು–ರಕ್ತ' ಆರಾಧನೆಯ ಸ್ವರೂಪವನ್ನು ಈ ಹಿನ್ನೆಲೆಯಲ್ಲಿ ವಿವೇಚನೆಗೊಳಪಡಿಸಬೇಕಾಗಿದೆ. ನಾನು ಕುಶಲಕರ್ಮಿಯ ಕುಟುಂಬದವನಾಗಿದ್ದು, 'ಬೆವರು–ರಕ್ತ' ಸ್ವರೂಪದ ಆರಾಧನೆ ನನ್ನಿಂದಲೂ ಸಾಧ್ಯವಾಗಿದೆ. ಗಾಯ ಮಾಯವಾದರೂ ಅದರ ಗುರುತುಗಳು ಇಂದಿಗೂ ನನ್ನಲ್ಲಿ ಉಳಿದು ಕೊಂಡಿವೆ. ಈ ಸ್ವರೂಪದ ಆರಾಧನೆ ಆರಂಭದಲ್ಲಿ ನನಗೆ ಹೊಳೆದಿರಲಿಲ್ಲ. ಆದರೆ ನಾನು ಸಂಶೋಧನಾ ವಿದ್ಯಾರ್ಥಿಯಾದ ಮೇಲೆ 'ಬೆವರು–ರಕ್ತ' ಅರ್ಪಣಾ ಸ್ವರೂಪದ ಆರಾಧನೆ ಶಿರಸಂಗಿ ಕಾಳಮ್ಮನ ಆರಾಧನೆಯ ಒಂದು ಭಾಗವಾಗಿದೆ ಎಂದು ಸ್ಪಷ್ಟಪಡಿಸುತ್ತೇನೆ. ಈ ಮಾತು ಕೇವಲ ಪಾರಂಪರಿಕ ಕುಶಲಕರ್ಮಿಗಳಿಗೆ ಮಾತ್ರ ಅನ್ವಯವಾಗುವುದಿಲ್ಲ. ಅನ್ಯ ಕುಶಲಕರ್ಮಿಗಳು 'ಬೆವರು–ರಕ್ತ' ಅರ್ಪಿಸುವುದರ ಮೂಲಕ ಕಾಳಮ್ಮನನ್ನು ಆರಾಧಿಸುತ್ತಾರೆ.

ಪಾರಂಪರಿಕ ಕುಶಲಕರ್ಮಿಗಳಲ್ಲದ ಅನ್ಯ ಸಮುದಾಯದ ಕುಶಲಕರ್ಮಿಗಳು ಜೀವನೋಪಾಯಕ್ಕಾಗಿ ಐದು ಬಗೆಯ ಕಸಬುದಾರಿಕೆಯನ್ನು ಕಲಿತುಕೊಂಡು ನಿರ್ವಹಿಸುತ್ತಿದ್ದಾರೆ.

ಕೃಷಿಯೋಪಕರಣಗಳಿಂದಿಡಿದು ಇಂದಿನ ಆಧುನಿಕ ವಸ್ತುಗಳವರೆಗೂ ಅನ್ಯಕುಶಲಕರ್ಮಿಗಳು ವಸ್ತುಗಳನ್ನು ತಯಾರಿಸುತ್ತಿದ್ದಾರೆ. ವೃತ್ತಿಗೆ ಜಾತಿ-ಧರ್ಮಗಳು ಅಡ್ಡಿಯಾಗಿಲ್ಲ. ಯಾವುದೇ ಜಾತಿ ಧರ್ಮಗಳಲ್ಲಿದ್ದರೂ ಕುಶಲಕರ್ಮಿಗಳು ಕಸಬಿನ ಕುರಿತು ಭಕ್ತಿ-ಶ್ರದ್ಧೆ-ನೈಪುಣ್ಯತೆಯನ್ನು ಹೊಂದಿದ್ದಾರೆ. ಇವರು ಜನ ಸಮುದಾಯದೊಂದಿಗೂ ಉತ್ತಮವಾದ ವೃತ್ತಿ ಸಂಬಂಧಗಳನ್ನು ಕಟ್ಟಿಕೊಂಡಿದ್ದಾರೆ. ಜನ ಸಮುದಾಯಕ್ಕೆ ಸಕಾಲದಲ್ಲಿ ವಸ್ತುಗಳನ್ನು ತಯಾರಿಸಿ ಕೊಡುತ್ತಾರೆ. ಇದರಿಂದ ಜನಸಮುದಾಯದ ನಂಬಿಕೆಯನ್ನು ಕಾಯ್ದುಕೊಂಡಿದ್ದಾರೆ. ಜೀವನೋಪಾಯಕ್ಕಾಗಿ ಆಯ್ಕೆ ಮಾಡಿಕೊಂಡ ಕುಶಲಕರ್ಮಗಾರಿಕೆ ಮೂಲಶಕ್ತಿಯಾಗಿರುವ ಕಾಳಮ್ಮನನ್ನು ಅನ್ಯಕುಶಲ ಕರ್ಮಿಗಳು ಅನ್ಯಕುಶಲಕರ್ಮಿಗಳು ಆರಾಧಿಸುತ್ತಿದ್ದಾರೆ. ಕಾಳಮ್ಮ ಕೇವಲ ಪಾಂಚಾಳರ ಕುಲದೇವತೆ ಯಷ್ಟೇ ಅಲ್ಲ! ಜಗತ್ತಿನ ಕುಶಲಕಲೆಯ ಶಕ್ತಿಯಾಗಿದ್ದಾಳೆ. ಅನ್ಯ ಕುಶಲಕರ್ಮಿಗಳ ಆರಾಧಕಳಾಗಿ ದ್ದಾಳೆ. ಕಾಳಮ್ಮ ಅನ್ಯ ಕುಶಲಕರ್ಮಿಗಳ ಭಕ್ತಿ-ಭಾವದ ಆರಾಧನೆಯ ದೇವತೆ.

ಕೊನೆಟಿಪ್ಪಣಿ

೧. ಬಸವರಾಜ ಎಲ್.(ಸಂ), **ಸರ್ವಜ್ಞನ ವಚನಗಳು,** ಗೀತಾಬುಕ್ ಹೌಸ್, ಮೈಸೂರು, ೧೯೯೮, ಪು.೧೬೦.

೨. ಕೃಷ್ಣಮೂರ್ತಿ ಕೆ.ವಿ.(ಮೂಲ), ಸೂರ್ಯನಾರಾಯಣಾಚಾರ್ಯ ವಿ.ಎಸ್.(ಅನು), **ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು,** ಸಮಾಜಶಾಸ್ತ್ರೀಯ ಅಧ್ಯಯನ, ೨೦೧೨, ಪು.೫೦

೩. ಅದೇ, ಪು.೫೬

೪. ಕೆ.ಸಿದ್ಧಪ್ಪ, **ಆರ್ಥಿಕ ವಿಚಾರಗಳು, ರೇವಣಸಿದ್ಧ ಪರಂಪರೆ,** ೨೦೧೪, ಪು.೨೮೫.

೫. ಕಮ್ಮಲಾ ಹೆಮ್ಮಿಗೆ, **ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ ಒಂದು ಸಾಂಸ್ಕೃತಿಕ ಅಧ್ಯಯನ,** ೧೯೯೮, ಪು.೧೧೨

೬. ಸಂದರ್ಶನ, ಮಂಜುನಾಥ ಮಹಾದೇವಪ್ಪ ಮಾದರ, ಸಾ.ಕಾತ್ರಾಳ, ವಯಸ್ಸು ೩೦, ದಿನಾಂಕ ೨೮-೮-೨೦೧೬.

೭. ಭಗವತ್ ಶರಣ ಉಪಾಧ್ಯಾಯ(ಮೂಲ), ಎಚ್.ಎಸ್.ಗೋಪಾಲರಾವ್(ಅನು), **ಭಾರತೀಯ ಬಹುಮುಖಿ ಸಂಸ್ಕೃತಿ,** ೨೦೧೧, ಪು.೮೯.

೮. ಅದೇ, ಪು.೯೨

೯. ಆರ್.ಜಿ.ಶ್ಯಾನಭಾಗ, **ಉತ್ತರ ಕನ್ನಡದಲ್ಲಿ ಬಡಿಗತನ, ಗ್ರಾಮೀಣ ವೃತ್ತಿಗಳು**, ೨೦೦೦, ಪು.೨೨೮.

೧೦. ಅದೇ, ಪು.೨೪೪.

೧೧. ವೀರೇಶ ಬಡಿಗೇರ, **ಬಾಚಿ ಕಾಯಕದ ಬಸವಯ್ಯ, ವೃತ್ತಿ ಹಾಗೂ ತತ್ವ ಮೀಮಾಂಸೆ**, ೨೦೦೭, ಪು.೬೦.

ಅಧ್ಯಾಯ ಐದು

ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಮಹತ್ವ

ಅಧ್ಯಾಯ ಐದು

ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಮಹತ್ವ

ಒಂದು ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ಅಭ್ಯಸಿಸುವಾಗ ಅದನ್ನು ಎರಡು ವಿಧದಲ್ಲಿ ಗುರುತಿಸುತ್ತೇವೆ. ಒಂದು ಆ ಪ್ರದೇಶದ ಮತ್ತು ಅಲ್ಲಿರುವ ದೇವತೆಯ ಕುರಿತಾಗಿ ಚರಿತ್ರೆಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಮಹತ್ವವನ್ನು ತಿಳಿದುಕೊಂಡರೆ, ಎರಡನೆಯದು ಪ್ರದೇಶದ ದೇವತೆಯ ಹಬ್ಬ-ಜಾತ್ರೆ-ಉತ್ಸವ ಮುಂತಾದ ಸಂಸ್ಕೃತಿಗೆ ಸಂಬಂಧಿಸಿದಂತೆ ಆ ಪ್ರದೇಶದಲ್ಲಿ ವಾಸವಾಗಿರುವ ದೇವತೆಯ ಸಾಂಸ್ಕೃತಿಕ ಮಹತ್ವವನ್ನು ಅರ್ಥೈಸಿಕೊಳ್ಳಲಾಗುತ್ತದೆ. ಚರಿತ್ರೆಗೆ ಸಂಬಂಧಿಸಿದ ಸಾಂಸ್ಕೃತಿಕತೆಯಲ್ಲಿ ತಮ್ಮ ಪರಂಪರೆಯ ಹೊರ ನೋಟಗಳನ್ನು ಕಾಣುತ್ತೇವೆ. ಆದರೆ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನದಲ್ಲಿ ಮನುಷ್ಯರ ಭಾವನೆಗಳನ್ನು ತಿಳಿಸಿ ಕೊಡುವ ಪ್ರಯತ್ನವಾಗುತ್ತದೆ. ಮೈಗಿಂತ ಮನಸ್ಸು ಮುಖ್ಯ, ಮನಸ್ಸಿದ್ದರೆ ಮಾರ್ಗ ಎನ್ನುವಂತೆ ಶಿರಸಂಗಿಯ ಕಾಳಮ್ಮನ ಕುರಿತಾದ ಸಾಂಸ್ಕೃತಿಕ ಮಹತ್ವವನ್ನು ತಿಳಿದುಕೊಳ್ಳುವ ನನ್ನ ಅಧ್ಯಯನವು ಮನಸ್ಸಿನ ಭಾವನೆಗಳನ್ನು ತೋರ್ಪಡಿಸುವ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನವಾಗಿದೆ. ಸಾಂಸ್ಕೃತಿಕ ಶೋಧನೆಯಲ್ಲಿ "ಒಂದು ಚರಿತ್ರೆಗೆ ಸಂಬಂಧಿಸಿದ್ದುದು ಇನ್ನೊಂದು ಸಂಸ್ಕೃತಿಗೆ ಸಂಬಂಧಿಸಿದುದು. ಸಾಂಗತಿಕ(ಚರಿತೆ) ಶೋಧ ವಿಷಯದ ಸ್ಥೂಲ ತನುಪಾತಳಿಯ ಮೇಲೆ ನಡೆಯುವಂಥದ್ದು.... ಅಲ್ಲಿ ನಮ್ಮ ಪರಂಪರೆಯ ಮೈ ಕಾಣಿಸುತ್ತದೆಯೇ ಹೊರತು ಮನಸ್ಸು ಕಾಣುವುದಿಲ್ಲ. ಆದರೆ ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನೆಯಲ್ಲಿ ಕಾರಣ ತನುವನ್ನು ಅಂದರೆ ಮನಷ್ಯರ ಭಾವವನ್ನು ತೆರೆದು ತೋರುತ್ತದೆ."[೧] ಈಗಾಗಲೇ ಚಾರಿತ್ರಿಕ ದೃಷ್ಟಿಯಿಂದ ಡಾ.ವಾಸುದೇವ ಬಡಿಗೇರ ಅವರು ಸಾಂಸ್ಕೃತಿಕ ವಿಚಾರಗಳನ್ನು ತಮ್ಮ 'ಶಿರಸಂಗಿ ಕಾಳಮ್ಮ' ಕೃತಿಯಲ್ಲಿ ಹೇಳಿದ್ದಾರೆ. ಆದರೆ ನಾನು ನನ್ನ ಈ 'ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಮಹತ್ವ' ಅಧ್ಯಾಯದಲ್ಲಿ ಸಂಸ್ಕೃತಿಗೆ ಸಂಬಂಧಿಸಿದ ಮಹತ್ವಗಳನ್ನು ಚರ್ಚಿಸಿದ್ದೇನೆ.

"ದೇವಾಲಯ ಸಂಸ್ಕೃತಿಯ ತವರು' ಎಂಬ ಹೆಗ್ಗಳಿಕೆ ಪಡೆದಿರುವ ಕರ್ನಾಟಕದಲ್ಲಿ, ದೇವಾಲಯಗಳ ಆರಂಭ ಮತ್ತು ವಿಕಾಸದ ಮಹತ್ವಗಳನ್ನು ಶಾಸ್ತ್ರೀಯವಾಗಿ ವಿವರಿಸುವ ಹಲವು ಪ್ರಯತ್ನಗಳು ನಡೆದಿದೆ."[೨] ಒಂದು ಪ್ರದೇಶದಲ್ಲಿ ಹುಟ್ಟಿಕೊಂಡ ದೇವಾಲಯಗಳು ಮತ್ತು ಅದರ ಸುತ್ತ-ಮುತ್ತಲಿನ ಸುಂದರ ಪರಿಸರವು ಸಂಸ್ಕೃತಿಯ ತವರಿನಂತೆ ಕಾಣುತ್ತದೆ. ದೇವಾಲಯಗಳು ಇಷ್ಟೊಂದು ಸುಸಂಸ್ಕೃತತೆಯನ್ನು ತೋರುವುದಾದರೆ ದೇವಾಲಯದ ಒಳಗಿರುವ ಶಿಲ್ಪಗಳು ಸಂಸ್ಕೃತಿಯ ಶಕ್ತಿಯಾಗಿ ಪ್ರಭಾವಿಸುತ್ತವೆ. ದೇವಾಲಯ ಮತ್ತು ಶಿಲ್ಪ ಸಂಸ್ಕೃತಿಯ ನೆಲೆಯಾಗಿರುವಾಗ, ಇವುಗಳನ್ನು ರೂಪಿಸುವ 'ಕುಶಲಕರ್ಮಿಗಳು ಸಂಸ್ಕೃತಿಯ ರೂವಾರಿ' ಗಳಾಗಿದ್ದಾರೆ.

ಮಾತೃ ದೇವತಾರಾಧನೆ

ಭಾರತದಂಥಹ ಕೃಷಿಯಾಧಾರಿತ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಜನಸಮುದಾಯ ಒಂದು ಹಂತದಲ್ಲಿ ಗ್ರಾಮದೇವತೆಗಳನ್ನು ಕಟ್ಟಿಕೊಂಡರು. ತಮ್ಮ ಜೀವನಾನುಭವಗಳಿಂದ ದೇವತೆಗಳಿಗೆ ಕಥೆಗಳನ್ನು ಹೊಂದಿಸಿದರು. "ಅನೇಕ ಗ್ರಾಮ ದೇವತೆಗಳು ಅತಿ ಪ್ರಾಚೀನವಾದ ಭೂಮಿ ಪೂಜೆ ಅಥವಾ ಮಾತೃ ಪೂಜೆಯ ಕುರುಹುಗಳಲ್ಲದೆ ಬೇರೆಯಲ್ಲ."[೩] ಒಂದು ಕಾಲದಲ್ಲಿ ಹುಟ್ಟಿಕೊಂಡ ಗ್ರಾಮದೇವತೆಗಳೇ ಫಲವಂತಿಕೆಯನ್ನು ಕೊಡುವ ಮಾತೃದೇವತೆಗಳಾಗಿರುವ ಸಾಧ್ಯತೆಗಳಿವೆ. ಭಾರತದಲ್ಲಿ ಕೃಷಿ ಚಟುವಟಿಕೆಗಳು ಆರಂಭಗೊಂಡಿರುವುದು ಮಹಿಳೆಯಿಂದಲೇ. ಪುರುಷನಾದವನು ಬೇಟೆಯನ್ನಾಡುತ್ತ ಬೆಟ್ಟ-ಕಾಡುಗಳತ್ತ ಸಾಗಿದಾಗ, ಮಹಿಳೆ ಸ್ಥಳೀಯ ಭೂಮಿಯನ್ನು ಅಗೆದು ಗೆಡ್ಡೆ-ಗೆಣಸುಗಳನ್ನು ಹುಡುಕಿ, ಆಹಾರ ಸಂಗ್ರಹಿಸುವ ಕಾರ್ಯ ಆರಂಭಿಸುತ್ತಾಳೆ. ಭೂಮಿಯಿಂದ ಫಲದೊರೆಯುವುದೆಂದು ತಿಳಿದು ನಿಧಾನವಾಗಿ ಭೂಮಿಯಲ್ಲಿ ಬೀಜಗಳನ್ನು ಊರುವುದರ ಮೂಲಕ ಕೃಷಿ ಚಟುವಟಿಕೆಗಳನ್ನು ಆರಂಭಿಸುತ್ತಾಳೆ. ಇಂಥಹ ಕೃಷಿ ಜನಾಂಗದ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಜಾರಿಗೆ ಬಂದಿತು. ಇದರ ಪರಿಣಾಮವಾಗಿ ಇಡೀ ಕುಟುಂಬ ವ್ಯವಸ್ಥೆ ಮಹಿಳೆಯರ ನಿಯಂತ್ರಣದಲ್ಲಿ ಉಳಿಯಿತು. ಇದರಿಂದಾಗಿ ಮಕ್ಕಳು ತಂದೆಗಿಂತ ತಾಯಿಯನ್ನೇ ಹೆಚ್ಚಾಗಿ ಗುರುತಿಸಿರುವ ವ್ಯವಸ್ಥೆಗಳನ್ನು ನೋಡಿದರೆ, ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಮೊದಲು ಆರಂಭವಾದದ್ದು ಎಂಬುದು ಸ್ಪಷ್ಟವೆನಿಸುತ್ತದೆ.

ಆಹಾರ ಸಂಗ್ರಹಣೆಯಲ್ಲಿ ಮಹಿಳೆ ಪ್ರಧಾನ ಪಾತ್ರವಹಿಸಿದ್ದಳು. ಮಕ್ಕಳನ್ನು ಹೆರುವುದರ ಜೊತೆ ಅವುಗಳ ಲಾಲನೆ-ಪಾಲನೆಗಳನ್ನು ನಿರ್ವಹಿಸುವ ಕರ್ತವ್ಯವು ಹೆಣ್ಣಿನದಾಗಿತ್ತು. "ಹೆಣ್ಣು ಒಂದು ಜನಾಂಗದ ಸಂಕೇತವಷ್ಟೇ ಅಲ್ಲ ಜೀವೋತ್ಪತ್ತಿಯ ಮೂಲ ಶಕ್ತಿಯಾಗಿದ್ದಳು."[೪] ಸಾಮಾಜಿಕ

ಬೆಳವಣಿಗೆಯಲ್ಲಿ ಹೆಣ್ಣು ಧಾರ್ಮಿಕ ಸ್ಥಾನವನ್ನು ಹೊಂದಿದ್ದಳು. ಕೌಟುಂಬಿಕ ನಿರ್ವಹಣೆಯಲ್ಲಿ ಮಾತೃವಿನ ಕರ್ತವ್ಯ ಪ್ರಮುಖವಾದುದರಿಂದ ಮಹಿಳೆಯ ಸ್ಥಾನಮಾನ ಹೆಚ್ಚುತ್ತದೆ. ಇದರ ಪರಿಣಮವಾಗಿ ಪುರುಷನಿಗಿಂತ ಮಾತೃವೇ ಮೊದಲು ದೈವತ್ವಕ್ಕೇರುತ್ತಾಳೆ. ಇಂಥಹ ಸಂದರ್ಭದಲ್ಲಿ ಭಾರತದಲ್ಲಿ ಶಾಕ್ತ ಪಂಥವು ತಲೆ ಎತ್ತುತ್ತದೆ. "ಸೆಮಿಟಿಕ್ ಜನಾಂಗದಲ್ಲಿ ಬೆಳೆದ ಅಷ್ಟಾರ್ಟ್ ದೇವತೆಯ ಕಲ್ಪನೆ, ಇಜಿಪ್ಟ್‌ನಲ್ಲಿ ರೂಪುಗೊಂಡ ಇಸಿನ್ ದೇವತೆಯ ಕಲ್ಪನೆ, ಫ್ರಿಜಿಯಾದಲ್ಲಿ ಸಿಬಿಲೇ ದೇವತೆಯ ಕಲ್ಪನೆ, ಭಾರತದ ಶಕ್ತಿದೇವತೆಯ ಕಲ್ಪನೆಗೆ ಸಮಾನ ಪರಿಕಲ್ಪನೆಗಳಾಗಿವೆ." ಈ ದೇವತೆಯನ್ನು ವಿಶ್ವದ ಮೂಲ ಶಕ್ತಿಯ ಸಾಕಾರ ರೂಪವನ್ನಾಗಿ ಶಾಕ್ತ ಧರ್ಮವು ಪರಿಗಣಿಸಿದೆ. ಈ ದೇವತೆಗೆ ದೈವಿಕತೆಯೊಂದಿಗೆ ಜೈವಿಕ ಬೆಳವಣಿಗೆಯ ಶಕ್ತಿಯಿದೆ ಎಂಬುದನ್ನು ಈ ಧರ್ಮವು ಕಂಡುಕೊಂಡಿತು.

ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಮಾತೃ ದೇವತಾರಾಧನೆ ನಿರಂತರವಾಗಿ ಸಾಗಿತು. "ಮಾತೃ ದೇವತೆಗಳ ಆರಾಧನೆಯು ಚರಿತ್ರೆಯ ಪೂರ್ವದಲ್ಲಿ ಬಳಕೆಯಲ್ಲಿತ್ತೆಂಬುದಕ್ಕೆ ವಿಪುಲವಾದ ಸಾಕ್ಷ್ಯಾಧಾರಗಳು ದೊರೆಯುತ್ತವೆ."[೬] ಈ ಮಾತೃ ದೇವತೆ ಆರಾಧನೆ ಜಗತ್ತಿನಾದ್ಯಂತ ಸುಮಾರು "೩೫ ಸಾವಿರ ವರ್ಷಗಳ ಹಿಂದೆಯೇ ಉಗಮ ಹೊಂದಿತೆಂದು ಅನೇಕ ನೆಲೆಗಳಲ್ಲಿ ಕಂಡುಬಂದಿರುವ ಸುಟ್ಟ ಮಣ್ಣಿನ ಗೊಂಬೆಗಳಿಂದ ತರ್ಕಿಸಲಾಗಿದೆ."[೭] ಸಾವಿರ ವರ್ಷಗಳಿಂದಲೇ ಮಾತೃದೇವತೆಯ ಆರಾಧನೆ ನೂತನಶಿಲಾ-ಶಿಲಾ ತಾಮ್ರಯುಗದಲ್ಲಿ ಹೆಚ್ಚಾಗಿ ಪ್ರಚಲಿತಗೊಂಡು ದ್ರಾವಿಡ ಸಂಸ್ಕೃತಿಯ ಮೂಲ ಧಾರ್ಮಿಕ ಕಲ್ಪನೆಯ ದೇವತೆಯಾಗಿ ಆರಾಧಿಸಿಕೊಂಡು ಬಂದಿದ್ದಾಳೆ. ಗ್ರಾಮದ ರಕ್ಷಣೆ ಗ್ರಾಮೀಣರ ಜೀವನಾಧಾರವಾಗಿ ಹುಟ್ಟಿಕೊಂಡ ಗ್ರಾಮದೇವತೆ, ಮಾತೃ ಪ್ರಧಾನ ಕುಟುಂಬದ ವ್ಯವಸ್ಥೆಯಿಂದಾಗಿ ಮಾತೃದೇವತೆಯಾಗುತ್ತಾಳೆ. ನಾಗರೀಕತೆ ಬೆಳೆದಂತೆ ಕುಶಲಕರ್ಮಿಗಳ ಅಂದರೆ ಶಾಕ್ತಪಂಥರ ಶಕ್ತಿ ದೇವತೆಯಾಗಿ, ದುಷ್ಟರಿಗೆ ಶಿಕ್ಷೆ ಶಿಷ್ಟರ ರಕ್ಷಣೆ ಮಾಡುತ್ತ ಶಕ್ತಿ ಕ್ಷೇತ್ರಗಳಲ್ಲಿ ನೆಲೆಯೂರಿದ್ದಾಳೆ. ಮಾನವನು ತನ್ನ ನಿತ್ಯ ಜೀವನದಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳುತ್ತಾನೆ. ಪ್ರಾಕೃತಿಕ ಸಂಪತ್ತನ್ನು ಬಳಸಿಕೊಂಡು, ಒಂದು ಪ್ರದೇಶದಲ್ಲಿ ನೆಲೆ ನಿಲ್ಲುತ್ತಾನೆ. ತನಗೆ ಅವಶ್ಯವಿರುವ ವಸತಿ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾನೆ. ನಿತ್ಯೋಪಯೋಗಿ ಉಪಕರಣಗಳನ್ನು ತಯಾರಿಸಿಕೊಂಡು, ಕೃಷಿ ಚಟುವಟಿಕೆ ಆರಂಭಿಸುತ್ತಾನೆ. ಮಣ್ಣಿನ ಮಡಿಕೆ, ಆಯುಧ, ಲೋಹದ ಉಪಕರಣಗಳನ್ನು ತಯಾರಿಸಿಕೊಂಡು ಬದುಕನ್ನು ಸಾಗಿಸುವ ವ್ಯವಸ್ಥೆ ಮೊದಲಿನಿಂದಲೂ ಸಾಗಿಕೊಂಡು ಬಂದಿದೆ. ಮನುಷ್ಯ ತಾನು ಕಂಡುಕೊಂಡ ವಸ್ತುವಿನಲ್ಲಿ ಮಾತೃ ದೇವತೆಯ ಕಲ್ಪನೆಯನ್ನು ಕಂಡುಕೊಳ್ಳುತ್ತಾನೆ. ಹೆಣ್ಣು ಶಕ್ತಿವಂತಳು, ಮಕ್ಕಳನ್ನು ಹೆರುವ ಮತ್ತು ಅವುಗಳನ್ನು ಸಂರಕ್ಷಿಸುವ ಶಕ್ತಿ ಅಗಾಧವೆಂಬುದು ಪುರುಷನಿಗೆ ತೋಚಿತು. ಹೆಣ್ಣನ್ನು

ಶಕ್ತಿ ಸ್ವರೂಪಿಣಿಯಾಗಿ ಶಕ್ತಿ ದೇವತೆಯಾಗಿ ಕಾಣುವ ವ್ಯವಸ್ಥೆ ಮಾತೃದೇವತಾರಾಧನೆಯ ಸಂದರ್ಭದಲ್ಲಿ ಕಂಡುಬರುತ್ತದೆ.

ಕಾಳಿ ಆರಾಧನೆ

ವೇದಗಳ ಕಾಲದಿಂದಲೂ ಶಕ್ತಿ ದೇವತೆಗಳನ್ನು ಆರಾಧಿಸಲಾಗುತ್ತಿದೆ. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಗಮನಿಸಿದರೆ ಋಗ್ವೇದ ಕಾಲದಿಂದ ಶಕ್ತಿಯ ಆರಾಧನೆ ನಡೆಯುತ್ತಾ ಬಂದಿದೆ. ಶಕ್ತಿ ದೇವತೆಯ ಕುರಿತು ತಿಳಿಯಬೇಕಾದರೆ, ಅರಿವು, ತಿಳಿವು, ಜ್ಞಾನ ಅಂದರೆ ವೇದಗಳ ಮೂಲಕ ಪರಾತ್ಪರ ಶಕ್ತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ. ಪರಿಸರವನ್ನು ಪ್ರತಿನಿಧಿಸುವಂಥಹ ದೇವತೆಗಳು ವೇದಗಳ ಕಾಲದಲ್ಲಿದ್ದರು. "ಅವು ಆಗ ಇನ್ನಾವುದೋ ಒಂದು ವಿಶಿಷ್ಟ ಶಕ್ತಿಯನ್ನು ಹೊಂದಿರುತ್ತಿದ್ದವು. "ಹೊಲ, ಮನೆ, ನೇಗಿಲು ಮೊದಲಾದ ಔದ್ಯೋಗಿಕ ಪರಿಕರಣಗಳಿಗೆ ಅಧಿಪತಿಗಳಾದ ಪ್ರಾದೇಶಿಕ ದೇವತೆಗಳು ವೇದಗಳಲ್ಲಿವೆ."[೮] ಇದೇ ಕಾಲದಲ್ಲಿ ಸ್ತ್ರೀ ದೇವತೆಗಳಿಗೆ ಆರಾಧನೆಯೊಂದಿಗೆ ಇಂದ್ರ, ಅಗ್ನಿ, ವಾಯು, ವರುಣನಂಥಹ ಪುರುಷ ದೇವತೆಗಳ ಆರಾಧನೆಯು ಆರಂಭವಾಯಿತು. "ಈ ದೇವತೆಗಳನ್ನು ಮೂರು ವಿಧದಲ್ಲಿ ವಿಂಗಡಿಸಲಾಯಿತು. ಸ್ವರ್ಗದ ದೇವತೆಗಳು, ಆಕಾಶದ ದೇವತೆಗಳು ಮತ್ತು ಭೂಮಿಯ ದೇವತೆಗಳು."[೯] ವೇದಗಳ ಕಾಲದಲ್ಲಿ ಸ್ತ್ರೀ-ಪುರುಷ ದೇವತೆಗಳ ಉಪಾಸನೆಯೊಂದಿಗೆ ಸಾಮಾನ್ಯ ಜನಜೀವನ ಪದ್ಧತಿಯ ಸರಳತೆಯು ಕೂಡಿತ್ತು. "ಜನರಿಗೆ ಕೃಷಿಯೇ ಮುಖ್ಯ ಉದ್ಯೋಗವಾಗಿತ್ತು. ಅಲ್ಲದೇ ಇನ್ನೂ ಅನೇಕ ಕಸುಬುಗಳು ರೂಢಿಯಲ್ಲಿದ್ದವು. ಬಡಗಿ, ಕಮ್ಮಾರ..... ಮೊದಲಾದವರು ಕೃಷಿ ಕೆಲಸಗಾರರಿಗೆ ಸಹಾಯಕರಾಗಿದ್ದರು. ರಥಗಳನ್ನು ತಯಾರಿಸುವುದು ಒಂದು ಮುಖ್ಯ ಕಸುಬಾಗಿತ್ತು. ರಥದ ವರ್ಣನೆಗಳನ್ನು ನೋಡಿದರೆ ಅದು ಒಂದು ಕಸುಬಾಗಿದ್ದುದು ಮಾತ್ರವಲ್ಲದೆ ಕುಶಲ ಕಲೆಯಾಗಿ ಪರಿಣಮಿಸಿತ್ತೆನ್ನಬಹುದು."[೧೦]

ಕುಶಲಕರ್ಮಿಗಳು ವೇದಗಳ ಕಾಲದಿಂದಲೂ ತಮ್ಮ ಕುಶಲ ಕಲೆಯಲ್ಲಿ ಪರಿಣಿತಿಯನ್ನು ಹೊಂದಿದ್ದರು. ಸಾಮಾನ್ಯ ಜನಜೀವನಕ್ಕೆ ಅತ್ಯಂತ ಅವಶ್ಯಕವಾಗಿರುವ ಕೃಷಿ ಸಾಮಗ್ರಿಗಳನ್ನು ಮಾಡುತ್ತ ಕೃಷಿಕ ವರ್ಗಕ್ಕೆ ಸಹಾಯಕರಾಗಿ ಬಂದಿರುವುದನ್ನು ಕಾಣುತ್ತೇವೆ. ಕೃಷಿಯ ಉಪಕರಣ ಗಳನ್ನು ತಯಾರಿಸುವಾಗ ಬೆಂಕಿಯನ್ನು ಬಳಸುತ್ತಿದ್ದರು. ಬೆಂಕಿಯನ್ನು ಶಕ್ತಿಯೆಂದು ಅದೇ ಶಕ್ತಿಯನ್ನು ಕಾಳಿಯೆಂದು ಪೂಜಿಸುತ್ತ, ಶಕ್ತಿ ದೇವತೆಯನ್ನು ಕಾಳಿಕಾದೇವತೆಯಾಗಿ ಅಂದಿನಿಂದಲೂ ಪಾಂಚಾಳ ಕುಶಲಕರ್ಮಿಗಳು ಆರಾಧಿಸುತ್ತಿದ್ದಾರೆ. ವೈದಿಕ ಕಾಲದ ನಂತರದಲ್ಲಿ ಬಂದ ಶಾಕ್ತ ಪಂಕ್ತವು ಸಂಪೂರ್ಣವಾಗಿ ಈ ಶಕ್ತಿದೇವತೆಯನ್ನು ಉಪಾಸನೆ ಮಾಡುತ್ತ ಬಂದಿದ್ದಾರೆ. ಸೌಮ್ಯಸ್ವಭಾವದ ಮಾತೃ ದೇವತೆಗಳು ದುಷ್ಟರನ್ನು ಸಂಹರಿಸಲು ಉಗ್ರ ರೂಪ ತಾಳುತ್ತವೆ.

ಸೌಮ್ಯ ಸ್ವಭಾವದ ಗಿರಿಜೆ(ಪಾರ್ವತಿ) ಅಸುರರ ಸಂಹಾರಕ್ಕಾಗಿ ಕಾಳಿಕಾದೇವಿಯಾಗಿ ಮಾತೃ ದೇವತೆಯಾಗಿ, ಶಕ್ತಿ ದೇವತೆಯಾಗಿ ರೂಪ ತಾಳುತ್ತಾಳೆ.

ದುಷ್ಟಶಕ್ತಿಗಳನ್ನು ಸೂರ ಮಾಡಲು ಹುಟ್ಟಿ ಬಂದ ಶಕ್ತಿ ದೇವತೆಗಳ ಸಾಲಿನಲ್ಲಿ ಕಾಳಿಕಾದೇವಿಯು ಸೇರುತ್ತಾಳೆ. ರಾಕ್ಷಸರನ್ನು ಸಂಹರಿಸಲು ಜನ್ಮ ತಳೆದ ಕಾಳಿಯು ನಂತರ ಶಕ್ತರ ವೇದ–ಮಂತ್ರೋಚ್ಚಾರಣೆಗಳಿಂದ ಸುಸಂಸ್ಕೃತಗೊಂಡು ಶಕ್ತಿ ಸ್ವರೂಪಿಣಿಯಾಗುತ್ತಾಳೆ. ರಾಕ್ಷಸರು ದೇವತೆಗಳನ್ನು ಮೋಹಿಸುವ ಅನೇಕ ಉದಾಹರಣೆಗಳನ್ನು ಪುರಾಣಗಳಲ್ಲಿ ಕಾಣುತ್ತೇವೆ. "ಶುಂಬನು ದೇವಿಯನ್ನು ಮೋಹಿಸಿದನಂತೆ. ಆಕೆ ತಿರಸ್ಕರಿಸಿದಾಗ ಚಂಡ, ಮುಂಡರೆಂಬ ದಾನವರ ಮುಖಂಡತ್ವದಲ್ಲಿ ದೊಡ್ಡ ಸೈನ್ಯವನ್ನು ಕಳಿಸುತ್ತಾನೆ. ಆಗ ದೇವಿ ಕಾಳಿ ರೂಪ ತಾಳಿ ಅವರನ್ನು ನಾಶಪಡಿಸಿದಾಗ ಇವಳನ್ನು ಚಂಡಿ ಅಥವಾ ಚಂಡಿಕೆ ಎಂದು ಕರೆದರು."[೧೧] ಹೀಗೆ ಅಸುರರನ್ನು ಕೊಲ್ಲುವಾಗ ಕಾಳಿ, ಉಗ್ರಕಾಳಿ, ಭದ್ರಕಾಳಿಯಾಗಿರುವುದನ್ನು ಕಾಣುತ್ತೇವೆ.

ಭಾರತದ ವಿವಿಧ ಭಾಗಗಳಲ್ಲಿ ಕಾಳಮ್ಮನ ಆರಾಧನೆ ಬರುತ್ತದೆ. ಕಲ್ಕತ್ತೆಯಲ್ಲಿ ಕಾಳಿಕಾದೇವಿಯ ಉತ್ಸವ–ಆರಾಧನೆಗಳು ಬಹಳ ವಿಶಿಷ್ಟ ಮತ್ತು ವೈಭವ ಪೂರ್ಣವಾದದ್ದಾಗಿದೆ. "ತಾಂತ್ರಿಕ ನೆಲೆಯಲ್ಲಿ ಆರಂಭವಾದ ಮಾತೃ ಪೂಜೆಯ ಪ್ರಾಚೀನ ವಿಧಿಗಳು ಇತಿಹಾಸದ ಒತ್ತಡದಿಂದಾಗಿ ಜಾನಪದ ಚೌಕಟ್ಟಿಗೆ ಮಾರ್ಪಟ್ಟಿವೆ. ಈ ನೆಲೆಯಲ್ಲಿ ವಿವರವಾಗಿ ಉಳಿದು ಬಂದಿರುವ, ಒಮ್ಮೆ ದೇಶದೆಲ್ಲೆಡೆ ಹರಡಿದ್ದ ಕಾಳೀ ಪೂಜೆಯು ಈಗ ಮುಖ್ಯವಾಗಿ ಬಂಗಾಳ, ಒರಿಸ್ಸಾ, ಅಸ್ಸಾಮ ಹಾಗೂ ಕೇರಳಗಳಲ್ಲಿ ಕಂಡುಬರುತ್ತದೆ."[೧೨] ಶಾಕ್ತರಿಂದ ಎಲ್ಲಾ ಕಡೆಗಳಲ್ಲಿಯೂ ಆರಾಧಿಸಿಕೊಳ್ಳುತ್ತಿದ್ದ ಕಾಳಿಕೆಯು ಕಾಲಾಂತರದಲ್ಲಿ ಕೆಲವೇ ಕೆಲವು ಪ್ರದೇಶಗಳಲ್ಲಿ ಅವಳ ಉಪಾಸನೆಯಿದೆ. ಕಲ್ಕತಾ ಎಂಬ ಹೆಸರು ಅಲ್ಲಿಯ ಪ್ರದೇಶ, ನಗರಕ್ಕೆ ಬರಲು ಕಾರಣ ಅವಳು ನೆಲೆಸಿರುವ ಘಟ್ಟದ ಪ್ರದೇಶ, ಕಾಳಿಘಟ್ಟವೇ ಕಲ್ಕತ್ತಾ ಎಂದಾಗಿದೆ. ಇಂದಿಗೂ ಅಲ್ಲಿ ಕಾಳಿ ದೇವಾಲಯ ಪ್ರಸಿದ್ಧವಾಗಿದೆ.

ಪ್ರಾಚೀನ ಕಾಲದಿಂದಲೂ ಶಾಕ್ತರು ಕಾಳಿ ಪೂಜೆಯನ್ನು ಕಳಶಕ್ಕೆ ಸಲ್ಲಿಸುತ್ತಿದ್ದರು. ಆಗ ಮೂರ್ತಿಯ ಕಲ್ಪನೆ ಮೂಡಿರಲಿಲ್ಲ. ಐದು ಬಗೆಯ ದಾನ್ಯಗಳನ್ನ ಹರಡಿ ನೀರು ತುಂಬಿದ ಮಣ್ಣಿನ ಗಡಿಗೆಯನ್ನಿಟ್ಟು, ಅದರ ಮೇಲೆ ದೇವಿಯ ಮೂರ್ತಿಯಿಟ್ಟು ಅರಿಷಿಣ–ಕುಂಕುಮದಿಂದ ದೇವಿಯ ಮೂರ್ತಿಯನ್ನು ಕಲ್ಕತ್ತೆಯಲ್ಲಿ ಬರೆಯುವುದನ್ನು ಕಾಣುತ್ತೇವೆ. "ಗಡಿಗೆಯೊಳಗೆ ಮೊಸರು–ಅಕ್ಕಿ ಕಲೆಸಿ ಹಾಕಿ, ಗಡಿಗೆಯ ಕಂಠಕ್ಕೆ ಕೆಂಪು ದಾರವನ್ನು ಕಟ್ಟಿ, ಮೇಲೆ ಐದು ಬಗೆಯ ಎಲೆಗಳನ್ನಿರಿಸುತ್ತಾರೆ. ಅದಕ್ಕೆ ಮಣ್ಣಿನ ಮುಚ್ಚಳ ಮುಚ್ಚಿ, ಮುಚ್ಚಳದಲ್ಲಿ ಅಕ್ಕಿಯ ಕಾಳು ಅಡಿಕೆಯನ್ನು ಹಾಕಿ, ಮೇಲೆ ಇಡೀ ಕಾಯಿ ತೆಂಗಿನ ಕಾಯಿಯನ್ನು ಇಡುತ್ತಾರೆ. ತೆಂಗಿನ ಕಾಯಿಗೆ ಅರಿಷಿಣ–ಕುಂಕುಮ ಏರಿಸಿ ಕಾಳಿಕಾದೇವಿಯ ಆವಾಹನೆ ಮಾಡುತ್ತಾರೆ."[೧೩]

ಇದನ್ನು ಪೂರ್ಣ ಪ್ರಮಾಣದ ಮೂರ್ತಿಯೆಂದು, ಕಾಳಿಕಾದೇವಿಯ ಪ್ರತೀಕವೆಂದು ಪೂಜಿಸುತ್ತಾರೆ. ಇದು ನವರಾತ್ರಿಯ ಪೂಜೆಯ ಸಂದರ್ಭದಲ್ಲಿ ವಿಶಿಷ್ಟ ಪೂರ್ಣವಾಗಿ ಕಾಳಿಕಾದೇವಿಯ ಆಚರಣೆ ನಡೆಯುತ್ತದೆ. ಕಲ್ಕತ್ತೆ ನಗರದಲ್ಲಿ ಪ್ರತಿ ವರ್ಷ ಹತ್ತು ಸಾವಿರಕ್ಕಿಂತಲೂ ಹೆಚ್ಚು ಮೃಣ್ಮಯ ಕಾಳಿಕಾ ಮೂರ್ತಿಗಳು ಪೂಜಿಸಲ್ಪಡುತ್ತಿದ್ದವು ಎಂದು ವಿದ್ಯಾವತಿಯು 'ದುರ್ಗಾಶಕ್ತಿ ತರಂಗಿಣಿ'ಯಲ್ಲಿ ಪ್ರಸ್ತಾಪಿಸಿದ್ದಾನೆ. ಕಾಳಿಕಾದೇವಿಯನ್ನು ಇಲ್ಲಿ ದಕ್ಷಿಣ ಕಾಳಿ, ಮಹಾಕಾಳಿ ಎಂದು ಕರೆಯುತ್ತಾರೆ. ದುಷ್ಟರನ್ನು ನಾಶ ಮಾಡಲು ಬಂದ ದೇವತೆಯಂತೆ ಇಲ್ಲಿ ಕಾಳಿಕೆಯು ಕಾಣುತ್ತಾಳೆ. ಇಲ್ಲಿ ಕಾಳಿಕಾ ಮೂರ್ತಿಯನ್ನು ವಿವಿದ ರೂಪದಲ್ಲಿ ಕಾಣುತ್ತೇವೆ. ಭದ್ರಕಾಳಿ, ಸಿದ್ಧಕಾಳಿ, ರಕ್ಷಾಕಾಳಿ, ಗುಹ್ಯ ಕಾಳಿ, ಸ್ಮಶಾನ ಕಾಳಿಯಾಗಿ ಕಾಣಿಸುತ್ತಾಳೆ. ಮಹಾರಾಷ್ಟ್ರದಲ್ಲಿ ಕೊಲ್ಲನೆಂಬ ಅಸುರನನ್ನು ಉಗ್ರರೂಪದಲ್ಲಿ ಸಂಹಿರಿಸಿದವಳು ಕಾಳಿ. ಇವಳು "ಕಂಕಭೈರವ ಸಿದ್ಧಬಟುಕೇಶ್ವರ, ಕಾಳಬೇತಾಳ ಮತ್ತ ಸಹೋದರಿ ಚಾಮುಂಡಿಯ ಸಹಾಯದಿಂದ ಕೊಲ್ಲನನ್ನು ಕೊಂದಳು."[೧೪] ತಮಿಳುನಾಡಿನಲ್ಲಿ ಚಿದಂಬರದ ಕಾಳಿಯು ದುಷ್ಟನಾಗಿದ್ದ ಮರುತ್ತರನೆಂಬ ಅಸುರನನ್ನು ಕೊಲ್ಲುತ್ತಾಳೆ. ಅಲ್ಲಿಯೂ ಅವಳು ಗಣೇಶ, ವೀರಭದ್ರ, ಅಘೋರರ ಸಹಾಯ ಪಡೆಯುತ್ತಾಳೆ.

ಆದ್ಯ ಶಂಕರಾಚಾರ್ಯರು, ರಾಮಕೃಷ್ಣ ಪರಮಹಂಸರು, ಕುರಿಕಾಯುವ ಕುರುಬನಾಗಿದ್ದ ಕಾಳಿದಾಸ, ಲಚ್ಚಾಣದ ಸಿದ್ದಪ್ಪ ಮಹಾರಾಜರು ಹೀಗೆ ನೂರಾರು ಭಕ್ತ ಸಮೂಹ ಕಾಳಿಯನ್ನು ಆರಾಧಿಸಿದ್ದಾರೆ. ರಾಮಕೃಷ್ಣ ಪರಮಹಂಸರು ಕಾಳಿಯ ಪರಮ ಆರಾಧಕರು. ಕಾಳಿಕಾ ಮಾತೆಯನ್ನು ಕೇವಲ 'ಶಿಲಾ ವಿಗ್ರಹ'ವೆಂದು ಪರಿಗಣಿಸದೆ, ಅವಳನ್ನು ಘನೀಭೂತವಾದ ಚೈತನ್ಯವೆಂದು ನಂಬಿದವರಾಗಿದ್ದರು. ಕಾಳಿಕೆಯ ಪೂಜೆಯ ಸಂದರ್ಭದಲ್ಲಿ ತಮ್ಮನ್ನ ತಾವು ಮರೆತು ದೇವಿಯನ್ನು ಆವಾಹಿನಿಸಿಕೊಳ್ಳುವ ಶಕ್ತಿಯನ್ನು ಪಡೆದಿದ್ದರು.

ಕರ್ನಾಟಕದ ಶಿರಸಿಯ ಬಳಿಯಿರುವ ಸ್ವಾದಿಯಲ್ಲಿಯೂ ಕಾಳಿಯನ್ನು ಆರಾಧಿಸಲಾಗುತ್ತಿತ್ತು. ಕಾಳಿಕಾಂಬ ದೇವಾಸ್ಥಾನವನ್ನು "ಕ್ರಿ.ಶ.೧೫೫೫ರಲ್ಲಿ ಆಳುತ್ತಿದ್ದ ಸೋದೆಯ ಅರಸಪ್ಪ ನಾಯಕರು ಸ್ಥಾಪಿಸಿದರೆಂಬ ಉಲ್ಲೇಖವಿದೆ."[೧೫] ಸೋದೆಯ ಅರಸರು ಕಾಳಿಕಾದೇವಿಯ ಆರಾಧಕರಾಗಿದ್ದರು ಎಂಬುದನ್ನು ಈ ದೇವಸ್ಥಾನ ಸ್ಪಷ್ಟಪಡಿಸುತ್ತದೆ. ಸೋದೆಯ ಅರಸರು ಮತ್ತು ಅವರ ಸೈನ್ಯವು ಯುದ್ಧಕ್ಕೆ ಹೋಗುವಾಗ ಕಾಳಿಕಾದೇವಿಗೆ ಪೂಜೆ ಸಲ್ಲಿಸಿ, ಜಯವನ್ನು ತರಲೆಂದು ಪ್ರಾರ್ಥಿಸಿ ಯುದ್ಧಕ್ಕೆ ತೆರಳುತ್ತಿದ್ದರು. ಇಲ್ಲಿಯ ಕಾಳಿಕಾದೇವಿಯು ಅರಸರಿಗೆ ಸದಾ ಜಯವನ್ನು ತಂದು ಕೊಡುತ್ತಿದ್ದುದರಿಂದ ಈಕೆಯನ್ನು ಜಯದೇವಿ ಕಾಳಿಕಾಂಬಾ ಎಂದು ಪೂಜಿಸಿ ಆರಾಧಿಸುತ್ತಿದ್ದರು. ಕರ್ನಾಟಕದ ಇನ್ನೊಂದು ಪ್ರಾಚೀನ ಪ್ರದೇಶ ದೊಡ್ಡ ಗದ್ದೆವಳ್ಳಿಯಲ್ಲಿ ಹೊಯ್ಸಳ ಕಾಲಕ್ಕೆ

ಪೂಜಿತಗೊಳ್ಳುತ್ತಿರುವ ಲಕ್ಷ್ಮೀ ದೇವಾಲಯದಲ್ಲಿ ಕಾಳಿ ಮೂರ್ತಿಯಿದೆ. “ಇಲ್ಲಿಯ ಪಾರ್ಶ್ವ ದೇವತೆಗಳಲ್ಲಿ ಭೂತನಾಥನೆನಿಸಿಕೊಳ್ಳುವ ಶಿವಲಿಂಗ, ಭೈರವ ಮತ್ತು ಕಾಳಿ ಪ್ರಮುಖವಾದವು.”[೧೬] ಇಲ್ಲಿ ಕಾಳಿಕೆಯು ಪಾರ್ಶ್ವದೇವತೆಯಾದರೂ ಉಜ್ವಲ ಭಯಾನಕ ಶಿಲ್ಪದಿಂದ ಮಹಾಕಾಳಿಯು ಆಕರ್ಷಕವಾಗಿದ್ದಾಳೆ. ಅಲ್ಲಿಯ ಜನರ ಆರಾಧಕಳಾಗಿದ್ದಾಳೆ.

ಶಿರಸಂಗಿಯಲ್ಲಿ ಕಾಳಮ್ಮ

ತೈತ್ತರೀಯ ಅರಣ್ಯದಲ್ಲಿ ಕಾಳಿಕಾದೇವಿಯನ್ನು ದುರ್ಗೆ, ಕಾತ್ಯಾಯನಿ, ಕಾಲಿ, ಕರಾಲಿ ಎಂದು ಸಂಬೋಧಿಸಲಾಗಿದೆ. ಅವಳ ಉಗ್ರಸ್ವರೂಪಗಳನ್ನು ಈ ಹೆಸರುಗಳಲ್ಲಿ ಕಾಣುತ್ತೇವೆ. ಆದರೆ ಇದಕ್ಕೆ ವಿಭಿನ್ನವೆನಿಸುವಂತೆ ಇಡೀ ದಕ್ಷಿಣ ಭಾರತದಲ್ಲಿ ವರದ ಹಸ್ತ ನೀಡುವ, ಸುಂದರ ರೂಪದ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ ಸೌಮ್ಯಸ್ವಭಾವದ ಕಾಳಿಕಾದೇವಿಯನ್ನು ಶಿರಸಂಗಿಯಲ್ಲಿ ಕಾಣುತ್ತೇವೆ. ಶಿರಸಂಗಿಯಲ್ಲಿ ಕಾಳಮ್ಮ ಆದಿ ಕಾಲದಿಂದಲೂ ನೆಲೆ ನಿಂತ ಗ್ರಾಮದೇವಿ ಮಾತೃದೇವಿ ಶಕ್ತಿದೇವಿಯಾಗಿ ಪೂಜಿತಳಾಗಿದ್ದಾಳೆ. “ಇಲ್ಲಿಯ ಅವಶೇಷಗಳು ತಾಮ್ರ ಮತ್ತು ಕಬ್ಬಿಣದ ಉತ್ಪಾದನೆ ಹೆಚ್ಚಾಗಿ ಬಳಕೆಯಲ್ಲಿದ್ದುದನ್ನು ಸ್ಪಷ್ಟಪಡಿಸುತ್ತದೆ.”[೧೭] ಇದರಿಂದ ತಾಮ್ರ-ಕಬ್ಬಿಣ ಉತ್ಪಾದನೆಯ ವರ್ಗಗಳು ಇಲ್ಲಿ ಆದಿಶಿಲಾಯುಗದಿಂದಲೂ ವಾಸವಾಗಿದ್ದ ಮಾನವ ಸಂಸ್ಕೃತಿಯ ವಸತಿ ನೆಲೆಗಳನ್ನು ಗುರುತಿಸಬಹುದಾಗಿದೆ. ಈ ವಸತಿಗಳನ್ನು ಕಟ್ಟಿಕೊಂಡ ವರ್ಗಗಳು ಉದ್ಯೋಗಕ್ಕೆ ಬೆಂಕಿಯನ್ನು ಅವಲಂಭಿಸಿರುವಂತೆ ಬೆಂಕಿಯನ್ನು ಕಾಳಿಯಾಗಿ ಸ್ವೀಕರಿಸಿ, ಪೂಜಿಸುತ್ತ ಬರಲಾಗಿದೆ.

ರಾಮಾಯಣ ಕಾಲಕ್ಕೆ ಸಂಬಂಧಿಸಿದಂತೆ ವಿಭಾಂಡ ಮುನಿಯ ಮಗ ಋಷ್ಯಶೃಂಗನು ಶಿರಸಂಗಿಯ ಈ ಪರಿಸರದಲ್ಲಿ ೧೦ ವರ್ಷಗಳ ಕಾಲ ಘೋರವಾದ ತಪಸ್ಸನ್ನು ಮಾಡುತ್ತಾನೆ. ಇಲ್ಲಿ ಜರುಗುವ ಯಜ್ಞ-ಯಾಗಾದಿ ಜಪ-ತಪಾದಿಗಳಿಗೆ ಭಂಗವನ್ನುಂಟು ಮಾಡುತ್ತಿದ್ದ ಅಸುರರನ್ನು ಸಂಹರಿಸಲು ಋಷ್ಯಶೃಂಗನು ಪ್ರಾರ್ಥಿಸುತ್ತಾನೆ. ಋಷ್ಯಶೃಂಗ ಸಾಮಾನ್ಯವಾದವನಲ್ಲ ವರುಣನಿಂದಲೇ ವರ ಪಡೆದವನು. ಇವನು ಕಾಲಿಡುವ ಪ್ರದೇಶದಲ್ಲಿ ದಾರಿದ್ರ್ಯ-ರೋಗ-ರುಜಿನಿಗಳು ಹೊರಟು ಹೋಗುತ್ತವೆ. ಇಂಥವನನ್ನು ಅಯೋಧ್ಯೆಯ ದಶರಥನು ಸಂತಾನಭಾಗ್ಯವಿಲ್ಲದಾಗ “ಪುತ್ರಕಾಮೇಷ್ಠಿ” ಯಾಗದ ಮುಖ್ಯ ಪುರೋಹಿತನನ್ನಾಗಿ ನೇಮಿಸಿ, ಯಜ್ಞವನ್ನು ಕೈಕೊಳ್ಳುತ್ತಾನೆ. ಇದರ ಫಲವಾಗಿ ಹುಟ್ಟಿದ ರಾಮ-ಲಕ್ಷ್ಮಣರು ಲಂಕೆಯ ರಾವಣನನ್ನು ಸಂಹರಿಸಿ, ಸೀತೆಯನ್ನು ಅಯೋಧ್ಯೆಗೆ ಕರೆದೊಯ್ಯುವಾಗ ಋಷ್ಯಶೃಂಗ ಆಶ್ರಮಕ್ಕೆ ಬಂದು ಈಶ್ವರನನ್ನು ಪೂಜಿಸಿ, ಋಷಿಯಿಂದ ಆಶೀರ್ವಾದ ಪಡೆಯುತ್ತಾರೆ. ಇಂಥ ಮಹಾತಪಸ್ವಿಯ ಪ್ರಾರ್ಥನೆಯನ್ನು ಮನ್ನಿಸಿ ಪಾರ್ವತಿಯು

ಕಾಳಿಕಾದೇವಿಯಾಗಿ ಅಸುರರನ್ನು ಸಂಹರಿಸುತ್ತಾ ಋಷ್ಯಶೃಂಗನ ಆಶ್ರಮಕ್ಕೆ ಬಂದು ಶಾಂತ ಸ್ವರೂಪಿಣಿಯಾಗಿ ಶಿರಸಂಗಿಯಲ್ಲಿ ನೆಲೆ ನಿಲ್ಲುತ್ತಾಳೆ.

ಶಿರಸಂಗಿಯ ಕಾಳಿಕಾ ದೇವಸ್ಥಾನವು ಕ್ರಿ.ಶ.೧ನೇ ಶತಮಾನಕ್ಕಿಂತಲೂ ಪೂರ್ವದಲ್ಲಿ ನಿರ್ಮಾಣಗೊಂಡಿರಬೇಕು. ಆದರೆ ಕಾಳಿಕಾಮೂರ್ತಿಯು ೮-೯ನೇ ಶತಮಾನದಲ್ಲಿ ತಯಾರಾಗಿರಬೇಕು. ಇದು ಸಾಲಿಗ್ರಾಮ ಶಿಲೆಯಿಂದ ಕೂಡಿದ ಮೂರ್ತಿಯಾಗಿದೆ. "ಶಿರಸಂಗಿಯ ಕಾಳಿಕಾ ಮಂದಿರದ ವಿನ್ಯಾಸ ವಿಶಿಷ್ಟ. ಇಲ್ಲಿನ ಮೂರ್ತಿಗಳು ಚಿರಸುಂದರ" ಎಂಬುದಾಗಿ ಖ್ಯಾತ ವಿದ್ವಾಂಸರು ಹಾಗೂ ಕರ್ನಾಟಕ ರಾಜ್ಯ ಗೆಝೆಟಿಯರಿನ ಪ್ರಧಾನ ಸಂಪಾಧಕ ಡಾ.ಸೂರ್ಯನಾಥ ಕಾಮತ್ ಅವರು ಅಭಿಪ್ರಾಯಪಟ್ಟಿದ್ದಾರೆ. ಸೂಕ್ಷ್ಮ ಕೆತ್ತನೆಯಿಂದ ರೂಪಿತವಾದ ಕಾಳಮ್ಮ ಇಲ್ಲಿಯ ಮುಖ್ಯದೇವತೆ. ಇದರ ಜೊತೆಗೆ ಕಮ್ಮಟೇಶ್ವರ, ಭೈರವೇಶ್ವರ ಹಾಗು ಉಡಚಮ್ಮ(ಮಹಿಷ ಮರ್ಧಿನಿ) ಹಿಂದೆ ಅಮೃತೇಶ್ವರ ದೇವಾಲಯಗಳಿವೆ. ಕಮ್ಮಟೇಶ್ವರ ಮತ್ತು ಭೈರವೇಶ್ವರ ದೇವಾಲಯಗಳು ಕಾಳಮ್ಮ ದೇವಸ್ಥಾನದ ನಂತರದಲ್ಲಿ ೧೧೪೮ ಮತ್ತು ೧೧೮೬ರ ಅವಧಿಯಲ್ಲಿ ನಿರ್ಮಾಣಗೊಂಡವು ಎಂಬುದನ್ನು ಅಲ್ಲಿಯ ಶಿಲಾಲೇಖಗಳು ತಿಳಿಸುತ್ತವೆ. ಕಮ್ಮಟೇಶ್ವರ ದೇವಸ್ಥಾನದಲ್ಲಿ ದೇವತಾ ಪರಿವಾರವನ್ನು ಕಾಣುತ್ತೇವೆ. ಶಿರಸಂಗಿಯಲ್ಲಿ ಕಾಳಮ್ಮ ದೈತ್ಯರನ್ನು ನಾಶ ಮಾಡಲು ಬಂದ ಅವತಾರಿ ದೇವತೆಯಾಗಿ ತನ್ನನ್ನು ನಂಬಿದ ಜನ ಸಮುದಾಯದ ರಕ್ಷಕಳಾಗಿ ಅವರವರ ಉದ್ಯೋಗಗಳಿಗೆ ಸರ್ವಶಕ್ತಳಾಗಿ ತನ್ನನ್ನು ತಾನು ಪೂಜಿಸಿಕೊಳ್ಳುವುದರೊಂದಿಗೆ ಕಮ್ಮಟೇಶ್ವರ, ಭೈರವ ಹಾಗೂ ಮಹಿಷಮರ್ಧಿನಿ ದೇವತಾ ಪರಿವಾರವೆಲ್ಲವೂ ಪೂಜಿತಗೊಳ್ಳುವಂತೆ ಭಕ್ತರಲ್ಲಿ ಭಕ್ತಿಯ ಭಾವ ತುಂಬಿದ್ದಾಳೆ.

ಕುಶಲಕರ್ಮಿಗಳು ಮತ್ತು ಕಾಳಮ್ಮ

ಪಾಂಚಾಳ ಕುಶಲಕರ್ಮಿಗಳು ಸೃಷ್ಟಿಕರ್ತನಾದ ವಿಶ್ವಕರ್ಮನ ವಂಶಸ್ಥರು. ಈತನಿಗೆ ಐದು ಜನ ಮಕ್ಕಳು. ಮನು, ಮಯ, ತ್ವಷ್ಟ್ಯ, ಶಿಲ್ಪಿ, ವಿಶ್ವಜ್ಞ ಎಂಬುವರು. ವಿಶ್ವಕರ್ಮನ ಒಂದೊಂದು ಮುಖೊದ್ಭವದಿಂದ ಜನಿಸಿದವರು. ಇವರು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಹೆಸರುಗಳನ್ನು ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯನಿಂದ ಪಡೆದ ದೇವತೆಗಳಾಗಿದ್ದಾರೆ. ವಿಶ್ವಕರ್ಮನ ಒಂದು ಮುಖವಾದ ಸದ್ಯೋಜಾತ ಬಿಳಿ ವರ್ಣದಿಂದ ಕೂಡಿದ್ದು. ತಾಮಸ ಗುಣವನ್ನು ಹೊಂದಿದ್ದಾನೆ. ತ್ರಿಕೋಣಾಕಾರದಲ್ಲಿರುವ ಈತನು ತೇಜಸ್ಸು ತತ್ವವನ್ನು ಹೊಂದಿದವನಾಗಿದ್ದನೆ. ಇವನಂತೆ ವಾಮದೇವ ನೀಲಿಬಣ್ಣ, ಜ್ಞಾನದ ಗುಣ, ಚಚ್ಚೌಕ ಆಕಾರ ಹಾಗೂ ಪೃಥ್ವಿ ತತ್ವವನ್ನು ಪಡೆದವನು. ಅಘೋರ ಕೆಂಪು

ಬಣ್ಣ, ಕ್ರಿಯಾಗುಣ, ವೃತ್ತಾಕಾರ, ಆಕಾಶ ತತ್ವ ಹೊಂದಿದವನಾಗಿದ್ದಾನೆ. ತತ್ಪುರುಷ ಬೂದಿ ಬಣ್ಣದಿಂದ ಕೂಡಿದ್ದು, ತಾಮಸ, ಜ್ಞಾನ, ಕ್ರಿಯಾದಿಗುಣಗಳನ್ನು ಹೊಂದಿ, ಷಟ್ಕೋಣ ಆಕಾರದಲ್ಲಿ ವಾಯು ತತ್ವವನ್ನು ಪಡೆದಿದ್ದಾನೆ. ಇಶಾನನು, ಬಂಗಾರ ಬಣ್ಣ, ಶುದ್ಧಸತ್ವ ಗುಣ, ಅಷ್ಟಕೋನಾಕರ ಅಪ(ಜಲ) ತತ್ವವನ್ನು ಹೊಂದಿದವನಾಗಿದ್ದಾನೆ. ಇವುಗಳ ಸಮ್ಮೀಲನವನ್ನು ವಿಶ್ವಕರ್ಮ ಮಂಡಲವೆಂದು ಕರೆಯುವುದಾಗಿ ನಾ.ಭಾ.ಚಂದ್ರಶೇಖರಾಚಾರ್ಯರು, ನಾ.ಭಾ.ಕೃತಿ ಸಂಪುಟ ೧ರಲ್ಲಿ ತಿಳಿಸಿದ್ದಾರೆ. ವಿಶ್ವಕರ್ಮಮಂಡಲವೆಂದರೆ ವಿಶ್ವವನ್ನೇ ಸೃಷ್ಟಿಸುವ ಸಕಲ ಕಲೆಗಳ ಆಗರ. ಇಂಥ ಕಲೆಗಳ ಅಧಿನಾಯಕ ವಿಶ್ವಕರ್ಮನ ವಂಶಜರು ಪಾಂಚಾಳರು. ಸ್ಮತಿಯಲ್ಲಿ 'ಪಂಚಲಾಃ ವಿಶ್ವಕರ್ಮ ಕುಲೋತ್ಪನ್ನಃ ಬ್ರಾಹ್ಮಣ ಜಾತಿಯೂ ಶಿಲ್ಪಿ ವಿಶೇಷ ಇತ್ಯಾರ್ಥಃ' ಎಂದು ಪಾಂಚಾಳರನ್ನು ವರ್ಣಿಸಲಾಗಿದೆ.

ಪಾಂಚಾಳರು ಜಗತ್ತಿನ ಕಲೆಗಳ ಅಧಿಪತಿಗಳು. ಕಬ್ಬಿಣ, ಕಟ್ಟಿಗೆ, ಕಂಚು, ಶಿಲ್ಪ, ಚಿನ್ನ-ಬೆಳ್ಳಿಯ ಕೆಲಸಗಳನ್ನು ನಿರ್ವಹಿಸಿಕೊಂಡು ಬಂದವರೇ ಪಾಂಚಾಳ ಕುಶಲಕರ್ಮಿಗಳು. ಈ ಐದು ವೃತ್ತಿಗಳು ಕುಶಲಕಲೆಗಳಾಗಿರುವುದರಿಂದ ಪಾಂಚಾಳರು ಕುಶಲಕರ್ಮಿಗಳಾಗಿ ಜಗತ್ತಿನ ಪ್ರತಿಯೊಂದು ಗ್ರಾಮಗಳಲ್ಲಿಯೂ ಜನರ ಜೀವನಾದಾರದ ಒಂದು ಭಾಗವಾಗಿ, ವಿಶೇಷವಾಗಿ ಭಾರತದಂಥ ಕೃಷಿ ಪ್ರಧಾನ ರಾಷ್ಟ್ರದಲ್ಲಿ ಕೃಷಿಕರಿಗೆ ಕೃಷಿ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದಾರೆ. ಕೃಷಿ ಮಹಿಳೆಯರಿಗೆ ಚಿನ್ನಾಭರಣಗಳನ್ನು ಮಾಡಿಕೊಡುತ್ತಾರೆ. ದೇವಾಲಯಗಳನ್ನು ಕಟ್ಟುತ್ತಿದ್ದಾರೆ. ಗರ್ಭಗುಡಿಗಳಲ್ಲಿ ಮೂರ್ತಿಗಳನ್ನು ಕೆತ್ತಿ, ದೇವರುಗಳನ್ನು ಸ್ಥಾಪಿಸುತ್ತಿದ್ದಾರೆ. ಒಟ್ಟಾಗಿ ಭಾರತೀಯ ಸಾಂಸ್ಕೃತಿಕ ಸಂಕೇತಗಳಾಗಿ, ಕಾಯಕಯೋಗಿಗಳಾಗಿ ಬದುಕುತ್ತಿದ್ದಾರೆ.

ಕರ್ನಾಟಕದ ಕುಶಲಕರ್ಮಿಗಳು ತಮ್ಮ ಕುಶಲಕಲೆಗಳಿಂದ ವಿಶ್ವಪ್ರಸಿದ್ಧರಾಗಿದ್ದಾರೆ. ಕುಶಲಕರ್ಮಿಗಳ ಪ್ರವೃತ್ತಿಗೆ ಮೂಲವಾಗಿರುವ ಬೆಂಕಿ ಶಕ್ತಿಯ ಸ್ವರೂಪವಾಗಿದೆ. ಕಠೋರವಾದ ಕಬ್ಬಿಣದ ಕೆಲಸಗಳನ್ನು ಮಾಡುವಾಗ ಬೆಂಕಿಯ ಅವಶ್ಯಕತೆ ಬೇಕಾಗುತ್ತದೆ. ಬೆಂಕಿಯನ್ನು ಕಾಳಿಯೆಂದು ಇಂದಿಗೂ ಕುಶಲಕರ್ಮಿಗಳು ಪೂಜಿಸುತ್ತಿದ್ದಾರೆ. ವಿಶ್ವದಲ್ಲಿ ಯಾವುದೇ ವಸ್ತುಗಳನ್ನು ಕುಶಲಕರ್ಮಿಗಳು ನಿರ್ಮಿಸಿದರೂ ಅವುಗಳ ಹಿಂದೆ ಕಾಳಮ್ಮ ಎಂಬ ಶಕ್ತಿಯಿದೆ ಎಂದು ನಂಬಿದ್ದಾರೆ. ವಸ್ತುವಿನ ನಿರ್ಮಾಣದಲ್ಲಿ ಬಳಸುವ ಉಪಕರಣಗಳನ್ನು ಕಾಳಮ್ಮ ಎಂದೇ ಭಾವಿಸಿ ಕೊಂಡು ಬಂದಿದ್ದಾರೆ. ತಮ್ಮ ಬಳಿಯಿದ್ದ ಅಪಾರ ಉಪಕರಣಗಳಿಗೆ ನಿರ್ದೇಶನ ನೀಡುವ ಶಕ್ತಿ ಕಾಳಮ್ಮನದು ಎಂದು ನಂಬಲಾಗಿದೆ. ದಿನದ ವೃತ್ತಿಯನ್ನು ಅರಂಭಿಸುವ ಮುನ್ನ ಕೈಯಲ್ಲಿ ಕುಶಲಕರ್ಮಿ ಉಪಕರಣಗಳನ್ನು ಹಿಡಿದು ನಮಸ್ಕರಿಸುತ್ತಾನೆ. ಆ ನಮಸ್ಕಾರ ಕಾಳಮ್ಮನಿಗೆ ಎಂದು ಕಳೆದ ೬೦ ವರ್ಷಗಳಿಂದ ಕಬ್ಬಿಣ-ಕಟ್ಟಿಗೆ ಕೆಲಸ ಮಾಡುತ್ತಿರುವ ಬೆನಕಟ್ಟಿಯ ತುಳಸಪ್ಪ

ಭೀಮಪ್ಪ ಬಡಿಗೇರ(೭೫) ಅವರು ಹೇಳುತ್ತಾರೆ. ಕುಶಲಕರ್ಮಿಗಳು ತಾವು ಬಳಸುವ ಕುಲುಮೆಗಳನ್ನು ಕಾಳಮ್ಮ ಎಂದು ಗುರುತಿಸುತ್ತಾರೆ. ಕುಲುಮೆಯ ಮೇಲ್ಭಾಗ ಕಳಶದಿಂದ ಕೂಡಿದಂತಾಗಿರುತ್ತದೆ. ಆ ಕಳಶವನ್ನು ಕಾಳಮ್ಮನ ಮುಖವೆಂದು ನಿತ್ಯವೂ ಪೂಜಿಸಲಾಗುತ್ತದೆ. ಅಡಗಲ್ಲು, ಅಡ್ಡಿಬಡ್ಡಿ, ಉಳಿ, ಬಾಚಿ, ಕೊಡತಿ ಮೊದಲಾದ ಉಪಕರಣಗಳು ಕುಶಲಕರ್ಮಿಗಳಿಗೆ ಕಾಳಮ್ಮ ದೇವತೆಯೇ ಆಗಿದ್ದಾವೆ. ಇವುಗಳಿಂದ ನಿರ್ಮಿತವಾಗುವ ವಸ್ತು ವಿಶ್ವಪ್ರಸಿದ್ಧವಾಗಲಿ, ಅತ್ಯಂತ ತಾಳಿಕೆ-ಬಾಳಿಕೆಯಿಂದ ಕೂಡಿರಲಿ ಎಂದು ಕುಶಲಕರ್ಮಿ ಬಯಸು ತ್ತಾನೆ. ಉಪಕರಣದಿಂದ ನಿರ್ಮಿತ ವಸ್ತು ಎಂದರೆ ಕಾಳಮ್ಮನಿಂದ ತಯಾರಾದ ವಸ್ತುವೆಂದು ತಿಳಿಯಲಾಗುತ್ತದೆ.

'ಸಿಂಧೂ ಸಂಸ್ಕೃತಿಯ ಕುಶಲಕಲೆಗಳ ಅಂದರೆ ಪ್ರತಿಮಾಶಿಲ್ಪ, ವಾಸ್ತುಶಿಲ್ಪ, ಆಭರಣಶಿಲ್ಪ ಮುಂತಾದವುಗಳ ನಿರ್ಮಾತೃಗಳು ವಿಶ್ವಬ್ರಾಹ್ಮಣರು' ಎಂದು ಕರ್ನಾಟಕದ ಖ್ಯಾತ ಸಂಶೋಧಕರಾದ ಡಾ.ಶಂ.ಬಾ.ಜೋಶಿಯವರು ಹೇಳಿದ್ದಾರೆ. ವಿಶ್ವಬ್ರಾಹ್ಮಣ, ಪಾಂಚಾಳ ಎಂದು ಕರೆಸಿಕೊಳ್ಳುವ ಕುಶಲಕರ್ಮಿಗಳು ಯಂತ್ರ-ಮಂತ್ರ-ತಂತ್ರ ವಿದ್ಯೆಗಳಲ್ಲಿ ಪ್ರಸಿದ್ಧರಾಗಿದ್ದರು ಎಂಬುದಕ್ಕೆ ಈಗಲೂ ಹಳ್ಳಿಗಳಲ್ಲಿ ಇಂಥ ಕುಶಲಕರ್ಮಿಗಳನ್ನು ಕಾಣುತ್ತೇವೆ. ಇವರು ಇಂಥಹ ವಿದ್ಯೆಗಳನ್ನು ಪಡೆಯಲು ಇದರ ಅಧಿದೇವತೆ ಕಾಳಮ್ಮನ ಮೊರೆ ಹೋಗುತ್ತಿದ್ದರು. ತಾವು ಮಾಡುವ ಕೆಲಸದಲ್ಲಿ ಕಾಳಮ್ಮನನ್ನು ಕಾಣುತ್ತ ಬಂದ ಕುಶಲಕರ್ಮಿಗಳು ಯಂತ್ರ-ಮಂತ್ರ-ತಂತ್ರ ವಿದ್ಯೆಯನ್ನು ಒಲಿಸಿ-ಫಲಿಸುವುದಕ್ಕಾಗಿ ಕಾಳಮ್ಮನ ಉಪಾಸನೆಯನ್ನು ಮಾಡುತ್ತಿದ್ದರು. ಸ್ವತಃ ನನ್ನ ತಂದೆಯ ಅಣ್ಣ ಅಂದರೆ ದೊಡ್ಡಪ್ಪನು ರೈತರಿಗೆ ಉಪಯೋಗವಾಗುವ ಕೃಷಿ ಉಪಕರಣಗಳನ್ನು ತಯಾರಿಸಿ ಕೊಡುವುದರೊಂದಿಗೆ ಅವರ ಮನೆಯಲ್ಲಿರುವ ದನ-ಕರುಗಳಿಗೆ ತೊಂದರೆಯಾದಾಗ ತಾಮ್ರದ ಹಾಳೆಯಲ್ಲಿ ಯಂತ್ರಗಳನ್ನು ಬರೆದು, ಕಾಳಮ್ಮನ ಪ್ರಸಾದವನ್ನು ಅದರಲ್ಲಿ ಇಟ್ಟು ಕಟ್ಟುತ್ತಿದ್ದರು. ಅದನ್ನು ಕೈಯಲ್ಲಿ ಹಿಡಿದು ಮಂತ್ರಿಸಿ ದನ-ಕರುಗಳ ಕೊರಳಿಗೆ ಕಟ್ಟಲು ತಿಳಿಸುತ್ತಿದ್ದರು. ಅಷ್ಟೇ ಅಲ್ಲ ಕೆಲವೊಮ್ಮೆ ದನ-ಕರಗಳಿಗೆ ಕಟ್ಟುವ ಹಗ್ಗಗಳಿಗೆ ಮಂತ್ರಪಟನೆ ಮಾಡಿ ಕೊಡುತ್ತಿದ್ದರು. ಮರುದಿನ ಅದೇ ರೈತರು ತಮ್ಮ ದನ-ಕರಗಳಿಗೆ ಅರಾಮ ಆಗಿದೆ ಎಂದು ಹೇಳಿ ಹೋಗುತ್ತಿದ್ದರು. ಹೀಗೆ ಹಳ್ಳಿಯಲ್ಲಿದ್ದ ಕುಶಲಕರ್ಮಿ, ರೈತರಿಗೆ ಕೇವಲ ಕೃಷಿ ಉಪಕರಣಗಳನ್ನಷ್ಟೇ ಮಾಡಿ ಕೊಡುತ್ತಿರಲಿಲ್ಲ. ಅವುಗಳ ಜೊತೆ ಅವರ ಮನೆಯಲ್ಲಿದ್ದ ಮೂಖ ಪ್ರಾಣಿಗಳಿಗೂ ಯಂತ್ರ-ಮಂತ್ರಗಳನ್ನು ನೀಡುವುದರ ಮೂಲಕ ರೈತೋಪಕಾರಿಯಾಗಿ ಕುಶಲಕರ್ಮಿ ಬದುಕುತ್ತಿದ್ದನು. ಹೀಗಾಗಿಯೇ ಹಳ್ಳಿಗಳಲ್ಲಿ ಕುಶಲಕರ್ಮಿಗಳಿಗೆ ಬಹುದೊಡ್ಡ ಗೌರವವಿರುತ್ತಿತ್ತು. ಇವರನ್ನು ಬಡಿಗಗೌಡ, ಕಂಬಾರಗೌಡ, ಪತ್ತಾರಗೌಡ ಎಂದು ಊರ ಗೌಡನಿಗೆ ಕೊಡುವ ಗೌರವವನ್ನು ಕೊಡುತ್ತಿದ್ದರು. ಈ ಗೌರವಾದರಗಳು ದೊರೆಯಲು ಕಾಳಮ್ಮನೇ ಕಾರಣವೆಂದು ಕುಶಲಕರ್ಮಿ

ನಂಬಿ, ತ್ರಿಕರಣ ಶುದ್ಧದಿಂದ ಕಾಳಮ್ಮನನ್ನು ಪೂಜಿಸುತ್ತ ಬಂದಿದ್ದಾನೆ. ಕಾಳಮ್ಮ ಪರಬ್ರಹ್ಮನ ಶಕ್ತಿ ಸ್ವರೂಪಳಾಗಿದ್ದಾಳೆ. ವೇದಕಾಲದ ವಿಶ್ವಕರ್ಮನ ಪರಬ್ರಹ್ಮತ್ವವು ವೇದಾಂತ ಪುರಾಣಗಳ ಕಾಲಕ್ಕೆ ಬ್ರಹ್ಮನಿಗೆ ಸ್ಥಳಾಂತರವಾಗಿ ವಾಗ್ದೇವಿಯು ಸರಸ್ವತಿಯೆನಿಸಿ ಬ್ರಹ್ಮನ ಹೆಂಡತಿಯಾದಳು. ಆದರೆ ವೇದಗಳ ಪರಬ್ರಹ್ಮನಾದ ಜಗಪಿತಾ ವಿಶ್ವಕರ್ಮನಿಗೆ "ಗಾಯತ್ರೀ ಪ್ರಣಮಾಮಿ ವಿಶ್ವಜನನೀಂ ಶ್ರೀ ವಿಶ್ವಕರ್ಮೇಶ್ವರೀಂ"[೧೮] ಮಾತಾ ಗಾಯತ್ರಿಯ ಶಕ್ತಿ ಸ್ವರೂಪಳಾಗಿದ್ದಾಳೆ. ಕಾಳಿಕೆಯು ಸರಸ್ವತಿ ಅಥವಾ ಗಾಯತ್ರಿಯ ಮತ್ತೊಂದು ಸ್ವರೂಪವೇ ಆದುದರಿಂದ ಪಂಚಾಳ ಕುಶಲಕರ್ಮಿಗಳು ಗಾಯತ್ರಿಯನ್ನು ಅಂದರೆ ಕಾಳಮ್ಮನನ್ನು ತಾಯಿಯಾಗಿ, ವಿಶ್ವಕರ್ಮನನ್ನು ತಂದೆಯಾಗಿ ಪ್ರಾಚೀನ ಕಾಲದಿಂದಲೂ ಆರಾಧಿಸುತ್ತಿದ್ದಾರೆ.

ಶಿರಸಂಗಿ ಕಾಳಮ್ಮ ಪಾಂಚಾಳರ ಕುಲದೇವತೆ

ಮಾತೃ ದೇವತೆಗಳ ಆರಾಧನೆ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಹೆಣ್ಣಿಗೆ ಜೀವಸೃಷ್ಟಿಯ ಶಕ್ತಿಯಿದೆ. ಮಕ್ಕಳ ಲಾಲನೆ-ಪಾಲನೆ ಮಾಡುವ ವಿಶಿಷ್ಟ ಶಕ್ತಿ ಸ್ತ್ರೀಯಲ್ಲಿದೆ. ಈ ಕಾರಣದಿಂದ ಮಾತೃಪ್ರಧಾನ ಕುಟುಂಬಗಳು ಹುಟ್ಟಿಕೊಂಡವು. ಹೆಣ್ಣಿಗೆ ಹೆಚ್ಚಿನ ಸ್ಥಾನಮಾನಗಳು ದೊರೆತು, ಹೆಣ್ಣು-ಮಾತೆಯ ಸ್ವರೂಪವಾಗಿ, ಇಷ್ಟಾರ್ಥಗಳನ್ನು ಈಡೇರಿಸುವ ಮಾತೃದೇವತೆಯಾಗಿ ಪೂಜಿತಳಾಗುತ್ತಾಳೆ. ಮನುಷ್ಯನ ಆಗು-ಹೋಗುಗಳು ಕಷ್ಟ-ನಷ್ಟಗಳು ಈ ದೇವತೆಯ ಮೂಲಕವೇ ಸಂಭವಿಸುತ್ತದೆಂದು ನಂಬಲಾಯಿತು. "ಆರ್ಯಸಂಸ್ಕೃತಿಯ ಪ್ರಭಾವ ಕಡಿಮೆ ಇರುವ ದಕ್ಷಿಣ ಭಾರತದಲ್ಲಿ ಈ ಬಗೆಯ ಅನೇಕ ಮಾತೃದೇವತೆಗಳನ್ನು ಪ್ರತಿಗ್ರಾಮದಲ್ಲೂ ನೋಡಬಹುದು."[೧೯] ಒಂದೊಂದು ಕಾರಣಕ್ಕೆ ಒಂದೊಂದು ದೇವತೆ ಪೂಜಿತಗೊಂಡದ್ದನ್ನು ಕಾಣುತ್ತೇವೆ. ಗ್ರೀಕ್‌ನಲ್ಲಿ ಡೆಮಿಟರ್ ದೇವತೆ, ಚಾಂಬಾ ರಾಜ್ಯದಲ್ಲಿ ದೇವತೆಗಳು ಮನುಷ್ಯರ ಮತ್ತು ಪ್ರಾಣಿಗಳ ಎಲ್ಲಾ ರೋಗಗಳನ್ನು ಗುಣಪಡಿಸುವ ಶಕ್ತಿಯಿದೆ. ಭೂಮಿಯಲ್ಲಿ ಆಹಾರಧಾನ್ಯಗಳನ್ನು ಒದಗಿಸಿ ಕೊಡುವ ಅನ್ನಪೂರ್ಣ ಎಂದು ಕರೆಯುತ್ತಾರೆ. "ಮೆಕ್ಸಿಕೋ ಮತ್ತು ಅರಿಜೋನ ದೇಶಗಳ ಪ್ರಯಬ್ಲೊ ಆದಿವಾಸಿ ಜನಾಂಗದ ದೇವತೆಗಳು ಅವರ ಆರಾಧನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಆರಾಧನಾ ವಿಧಿಗಳು ಗ್ರೀಕ್‌ನ ಎಲೆಯೂಸಿಸ್ ದೇವತೆಯ ಪೂಜವಿಧಿಗಳನ್ನು ಹೋಲುತ್ತದೆ. ಈ ಜನಾಂಗದ ಮಹಾಮಾತೃ ಮತ್ತು ಆಕೆಯ ಹೆಣ್ಣುಮಕ್ಕಳು ಪ್ರಾಚೀನ ಗ್ರೀಕ್ ದೇಶದ ಕೃಷಿ ವಿಧಿಗಳಲ್ಲಿ ಬರುವ ಡೆಮೆಟರ್ ಮತ್ತು ಕೋರೆ ಇವುಗಳ ಪ್ರತಿರೂಪವಾಗಿವೆ. ಆ ದೇವತೆಗಳ ಉಪಾಸಕರು ತಮ್ಮ ಕುಲದ ಪೂರ್ವಿಕರೆಂದೇ ಪರಿಗಣಿಸುತ್ತಾರೆ."[೨೦] ಆಯಾ ಕುಲದ ಜನಾಂಗದ ಒಳಿತನ್ನು ಬಯಸುವ, ಅವರು ಮಾಡುವ ಪ್ರತಿ ಕೆಲಸದಲ್ಲಿ ಯಶಸ್ಸನ್ನು ತಂದುಕೊಡುವ ಮಾತೃ ದೇವತೆಗಳು ಆ ಜನಾಂಗದ ಆಯಾ ಕುಲದ ದೇವತೆಗಳಾಗಿ ರೂಪಿತವಾಗುತ್ತಾರೆ.

ಕಬ್ಬಿಣ, ಕಟ್ಟಿಗೆ, ಕಂಚು, ಶಿಲೆ, ಚಿನ್ನ-ಬೆಳ್ಳಿಯ ಕೆಲಸಗಳನ್ನು ಮಾಡುತ್ತ ಬಂದಿರುವ ಕಂಬಾರ, ಬಡಿಗೇರ, ಕಂಚುಗಾರರ, ಶಿಲ್ಪಿ, ಅಕ್ಕಸಾಲಿಗ(ಪತ್ತಾರ) ಮೊದಲದ ಪಾಂಚಾಳರಿಗೆ ಶಿರಸಂಗಿಯ ಕಾಳಮ್ಮ ಮಾತೃದೇವತೆ, ಶಕ್ತಿದೇವತೆ ಅಷ್ಟೇ ಅಲ್ಲ, ಕುಲದೇವತೆಯಾಗಿ ಕಾಣಿಸುತ್ತಾಳೆ. ಐದು ರೀತಿಯ ಕುಶಲ ಕಸುಬುಗಳನ್ನು ಮಾಡುತ್ತಿದ್ದ ಕುಶಲಕರ್ಮಿಗಳು ಪಾಂಚಾಳ ಕುಲದವರೆಂದು ಗುರುತಿಸಲಾಯಿತು. ಐದು ವೃತ್ತಿಗಳು ಕುಲವೃತ್ತಿ, ಕುಲಕಸುಬು ಎಂದು ಕರೆಯಲ್ಪಟ್ಟವು. ಈ ಕಸುಬಿನವರು ಉತ್ಪಾದಿಸುತ್ತಿದ್ದ ಕಬ್ಬಿಣ, ಕಟ್ಟಿಗೆ, ಚಿನ್ನ ಮೊದಲಾದ ವಸ್ತುಗಳಿಗೆ ಶಕ್ತಿ ದೊರೆಯ ಬೇಕಾದರೆ ಅದು ಕಾಳಮ್ಮನಿಂದ ಸಾಧ್ಯವೆಂದು ನಂಬಿದ್ದರು. ತಮ್ಮಲ್ಲಿಯ ವೃತ್ತಿ ಉಪಕರಣಗಳಿಗೆ ಪಾಂಚಾಳರು ಬಹಳ ಗೌರವ ನೀಡುತ್ತಾರೆ. ಅವುಗಳನ್ನು ಕಾಳಮ್ಮ ಎಂದು ಭಾವಿಸಲಾಗುತ್ತದೆ. ಪ್ರಾಚೀನ ಕಾಲದಿಂದಲೂ ಕುಲುಮೆಯನ್ನು ಕಾಳಮ್ಮ ಎಂದೇ ಹೇಳಲಾಗುತ್ತದೆ. ಶಿರಸಂಗಿ ಕಾಳಮ್ಮ ಪಾಂಚಾಳರ ಕುಲದೇವತೆಯಾಗಿ ಪೂಜಿತಗೊಳ್ಳಲು ಒಂದೆರಡು ಕಾರಣಗಳನ್ನು ಹುಡುಕಬಹುದಾಗಿದೆ. ಅವುಗಳೆಂದರೆ ಒಂದು ಕಾಳಮ್ಮನನ್ನು ಶಿರಸಂಗಿಯಲ್ಲಿ ನೆಲೆಯೂರುವಂತೆ ಪ್ರಯತ್ನಪಟ್ಟವನು ಪಾಂಚಾಳ ಕುಲದ ಋಷ್ಯಶೃಂಗ. ಇನ್ನೊಂದು ಶಿರಸಂಗಿಯ ಪ್ರದೇಶದಲ್ಲಿ ಪ್ರಾಗಿತಿಹಾಸ ಕಾಲದಿಂದಲು ಕುಲುಮೆಯ ಕಾರ್ಯಾಗಾರ ನಡೆದಿತ್ತು ಎಂಬುದಕ್ಕೆ ಇಲ್ಲಿ ದೊರೆತ ಪಾತ್ರಾವಶೇಷಗಳು ಸಾಕ್ಷಿಯಾಗುತ್ತವೆ.

ತ್ರೇತಾಯುಗದಷ್ಟು ಹಿಂದಕ್ಕೆ ಹೋದರೆ ಶಿರಸಂಗಿ ಪ್ರದೇಶ ಋಷ್ಯಶೃಂಗ ಆಶ್ರಮವನ್ನು ಹೊಂದಿದ ನೆಲೆಯಾಗಿತ್ತು. ವಿಶ್ವಕರ್ಮ ಸಮುದಾಯದ ಪ್ರತ್ನರ್ಷಿಗೋತ್ರದ ಋಷ್ಯಶೃಂಗನು ಕಾಳಮ್ಮನನ್ನು ಕುರಿತು ೧೦ ವರ್ಷಗಳ ಕಾಲ ಘೋರ ತಪಸ್ಸನ್ನು ಮಾಡಿ ಆಕೆಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅಷ್ಟೇ ಅಲ್ಲ ತನ್ನ ಪರಿವಾರಕ್ಕೆ ಸುಖ-ಶಾಂತಿ-ನೆಮ್ಮದಿಗಳನ್ನು ನೀಡಲು, ತನ್ನ ಕುಲವನ್ನು ಉದ್ಧರಿಸಲು ತಾನಿದ್ದ ಪ್ರದೇಶದಲ್ಲಿ ಪ್ರತಿಷ್ಠಾನಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಋಷ್ಯಶೃಂಗನ ಇಚ್ಛೆಯಂತೆ ಕಾಳಮ್ಮ ಶಿರಸಂಗಿಯಲ್ಲಿ ಕಂಟಕಪ್ರಾಯರಾದ ನಲುಂದಾಸುರ, ನರುಂದಾಸುರ ಮೊದಲಾದ ಅಸುರರನ್ನು ಸಂಹರಿಸುತ್ತಾಳೆ. ಋಷ್ಯಶೃಂಗನ ಪರಿವಾರವಾದ, ಶಿಷ್ಯರೂ ಆದ ಪಾಂಚಾಳ ಕುಲವನ್ನು ಉದ್ಧರಿಸಲು ಇಲ್ಲಿ ನೆಲೆ ನಿಲ್ಲುತ್ತಾಳೆ.

ಪ್ರಾಗಿತಿಹಾಸ ಕಾಲದಿಂದಲು "ಕ್ರಿ.ಪೂ.೨೨೦೦-೧೮೦೦ರ ಅವಧಿಯಲ್ಲಿ"[೨೧] ಇಲ್ಲಿಯ ವರೆಗೂ ಶಿರಸಂಗಿ ಪ್ರದೇಶದಲ್ಲಿ ಐದು ಕುಲಕಸುಬುಗಳನ್ನು ಮಾಡುತ್ತ ಬಂದಿರುವ ಕುಶಲಕರ್ಮಿ ಪಾಂಚಾಳರನ್ನು ಕಾಣುತ್ತೇವೆ. ತಮ್ಮ ವೃತ್ತಿಗೆ ಒಂದು ಶಕ್ತಿಯಾಗಿ ಈ ನೆಲದಲ್ಲಿ ನಿಂತಿದ್ದಾಳೆ ಎಂಬ ಧಾರ್ಮಿಕ ಕಲ್ಪನೆ ಮುಖ್ಯವಾಗಿದೆ. ಕುಶಲಕರ್ಮಿ ಪಾಂಚಾಳ ಕುಲವನ್ನೇ ಉದ್ಧರಿಸಲು

ಕಾಳಮ್ಮ ಋಷ್ಯಶೃಂಗನ ನೆಪವಾಗಿ ಶಿರಸಂಗಿಗೆ ಬಂದಂಥದ್ದು ಸ್ಪಷ್ಟವಾದ ಕಾರಣವಾಗುತ್ತದೆ. ಹೀಗಿರುವುದರಿಂದ ತ್ರೇತಾಯುಗದಿಂದಲೂ ಋಷ್ಯಶೃಂಗನ ಜೊತೆ ಇದ್ದ ಇತರ ಪಾಂಚಾಳ ಕುಲಕ್ಕೆ ಕಾಳಮ್ಮ ದೇವತೆಯಾಗಿರುವುದು ಅಂದರೆ ಕುಲದೇವತೆಯಾಗಿರುವುದು ತಿಳಿದುಬರುತ್ತದೆ. ಹಾಗೆಯೇ ಶಿಲಾಯುಗದಿಂದಲು ಶಿರಸಂಗಿ ಪ್ರಾಚೀನ ಕುಲುಮೆಗಳನ್ನು ಸ್ಥಾಪಿಸಿಕೊಂಡು ಕಬ್ಬಿಣ ತಾಮ್ರದ ಉತ್ಪಾದನೆಯನ್ನು ಮಾಡುತ್ತ ಬಂದ ಒಂದು ಜನವರ್ಗವನ್ನು ಕಾಣುತ್ತೇವೆ. ಕುಲುಮೆಗೆ ಅವಶ್ಯಕವಿರುವ ಬೆಂಕಿ ಬಳಕೆ ಆ ಕೆಲಸಗಾರರಲ್ಲಿತ್ತು. ಬೆಂಕಿ ಮತ್ತು ಕುಲುಮೆಯ ಕೆಲಸ ನಿರಂತರವಾಗಿ ಸಾಗಿಸಿಕೊಂಡು ಬಂದ ಸಮುದಾಯವೇ ಕಾಳಮ್ಮನ ಆರಾಧಕರಾಗಿದ್ದರು. ಕುಲುಮೆ-ಬೆಂಕಿಯ ಸಹಾಯದಿಂದ ಕಬ್ಬಿಣ ವಸ್ತುಗಳನ್ನು ತಯಾರಿಸುವುದು. ಇದಕ್ಕೆ ಪೂರಕವಾಗಿ ಕಟ್ಟಿಗೆ, ಕಂಚುಗಾರಿಕೆ, ಶಿಲ್ಪ, ಚಿನ್ನ-ಬೆಳ್ಳಿಯ ಕೆಲಸಗಳನ್ನು ಮಾಡುವ ಕುಶಲಕರ್ಮಿ ಕುಲವೇ ಶಿರಸಂಗಿ ಪ್ರದೇಶದಲ್ಲಿ ನೆಲೆಯೂರಿ ನಿಂತದ್ದನ್ನು ಕಾಣುತ್ತೇವೆ. ಹೀಗೆ ಪ್ರಾಚೀನ ಕಾಲದಿಂದಲೂ ಕೆಲಸಗಾರರಾಗಿ ನಿಂತ ಪಾಂಚಾಳ ವರ್ಗವು ವೃತ್ತಿಗನುಗುಣವಾಗಿ ಕಾಳಮ್ಮನನ್ನು ಆರಾಧಿಸಲು ಆರಂಭಿಸಿದರು. ಪಾಂಚಾಳರ ಕುಲಕ್ಕೆ ಕಾಳಮ್ಮ ಕುಲದೇವತೆಯಾಗಿ ರೂಪಗೊಳ್ಳುತ್ತಾಳೆ.

ಒಟ್ಟಾರೆ ಶಿರಸಂಗಿಯಲ್ಲಿ ಕಾಳಮ್ಮ ಪಾಂಚಾಳರ ಕುಲದೇವತೆಯಾಗಿರುವುದು ಸತ್ಯ. ಅದು ಋಷ್ಯಶೃಂಗನ ತಪಸ್ಸಿನ ಪ್ರಭಾವದಿಂದಲೋ ಅಥವಾ ಪ್ರಾಚೀನ ಕಾಲದಿಂದಲು ಕಬ್ಬಿಣ ಕೆಲಸ ದಲ್ಲಿ ದುಡಿಯುವ ವರ್ಗಕ್ಕೆ ಶಕ್ತಿಯಾಗಿರುವುದರಿಂದಲೋ ಏನೊ? ಇಲ್ಲಿ ಇವೆರಡು ಕಾರಣದಿಂದಲೂ ಶಿರಸಂಗಿ ಕಾಳಮ್ಮ ಪಾಂಚಾಳರ ಕುಲದೇವತೆಯಾಗಿದ್ದಾಳೆ.

ದಕ್ಷಿಣ ಭಾರತದಲ್ಲಿಯೇ ಅತೀ ಹೆಚ್ಚು ಪ್ರಸಿದ್ಧಿ ಪಡೆದಿರುವ ಕಾಳಮ್ಮನ ದೇವಸ್ಥಾನ ಅತೀ ಪ್ರಾಚೀನವು ಮತ್ತು ಪ್ರಮುಖವೂ ಆಗಿದೆ. ಕಮ್ಮಟೇಶ್ವರ, ಭೈರವ ದೇವಾಲಯಗಳೊಂದಿಗೆ ಗ್ರಾಮ ದೇವತೆ ಉಡಚಮ್ಮ ಮತ್ತು ಅಮೃತೇಶ್ವರ ದೇವಾಲಯಗಳಿವೆ. ಕಲ್ಮೇಶ್ವರ, ಮಾರುತಿ, ಒಳಕಲ್ಲು ಬ್ರಹ್ಮ, ಬನ್ನಿ ಮಹಾಂಕಾಳಿ, ಕಾಡಸಿದ್ಧೇಶ್ವರ, ದೇವಸ್ಥಾನಗಳೊಂದಿಗೆ ಬಸವೇಶ್ವರ, ಮೌನೇಶ್ವರ, ವಿಠ್ಠಲ. ದುರ್ಗವ್ವ-ದ್ಯಾಮವ್ವ ದೇವಾಲಯಗಳಿವೆ. ಕಾಳಮ್ಮನ ದೇವಸ್ಥಾನದಿಂದ ಪಶ್ಚಿಮದತ್ತ ಸಾಗಿದರೆ ಬೆಟ್ಟದ ಮೇಲೆ ದೀಪಸ್ತಂಭ, ಖಡ್ಗತೀರ್ಥ ಅದರ ಪಕ್ಕದಲ್ಲಿ ರಾಮ-ಲಕ್ಷ್ಮಣರ ದೇವಾಲಯ, ಭೀಮತೀರ್ಥ, ಮೌನೇಶ್ವರರ ಚಿಕ್ಕದಾದ ಗುಡಿಯಿದೆ. ಇದರ ಹಿಂದೆ ಮತ್ತು ಎತ್ತರದ ಬೆಟ್ಟದಲ್ಲಿ ಮುಸ್ಲಿಂರು ಪೂಜಿಸಲ್ಪಡುವ ಬಾಬಾಬುಡನ್‌ಗಿರಿ ಸಮಾಧಿ ಕಟ್ಟಡಗಳಿವೆ. ಸಿದ್ದೇಶ್ವರ ಗವಿಯಿದೆ. ಗವಿಗೆ ಹೋಗುವ ಎತ್ತರದ ಬೆಟ್ಟದ ಮೇಲೆ ಕಾಳಮ್ಮನ ಪಾದಚ್ಚುಗಳಿವೆ. ಅಲ್ಲಿಯೇ ಒಂದು ವರತಿಯಿದೆ.

ಶ್ರೀ ಕಾಳಿಕಾದೇವಿ ದೇವಸ್ಥಾನ

ಭಾರತೀಯ ವಾಸ್ತುಶಿಲ್ಪ ಶಾಸ್ತ್ರಕ್ಕೆ ಅನುಸಾರವಾಗಿ ಕ್ರಿ.ಶ.೧ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ 'ಹೇಮಾಡ'ನೆಂಬುವನು ಈ ದೇವಸ್ಥಾನವನ್ನು ಕಟ್ಟಿಸಿರುವುದಾಗಿ ತಿಳಿದು ಬರುತ್ತದೆ. ಉತ್ತರಾಭಿಮುಖವಾಗಿ ಈ ದೇವಾಲಯವಿದೆ. ಗರ್ಭಗೃಹ ಮತ್ತು ಮುಖಮಂಟಪಗಳಿಂದ ಕೂಡಿದೆ. ಪುರಾತನ ಗೋಪುರವಿದ್ದು, ಸುತ್ತಲೂ ೪ ಕಳಶಗಳಿದ್ದು, ಅವುಗಳ ಮಧ್ಯ ಎತ್ತರದಲ್ಲಿ ಒಂದು ಕಳಶವಿದೆ. ಪಂಚಕಳದಿಂದ ಕೂಡಿದ ಗೋಪುರ ಇದಾಗಿದೆ. ಈಗ ಈ ಗೋಪುರಕ್ಕೆ ಪಂಚಲೋಹ ಶಿಲ್ಪ ವೈಭವೀಕರಣ(ಕವಚ)ಗೊಳಿಸಲಾಗಿದೆ. ದೇವಾಲಯ ವಾಸ್ತುಪ್ರಕಾರ ಕಾಳಮ್ಮನ ದೇವಸ್ಥಾನ ಪಾದಬಂಧ ಅದಿಷ್ಠಾನದ ಮೇಲೆ ರಚನೆಯಾಗಿರಬೇಕು. "ದೇವಾಲಯಗಳ ಶೈಲಿಗಳನ್ನು ಗುರುತಿಸುವಲ್ಲಿ ಶಿಖರವೇ ಪ್ರಧಾನ ಪಾತ್ರವಹಿಸಿರುವುದನ್ನು ಶಾಸ್ತ್ರ ಗ್ರಂಥಗಳಿಂದ ತಿಳಿಯಬಹುದಾಗಿದೆ."[೨೩] "ನಾಗರೇಚತುರಶ್ರಂ ತದ್ ವಸ್ವಶ್ರಮ ದ್ರಾವಿಡೇ" ಶಿಖರವು ಚತುರಶ್ರ ಆಕಾರವಿದ್ದಲ್ಲಿ ನಾಗರ, ಅಷ್ಟಾಶ್ರ ಆಕಾರವಿದ್ದಲ್ಲಿ ದ್ರಾವಿಡ ಮತ್ತು ವೃತ್ತಾಕಾರವಿದ್ದರೆ ಅದು ವೇಸರ ಶೈಲಿಯ ದೇವಸ್ಥಾನವೆಂದು ಗುರುತಿಸಲಾಗುತ್ತದೆ. ಶಿರಸಂಗಿಯ ಕಾಳಿಕಾ ದೇವಸ್ಥಾನವು ಚತುರಶ್ರ ಶಿಖರದಿಂದ ಕೂಡಿರುವುದರಿಂದ ಇದು ದಾಕ್ಷಿಣಾತ್ಯ ನಾಗರ ಶೈಲಿಯ ದೇವಸ್ಥಾನವಾಗಿರ ಬೇಕೆಂದು ನನ್ನ ಅಭಿಪ್ರಾಯವಾಗಿದೆ.

ಕಾಳಮ್ಮನ ಮೂರ್ತಿ

ವಿಶ್ವದ ಸೌಂದರ್ಯವನ್ನೆಲ್ಲ ಎರಕಹೊಯ್ದಂತೆ ಶಿರಸಂಗಿಯ ಶ್ರೀಕಾಳಿಕಾದೇವಿಯ ಮೂರ್ತಿ ಅತ್ಯಂತ ಆಕರ್ಷಕವಾಗಿದೆ. ಭಾರತದಲ್ಲಿ ಕಾಣಸಿಗುವ ಮೂರ್ತಿಗಳಲ್ಲಿಯೇ ಇದು ಅದ್ವಿತೀಯವಾಗಿದೆ. ಕ್ರಿ.ಶ.೮-೯ನೇ ಶತಮಾನದ ಮಧ್ಯದ ಅವಧಿಯಲ್ಲಿ ಕಾಳಮ್ಮನ ಮೂರ್ತಿ ತಯಾರಾಗಿದೆ. ಸಾಲಿಗ್ರಾಮ ಶಿಲೆಯಿಂದ ರಚಿತವಾದ ಮೂರ್ತಿಯು ಸುವರ್ಣಾಂಕಿತ ರೇಷೆಗಳಿಂದ ಕೂಡಿದೆ" ಎಂದು ಪುಣೆಯ ಬ್ರಹ್ಮರ್ಷಿ ಬಾಳಾಶಾಸ್ತ್ರೀ ಕ್ಷೀರಸಾಗರ ಅವರು ೧೯೩೫ರಲ್ಲಿ ರಚಿಸಿದ 'ಶಿರಃಶೃಂಗೀ ಕಾಳಿಕಾ ಚಂದ್ರ' ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಸುಂದರ, ನಯನ ಮನೋಹರ ಹಾಗೂ ಮೃದಲಗಳೆಂಬ ಮೂರುಭಾವನೆಗಳನ್ನು ಈ ಮೂರ್ತಿಯು ಉಂಟು ಮಾಡುತ್ತದೆ. ಅತಿ ಸುಂದರವಾದ ಮೂರ್ತಿ ನೋಡುಗರಿಗೆ ನಯನ ಮನೋಹರಿಯಾಗಿ ಕಾಣುತ್ತದೆ.' ಮರಾಠಿಯಲ್ಲಿ ಒಂದು ಅಭಂಗವಿದೆ. 'ದು "ಸಾವಳಿ, ಸುಂದರ ರೂಪ, ಮನೋಹರ ರಾಹೋ ಹೃದಯೀ ನಿರಂತರ ಮಾಝೀ"[೨೪] ಎಂಬಂತೆ 'ಕೃಷ್ಣವರ್ಣದ ಸುಂದರ ಹಾಗೂ ನಯನ ಮನೋಹರ ರೂಪವು' ನಿರಂತರವಾಗಿ ನನ್ನ ಹೃದಯದಲ್ಲಿರಲಿ ಎಂಬ ಭಾವನೆಯನ್ನು ಉಂಟು ಮಾಡುತ್ತದೆ.

ಕಾಳಿಕಾದೇವಿ ಮೂರ್ತಿಯಲ್ಲಿ ದಾರ್ಶನಿಕ ಭಾವವಿದೆ. ತಾಯಿಯ ಕಾರುಣ್ಯಮಯಿ ರೂಪ, ಜೀವನಕ್ಕೆ ಕೊಡಮಾಡುವ ಚೈತನ್ಯ ರೂಪ ಮತ್ತು ಜೀವನದ ಸತ್ಯವಾದ ಮೃತ್ಯುವಿನ ದರ್ಶನ ಈ ಮೂರು ಭಾವಗಳು ಉಂಟಾಗುತ್ತವೆ. ಇದರಿಂದ ದಿವ್ಯಶಕ್ತಿಯ ಅಗಾದತೆಯ ಅರಿವನ್ನು ಕಾಳಮ್ಮನ ಮೂರ್ತಿಯು ಮೂಡಿಸುತ್ತದೆ. ಒಂದೇ ಶಿಲ್ಪದಲ್ಲಿ ಇಂಥಹ ಮೂರು ಭಾವಗಳನ್ನು ಉಂಟು ಮಾಡುವಂತೆ ಈ ಮೂರ್ತಿಯನ್ನು ನಿರ್ಮಿಸಿದ ಕುಶಲಕರ್ಮಿ ಕಾಲಗರ್ಭದಲ್ಲಿ ಅಡಗಿ ಶಿಲ್ಪದಿಂದ ಅಮರನಾಗಿದ್ದಾನೆ. ಕಾಳಮ್ಮನ ಮೂರ್ತಿಯನ್ನು ಕಾರಣಾಗಮದಲ್ಲಿ ಈ ರೀತಿ ವರ್ಣಿಸಲಾಗಿದೆ.

ಅಷ್ಟ ಬಾಹುರ್ಮಹಾಕಾಯಾ
ಕಾಲಮೇಘ ಸಮಪ್ರಭಾ
ಶಂಕಚಕ್ರ ಗದಾ ಕುಂಭ
ಮುಸಲಾಂಕುಶ ಪಾಶಯಕ್
ವಜ್ರ ಚಕ್ರೇ ಚ ವಿಭ್ರತೀ
ಸಾ ಮಹಾಕಾಲೀಮದೇಸ್ತುನಃ"

ಎಂದು ಆಗಮದಲ್ಲಿ ಕಾಳಮ್ಮನನ್ನು ವರ್ಣಿಸಲಾಗಿದೆ. "ಶಿಲ್ಪಶಾಸ್ತ್ರವನ್ನಾಧರಿಸಿ, 'ತಾಳಮಾನ ಬದ್ಧ ಸಂಪ್ರದಾಯ ಶಿಲ್ಪಶೈಲಿಯಲ್ಲಿ ಮವಾರ್ಣವ ಮಂತ್ರ ಸಂಖ್ಯೆಯನ್ನಾಧರಿಸಿ, ಒಂಬತ್ತು ಅಡಿ ಎತ್ತರದ ಕಾಳಿಕಾಮಾತೆಯ ಪ್ರತಿಮೆಯನ್ನು ಕೃಷ್ಣಶಿಲೆಯಲ್ಲಿ ರಚಿಸಲಾಗಿದೆ."[೨೫] ತಾಂತ್ರಿಕತೆಯಲ್ಲಿ ನಿಪುಣರಾಗಿದ್ದ ಕುಶಲಕರ್ಮಿ ಶಿಲ್ಪಿ, ಪಾಂಚಾಳ ಕುಲಕ್ಕೆಲ್ಲ ಮನಸ್ಸಿಗೆ ಶಾಂತಿಯನ್ನು ಕಲಾವಂತರಿಗೆ ಕಲಾಶಕ್ತಿಯನ್ನು ಮೋಕ್ಷವನ್ನು ಬಯಸುವ ಹಿರಿಯರಿಗೆ ಮುಕ್ತಿ, ಕುಶಲ ಕಸುಬುದಾರರಿಗೆ ಕೌಶಲ್ಯತೆಯನ್ನುಂಟು ಮಾಡುವ ದೇವತೆಯಂತೆ ಮೂರ್ತಿ ಕೆತ್ತಲ್ಪಟ್ಟಿದೆ. ಈ ದಿವ್ಯಮೂರ್ತಿಯು ಮೂರು ಅಡಿ ಎತ್ತರದ ಪೀಠದ ಮೇಲೆ ಉತ್ತರಾಭಿಮುಖವಾಗಿ ಕುಳಿತ ಭಂಗಿಯಿದೆ. ಎಡಗಾಲು ಮಡಿಚಿದೆ. ಬಲಗಾಲು ಕೆಳಗಿದೆ. ಬೆರಳಿನ ತುದಿಯ ಮೇಲೆ ಹಿಂಬಡ ನೆಲಕ್ಕೆ ಹತ್ತದಂತೆ ಆಸೀನವಾದ ಮೂರ್ತಿ. ಎಂಟು ಕೈಗಳಿಂದ ಕೂಡಿದ ದೇವಿಯ ಮೂರ್ತಿಯು ವೀರಾವೇಶ ಭಂಗಿಯನ್ನು ತಿಳಿಸುತ್ತದೆ. ನಾಲ್ಕು ಬಲಗೈಗಳಲ್ಲಿ ಹರಿತವಾಗಿ ಕಾಣುವ ಖಡ್ಗ, ತ್ರಿಶೂಲ, ಚಕ್ರ ಮತ್ತು ಕೃಪಾಲವನ್ನು ಹೊಂದಿದೆ. ನಾಲ್ಕು ಎಡಗೈಗಳಲ್ಲಿ ಪಾನಪಾತ್ರೆ, ಡಮರು, ನಾಗಪಾಶ ಮತ್ತು ಡಾಲು ಆಯುಧಗಳನ್ನು ಮತ್ತು ಸಂಹರಿಸಿ ಬಂದ ಅಸುರರ ರುಂಡಗಳನ್ನು ಹಿಡಿದಿದ್ದಾಳೆ. ವಜ್ರಾಕಾರದ ಕೆತ್ತನೆಗಳಿಂದ ಕೂಡಿದ ಕಿರೀಟ ಮುಕುಟ, ಮೇಲೆ ಶಿಲಾಮಣಿ, ರತ್ನಪಟ್ಟಿ, ಪತ್ರಕುಂಡಲ, ಕಂಠಿಹಾರ, ರುಂಡಮಾಲಾ, ಕೆಯೂರ, ಉದರಬಂಧ, ಕಟಿಸೂತ್ರ,

ಕಂಕನ ಪಾದಸರ, ಕಾಲುಗಡಗ ಮತ್ತು ಉಂಗುರು ಮೊದಲಾದ ಆಭರಣಗಳನ್ನು ಸೂಕ್ಷ್ಮವಾಗಿ ಬಿಡಿಸಲಾಗಿದೆ. ಕಾಳಮ್ಮನ ವಿಗ್ರಹ ಮೇಲ್ನೋಟಕ್ಕೆ ಸುಂದರ, ಸೌಮ್ಯವಾಗಿ ಕಂಡರೂ ಬಾಯಲ್ಲಿ ಎರಡು ಕೋರೆ ಹಲ್ಲುಗಳನ್ನು ಹೊರ ಕಾಣುವಂತೆ ಶಿಲ್ಪವನ್ನು ಚಿತ್ರಿಸಲಾಗಿದೆ.

ಕಾಳಮ್ಮನ ಮೂರ್ತಿಯನ್ನು ಕೂಡ್ರಿಸಲಾದ ಮೂರು ಅಡಿ ಎತ್ತರದ ಪೀಠದ ಕೆಳಭಾಗದಲ್ಲಿ ಪಿಶಾಚಿ ಪ್ರಾಣಿಗಳನ್ನು ಕೆತ್ತಲಾಗಿದೆ. ವಿಗ್ರಹದ ಬಲ ಪಾದದ ಬಳಿ ಸುಮಾರು ಮೂರು-ನಾಲ್ಕು ಪಿಶಾಚಿಗಳ ಮೂರ್ತಿಗಳಿದ್ದು, ಅವು ಕೈಯಲ್ಲಿ ಸಂಗೀತದ ಉಪಕರಣಗಳನ್ನು ಹಿಡಿದು ಕುಣಿವ ಭಂಗಿಯಿದೆ. ಮೂರ್ತಿಯ ಎಡಗೈಯಲ್ಲಿರುವ ಪಾನಪಾತ್ರೆ ಮತ್ತು ಅಸುರರ ರುಂಡ ಹಿಡಿದಿರುವ ಕೆಳಭಾಗದಲ್ಲಿ ಪಿಶಾಚಿ ಮತ್ತು ನಾಯಿಯ ಚಿತ್ರವಿದೆ. ನಾಯಿಯು ಮೂರ್ತಿಯ ಕೈಯಲ್ಲಿರುವ ರುಂಡದತ್ತ ಮುಖ ಮಾಡಿದೆ. ಕತ್ತರಿಸಿದ ರುಂಡದಿಂದ ರಕ್ತದ ಹಣಿಗಳು ಉದುರುವುದು, ಅದನ್ನು ಆ ನಾಯಿಯು ಕುಡಿಯಲು ಹೋಗುತ್ತಿರುವುದನ್ನು ಕಾಣುತ್ತೇವೆ. ಕೆಲವು ಪಿಶಾಚಿಗಳು ನಾಯಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿರುವ ಶಿಲ್ಪ, ನಿಜವಾಗಲೂ ಒಂದು ದೃಶ್ಯಕಾವ್ಯದಂತೆ ಶಿಲ್ಪಿ, ಅಪೂರ್ವವಾದ ಮೂರ್ತಿಯನ್ನು ಕೆತ್ತಿದ್ದಾನೆ. ಆದರೆ ಇಂಥ ಮೂರ್ತಿಯನ್ನು ಕೆತ್ತಿದ ಶಿಲ್ಪಿಯ ಕುರಿತು ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಇದನ್ನು ಹೆಚ್ಚಿನ ಸಂಶೋಧನಾ ಅಧ್ಯಯನದಿಂದ ತಿಳಿಯಬೇಕು.

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ
ದುಷ್ಕೃತ್ಯಾಂ ಭಕ್ತನಾಂ ಶೋಕವಿನಾಶಾಯ
ಕಾಮಿತಾರ್ಥ ಪ್ರದಾಯ ಚ- ಸಂಭವಾಮಿ ಯುಗೆ ಯುಗೆ"

ಎನ್ನುವಂತೆ ಯಾವ ಭಕ್ತರು ಅನನ್ಯಭಾವದಿಂದ ತನ್ನನ್ನು ಭಜಿಸುವರೋ ಸರ್ವಾರ್ಪಣ ಭಾವದಿಂದ ಶರಣು ಹೋಗುತ್ತಾರೋ ಅವರ ಸಹಾಯಕ್ಕೆ ಸ್ಮರಿಸಿದ ಕ್ಷಣವೇ ಧಾವಿಸುತ್ತಾಳೆ. ಎಂಬ ಭಾವಮುದ್ರೆಯನ್ನು ಕಾಳಮ್ಮ ಮೂರ್ತಿ ಹೊತ್ತಿದೆ. ಐತಿಹ್ಯದ ಹಿನ್ನೆಲೆಯಲ್ಲಿ ಮೂರ್ತಿಯನ್ನು ಗಮನಿಸುವುದಾದರೆ, ಕೃಷ್ಣಶಿಲೆಯಲ್ಲಿ ಮೂರ್ತಿ ತಯಾರಾಗಿದೆ. ಅದರ ಮೈತುಂಬ ಬಂಗಾರದ ರೇಖೆಗಳಿವೆ. ಈ ಶಿಲ್ಪಕ್ಕೆ 'ಪರುಶಮಣಿ'ಯನ್ನು ಶಿಲ್ಪಿಯು ಅಳವಡಿಸಿದ್ದಾನೆ. ಇದರಿಂದ ಕಬ್ಬಿಣವನ್ನು ಮೂರ್ತಿಸ್ಪರ್ಶಿಸಿದರೆ ಅದು ಬಂಗಾರವಾಗುತ್ತಿತ್ತೆಂದು ಹೇಳಲಾಗುತ್ತದೆ. ಈ ಮೂರ್ತಿ ಹಾಗೂ ಗರ್ಭಗೃಹಗಳನ್ನು ವಿಕ್ಷೀಸಿದರೆ ಬರುವ ಭಕ್ತರಿಗೆ ಶಾಂತಿ-ನೆಮ್ಮದಿಯನ್ನುಂಟು ಮಾಡುವ ದೃಷ್ಟಿಯಿಂದ ಈ ಕೃಷ್ಣಶಿಲೆಯನ್ನು ಭೂಗರ್ಭಶಾಸ್ತ್ರದ ನಿಯಮದಂತೆ ಸ್ಥಾಪಿಸಿರಬೇಕು. ಮೂರ್ತಿ ಸ್ಥಾಪಿಸಿದ ಕೆಳನೆಲ, ಅಂತರ್ಜಲ ಭೂಮಿಯಾಗಿದೆ. ದಕ್ಷಿಣ, ಪಶ್ಚಿಮ, ನೈರುತ್ಯ ದಿಕ್ಕುಗಳಿಂದ ಇಳಿಜಾರಿನಲ್ಲಿ ಹರಿಯುವ ಸಣ್ಣ ಝರಿಗಳ ಗಂಗಾ ತಾನವು ಆಗಿದೆ. ಹೆಚ್ಚು ನೀರಿನ ಅಂಶದಿಂದ ಕೂಡಿದ

ಕಾಳಮ್ಮನ ವಿಗ್ರಹವಿರುವ ದೇವಾಲಯದ ಗರ್ಭಸ್ಥಾನವು ಯಾವಾಗಲು ತಂಪಾಗಿರುತ್ತದೆ. ಇದರಿಂದ ಭಕ್ತರಿಗೆ ಶಾಂತಿ-ನೆಮ್ಮದಿಗಳು ಸಹಜವಾಗಿ ಲಭಿಸುವಂತಾಗಿದೆ.

ಕಮ್ಮಟೇಶ್ವರ ದೇವಸ್ಥಾನ

ಕಾಳಮ ದೇವಸ್ಥಾನ ಉತ್ತರ ಭಾಗದಲ್ಲಿ ಪೂರ್ವಾಭಿಮುಖವಾಗಿ ಕಮ್ಮಟೇಶ್ವರ ದೇವಸ್ಥಾನವಿದೆ. ಇದನ್ನು ಕ್ರಿ.ಶ.೧೧೮೬ರಲ್ಲಿ ಕಲ್ಯಾಣ ಚಾಲುಕ್ಯ ಕೊನೆ ಅರಸ ನಾಲ್ಕನೆಯ ಸೋಮೇಶ್ವರನ ಕಾಲದಲ್ಲಿ ಶಿರಸಂಗಿ ಮಂಡಲ ಹಬ್ಬೆನಾಯಕನು ಶಿಲೆಯಿಂದ ಕಟ್ಟಿದ್ದಾನೆಂದು ಈ ದೇವಸ್ಥಾನದ ಪೂರ್ವಾಭಿಮುಖವಾಗಿ ನಿಲ್ಲಿಸಲ್ಪಟ್ಟ ಶಾಸನ ಹೇಳುತ್ತದೆ. ಇದೇ ಶಾಸನದ ಉಲ್ಲೇಖದಂತೆ ಉಮಾ-ಮಹೇಶ್ವರನನ್ನು ಹಬ್ಬೆನಾಯಕನ ಮೊದಲ ಹೆಂಡತಿ, ಅದೇ ಊರಿನ ಗಾವುಂಡನ ಮಗಳಾದ ಮಲ್ಲಿಯಕ್ಕ ಪ್ರತಿಷ್ಠಾಪಿಸುತ್ತಾಳೆ. ಕಮ್ಮಟೇಶ್ವರ ದೇವಸ್ಥಾನವು ಗರ್ಭಗೃಹ, ಅಂತರಾಳ ಹೊಂದಿದೆ. ನವರಂಗ ಅದರ ಮಧ್ಯ ಕಂಬಗಳಿವೆ. ಇವು ಚೌಕಾಕಾರದಿಂದ ಕೂಡಿದ ಕಂಬಗಳು. 'ಚೌಕಾಕಾರದ ದೊಡ್ಡ ಕಂಬಗಳು ಕಲ್ಯಾಣ ಚಾಲುಕ್ಯರ ಆರಂಭ ಕಾಲಕ್ಕೆ ಅಂದರೆ ೯-೧೦ನೆಯ ಶತಮಾನದಲ್ಲಿ ನಿರ್ಮಾಣವಾದವೆಂದು ತಿಳಿಯುತ್ತದೆ. ಅಲ್ಲದೆ ದೇವಾಲಯದ ಕೆಲವು ಭಾಗಗಳಲ್ಲಿರುವ ಶಿಲೆ ಮತ್ತು ಇಟ್ಟಿಗೆಯ ಅವಶೇಷಗಳಿಂದ ರಾಷ್ಟ್ರಕೂಟರ ಕಾಲಕ್ಕಿಂತ ಮೊದಲೇ ಇಲ್ಲಿ ದೇವಾಲಯವಿತ್ತೆಂದು ಡಾ.ವಾಸುದೇವ ಬಡಿಗೇರ ಅವರು ಅಭಿಪ್ರಾಯಪಡುತ್ತಾರೆ.

ದೇವಸ್ಥಾನದ ನವರಂಗದ ಅಧಿಷ್ಠಾನ ಪ್ರವೇಶದ್ವಾರದವರೆಗೂ ಮುಂದುವರೆದಿದೆ. ಇದರಿಂದ ರಂಗಮಂಟಪ ಮತ್ತು ಮುಖಮಂಟಪಗಳು ಬೇರೆ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರಬೇಕು. ರಂಗಮಂಟಪದ ಮೇಲ್ಛಾವಣಿ ಇಳಿಜಾರಿನಲ್ಲಿದೆ. ಪೂರ್ವಾಭಿಮುಕವಾಗಿ ಮಂಟಪ ಗಮನಿಸಿದರೆ ೯ ಬೃಹತ್ ಪ್ರಮಾಣದ ಏಕ ಶಿಲೆಗಳು ಇಳಿಜಾರಾಗಿವೆ. ನವರಂಗದ ಮಧ್ಯ ನಾಲ್ಕು ಕಂಬಗಳಿದ್ದು, ಎತ್ತರವಾದ ಅಧಿಷ್ಠಾನದ ಮೇಲೆ ೮ ದುಂಡು ಕಂಬಗಳಿವೆ. ಅವುಗಳಿಗೆ ಹೊಂದಿಕೊಂಡು ಅಧಿಷ್ಠಾನದ ಮೇಲೆ ಸುಖಾಸೀನವಾಗಲು ಶಿಲಾಸನಗಳಿವೆ. ಪೂರ್ವಾಭಿಮುಖದ ಪ್ರವೇಶದ್ವಾರದ ಅಧಿಷ್ಠಾನದ ಮೇಲೆ ಒಬ್ಬೊಬ್ಬ ಮನುಷ್ಯ ಕುಳಿತುಕೊಳ್ಳುವಷ್ಟು ವಿಶಾಲ ಜಾಗೆಯಿದೆ. ರಂಗಮಂಟಪದ ತಲಪಾಯ ಕಾಳಮ್ಮನ ದೇವಸ್ಥಾನದ ತಲಪಾಯಕ್ಕಿಂತ ಕೆಳಗಿದೆ. ಕಾಳಮ್ಮನ ದೇವಸ್ಥಾನದಿಂದ ರಂಗಮಂಟಪಕ್ಕೆ ಸುಮಾರು ೫ ೧/೨-೬ ಅಡಿ ಎತ್ತರದ ಮನುಷ್ಯ ಪ್ರವೇಶಿಸಿದರೆ, ಮಂಟಪದ ಇಳಿಜಾರಿನ ಶಿಲೆಗಳು ವ್ಯಕ್ತಿಯ ತಲೆಗೆ ಏಟನ್ನು ನೀಡುತ್ತವೆ. ರಂಗಮಂಟಪದ ಪೂರ್ವಭಾಗದಲ್ಲಿ ಪಾದಗಟ್ಟೆಯಿದೆ. ಭಗ್ನಗೊಂಡ ಸೂರ್ಯನಾರಾಯಣ ಮತ್ತು ಸರ್ಪಗಲ್ಲನ್ನು ಇಡಲಾಗಿದೆ. ಕಮ್ಮಟೇಶ್ವರ ಗರ್ಭಗೃಹದ ಮೇಲ್ಛಾವಣಿಯಲ್ಲಿ ನಿರ್ಮಿಸಲಾದ ಏಕಕಳಶ ಗೋಪುರವಿದೆ.

'ಕಮ್ಮಟೇಶ್ವರ ಮತ್ತು ಕಾಳಮ್ಮನ ಗರ್ಭಗೃಹದ ಮೇಲಿನ ಶಿಖರಗಳನ್ನು ಸು.ಕ್ರಿ.ಶ.೧೫ನೆಯ ಶತಮಾನದಲ್ಲಿ ಜೀರ್ಣೋದ್ಧಾರಗೊಂಡಿರಬಹುದಾದ ಎರಡುವರೆ ಅಡಿ ಎತ್ತರದ ಸುಂದರ ಶಿವಲಿಂಗ ಮೂರ್ತಿಯನ್ನು ಕಮ್ಮಟ ಈಶ್ವರ ಕಮ್ಮಟೇಶ್ವರನೆಂದು ಪೂಜಿಸಲಾಗುತ್ತಿದೆ. 'ದೇವಾಲಯದ ಪ್ರವೇಶದ ದ್ವಾರಕ್ಕೆ ಅರ್ಧಗಂಬ, ಲಲಾಟಬಿಂಬದ ಇಕ್ಕೆಲಗಳಲ್ಲಿ ಇಳಿಬಿದ್ದ ಪದ್ಮಗಳನ್ನು ಬಿಡಿಸ ಲಾಗಿದೆ. ಅರ್ಧಗಂಬಗಳ ಬೋದಿಗೆ, ಮೇಲ್ಭಾಗದ ಪಟ್ಟಿಕೆ ಹಿಂಸರಿತ–ಮುತ್ಸರಿತಗಳಿಂದ ಕೂಡಿದ್ದು, ರಾಷ್ಟ್ರಕೂಟ ದೇವಲಯಗಳ ಮೇಲಿರುವ ಕಂಬಗಳ ಮಾದರಿಯಲ್ಲಿವೆ. ಅವುಗಳ ಕೆಳ ಮೇಲೆ ಅಸಮ ಚೌಕಾಕಾರ, ಮಧ್ಯ ಕುಂಬಾಕಾರ ಮೇಲ್ಭಾಗ ವೃತ್ತಾಕಾರದಲ್ಲಿವೆ. ವೃತ್ತಾಕಾರದ ಮುಚ್ಚಳ, ಚೌಕಾಕಾರ ಫಲಕ ಬೋದಿಗೆಗಳಿಂದ ಕೂಡಿವೆ. ಅಂತರಾಳದ ಪ್ರವೇಶ ದ್ವಾರದ ಅರ್ಧಗಂಭಗಳು ಇವೇ ಮಾದರಿಯಲ್ಲಿದ್ದರೂ ಅವುಗಳ ಮೇಲೆ ಪದ್ಮ, ಚೈತ್ಯಾಕಾರದ ಕೆತ್ತನೆಗಳಿವೆ. ಲಲಾಟ ಬಿಂಬದ ಮೇಲ್ಭಾಗದ ಪಟ್ಟಿಕೆ ಇಳಿಜಾರಾಗಿದ್ದು ಸುತ್ತಲು ಪದ್ಮಜಾಲಂಧರ ಗಳಿವೆ. ನವರಂಗದ ಪ್ರವೇಶದ್ವಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ ಮೇಲ್ಭಾಗ ಕೀರ್ತಿಮುಖ ಇಕ್ಕೆಲಗಳಲ್ಲಿ ಚಂದ್ರ–ಸೂರ್ಯರ ಆಕೃತಿಗಳಿವೆ. ಇಳಿಬಿದ್ದ ಅಲಂಕರಣೆಯ ಪದ್ಮಗಳಿಂದ ಮೊಗ್ಗುಗಳು ಹೊರಸೂಸುತ್ತಿವೆ. ಮೇಲಿನ ಪಟ್ಟಿಕೆಯಲ್ಲಿ ರೇಖಾಮಾದರಿಯ ಶಿಖರ ಪಟ್ಟಿಕೆ, ಪದ್ಮಗಳನ್ನು ಬಿಡಿಸಲಾಗಿದೆ ಎಂದು ಚರಿತ್ರಜ್ಞ ಡಾ.ವಾಸುದೇವ ಬಡಿಗೇರ ಅವರ ಅಭಿಪ್ರಾಯ ಒಪ್ಪಿತವಾದುದಾಗಿದೆ.

ಕಮ್ಮಟೇಶ್ವರ ದೇವಾಲಯದ ಗರ್ಭಗೃಹದ ಮೇಲೆ ನಿರ್ಮಿಸಲಾದ ಶಿಖರಗಳು ದ್ರಾವಿಡ ಶೈಲಿಯನ್ನು ಸೂಚಿಸುತ್ತವೆ. ಇದು ಕಾಳಮ್ಮನ ಗರ್ಭಗೃಹದ ಶಿಖರಕ್ಕೂ ಅನ್ವಯವಾಗುವಂತದ್ದಾಗಿದೆ. ಈ ದೇವಾಲಯದ ಹೊರಗೋಡೆ ಸರಳ ಶೈಲಿಯಲ್ಲಿದ್ದು ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ಕಂಠ, ಕುಮುದ ಭಾಗಗಳಿವೆ. ಕುಮುದದ ಮೇಲ್ಭಾಗವನ್ನು ಅಡ್ಡಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ಗೋಡೆಯ ಮೇಲ್ಭಾಗ ಎರಡು ಅಡ್ಡಪಟ್ಟಿಕೆಗಳು ಸುತ್ತಲೂ ಚಜ್ಜಾ ಇವೆ.

ಕಮ್ಮಟೇಶ್ವರನ ನವರಂಗದಲ್ಲಿ ಪರಿವಾರ ದೇವತಾ ಶಿಲ್ಪ

ಭೈರವ : ಎರಡು ಅಡಿ ಎತ್ತರದ ಗೋಡೆ ಗೂಡಿನಲ್ಲಿ ಭೈರವನ ಮೂರ್ತಿಯಿದೆ. ಬಲ ಎರಡು ಕೈಯಲ್ಲಿ ಡಮರು ಖಡ್ಗ ಇದೆ. ಎಡ ಎರಡು ಕೈಯಲ್ಲಿ ತ್ರಿಶೂಲ ಮತ್ತು ಪಾನಪಾತ್ರೆ ಹಿಡಿದ ಕೈಯಲ್ಲಿ ರುಂಡಗಳು ಕಾಣಿಸುತ್ತವೆ. ರುಂಡದಿಂದ ಸೋರುವ ರಕ್ತದ ಹಣಿಗಳನ್ನು ಪಡೆಯಲು ನಾಯಿ ಪ್ರಯತ್ನಿಸುತ್ತಿದ್ದರೆ, ಪಿಶಾಚಿ ಅದನ್ನು ಬಡಿದೊಡಿಸಲು ಪ್ರಯತ್ನಿಸುತ್ತಿದೆ. ಪಾದದ ಕೆಳಗೆ ಚಿಕ್ಕ ಪಿಶಾಚಿಗಳ ಶಿಲ್ಪವಿದೆ. ಬಲಗಡೆ ಗಣಗಳು ತಾಳ ಮದ್ದಲೆ ನುಡಿಸುವುದರೊಂದಿಗೆ ಕುಣಿಯುತ್ತಿವೆ. ಜಟಾರೂಪದ ಕಿರೀಟವಿದೆ. ಪತ್ರಕುಂಡಲ ಕಂಠಿಹಾರ, ಕಠಿಸೂತ್ರಗಳಿದ್ದು ಎಡಭುಜ ದಿಂದ ಕೆಳಗಿಳಿಯುವ ರುಂಡಮಾಲೆಯು ಮೊಳಕಾಲದವರೆಗೂ ಇಳಿದು ಯಜ್ಞೋಪವೀತದಂತೆ

ಶೋಭಿಸುತ್ತವೆ. ಕಂಕಣಗಳಿವೆ. ನಾಗವು ಭೈರವನ ತೊಡೆಗಳೆರಡನ್ನು ಸುತ್ತಿದೆ. ಪಾದಸರ ಮತ್ತು ನಾಗಬಂಧಗಳಿಂದ ಭಾರವಾದ ಪಾದತ್ರಾಣಗಳ ಕೆತ್ತನೆಯ ಶಿಲ್ಪ ವಿಶಿಷ್ಟವೆನಿಸುತ್ತದೆ. ಶಿಲ್ಪದ ಪಾದಗಳಲ್ಲಿ ಪಾದರಕ್ಷೆಗಳಿವೆ.

ಉಮಾ–ಮಹೇಶ್ವರ : ಎಡಭಾಗದ ಎರಡನೆಯ ಗೂಡಿನಲ್ಲಿ ಉಮಾ–ಮಹೇಶ್ವರ ಶಿಲ್ಪವಿದೆ. ಬೇರೆ ಬೇರೆ ಕಡೆ ಕಾಣುವ ಶಿವ–ಪಾರ್ವತಿಯ ಮೂರ್ತಿಗಳಂತೆ ಕಾಣಿಸುತ್ತದೆ. ಉಡದ ಮೇಲೆ ಕಾಲಿಟ್ಟಿರುವ ಪಾರ್ವತಿಯು ತನ್ನ ವಾಹನವಿದು ಎಂದು ತಿಳಿಸುವ ಚಿತ್ರಣವಿದೆ. ನಂದಿಯ ಮೇಲೆ ಪರಮೇಶ್ವರ ಕಾಲಿಟ್ಟ ಚಿತ್ರವಿದೆ. ಶಿವನ ಎಡತೊಡೆಯ ಮೇಲೆ ಕುಳಿತ ಉಮೆಯ ಶಿಲ್ಪವು ಅಂಗಸೌಷ್ಠವದಿಂದ ಮನಾಕರ್ಷಕವಾಗಿದೆ. ಉಮೆಯ ಪಕ್ಕ ನವಿಲುವಾಹಕ ಕುಮಾರಸ್ವಾಮಿಯನ್ನು, ಮಹೇಶ್ವರನ ಪಕ್ಕದಲ್ಲಿ ಕುಳಿತ ವಿಘ್ನೇಶ್ವರನ ಚಿಕ್ಕದಾದ ಮೂರ್ತಿಗಳಿವೆ. ಕೆಳಪಟ್ಟಿಕೆಯಲ್ಲಿ ನಾಲ್ಕು ಸಿಂಹಗಳ ಚಿಕ್ಕಮೂರ್ತಿಗಳಿವೆ. ಉಮಾ–ಮಹೇಶ್ವರರಿಗೆ ಚಿಕ್ಕ ಮತ್ತು ದೊಡ್ಡದಾದ ಹಲವಾರು ಆಭರಣಗಳನ್ನು ಶಿಲ್ಪಿ ಸೂಕ್ಷ್ಮವಾಗಿ ಕೆತ್ತಿದ್ದಾನೆ. ಪರಮೇಶ್ವರನ ಕೈಯಲ್ಲಿ ತ್ರಿಶೂಲ, ಡಮರು, ಅಕ್ಷಮಾಲಾವಿದೆ. ಮಹೇಶ್ವರ ಪಾರ್ವತಿಯ ಎಡಭಾಗದ ಮೇಲೆ ಕೈಯಿಟ್ಟಿದ್ದಾನೆ. ಪಾರ್ವತಿಯು ಕೈಯಲ್ಲಿ ಹಣ್ಣು–ಹೂಗಳನ್ನು ಹಿಡಿದಿದ್ದಾಳೆ. ಈ ಎರಡು ಸುಂದರ ಶಿಲ್ಪಗಳಿಗೆ ಮತ್ತಷ್ಟು ಸೌಂದರ್ಯವನ್ನು ವರ್ಧಿಸುವಂತೆ ಮೂರ್ತಿಗಳ ಹಿಂದೆ ಹೂವಿನೆಸಳುಗಳ ಸೂಕ್ಷ್ಮ ಕೆತ್ತನೆಯ ಪ್ರಭಾಮಂಡಲವಿದ್ದು, ಮಧ್ಯ ಕೀರ್ತಿಮುಖವಿದೆ.

ಷಣ್ಮುಖ : ಉತ್ತರಾಭಿಮುಖವಾಗಿ ಎದ್ದು ನಿಂತ ಮಯೂರನ ಮೇಲೆ ಆರೂಢನಾಗಿರುವ ಮೂರು ಮುಖದ ಸುಂದರ ಶಿಲ್ಪ ಷಣ್ಮುಖನದು. ಮೂರು ಮುಖಗಳಿಗೆ ತ್ರಿಭುಜಾಕಾರದ ಕಿರೀಟವಿದ್ದು, ಎದೆಯ ಮೇಲೆ ಸುಂದರ ಆಭರಣಗಳನ್ನು ಕೆತ್ತಲಾಗಿದೆ. ಬಲಗೈಯಲ್ಲಿ ಅಂಕುಶ, ಪಾಶ, ಹಣ್ಣು ಹಿಡಿದುಕೊಂಡತ್ತಿದೆ. ಇನ್ನೊಂದು ಕೈಯಲ್ಲಿ ಅಕ್ಷಮಾಲಾ ಸಹಿತ ಅಭಮುದ್ರಿತವಾಗಿದೆ. ಹೂವಿನೆಸಳಿನ ಸುಂದರ ಪ್ರಭಾಮಂಡಲವಿದ್ದು, ಮಧ್ಯ ಕೀರ್ತಿಮುಖವಿದೆ. ಷಣ್ಮುಖದ ಎಡ–ಬಲ ಬದಿಯಲ್ಲಿ ಚಿಕ್ಕದಾದ ಎರಡು ಚಾಮರಧಾರೆಯ ಮೂರ್ತಿಗಳಿವೆ.

ಗಣಪತಿ : ದೇವಾಲಯದ ಬಲಭಾಗದಲ್ಲಿ ಮೆದುತನದಿಂದ ಕೂಡಿದ ಪ್ರಮಾಣಬದ್ಧವಾದ ಶ್ರೇಷ್ಠಶಿಲ್ಪ ಗಣಪತಿಯದಾಗಿದೆ. ಇದರಲ್ಲಿ ಉದರವೇಷ್ಠಿತ ನಾಗಿನಿಯು ವೈಶಿಷ್ಟ್ಯಪೂರ್ಣವೆನಿಸುತ್ತದೆ. ಈ ನಾಗಿನಿಯ ಜಟಾ ಮುಕುಟ ವಿಶಿಷ್ಟ ಶೈಲಿಯಲ್ಲಿದೆ. ಉಂಗುರು–ಉಂಗುರುಗಳಾಗಿ ಎತ್ತಿಕಟ್ಟಿದ ಜಡೆಯ ಎಳೆಗಳು ಸ್ಪಷ್ಟವಾಗಿ ಕಾಣುವಂತೆ ಕೆತ್ತಲಾಗಿದೆ. ಚಿಕ್ಕ–ದೊಡ್ಡದಾದ ಆಭರಣಗಳು ಇದೆ. ಬಲಗೈಯಲ್ಲಿ ಕೊಡಲಿಯಿದ್ದು, ಆಶೀರ್ವಾದ ಮುದ್ರೆಯ ಹಸ್ತವಿದೆ. ಎಡಗೈಯಲ್ಲಿ ಅಂಕುಶ, ದಂತ, ಹಣ್ಣುಗಳಿವೆ. ಕೆಳಗೆ ಬಲಕ್ಕೆ ಇಲಿಯ ಚಿಕ್ಕ ಮೂರ್ತಿ ಕೆತ್ತಲಾಗಿದೆ.

ಸಪ್ತ ಮಾತೃಕೆಯರು : ಗಣಪತಿ ಶಿಲ್ಪದ ಪಕ್ಕದ ಗೂಡಿನಲ್ಲಿ ಸಪ್ತಮಾತೃಕೆಯ ಶಿಲ್ಪವನ್ನು ಬಿಡಿಸಲಾಗಿದೆ. ೧. ಬ್ರಾಹ್ಮಿ, ೨. ವೈಷ್ಣವಿ, ೩. ಶಾದ್ರಿ, ೪. ಕೌಮಾರಿ, ೫. ಇಂದ್ರಿ, ೬. ಯಮಿ, ೭. ಚಾಮುಂಡಿ ಇವರುಗಳ ಎಡಕ್ಕೆ ವೀರಭದ್ರ, ಬಲಕ್ಕೆ ಗಣಪತಿಯ ಏಕಶಿಲಾಮೂರ್ತಿಗಳಿವೆ. ಬಲಭಾಗದ ವೀರಭದ್ರ ತ್ರಿಶೂಲ–ಡಮರು–ದಂಡ ಹಿಡಿದ್ದಾನೆ. ಎಡಭಾಗದಲ್ಲಿ ಗಣಪತಿಯ ಕೈಯಲ್ಲಿ ಪರುಶ–ಅಂಕುಶ, ದಂತ ಹಣ್ಣನ್ನು ಹಿಡಿದ ಚಿತ್ರ ಬಿಡಿಸಲಾಗಿದೆ. ಸಪ್ತ ಮಾತೃಕೆಯರ ಹಿಂದಿನ ಕೈಗಳಲ್ಲಿ ಒಂದೊಂದು ಬಗೆಯ ಆಯುಧಗಳಿವೆ. ಕೌಮಾರಿ ಅಂಕುಶ–ಪಾಶ, ಬ್ರಾಹ್ಮಿ–ಚಕ್ರ, ಧನಸ್ಸು, ವೈಷ್ಣವಿ, ಶಂಕ–ಚಕ್ರ, ಯಮಿ ಅಂಕುಶ–ಪಾಶ, ಇಂದ್ರಿ ಅಂಕುಶ ಪಾಶ, ಚಾಮುಂಡಿ ತ್ರಿಶೂಲ–ಡಮರು ಹಾಗೂ ಶಾದ್ರಿ ತ್ರಿಶೂರ–ಡಮರು ಈ ಮೂರ್ತಿಗಳ ಕೆಳಪಟ್ಟಿಕೆಗಳಲ್ಲಿ ಎಡಕ್ಕೆ ಮೊದಲಿಗೆ ನಂದಿ, ಬಲಕ್ಕೆ ಕೊನೆಯ ಇಲಿ ಶಿಲ್ಪಗಳಿವೆ. ಸಪ್ತ ಮಾತೃಕೆಯರ ವಾಹನಗಳಾದ ನವಿಲು, ನಂದಿ, ಗರುಡ, ಮಹಿಷ, ಆನೆ, ನಾಯಿ, ಪಿಶಾಚಿ, ಚಿಕ್ಕ ಚಿಕ್ಕ ಮೂರ್ತಿಗಳನ್ನು ಕೆತ್ತಲಾಗಿದೆ.

ಸೂರ್ಯ : ಬಲಭಾಗದ ಇನ್ನೊಂದು ಗೂಡಿನಲ್ಲಿ ಸೂರ್ಯನ ಮೂರ್ತಿಯಿದೆ. ವಿವಿದ ಆಭರಣಗಳೊಂದಿಗೆ ಕಿರೀಟವಿದೆ. ಮೂರ್ತಿ ಕೈಗಳಲ್ಲಿ ಪದ್ಮವಿದೆ. ಪ್ರಭಾವಳಿಯ ಎರಡು ಕಂಬಗಳ ಮೇಲೆ ಮಕರಗಳಿವೆ. ಸೂರ್ಯನ ನೆತ್ತಿಯ ಮೇಲೆ ಕೀರ್ತಿಮುಖವಿದ್ದು ಅದು ಮಕರಗಳ ಬಾಯಿಂದ ಹೊರಸೂಸಿದ ಹಾರಗಳನ್ನು ಕೂಡಿಸಿಕೊಂಡಂತೆ ಕಾಣುತ್ತದೆ. ಶಿಲ್ಪದ ಕೆಳಭಾಗದಲ್ಲಿ ಚಾಮರ ಬೀಸುತ್ತಿರುವ ಸ್ತ್ರೀ ವಿಗ್ರಹಗಳಿದ್ದು ಅವುಗಳಿಗಿಂತ ಚಿಕ್ಕದಾದ ಬಿಲ್ಲು–ಬಾಣಗಳನ್ನು ಹಿಡಿದ ಶಿಲ್ಪಗಳಾಗಿವೆ. ಪೀಠದಲ್ಲಿ ಏಳು ಕುದುರೆಗಳ ಚಿಕ್ಕ ಶಿಲ್ಪಗಳನ್ನು ಸೂಕ್ಷ್ಮವಾಗಿ ಕಾಣುತ್ತೇವೆ.

ಪಾದಗಟ್ಟೆಯ ಬಳಿಯಿರುವ ಶಿಲ್ಪಗಳು : ಇಲ್ಲಿ ಪಾದಗಟ್ಟೆ ಮುಂಭಾಗದಲ್ಲಿ ಎರಡು ಶಿಲ್ಪಗಳಿವೆ. ಒಂದು ವಿವಿಧ ರೀತಿಯ ಆಭರಣಗಳನ್ನು ತೊಟ್ಟ ಪಾಶ–ಚಕ್ರ, ಗದಾ–ಪದ್ಮಗಳನ್ನು ಹಿಡಿದ, ಗರುಡನ ಮೇಲೆ ಕುಳಿತ ಶಿಲ್ಪವಿದೆ. ಇದು ಬಹುತೇಕ ಒಳಗೆ ಗೂಡಿನಲ್ಲಿರುವ ಸೂರ್ಯನ ಶಿಲ್ಪವನ್ನು ಹೋಲುತ್ತದೆ. ಇದು ಭಗ್ನಗೊಂಡ ಮೇಲೆ ಹೊರಗೆ ತಂದು ಇಟ್ಟಿರಬಹುದಾಗಿದೆ. ಇನ್ನೊಂದು ಐದು ಹೆಡೆಗಳ ಸರ್ಪದ ಶಿಲ್ಪವಿದೆ.

ಉಡಚಮ್ಮ ದೇವಸ್ಥಾನ : ಇತ್ತೀಚಿನ ಸಂದರ್ಭಗಳಲ್ಲಿ ಕಟ್ಟಲಾದ ಪೂರ್ವಾಭಿಮುಖದ ಉಡಚಮ್ಮನ ದೇವಸ್ಥಾನವಿದೆ. ಎರುಡ ಗರ್ಭಗೃಹಗಳಿವೆ. ಉಡಚಮ್ಮನ ಅಂದರೆ ಅದನ್ನು ಮಹಿಷಮರ್ಧಿನಿ ಎಂದು ಕರೆಯುವ ಮೂರ್ತಿ ಗರ್ಭಗೃಹದಲ್ಲಿದೆ. ೪ ಅಂತಸ್ತಿನಿಂದ ಕೂಡಿದ ಸಣ್ಣದಾದ ಶಿಖರದ ಮೇಲೆ ಕಳಶವನ್ನು ಹೊಂದಿದೆ. ಈಕೆಯನ್ನು ಗ್ರಾಮದೇವತೆ ಎಂದು ಕರೆಯಲಾಗುತ್ತಿದೆ

ಕಾಳಮ್ಮ ಇಲ್ಲಿ ನೆಲೆಸುವ ಮುನ್ನ ಉಡಚಮ್ಮನ ಅನುಮತಿಯನ್ನು ಪಡೆಯುತ್ತಾಳೆ. ಭಕ್ತರು ನಿನಗಿಂತ ಮೊದಲು ನನ್ನ ದರ್ಶನ ಮಾಡಿಕೊಳ್ಳಬೇಕು ಎಂದು ಷರತ್ತನ್ನು ಉಡಚಮ್ಮ ಕಾಳಮ್ಮನಿಗೆ ವಿಧಿಸಿ ಒಪ್ಪಿಗೆ ನೀಡಿದ್ದಾಳೆ ಎಂಬ ಐತಿಹ್ಯಗಳನ್ನು ಕಾಣುತ್ತೇವೆ.

ಅಮೃತೇಶ್ವರ ದೇವಸ್ಥಾನ : ಭೈರವನ ದೇವಾಲಯದ ಪಕ್ಕದಲ್ಲಿ ಈಗ ಶಾಸನ ನಿಲ್ಲಿಸಿದ ಸ್ಥಳದ ಮೇಲೆ ಗರ್ಭಗೃಹ ಮತ್ತು ಮಂಟಪವಿರುವ ಅಮೃತೇಶ್ವರ ದೇವಸ್ಥಾನವಿದೆ. ಗರ್ಭಗೃಹದಲ್ಲಿ ಚಿಕ್ಕದಾದ ಶಿವಲಿಂಗವಿದೆ. ಮುಖಮಂಟಪವಿದೆ. ಎರಡು ಕಂಬಗಳಿದ್ದು ಇಳಿಜಾರಾಗಿ ಮೇಲ್ಛಾವಣಿಯಿಂದ ಕಲ್ಲುಗಳನ್ನು ಕೂಡ್ರಿಸಲಾಗಿದೆ. ಕಮ್ಮಟೇಶ್ವರ ದೇವಾಲಯ ಕಟ್ಟಿಸುವ ಮೊದಲು ಇದನ್ನು ಮಾದರಿ ದೇವಸ್ಥಾನಕ್ಕಾಗಿ ನಿರ್ಮಿಸಿದ ದೇವಸ್ಥಾನವಾಗಿರಬೇಕು.

ಈಶ್ವರ ದೇವಸ್ಥಾನ : ಕೆಂಪು ಶಿಲೆಯಲ್ಲಿ ಕಟ್ಟಲ್ಪಟ್ಟ ಈಶ್ವರನ ದೇವಸ್ಥಾನ ಸಭಾಮಂಟಪ, ಅಂತರಾಳಗಳನ್ನು ಹೊಂದಿದ್ದರು ಈಗ ಹಾಳಾದಂತಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಹೊರಗೆ ನಂದಿವಿಗ್ರಹಗಳಿವೆ.

ರಾಮ-ಲಕ್ಷ್ಮಣ ದೇವಸ್ಥಾನ : ಭೀಮ ತೀರ್ಥದ ಪಕ್ಕದಲ್ಲಿ ಈ ದೇವಸ್ಥಾನವಿದೆ. ಋಷ್ಯಶೃಂಗನ ಆಶೀರ್ವಾದ ಪಡೆದ ನಂತರ ರಾಮ-ಲಕ್ಷ್ಮಣ-ಹನುಮಂತ ಪ್ರತ್ಯೇಕ ಮೂರು ಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದ ಶಿಲ್ಪಲಿಂಗಗಳಿವೆ. ೨ ಶತಮಾನಗಳ ಹಿಂದೆ ಜೀರ್ಣೋದ್ಧಾರ ಪಡೆದಿದ್ದು, ದೇವಸ್ಥಾನದಲ್ಲಿ ಸಭಾ ಮಂಟಪವಿದೆ.

ಮೌನೇಶ್ವರ ಗುಡಿ : ಭೀಮತೀರ್ಥದ ಪಕ್ಕದಲ್ಲಿ ಹಿಂದೆ ಚಿಕ್ಕದಾದ ಮತ್ತು ಇತ್ತೀಚೆಗೆನ್ನಲಾದ ಮೌನೇಶ್ವರ ಗುಡಿಯಿದೆ. ಮೇಲೆ ಶಿಖರವಿದೆ. ಒಳಗೆ ಹೂಜಿ ಮತ್ತು ಕೊಡಲಿಗಳಿವೆ. ಒಂದೇ ದ್ವಾರವನ್ನು ಹೊಂದಿದೆ.

ಕಲ್ಮೇಶ್ವರ(ಹಾಳುಬಿದ್ದ) ದೇವಸ್ಥಾನ : ಕಾಳಮ್ಮನ ದೇವಾಲಯದ ಮುಂಭಾಗದ ಬಯಲಿನಲ್ಲಿ ಆಗ್ನೇಯಕ್ಕೆ ಹಾಳು ಬಿದ್ದ ಕಲ್ಮೇಶ್ವರ ದೇವಸ್ಥಾನವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಪ್ರವೇಶ ದ್ವಾರವಿದ್ದು, ಅರ್ಧಕಂಬಗಳಿವೆ. ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿದ ದೇವಸ್ಥಾನವಿದು ಎಂದು ಗುರುತಿಸಬಹುದಾಗಿದೆ.

ಮಾರುತಿ ದೇವಸ್ಥಾನ : ಕಾಳಮ್ಮನ ದಕ್ಷಿಣಕ್ಕಿರುವ ಮಾರುತಿ ದೇವಸ್ಥಾನವನ್ನು ೧೨ ಶತಮಾನದ ನಂತರದ ೧೮ನೇ ಶತಮಾನದ ಮಧ್ಯದಲ್ಲಿ ನಿರ್ಮಿಸಲಾಗಿದೆ. ಮೂರು ಅಡಿ ಎತ್ತರದ ಶಿಲ್ಪವಿದೆ. ಊರಿಗೊಬ್ಬ ಹನುಮಪ್ಪ ಇರಬೇಕು ಎಂಬಂತೆ ಊರು ಹೊರಗೆ ಮಾರುತಿ ದೇವಸ್ಥಾನ ಕಟ್ಟಲಾಗಿದೆ.

ಶಿರಸಂಗಿಯಲ್ಲಿ ಪುರಾಣ ಪ್ರಸಿದ್ಧ ಹಾಗೂ ಇತ್ತೀಚಿನ ಸಂದರ್ಭಗಳಲ್ಲಿ ನಿರ್ಮಿಸಲಾದ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ಒಳಕಲ್ಲು ಬ್ರಹ್ಮ, ಬನ್ನಿಮಹಾಂಕಾಳಿ, ಕಲ್ಮೇಶ್ವರ, ಕಂಡಸಿದ್ದೇಶ್ವರ, ಬಸವಣ್ಣ ಮೊದಲಾದ ದೇವಸ್ಥಾನಗಳೊಂದಿಗೆ ದರ್ಗಾಗಳಿವೆ.

ಪೂಜಾ ವಿಧಾನಗಳು

ಶಕ್ತಿ ದೇವತೆಯನ್ನು ಪ್ರತಿಷ್ಠಾಪಿಸುವುದರ ಜೊತೆಗೆ ಅವಳನ್ನು ಪೂಜಿಸುತ್ತ ಬಂದಿರುವುದು ಭಾರತೀಯರಲ್ಲಿ ಒಂದು ಶ್ರೇಷ್ಠ ಪದ್ಧತಿಯಾಗಿದೆ. ೮ನೇ ಶತಮಾನದ ವೇಳೆಗೆ ತಾಂತ್ರಿಕ ಶಕ್ತಿಗನುಗುಣವಾಗಿ ದೇವಿಯ ಆಲಯಗಳು ರೂಪಗೊಂಡವು. ಅದರ ಪರಿಣಾಮದಿಂದಾಗಿ ದೇವಸ್ಥಾನದ ಪೂಜಾ ವಿಧಾನಗಳಲ್ಲೂ ಬದಲಾವಣೆಗಳು ಕಂಡುಬರುತ್ತವೆ ಎಂದು ತಿಳಿಯಲಾಗಿದೆ. ಶಿರಸಂಗಿ ಕಾಳಮ್ಮ-ಕಮ್ಮಟೇಶ್ವರ, ಭೈರವ ಪರಿವಾರ ದೇವತೆಗಳ ಪೂಜಾ ವಿಧಿಯು ವಿಶಿಷ್ಟವಾದದ್ದಾಗಿದೆ. ಕಾಳಮ್ಮನನ್ನು ಇಲ್ಲಿಯ ಪೂಜಾರ ಮನೆತನದವರು(ಪಾಂಚಾಳ) ತಲೆ-ತಲಾಂತರದಿಂದ ಪೂಜಿಸುತ್ತ ಬಂದಿದ್ದಾರೆ. ಧಾರವಾಡ ಬೆಂಚ್ ಉಚ್ಚನ್ಯಾಯಾಲಯ ಡಬ್ಲೂ.ಪಿ.ಸಂಖ್ಯೆ:೧೦೩೦೩೮/೨೦೧೭ರ ತೀರ್ಪಿನ ಪ್ರಕಾರ ಪ್ರತಿ ವರ್ಷ ಚೈತ್ರ ಶುದ್ಧ ಪ್ರತಿಪದೆಯಿಂದ ಪೂರ್ಣ ಒಂದು ವರ್ಷ ಅವಧಿಗಾಗಿ ಪೂಜಾರಿಗಳು ಪೂಜೆಯನ್ನು ಸಲ್ಲಿಸುತ್ತಾರೆ. ಆಯಾ ವರ್ಷದಲ್ಲಿ ಯಾವ ಪೂಜಾರಿಗಳು ಪೂಜೆ ಸಲ್ಲಿಸುತ್ತಿರುತ್ತಾರೆಯೋ ಅವರಿಗೆ ಭಕ್ತರು ನೀಡಿದ ಧನ-ಧಾನ್ಯ-ಕಾಣಿಕೆಗಳು ಸಲ್ಲುತ್ತವೆ. ಪೂಜಾ-ವಿಧಾನ, ಮಂತ್ರ ಕ್ರಿಯಾದಿಗಳಲ್ಲಿ ಪ್ರಸಿದ್ಧರಾಗಿರುವ ಆಚಾರಿಗಳು ಕಾಳಮ್ಮ ಹಾಗೂ ಇತರ ದೇವತೆಗಳನ್ನು ಶಾಕ್ತ ಪದ್ಧತಿಯ ಪ್ರಕಾರ ವೈಭವದಿಂದ ನಿತ್ಯ ಪೂಜೆ ಸಲ್ಲಿಸುತ್ತಾರೆ. ಮುಂಜಾನೆ-ಸಂಜೆ ಆರತಿ ಸೇವೆ, ನಿತ್ಯ ನೈವೇದ್ಯಯನ್ನು ಆಚಾರಿ ಮನೆಯಿಂದಲೇ ತರಲಾಗುತ್ತಿದ್ದು, ಅದನ್ನು ಬಹಳ ಮಡಿಯಿಂದ ಅಡುಗೆ ಮಾಡುತ್ತಾರೆ.

ಶುಕ್ರವಾರ ಕಾಳಮ್ಮಗೆ ವಿಶೇಷ ಪೂಜೆ. ಅದು ಆಕೆಯ ವಾರ ಎಂಬುದನ್ನು ಭಕ್ತರು ತಿಳಿಸುತ್ತಾರೆ. ಬಣ್ಣ-ಬಣ್ಣದ ಸೀರೆಗಳಿಂದ ಅಂದು ಅವಳನ್ನು ಅಲಂಕರಿಸುತ್ತಾರೆ. ವಿಶೇಷ ಹಬ್ಬ-ಜಾತ್ರೆ-ಉತ್ಸವ ಮತ್ತು ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಸಲ್ಲುತ್ತಿರುತ್ತದೆ. ಸೂರ್ಯೋದಯ ಮುನ್ನವೆ ಎದ್ದು ಹೊಂಡ(ಖಡ್ಗತೀರ್ಥ)ದಿಂದ ಸ್ನಾನ ಮಾಡಿದ ಆಚಾರಿಗಳು ವಿಗ್ರಹಕ್ಕೆ ಸಾಕಾಗುವಷ್ಟು ನೀರನ್ನು ತರುತ್ತಾರೆ. ನವರಾತ್ರಿಯಲ್ಲಿ ೯ ದಿನಗಳವರೆಗೆ ಘಟ್ಟ(ದೀಪ) ಹಾಕಿ ದೀಪೋತ್ಸವ ಆಚರಿಸಲಾಗುತ್ತದೆ. ನವರಾತ್ರಿಯಲ್ಲಿ ಸರ್ವಾಲಂಕಾರ ಭೂಷಿತಳಾಗಿರುತ್ತಾಳೆ. ದೇವಿ ಪುರಾಣ-ಪ್ರವಚನಗಳು ಜರುಗುತ್ತವೆ. ದೀಪಾವಳಿಯಲ್ಲಿಯೂ ವಿಶೇಷ ಪೂಜೆ ಇರುತ್ತದೆ. ಪ್ರತಿ ಅಮವಾಸ್ಯೆ ಕಾಳಮ್ಮನ ಪೂಜೆ-ಅಭಿಷೇಕ-ದೇವಿ ಪುರಾಣ ಪಠಣ, ಆಧ್ಯಾತ್ಮಿಕ ಚಿಂತನಗೋಷ್ಠಿಗಳು ಅನ್ನಸಂತರ್ಪಣೆ ಜರುಗುತ್ತವೆ.

ಸಾಂಸ್ಕೃತಿಕ ತಾಣವಾಗಿ ಬೆಳೆದ ಶಿರಸಂಗಿ ಜಾತ್ರೆ

ಜಾತ್ರೆಗಳು ಬಹುಸಂಸ್ಕೃತಿಗಳ ಸಮ್ಮಿಲನಗಳಾಗಿವೆ. ಜನರು ಸಾಗರದಂತೆ ಸೇರುವ ಈ ಯಾತ್ರೆಯಲ್ಲಿ ಸಾಂಸ್ಕೃತಿಕ ಆಚರಣೆಗಳು ಅತೀ ಮಹತ್ವತೆಯನ್ನು ಪಡೆದುಕೊಳ್ಳುತ್ತವೆ. ಜಾತ್ರೆಯ ಪ್ರಮುಖ ದೇವತೆಯ ಕುರಿತಾದ ಯಂತ್ರ-ಮಂತ್ರ-ಮಂಡಳ ರಚನಾದಿಗಳು ಹಲವು ಬಗೆಯ ಅಲಂಕಾರಗಳು, ಧೂಪ-ದೀಪ, ಅರಿಷಿಣ-ಕುಂಕುಮ-ಭಂಡಾರ, ಹಾಡು-ಕುಣಿತಾದಿಗಳು ಜಾತ್ರೆ ರೂಪವನ್ನು ಕಟ್ಟಿಕೊಡುತ್ತವೆ. ಶತ-ಶತಮಾನಗಳಿಂದಲೂ ಮನುಷ್ಯ ತಾನು ಆರಾಧಿಸುತ್ತ ಬಂದ ದೇವತೆಯ ವಿಶಿಷ್ಟ ಆಚರಣೆಯನ್ನು ವರ್ಷದ ಒಂದು ದಿನ ನಿಗದಿಗೊಳಿಸುತ್ತಾನೆ. ಅಂದು ಭಕ್ತ ಸಮೂಹ ಸೇರಿಕೊಂಡು ಆಚರಿಸುವ ಪದ್ಧತಿಯನ್ನು ಬೆಳೆಸಿಕೊಂಡಬಂದ ಭಕ್ತರು ತಮ್ಮ ತಮ್ಮ ಊರಿನಿಂದ ಒಂದು ನಿಗದಿತ ಸ್ಥಳಕ್ಕೆ ಆಚರಣೆಗಾಗಿ ಯಾತ್ರೆ ಕೈಗೊಳ್ಳುವುದನ್ನು ಜಾತ್ರೆಯಲ್ಲಿ ಕಾಣುತ್ತೇವೆ. ಜಾತ್ರೆಯಿಂದ ಮನಸ್ಸಿಗೆ ಶಾಂತಿ-ನೆಮ್ಮದಿ ದೊರೆಯುವುದಲ್ಲದೆ ಇಷ್ಟಾರ್ಥಗಳು ಈಡೇರುತ್ತವೆ ಎಂಬುದು ಭಕ್ತ ಸಮೂಹದ ನಂಬಿಕೆಯಾಗಿದೆ. ಬಹುಸಂಸ್ಕೃತಿಯ ನಮ್ಮ ಭಾರತದಂಥಹ ರಾಷ್ಟ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜಾತ್ರೆಗಳು ಏರ್ಪಡುವಂತೆ ವಿದೇಶಗಳಲ್ಲಿಯೂ ಜಾತ್ರೆಗಳು ಜರುಗುತ್ತವೆ. ಉದಾಹರಣೆಗೆ ಚೀನಾ, ಅಫಘಾನಿಸ್ಥಾನ, ಗ್ರೀಸ್, ರೋಮ್ ಮುಂತಾದ ರಾಷ್ಟ್ರಗಳಲ್ಲಿಯೂ ಜಾತ್ರೆಗಳು ಜರುಗುತ್ತವೆ. ಆದರೆ ಆಯಾ ದೇಶಗಳ, ಆಯಾ ಪ್ರಾದೇಶಿಕತೆಗೆ ಅನುಗುಣವಾಗಿ ಜಾತ್ರೆಗಳು ಸ್ವರೂಪವನ್ನು ಬದಲಾಯಿಸಿಕೊಂಡಿರುತ್ತವೆ. ಆದರೂ ಅವುಗಳಿಗೆ ಒಟ್ಟಾಗಿ ಜಾತ್ರೆಗಳು ಎಂದೇ ಕರೆಯಲಾಗುತ್ತದೆ.

'ಯಾತ್ರೆ' ಎಂಬ ಸಂಸ್ಕೃತದ ಪದ, ತತ್ಸಮ-ತದ್ಭವೀಕರಣದಿಂದ 'ಜಾತ್ರೆ' ಎಂಬ ಪದ ರೂಪವನ್ನು ಪಡೆದಿದೆ. ಜನಪದರು ತಮ್ಮ ನಿತ್ಯದ ಬದುಕಿನೊಂದಿಗೆ ಕಾಯಕವನ್ನು ಮಾಡುತ್ತ, ಆ ಕಾಯಕದಲ್ಲಿ ದೈವವನ್ನು-ಶಕ್ತಿಯನ್ನು ಕಾಣುತ್ತ ಬರುತ್ತಾರೆ. ಅದು ದೈವೀ ಶಕ್ತಿಯ ಸ್ವರೂಪ ತಾಳುತ್ತದೆ. ಆರಾಧನೆಯ ದೇವತೆಗೆ ಗುಡಿ-ಗೋಪುರಗಳನ್ನು ಕಟ್ಟುವುದರೂಂದಿಗೆ ಜನಪದರು, ತಮ್ಮ ಭಕ್ತಿ-ಭಾವಗಳನ್ನು ಇಮ್ಮಡಿಗೊಳಿಸಿಕೊಳ್ಳುತ್ತಾರೆ. ನಿತ್ಯ ಕಾಯಕದಲ್ಲಿ ಆದ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಹರಕೆಗಳನ್ನು ಹೊರುತ್ತಾರೆ. ಹಲವು ಬಗೆಯ ಆಚರಣೆಗಳನ್ನು ಕೈಕೊಳ್ಳುತ್ತಾರೆ. ಪಾದಯಾತ್ರೆಗಳನ್ನು ಆರಂಭಿಸುತ್ತಾರೆ. ತಮ್ಮಲ್ಲಿದ್ದ ಧವಸ-ಧಾನ್ಯ, ಧನ-ಕನಕಾದಿಗಳನ್ನು ಆರಾಧನೆಯ ದೇವತೆಗೆ ಅರ್ಪಿಸಲು ಒಂದೆಡೆ ಕೂಡಿ ಭಕ್ತಿ ಸಮರ್ಪಿಸುವ ಸಮೂಹ-ಸಂದರ್ಭಗಳು, ಜಾತ್ರೆಯಾಗಿ ಆಯಾ ವರ್ಗದ ಸಾಂಸ್ಕೃತಿಕ ಆಚರಣೆಗಳಿಗೆ ಮುಖ್ಯ ಸಾಕ್ಷಿಯಾಗಿ ರೂಪ ತಾಳುತ್ತದೆ.

ಋಷ್ಯಶೃಂಗ ಮುನಿಯಿಂದ ಪುಣ್ಯಕ್ಷೇತ್ರವೆನಿಸಿಕೊಂಡ ಶಿರಸಂಗಿಯು ಸಾಂಸ್ಕೃತಿಕ ತವರಾಗಿದೆ. ಈ ಪ್ರದೇಶದಲ್ಲಿ ನೆಲೆ ನಿಂತಿರುವ ಕಾಳಮ್ಮ, ಪಾಂಚಾಳರ ಕುಲದೇವತೆಯಾಗಿದ್ದಾಳೆ. ಸಮಸ್ತ

ವಿಶ್ವಕರ್ಮ ಸಮುದಾಯದವರಿಗೆ ಮಾತೃ ಸ್ವರೂಪಿಣಿಯಾಗಿರುವ ಕಾಳಮ್ಮ ಮುಖ್ಯವಾಗಿ ನೆಲೆಗೊಂಡದ್ದು ಈ ಶಿರಸಂಗಿಯಲ್ಲಿ. ಪಾಂಚಾಳರಿಗೆ ಶಿರಸಂಗಿ ಕಾಳಮ್ಮ ಎಂದರೆ ಬಹಳ ಪವಿತ್ರವಾದ, ಶ್ರೇಷ್ಠವಾದ ಕುಲಕಸುಬಿನ ದೇವತೆಯಾಗಿದ್ದಾಳೆ. ಕರ್ನಾಟಕದಲ್ಲಿ ವಿಶ್ವಕರ್ಮರಿಗಾಗಿಯೇ ಜರುಗುವ ಅದ್ವಿತೀಯ ಜಾತ್ರೆಯೆಂದರೆ ಶಿರಸಂಗಿ ಕಾಳಮ್ಮನ ಜಾತ್ರೆ ಸಂಪ್ರದಾಯದಂತೆ ಪ್ರತಿವರ್ಷ ಫಾಲ್ಗುಣ ವದ್ಯ ೧೪ ರಿಂದ ಚೈತ್ರ ಶುದ್ಧ ಪಂಚಮಿವರೆಗೆ ಶಿರಸಂಗಿಯಲ್ಲಿ ಕಾಳಮ್ಮನ ಜಾತ್ರೆ ಅತ್ಯಂತ ಭಕ್ತಿ-ಭಾವದಿಂದ ಜರುಗುತ್ತದೆ. ಈ ಜಾತ್ರೆಯಲ್ಲಿ ಹೆಚ್ಚಾಗಿ ಸಾಂಸ್ಕೃತಿಕ ಅಂಶಗಳನ್ನು ಕಾಣುತ್ತೇವೆ. ವಿಶೇಷವಾಗಿ ಯುಗಾದಿಯಂದು ಜರುಗುವ ಜಾತ್ರೆಗೆ ಹೆಚ್ಚಾಗಿ ಪಂಚಾಳರು ಸೇರುತ್ತಾರೆ. ಅವರೊಂದಿಗೆ ಅವಳ ಮೇಲೆ ಭಕ್ತಿ-ನಂಬಿಕೆಯಿಟ್ಟ ಲಿಂಗಾಯತ, ಕುರುಬ, ಮುಸ್ಲಿಂ ಜೈನ ಮುಂತಾದ ಸಮುದಾಯದವರೊಂದಿಗೆ ಕೆಳವರ್ಗದ ಭಕ್ತ-ಭಕ್ತೆಯರು ಸೇರುತ್ತಾರೆ.

ಯುಗಾದಿ ಅಮವಾಸ್ಯೆಯ ಸೂರ್ಯೋದಯ ಸಮಯದಲ್ಲಿ ಕಾಳಮ್ಮನಿಗೆ ನೂರೆಂಟು ಮಂತ್ರೋಚ್ಛಾರಣೆಯೊಂದಿಗೆ ಅಭಿಷೇಕವಾಗುತ್ತದೆ. ಇದರೊಂದಿಗೆ ಯುಗಾದಿ ಜಾತ್ರೆ ಆರಂಭವಾಗುತ್ತದೆ. ವಿಶ್ವಕರ್ಮ ಧ್ವಜಾರೋಹಣ ಅರ್ಚಕರ ಮಂಗಳಾರತಿಯೊಂದಿಗೆ ಜರುಗುತ್ತದೆ. ಅಮವಾಸ್ಯೆಯ ದಿನದಂದು ದೂರದ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಿಂದಲು ಸಾಗರೋಪಾದಿಯಲ್ಲಿ ಜನ ಶಿರಸಂಗಿಗೆ ಬರುತ್ತಾರೆ. ಹೊಸ ಗೋಧಿಯ ನಿಧಿ ಅರ್ಪಣೆಗೆ ಗಂಟೆಗಟ್ಟಲೆ ಸಾಲಾಗಿ ನಿಂತು ಕಾಳಮ್ಮನ ದರ್ಶನ ಪಡೆದು ನಿಧಿ ಅರ್ಪಿಸುತ್ತಾರೆ. ಕುಶಲಕರ್ಮಿಗಳಾದ ಪಾಂಚಾಳರು ಆಗ ತಾನೆ ಭೂಮಿಯಲ್ಲಿ ಬೆಳೆದಿದ್ದ ಹೊಸ ಗೋಧಿ ಇತರ ಧವಸ ಧಾನ್ಯಗಳನ್ನು ರೈತರಿಂದ ಪಡೆದುಕೊಂಡಿರುತ್ತಾರೆ. ತಾನು ಪಡೆದ ದಾನ್ಯವನ್ನು ಮೊದಲು ದೇವಿಗೆ ಅರ್ಪಿಸಬೇಕು, ವರ್ಷದ ಉದ್ದಕ್ಕೂ ಕೃಷಿಯೋಪಕರಣಗಳು ಇತರ ಕೆಲಸಗಳು ಸರಿಯಾಗಿ ನಡೆಯಬೇಕೆಂಬ ಭಕ್ತಿ-ಭಾವದಿಂದ ಹೊಸಗೋಧಿ ನಿಧಿಯನ್ನು ಕುಶಲಕರ್ಮಿ ಅರ್ಪಿಸುತ್ತಾನೆ. ನಿಧಿ ಅಂದರೆ ಸಂಪತ್ತು. ಕುಶಲಕರ್ಮಿಗೆ ಗೋಧಿ ಸಂಪತ್ತಿಗೆ ಸಮಾನವಾದದ್ದು. ವರ್ಷದುದ್ದಕ್ಕೂ ದುಡಿದು ರೈತರಿಂದ ಪಡೆದುಕೊಂಡ ಗೋಧಿಯನ್ನು ಕಾಳಮ್ಮನಿಗೆ ಅರ್ಪಿಸುತ್ತಾನೆ. ಭೂಮಿಯಲ್ಲಿ ಬೆಳೆದ ಇತರ ಧಾನ್ಯಗಳಿಗಿಂತಲೂ ಗೋಧಿ ಶ್ರೇಷ್ಠತೆಯನ್ನು ಪಡೆದುಕೊಂಡಿದೆ. ಜೋಳ, ಗೋವಿನ ಜೋಳ, ಸಜ್ಜಿ ಮೊದಲಾದ ಧಾನ್ಯಗಳಿಗಿಂತ ಗೋದಿ ಶ್ರೇಷ್ಠವಾದದ್ದು. ಒಳ್ಳೆಯ ಸಂಸ್ಕಾರದ ಸಂಕೇತ. ಪುರಾಣಕಾಲದಿಂದಲೂ ಗೋಧಿಯನ್ನು ಕಾಳಮ್ಮನಿಗೆ ಅರ್ಪಿಸಲಾಗುತ್ತದೆ. ಗೋಧಿ ನಿಧಿ ಅರ್ಪಣೆ ವಿಶ್ವಕರ್ಮರ ಧಾರ್ಮಿಕ ಪರಂಪರೆಗಳಲ್ಲಿ ಒಂದಾಗಿದೆ. ಗೋಧಿ ಸಿಹಿ ಆಹಾರ ಧಾನ್ಯ. ಆದರೆ ಕಾಳಮ್ಮನಿಗೆ ಗೋಧಿಯನ್ನೆ ಏಕೆ ಅರ್ಪಿಸಲಾಗುತ್ತದೆ ಎಂಬ ಪ್ರಶ್ನೆಯೊಂದು ಉದ್ಭವಿಸುತ್ತದೆ. ಗೋಧಿಯನ್ನು ಹೆಚ್ಚಾಗಿ ಪಂಜಾಬ ರಾಜ್ಯದಲ್ಲಿ ಬೆಳೆಯಲಾಗುತ್ತದೆ. ಇಲ್ಲಿ ಬಿಳಿಜೋಳ ಧಾನ್ಯವೇ ಹೆಚ್ಚಾಗಿದೆ. ಹಾಗಾದರೆ ಕಾಳಿ ಗೋಧಿಯ ನಾಡಿನಿಂದ ಬಂದಿರಬಹುದೇ?

ಎಂಬ ವಿಚಾರಗಳು ಮೂಡುತ್ತವೆ. ಗೋಧಿಯ ತೆನೆಗಳಿಗಿರುವ ಮೊನಚಾದ ಮುಳ್ಳಿನಿಂದ ಅಸುರರನ್ನು ಕಾಳಮ್ಮ ಸಂಹರಿಸಿದಳೆಂದು ಅದಕ್ಕೋಸ್ಕರ ಗೋಧಿ ಅವಳಿಗಿಷ್ಟವಾದ ಧಾನ್ಯವಾಗಿದೆಂದು ಹೇಳಲಾಗುತ್ತದೆ. ಕುಶಲಕರ್ಮಿಗಳ ಬದುಕು ಹಸನನಾಗಿರಬೇಕೆ ಎಂಬುದು ಧಾರ್ಮಿಕ ಆಚರಣೆಯ ಹಿನ್ನೆಲೆಯಾಗಿರಬೇಕು.

ಕುಶಲಕರ್ಮಿಗಳು ಸಕಲವನ್ನು ಸೃಷ್ಟಿಸಬಲ್ಲವರಾಗಿರುವುದರಿಂದ ದೇವ ಪ್ರೀಯರಾಗಿದ್ದಾರೆ. ದೇವತೆಯಗಳು ಸಿಹಿರಸ ಪ್ರಿಯರು ಗೋಧಿಯಿಂದ ತಯಾರಿಸುವ ಅಡುಗೆಗೆ ಬೆಲ್ಲ ಬೆರೆಸಿದಾಗ ಅದು ಸಹಿ ಆಹಾರವಾಗುತ್ತದೆ. ಇದನ್ನು ಕೆಲವರು 'ಹುಗ್ಗಿ' ಎಂದು ಕರೆಯುತ್ತಾರೆ. ಆದರೆ ವಿಶ್ವಕರ್ಮ ಕುಶಲಕರ್ಮಿಗಳು ಇದನ್ನು 'ಪಾಯಸ' ಎಂದು ಕರೆಯುವರು. 'ಪಾಯಸ ಸಂಸ್ಕೃತ ಪದ. ಸಂಸ್ಕೃತ ದೇವಭಾಷೆ. ದೇವ ಪ್ರಿಯವಾದದ್ದು ಪಾಯಸ. ಪಾಯಸ ಇದೊಂದು ಪರಮಾನ್ನವಾಗಿದೆ. ದೇವರಿಗೆ ಪ್ರಿಯವಾದದ್ದಾಗಿದೆ. ಈ ಹಿನ್ನೆಲೆಯಲ್ಲಿ ಕಾಳಮ್ಮನಿಗೆ ಗೋಧಿ ಪ್ರಿಯವಾದದ್ದಾಗಿದೆ. ಗೋಧಿಯಿಂದ ತಯಾರಾದ 'ಪಾಯಸ' ಪ್ರೀತಿಯ ಆಹಾರ ಅಡುಗೆಯಾಗಿದೆ. ಕಾಳಮ್ಮನ ಸಂತಾನರಾದ ಕುಶಲಕರ್ಮಿಗಳು ಇಂದಿಗೂ ಶುಭಕಾರ್ಯಗಳೆಲ್ಲ್ಲ ಗೋಧಿಯ ಪಾಯಸದ ಅಡುಗೆ ತಯಾರಿಸಿ, ಕಾಳಮ್ಮನಿಗೆ ನೈವೇದ್ಯ ಅರ್ಪಿಸುವ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಯುಗಾದಿ ಅಮವಾಸ್ಯೆಯಂದು ದೇವಿಯ ದರ್ಶನ ಪಡೆಯುವುದು ಭಕ್ತನ ಸಾಹಸದ ಮತ್ತು ಮಹತ್ವದ ಘಳಿಗೆಯು ಆಗಿರುತ್ತದೆ. ಚೈತ್ರ ಶುದ್ಧ ಪ್ರತಿಪದೆಯಂದು ಶ್ರೀಕಾಳಿಕಾದೇವಿ ರಾಕ್ಷಸರ ಸಂಹಾರಕ್ಕೆ ಹೊರಡಲು ಸಿದ್ಧಳಾಗುತ್ತಾಳೆ. ಅಂದು ದೇವಿಯನ್ನು ವಿವಿಧ ರೀತಿಯಿಂದ ಶೃಂಗಿರಿಸಿ, ವೈಭವದಿಂದ ಪೂಜಾರಿಗಳು ಪೂಜಿಸುತ್ತಾರೆ. ದೇವಿಯ ಎದುರಿಗಿರುವ ರಂಗ ಮಂಟಪದಲ್ಲಿ ನವಗೃಹಮಂಡಲವನ್ನು ಸ್ಥಾಪಿಸುತ್ತಾರೆ. ನವಗೃಹಗಳನ್ನು ಆವಾಹಿನಿಸುತ್ತಾರೆ. ಪ್ರತಿಷ್ಠಾಪನ ಪೂಜೆಯೊಂದಿಗೆ ಎಲ್ಲ ದೇವಾನುದೇವತೆಗಳನ್ನು ಪೂಜಿಸುತ್ತಾರೆ. ಇದಾದ ನಂತರದಲ್ಲಿ ಬಲಿದನವನ್ನು ನವಗೃಹಗಳಿಗೆ ಹಾಕುತ್ತ, ವೇದ-ಮಂತ್ರ-ಅಕ್ಷತೆಗಳಿಂದ ನೈವೇದ್ಯವನ್ನು ಮತ್ತು ಫಲ ತಾಂಬೂಲ, ದೂಪ-ದೀಪಗಳಿಂದ ಆರಾಧಿಸುತ್ತಾರೆ. ಬಲಿಯನ್ನು ಹಾಕಿದ ಅರ್ಚಕನು ದೇವಿಗೆ ನಮಸ್ಕರಿಸಿ, ತೆಂಗಿನಕಾಯಿಯನ್ನು ಒಡೆಯುತ್ತಾರೆ. ನಂತರ ಕಾಳಮ್ಮನ ಪಾಲಿಕೆಯು ಬನ್ನಿ ಮಹಾಂಕಾಳಿಯವರೆಗೆ ಹೋಗಿ ದೇವಿಗೆ ಪೂಜೆ-ನೈವೇದ್ಯ-ಮಹಾಮಂಗಳಾರತಿ ಮುಗಿಯುತ್ತದೆ. ನಂತರದಲ್ಲಿ ನೆನಗಡಲೆ, ಖೋಬ್ರಿ ತುಕಡಿಯನ್ನು ಪಾಲಿಕೆಯೊಂದಿಗೆ ಬಂದ ಭಕ್ತರಿಗೆ ಕೊಡುತ್ತಾರೆ. ಈ ಎಲ್ಲ ಪೂಜಾ ವಿಧಿ-ವಿಧಾನಗಳು ಬನ್ನಿ ಮಹಾಂಕಾಳಿ ಸನ್ನಿಧಿಯಲ್ಲಿ ರಾತ್ರಿ ವೇಳೆ ಮುಕ್ತಾಯಗೊಳ್ಳುತ್ತದೆ.

ಕಾಳಮ್ಮನ ಪಾಲಿಕೆಯು ದೇವಾಲಯ ಮಹಾದ್ವಾರಕ್ಕೆ ಬರುವಷ್ಟರಲ್ಲಿ ಮಹಾದ್ವಾರದ ಕದವನ್ನು ದೇವಾಲಯದ ಒಳಗಿರುವ ಪೂಜಾರಿಗಳು ಮುಚ್ಚುತ್ತಾರೆ. ಕಾಳಮ್ಮನ ಸ್ತೋತ್ರ-

ದಂಡಕಾದಿಗಳು ಮುಗಿದ ನಂತರ ದೇವಿಯ ಪ್ರಧಾನ ಅರ್ಚಕ ಕಾಳಮ್ಮನ ನುಡಿಯನ್ನು ಆಡುತ್ತಾನೆ. ದ್ವಾರದ ಕದವನ್ನು ತೆರೆಯಲು ಸೂಚಿಸಲಾಗುತ್ತದೆ. ಭಯಗ್ರಸ್ಥರಾಗಿದ್ದ ದೇವಾಲಯ ದೊಳಗಿನ ಪೂಜಾರಿಗಳು ನೀನು ಯಾರೆಂದು? ದೇವಿಯನ್ನು ಪ್ರಶ್ನಿಸುತ್ತಾರೆ. ದೇವರನ್ನೇ ಪ್ರಶ್ನಿಸುವ ಪಾಂಚಾಳ ಧೈರ್ಯ-ಭಕ್ತಿ ಅಪೂರ್ವವಾದದ್ದು. ಪೂಜಾರಿಗಳ ಮಾತುಗಳನ್ನು ಕೇಳಿ ಕಾಳಮ್ಮನೇ ಆಶ್ಚರ್ಯ ಚಕಿತವಾಗುವುದನ್ನು ಇಲ್ಲಿ ಕಾಣುತ್ತೇವೆ. ದೇವಿಯ ಪರಮಭಕ್ತರು-ಅರ್ಚಕರು ಕಾಳಮ್ಮನನ್ನು ಪ್ರಶ್ನೆ ಮೇಲೆ ಪ್ರಶ್ನೆ ಕೇಳುತ್ತಾರೆ. ನೀನಾರು? ನಿನ್ನ ಹೆಸರೇನು? ಎಲ್ಲಿಗೆ ಹೋಗಿದ್ದೆ? ಈ ಅಪರಾತ್ರಿ ಇಲ್ಲಿಗೇಕೆ ಬಂದಿರುವೆ? ಮುಂತಾದ ಪ್ರಶ್ನೆಗಳು ಕಾಳಮ್ಮನಿಗೆ ಎದುರಾಗುತ್ತವೆ. ದೇವಾಲಯದ ಒಳಗಿರುವ ಭಕ್ತರಿಗೂ, ಹೊರಗಡೆ ಇರುವ ದೇವಿಗೂ ಬಹಳ ಹೊತ್ತಿನವರೆಗೂ ಸಂವಾದಗಳು ಏರ್ಪಡುತ್ತವೆ.

ಮಹಾದ್ವಾರದ ಹೊರಗೆ ಬಹಳ ಹೊತ್ತಿನವರೆಗೆ ನಿಂತ ಕಾಳಮ್ಮ ತಾನು ದೇವಿಯೆಂದು ತಿಳಿಸುತ್ತಾಳೆ. ಅಲ್ಲಿಯ ಭಕ್ತರನ್ನುದ್ದೇಶಿಸಿ ದೇವಿಯು "ಸಕಲ ದೇವತೆಗಳಿರಾ ನಾನಿರುವ ವಾಸಸ್ಥಾನದ ಮಹಾದ್ವಾರ ಭದ್ರಪಡಿಸಿರುವುದ ಏಕೆ? ನಾನು ಕಾಳಿಕಾ ದೇವಿಯೇ ಬಂದಿರುವೆ ಮಹಾದ್ವಾರ ತೆರೆಯಿರಿ" ಎಂದು ಹೇಳುತ್ತಾಳೆ. ಅವಳನ್ನು ಪ್ರಶ್ನಿಸುವ ಪದಗಳನ್ನು ಹಾಡುತ್ತಾರೆ.

ಆಲಿಸುತಲಾ ದೇವರೆಲ್ಲರೂ।
ಆಲಯದಿ ದ್ವಾರಕ್ಕೆ ಬಂದರೂ
ಬಾಲೆ ನೀನಾರೈ ಕಾಳರಾತ್ರಿಯೊಳು ಬಂದು ನೀ ಕೂಗುತಿರಲು॥

ಈ ಅಪರಾತ್ರಿಯಲ್ಲಿ ನಮ್ಮ ಹೆಸರನ್ನು ಕೂಗುತ್ತಿರುವ ಧ್ವನಿಯನ್ನು ಕೇಳಿದರೆ ಅದು ಸ್ತ್ರೀಯಳದೆಂದು ಕಾಣುತ್ತದೆ. ಎಲೈ ಸ್ತ್ರೀಯಳೇ ನಾವು ನಮ್ಮ ದೇವಿಯನ್ನು ಅಗಲಿ ಚಿಂತ್ರಾಕ್ರಾಂತಳಾಗಿರುವಾಗ, ಈ ಮಧ್ಯರಾತ್ರಿಯಲ್ಲಿ ಬಂದಿರುವಳು ಯಾರು? ಎಂದು ಅರ್ಚಕ-ಭಕ್ತರು ತಮ್ಮ ನೋವನ್ನು ಅರಹುತ್ತಾರೆ. ಆಗ ಕಾಳಮ್ಮ ಅವರನ್ನು ಕುರಿತು ಈ ರೀತಿ ಹೇಳುತ್ತಾಳೆ. 'ಎಲೈ ದೇವಾನುದೇವತೆಗಳಿರಾ ಈಗ ಬಂದಿರುವಳು ಬೇರೆ ಯಾರು ಅಲ್ಲ. ನಿಮ್ಮನ್ನು ಕಾಪಾಡುವ ಕಾಳಮ್ಮನೇ ಎಂದು ಹೇಳುತ್ತಾಳೆ. ಒಳಗಿರುವ ಅರ್ಚಕರಿಗೆ ನಂಬಿಕೆ ಬರುವುದಿಲ್ಲ. ತಾನು ನಿಮ್ಮನ್ನು ಅಗಲಿ ಹೋಗುವುದಕ್ಕೆ ಕಾರಣವನ್ನು ದೇವಿ ತಿಳಿಸುತ್ತಾಳೆ. ಲೋಕಕಂಟಕರಾಗಿರುವ ರಾಕ್ಷಸರನ್ನು ಸಂಹರಿಸಿ ಬಂದಿರುವೆನೆಂದು ತಿಳಿಸುತ್ತಾಳೆ. ಶುಂಭ-ನಿಶುಂಭ ಮುಂತಾದ ರಾಕ್ಷಸರನ್ನು ಸಂಹಾರ ಮಾಡಿ ಬಂದಿರುವುದಾಗಿ ಹೇಳಿ, ಮಹಾದ್ವಾರ ತೆರೆಯಲು ಹೇಳುತ್ತಾಳೆ. ನಾಟಕೀಯವಾಗಿ ಸಾಗುವ ರಾತ್ರಿಯ ಈ ಕಾರ್ಯಕ್ರಮ ಅದ್ಭುತ ದೃಶ್ಯ ಕಾವ್ಯದಂತೆ ಕಂಡುಬರುತ್ತದೆ. ಅರ್ಚಕ-ಭಕ್ತರು 'ನಮ್ಮ ತಾಯಿಯನ್ನು ಅಗಲಿ ಅನಾಥರಂಥಾಗಿದ್ದೇವೆ.

ಇಂತಹ ಸಂದರ್ಭದಲ್ಲಿ ಅವಳ ರೂಪದಲ್ಲಿ ಬಂದಿರುವ ಯಾವುದಾದರೂ ಮಾಯಾವಿರಬಹುದು. ನಿನ್ನನ್ನು ನಂಬಲು ಸಾಧ್ಯವಿಲ್ಲ. ನಂಬಬೇಕಾದರೆ ಪಂಚ ಋಷಿಗಳ ಸಾಕ್ಷಿಯಾಗಿ ಪ್ರಮಾಣ ಮಾಡಿದರೆ ಕದ ತೆರೆಯುತ್ತೇವೆಂದು ಹೇಳುತ್ತಾರೆ. ಆಗ ಕಾಳಮ್ಮ "ನನ್ನ ಐದು ಜನ ಋಷಿಗಳಾದ ಮನು, ಮಯ, ಉತ್ವಷ್ಟ್ಯ, ಶಿಲ್ಪಿ, ದೈವಜ್ಞರ ಸಾಕ್ಷಿಯಾಗಿ ನಾನು ಕಾಳಮ್ಮನೇ ಬಂದಿದ್ದೇನೆ ದ್ವಾರವನು ತೆರೆಯಿರಿ ಎಂದು ಹೇಳುತ್ತಾಳೆ. ಅರ್ಚಕ-ಭಕ್ತರೆಲ್ಲರೂ ಇವಳು ನಮ್ಮ ತಾಯಿ ಕಾಳಮ್ಮ ಎಂದು, ಅವಳ ನುಡಿ ಸತ್ಯವಾದದ್ದೆಂದು ತಿಳಿದು ಕದವನ್ನು ತೆರೆಯುತ್ತಾರೆ.

ಯುಗಾದಿ-ಚೈತ್ರ ಶುದ್ಧ ಪ್ರತಿಪದೆಯಂದು ದೇವಿಯ ಜಾತ್ರೆ ಬಹಳ ವಿಶಿಷ್ಟವಾಗಿ ಜರುಗುತ್ತದೆ. ಸಾಂಸ್ಕೃತಿಕ ಪರಿಸರವನ್ನ ಕಟ್ಟಿಕೊಂಡ ದೇವಾಲಯದ ಆವರಣದಲ್ಲಿ ಕಾಳಮ್ಮನನ್ನು ಪುನಃ ಕರೆದುಕೊಳ್ಳುವ ಈ ಪದ್ಧತಿ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಈಗಲೂ ಕಾಳಮ್ಮ ದುಷ್ಟರನ್ನು, ರಾಕ್ಷಸೀಯ ಗುಣ ಹೊಂದಿರುವವರನ್ನು ಸಂಹಾರ ಮಾಡಲು ವರ್ಷಕ್ಕೊಮ್ಮೆಯಾದರೂ ದೇವಾಲಯದಿಂದ ನಿರ್ಗಮಿಸುತ್ತಾಳೆ. ದುಷ್ಟತನವನ್ನು, ರಾಕ್ಷಸತನವನ್ನು ನಾಶಮಾಡುವ ದೇವತೆ ಕಾಳಮ್ಮ ಆಗಿದ್ದಾಳೆ ಎಂಬುದು ಭಕ್ತ ಸಮೂಹದ ನಂಬಿಕೆಯಾಗಿದೆ. ಅವಳ ಕರ್ತವ್ಯ ಪಾಲನೆ ಬಗ್ಗೆ ಸ್ವತಃ ಭಕ್ತರೆ ಅವಳನ್ನು ಎಚ್ಚರಿಸುವ ಕ್ರಮ ಬಹಳ ವಿಶಿಷ್ಟವಾದದ್ದಾಗಿದೆ.

ದ್ವಾರವನ್ನು ತೆರೆದ ಮೇಲೆ ದೇವಿಯೊಂದಿಗೆ ಎಲ್ಲರೂ ಹರ್ಷಚಿತ್ತರಾಗಿ ಪಾಲಿಕೆಯು ಭೀಮರತಿ ಹೊಂಡದಲ್ಲಿ ಮಹಾಮಜ್ಜನಗೊಂಡು ಪಕ್ಕದಲ್ಲಿರುವ ಖಡ್ಗತೀರ್ಥದಲ್ಲಿ ಮಹಾ ಮಂಗಳಾರತಿ ಯೊಂದಿಗೆ ಗಂಗಾ ಪೂಜೆ ನೆರವೇರುತ್ತದೆ. ಕಂಕಣ-ಕಲಶ ವಿಸರ್ಜನೆ ಮುಗಿದು, ಕಾಳಮ್ಮನ ಪಾಲಿಕೆಯು ಮರಳಿ ದೇವಸ್ಥಾನಕ್ಕೆ ಬರುತ್ತದೆ. ಅರ್ಚಕರು ಮತ್ತೆ ಮಂಗಳಾರತಿಯನ್ನು ಮುಗಿಸುತ್ತಾರೆ. ನಂತರ ಮಹಾಪ್ರಸಾದವಾಗುತ್ತದೆ.

ಉಪವಾಸ ವ್ರತ

ಶಿರಸಂಗಿ ಜಾತ್ರೆಗೆ ಆಗಮಿಸಿದ ಬಹುತೇಕ ಭಕ್ತರೆಲ್ಲರು ಉಪವಾಸ ವ್ರತವನ್ನು ಅಮವಾಸ್ಯೆಯಂದು ಕೈಗೊಂಡಿರುತ್ತಾರೆ. ಕೆಲವರು ಪಾದಯಾತ್ರೆಯ ಮೂಲಕ ಜಾತ್ರೆಗೆ ಸೇರುವ ಭಕ್ತರು ಉಪವಾಸವಿದ್ದು, ಪಾದಯಾತ್ರೆಯಲ್ಲಿ ಭಾಗವಹಿಸಿರುತ್ತಾರೆ. ಕೆಲವರು ಉಪ್ಪು-ಖಾರದ ಪದಾರ್ಥಗಳನ್ನು ಸೇವಿಸದೇ ಸಪ್ಪನೆಯ ಚುರುಮುರಿಯನ್ನು ಮಾತ್ರ ಸೇವಿಸಿ-ಚಹಾ ಸ್ವೀಕರಿಸಿ, ಉಪವಾಸ ವ್ರತ ಮಾಡುತ್ತಾರೆ. ಉಪ್ಪು-ಕಾರ ಮನುಷ್ಯನ ಮಾನಸಿಕ ಮತ್ತು ದೈಹಿಕ ಸೊಕ್ಕಿನ ಸಂಕೇತ. ಭಕ್ತರು ತಮ್ಮಲ್ಲಿ ಅಡಗಿಕೊಂಡಿರುವ ಅಹಂಕಾರವನ್ನು ತ್ಯಜಿಸುತ್ತಾರೆ. ಸಪ್ಪನೆಯ ಚುರುಮುರಿ-ಶಾಂತಸ್ವಭಾವದ ಪ್ರತಿನಿಧಿ, ಚುರುಮುರಿ ಸ್ವೀಕಾರ್ಹ ಅಂದರೆ ಶಾಂತಿ-ನೆಮ್ಮದಿಗಳನ್ನು ಪಡೆಯಲು ಭಕ್ತರು ಉಪವಾಸ ಕೈಗೊಳ್ಳುತ್ತಾರೆ. ಅಹಂಕಾರವನ್ನು ಅಳಿಸಿ ಪೂರ್ಣ ಪ್ರಮಾಣದಲ್ಲಿ

ಮನುಷ್ಯನಾಗಿ ಬದುಕಲು ಯುಗಾದಿಯಂದು ಉಪವಾಸ ವ್ರತವನ್ನು ಆರಂಭಿಸುತ್ತಾರೆ. ಕೆಲವರು ನಿರಂಕಾರ ಉಪವಾಸವೆಂದು ಕೇವಲ ನೀರು-ಚಹಾ ಮಾತ್ರ ಸ್ವೀಕರಿಸುತ್ತಾರೆ. ವರ್ಷದಲ್ಲಿ ಒಂದು ದಿನವಾದರೂ ಕಾಳಮ್ಮನಿಗೋಸ್ಕರ ಉಪವಾಸವಿದ್ದರೆ ವರ್ಷದವರೆಗೂ ದೇವಿ ನಮಗೆ ಒಳ್ಳೆಯದನ್ನು ಮಾಡುತ್ತಾಳೆ ಎಂಬುದು ಭಕ್ತರ ಅಂಬೋಣ. ಉಪವಾಸ ವ್ರತದ ಅಮವಾಸ್ಯೆಯಂದು ಶಿರಸಂಗಿಗೆ ಬಂದವರು ಮಾತ್ರ ಈ ವ್ರತವನ್ನು ಕೈಗೊಳ್ಳುವುದಷ್ಟೇ ಅಲ್ಲ, ಜಾತ್ರೆಗೆ ಬಾರದವರು ತಮ್ಮ-ಊರು-ಮನೆಗಳಲ್ಲಿ ಭಕ್ತಿಯಿಂದ ಉಪವಾಸವಿದ್ದು ಒಂದು ಸಲವಾದರೂ ನಿನ್ನ ಜಾತ್ರೆ ಬರಲು ಅನುವು ಮಾಡಿಕೊಡು ತಾಯೆ! ಎಂದು ಭಕ್ತರು ಉಪವಾಸವಿರುತ್ತಾರೆ.

ದೇವಿಯ ಹೆಸರಿನಿಂದ ಕೈಕೊಳ್ಳುವ ಉಪವಾಸ ವೈಜ್ಞಾನಿಕವಾಗಿ ಆರೋಗ್ಯವಂತನನ್ನಾಗಿಯೂ ಮಾಡುತ್ತದೆ. ಉಪವಾಸದ ಫಲವಾಗಿ ಕಾಳಮ್ಮ ತನ್ನನ್ನು ಆರೋಗ್ಯವಂತಳನ್ನಾಗಿ ಇರಿಸಿದ್ದಾಳೆ ಎಂಬ ನಂಬಿಕೆ ಭಕ್ತರಲ್ಲಿದೆ. ಅದು ಸತ್ಯವು ಆಗಿದೆ. ಗಂಡು-ಹೆಣ್ಣು, ಮಕ್ಕಳು ಹಿರಿಯ-ಕಿರಿಯರೆಲ್ಲರೂ ಈ ವ್ರತ ಕೈಕೊಳ್ಳುತ್ತಾರೆ. ಹಳ್ಳಿಗಳಿಂದ ಚಕ್ಕಡಿ-(ಬಂಡಿ)ಗಳಲ್ಲಿ ಬಂದ ಕೆಲವು ವಯೋವೃದ್ಧೆಯರು ಜಾತ್ರೆಯಲ್ಲಿ ಸಂಚಾರ ಮಾಡಲು ಸಾಧ್ಯವಾಗದ್ದರಿಂದ ಚಕ್ಕಡಿಯ ನೆರಳಲ್ಲಿ ಕುಳಿತು ಉಪವಾಸವಿದ್ದು ಕಾಳಮ್ಮನನ್ನು ನೆನೆಯುತ್ತಾರೆ.

ಶ್ರೀ ಕಾಳಿಕಾದೇವಿಯ ನೆನೆವರಿಗಾನಂದ।
ಮಹಾದೇವಿಯ ನೆನೆವರಿಗಾನಂದ ॥ಪ॥

ಶಂಖ-ಚಕ್ರವನು। ಕರದಲಿ ಪಿಡಿದಿಹ
ಪಂಕಜಲೋಚನೆ ಶಂಕರ ಮಣಿಯು॥

ಭೀತಿಯ ತೋರಲು। ಗದೆಯನು ಪಿಡಿದಿಹ
ಮೂರ್ಖರ ಕಡಿಯಲು ಖಡ್ಗವಧರಿಸಿಹ॥

ದುಷ್ಟರ ಇರಿಯಲು। ಶೂಲವ ತೋರಿಪೆ
ಕಷ್ಟವ ಹರಿಸುತೆ। ಇಷ್ಟವ ಕರುಣಿಪೆ॥

ಅಭಯದ ಹಸ್ತದಿ। ನಗು ಮೊಗದೋರುವ
ನಿರ್ಭಯ ವದನದ ಶ್ರೀದುರ್ಗಾಂಬಿಕೆಯು॥

ಕಾಳಮ್ಮನ ಗುಣಗಾನವನ್ನು ಮಾಡುತ್ತ ಅಮವಾಸ್ಯೆಯಂದು ಉಪವಾಸವಿರುತ್ತಾರೆ. ಸಂಜೆಯಾಗುತ್ತಿದ್ದಂತೆ ದೇವಾಲಯದ ಆವರಣದಲ್ಲಿ ಸಮಾಜದ ಗಣ್ಯಾತಿ ಗಣ್ಯರ, ಚಿಂತಕರು, ಸಾಹಿತಿಗಳು, ಧರ್ಮದರ್ಶಿಗಳು, ಮಠಾಧೀಶರು ಕಲಾವಿದರು ಎಲ್ಲ ಕ್ಷೇತ್ರಗಳಲ್ಲಿ ದುಡಿಯುತ್ತಿರುವ

ಪಂಚಾಳ(ವಿಶ್ವಕರ್ಮ) ಸಮುದಾಯದವರೆಲ್ಲರೂ ಸೇರುತ್ತಾರೆ. ಧಾರ್ಮಿಕ, ಸಾಂಸ್ಕೃತಿಕ ಚಿಂತನ ಗೋಷ್ಠಿಗಳು ಜರುಗುತ್ತವೆ. ಸಮಾಜದ ಸಾಧಕರಿಗೆ, ಪ್ರತಿಭಾವಂತರಿಗೆ ಸನ್ಮಾನಗಳು ಏರ್ಪಡುತ್ತವೆ. ಧನ-ಧಾನ್ಯ, ನಾಣ್ಯ, ತುಲಾಭಾರ ಕಾರ್ಯನೆರವೇರುತ್ತದೆ. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ವರ್ಷದ ಉದ್ದಕ್ಕೂ ದುಡಿದು-ಗಳಿಸಿದ ಒಟ್ಟು ಸಂಪತ್ತಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಆದರೂ ದಾನ-ಧರ್ಮಾದಿ ಕಾರ್ಯಗಳನ್ನು ಜರುಗಿಸಬೇಕೆಂದು ಜಾತ್ರೆಗೆ ಬಂದ ಭಕ್ತರಿಗೆ ಮನವರಿಕೆಯಾಗುತ್ತದೆ. ಕಾಯಕದ ಮಹತ್ವದೊಂದಿಗೆ ದಾಸೋಹದ ಪರಿಕಲ್ಪನೆ ಜನರಲ್ಲಿ ಮೂಡುತ್ತದೆ. ದಾನ-ಧರ್ಮಾದಿಗಳಿಲ್ಲದಿದ್ದರೆ ಗುಡಿ-ಗೋಪುರಗಳಿಲ್ಲ; ಗುಡಿ-ಗೋಪುರಗಳಿಲ್ಲದಿದ್ದರೆ ಜಾತ್ರೆ-ಉತ್ಸವಗಳಿಲ್ಲ, ಸ್ನೇಹ-ಸೌಹಾರ್ಧತೆಗಳಿರುವುದಿಲ್ಲ. ಬಂಧು-ಬಳಗದಲ್ಲಿ ಸಾಮರಸ್ಯತೆ ಏರ್ಪಡುವುದಿಲ್ಲ ಎಂಬುದನ್ನು ಶಿರಸಂಗಿ ಜಾತ್ರೆ ಕುಶಲಕರ್ಮಿಗಳಿಗೆ ತಿಳಿಸಿಕೊಡುತ್ತದೆ. ನಮ್ಮ ಬಗ್ಗೆ ನಮಗೆ ಹೆಮ್ಮೆ ಮೂಡುವಂತಹ ಸದ್ಭಾವನೆಯನ್ನು ಆಧ್ಯಾತ್ಮಿಕ-ಧಾರ್ಮಿಕ ಚಿಂತಕರು ಭಕ್ತರಿಗೆ ಅರಹುತ್ತಾರೆ. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಯುವ ಕಲಾವಿದ-ಕಲಾವಿದೆಯರಿಂದ ಭರತನಾಟ್ಯ, ನೃತ್ಯಗೀತೆ, ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮಗಳು ಬೆಳಗಿನ ವರೆಗೂ ಗಾನಸುಧೆ ಹರಿಯುತ್ತಿರುತ್ತದೆ. ಅಮವಾಸ್ಯೆಯ ರಾತ್ರಿಯಂದು ಶಿರಸಂಗಿಯ ಕಾಳಮ್ಮನ ದೇವಸ್ಥಾನ ದೇವಲೋಕದ ಗಾನ-ಗಂಧರ್ವರಿಂದ ಕೂಡಿದೆ ಎಂಬಂತೆ ಭಕ್ತರಿಗೆ ಅನಿಸುತ್ತದೆ. ಅಂದು ಜಾತ್ರೆಗೆ ಬಂದು ದೇವಿಯ ಈ ವೈಭವವನ್ನು ಕಣ್ಣಾರೆ ಕಂಡ ನಾವೇ ಧನ್ಯರೆಂದು ಭಕ್ತರು ಮತ್ತೊಮ್ಮೆ ಕಾಳಮ್ಮನಿಗೆ ನಮಿಸುತ್ತಾರೆ. ಪ್ರಸಿದ್ಧ ಜಾನಪದ ಕಲಾವಿದರ ಕರಡಿ ಮಜಲಿನ ಗುಂಗು ಎಂತಹ ಅರಸಿಕರನ್ನು ಒಂದು ಕ್ಷಣ ಬೆರಗುಗೊಳಿಸಿ ಕರ್ಣಗಳನ್ನು ನಿಮಿರಿಸುತ್ತವೆ.

ಪಾಂಚಾಳ ಕುಶಲಕರ್ಮಿಗಳಲ್ಲಿ ಜಾನಪದ ಕಲೆಯು ಒಂದು ಕಾಳಮ್ಮನ ವಿಶೇಷ ಕೊಡುಗೆಯಂಥಾಗಿದೆ. ಕ್ರಿಯಾಶೀಲರಾದ ಕುಶಲಕರ್ಮಿಗಳು ಕಬ್ಬಿಣ, ಮರಗೆಲಸದೊಂದಿಗೆ ಭಜನೆ, ಕೀರ್ತನೆ, ಹಾರ್ಮೋನಿಯಂ, ತಬಲಾ, ಸಣ್ಣಾಟ, ಬಯಲಾಟ, ಶ್ರೀಕೃಷ್ಣಪಾರಿಜಾತ, ಕರಡಿ ಮಜಲು, ಕಣಿವಾದನ ಮುಂತಾದ ಜನಪದಕಲೆಗಳಲ್ಲಿಯೂ ಪಾಂಚಾಳರು ನಿಷ್ಣಾತರಾಗಿರುವುದನ್ನು ಕಂಡರೆ ಕಲೆ ಪ್ರಯೋಗಶೀಲ ಪಾಂಚಾಳರಾದ ಕುಶಲಕರ್ಮಿಗಳಿಗೆ ತಾನಾಗಿ ಒಲಿದು ಬಂದ ವಿದ್ಯೆಯಾಗಿದೆ ಎಂದೆನಿಸುತ್ತದೆ.

ಬುತ್ತಿ ಹಾರಿಸುವಿಕೆ

ಶಿರಸಂಗಿ ದೇವಸ್ಥಾನದಲ್ಲಿ ಚೈತ್ರ ಶುದ್ಧಪ್ರತಿಪದೆ ಸೂರ್ಯೋದಯದ ಮುನ್ನ ೫ ಗಂಟೆ ಹೊತ್ತಿಗೆ ವರ್ಷದ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾದ ಬುತ್ತಿ ಹಾರಿಸುವಿಕೆ ಸಾಂಸ್ಕೃತಿಕವಾಗಿ

ಬಹಳ ಮಹತ್ವತೆ ಪಡೆದುಕೊಂಡಿದೆ. ದೇವಾಲಯದ ಆವರಣದ ಎಡಭಾಗದಲ್ಲಿ ಬುತ್ತಿ ಹಾರಿಸಲು ೧೦ ಅಡಿ ಚಚೌಕಾರದ ಕಟ್ಟೆಯನ್ನು ಕಟ್ಟಲಾಗಿದ್ದು ಸುತ್ತಲೂ ಕಬ್ಬಿಣ ಸಲಾಕೆಗಳನ್ನು ಅಳವಡಿಸಲಾಗಿದೆ. ದೇವಾಲಯದ ಪೂಜಾರಿಗಳು ಅರಿಷಿಣ-ಕುಂಕುಮ-ಸುಗಂಧ ದ್ರವ್ಯದಿಂದ ಲೇಪಿಸಿದ ಅನ್ನದ ಐದು ಉಂಡಿಗಳನ್ನು ತಂದು ಕಟ್ಟೆಯ ಮೇಲೆ ಇಡುತ್ತಾರೆ. ಮಂತ್ರೋಚ್ಚಾರಣೆ ಯೊಂದಿಗೆ ದೂಪ-ದೀಪದಿಂದ ಅನ್ನದ ಉಂಡಿಗಳ ಪೂಜೆ ನೆರವೆರುತ್ತದೆ. ಕುಂಕುಮದಿಂದ ಲೇಪಿತಗೊಂಡ ಅನ್ನದ ಉಂಡೆಗಳು ನೋಡುಗರಿಗೆ ಕತ್ತರಿಸಿದ ರುಂಡಗಳಂತೆ ಕಾಣಿಸುತ್ತವೆ. ಅವು ಕಾಳಮ್ಮನು ಸಂಹರಿಸಿದ ಶುಂಭ-ನಿಶುಂಭ, ನಲುಂದ-ನರುಂದ, ಬೆಟ್ಟಾಸುರ ಮುಂತಾದ ರಾಕ್ಷಸರ ರಕ್ತ ಚಿಮ್ಮಿತ ರುಂಡಗಳಂತೆ ಪೂಜಾರಿಗಳು ಅನ್ನದ ಉಂಡೆಗಳನ್ನು ತಯಾರಿಸಿರುತ್ತಾರೆ. ಹಾಗೆಯೇ ತಾವು ಕಾಳಮ್ಮನ ಸ್ವರೂಪವೆಂಬಂತೆ ಕೆಂಪು ಮಡಿಗಳನ್ನು ಉಟ್ಟುಕೊಂಡಿರುತ್ತಾರೆ. ಈ ಬಗೆಯ ವಿಶಿಷ್ಟವಾದ ಆಚರಣೆ ಬೇರೆ ಯಾವ ದೇವಸ್ಥಾನಗಳಲ್ಲಿಯೂ ಜರುಗುವುದಿಲ್ಲ. ಅಂತೆಯೇ ಈ ದೃಶ್ಯವನ್ನು ನೋಡಲು ಭಕ್ತಸಾಗರವೇ ನೆರೆದಿರುತ್ತದೆ. ಬುತ್ತಿ ಹಾರಿಸುವಿಕೆ ಕಟ್ಟೆಯ ಸುತ್ತ-ಮುತ್ತ ಮೊದಲೇ ಸ್ಥಳವನ್ನು ಭದ್ರಪಡಿಸಿಕೊಂಡು ಭಕ್ತರು ಕುಳಿತಿರುತ್ತಾರೆ. ಕೆಲವರು ದೇವಾಲಯದ ಮುಂಭಾಗದ ಪವುಳಿಗಳ ಮೇಲೆ ಕುಳಿತು ಬುತ್ತಿ ಹಾರಿಸುವ ಕಾರ್ಯವನ್ನು ಎವೆಯಿಕ್ಕದೆ ನೋಡಲು ಕಾತುರರಾಗಿರುತ್ತಾರೆ.

ಉಂಡಿಗಳನ್ನು ಹಾರಿಸುವ ಹೊತ್ತಿನಲಿ, ದೀಪಗಳನ್ನ ತೆಗೆಯಲಾಗಿರುತ್ತದೆ. ಎಲ್ಲೆಡೆ ಕತ್ತಲು ಆವರಿಸಿರುತ್ತದೆ. ಪೂಜಾರಿಗಳು ಅನ್ನದ ಉಂಡೆಗಳನ್ನು ಮೇಲಕ್ಕೆ ಹಾರಿಸಿದಾಗ ಒಂದು ಅನ್ನದ ಉಂಡೆ ಕಂಚಿ ಕಾಮಾಕ್ಷಿಗೆ ತಲುಪುತ್ತದೆ. ಅವಾಗ ಆಕೆಯ ತೇರು ಎಳೆಯುತ್ತದೆ ಎಂದು ಪ್ರತೀತಿಯಿದೆ. ಮೇಲಕ್ಕೆ ಎಸೆದ ಅನ್ನದ ಉಂಡೆಗಳಲ್ಲಿ ಕೆಲವು ತುಂಡು-ತುಂಡಾಗಿ ಭೂಮಿಯ ಗುರುತ್ವಾಕರ್ಷಣೆ ಶಕ್ತಿಯಿಂದಾಗಿ ಭೂಮಿಗೆ ಬೀಳುತ್ತವೆ. ಅವುಗಳನ್ನು ಅಲ್ಲಿ ನೆರೆದ ಭಕ್ತ ಸಮುಹ ಪಡೆದುಕೊಳ್ಳಲು ಹರಸಾಹಸ ಮಾಡುತ್ತದೆ. ಒಂದಗಳು ಅನ್ನ ದೊರೆತರೆ ಸಾಕು, ಜೀವನದ ಕಷ್ಟ-ಕಾರ್ಪಣ್ಯಗಳು ದೂರವಾಗಿ, ಸುಖ-ಶಾಂತಿ-ಸಮೃದ್ಧಿಯು ಮನೆಯಲ್ಲಿ ಉಂಟಾಗು ತ್ತದೆಂದು ಭಕ್ತರ ತಿಳಿವಳಿಕೆಯಾಗಿದೆ. ಈ ಬುತ್ತಿ ಹಾರಿಸುವಿಕೆಯಿಂದ ಒಂದು ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ. ಅದೇನೆಂದರೆ ಕಂಚಿಯ ಕಾಮಾಕ್ಷಿಗೂ ಶಿರಸಂಗಿಯ ಕಾಳಮ್ಮನಿಗೂ ಇರುವ ಅವಿನಾಭಾವ ಸಂಬಂಧ. ಅವರಿಬ್ಬರೂ ಅಕ್ಕ-ತಂಗಿಯರೆಂದು ಭಕ್ತರು ಗುರುತಿಸುತ್ತಾರೆ. ಕಾಮಾಕ್ಷಿಯ ದೇವಸ್ಥಾನದಲ್ಲಿ ಪ್ರತಿವರ್ಷ ಜರುಗುವ ಉತ್ಸವಕ್ಕೆ ಸಹೋದರಿ ಶಿರಸಂಗಿ ಕಾಳಮ್ಮನಿಂದ ಒಂದಾದರೂ ಅಸುರ ಬಲಿ ಜರುಗುವುದು ವಾಡಿಕೆಯಾಗಿದೆ. ತಂಗಿಯನ್ನು ತೃಪ್ತಿಪಡಿಸಲು ಅಕ್ಕ ಯುಗಾದಿಯ ಪ್ರತಿಪದೆಯಂದು ರಾಕ್ಷಸರ ರುಂಡವನ್ನು ಛೇಧಿಸಬೇಕು. ಈ ಪದ್ಧತಿಯು ಕಾಲಾಂತರದಲ್ಲಿ ನರಬಲಿಯಾಗಿ ಪರಿವರ್ತನೆಯಾಗಿರಬೇಕು. ಕಂಚಿ ಕಾಮಾಕ್ಷಿಗೋಸ್ಕರ ಶಿರಸಂಗಿಯಲ್ಲಿ

ಕೆಲವು ವರ್ಷಗಳಾದರೂ ನರಬಲಿ ಪದ್ಧತಿ ರೂಢಿಯಲ್ಲಿರಬೇಕು. ನಂತರದ ದಿನಗಳಲ್ಲಿ ಇದೇ ಪದ್ಧತಿಗೆ ಬೇರೆ ಸ್ವರೂಪ ನೀಡಲಾಯಿತು ಎಂಬುದೆ ಅನ್ನದ ಉಂಡೆಗಳು ಬಳಕೆಯಾಗಿರುವುದನ್ನು ಸೂಚಿಸುತ್ತದೆ. 'ಕ್ಷಮೇಯಾ ಧರಿತ್ರಿ' ಭೂಮಿಗೆ ಕ್ಷಮಿಸುವ ಗುಣವಿರುವಂತೆ ಅನ್ನದ ಉಂಡೆ ಅಂದರೆ ರಾಕ್ಷಸರ ರುಂಡಗಳು ಆಕಾಶದೆತ್ತರಕ್ಕೆ ಚಿಮ್ಮುವಾಗ ದುಷ್ಟಗುಣಗಳ ಪ್ರತಿರೂಪವಾಗಿ, ನೆಲಕ್ಕೆ ಬೀಳುವಾಗ ಸಾತ್ವಿಕ ಗುಣವಾಗಿ ಪರಿವರ್ತಿವಾಗುವುದನ್ನು ಶಿರಸಂಗಿಯಲ್ಲಿ ಕಾಣುತ್ತೇವೆ. ಅಂತೆಯೇ ತುಂಡ-ತುಂಡಾಗಿ ಬಿದ್ದ ಅನ್ನದ ಅಗಳುಗಳನ್ನು ಪ್ರತಿಯೊಬ್ಬ ಭಕ್ತರು ಮನೆಗೆ ಒಯ್ಯಲು ಪ್ರಯತ್ನಿಸುತ್ತಾನೆ. ಭಕ್ತರಲ್ಲಿಯೂ ಈ ಬಗೆಯ ದುಷ್ಟತನಗಳಿದ್ದರೆ ಅವು ಆ ಕ್ಷಣದಲ್ಲಿ ಮಾಯವಾಗಿ ಪರಿಶುದ್ಧ ಗುಣವುಳ್ಳ ಭಕ್ತನಾಗಿ ಪರಿವರ್ತಿತನಾಗುತ್ತಾನೆ ಎಂಬುದನ್ನು ಈ ಬುತ್ತಿ ಹಾರಿಸುವಿಕೆ ಪದ್ಧತಿಯು ತಿಳಿಸಿಕೊಡುತ್ತದೆ.

ಉಪನಯನ

ತಾಯಿಯ ಗರ್ಭದಲ್ಲಿ ಜನಿಸಿದ ಮಗುವಿಗೆ ಸಂಸ್ಕಾರವು ಮನುಷತ್ವವನ್ನು ಕಟ್ಟಿಕೊಡುತ್ತದೆ. ಮೌಲ್ಯಾಧಾರಿತ ಜೀವನವನ್ನು ವಿಶ್ವಕರ್ಮರಿಗೆ 'ಉಪನಯನ' ಎಂಬ ಸಂಸ್ಕಾರ ರೂಪಿಸಿಕೊಡುತ್ತದೆ. 'ಉಪ' ಅಂದರೆ ಸಮೀಪ ಎಂದರ್ಥ. ನೀ-ಪ್ರಾಪಣೆ=ನಯತಿ ಎಂಬ ಕ್ರಿಯಾಪದದಿಂದ 'ಅನಂ' ಪ್ರತ್ಯಯದಿಂದಾಗಿ 'ನಯನಂ' ಪದ ಹುಟ್ಟಿದೆ. ಇದರರ್ಥ ಕರೆದುಕೊಂಡು ಹೋಗುವುದು. ಮಗುವನ್ನು ಅಂದರೆ ಉಪನಯನಕ್ಕೆ ಸಿದ್ಧನಾದ ವಟುವನ್ನು ಸಂಸ್ಕಾರಗೊಳಿಸುವ ಗುರು ಅಥವಾ ಆಚಾರರಲ್ಲಿ ಕರೆದುಕೊಂಡು ಹೋಗುವ ಕ್ರಿಯೆ 'ಉಪನಯನ'.

ಕರ್ಣವೇಧನ ಮತ್ತು ಚೌಲಕರ್ಮ ವಿಧಿಗಳನ್ನು ಪೂರೈಸಿದ ವಟುವಿಗೆ ಅಂದರೆ ೮ನೇ ವರ್ಷಕ್ಕೆ ಉಪನಯನ ಕಾರ್ಯ ಜರುಗುತ್ತದೆ. ಈ ಸಂಸ್ಕಾರವಂತ ವಟುವಿಗೆ 'ದ್ವಿಜ' ಎಂದು ಕರೆಯಲಾಗುತ್ತದೆ. 'ದ್ವೇ ಜನ್ಮನೀ ಯಸ್ಯ ಸಃ ದ್ವಿಜ' ಎರಡನೇಯ ಜನ್ಮ ಇದ್ದವರು 'ದ್ವಿಜ'ರು ಎನ್ನುತ್ತಾರೆ. ವಿಶ್ವಕರ್ಮರಲ್ಲಿ ಉಪನಯನವು ವ್ಯಕ್ತಿಗೆ ಎರಡನೇಯ ಜನ್ಮವಿದ್ದಂತೆ ಪಾವಿತ್ರ್ಯತೆಯನ್ನು, ಪರಿಶುದ್ಧ ಮನಸ್ಸು ಮತ್ತು ಬೌದ್ಧಿಕ ಬೆಳವಣಿಗೆಯ ಮೂಲಕ ವ್ಯಕ್ತಿಯನ್ನು ಸುಸಂಸ್ಕೃತ ಹಾಗೂ ಜವಾಬ್ದಾರಿಯುತನನ್ನಾಗಿ ಮಾಡುವುದೇ ಉಪನಯನದ ಉದ್ದೇಶವಾಗಿದೆ. ಇಂಥ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ವಿಶ್ವಕರ್ಮ ಜನಾಂಗ ಕಾಳಮ್ಮನ ಪುಣ್ಯಕ್ಷೇತ್ರ ಶಿರಸಂಗಿಯನ್ನು ದರ್ಶಿಸುತ್ತಾರೆ.

ಯುಗಾದಿ ಪ್ರತಿಪದೆಯಂದು ವಿಶ್ವಕರ್ಮ ವಟುಗಳನ್ನು ಸಂಸ್ಕಾರಯುತರನ್ನಾಗಿ ಮಾಡುವ ಉಪನಯನ ಕಾರ್ಯ ಶಿರಸಂಗಿಯಲ್ಲಿ ಪ್ರಾಚೀನ ಕಾಲದಿಂದಲು ನಡೆದುಕೊಂಡು ಬಂದ ಪದ್ಧತಿಯಾಗಿದೆ. ಹೆಚ್ಚಾಗಿ ಕೆಳ ಮತ್ತು ಮಧ್ಯಮ ವರ್ಗದ ವಿಶ್ವಕರ್ಮರು ಕಾಳಿಕಾದೇವಿ

ಜಾತ್ರೆಯಲ್ಲಿ ಉಪನಯನವನ್ನು ಮಾಡಿಸುತ್ತಾರೆ. ಈ ಧಾರ್ಮಿಕ ವಿಧಿ-ವಿಧಾನವನ್ನು ಕ್ಷೇತ್ರದ ಆಚಾರಿಗಳು ನೆರವೇರಿಸುತ್ತಾರೆ. ಕಾಳಿಕಾದೇವಸ್ಥಾನದ ಉತ್ತರ ಭಾಗದಲ್ಲಿ ಕುಳಿತ ಕ್ಷೌರೀಕರಿಂದ ಕ್ಷೌರ ಮಾಡಿಸುತ್ತಾರೆ. ನೆತ್ತಿಯ ಸುಳಿಯ ಸುತ್ತ ಹಸ್ತದಗಲ ಕೂದಲನ್ನು ಬಿಟ್ಟು ಉಳಿದೆಡೆ ಕ್ಷೌರ ಮಾಡುತ್ತಾರೆ. ಖಡ್ಗ ತೀರ್ಥದಲ್ಲಿ ಸ್ನಾನ ಮುಗಿಸಿದ ವಟುಗಳು ಕಾಳಮ್ಮ ದೇವಾಲಯದ ರಂಗಮಂಟಪದಲ್ಲಿ ಉಪನಯನದ ಕರ್ಮಗಳನ್ನು ಆಚಾರಿಗಳು ವಟುಗಳಿಕೆ ಹೇಳಿಕೊಡುತ್ತಾರೆ. ಜನಿವಾರ ಧಾರಣೆ, ಮಂತ್ರೋಪದೇಶಗಳು ಹೇಳಿ ಕೊಡುತ್ತಾರೆ. ಸಂಧ್ಯಾವಂಧನೆಗಳನ್ನು ವಿವರಿಸುತ್ತಾರೆ. ಶಿರಸಂಗಿ ಕ್ಷೇತ್ರದಲ್ಲಿಯೇ ಅತಿ ಹೆಚ್ಚಾಗಿ ಉಪನಯನ ಕಾರ್ಯಗಳು ಜರುಗುತ್ತವೆ. ಕೆಲಕುಟುಂಬಸ್ಥರು ಕಾಳಮ್ಮನ ಸನ್ನಿದಿಯಲ್ಲಿಯೇ ತಮ್ಮ ಮಕ್ಕಳಿಗೆ ಸಂಸ್ಕಾರ ದೊರೆಯಲಿ ಎಂದು ಬಯಸಿರುತ್ತಾರೆ. ಇನ್ನು ಕೆಲವು ಕುಟುಂಬಗಳು ಆರ್ಥಿಕವಾಗಿ ಹಿಂದುಳಿದವರಾಗಿದ್ದ, ಹೆಚ್ಚಿನ ಖರ್ಚನ್ನು ನಿಭಾಯಿಸಲಿಕ್ಕಾಗದೆ ಕಾಳಮ್ಮ ಜಾತ್ರೆಯಲ್ಲಿ ಉಪನಯನ ಕರ್ಮವನ್ನು ನೆರವೇರಿಸಿಕೊಳ್ಳುತ್ತಾರೆ. ಅನುಕೂಲಸ್ಥ ವಿಶ್ವಕರ್ಮರು ಮನೆಯಲ್ಲಿಯೇ ಶಿರಸಂಗಿ ಆಚಾರಿಗಳಿಂದ ಉಪನಯನ ಕಾರ್ಯವನ್ನು ಮಾಡಿಸುತ್ತಾರೆ. ಆರ್ಥಿಕ ಅನುಕೂಲತೆಗೆ ಅನುಗುಣವಾಗಿ ವಿಶ್ವಕರ್ಮರಲ್ಲಿ ಉಪನಯನ ಕಾರ್ಯಗಳು ಜರುಗುತ್ತವೆ. ಆದರೆ ಶಿರಸಂಗಿಯ ಜಾತ್ರೆಯಲ್ಲಿ ಬಡವ-ಬಲ್ಲಿದನಿಗೆ ಅನುಕೂಲವಾಗುವಂತೆ ಉಪನಯನ ಕಾರ್ಯ ಮಾಡುತ್ತಾರೆ. ಇತ್ತೀಚೆಗೆ ಜಾತ್ರೆಯ ನಂತರ ದಿನಗಳಲ್ಲಿಯೂ ಉಪನಯನ ಜರುಗುತ್ತಿರುತ್ತದೆ.

ಶಿರಸಂಗಿ ಶ್ರೀಕಾಳಿಕಾ ದೇವಸ್ಥಾನವು ವಿಶ್ವಕರ್ಮರಿಗೆ ಎರಡನೆಯ ಹುಟ್ಟನ್ನು ಕೊಡುವ ಪುಣ್ಯಕ್ಷೇತ್ರವಾಗಿದೆ. ಉಪನಯನ ತನ್ನದೇ ಆದ ಸಾಂಸ್ಕೃತಿಕ ಮಹತ್ವತೆಯನ್ನು ಪಡೆದುಕೊಂಡಿದೆ. ದ್ವಿಜನಿಗೆ ಒಂದು ರೀತಿಯ ಅನುಭವ ಉಪನಯನದಕ್ಕಿಂತ ಮುಂಚೆ ಆಗುತ್ತದೆ. ಸುಮಾರು ೮ ವರ್ಷದ ವಟು, ಗರ್ಭಾವಾಸವನ್ನು ಅನುಭವಿಸುತ್ತಾನೆ. ಅಂದರೆ ಮೂರು ದಿನಗಳವರೆಗೆ ಒಂದೇ ಕೊಠಡಿಯಲ್ಲಿ ನಿಶ್ಯಬ್ಧತೆಯನ್ನು ಪಾಲಿಸಬೇಕು. ಇದು ಗರ್ಭಾವಸ್ಥೆಯನ್ನು ಸೂಚಿಸುತ್ತದೆ. ಮೂರು ದಿನಗಳ ನಂತರ ವಟುವಿಗೆ ಉಪದೇಶವನ್ನು ಆಚಾರ್ಯರು ಮಾಡುತ್ತಾರೆ ಎಂದು ಚಿಕ್ಕಬಳ್ಳಾಪುರ ಜಿಲ್ಲೆ ನಂದಿಯ ಶ್ರೀಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮಿಜಿಯವರು ಹೇಳುತ್ತಾರೆ. ಈ ಉಪನಯನ ಕಾರ್ಯವನ್ನು ನೋಡಲು ದೇವತೆಗಳು ಆಗಮಿಸುತ್ತಾರೆ. ವ್ಯಕ್ತಿಯ ಎರಡನೆಯ ಜನನವಾದ ಮೇಲೆ ವಿಪ್ರ ಯಜ್ಞ-ಯಾಗಾದಿಗಳನ್ನು ಮಾಡುತ್ತಾನೆ. ಯಜ್ಞದ ಹವಿಸ್ಸನ್ನು ದೇವತೆಗೆ ಅರ್ಪಿಸುತ್ತಾನೆ. ಉಪನಯನದಿಂದಾಗಿ ವ್ಯಕ್ತಿ ಸಂಸ್ಕಾರವಂತನಾಗಿ ಬೆಳೆಯುತ್ತಾನೆ. ದೇವರ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಶಿಸ್ತುಬದ್ಧವಾದ ಮತ್ತು ಸಾಂಪ್ರದಾಯಿಕ ವೈದಿಕ ಜೀವನವನ್ನು ನಡೆಸುವ ವೃತವನ್ನು ಕೈಗೊಳ್ಳುವುದು. ಇದು ಉಪನಯನದ ಸಂಸ್ಕಾರದ ಮುಖ್ಯ ಆಶಯವಾಗಿದೆ.

ಉಪನಯನ ಹೊಂದಿದ ಬ್ರಹ್ಮಚಾರಿ ವ್ರತಸ್ಥನು ಆಚಾರ್ಯರಿಗೆ ತಾಂಬೂಲು-ದಕ್ಷಿಣಾದಿಗಳನ್ನು ಕೊಟ್ಟು, ಭಿಕ್ಷಾಚರ್ಯವನ್ನು ಕೈಕೊಳ್ಳುತ್ತಾನೆ. ಭಿಕ್ಷಾಚರ್ಯವು ಉಪನಯನ ಕರ್ಮದ ಕೊನೆಯ ಕಾರ್ಯವಾಗಿದೆ. ವ್ಯಕ್ತಿಯನ್ನು ಸಂಸ್ಕಾರವಂತನನ್ನಾಗಿ ಮಾರ್ಪಡಿಸುವ ಉಪನಯನ ಕಾರ್ಯವು ಶಿರಸಂಗಿ ಕಾಳಮ್ಮ ದೇವಸ್ಥಾನದಲ್ಲಿ ಶತಮಾನಗಳಿಂದಲೂ ಅವಿರತ ವಾಗಿ ಸಾಗಿಕೊಂಡು ಬಂದಿದೆ. ವಿಶ್ವಕರ್ಮರಿಗೆ ಪುನರ್ಜನ್ಮವನ್ನು ನೀಡುವ ಪುಣ್ಯಕ್ಷೇತ್ರವಾಗಿದೆ.

ದೇವಸ್ಥಾನಗಳು ಸಂಸ್ಕೃತಿಯ ಪ್ರತೀಕ. ಸಾಂಸ್ಕೃತಿಕ ಮಹತ್ವವನ್ನು ಸಾರುವ ಶಕ್ತಿ ಕೇಂದ್ರಗಳಾಗಿವೆ. ಭಾರತೀಯ ಸಂಸ್ಕೃತಿಯಲ್ಲಿ ದೇವಸ್ಥಾನಗಳಿಗೆ ಬಹಳ ಮಹತ್ವದ ಸ್ಥಾನಗಳನ್ನು ನೀಡಿದ್ದೇವೆ. ಮನಸ್ಸಿಗೆ ನೆಮ್ಮದಿ-ಶಾಂತಿ ಉಂಟಾಗಲೆಂದೇ ದೇಗುಲಗಳು ಹುಟ್ಟಿಕೊಂಡವು. ದೇವಾಲಯಗಳಲ್ಲಿ ಒಂದು ಕ್ಷಣ ಕುಳಿತರೆ ಸಾಕು ತನ್ಮಯತೆ ಉಂಟಾಗಿ ಶುದ್ಧ ಭಾವ ತುಂಬುತ್ತದೆ. ಇದಕ್ಕೆ ಕಾರಣಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಲಾಗಿ, ಆಯಸ್ಕಾಂತೀಯ ತರಂಗಗಳು ಸದಾ ದೇವಸ್ಥಾನದ ಸುತ್ತ-ಮುತ್ತ ಪ್ರವಹಿಸುತ್ತವೆ. ತಾಮ್ರಕ್ಕೆ ಸದಾ ಸಕಾರಾತ್ಮಕ ಶಕ್ತಿ ಪ್ರವಹಿಸುತ್ತಲೇ ಇರಬೇಕು. "ಪವಿತ್ರವಾದ ಗರ್ಭಗೃಹ ಮೂರು ಕಡೆಯಿಂದ ಮುಚ್ಚಲಾಗಿರುತ್ತದೆ. ಮುಖ್ಯ ದ್ವಾರವೊಂದೇ ತೆರೆದಿರುತ್ತದೆ. ಗರ್ಭಗುಡಿಯಲ್ಲಿ ಪ್ರವಹಿಸುತ್ತಿರುವ ಆಯಸ್ಕಾಂತೀಯ ತರಂಗಗಳು ಮುಖ್ಯ ದ್ವಾರದ ಮೂಲಕ ಚಿಮ್ಮುತ್ತವೆ. ಆದ್ದರಿಂದ ಮುಖ್ಯದ್ವಾರದ ಮುಂದೆ ನಿಂತಷ್ಟು ನಮಗೆ ಸಮಾಧಾನವಾಗುತ್ತದೆ."[೩೧] ದೇವಸ್ಥಾನಗಳು ಶಕ್ತಿಕೇಂದ್ರ, ಪುಣ್ಯಕ್ಷೇತ್ರಗಳಾಗಿವೆ. ಈ ಹಿನ್ನೆಲೆಯಲ್ಲಿ ಶಿರಸಂಗಿ ಕಾಳಮ್ಮನ ಪರಿವಾರ ದೇವಸ್ಥಾನಗಳು ಮತ್ತು ಅಲ್ಲಿ ಜರುಗುವ ಪೂಜಾ ವಿಧಿ-ವಿಧಾನಗಳು, ಧಾರ್ಮಿಕ-ಆಧ್ಯಾತ್ಮಿಕ ಚಿಂತನೆಗಳು ಸಾಂಸ್ಕೃತಿಕ ಮಹತ್ವವನ್ನು ಎತ್ತಿ ತೋರಿಸುತ್ತವೆ.

ಕೊನೆ ಟಿಪ್ಪಣಿ

೧. ಡಾ.ಬಿ.ವಿ.ಶಿರೂರ, **ಸಂಶೋಧನ ಸ್ವರೂಪ**, ೨೦೦೦, ಪು.೬೨

೨. ಡಾ.ಎ.ಮುರಿಗೆಪ್ಪ, **ದೇವಾಲಯ ವಾಸ್ತು(ಬೆನ್ನುಡಿ)**, ೨೦೧೧,

೩. ಡಾ.ಸಿದ್ಧಲಿಂಗಯ್ಯ, **ಗ್ರಾಮದೇವತೆಗಳು**, ೨೦೦೯, ಪು.೧೬

೪. ಅದೇ, ಪು.೧೭

೫. ಅದೇ, ಪು.೧೬

೬. ಅದೇ, ಪು.೧೯

೭. ಡಾ.ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ-ಸಾಂಸ್ಕೃತಿಕ ಅಧ್ಯಯನ(ಚಾರಿತ್ರಿಕ ಪರಂಪರೆ)**, ೨೦೦೨, ಪು.೫೩

೮. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೧೧, ಪು.೨೮

೯. ಅದೇ, ಪು.೨೭

೧೦. ಅದೇ, ಪು.೩೩

೧೧. ಡಾ. ವಾಸುದೇವ ಬಡಿಗೇರ, ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ(ಚಾರಿತ್ರಿಕ ಪರಂಪರೆ), ೨೦೦೨, ಪು.೬೧

೧೨. ಕೇಶವ ಉಮರ್ಜಿ, ಕಲ್ಕತ್ತೆಯ ಶ್ರೀಕಾಳಿಕಾ ವೈಭವ, ವಿಶ್ವಕರ್ಮ ಸಂದೇಶ, ೨೦೧೨, ಪು.೯

೧೩. ಅದೇ, ಪು.೯

೧೪. ಡಾ.ವಾಸುದೇವ ಬಡಿಗೇರ, ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ(ಚಾರಿತ್ರಿಕ ಪರಂಪರೆ), ೨೦೦೨, ಪು.೬೯

೧೫. ಪ್ರೊ.ಎಸ್.ಯು.ಪೋತದಾರ, ಕಾಲಗರ್ಭದಲ್ಲಡಗಿದ ಸೋಂದಾ ಕಾಳಿಕಾಂಬಾ, ಕಾಳಿಕಾ ಸಂದೇಶ, ೨೦೧೩, ಪು.೧

೧೬. ಡಾ.ವಾಸುದೇವ ಬಡಿಗೇರ, ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ(ಚಾರಿತ್ರಿಕ ಪರಂಪರೆ), ೨೦೦೨, ಪು.೬೮

೧೭. ಅದೇ, ಪು.೬೮

೧೮. ನಾ.ಭಾ.ಚಂದ್ರಶೇಖರಾಚಾರ್ಯ, ಶ್ರೀ ನಾ.ಭಾ.ಕೃತಿ ಸಂಪುಟ ೧, ೨೦೦೩, ಪು.೧೬೭

೧೯. ಡಾ. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ೨೦೦೯, ಪು.೨೩

೨೦. ಅದೇ, ಪು.೨೫

೨೧. ಡಾ. ವಾಸುದೇವ ಬಡಿಗೇರ, ಶಿರಸಂಗಿ ಕಾಳಮ್ಮ–ಸಾಂಸ್ಕೃತಿಕ ಅಧ್ಯಯನ(ಚಾರಿತ್ರಿಕ ಪರಂಪರೆ), ೨೦೦೨, ಪು.೨೯

೨೨. ಪ್ರಭಾಕರ ಎಂ.ಎನ್., ದೇವಾಲಯ ವಾಸ್ತು, ೨೦೧೧, ಪು.೭೧

೨೩. ಪತ್ತಾರ ಎನ್.ಜಿ., ಶಿರಸಂಗಿ ಕಾಳಿಕಾದೇವಿ ವಿಗ್ರಹ ಶ್ರೇಷ್ಠ ಶಿಲ್ಪಕೃತಿ, ಶ್ರೀಕಾಳಿಕಾ ದರ್ಶನ, ೨೦೦೮, ಪು.೧೭

೨೪. ಅದೇ, ಪು.೧೮

೨೫. ಬಸವರಾಜ ಗಂ. ಪುರಾಣಿಕ ಮಠ, ದೇಗುಲ ಸಂಸ್ಕೃತಿ ಮಹತ್ವ, ಸಂಯುಕ್ತ ಕರ್ನಾಟಕ, ದಿ.೨, ಆಗಸ್ಟ್ ೨೦೧೫.

ಅಧ್ಯಾಯ ಆರು

ಶಿರಸಂಗಿ ಕಾಳಮ್ಮ ಆಧುನಿಕ ಸಂದರ್ಭ

ಅಧ್ಯಾಯ ಆರು

ಶಿರಸಂಗಿ ಕಾಳಮ್ಮ ಆಧುನಿಕ ಸಂದರ್ಭ

ಭಾರತೀಯರ ಭವ್ಯ ಸಂಸ್ಕೃತಿಯ ಪ್ರಾತಿನಿಧಿಕ ಸುಕ್ಷೇತ್ರವಾದ ಶಿರಸಂಗಿ, ಕಾಳಮ್ಮ ನೆಲೆಯಿಂದಾಗಿ ಪ್ರಾಚೀನ ಇತಿಹಾಸ ಪೌರಾಣಿಕ ಮಹತ್ವವನ್ನು ಪಡೆದುಕೊಂಡಿದೆ. ಕ್ಷೇತ್ರವು ಕ್ಷಾತ್ರಧರ್ಮ, ಓಜಸ್ಸು, ತೇಜಸ್ಸುಗಳಿಂದ ಪುರಾಣ ಪ್ರಸಿದ್ಧವಾಗಿದೆ. ಇಲ್ಲಿಯ ಪರಿಸರವು ಪ್ರಾಗಿತಿಹಾಸ ಕಾಲದಿಂದಲೂ ಮೂಡಿ ಬಂದಿದೆ. ಪಂಚ ಕಸಬುಗಳನ್ನು ಪೂರ್ವಕಾಲದಿಂದಲೂ ಇಲ್ಲಿಯ ಕುಶಲಕರ್ಮಿಗಳು ನಿರ್ವಹಿಸುತ್ತ ಬಂದಿದ್ದಾರೆ. ಕುಶಲಕರ್ಮಿಗಳ ಕ್ರಿಯಾಶೀಲ ವ್ಯಕ್ತಿತ್ವದ ಪುರಾತನ ಕ್ಷೇತ್ರ ಶಿರಸಂಗಿ, ಸ್ಕಂದ, ಶಿವ, ದೇವಿ ಪುರಾಣಗಳಲ್ಲಿ ಮತ್ತು ವಾಲ್ಮೀಕಿ ರಾಮಾಯಣಗಳಂಥಹ ಶ್ರೇಷ್ಠಗ್ರಂಥಗಳಲ್ಲಿ ಕ್ಷೇತ್ರವು ತನ್ನ ಮಹಿಮೆಯನ್ನು ಸಾರಿಕೊಂಡಿದೆ. ಕ್ಷೇತ್ರದ ಅಧಿದೇವತೆ ಕಾಳಮ್ಮ ಕುಶಲಕರ್ಮಿಗಳ ಆರಾಧನಾ ಶಕ್ತಿಯಾಗಿದ್ದಾಳೆ. ಕುಶಲಕರ್ಮಿ ಕಲೆ ಒಂದು ತಪಸ್ಸು. ಕುಲಕಸಬುದಾರರು ಈ ತಪ್ಪಸ್ಸಿನಿಂದ ಪಡೆದ ಕಲೆಯೇ ಕುಶಲಕರ್ಮಿಗಾರಿಕೆ ಕಲೆಯ ಮೂಲಶಕ್ತಿಯಾಗಿ, ತಪ್ಪಸ್ಸಿನ ಪ್ರಭಾವದಿಂದಾಗಿ ಕಾಳಮ್ಮ ಶಿರಸಂಗಿಯಲ್ಲಿ ಋಷ್ಯಶೃಂಗ ಋಷಿಯ ಕಾಲದಿಂದಲೂ ನೆಲೆಗೊಂಡಿದ್ದಾಳೆ.

ಶಿರಸಂಗಿ ಕಾಳಮ್ಮ ಪ್ರಾಚೀನತೆಯಿಂದ ಆಧುನಿಕತೆಗೆ

ತ್ರೇತಾಯುಗದ ರಾಮಾಯಣ ಕಾಲದ ಅಯೋಧ್ಯೆಯ ಅರಸ ದಶರಥನ ಕಾಲದಲ್ಲಿ ಬದುಕಿದ್ದ ಋಷ್ಯಶೃಂಗನ ಕಾಲವು ಕ್ಷೇತ್ರದ ಪ್ರಾಚೀನತೆಯೆತ್ತ ಕೊಂಡೊಯ್ಯುತ್ತದೆ. ದಶರಥ ಮಹಾರಾಜ ಹಮ್ಮಿಕೊಂಡ ಪುತ್ರಕಾಮೇಷ್ಠಿ ಯಾಗದ ಪ್ರಧಾನ ಅರ್ಚಕ ಋಷ್ಯ ಶೃಂಗನಾಗಿದ್ದನು. ಋಷಿ ನೆಲೆಸಿದ ಕ್ಷೇತ್ರ ಶಿರಸಂಗಿಯಾಯಿತು. ಋಷ್ಯಶೃಂಗನ ಕಾಲದಲ್ಲಿ ಋಷಿಯ ತಪಸ್ಸಿಗೆ ಮೆಚ್ಚಿ ಆದಿಶಕ್ತಿ ಕಾಳಮ್ಮನಾಗಿ ಶಿರಸಂಗಿಯಲ್ಲಿ ನೆಲೆಗೊಂಡದ್ದು ಇತಿಹಾಸ ಆದರೆ ವಿಷ್ಣುವಿನ ದಶಾವತಾರ ಪರಿಕಲ್ಪನೆಗೆ ಸಾಗಿದಾಗ ಶಿರಸಂಗಿಯಲ್ಲಿ ಕಾಳಮ್ಮ ಕೃತಾಯುಗದಲ್ಲಿಯೇ ಅವತರಿಸಿರಬೇಕು ಎಂಬ ವಿಚಾರಗಳನ್ನು ಪುರಾಣಗಳು ತಿಳಿಸುತ್ತವೆ. ಅದಕ್ಕೆ ಪುಷ್ಠಿಯಾಗಿ ಪ್ರಸಿದ್ಧ ಸವದತ್ತಿಯ ರೇಣುಕಾದೇವಿ ಜನ್ಮಕ್ಕಿಂತ

ಮೊದಲೇ ಕಾಳಮ್ಮ ಶಿರಸಂಗಿಯಲ್ಲಿ ಪ್ರತಿಷ್ಠಾಪನಗೊಂಡಿದ್ದಳು. ರೇಣುಕೆ-ಜಮದಗ್ನಿಯನ್ನ ಮದುವೆಯಾದ ಮೇಲೆ ಕಾಶ್ಮೀರ ಅರಸ ರೇಣುಕಾರಾಜ ಶಿರಸಂಗಿಗೆ ಆಗಮಿಸಿ ಕಾಳಮ್ಮನ ದರ್ಶನ ಪಡೆಯುತ್ತಾನೆ ಎಂಬ ಸಂಗತಿಗಳು ಪುರಾಣಗಳಲ್ಲಿ ಉಲ್ಲೇಖಗೊಂಡಿವೆ.

ಚಾರಿತ್ರಿಕ, ಪೌರಾಣಿಕ, ಜಾನಪದ ಅಂಶಗಳು ಮತ್ತೊಂದು ಕಾಲದಲ್ಲಿ ಶಿಲಾಶಾಸನ ರೂಪ ಪಡೆದು ಕೊಳ್ಳುತ್ತವೆ. ಅಂತಹ ಸಂದರ್ಭದಲ್ಲಿ ಶಾಸನಗಳು ಒಂದು ದೇವಸ್ಥಾನದ ಪ್ರಾಚೀನತೆಗೆ ಗಟ್ಟಿ ಸಾಕ್ಷಿಯಾಗಿ ನಿಲ್ಲುತ್ತವೆ. ಶಿರಸಂಗಿಯಲ್ಲಿಯೂ ಇಂಥಹ ಶಿಲಾಶಾಸನಗಳು ಕಾಳಮ್ಮ ದೇವಸ್ಥಾನಕ್ಕೆ ಸಾಕ್ಷಿಗಳಾಗಿವೆ. ಮಧ್ಯಯುಗದ ಐತಿಹಾಸಿಕ ಪ್ರಾರಂಭದ ಕಾಲಕ್ಕೆ ಶಿಲಾಶಾಸನವು ಮಹತ್ವ ಪಡೆದುಕೊಳ್ಳುತ್ತದೆ. ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿರುವ ಕ್ರಿ.ಶ. ೧೧೪೮ರಲ್ಲಿಯ ಋಷ್ಯ ಶೃಂಗಪುರವು ಕಲ್ಯಾಣ ಚಾಲುಕ್ಯರ ಮಂಡಳ ಕ್ಷೇತ್ರದ ರಾಜಧಾನಿಯಾಗಿತ್ತು. ಶಿಲಾಲೇಖನದ ಪ್ರಕಾರ ಶಿರಸಂಗಿಯನ್ನು 'ರಿಷಿಸಿಂಗಪುರ'ವೆಂದು ಕರೆಯಲಾಗುತ್ತಿತ್ತು. ಕಲ್ಯಾಣ ಚಾಲುಕ್ಯ ಸಾಮ್ರಾಟ ಜಗದೇಕಮಲ್ಲನನ್ನ ಸ್ಮರಿಸಿ, ಆತನ ಸಾಮಂತ ಮತ್ತು ದಂಡನಾಯಕ ಕೇಶಿಮಯ್ಯ ಕೆತ್ತಿಸಿದ ಈ ಶಾಸನದಲ್ಲಿ ಕೇಶಿಮಯ್ಯ 'ಎರಡನೂರು ನಾಡಿಗ'ದ ರಾಜಧಾನಿಯನ್ನಾಗಿ ರಿಷಿಸಿಂಗಪುರವನ್ನು ಮಾಡಿಕೊಂಡಿದ್ದನೆಂಬದನ್ನು ಈ ಶಾಸನವು ಉಲ್ಲೇಖಿಸುತ್ತದೆ. ಕ್ರಿ.ಶ ೧೧೮೬ರ ಶಾಸನ ಕಲ್ಯಾಣ ಚಾಲುಕ್ಯರ ಅಭಿನವಮಲ್ಲ ನಾಲ್ಕನೆಯ ವೀರಸೋಮೇಶ್ವರ ಅರಸರ 'ಕೊಳನೂರು ಮೂವತ್ತು' ಕಂಪಣ ವಿಭಾಗಕ್ಕೆ ಶಿರಸಂಗಿಯು ಸೇರಿದ್ದು ತಿಳಿದು ಬರುತ್ತದೆ. ಅಷ್ಟೇ ಅಲ್ಲ ! ಇಲ್ಲಿಯ ಪ್ರಭು ಹಬ್ಬೆನಾಯಕನ ಉಲ್ಲೇಖವು ಬರುತ್ತದೆ.

ಈ ಎರಡು ಶಾಸನಗಳ ಆಧಾರದಲ್ಲಿ ನೋಡುವುದಾದರೆ ಶಿರಸಂಗಿಯ ಕಾಳಮ್ಮನ ದೇವಾಲಯ ಶಾಸನಕಾಲದ ಪೂರ್ವದ್ದಾಗಿದೆ. ಕಮ್ಮಟೇಶ್ವರ ಮತ್ತು ಭೈರವ ದೇವಾಲಯ ಶಾಸನಕಾಲದಲ್ಲಿ ನಿರ್ಮಾಣವಾದ ಬಗ್ಗೆ ತಿಳಿದು ಬರುತ್ತದೆ. ಎರಡೂ ಶಿಲಾಲೇಖನದಲ್ಲಿ ಕಾಳಮ್ಮ ದೇವಸ್ಥಾನದ ಯಾವ ಉಲ್ಲೇಖಗಳಿಲ್ಲದಿರುವುದರಿಂದ ಖಚಿತವಾಗಿ ಇದು ಶಾಸನ ಪೂರ್ವದ ದೇವಸ್ಥಾನವಾಗಿದೆ. ಶಾಕ್ತಪಂಥದ ಆಗಮದಂತೆ ಶಕ್ತಿದೇವಿ ಸ್ಥಾಪನೆಗೊಂಡ ಮೇಲೆ ಶಿವ 'ಭೈರವ'ನಾಗಿ 'ಶಕ್ತಿ'ಯ ರಕ್ಷಣೆಗೆ ಬಂದು ನೆಲೆಗೊಳ್ಳುತ್ತಾನೆ. ಕಲ್ಯಾಣ ಚಾಲುಕ್ಯರ ಆಡಳಿತ ವ್ಯಾಪ್ತಿಯಿಂದ ವಿಜಯನಗರ ಅರಸರ ಆಳ್ವಿಕೆಗೆ ಶಿರಸಂಗಿ ಒಳಪಟ್ಟಿತು ಎಂಬುದು ತಿಳಿಯುತ್ತದೆ. ಕ್ರಿ.ಶ. ೧೩೩೬-೧೫೬೫ರ ಅವಧಿಯಲ್ಲಿ ಋಷ್ಯ ಶೃಂಗಪುರವು 'ಬಾದಾಮಿ ಮಂಡಲ'ದಲ್ಲಿತ್ತು. ಅನಂತರದಲ್ಲಿ ಮರಾಠಾ ಮತ್ತು ಪೇಶ್ವೆಯವರ ಕಾಲಕ್ಕೆ ರಾಮದುರ್ಗ ಸಂಸ್ಥಾನಿಕರ ಆಡಳಿತಕ್ಕೆ ಶಿರಸಂಗಿಯು ಒಳಪಟ್ಟಿತು.

ಶಿರಸಂಗಿಯು ಪ್ರಾಗೈತಿಹಾಸದ ಕಣಜ ಇಲ್ಲಿಯ ಬೆಟ್ಟದ ಮೇಲೆ ಶಿಲಾಯುಗದ ಬೇಟೆಯಾಡುವ ರೇಖಾ ಚಿತ್ರಗಳು, ಪ್ರಾಣಿಗಳ ಗಿಡಮರಗಳ ಚಿತ್ರಗಳು ಕಂಡು ಬಂದಿವೆ ಎಂಬುದು ಪ್ರಾಚ್ಯ

ಸಂಶೋಧಕರ ಹೇಳಿಕೆ. ಇಲ್ಲಿ ಕಲ್ಲಿನ ಕೊಡಲಿ, ಬಾಚಿ, ಪಾತ್ರೆಯ ಚೂರುಗಳು ಲಭಿಸಿದ್ದರಿಂದ ಮಾನವನು ಅತೀ ಪ್ರಾಚೀನ ಕಾಲದಿಂದಲೂ ಶಿರಸಂಗಿ ಪ್ರದೇಶದಲ್ಲಿ ವಾಸವಾಗಿದ್ದನು ಎಂಬುದಕ್ಕೆ ದೊರೆತ ಅವಶೇಷಗಳು ಸಾಕ್ಷಿಯಾಗುತ್ತವೆ. ಇದರ ಆಧಾರದಲ್ಲಿ ಇತಿಹಾಸ ಪೂರ್ವದಲ್ಲಿ ಸುಮಾರು ೫ ಸಾವಿರ ವರ್ಷಗಳ ಆಚೆಗೆ ಶಿರಸಂಗಿಯ ಪ್ರಾಚೀನತೆ ಕಂಡುಬರುತ್ತದೆ. ಇದರಿಂದ ಕಾಳಮ್ಮ ದೇವಸ್ಥಾನ ಪ್ರಾಚೀನ ದೇವಸ್ಥಾನವೆಂದು ಕಡಾಖಂಡಿತ ಹೇಳುವಂತಾಗಿದೆ. ಆದರೆ ಮೂಲ ಸ್ವರೂಪ ಬೇರೆಯಿದ್ದು ಕಾಲಾಂತರದಲ್ಲಿ ಬದಲಾವಣೆಗೆ ಒಳಪಟ್ಟಿರಬೇಕು. ಬಾಳಾಶಾಸ್ತ್ರೀ ಕ್ಷೀರಸಾಗರ ಹೇಳಿರುವಂತೆ 'ಹೇಮಾಡ' ಎಂಬುವನು ಮೂಲ ಕಾಳಮ್ಮನ ಗುಡಿಯನ್ನು ಈಗಿರುವ ಸ್ಥಿತಿಯಲ್ಲಿ ನಿರ್ಮಿಸಿರುವ ಸಾಧ್ಯತೆಗಳು ಕಂಡುಬರುತ್ತವೆ. ಒಟ್ಟಾಗಿ ಶಿರಸಂಗಿ ಕಾಳಮ್ಮನ ದೇವಸ್ಥಾನ ಕಾಲಕಾಲಕ್ಕೆ ಜೀರ್ಣೋದ್ಧಾರಗೊಮಡಿರುವಂಥದ್ದು ಸತ್ಯ. ತ್ರೇತಾಯುಗದ ದಶರಥನ ಕಾಲದ ಋಷ್ಯ ಶೃಂಗನಕಾಲದಿಂದಿಡಿದು ಇಲ್ಲಿಯವರೆಗೆ ಅಂದರೆ ತ್ರೇತಾಯುಗ ಆಯುಷ್ಯ ದ್ವಾಪಾರಯುಗದ ಆಯುಷ್ಯ ಮತ್ತು ಕಲಿಯುಗದ ಇಲ್ಲಿವರೆಗಿನ ಆಯುಷ್ಯವನ್ನು ಗುಣಕೀಕರಣಗೊಳಿಸಿದರೆ ಒಟ್ಟು ವರ್ಷಗಳು ಲಭ್ಯವಾಗುತ್ತವೆ ಎಂಬುದು ನನ್ನ ಅಭಿಪ್ರಾಯ ಯುಗಗಳ ಆಯುಷ್ಯಿನ ಲೆಕ್ಕಾಚಾರ ಮಾಡಿದರೆ ೧೦,೦೦೦ ವರ್ಷಗಳ ಆಚೆಗೂ ಶಿರಸಂಗಿ ಕಾಳಮ್ಮನ ಪ್ರಾಚೀನತೆಯನ್ನು ಗುರುತಿಸಿಕೊಂಡು ಆಧುನಿಕ ಸಂದರ್ಭಕ್ಕೆ ಇತಿಹಾಸದ ಪುಟಗಳನ್ನು ಹೊರಳಿಸುವುದು ಅವಶ್ಯಕವಾಗಿದೆ.

ಶಿರಸಂಗಿ ಕಾಳಮ್ಮನ ದೇವಸ್ಥಾನಕ್ಕೆ ಆಧುನಿಕ ಸಂದರ್ಭಗಳು ಮೂಡಿಬಂದುದೆ ಶಿರಸಂಗಿ ಸಂಸ್ಥಾನದಿಂದ ಶಿರಸಂಗಿ ಸಂಸ್ಥಾನವು ಕ್ರಿ.ಶ. ೧೪ನೇ ಶತಮಾನದಿಂದ ಆರಂಭಗೊಂಡಿದೆ. (ಕ್ರಿ.ಶ. ೧೩೦೧ ರಿಂದ ಕ್ರಿ.ಶ ೧೯೦೬). ೨ನೇಯ ಲಿಂಗಪ್ಪ ದೇಸಾಯಿ (ಕ್ರಿ.ಶ ೧೭೬೯ ರಿಂದ ೧೭೮೭) ಈತನು ಧರ್ಮನಿಷ್ಠನಾಗಿದ್ದನು. ಲಿಂಗಪ್ಪ ದೇಸಾಯಿ ಕ್ರಿ.ಶ. ೧೭೭೧ರಲ್ಲಿ ಶಿರಸಂಗಿಯ ಕಾಳಮ್ಮನ ಜಾತ್ರೆಯ ಎಲ್ಲ ಖರ್ಚು-ವೆಚ್ಚಗಳನ್ನು ನಿರ್ವಹಿಸುತ್ತಿದ್ದರು ಎಂಬ ಸಂಗತಿ ದೊರೆಯುತ್ತದೆ. ಅಂದರೆ ಶಿರಸಂಗಿ ಕಾಳಮ್ಮನ ಜೀರ್ಣೋದ್ಧಾರ ಮತ್ತೆ ಆರಂಭಗೊಂಡಿದ್ದು ೨ನೇ ಲಿಂಗಪ್ಪ ಕ್ರಿ.ಶ. ೧೭೭೧ರ ಕಾಲವನ್ನು ದೇವಸ್ಥಾನದ ಆಧುನಿಕ ಕಾಲವೆಂದು ಗುರುತಿಸಲಾಗುತ್ತದೆ.

ಲಿಂಗಪ್ಪ ದೇಸಾಯಿ ಪೇಶ್ವೆ ಸರ್ಕಾರದ ಆದೇಶದ ಮೇರೆಗೆ ಜಾತ್ರೆ-ಉತ್ಸವಗಳ ಎಲ್ಲ ಖರ್ಚು-ವೆಚ್ಚಗಳನ್ನು ನಿರ್ವಹಿಸುತ್ತಿದ್ದರು. ೬೫ ರೂಪಾಯಿ ೧೦ ಆಣೆ-ಹಣವನ್ನು ಪೂಜಾರಿಗಳಿಗೆ ಕೊಡಲಾಗುತ್ತಿತ್ತು ಎಂಬುದನ್ನು ಡಾ.ವಿರೂಪಾಕ್ಷ ಬಡಿಗೇರ ಅವರು ಶಿರಸಂಗಿ ಸಂಸ್ಥಾನ; ಒಂದು ಅಧ್ಯಯನ ಕೃತಿಯಲ್ಲಿ ತಿಳಿಸುತ್ತಾರೆ. ಇದರಿಂದ ತಿಳಿದು ಬರುವ ಸಂಗತಿಯೆಂದರೆ ದೇವಾಲಯದ ಅಭಿವೃದ್ಧಿ ಕಾರ್ಯಗಳು ದೇಸಾಯರ ಕಾಲದಿಂದ ಮತ್ತೇ ಆರಂಭಗೊಂಡದ್ದು ಸ್ಪಷ್ಟವೆನಿಸುತ್ತದೆ. ಹೀಗಾಗಿ ಕ್ರಿ.ಶ.೧೭೭೧ರ ಕಾಲವನ್ನು ಶಿರಸಂಗಿ ಕಾಳಮ್ಮ ದೇವಾಲಯದ ಆಧುನಿಕ ಕಾಲವೆಂಬುದು ನನ್ನ ಅಭಿಪ್ರಾಯ.

೨ನೇ ಲಿಂಗಪ್ಪ ದೇಸಾಯಿಯವರಿಂದ ದೇವಾಲಯದ ಅಭಿವೃದ್ಧಿ ಕಾರ್ಯಗಳು ಆರಂಭಗೊಳ್ಳುತ್ತವೆ. ಪೂಜಾರಿಗಳಿಗೆ ಜಾತ್ರೆಗೆ ಖರ್ಚು ಮಾಡಲು ೬೫ ರೂ. ೧೦ ಆಣೆ ಹಣ ನೀಡಿ, ೮೫ ರೂಪಾಯಿ ೫ ಆಣೆ ಹಣವನ್ನು ಉಳಿತಾಯ ಮಾಡಿ ಅದರ ಬದಲಾಗಿ ಪೂಜಾರಿಗಳ ಕುಟುಂಬಕ್ಕೆ ಜಮೀನು ನೀಡಲಾಯಿತೆಂದು ತಿಳಿದು ಬರುತ್ತದೆ. ಕಾಳಮ್ಮ ನಿತ್ಯ ಪೂಜೆ ಯುಗಾದಿ ಜಾತ್ರೆಯ ಖರ್ಚುಗಳಿಗೆ ಲಿಂಗಪ್ಪ ದೇಸಾಯಿ ನೀಡಿರುವ ಕೊಡುಗೆ ಅನನ್ಯವೆನಿಸುತ್ತದೆ.

೩ನೇಯ ಜಾಯಪ್ಪ ಕ್ರಿ.ಶ. ೧೭೭೫ ರಿಂದ ೧೮೧೭ರವರೆಗೆ ಶಿರಸಂಗಿ ಸಂಸ್ಥಾನದ ಆಡಳಿತಗಾರನಾಗಿದ್ದನು. ಈತನ ಅವಧಿಯಲ್ಲಿ ಕಾಳಮ್ಮನನ್ನು ತಮ್ಮ ಆರಾಧ್ಯ ದೈವವೆಂದು ನಂಬಿ ಪೂಜಿಸುತ್ತಿದ್ದರು. ಕಾಳಮ್ಮನ ಅನುಗ್ರಹ ಪಡೆದುಕೊಂಡ ಜಾಯಪ್ಪನು ನಿತ್ಯವು ಅರಮನೆಯಿಂದ ಪೂಜಾ ಸಾಮಗ್ರಿಗಳನ್ನು ಬೆಳಗಿನ ಜಾವ ಕಳಿಸಿಕೊಡುವ ವ್ಯವಸ್ಥೆ ಮಾಡಿದನು. ಪೂಜಾರಿಗಳಿಂದ ಬಂದ ತೀರ್ಥ-ಪ್ರಸಾದ ಸ್ವೀಕರಿಸಿದ ಅನಂತರವೇ ಅರಮನೆಯ ದರ್ಬಾರ ಆರಂಭವಾಗುತ್ತಿತ್ತು. ಕಾಳಮ್ಮನನ್ನು ದೇಸಾಯರು ಅಷ್ಟವಿಧ ಪೂಜೆ ಷೋಡಶೋಪಾಚಾರಗಳಿಂದ ಪೂಜೆ ಸಲ್ಲಿಸುತ್ತಿದ್ದರೆಂದು ತಿಳಿಯುತ್ತದೆ. ಅಂದಾಜು ೪೦ ತೊಲೆ ಬಂಗಾರದ 'ವಡ್ಯಾಣ' ಆಭರಣಗಳನ್ನು ದೇಸಾಯಿ ಮನೆತನವರು ಮಾಡಿಸಿಕೊಟ್ಟಿದ್ದಾರೆಂದು ಹೇಳಲಾಗುತ್ತದೆ. ದೇಸಾಯಿ ಕಾಲದಲ್ಲಿಯೇ ಶಿರಸಂಗಿ ಕಾಳಮ್ಮನಿಗೆ ೨೧೦ ತೊಲೆ ಬಂಗಾರದ ಆಭರಣಗಳಿದ್ದವು ಎಂಬುದನ್ನು ಶಿರಸಂಗಿ ಟ್ರಸ್ಟಿನ ಲೋಕಲ್ ಕಾರಬಾರಿ ಮೆ॥ ಬಸಪ್ಪ ಚನ್ನಬಸಪ್ಪ ಶಿಗ್ಲಿ ಅವರು ಬ್ರಿಟಿಷ ಸರಕಾರದ ಮಂಜೂರಾತಿಗಾಗಿ ೧೦ ಮಾರ್ಚ್ ೧೯೨೪ರಂದು ವರದಿ ಕಳಿಸಿದ್ದು ತಿಳಿದುಬರುತ್ತದೆ. ಇದರಿಂದ ಶಿರಸಂಗಿ ಕಾಳಮ್ಮನಿಗೆ ದೇಸಾಯರ ಕಾಲದಲ್ಲಿಯೇ ಹೆಚ್ಚಿನ ಬಂಗಾರದ ಆಭರಣಗಳು ಲಭಿಸಿದ ಸಂಗತಿ ತಿಳಿಯುತ್ತದೆ.

ಶಿರಸಂಗಿ ಸಂಸ್ಥಾನದ ದೇಸಾಯರು ಕಾಳಮ್ಮನ ಸೇವೆಗೆ ಹತ್ತಾರು ಕಾಣಿಕೆಗಳನ್ನು ನೀಡಿದ್ದಾರೆ. ಪ್ರತಿ ವರ್ಷ ಚೈತ್ರಶುದ್ಧ ಪ್ರತಿ ಪದೆಯಿಂದ ಫಾಲ್ಗುಣ ಮಾಸದವರೆಗೆ ಬರುವ ಶುಕ್ರವಾರ, ಮಂಗಳವಾರ, ಹುಣ್ಣಿಮೆ-ಅಮವಾಸ್ಯೆ ಮತ್ತು ನವರಾತ್ರಿಯ ಹಬ್ಬಕ್ಕೆ ಕಾಣಿಕೆ ನೀಡಲಾಗುತ್ತಿತ್ತು. ದೀಪಾವಳಿ ಹಬ್ಬಕ್ಕೆ ತುಪ್ಪದ ಎಣ್ಣೆ ದೀವಿಗೆ ಬೇಳೆ-ಬೆಲ್ಲದ ಸೀದಾ ಖರ್ಚನ್ನು ಅರಮನೆಯವರು ಕೊಡಮಾಡುತ್ತಿದ್ದರು. ಕಾರ್ತಿಕ ಮಾಸದ ದೀಪೋತ್ಸವ ಖರ್ಚನ್ನು ದೇಸಾಯರು ಪ್ರತಿವರ್ಷ ನೀಡುತ್ತಿದ್ದ ಬಗ್ಗೆ ದಾಖಲಾತಿಗಳು ದೊರೆಯುತ್ತವೆ. ಪ್ರತಿವರ್ಷ ಜಾತ್ರಾ ಮಹೋತ್ಸವಕ್ಕೆ ದೇಸಾಯರು ೪೪ ರೂಪಾಯಿ ೭ ಆಣೆ ೩ ಪೈಸೆ ಹಣ ನೀಡುತ್ತಿದ್ದರು. ಕಾಳಮ್ಮನಿಗೆ ದೊಡ್ಡಸೀರೆ, ಮಂಟಪ, ಉಡಿ ತುಂಬುವ ಸಾಮಾನು, ಅಮವಾಸ್ಯೆಯ ಪೂಜೆ, ೫ ದಿನಗಳವರೆಗೆ ಜರುಗುವ ಕೀರ್ತನೆ-ಭಜನೆ, ಸಂಗೀತ ಕಚೇರಿ ಏರ್ಪಡಿಸಲಾಗುತ್ತಿತ್ತು. ಯುಗಾದಿಯ ಉತ್ಸವದಲ್ಲಿ ಕಾಳಮ್ಮನಿಗೆ ದೇಸಾಯರು ವಿಶೇಷವಾಗಿ ನರ್ತನಸೇವೆ ಮಾಡಿಸುತ್ತಿದ್ದರು. "ಸಂಸ್ಥಾನದ ಗವಾಯಿಗಳಾದ ಗುರುಲಿಂಗಯ್ಯ, ರಾಚಯ್ಯ ಹಿರೇಮಠ,

ಅಪ್ಪಯ್ಯ, ಬಸಯ್ಯ, ಸಾರಂಗಿ ಕಲ್ಲಯ್ಯ, ಶಿವಯ್ಯ, ಶಿವಪ್ಪಯ್ಯನಮಠ ಮುಂತಾದವರು ಸಂಗೀತ ಸೇವೆಯನ್ನು ಹಾಗೂ ದುರ್ಗಾಸಾನಿ ತಾಯಿ ಅಹಲ್ಯಸಾನಿ ಪಾತರದ ಸಾ॥ ಸವದತ್ತಿ ಹಾಗೂ ರಮಾಸಾನಿ ತಾಯಿ ದೇವಾಸಾನಿ ಪಾತರದ ಇವರಿಬ್ಬರು ನೃತ್ಯಸೇವೆ”[೧]ಯನ್ನು ಕಾಳಮ್ಮನ ಎದುರಿನ ರಂಗಮಂಟಪದಲ್ಲಿ ಸಲ್ಲಿಸುತ್ತಿದ್ದರು. ದುರ್ಗಾಸಾನಿ– ರಮಾಸಾನಿಯರ ಜುಗಲ್‌ನರ್ತನ ೫ ದಿನಗಳ ಕಾಲ ಜರುಗುತ್ತಿದ್ದು ಇವರ ಸಂಬಳವನ್ನು ದೇಸಾಯರು ವಹಿಸಿಕೊಳ್ಳುತ್ತಿದ್ದರು. ದೇಸಾಯರ ಕಾಲದಲ್ಲಿ ಶಿರಸಂಗಿ ಕಾಳಮ್ಮನ ಆವರಣದಲ್ಲಿ ಶುದ್ಧ ಸಾಂಸ್ಕೃತಿಕ ಪರಿಸರ ನಿರ್ಮಾಣವಾಗಿತ್ತು ಎಂಬುದು ಶಿರಸಂಗಿ ದೇಸಗತ ಕಾರಕೂನ ದೇವಜಿ, ಕೃಷ್ಣ, ಜ್ಯೋತಿ ಅವರು ೧೬, ಮಾರ್ಚ್ ೧೯೦೭ ಇಸ್ವಿಯಂದು ಬೆಳಗಾವಿಯ ಮೇ॥ ಕಲೆಕ್ಟರರಿಗೆ ಮಾಡಿದ ವರದಿಯಿಂದ ತಿಳಿದುಬರುತ್ತದೆ.

ಲಿಂಗರಾಜ ದೇಸಾಯರು ಕಾಳಮ್ಮನಲ್ಲಿ ಅಪಾರವಾದ ಭಕ್ತಿ ಹೊಂದಿದ್ದರು. ಪುತ್ರ ಸಂತಾನಕ್ಕಾಗಿ ಸುಮಾರು ೨೫ ವರ್ಷಗಳ ಕಾಲ ವಿವಿಧ ಬಗೆಯ ಬಂಗಾರದ ಆಭರಣಗಳನ್ನು ಕಾಳಮ್ಮನಿಗೆ ನೀಡಿದ್ದಾರೆ. ೫ ವರ್ಷಗಳ ಕಾಲ ಕ್ರಿ. ಶ. ೧೯೦೨–೧೯೦೬ ಲಿಂಗರಾಜರು ಕಾಳಮ್ಮನ ಪೂಜೆಗಾಗಿ ೨೪೨ ರೂಪಾಯಿ ೭ ಆಣೆ ಹಣವನ್ನು ಕೊಟ್ಟಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ದೇಸಾಯರು ಕಾಳಮ್ಮನಿಗೆ ಬಂಗಾರ ಆಭರಣಗಳನ್ನು ದೇಣಿಗೆ ನೀಡುವುದರೊಂದಿಗೆ ವಾಡೆಯಿಂದ ದೇವಾಲಯವರೆಗಿನ ರಸ್ತೆಯನ್ನು ಸುಧಾರಿಸಿದರು. ವಾಡೆಯಿಂದ ಗುಡಿಯವರೆಗೆ ಸುಮಾರು ೩೭೦೦ ಅಡಿ ಉದ್ದ ರಸ್ತೆಯನ್ನು ಕಡೀಕರಣಗೊಳಿಸಿದರು. ಅದಕ್ಕಿಂತ ಪೂರ್ವದಲ್ಲಿ ದೇವಾಲಯಕ್ಕೆ ಕಲ್ಲಿನ ನೆಲಕಟ್ಟನ್ನು ಹೊಂದಿಸಲಾಗಿತ್ತು. ಕ್ರಿ.ಶ. ೧೯೦೨–೦೩ರ ಅವಧಿಯಲ್ಲಿ ರಸ್ತೆ ಸುಧಾರಿಸಲಾಗಿದೆ ಹೀಗೆ ದೇಸಾಯರ ಕಾಲದಲ್ಲಿ ಕಾಳಮ್ಮ ದೇವಾಲಯ ಅಭಿವೃದ್ಧಿ ಕಾರ್ಯಗಳು ಅಡೆತಡೆಗಳಿಲ್ಲದೆ ನಿರಂತರವಾಗಿ ಸಾಗುತ್ತಿದ್ದವು. ಹೆಚ್ಚಿನ ಪ್ರಮಾಣದಲ್ಲಿ ಬಂಗಾರದ ಆಭರಣಗಳು, ಭಕ್ತರ ಅನುಕೂಲಕ್ಕಾಗಿ ದೇವಾಲಯದ ರಸ್ತೆ ಸುಧಾರಣೆ, ಪೂಜಾರಿಗಳ ಜೀವನೋಪಾಯಕ್ಕಾಗಿ ಜಮೀನು ನೀಡಿರುವುದು ಆಧುನಿಕ ಕಾಲದಲ್ಲಿ ಜರುಗಿದ ದೇವಾಲಯದ ಅಭಿವೃದ್ಧಿ ಕಾರ್ಯಗಳಾಗಿವೆ.

ಶಿರಸಂಗಿ ಕಾಳಮ್ಮ ದೇವಸ್ಥಾನವು ದೇಸಾಯರ ಕಾಲದಲ್ಲಿ ಅಭಿವೃದ್ಧಿ ಹೊಂದುತ್ತಾ ಬಂದಿದೆ. ಅದನ್ನು ದೇವಸ್ಥಾನ ಅಭಿವೃದ್ಧಿಯ ಆಧುನಿಕ ಕಾಲವೆಂದು ಗುರುತಿಸಿದರೂ ದೇವಾಲಯದ ನಿಜವಾದ ಆಧುನಿಕ ಸಂದರ್ಭಗಳು ಬೆಳೆದುದು ಸ್ವಾತಂತ್ರ್ಯ ನಂತರದಲ್ಲಿ ದೇಸಗತಿಗಳು ಭಾರತ ಒಕ್ಕೂಟದಲ್ಲಿ ವಿಲೀನಗೊಂಡ ಮೇಲೆ ರಾಜತ್ವ ಹೋಗಿ ಪ್ರಜಾಪ್ರಭುತ್ವ ಸ್ಥಾಪನೆಯಾದ ಮೇಲೆ ದೇಶದ ಆರ್ಥಿಕ ವ್ಯವಸ್ಥೆಗಳು ಸುಧಾರಿಸುವ ಯೋಜನೆಗಳು ರೂಪಗೊಂಡಂತೆ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಬದಲಾವಣೆಗಳು ಜರುಗತೊಡಗಿದವು. ಶಿರಸಂಗಿ ಕಾಳಮ್ಮ ವಿಶ್ವಕರ್ಮ ಸಮುದಾಯದ ಪ್ರಾತಿನಿಧಿಕ ದೇವಸ್ಥಾನವಾಗಿ ಬೆಳೆಯತೊಡಗಿತು. ಭಕ್ತರ ಬರುವಿಕೆ ಸಂಖ್ಯೆಯನ್ನು

ಹೆಚ್ಚಿಸುವ ಮೂಲಕ ಕುಶಲಕರ್ಮಿಗಳ ಸಮಾಗಮಕ್ಕೆ ಶಿರಸಂಗಿಯು ಕಾರಣವಾಗತೊಡಗಿತು. ಸಮುದಾಯದಲ್ಲಿ ನಿಷ್ಠಾವಂತ, ಪ್ರಾಮಾಣಿಕ, ಸಮಾಜೋದ್ಧಾರಿತ ಗುಣವಿರುವ ಜನ ಒಂದೆಡೆ ಸೇರಿ ಶಿರಸಂಗಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಚಿಂಥನ-ಮಂಥನ ಕಾರ್ಯಗಳನ್ನು ಆರಂಭಿಸಿದರು. ಸೊನ್ನಲಿಗೆಯ ಸಿದ್ಧರಾಮ, ತಿಂಥಣಿ ಮೌನೇಶ್ವರ, ನವಲಗುಂದ ನಾಗಲಿಂಗ, ಹೊಳೆ ಆಲೂರಿನ ಎಚ್ಚರಸ್ವಾಮಿ ಲಚ್ಯಾಣದ ಸಿದ್ಧಪ್ಪ ಮಹಾರಾಜ, ಅಥಣಿ ಮುರಘೇಂದ್ರ ಸ್ವಾಮಿ ಮುಂತಾದ ಸಿದ್ಧ-ಪುರುಷರು ದರ್ಶನವಿತ್ತ ಶಿರಸಂಗಿ ಕ್ಷೇತ್ರ ಅಭಿವೃದ್ಧಿ ಹೊಂದುವುದು ಅತ್ಯಂತ ಅವಶ್ಯಕವಾಗಿದೆಯೆಂದು ಸಮುದಾಯದ ಕೆಲಪ್ರಜ್ಞಾವಂತರು ೧೯೭೦ರಲ್ಲಿ ಸಂಘಟನೆ ಕಟ್ಟಿಕೊಂಡು ಕಾರ್ಯಪ್ರವೃತ್ತರಾಗಿ ದೇವಾಲಯದ ಅಭಿವೃದ್ಧಿಕಾರ್ಯಗಳಿಗೆ ಆಧುನಿಕ ಸ್ಪರ್ಶವನ್ನು ನೀಡಿದರು.

ಕಾಳಮ್ಮ ದೇವಾಲಯದ ಅಭಿವೃದ್ಧಿ ಪಥ

ಶಿರಸಂಗಿಯಲ್ಲಿ ನೆಲೆಸಿರುವ ಕಾಳಮ್ಮ ಕುಶಲಕರ್ಮಿ ಸಮುದಾಯದ ಕುಲದೇವತೆಯೆಂಬುದು ಎಲ್ಲರಿಗೂ ತಿಳಿದಿದ್ದರೂ, ಕ್ಷೇತ್ರಕ್ಕೆ ಬರಲು ಸಾವಿರಾರು ಜನಕ್ಕೆ ಸಾಧ್ಯವಾಗುತ್ತಿರಲಿಲ್ಲ. ೭೦ರ ದಶಕದಲ್ಲಿ ಮತ್ತು ಅದಕ್ಕಿಂತ ಪೂರ್ವದಲ್ಲಿ ಶಿರಸಂಗಿ ಕ್ಷೇತ್ರಕ್ಕೆ ಆಗಮಿಸುವ ಭಕ್ತರ ಸಂಖ್ಯೆ ತೀರಾ ಕಡಿಮೆಯಿದ್ದಿತು. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದೂಳಿದಿದ್ದ ಕುಶಲಕರ್ಮಿಗಳು ಯುಗಾದಿಗೆ ವರ್ಷಕ್ಕೊಮ್ಮೆ ಬಂದು ಕಾಳಮ್ಮನ ದರ್ಶನ ಪಡೆಯುತ್ತಿದ್ದರು. ಸ್ವಾತಂತ್ರ್ಯ ನಂತರವು ಹತ್ತಿಪ್ಪತ್ತು ವರ್ಷಗಳ ಕಾಲ ಶಿರಸಂಗಿ ಕಾಳಮ್ಮನ ದೇವಾಲಯ ಕೆಲವೇ ಕೆಲವು ಊರ ಸಮೀಪವಿರುವ ಭಕ್ತರ ಪವಿತ್ರ ತಾಣವಾಗಿತ್ತು. ಒಬ್ಬೊಬ್ಬರು ದೇವಾಲಯಕ್ಕೆ ಬರುವುದೇ ಕಷ್ಟವೆನಿಸುತ್ತಿತ್ತು. ದೇವಾಲಯ ಸುತ್ತಲೂ ಗಿಡ-ಗಂಟೆಗಳು ಬೆಳೆದು ರಾತ್ರಿಯೆಲ್ಲ ಭಯಾನಕತೆಯನ್ನುಂಟು ಮಾಡುತ್ತಿತ್ತು. ದೇವಸ್ಥಾನಕ್ಕೆ ತೆರಳುವ ರಸ್ತೆಯು ಹದಗೆಟ್ಟಿತ್ತು. ಬೆಳಕಿನ ವ್ಯವಸ್ಥೆ ತುಂಬಾ ಕಡಿಮೆಯಿತ್ತು. ವಸತಿ ಉಳಿದುಕೊಳ್ಳಲು ಮೂಲಭೂತ ಸೌಲಭ್ಯಗಳು ಭಕ್ತರಿಗೆ ಇರಲಿಲ್ಲ. ಕುಡಿಯುವ ನೀರಿನ ಸಮಸ್ಯೆಯಿದ್ದಿತು. ಇದರಿಂದ ಭಕ್ತಾದಿ ಕುಶಲಕರ್ಮಿಗಳು ಹುಣ್ಣಿಮೆ-ಅಮವಾಸ್ಯೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಅಂದು ಶುಕ್ರವಾರ ಮಂಗಳವಾರ ವಿಶೇಷ ಪೂಜೆ ಸಲ್ಲಿಸುವವರೇ ಸಿಗುತ್ತಿರಲಿಲ್ಲ.

ಕಾಳಮ್ಮನ ದೇವಸ್ಥಾನಕ್ಕೆ ನಿತ್ಯವು ಭಕ್ತರು ಬರುವಂತಾಗಬೇಕು. ಪ್ರತಿದಿನವು ಕ್ಷೇತ್ರದಲ್ಲಿ ಜಾತ್ರೆಯಂಥಾಗಬೇಕೆಂದು ಸಮುದಾಯದವರು ಯೋಚಿಸಿದರು. ಸೂಕ್ತ ಯೋಜನೆಗಳನ್ನು ರೂಪಿಸಿದರು. ದೇವಾಲಯದ ಉತ್ತರಭಾಗದಲ್ಲಿ ಪವುಳಿ ನಿರ್ಮಾಣವಾಗತೊಡಗಿತು. ಒಂದೊಂದು ಅಂಕಣ ಕಟ್ಟಿಸಲು ಒಬ್ಬೊಬ್ಬ ಭಕ್ತರಿಂದ ಹಣ ಸಂಗ್ರಹಿಸಿ ಕಟ್ಟಿಸಲಾಯಿತು. ಅನಂತರದಲ್ಲಿ ೧೯೭೮-೭೯ರ ಅವಧಿಯಲ್ಲಿ ಕಾಳಮ್ಮ ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಮತ್ತೆ ಹೊಸದಾಗಿ ಪವುಳಿಗಳನ್ನು ಕಟ್ಟಿಸಲು ಕಾರ್ಯಾರಂಭಗೊಂಡಿತು. ವಿಶೇಷವೆಂದರೆ ಉತ್ತರ ಭಾಗದಲ್ಲಿ ನಿರ್ಮಾಣವಾಗಿದ್ದ

ಪವುಳಿಗಳು ಮುಕ್ತ (Open) ವಾಗಿದ್ದವು. ಆದರೆ ಪಶ್ಚಿಮ ಭಾಗದ ಪವುಳಿಗಳ ಹೆಸರಿನ ಕಟ್ಟಡಗಳು ಸಿಮೆಂಟ್- ಕಾಂಕ್ರೀಟಿಕರಣದ ವ್ಯವಸ್ಥೆಯಲ್ಲಿ ಕೊಠಡಿಯ ಸ್ವರೂಪ ಪಡೆದುಕೊಂಡು ನಿರ್ಮಾಣವಾದವು. ಯಂತ್ರಗಳ ಕೊರತೆಯ ಕಾರಣ ಮತ್ತು ಸ್ಥಳೀಯರಿಗೆ ಉದ್ಯೋಗವಕಾಶ ದೊರೆಯಲೆಂಬ ಕಾರಣವಾಗಿ ದಿನಗೂಲಿ ದುಡಿಮೆದಾರರಿಂದಲೇ ಕಟ್ಟಡ ನಿರ್ಮಾಣಗೊಂಡವು.

೨೦೦ x ೮ ಅಡಿ ಬೆಡ್ ಕಾಂಕ್ರೀಟ್‌ನ್ನು ಇಂಜಿನೀಯರ ಮನ್ವಾಚಾರ ಯೋಜಿತ ಕಾರ್ಯಗಳನ್ನು ರೂಪಿಸಿ ಯಾತ್ರಾರ್ಥಿಗಳಿಗೆ ವಸತಿ ಬಂದು ಉಳಿಯಲು ಅನುಕೂಲ ಮಾಡಿಕೊಡಲಾಯಿತು. ದಿನಗೂಲಿ ಕಾರ್ಮಿಕರು ನೀರಿನ ಅನುಕೂಲವಿಲ್ಲದಿರುವಾಗ ಖಡ್ಗತೀರ್ಥ ಹೊಂಡದಿಂದ ನೀರು ತಂದು ಕಟ್ಟಡಕ್ಕೆ ಅನುಕೂಲ ಮಾಡಿಕೊಡುತ್ತಿದ್ದರು. ದೇವಸ್ಥಾನದಿಂದ ಅರ್ಧ ಪರ್ಲಾಂಗು ದೂರವಿದೆ. ಅಷ್ಟು ದೂರದಿಂದ ಹತ್ತಾರು ಗಂಡಸರು, ಮಹಿಳೆಯರು ವರ್ಷಾನುಗಟ್ಟಲೆ ದುಡಿಮೆ ಮಾಡಿದ್ದಾರೆ. ೧೯೮೧-೮೨ರ ಅವಧಿಯಲ್ಲಿ ಭಕ್ತರಿಗೆ ಕುಡಿಯುವ ನೀರಿನ ಅನುಕೂಲತೆಗಾಗಿ ನೀರಿನ ಟ್ಯಾಂಕನ್ನು ಕಟ್ಟಿಸಲಾಯಿತು. ಮನ್ವಾಚಾರರ ಯೋಜನೆಯಂತೆ ದೇವಸ್ಥಾನದ ಆವರಣದಲ್ಲಿ ಹೊಸಸ್ವರೂಪದ ಪವುಳಿಗಳು ನಿರ್ಮಾಣವಾದವು.

ಪಶ್ಚಿಮಭಾಗದಲ್ಲಿ ಕೊಠಡಿಗಳು ನಿರ್ಮಾಣವಾದ ಮೇಲೆ ಸಭೆ-ಸಮಾರಂಭಗಳು ಜರುಗಲು ಭವ್ಯವಾದ ಸಭಾಮಂಟಪವನ್ನು ಕಬ್ಬಿಣ ಸಲಾಕೆ ಮತ್ತು ಪತ್ರಾಸ ತಗಡಿನಿಂದ ತಯಾರಿಸಲಾಗಿದೆ. ಸಭಾ ಮಂಟಪ ಮುಕ್ತವಾಗಿದ್ದು, ಮೇಲ್ಛಾವಣಿ ವಿಶಿಷ್ಟ ವಿನ್ಯಾಸದಿಂದ ಕೂಡಿದೆ. ಸಭಾಮಂಟಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಗಾಳಿ, ಮಳೆ, ಬೆಳಕಿನಿಂದ ಕೂಡಿರುವಂತದ್ದಾಗಿದೆ. ಪಕ್ಕದಲ್ಲಿ ಧನ-ಧಾನ್ಯಗಳನ್ನು ಕಾಣಿಕೆ ನೀಡುವ ತುಲಾಭಾರ ಕಟ್ಟೆಕಟ್ಟಿಸಲಾಗಿದೆ. ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಭಕ್ತರ ಅನುಕೂಲಕ್ಕಾಗಿ ಮೊದಲ ಮಹಡಿಯ ಕಟ್ಟಡ ನಿರ್ಮಾಣದ ಹಂತದಲ್ಲಿದೆ. ದಕ್ಷಿಣ ಭಾಗದ ಕಚೇರಿಯ ಮುಂಭಾಗದಲ್ಲಿ ಕಬ್ಬಿಣ ಸಲಾಕೆ ಮತ್ತು ಪತ್ರಾಸ ತಗಡಿನ ಛಾವಣಿ ತಯಾರಿಸಲಾಗಿದೆ. ದೇವಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಅಡುಗೆ ಮನೆ ತಯಾರಿಸಲಾಗಿದೆ. ಯಜ್ಞಯಾಗಾದಿಗಳನ್ನು ಪೂರೈಸಲು ಹೋಮದ ಕುಂಡಗಳನ್ನು ಕಟ್ಟಲಾಗಿದೆ. ದೇವಸ್ಥಾನ ಎದುರಿಗಿರುವ ಬುತ್ತಿ ಕಟ್ಟೆಗೆ ಕಬ್ಬಿಣ ಸಲಾಕೆಗಳಿಂದ ರಕ್ಷಣೆಗೋಡೆ ನಿರ್ಮಿಸಲಾಗಿದೆ.

೭೦ರ ದಶಕದಲ್ಲಿ ಆರಂಭವಾದ ಶಿರಸಂಗಿ ಕಾಳಮ್ಮ ದೇವಾಲಯದ ಜೀರ್ಣೋದ್ಧಾರ ಕಾರ್ಯಗಳು ಸುಮಾರು ೨೦-೩೦ ವರ್ಷಗಳ ಕಾಲ ಮಂದಗತಿಯಲ್ಲಿ ಸಾಗಿತು. ೧೯೯೬ರಲ್ಲಿ ಜರುಗಿದ ಲಕ್ಷ ದೀಪೋತ್ಸವ ಕಾರ್ಯಕ್ರಮವು ದೇವಾಲಯದ ಅಭಿವೃದ್ಧಿ ಜ್ಯೋತಿಯನ್ನು ಪ್ರಜ್ವಲಿಸಿತು. ನೂರಾರು ಸಂಖ್ಯೆಯಲ್ಲಿ ಯುಗಾದಿಗೆ ಶಿರಸಂಗಿಗೆ ಸೇರುತ್ತಿದ್ದ ಕುಶಲಕರ್ಮಿ ಬಾಂಧವರು ೧೯೯೬ರಲ್ಲಿ ಲಕ್ಷಗಟ್ಟಲೆ ಜನಸೇರಿ ಒಗ್ಗಟ್ಟಿನ ಬಲಪ್ರದರ್ಶಿಸುವ ಮೂಲಕ ನಾಂದಿ ಹಾಡಿದರು. ಲಕ್ಷ್ಮದೀಪೋತ್ಸವದ

ಹೊಂಗಿರಣ ಬೆಳಕು ಕಾಳಮ್ಮ ದೇವಸ್ಥಾನದ ಇಡೀ ಚಿತ್ರಣವನ್ನು ಬದಲಿಸಿತು. ಅಭಿವೃದ್ಧಿಗಾಗಿ ಕೋಟ್ಯಾಂತರ ಹಣ ಸಂಗ್ರಹವಾಯಿತು. ದೇವಸ್ಥಾನದ ಅಭಿವೃದ್ಧಿಗಾಗಿ ಜಮೀನು ಖರೀದಿ ಮಾಡಲಾಯಿತು. ದೇವಸ್ಥಾನದ ಉತ್ತರ ಭಾಗದಲ್ಲಿ ಸುಂದರವಾದ ವಿಶ್ವದ ಸಮಾಜದ ಶ್ರೇಷ್ಠರನ್ನು ನೆನಪಿಸುವ ಕಾಳಿ 'ವನ'ವನ್ನು ನಿರ್ಮಿಸಲಾಗಿದೆ.

ಕಾಳಮ್ಮನ ಗರ್ಭಗುಡಿಯ ಪುರಾತನ ಗೋಪುರಕ್ಕೆ ಪಂಚಲೋಹದ ಶಿಲ್ಪ ವೈಭವೀಕರಣ ಕವಚ ನಿರ್ಮಿಸಲಾಗಿದೆ. ಈ ಮಹತ್ವದ ಕಾರ್ಯ ಮಾರ್ಚ್ ೨೯, ೨೦೧೩ರಂದು ಭಕ್ತರ ಸಮ್ಮುಖದಲ್ಲಿ ನೂತನ ಗೋಪುರ ಪ್ರತಿಷ್ಠಾಪಿಸಲಾಯಿತು. ದೇವಸ್ಥಾನದ ಆವರಣದಲ್ಲಿ ಕಲ್ಲಿನ ನೆಲಗಟ್ಟು ಇದ್ದು, ಅದನ್ನು ತೆಗೆಯಿಸಿ ಗ್ರಾನೈಟ್‌ಕಲ್ಲನ್ನು ಹೊದಿಸಲಾಗಿದೆ. ಆದರೆ ಬೇಸಿಗೆ ಕಾಲದಲ್ಲಿ ಭಕ್ತರು ಬರಿಗಾಲಿನಲ್ಲಿ ನಿಲ್ಲದಂತಾಗಿದೆ. ಸಾಧ್ಯವಾದಷ್ಟು ಗ್ರಾನೈಟ್ ಮೇಲೆ ಹೊದಿಕೆ ಹೊದಿಸಲಾಗುತ್ತಿದೆ. ದೇವಸ್ಥಾನ ಹೊರಾಂಗಣದ ಪೂರ್ವದಿಕ್ಕಿನಲ್ಲಿ ಪ್ರತಿವರ್ಷ ಜರುಗುವ ಶ್ರೀ ವಿಶ್ವಕರ್ಮ ಮಹೋತ್ಸವ ಸಂದರ್ಭದಲ್ಲಿ ಚಿತ್ರಕಲಾ ಮತ್ತು ಶಿಲ್ಪಕಲಾ ಪ್ರದರ್ಶನ ಏರ್ಪಡಿಸಲಾಗುತ್ತದೆ. ಚಿತ್ರಕಲಾ– ಶಿಲ್ಪಕಲಾ ಪ್ರದರ್ಶನ ಯಾತ್ರಿ ನಿವಾಸವನ್ನು ಒಂದೆರಡು ವರ್ಷಗಳಲ್ಲಿ ನಿರ್ಮಾಣವಾಗಿವೆ. ಈಗ ದೇವಸ್ಥಾನದ ಹೊರಾಂಗಣದ ದಕ್ಷಿಣ ಭಾಗದಲ್ಲಿ ಅಮವಾಸ್ಯೆಗೆ ಬಂದ ಭಕ್ತರ ಪ್ರಸಾದ ಸ್ವೀಕಾರಕ್ಕಾಗಿ ಜಾಗವನ್ನು ಹಸನಗೊಳಿಸಲಾಗಿದೆ. ಅಮವಾಸ್ಯೆಯ ದಿನದಂದು ನೆರಳಿನ ವ್ಯವಸ್ಥೆ ಮಾಡಲಾಗುತ್ತದೆ. ನೀರಿನ ಅನುಕೂಲಕ್ಕಾಗಿ ಟಾವರ್‌ದಂತಿರುವ ಎರಡು ನೀರು ಸಂಗ್ರಹಾಲಯ (ಟ್ಯಾಂಕ್) ಕಾಳಿ ಜಲಕುಂಭ ನಿರ್ಮಿಸಿ ಅಚ್ಚುಕಟ್ಟಾಗಿ ಕುಡಿಯುವ ನೀರು ಭಕ್ತರಿಗೆ ದೊರೆಯುವಂತೆ ನೋಡಿಕೊಳ್ಳಲಾಗುತ್ತಿದೆ. ದೇವಾಲಯದ ಹೊರಭಾಗದಲ್ಲಿ ಪೂರ್ವ ದಿಕ್ಕಿನ ದ್ವಾರಬಾಗಿಲು ಎದುರಿಗೆ ಲಕ್ಷದೀಪೋತ್ಸವ ಸ್ಮಾರಕ ಸ್ಥಂಭವನ್ನು ನಿರ್ಮಿಸಲಾಗಿದೆ. ಚೌಕಾಕಾರದ ಕಟ್ಟೆಯ ಮೇಲೆ ಸ್ಥಂಭವಿದೆ. ಇದರ ಎಡ–ಬಲ ಬದಿಯಲ್ಲಿ ಪ್ರತಿವರ್ಷ ದೀಪೋತ್ಸವ ಕಾರ್ಯ ಜರುಗುತ್ತದೆ. ಒಟ್ಟಾಗಿ ಆಧುನಿಕ ಸಂದರ್ಭದಲ್ಲಿ ಶಿರಸಂಗಿ ಕಾಳಮ್ಮ ದೇವಸ್ಥಾನ ೧೯೭೦ರ ನಂತರ ಹೊಸಸ್ವರೂಪ ಪಡೆಯಲಾರಂಭಿಸಿತು.

ಭಕ್ತರ ಅನುಕೂಲತೆಗಾಗಿ ಕೊಠಡಿ, ಸಭಾ ಭವನ, ತುಲಾಭಾರ ಮಂಟಪ, ಕಾಳಿವನ ಕುಡಿಯುವ ನೀರಿನ ಟ್ಯಾಂಕ್, ಸ್ನಾನಗೃಹ, ಗ್ರಾನೈಟ್ ಹಾಸಿಗೆ ಹೊದಿಸಲಾಗಿದೆ. ಗರ್ಭಗುಡಿಯ ಕಾಳಮ್ಮನ ದರ್ಶನ ಪಡೆಯಲು ಸಾಲಾಗಿ ಪ್ರದಕ್ಷಿಸಲು ಕಬ್ಬಿಣ ಸಲಾಕೆಗಳ ತಡೆಗೋಡೆಗಳನ್ನು ನಿರ್ಮಿಸಿ, ದೇವಸ್ಥಾನದಲ್ಲಿ ಕುಶಲಕರ್ಮಿ ಬಾಂಧವರಿಗೆ ಶಾಂತ ಮತ್ತು ಶುದ್ಧ ಚಿತ್ತದಿಂದ ಕಾಳಮ್ಮ ದರ್ಶನ ಪಡೆದುಕೊಳ್ಳಲು ಸೌಕರ್ಯಗಳನ್ನು ಮಾಡಲಾಗಿದೆ. ಏಕಕಾಲದಲ್ಲಿಯೇ ಹತ್ತಾರು ಭಕ್ತರು ನೀರು ಕುಡಿಯಲು ಕಬ್ಬಿನ ನಳಿಕೆಗಳನ್ನು ಜೋಡಿಸಲಾಗಿದೆ. ಖಡ್ಗತೀರ್ಥ ಹೊಂಡದವರೆಗೆ ಡಾಂಬರೀಕರಣಗೊಂಡ ರಸ್ತೆ ವ್ಯವಸ್ಥೆ ಕಲ್ಪಿಸಲಾಗಿದೆ. ಮೌನೇಶ್ವರ ಹೊಂಡಕ್ಕೆ ಸುತ್ತಲು ರಕ್ಷಣ

ಗೋಡೆ ನಿರ್ಮಿಸಲಾಗಿದೆ. ಹೀಗೆ ನೂರಾರು ಸೌಲಭ್ಯಗಳನ್ನು ಶಿರಸಂಗಿ ಕಾಳಮ್ಮನ ದೇವಸ್ಥಾನ ಇತ್ತೀಚೆಗೆ ಹೊಂದುತ್ತಿದೆ. ಇದರ ಜೊತೆ ಸಾರಿಗೆ ಸೌಲಭ್ಯ ಹೆಚ್ಚಾಗುತ್ತಿರುವುದು ದೇವಸ್ಥಾನದ ಅಭಿವೃದ್ಧಿಗೆ ಸಹಾಯಕವಾಗುತ್ತಿದೆ.

ಜಾತ್ರಾ ಮಹೋತ್ಸವ ಮತ್ತು ಇತರೆ ಉತ್ಸವಗಳು

ಶಿರಸಂಗಿ ಕಾಳಮ್ಮನ ಜಾತ್ರಾ ಮಹೋತ್ಸವವು ಯುಗಾದಿ ಪ್ರತಿಪದೆ ಪಾಡ್ಯದಂದು ಪ್ರತಿವರ್ಷ ಜರುಗುತ್ತದೆ. ಅಮವಾಸ್ಯೆಯಂದು ಪ್ರಾತಃಕಾಲ ಬ್ರಾಹ್ಮಿ ಮೂಹೂರ್ತದಲ್ಲಿ ಗಣಪತಿ ಪೂಜೆ ಪುಣ್ಯಾಹವಾಚನ ವೇದ ಮಂತ್ರಗಳೊಂದಿಗೆ ಕಾಳಮ್ಮನ ಮಹಾಭಿಷೇಕ, ಅಲಂಕಾರ ಪೂಜಾ ಹಾಗೂ ಮಂಗಳಾರತಿ ಮುಗಿದ ತಕ್ಷಣ ಕಾಳಮ್ಮನಿಗೆ ಹೊಸ ಗೋಧಿನಿಧಿ ಹಾಕುವ ಕಾರ್ಯ ಆರಂಭವಾಗುತ್ತಿದೆ. ಅಮವಾಸ್ಯೆಯ ದಿನ ದೇವಿ ಪುರಾಣ ಪಠಣವಾಗುತ್ತದೆ. ಮಠಾಧೀಶರಿಂದ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನ-ಮಂಥನವಾಗುತ್ತದೆ. ಜಾತ್ರೆಯಲ್ಲಿ ಅಧಿಕಾರಿಗಳು ಜನಪ್ರತಿನಿಧಿಗಳು ಕಾಳಮ್ಮನ ದರ್ಶನ ಪಡೆದು ಪುನೀತರಾಗುತ್ತಾರೆ. ಸಮಾಜದ ಅಸಾಮಾನ್ಯ ಪ್ರತಿಭಾವಂತರನ್ನು ಸನ್ಮಾನಿಸುವುದು ಶ್ರೇಷ್ಠ ಸಂಸ್ಕೃತಿಯ ಪ್ರತೀಕವಾಗಿದೆ. ರಾತ್ರಿಯುದ್ದಕ್ಕೂ ಗವಾಯಿಗಳಿಂದ ಸಂಗೀತ ವಿದ್ವಾಂಸರಿಂದ ಕಲಾವಿದರಿಂದ ಭಜನೆ-ಕೀರ್ತನೆ ಸಂಗೀತ ಕಾರ್ಯಕ್ರಮಗಳು ಗಾಂಧರ್ವ ಲೋಕ ಸೃಷ್ಟಿಸಲು ಪ್ರಯತ್ನಿಸುತ್ತವೆ. ದೇಸಾಯರ ಕಾಲದಲ್ಲಿ ೫ ದಿನಗಳ ಕಾಲ ಸಂಗೀತ ಕಾರ್ಯಕ್ರಮ ಏರ್ಪಡುತ್ತಿತ್ತು. ದುರ್ಗಾಸಾನಿ ರಮಾಸಾನಿ ಅವರಿಂದ ದೇವಿಯ ಎದುರಿಗೆ ನೃತ್ಯ ಸೇವೆ ಇರುತ್ತಿತ್ತು. ಆದರೆ ಈಗ ಅಮವಾಸ್ಯೆಯ ರಾತ್ರಿ ಒಂದು ದಿನ ಮಾತ್ರ ಸಂಗೀತ ಸೇವೆಯಿದ್ದು, ನೃತ್ಯ ಸೇವೆಗಳಿರುವುದಿಲ್ಲ. ವಿದ್ಯಾರ್ಥಿಗಳ ಭರತನಾಟ್ಯ ಸೇವೆಸಲ್ಲಿಸಲಾಗುತ್ತದೆ. ರಾತ್ರಿ ಯುದ್ದಕ್ಕೂ ಕುಶಲಕರ್ಮಿ ಬಾಂಧವರು ಜಾತ್ರೆಯಲ್ಲಿ ಸಂಚರಿಸಿ, ಬೀಗರು-ಬಿಜ್ಜರು, ಸಂಬಂಧಿಕರ ಅಪರೂಪದ ಬೇಟಿ ಮಾಡಿಕೊಳ್ಳುವ ಸಾಂಸ್ಕೃತಿಕ ಸಂದರ್ಭಗಳು ಶಿರಸಂಗಿ ಕಾಳಮ್ಮನ ಯುಗಾದಿ ಜಾತ್ರೆಯಲ್ಲಿ ನಡೆಯುತ್ತವೆ. ಹಳಸಿದ ಸಂಬಂಧಗಳು ಮತ್ತೆ ಕುದಿಗೊಂಡು ಶುದ್ಧ ಆಹಾರ ಸಂಬಂಧವಾಗಿ ರೂಪಗೊಳ್ಳುವುದನ್ನು ಜಾತ್ರೆಯಲ್ಲಿ ಕಾಣುತ್ತೇವೆ.

ವಿಶ್ವಕರ್ಮ ಸಮುದಾಯದ ವಧು-ವರರ ಸಮಾಗಮಕ್ಕೂ ಕಾಳಮ್ಮನ ಜಾತ್ರೆ ಸಾಕ್ಷಿಯಾಗುತ್ತಿದೆ. ಕಂಬಾರ, ಬಡಿಗ, ಕಂಚುಗಾರ ಶಿಲ್ಪಿ, ಅಕ್ಕಸಾಲಿ ಈ ಐದು ಬಗೆಯ ಗೋತ್ರದ ಕುಶಲಕರ್ಮಿ ಬಾಂಧವರು ಏಕಕಾಲದಲ್ಲಿ ಒಂದೆಡೆ ಸೇರುವುದು ಶಿರಸಂಗಿ ಜಾತ್ರೆಯಲ್ಲಿ ಮಾತ್ರ ಗಂಡು-ಹೆಣ್ಣು ಕೊಡು-ಕೊಳ್ಳುವಿಕೆಯ ಸಂಬಂಧಿಕ ಚರ್ಚೆಗಳು ಯುಗಾದಿ ಅಮವಾಸ್ಯೆಯಂದು ನಡೆಯುತ್ತವೆ. ಸಂಬಂಧ ಹೊಂದಲು ಮೊದಲು ಪರಿಚಿತ ವಿಳಾಸ ಪಡೆದುಕೊಳ್ಳುತ್ತಿದ್ದರು. ಇತ್ತೀಚಿನ ಜಾತ್ರೆಯಲ್ಲಿ ದೂರವಾಣಿ ಸಂಖ್ಯೆಯನ್ನು ಮತ್ತು ಫೋನಿನಲ್ಲಿಯೇ ವಧು-ವರರ ಫೋಟೋ ಪಡೆಯುವುದು

ರೂಢಿಯಾಗಿದೆ. ಆರಂಭಿಕ ಜಾತ್ರೆಯಲ್ಲಿ ಶಿರಸಂಗಿ ಸುತ್ತ-ಮುತ್ತಲಿನ ಕುಶಲಕರ್ಮಿ ಬಂಧುಗಳು ನೂರಾರು ಸಂಖ್ಯೆಯಲ್ಲಿ ಸೇರುತ್ತಿದ್ದರು. ಲಕ್ಷ ದೀಪೋತ್ಸವ ಜಾತ್ರೆಯಿಂದ ಈಗಿನವರೆಗೂ ಲಕ್ಷಾಂತರ ಕುಶಲಕರ್ಮಿ ಬಂಧುಗಳು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇತ್ತೀಚೆಗೆ ಜನದಟ್ಟನೆ ಹೆಚ್ಚಾಗುತ್ತಿದೆ. ಕಳ್ಳ-ಕಾಕರಿಂದ ರಕ್ಷಿಸಲು ಪೊಲೀಸ ಸರ್ಪಗಾವಲು ರೂಪಗೊಳ್ಳುತ್ತಿದೆ. ಕರ್ನಾಟಕ ಜನತೆಯೊಂದಿಗೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಗೋವಾ, ಕೇರಳದಿಂದ ಶಿರಸಂಗಿ ಕಾಳಮ್ಮನ ಭಕ್ತರು ಜಾತ್ರೆಗೆ ಆಗಮಿಸುತ್ತಾರೆ. ಜಾತ್ರೆಯ ನಿಮಿತ್ತ ಸೇರಿದ ಕುಶಲಕರ್ಮಿಗಳಲ್ಲಿ ಬಂಧುತ್ವ ಗಟ್ಟಿಗೊಳ್ಳುತ್ತ ಸಾಗುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ತಿಳಿದುಬರುತ್ತದೆ. ಯುಗಾದಿ ಅಮವಾಸ್ಯೆಯ ರಾತ್ರಿಯು ಕುಶಲಕರ್ಮಿ ಬಂಧುಗಳಿಗೆಲ್ಲ ಸುಖ- ಶಾಂತಿ ನೆಮ್ಮದಿ ಬದುಕಿಗೆ ಸಮೃದ್ಧಿಯನ್ನು ತಂದುಕೊಡುವ ಶುಭರಾತ್ರಿಯಾಗಿದೆ.

ಪ್ರತಿಪದ ಪಾಡ್ಯ ಬೆಳಿಗಿನ ೫.೩೦ ಗಂಟೆಗೆ ಬ್ರಾಹ್ಮಿ ಮುಹೂರ್ತದಲ್ಲಿ ಗಣಪತಿ ಪೂಜೆ ಪುಣ್ಯಹವಾಚನ ಪಲ್ಲಕಿ ಉತ್ಸವ, ಅಲಂಕಾರ, ವೇದ ಮಂತ್ರ-ಮಂಗಳಾರತಿಯೊಂದಿಗೆ ಬುತ್ತಿ ಕಟ್ಟೆಯಲ್ಲಿ ಬುತ್ತಿ ಹಾರಿಸುವ ಕಾರ್ಯ ನೆರವೇರುತ್ತದೆ. ಉಪನಯನ ಕಾರ್ಯಗಳು ಜರುಗಿ, ಹೊಸ ಗೋಧಿಯಿಂದ ತಯಾರಾದ ಪಾಯಸ ಪ್ರಸಾದವನ್ನು ಭಕ್ತರು ಸ್ವೀಕರಿಸಿ ಕೃತಾರ್ಥರಾಗುತ್ತಾರೆ. ಅಮವಾಸ್ಯೆಯಂದು ಮಾಡಿದ ಉಪವಾಸವನ್ನು ಪ್ರಸಾದ ಸ್ವೀಕರಿಸಿ ವ್ರತವನ್ನು ಮಂಗಲಗೊಳಿಸುತ್ತಾರೆ. ಚೈತ್ರ ಶುದ್ಧ ಪಂಚಮಿಯಂದು ಅಧಿದೇವತೆ ಕಾಳಮ್ಮ ಮತ್ತು ನವಗ್ರಹ ದೇವತಾ ಪೂಜಾ ಮತ್ತು ಅನ್ನದ ಬಲಿದಾನ ಕಾರ್ಯಸಾಂಗವಾಗಿ ನೇರವೇರುತ್ತದೆ. ಮರುದಿನ ಚೈತ್ರ ಶುದ್ಧ ಷಷ್ಠಿ ದಿನ ಕಾಳಮ್ಮನಿಗೆ ಸಾಯಂಕಾಲ ಅಭ್ಯಂಗ ಸ್ನಾನ ಮಾಡಿಸಿ "ಜಯ ಜಯ ಕಾಳಿ ಜಯ ಜಯೆ" ಎಂದು ಜಯಕಾರನಾದ ಮಾಡಿ, ಮಹಾಮಂಗಳಾರತಿ ತೀರ್ಥಪ್ರಸಾದ ಸ್ವೀಕರಿಸುವುದರ ಮೂಲಕ ಯುಗಾದಿಯ ಕಾಳಮ್ಮನ ಜಾತ್ರೆ ಮಂಗಲಗೊಳ್ಳುತ್ತದೆ. ಮುಂದಿನ ನಾಲ್ಕು ಪಂಚಮಿಗಳಲ್ಲಿ ಕಾಳಮ್ಮನ ವಿಶೇಷ ಪೂಜೆ ಸಲ್ಲುತ್ತದೆ. ಐದನೇಯ ಪಂಚಮಿಯಂದು ಅಸುರರ ಸಂಹಾರಕ್ಕೆ ತೆರಳಿದ್ದ, ಕಾಳಮ್ಮ ಪಂಚಮಿಯಂದು ಮರಳಿ ದೇವಸ್ಥಾನಕ್ಕೆ ಆಗಮಿಸುತ್ತಾಳೆಂಬ ನಂಬಿಕೆ ಕುಶಲಕರ್ಮಿ ಬಂಧುಗಳಲ್ಲಿದೆ. ಕಾಳಮ್ಮನನ್ನು ವಿಧವಿಧವಾಗಿ ಪರೀಕ್ಷಿಸಿ ಭಕ್ತರನ್ನುದ್ಧರಿಸಲು ಧರೆಗಿಳಿದಳೆಂದು ಪ್ರಮಾಣವಿತ್ತಾಗ ದ್ವಾರ ಬಾಗಿಲು ತೆರೆದು ಸ್ವಾಗತಿಸಿಕೊಳ್ಳಲಾಗುತ್ತದೆ. ಅಂದು ಮತ್ತೇ ಪ್ರತಿಷ್ಠಾನಗೊಂಡ ಮೇಲೆ ಕಾಳಮ್ಮ ವರ್ಷ ಪೂರ್ತಿ ಶಿರಸಂಗಿಯಲ್ಲಿ ನೆಲೆಸಿರುತ್ತಾಳೆಂಬ ಭಕ್ತರ ಶುದ್ಧ ನಂಬಿಕೆಯನ್ನು ಅಲ್ಲಗಳೆಯುವಂತಿಲ್ಲ ಹೀಗೆ ಯುಗಾದಿ ಚೈತ್ರದ ಯಾತ್ರಾ ಮಹೋತ್ಸವವು ವೈಶಿಷ್ಟ್ಯ ಪೂರ್ಣತೆ ಯಿಂದ ಕೂಡಿರುತ್ತದೆ.

ಯುಗಾದಿಯ ಚೈತ್ರ ಮಹೋತ್ಸವದೊಂದಿಗೆ ಆರಂಭವಾದ ಕಾಳಮ್ಮನ ಉತ್ಸವಗಳು ಫಾಲ್ಗುಣ ಮಾಸಾಂತ್ಯದವರೆಗೂ ನಿರಂತರವಾಗಿರುತ್ತವೆ ಪ್ರತಿ ಅಮವಾಸ್ಯೆಯಂದು ವಿಶೇಷ ಪೂಜೆ, ಅಭಿಷೇಕ,

ಅಲಂಕಾರಗಳು ಏರ್ಪಡುತ್ತವೆ. ಪುರಾಣ-ಪಠಣಾದಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳು ನಿರಂತರವಾಗಿ ಸಾಗುತ್ತಿರುತ್ತವೆ. ವಿಶೇಷವಾಗಿ ಪ್ರತಿವರ್ಷ ನಾಗರ ಅಮವಾಸ್ಯೆ ಅಂದು ಜಗದ್ಗುರು ಮೌನೇಶ್ವರರ ತೊಟ್ಟಿಲು ಉತ್ಸವವನ್ನು ಆಚರಿಸಲಾಗುತ್ತದೆ. ಬಾಲ ಮೌನೇಶ್ವರನನ್ನು ನಾಮಕರಣ ಗೊಳಿಸುವ ಮೌನೇಶ್ವರರ ವಚನ ಪಠಣ, ಗಾಯನ ಕಾರ್ಯಗಳನ್ನು ಏರ್ಪಡಿಸಲಾಗಿರುತ್ತದೆ. ಹೆಣ್ಣು ಮಕ್ಕಳನ್ನು ತುಂಬಾ ಗೌರವದಿಂದ ಕಾಣಬೇಕೆಂಬ ಉದ್ದೇಶದಿಂದ ನಾಗರ ಅಮವಾಸ್ಯೆಯ ಕಾರ್ಯಕ್ರಮಗಳ ಜವಾಬ್ದಾರಿಗಳನ್ನು ಸಂಪೂರ್ಣವಾಗಿ ಮಹಿಳೆಯರಿಗೆ ನೀಡುತ್ತಾರೆ. ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿ ಮಹಿಳೆಯರಿಗೂ ಪ್ರಥಮ ಆದ್ಯತೆಯಿದೆಯೆಂಬ ವಿಶ್ವಸಂದೇಶವನ್ನು ಕುಶಲಕರ್ಮಿ ಬಂಧುಗಳು ವಿಶ್ವಕ್ಕೆ ನೀಡುತ್ತಾರೆ. ಮಹಿಳೆಯರಿಗಾಗಿಯೇ ವಿಶೇಷ ರಂಗೋಲಿ, ಸಂಗೀತ, ಉಪನ್ಯಾಸ ಕಾರ್ಯಗಳು ಕುಶಲಕರ್ಮಿ ಹೆಣ್ಣು ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುತ್ತವೆ.

ಪ್ರತಿ ವರ್ಷ ಛಟ್ಟಿ ಅಮವಾಸ್ಯೆಯಂದು ಪ್ರಸಿದ್ಧ ಶ್ರೀ ವಿಶ್ವಕರ್ಮ ಮಹೋತ್ಸವನ್ನು ಆಚರಿಸಲಾಗಿತ್ತದೆ. ವಿಶ್ವಕರ್ಮ ಕುಶಲಕರ್ಮಿ ಬಂಧುಗಳಿಗೆ ಯುಗಾದಿ ಉತ್ಸವ ಎಷ್ಟು ಮಹತ್ವದ್ದೊ? ಅಷ್ಟೆ ಮಹತ್ವದ್ದು ಶ್ರೀ ವಿಶ್ವಕರ್ಮ ಮಹೋತ್ಸವ ಯುಗಾದಿ ಕುಲಬಾಂಧವರನ್ನು ಒಂದೆಡೆ ಕೂಡಿ ಚಿಂಥನ-ಮಂಥನಕ್ಕೆ ಹಚ್ಚುವಂತೆ ವಿಶ್ವಕರ್ಮ ಮಹೋತ್ಸವವು ಕುಶಲಕರ್ಮಿ ಬಂಧುಗಳಲ್ಲಿ ಐಕ್ಯತೆಯನ್ನುಂಟು ಮಾಡುತ್ತಿದೆ. ವರ್ಷದಲ್ಲಿ ಎರಡು ಸಾರಿ ಕೂಡುವ ಅವಕಾಶವನ್ನು ವಿಶ್ವಕರ್ಮ ಮಹೋತ್ಸವ ಭಕ್ತರಿಗೆ ಕಲ್ಪಿಸಿ ಕೊಡುತ್ತಿದೆ. ಕುಶಲಕರ್ಮಿಗಳಿಗೆ ಕಾಳಮ್ಮ ಎಷ್ಟು ಪ್ರಮುಖಳೋ ? ಅಷ್ಟೇ ವಿಶ್ವಕರ್ಮನು ಪ್ರಮುಖನಾಗಿದ್ದಾನೆ. ಹೀಗಾಗಿ ಯುಗಾದಿ, ಕಾಳಮ್ಮನ ಉತ್ಸವವಾದರೆ, ಶಿರಸಂಗಿಯಲ್ಲಿ ಛಟ್ಟಿ ಅಮವಾಸ್ಯೆಯ ಆಚರಣೆ ವಿಶ್ವಕರ್ಮ ಮಹಾಪ್ರಭುವಿನ(ಕುಶಲಕರ್ಮಿಯ) ಉತ್ಸವವಾಗಿದೆ. ಈ ವಿಶ್ವಕರ್ಮ ಮಹೋತ್ಸವವನ್ನು ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿ ಪ್ರಥಮ ಬಾರಿಗೆ ೨೦೦೨ರಲ್ಲಿ ಆಚರಿಸಲಾಯಿತು. ಪ್ರಥಮಬಾರಿಗೆ ಆಚರಿಸುವ ಈ ಮಹೋತ್ಸವಕ್ಕೆ ಮಾಘ-ಶುದ್ಧ ತ್ರಯೋದಶಿ ಶುಭ ಮುಹೂರ್ತ ಹುಡುಕಿರುವುದು ವಿಶೇಷವಾಗಿತ್ತು. ಈ ಶುಭ ಮೂಹೂರ್ತವೇ ವಿಶ್ವಕರ್ಮನು ವಿಶ್ವ ಸೃಷ್ಟಿಸಿದ ಪವಿತ್ರ ದಿನವಾಗಿತ್ತೆಂದು ಹೇಳಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಈ ಶುಭ ಮುಹೂರ್ತದ ದಿನಂಕವಾದ ಸೋಮವಾರ ೨೫ ಫೆಬ್ರುವರಿ ೨೦೦೨ನ್ನು ಮಹೋತ್ಸವ ಆಚರಣೆಗೆ ನಿರ್ಧರಿಸಲಾಯಿತು. ಹಾಗೆಯೇ ಈ ಉತ್ಸವ ಸಮಾಜದ ಸಂಘಟನೆಗೆ ಮತ್ತು ಸಮಾಜದ ಪ್ರತಿಭಾವಂತ ವ್ಯಕ್ತಿಗಳನ್ನು ಗೌರವಿಸುವುದಾಗಿತ್ತು. ಪ್ರಥಮ ವಿಶ್ವಕರ್ಮ ಮಹೋತ್ಸವದಲ್ಲಿ ಸಮಾಜದ ಹೆಸರಾಂತ ವ್ಯಕ್ತಿಗೆ "ಶ್ರೀ ಕಾಳಿ ಪ್ರಶಸ್ತಿ" ನೀಡಿ ಗೌರವಿಸುವ ಸತ್ಸಂಪ್ರದಾಯಕ್ಕೆ ಶಿರಸಂಗಿಯು ನಾಂದಿ ಹಾಡಿತು. ಪ್ರಥಮ "ಶ್ರೀ ಕಾಳಮ್ಮ ಪ್ರಶಸ್ತಿ"ಗೆ ಭಾಜನರಾದವರು ಕನ್ನಡ ವಿಶ್ವವಿದ್ಯಾಲಯ

ಹಂಪಿಯ ಸಂಸ್ಥಾಪಕ ಕುಲಪತಿಗಳು, ಕ್ರಿಯಾಶೀಲ ವ್ಯಕ್ತಿತ್ವದ ಕವಿ. ನಾಟಕಕಾರರಾದ ವಿಶ್ವಕರ್ಮ ಕುಲೋದ್ಭವ ಡಾ. ಚಂದ್ರಶೇಖರ ಕಂಬಾರ ಸಾಹೇಬ್ರು ಮುಕ್ತ ಮನಸ್ಸಿನಿಂದ ಸಾಮಾಜಿಕ ಪ್ರೀತಿ–ವಿಶ್ವಾಸ ಸಂಕೋಲೆಗೆ ಕಟ್ಟುಬಿದ್ದು ಪ್ರಶಸ್ತಿ ಸ್ವೀಕರಿಸಿದರು. ಆ ಹೊತ್ತಿಗಾಗಲೇ ಶಿರಸಂಗಿ ಕಾಳಮ್ಮನ ಜಾತ್ರಾ ಮಹೋತ್ಸವವು ಬಹಳ ಪ್ರಸಿದ್ಧವನ್ನು ಪಡೆಯುತ್ತಿತ್ತು. ಲಕ್ಷಾಂತರ ಜನ ಶಿರಸಂಗಿ ಜಾತ್ರೆಗೆ ಆಗಮಿಸುತ್ತಿದ್ದರು. ಇಂಥಹ ಸಂದರ್ಭದಲ್ಲಿ ಡಾ. ಚಂದ್ರಶೇಖರ ಕಂಬಾರ ಸಾಹೇಬ್ರಗೆ 'ಶ್ರೀ ಕಾಳಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಆ ಸಂದರ್ಭವನ್ನು ನೆನಪಿಸಿಕೊಂಡ ಸಾಹೇಬ್ರ ಮಾತು ಇಲ್ಲಿ ಮುಖ್ಯವೆನಿಸುತ್ತದೆ. "ಶಿರಸಂಗಿಯ ಕಾಳಿಕಾಂಬಾ ದೇವಿಯ ಜಾತ್ರೆಗೆ ಕೆಲವೇ ವರ್ಷಗಳ ಹಿಂದೆ ಕೇವಲ ಒಂದೆರಡು ಸಾವಿರದಲ್ಲಿ ಮಾತ್ರ ಕುಲಬಾಂಧವರು ಸೇರುತ್ತಿದ್ದರು. ನೀವು ಲಕ್ಷದೀಪೋತ್ಸವ ಮಾಡಿದ ದಿನದಂದು ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ಕಾಲ ಬಾಂಧವರು ಸೇರುತ್ತಿದ್ದಾರೆಂದರೆ ಇದು ಪವಾಡವೇ ಸರಿ"೨ ಎಂದು ಜಾತ್ರೆಯ ಹಾಗೂ ಕುಲಬಾಂಧವರ ಸಂಘಟನಾ ಉತ್ಸಾವವನ್ನು ಕಂಡು ಹುಮ್ಮಸ್ಸಿನಿಂದ ಮಾತನಾಡಿದ್ದು, ಕ್ಷೇತ್ರದ ಜಾತ್ರೆ–ಉತ್ಸವ ಮಹತ್ವವನ್ನು ಸಾರಿ ಹೇಳಿದಂತಿತ್ತು.

'ಶ್ರೀ ಕಾಳಿ ಪ್ರಶಸ್ತಿ'ಯು ಸಮಸ್ತ ವಿಶ್ವಕರ್ಮರು ಕೊಡಮಾಡಲ್ಪಡುವ ಹೆಮ್ಮೆಯ ಪ್ರಶಸ್ತಿ. ಇದು ಕಾಳಮ್ಮನ ಆಶೀರ್ವಾದದ ಮೂರ್ತರೂಪವಾಗಿದೆ. ಸಕಲ ಜೀವಾತ್ಮಗಳಲ್ಲಿ ಪ್ರಾಣವಾಗಿರುವ ಮಹಾ ಮಾಯೆಯಾದ ಮತ್ತು ಮಹಾಮಹಿಮೆಯ ಶಕ್ತಿಯೇ ಈ ಪ್ರಶಸ್ತಿ ಸೃಜನಶೀಲತೆಗೆ ಸಾಕ್ಷಿಯಾಗಿರುವ ಈ ಪ್ರಶಸ್ತಿ ವಿಶ್ವಕಲೆಗಳ ಪ್ರತೀಕವಾಗಿದೆ. ಇಂತಹ ಪ್ರಶಸ್ತಿಗಳನ್ನು ಕಂಬಾರ ಸಾಹೇಬ್ರರೊಂದಿಗೆ ಜಿ. ಜ್ಞಾನಾನಂದ ಮತ್ತು ಪ.ಪೂ ಚಂದ್ರಶೇಖರ ಸ್ವಾಮಿಜಿ ಶ್ಯಾಂಡಿಲಾಶ್ರಮ ಇವರಿಗೆ ಪ್ರದಾನಿಸಿದ್ದು ಪ್ರಶಸ್ತಿಯ ಘನತೆಯನ್ನು ಹೆಚ್ಚಿಸಿದಂತಾಗಿದೆ ಎಂದು ವಿಶ್ವಕರ್ಮ ಕುಲಬಾಂಧವರು ಹೆಮ್ಮೆಪಡುತ್ತಾರೆ. ಈ ಉತ್ಸವದಲ್ಲಿ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಚಿಂತನೆಗಳು ಜರುಗುತ್ತವೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ–ಸನ್ಮಾನಗಳು ಏರ್ಪಡುತ್ತವೆ. ಶಿಲ್ಪಕಲಾ, ಚಿತ್ರಕಲಾ ಮತ್ತು ಛಾಯಾಚಿತ್ರ ಪ್ರದರ್ಶನಗಳು ಮತ್ತು ಕಾರ್ತೀಕ ದೀಪೋತ್ಸವದ ಬೆಳಕಿನ ಕಾಂತಿ ಕುಶಲಕರ್ಮಿಗಳಲ್ಲಿ ಧಾರ್ಮಿಕ ಜಾಗೃತಿ ಮತ್ತು ಸಂಘಟನಾ ಶಕ್ತಿಯನ್ನು ಕಟ್ಟಲು ಕಾರಣವಾಗತೊಡಗಿದೆ. ಇತ್ತೀಚೆಗೆ ಪಂಚಲೋಹದ ಕಾಳಮ್ಮ ಮತ್ತು ಪಂಚಮುಖದ ವಿಶ್ವಕರ್ಮನ ಮೂರ್ತಿಗಳು ದೇವಾಲಯದ ಆವರಣದಲ್ಲಿ ಕಾಣಸಿಗುತ್ತಿವೆ. ಹೀಗೆ ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿ ಯುಗಾದಿ ಯಾತ್ರಾ ಮಹೋತ್ಸವ ಶ್ರೀ ವಿಶ್ವಕರ್ಮ ಮಹೋತ್ಸವ, ಶ್ರೀ ಕಾಳಿಕಾ ಪ್ರಶಸ್ತಿ ಪ್ರದಾನತೆ ಮತ್ತು ನಾಗರ ಪಂಚಮಿ, ತಿಂಥಣಿ ಮೌನೇಶ್ವರ ಜಯಂತಿಗಳನ್ನು ಆಚರಿಸುವುದರೊಂದಿಗೆ ಸಮಾಜ ಸಂಘಟನೆಗೆ ಮಹತ್ವದ ದಾರಿ ಕಂಡುಕೊಳ್ಳುವಂತಾಗಿದೆ.

ಆಧುನಿಕ ಸೌಲಭ್ಯಗಳು; ಕುಶಲಕರ್ಮಿಗಳ ಆಗಮನ

ಶಿರಸಂಗಿ ಅತ್ಯಂತ ಪ್ರಾಚೀನವಾದ ಕುಶಲಕರ್ಮಿಗಳ ಪವಿತ್ರ ಶಕ್ತಿ ತಾಣ. ಈ ಕ್ಷೇತ್ರ ಕಾಲಾಂತರದಲ್ಲಿ ಬದಲಾಗುತ್ತ ಬಂದಿದೆ. ಋಷ್ಯಶೃಂಗನ ರಾಮಾಯಣ ಕಾಲದಿಂದಿಡಿದು ಶಿರಸಂಗಿ ದೇಸಾಯರ ಕಾಲದವರೆಗೂ ಹತ್ತು-ಹಲವು ಸ್ಥಿತ್ಯಂತರಗಳನ್ನು ಶಿರಸಂಗಿ ಕಂಡಿದೆ. ಜಾಯಗೊಂಡ ಮತ್ತು ೨ನೇ ಲಿಂಗಪ್ಪ ದೇಸಾಯರ ಕಾಲದಲ್ಲಿ ದೇವಾಲಯಕ್ಕೆ ಸ್ವಲ್ಪಮಟ್ಟಿನ ಸುಧಾರಣೆಗಳು ಕಂಡುಬರುತ್ತವೆ. ಲಿಂಗರಾಜ ದೇಸಾಯ ಕಾಲಕ್ಕೆ ದೇವಾಲಯದ ರಸ್ತೆ ಸುಧಾರಣೆಗಳನ್ನು ಕಾಣುತ್ತೇವೆ. ಆದರೆ ಶಿರಸಂಗಿ ಕಾಳಮ್ಮ ದೇವಸ್ಥಾನಕ್ಕೆ ಆಧುನಿಕ ಸೌಲಭ್ಯಗಳು ದೊರೆತಿರುವುದು ೧೯೭೦ರ ಅವಧಿಯಲ್ಲಿ ಎಂಬುದು ಕಂಡುಬರುತ್ತದೆ. ೧೯೦೬ರವರೆಗೆ ಲಿಂಗರಾಜ ದೇಸಾಯರ ಸುಪರ್ದಿಯಲ್ಲಿದ್ದ ದೇವಾಲಯವು ೪೦ ವರ್ಷಗಳ ಕಾಲ ಬ್ರಿಟಿಷ್ ಸರಕಾರದ ಹದ್ದು ಬಸ್ತಿನಲ್ಲಿತ್ತು. ಈ ಅವಧಿಯಲ್ಲಿ ರಸ್ತೆ ಸುಧಾರಣೆ ಹೊರತುಪಡಿಸಿದರೆ ಬೇರೆ ಯಾವ ಕಾರ್ಯಗಳು ಜರುಗಿಲ್ಲವೆಂಬುದು ತಿಳಿದುಬರುತ್ತದೆ. ಸ್ವಾತಂತ್ರ್ಯ ನಂತರ ಸುಮಾರು ೨೫ ವರ್ಷಗಳ ಕಾಲ ದೇವಾಲಯಕ್ಕೆ ಯಾವುದೇ ಮೂಲಭೂತ ಸೌಲಭ್ಯಗಳು ದೊರೆಯಲಿಲ್ಲ. ಶಿರಸಂಗಿ ಸುತ್ತಲಿನ ಭಕ್ತರು ಮಾತ್ರ ದೇವಸ್ಥಾನಕ್ಕೆ ಬಂದು ಹೋಗುತ್ತಿದ್ದರು. ಜಾತ್ರಾ ಅವಧಿಯಲ್ಲಿ ಕೇವಲ ನೂರಾರು ಸಂಖ್ಯೆಯಲ್ಲಿ ಕುಶಲಕರ್ಮಿ ಬಂಧುಗಳು ಸೇರುತ್ತಿದ್ದರು. ದೇವಾಲಯದವರೆಗಿನ ರಸ್ತೆಗಳು ಹದಗೆಟ್ಟಿದ್ದವು. ದೇವಾಲಯದ ಸುತ್ತಲೂ ಮುಳ್ಳು-ಕಂಟಿಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆದಿದ್ದವು. ಇದರಿಂದ ರಾತ್ರಿ ಹೊತ್ತು ಭಯಾನಕತೆ ಉಂಟಾಗುತ್ತಿತ್ತು. ದೇವಸ್ಥಾನದಲ್ಲಿ ಯಾರು ವಸತಿ ಉಳಿಯುತ್ತಿರಲಿಲ್ಲ. ಪೂಜಾರಿಗಳು ಸಂಜೆ ಹೊತ್ತಿಗೆ ದೇವಾಲಯದ ದ್ವಾರಬಾಗಿಲುಗಳನ್ನು ಮುಚ್ಚುವುದು ರೂಢಿಯಾಗಿತ್ತು. ಆಧುನಿಕ ಸೌಲಭ್ಯಗಳ ಕೊರತೆಯಿಂದಾಗಿ ಶಿರಸಂಗಿ ಕಾಳಮ್ಮನ ದೇವಸ್ಥಾನಕ್ಕೆ ಕುಶಲಕರ್ಮಿ ಬಂಧುಗಳು ಕೇವಲ ನೂರಾರು ಸಂಖ್ಯೆಯಲ್ಲಿ ಸೇರುತ್ತಿದ್ದರು. ಅಮವಾಸ್ಯೆ ದಿನದಂದು ಸಮೀಪದ ಭಕ್ತರು ಪಾದಯಾತ್ರೆ ಮೂಲಕ ಬಂದು-ಹೋಗುತ್ತಿದ್ದರೆಂದು ತಿಳಿದುಬರುತ್ತದೆ. ಹೀಗಾಗಿ ದೂರದೂರದ ಭಕ್ತರು ಶಿರಸಂಗಿಗೆ ಬರುವುದು ತೀರಾ ವಿರಳವಾಗಿತ್ತು.

೧೯೭೦ರ ನಂತರದಲ್ಲಿ ಹುಬ್ಬಳ್ಳಿ ಶ್ಯಾಂಡಿಲಾಶ್ರಮದ ಪರಮ ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಜಿ ಅವರು ಸಮಾಜದ ಉತ್ಸಾಹಿ ಸೇವಕರನ್ನು ಕೂಡಿಸಿ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕುಶಲಕರ್ಮಿ ಬಂಧುಗಳು ಆಗಮಿಸುವಂತೆ ರೂಪು-ರೇಷಗಳನ್ನು ಯೋಜಿಸಿಕೊಂಡರು. ಅದರಂತೆ ಸಮಾಜದ ಉತ್ಸಾಹಿಗಳು ಕ್ಷೇತ್ರದ ಅಭಿವೃದ್ಧಿಗೆ ದುಡಿಯಲು ಮುಂದಾದು ಕಂಡುಬರುತ್ತದೆ. ದೇವಾಲಯಕ್ಕೆ ಹೊಂದಿಕೊಂಡು ಕಮ್ಮಟೇಶ್ವರ, ಭೈರವ, ರಂಗಮಂಟಪ, ಉಡಚಮ್ಮನ ಗುಡಿಗಳಿದ್ದವು ಸುತ್ತಲೂ ಬಟ್ಟಬಯಲಿತ್ತು. ಸ್ವಾತಂತ್ರ್ಯಾ ನಂತರವೇ ಸುತ್ತಲಿನ ಪವುಳಿಗಳು ಕಟ್ಟಲ್ಪಟ್ಟಿವೆ. ಕುಶಲಕರ್ಮಿ

ಬಂಧುಗಳು ದೂರದೂರದಿಂದ ಒಂದೇ ದಿನ ಬಂದು ಹೋಗಲು ಸಾಧ್ಯವಾಗದ ಸ್ಥಿತಿಯಲ್ಲಿ ಬಂದವರಿಗೆ ಉಳಿದುಕೊಳ್ಳಲು ಅನುಕೂಲವಾಗುವಂತೆ ಉತ್ತರ ಭಾಗದಲ್ಲಿ ಪವುಳಿಗಳು ನಿರ್ಮಾಣವಾದ ಬಗ್ಗೆ ತಿಳಿದುಬರುತ್ತದೆ. ವಿಶ್ವಕರ್ಮ ಸಮುದಾಯದ ದಾನಿಗಳು, ಕುಶಲಕರ್ಮಿಗಳು ಧನಸಹಾಯ ಮಾಡಿ ಪವುಗಳಿಗಳನ್ನು ಕಟ್ಟಿಸಿರುವುದರಿಂದ ಭಕ್ತರು ವಸತಿ ಉಳಿದುಕೊಳ್ಳಲು ಅನುಕೂಲವಾಗತೊಡಗಿತು. ಇದರಿಂದ ಕುಶಲಕರ್ಮಿಗಳು ದಿನದಿಂದ ದಿನಕ್ಕೆ ಅಮವಾಸ್ಯೆಯಿಂದ ಅಮವಾಸ್ಯೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಸಾಧ್ಯವಾಯಿತು.ವಸತಿ ಸೌಲಭ್ಯಗಳು ದೊರೆಯುತ್ತಿರುವಂತೆ ಬೆಟ್ಟದ ನೆರಳಿನಲ್ಲಿದ್ದ ದೇವಸ್ಥಾನದಲ್ಲಿ ನೀರಿನ ಸಮಸ್ಯೆಯಿತ್ತು. ಸುತ್ತಲೂ ಹೊಳೆ–ಹಳ್ಳಗಳಾವು ಹರಿದಿರಲಿಲ್ಲ. ಖಡ್ಗತೀರ್ಥ ಹೊಂಡವಿದ್ದರೂ ದೇವಸ್ಥಾನದಲ್ಲಿಯ ಕಾಳಮ್ಮನ ಪೂಜೆಗೆ ಸಲ್ಲುವಂತಹ ಪವಿತ್ರ ಜಲವಾಗಿದ್ದು ಅದೂ ಬೇಸಿಗೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿತ್ತು. ಇದರಿಂದಾಗಿ ಕೊಳವೆ ಬಾವಿ ಕೊರೆಸಲಾಯಿತು. ನೀರು ಸಂಗ್ರಹಕ್ಕೆ ಕುಡಿಯುವ ನೀರಿನ ಟ್ಯಾಂಕ್ (ಜಲಕುಂಭ) ದಾನಿಗಳ ಸಹಾಯದಿಂದ ಕಟ್ಟಿಸಲಾಯಿತು.

ವಸತಿ ಮತ್ತು ನೀರಿನ ಸೌಲಭ್ಯಗಳಿಂದಾಗಿ ಕುಶಲಕರ್ಮಿಗಳು, ಸಮಾಜದ ಕುಲಬಾಂಧವರು ಕಾಳಮ್ಮನಿಗೆ ವಿಶೇಷ ಪೂಜೆಸಲ್ಲಿಸುವ, ಮಕ್ಕಳ ಜಾವುಳ ತೆಗೆಸುವ ಕಾರ್ಯಗಳು ಕಾಳಮ್ಮನ ಸನ್ನಿಧಿಯಲ್ಲಿ ಜರುಗತೊಡಗಿದವು. ಆದರೆ ರಾತ್ರಿ ಹೊತ್ತು ವಸತಿ ಉಳಿದುಕೊಂಡವರಿಗೆ ಬೆಳಕಿನ ವ್ಯವಸ್ಥೆ ಇದ್ದಿರಲಿಲ್ಲ. ದೀವಟಿಗೆ ಪಂಜಿನ ಬೆಳಕಿನಲ್ಲಿಯೇ ರಾತ್ರಿ ಕಳೆಯಬೇಕಾಗುತ್ತಿತ್ತು. ಹೀಗಾಗಿ ನೀರು, ವಸತಿ ಸೌಲಭ್ಯಗಳಿದ್ದರೂ ಬೆಳಕಿನ ವ್ಯವಸ್ಥೆಯಿಲ್ಲದ್ದರಿಂದ ಹಲವಾರು ಕುಶಲಕರ್ಮಿ ಬಂಧುಗಳಿಗೆ ಶಿರಸಂಗಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ೭೦ರ ದಶಕದ ನಂತರ ಈಗಿನ ಹೆಸ್ಕಾಂ ಆಗಿನ ಕೆಇಬಿ ಶಿರಸಂಗಿಗೆ ಪರಿಚಿತವಾದ ಮೇಲೆ ವಿದ್ಯುತ್ ಪ್ರವಾಹ ದೇವಸ್ಥಾನದವರೆಗೂ ಹರಿದು ಬಂದಿತು. ದೇವಸ್ಥಾನದಲ್ಲಿ ಪಂಜಿನ ಬೆಳಕು ಕಡಿಮೆಯಾಗಿ ಕೆಇಬಿ ಬೆಳಕು ಪ್ರಜ್ವಲಿಸತೊಡಗಿತು. ಹೀಗೆ ಒಂದು ಹಂತದಲ್ಲಿ ಗಾಳಿ, ಬೆಳಕು, ನೀರು, ವಸತಿ ಸೌಲಭ್ಯಗಳು ಕಾಳಮ್ಮನ ದೇವಸ್ಥಾನದಲ್ಲಿ ಹಂತ ಹಂತವಾಗಿ ಬೆಳೆಯಲಾರಂಭಿಸಿದವು.

ಕುಶಲಕರ್ಮಿ ಬಂಧುಗಳು ತಮ್ಮ ಕೆಲಸದ ಬಿಡುವಿನ ವೇಳೆ ಆಗಾಗ ದೇವಸ್ಥಾನಕ್ಕೆ ಆಗಮಿಸಿ ಕಾಳಮ್ಮನ ದರ್ಶನ ಪಡೆಯಲು ಆರಂಭಿಸಿದರು. ಪೂಜಾರಿಗಳು ಮಾತ್ರ ಇರುತ್ತಿದ್ದ ಗುಡಿಯಲ್ಲಿ ಒಂದಿಲ್ಲೊಂದು ಊರಿನಿಂದ ಆಗಮಿಸುವ ಕುಶಲಕರ್ಮಿ ಬಂಧುಗಳಿಂದ ದೇವಸ್ಥಾನ ಜನದಟ್ಟನೆಯಿಂದ ಕೂಡತೊಡಗಿತು. ದೂರ ದೂರವಿದ್ದ ದೇವ–ಭಕ್ತರ ಜೊತೆ ಪೂಜಾರಿಗಳು ಕುಶಲಕರ್ಮಿ ಬಂಧುಗಳಿಗೆ ಹತ್ತಿರವಾದರು. ಪರ ಊರಿನ ಕುಶಲಕರ್ಮಿಗಳು ವಸತಿ ಉಳಿಯುವುದರಿಂದ ಪರಸ್ಪರ ಸಂಬಂಧ ಮೌಲ್ಯಗಳು ವೃದ್ಧಿಸತೊಡಗಿದವು. ಸಂಘಟನಾತ್ಮಕತೆ ಬೆಳೆಯತೊಡಗಿತು. ಇದೆಲ್ಲಕ್ಕಿಂತ

ಹೆಚ್ಚಾಗಿ ಕುಶಲಕರ್ಮಿಗಳ ನಡುವೆ ವೃತ್ತಿ ಕೌಶಲ್ಯಗಳು ಜಾಗೃತವಾದವು. ಪರಸ್ಪರರಲ್ಲಿ ಕಲಿಕೆ ರೂಢಿಯಾಯಿತು. ಒಬ್ಬರಿಂದ ಮತ್ತೊಬ್ಬರ ಕುಲಕಸಬಿನ ತಂತ್ರಗಳನ್ನು ಕಲಿತುಕೊಳ್ಳಲು ಅನುಕೂಲವಾಯಿತು. ಪ್ರಾದೇಶಿಕತೆಯ ಕಸಬುಗಳು ಸಮಾಗಮವಾದವು. ಕುಶಲಕರ್ಮಿಗಳ ಮೂಲ ಶಕ್ತಿ ಕೇಂದ್ರ ಶಿರಸಂಗಿ ಕಾಳಮ್ಮ ದೇವಸ್ಥಾನದಲ್ಲಿ ಆಧುನಿಕ ಸೌಲಭ್ಯಗಳು ದೊರೆಯುತ್ತಿರುವಂತೆ ಅವರ ಬರುವಿಕೆ ವರ್ಷದಿಂದ ತಿಂಗಳಿಗೆ; ತಿಂಗಳಿನಿಂದ ವಾರಕ್ಕೆ ವಾರದಿಂದ ಪ್ರತಿದಿನಕ್ಕೆ ಬೆಳೆದು ಬಂದುದನ್ನು ಗಮನಿಸಲಾಗಿದೆ.

ವಸತಿ ಉಳಿಯುವವರು ಒಂದೆಡೆ ಹೆಚ್ಚಾಗುತ್ತಿದ್ದಂತೆ ಬೇಸಿಗೆಯಲ್ಲಿ ಉಳಿದುಕೊಳ್ಳಲು ಎಲ್ಲರಿಗೂ ಅನುಕೂಲವಾಗುತ್ತಿತ್ತು. ಆದರೆ ಮಳೆಗಾಲ– ಚಳಿಗಾಲದಲ್ಲಿ ಮುಕ್ತವಾದ ಪವುಳಿಗಳು ಸಾಕಾಗುತ್ತಿರಲಿಲ್ಲ. ಹೀಗಾಗಿ ೧೯೭೭ರಲ್ಲಿ ಮಳೆ–ಚಳಿಯಿಂದ ಕುಶಲಕರ್ಮಿ ಬಂಧುಗಳಿಗೆ ರಕ್ಷಣೆ ನೀಡುವ ಕೆಲಸವಾಯಿತು. ಕೊಠಡಿ ರೂಪದಲ್ಲಿ ೨೦೦ x ೮ ಅಡಿ ಅಳತೆಯಲ್ಲಿ ದೇವಾಲಯದ ಪಶ್ಚಿಮ ಭಾಗದಲ್ಲಿ ಮತ್ತಷ್ಟು ಪವುಳಿಗಳು ನಿರ್ಮಾಣವಾದವು. ಇವುಗಳಿಗೆ ಬೆಳಕಿನ ಮತ್ತು ಹೆಚ್ಚಿನ ಗಾಳಿಯ ವ್ಯವಸ್ಥೆ ಹಾಗೂ ಹಾಸಿಗೆ ವ್ಯವಸ್ಥೆಯಿದ್ದಿತು. ಇದರಿಂದ ವರ್ಷದ ಎಲ್ಲ ಕಾಲದಲ್ಲಿಯೂ ಕುಶಲಕರ್ಮಿ ಬಂಧುಗಳಿಗೆ ಶಿರಸಂಗಿಗೆ ಬಂದು ಹೋಗಲು ಅನುಕೂಲವಾಯಿತು. ವರ್ಷದುದ್ದಕ್ಕೂ ಕಾಳಮ್ಮ ದೇವಸ್ಥಾನದಲ್ಲಿ ಭಕ್ತರ ಸಮೂಹವೇ ಹರಿದಾಡತೊಡಗಿತು. ಒಂದು ಕಾಲದಲ್ಲಿ ಶಿರಸಂಗಿ ದೇವಸ್ಥಾನ ಮುಳ್ಳು–ಕಂಟಿಗಳಿಂದ ಕೂಡಿ ಭಯಾನಕತೆಯನ್ನು ಸೂಚಿಸುತ್ತಿತ್ತೊ? ಅದು ಕುಶಲಕರ್ಮಿಗಳ ಬರುವಿಕೆಯಿಂದ ದೂರವಾಗತೊಡಗಿತು. ಮುಳ್ಳು–ಕಂಟಿಗಳು ಬಯಲಾಗಿ ಕುಶಲಕರ್ಮಿಗಳ ಕಮ್ಮಟದಂತೆ ಕಾಣ ತೊಡಗಿತು.

ಶಿರಸಂಗಿಗೆ ಕುಶಲಕರ್ಮಿ ಬಂಧುಗಳ ಬರುವಿಕೆ ಹೆಚ್ಚಾಗಿದ್ದರೂ ಸಾರಿಗೆ ವ್ಯವಸ್ಥೆ ಅನುಕೂಲಕರ ವಾಗಿರಲಿಲ್ಲ. ಶಿರಸಂಗಿ ಸವದತ್ತಿ–ರಾಮದುರ್ಗ ಪಟ್ಟಣಗಳ ನಡುವಿನ ಒಂದು ಗ್ರಾಮ. ರಾಜ್ಯ ಮತ್ತು ಹೊರರಾಜ್ಯದ ಯಾವುದೇ ಮೂಲೆಯಿಂದ ಶಿರಸಂಗಿಗೆ ಆಗಮಿಸಬೇಕಾದರೆ ಅದು ರಾಮದುರ್ಗ ಅಥವಾ ಸವದತ್ತಿಯಿಂದಲೇ ಬರಬೇಕಾಗಿತ್ತು. ಬೆರಳೆಣಿಕೆಷ್ಟು ಬಸ್ಸ್‌ಗಳು ಮಾತ್ರ ಶಿರಸಂಗಿ ಗ್ರಾಮಕ್ಕೆ ನಿಲುಗಡೆ ಮಾಡುತ್ತಿದ್ದವು. ಶೇ ೭೫ ರಷ್ಟು ಬಸ್ಸುಗಳು ಸವದತ್ತಿ ಬಿಟ್ಟರೆ ರಾಮದುರ್ಗಕ್ಕೆ ನಿಲುಗಡೆ ಮಾಡುತ್ತಿದ್ದವು. ಶಿರಸಂಗಿಗೆ ಬಸ್ಸಿನ ನಿಲುಗಡೆ ಕಡಿಮೆಯಿದ್ದಿತು. ಇದರಿಂದ ಶಿರಸಂಗಿಗೆ ಆಗಮಿಸುವ ಕುಶಲಕರ್ಮಿ ಬಾಂಧವರಿಗೆ ತೊಂದರೆಯಾಗುತ್ತಿತ್ತು. ಕೆಲವು ಭಕ್ತರು ಲಾರಿ ಮತ್ತು ಟ್ರ್ಯಾಕ್ಟರ್‌ಗಳಲ್ಲಿ ಬಂದುದನ್ನು ನೆನಪಿಸಿಕೊಳ್ಳುತ್ತಾರೆ. ಅದೆಷ್ಟೋ ಜನ ರಾಮದುರ್ಗ ಮತ್ತು ಸವದತ್ತಿಯಿಂದ ಪಾದಯಾತ್ರೆ ಮಾಡಿ ಕಾಳಮ್ಮ ದೇವಸ್ಥಾನಕ್ಕೆ ಬಂದಿರುವುದನ್ನು ದೃಢಪಡಿಸಿಕೊಂಡಿದ್ದೇನೆ. ಹೀಗೆ ಸಾರಿಗೆ ವ್ಯವಸ್ಥೆಯಿಲ್ಲದಿದ್ದನ್ನು ಕುಶಲಕರ್ಮಿಗಳು ಬೇಸರಿಸಿಕೊಳ್ಳುತ್ತಿದ್ದರು. ೧೯೭೦ರ ನಂತರ ಲಕ್ಷದೀಪೋತ್ಸವ

ಮುಗಿದ ಮೇಲೆ ಸ್ವಲ್ಪ ಮಟ್ಟಿಗೆ ಸಾರಿಗೆ ಸೌಲಭ್ಯಗಳು ಅನುಕೂಲವಾಗತೊಡಗಿದವು. ನಿಲುಗಡೆಯಾಗದ ಬಸ್ಸುಗಳು ಶಿರಸಂಗಿಯಲ್ಲಿ ನಿಲ್ಲತೊಡಗಿದವು. ತಡೆಸಹಿತ ಮತ್ತು ತಡೆರಹಿತ ದೂರಪ್ರಯಾಣದ ವೇಗಧೂತ ಬಸ್ಸುಗಳು ಶಿರಸಂಗಿ ಗ್ರಾಮದಲ್ಲಿ ನಿಲುಗಡೆ ಮಾಡಲು ಆರಂಭಿಸಿದ ಮೇಲೆ ಪ್ರತಿ ತಿಂಗಳ ಅಮವಾಸ್ಯೆ ಕಾರ್ಯಕ್ರಮಕ್ಕೆ ತಪ್ಪದೇ ಕುಶಲಕರ್ಮಿಗಳು ಬರಲಾರಂಭಿಸಿದರು.

ಪ್ರತಿ ಯುಗಾದಿ ಚೈತ್ರ ಮಹೋತ್ಸವಕ್ಕೆ ನೂರಾರು ಸಂಖ್ಯೆಯಲ್ಲಿ ಆಗಮಿಸುತ್ತಿದ್ದ ಸಮಾಜ ಬಾಂಧವರು ಈಗ ಸಾರಿಗೆ ವ್ಯವಸ್ಥೆಯಾದ ಮೇಲೆ ಪ್ರತಿ ಅಮವಾಸ್ಯೆಗೆ ಸಾವಿರಾರು ಭಕ್ತರು ಸೇರಹತ್ತಿದರು. ಬೀದರ, ಕಾರವಾರ, ಹುಬ್ಬಳ್ಳಿ ಮುಂತಾದ ಶಹರಗಳಿಗೆ ಪ್ರಯಾಣಿಸುವ ಕುಶಲಕರ್ಮಿಗಳಿಗೆ ಶಿರಸಂಗಿಗೆ ಬಂದು-ಹೋಗಲು ಅನುಕೂಲವಾಯಿತು. ಜಮಖಂಡಿ ಸಾರಿಗೆ ಘಟಕದಿಂದ ಶಿರಸಂಗಿ ದೇವಸ್ಥಾನದವರೆಗೆ ಬಸ್ಸಿನ ಸೌಲಭ್ಯಗಳು ದೊರೆತವು. ಜಮಖಂಡಿ ಭಾಗದ ಕುಶಲಕರ್ಮಿಗಳಿಗೆ ಈ ಸೌಲಭ್ಯ ತುಂಬಾ ಅನುಕೂಲವಾಗಿತ್ತು. ಶಿರಸಂಗಿ ಬಸ್ ನಿಲ್ದಾಣದಿಂದ ಕಾಳಮ್ಮನ ದೇವಸ್ಥಾನದವರೆಗೆ ಸುಮಾರು ೩ ಕಿ.ಮೀ ದೂರವಿದೆ. ದೇವಸ್ಥಾನಕ್ಕೆ ಎಂಥಹ ಭಕ್ತನಿದ್ದರೂ ನಡೆದುಕೊಂಡೇ ಹೋಗಬೇಕಿತ್ತು. ಬಾಲಕರಿಗೆ ವಯೋವೃದ್ಧರಿಗೆ ತೊಂದರೆಯಾಗುತ್ತಿತ್ತು. ಜಮಖಂಡಿಯಿಂದ ಬಸ್ಸು ದೇವಸ್ಥಾನದವರೆಗೆ ತೆರಳುತ್ತಿದೆಂದು ತಿಳಿದುಕೊಂಡ ಕುಶಲಕರ್ಮಿಗಳು ಒಂದೇ ಬಸ್ಸಿಗಾಗಿ ಕಾದು ಕುಳಿತುಕೊಳ್ಳುತ್ತಿದ್ದರು. ಈಗಿರುವ ದ್ವಿಚಕ್ರ ನಾಲ್ಕು ಚಕ್ರ ವಾಹನ ಸೌಲಭ್ಯಗಳು ೯೦ರ ದಶಕದಲ್ಲಿರಲಿಲ್ಲ. ಹೀಗಾಗಿ ಲಾರಿ-ಟ್ರ್ಯಾಕ್ಟರ್, ಚಕ್ಕಡಿ ಮೂಲಕ ಕಾಳಮ್ಮನ ದರ್ಶನ ಪಡೆಯಲಾಗುತ್ತಿತ್ತು. ಹೊಸ ಸಹಸ್ರಮಾನಕ್ಕೆ ಶಿರಸಂಗಿ ಆಕಾಶದ ಬೆಳ್ಳಿ ಚುಕ್ಕಿಯಂತೆ ಕುಶಲಕರ್ಮಿಗಳ ಮನದಾಳದಲ್ಲಿ ಅಚ್ಚಳಿಯದೆ ಉಳಿದುಕೊಂಡಿತು.

೨೦೦೨ರಲ್ಲಿ ಶಿರಸಂಗಿಯಲ್ಲಿ ಶ್ರೀ ವಿಶ್ವಕರ್ಮ ಮಹೋತ್ಸವ ಆರಂಭಗೊಂಡ ಮೇಲೆ ಕ್ಷೇತ್ರಕ್ಕೆ ಲಕ್ಷಾಂತರ ಕುಶಲಕರ್ಮಿಗಳ ಬರುವಿಕೆ ಅಪೂರ್ವವೆನಿಸಿತು. ಡಾ. ಚಂದ್ರಶೇಖರ ಕಂಬಾರ ಸಾಹೇಬ್ರಗೆ ಪ್ರಪ್ರಥಮ "ಶ್ರೀ ಕಾಳಿ ಪ್ರಶಸ್ತಿ" ಪ್ರದಾನ ಮಾಡಲಾಗುವ ಸುದ್ಧಿ ಕ್ಷೇತ್ರಕ್ಕೆ ಹೆಚ್ಚಿನ ಕುಶಲಕರ್ಮಿಗಳನ್ನು ಒಂದೆಡೆ ಸೇರಿಸುವಂತಾಯಿತು. ಕಂಬಾರರಿಗೆ ಶ್ರೀ ಕಾಳಿ ಒಳಿದಿದ್ದಾಳೆಂದರೆ ಅದು ಅದ್ಭುತವಾಗಿತ್ತು. ಕುಲುಮೆ ಮತ್ತು ಅದಕ್ಕೆ ಶಕ್ತಿಯಾಗಿರುವ ಬೆಂಕಿಯನ್ನು ಶಿರಸಂಗಿಯಲ್ಲಿ ಕಾಣುವುದೇ ಒಂದು ಸೌಭಾಗ್ಯವೆಂದು ಕುಶಲಕರ್ಮಿಗಳು ಧಾವಿಸಿ ಬಂದುದು ಒಂದು ಪವಾಡ. ವರ್ಷದ ಈ ಎರಡು ಮಹೋತ್ಸವಕ್ಕೆ ಲಕ್ಷಾಂತರ ಕುಶಲಕರ್ಮಿಗಳ ಬರುವಿಕೆಯಿಂದ ಸಾರಿಗೆ ವ್ಯವಸ್ಥೆಯಲ್ಲಿ ತುಂಬಾ ಬದಲಾವಣೆಗಳಾದವು. ಮೂರುಚಕ್ರ, ನಾಲ್ಕು ಚಕ್ರ (ಕ್ರೃಶರ್)ದ ವಾಹನಗಳು ದೇವಸ್ಥಾನದವರೆಗೆ ಓಡಲಾರಂಭಿಸಿದವು. ದೂರ ನಡೆಯಲು ಅಸಾಧ್ಯವಾದವರಿಗೆ ಸಾರಿಗೆ ವ್ಯವಸ್ಥೆ ಅನುಕೂಲಮಾಡಿಕೊಟ್ಟಿತು. ಇತ್ತೀಚಿನ ಸಂದರ್ಭದಲ್ಲಿ ಪ್ರತಿ ದಿನಕ್ಕೆ ನೂರಾರು ಖಾಸಗಿ ವಾಹನಗಳು

ದೇವಸ್ಥಾನಕ್ಕೆ ಬಂದು ಹೋಗುತ್ತವೆ. ಒಂದು ಅಮವಾಸ್ಯೆಗೆ ಸಾವಿರ ಜನಸೇರಿದರೆ ೬೦೦ ದ್ವಿಚಕ್ರವಾಹನಗಳೇ ಇರುತ್ತವೆ. ಒಂದು ನೂರು ನಾಲ್ಕು ಚಕ್ರವಾಹನವಿರುತ್ತವೆ. ಪಾದಯಾತ್ರಿಗಳು ಈಗ ಕಾಣಸಿಗುವುದಿಲ್ಲ. ಬೆರಳೆಣಿಕೆಯಷ್ಟು ಕುಶಲಕರ್ಮಿ ಬಾಂಧವರು ಪಾದಯಾತ್ರಿಗಳಾಗಿ ಕ್ಷೇತ್ರಕ್ಕೆ ಆಗಮಿಸುತ್ತಾರೆ. ಕಲ್ಲಾಪುರ, ಗೋವಿನಕೊಪ್ಪ, ಹೂಲಿಕಟ್ಟಿ, ಮುಳ್ಳೂರು ಗ್ರಾಮದ ಕೆಲ ಕುಶಲಕರ್ಮಿಗಳು ಇಂದಿಗೂ ಪಾದಯಾತ್ರೆ ಮಾಡುತ್ತಾರೆ.

ಜಾತ್ರೆಯಲ್ಲಿ ಹುಬ್ಬಳ್ಳಿ, ಸವದತ್ತಿ, ಗದಗ ಘಟಪ್ರಭಾ, ನಿಪ್ಪಾಣಿ, ಲೋಕಾಪೂರ ಮುಂತಾದ ಊರುಗಳಿಂದ ಖಾಸಗಿ ವಾಹನಗಳು ಶಿರಸಂಗಿ ಕ್ಷೇತ್ರಕ್ಕೆ ವಸತಿ ಬರುತ್ತವೆ. ಇದರಿಂದ ಕುಶಲಕರ್ಮಿಗಳು ಕುಟುಂಬ ಸಹಿತ ಕಾಳಮ್ಮನ ಸನ್ನಿದಿಗೆ ಬಂದು ಅವ್ವನ ದರ್ಶನ ಪಡೆದುಕೊಳ್ಳುತ್ತಿರುವುದು ಇತ್ತೀಚೆಗೆ ಕಂಡುಬರುತ್ತಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಗೋವೆ ತಮಿಳುನಾಡಿನಲ್ಲಿರುವ ಕುಶಲಕರ್ಮಿಗಳ ಬರುವಿಕೆಗೆ ರೇಲ್ವೆ ಸಾರಿಗೆ ವ್ಯವಸ್ಥೆ ಶಿರಸಂಗಿಗೆ ಇಲ್ಲವಾಗಿದೆ. ಶಿರಸಂಗಿ ಕಾಳಮ್ಮ ಸವದತ್ತಿ ಯಲ್ಲಮ್ಮ ಶಕ್ತಿದೇವತೆಗಳೆಂದು ಭಕ್ತರು ಪೂಜಿಸಲಾಗುತ್ತಿದ್ದು ಕೇವಲ ೨೫ ಕಿ.ಮೀ ದೂರದಲ್ಲಿದ್ದಾರೆ. ಹೀಗಾಗಿ ರಾಮದುರ್ಗ ಸವದತ್ತಿ ಮಾರ್ಗವಾಗಿ ಶಿರಸಂಗಿ ಕಾಳಮ್ಮನ ದೇವಸ್ಥಾನದ ಸಮೀಪ ಹಾಯ್ದು ಹೋಗುವ ರೈಲು ಸಾರಿಗೆ ವ್ಯವಸ್ಥೆಯಾದರೆ ಶಿರಸಂಗಿಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕುಶಲಕರ್ಮಿ ಬಂಧುಗಳು ಬಂದು ಹೋಗಲು ಅನುಕೂಲವಾಗುತ್ತದೆ.

ಶಿರಸಂಗಿ ಕ್ಷೇತ್ರಕ್ಕೆ ಸಾರಿಗೆ ವ್ಯವಸ್ಥೆಯಿಂದಾಗಿ ಕುಶಲಕರ್ಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಹೋಗಲು ಸಾಧ್ಯವಾಗುತ್ತಿದೆ. ಇದರಿಂದ ಪದೆ ಪದೆ ದೂರವಿರುವ ಸಂಬಂಧಿಕರು ಮತ್ತೇ ಮತ್ತೇ ಬೇಟಿಯಾಗುವಂತಾಗುತ್ತಿದೆ. ಸಂಬಂಧಗಳು ಗಟ್ಟಿಗೊಳ್ಳುತ್ತಿವೆ. ಹೊಸ ಸಂಬಂಧಗಳು ಬೆಸೆಯುತ್ತಿವೆ. ಶಿರಸಂಗಿ ಧಾರ್ಮಿಕ ಕೇಂದ್ರವಾಗಿರುವುದರೊಂದಿಗೆ ವಧು-ವರ ಸಮ್ಮೀಲನದ ವ್ಯಾಪಾರಿ ಕೇಂದ್ರವಾಗಿ ರೂಪಾಂತರವಾಗುತ್ತಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಅಮವಾಸ್ಯೆ ಕುಶಲಕರ್ಮಿಗಳು ಸಂಧಿಸುವುದರಿಂದ ಕಸಬಿನ ಕೌಶಲ್ಯಗಳು ಹೆಚ್ಚಾಗುತ್ತಿವೆ. ಕುಲಕಸಬುದಾರರು ಕಸಬಿನ ಕುರಿತು ಕಾರ್ಯ ತಂತ್ರಗಳ ಚರ್ಚೆನಡೆಸುತ್ತಾರೆ. ಉತ್ಪಾದಿತ ವಸ್ತುವಿನ ಗುಣಾತ್ಮಕತೆಯ ಹಿನ್ನೆಲೆ-ಮುನ್ನೆಲೆಗಳ ಸುದೀರ್ಘ ಸಂವಾದಗಳು ಮರದ ನೆರಳಿನ ಕೆಳಗೆ ಕುಳಿತು ಕಸಬಿನ ಕಮ್ಮಟಗಳು ಏರ್ಪಡುತ್ತಿರುವುದು ಉತ್ತಮ ಬೆಳವಣಿಗೆ.

ಸತ್ಸಂಗದಿಂದ ಮನುಷ್ಯ ಮಾತ್ರನಿಗೆ ಲಾಭವಾಗುವಂತೆ, ಕುಶಲಕರ್ಮಿಗಳು ಶಿರಸಂಗಿ ಕಾಳಮ್ಮನಿಗೆ ಬರುವುದರಿಂದ ಎಲ್ಲ ರೀತಿಯ ಲಾಭವನ್ನು ಕುಲಕಸಬುದಾರರು ಪಡೆಯುತ್ತಿದ್ದಾರೆ. ಕುಶಲಕರ್ಮಿಗೆ ಗುಣಾತ್ಮಕ ವಸ್ತು ಉತ್ಪಾದಿಸುವುದೊಂದೆ ಮುಖ್ಯವಲ್ಲ. ಉತ್ಪಾದಿತ ವಸ್ತುವಿಗೆ ಇಂದಿನ ಜಾಗತೀಕ ಮಾರುಕಟ್ಟೆಯಲ್ಲಿ ಯಾವ ದರವಿರಬೇಕು. ವಸ್ತುವಿನ ನಿಗದಿತ ಬೆಲೆಯೇನು?

ಲಾಭ-ನಷ್ಟಗಳು ಹೇಗೆ? ಮುಂತಾದ ವ್ಯಾಪಾರಿ ಮನೋಧರ್ಮವು ಇಂದು ಕುಲಕಸಬುದಾರರಿಗೆ ತಿಳಿಯಬೇಕಾಗಿದೆ. ಇಂತಹ ವ್ಯಾಪಾರಿ ಗುಣವನ್ನು ಕುಶಲಕರ್ಮಿಗಳು ಶಿರಸಂಗಿಗೆ ಬರುವುದಿರಂದ ಕಲಿತುಕೊಳ್ಳಲು ಅನುಕೂಲವಾಗುತ್ತಿದೆ.

ಆರ್ಥಿಕ ಮತ್ತು ಸಾಂಸ್ಕೃತಿಕ ಸುಧಾರಣೆಗಳು

ಕುಶಲಕರ್ಮಿ ತನ್ನ ಕುಟುಂಬವನ್ನು ಆರ್ಥಿಕವಾಗಿ ಹೇಗೆ ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತಿದೆಂಬುದನ್ನು ಶಿರಸಂಗಿ ಭೇಟಿ ಕಸಬುದಾರನಿಗೆ ಕಲಿಸಿಕೊಡುತ್ತದೆ. ಕುಶಲಕರ್ಮಿ ಮೂಲತಃ ಉತ್ಪಾದಕ (Productor); ವ್ಯಾಪಾರಿಯಲ್ಲ(Not bussenes man) ವ್ಯಾಪಾರ ಸೃಷ್ಟಿಕರ್ತನ ಮನೋಧರ್ಮವಲ್ಲ. ಅದು ಪರರಧರ್ಮ. ಆದರೆ ಕುಲಕಸಬುದಾರ ಮಾರುಕಟ್ಟೆ ವ್ಯವಹಾರ ಕಲಿತುಕೊಳ್ಳದಿದ್ದರೆ ತನ್ನ ಕುಟುಂಬವನ್ನು ಆರ್ಥಿಕವಾಗಿ ಸುಧಾರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಶಾಶ್ವತನಾಗಿ ಕುಶಲಕರ್ಮಿ ಶ್ರಮಜೀವಿಯಾಗಿ ಬಡವನಾಗಿಯೇ ಉಳಿಯಬೇಕಾಗುತ್ತದೆ. ಉತ್ಪಾದಿತ ವಸ್ತುಗಳಿಂದ ದಲ್ಲಾಳಿಗೆ ಕಡಿಮೆ ಲಾಭಾಂಶವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ. ದಲ್ಲಾಳಿಗೆ ಹೆಚ್ಚಿನ ಲಾಭವಾದರೆ ಶ್ರಮಿಕನ ಶ್ರಮಕ್ಕೆ ಬೆಲೆಯಿಲ್ಲವಾಗುತ್ತದೆ. ಈ ಎಲ್ಲ ವ್ಯಾಪಾರಿ ಕೊಡು-ಕೊಳ್ಳವಿಕೆಯು ಕುಶಲಕರ್ಮಿಯನ್ನು ಉತ್ತಮ ಸ್ವಾವಲಂಭಿಯನ್ನಾಗಿ ಬೆಳೆಸುತ್ತದೆ.

ಕುಶಲಕರ್ಮಿ ಆರ್ಥಿಕವಾಗಿ ಬೆಳೆದರೆ ಇಡೀ ಸಮುದಾಯವನ್ನು, ಕ್ಷೇತ್ರವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಅಧಿಕಾರಿಗಳು, ಶಿಕ್ಷಣವಂತರು ನೌಕರರು ಉದ್ದಿಮಿಗಳು ತಮ್ಮ ಮೂಲ ಸಂಬಳದಲ್ಲಿ ಸ್ವಲ್ಪಭಾಗ ಕ್ಷೇತ್ರಕ್ಕೆ ದಾನ ಮಾಡುತ್ತಾರೆ. ಕ್ಷೇತ್ರವನ್ನು ಆರ್ಥಿಕವಾಗಿ ಬೆಳೆಸುತ್ತಾರೆ. ಹಾಗೆಯೇ ಕುಶಲಕರ್ಮಿಗಳು ನಿತ್ಯ ವಸ್ತು ಉತ್ಪಾದಿಸಿ ಸೂಕ್ತ ಬೆಲೆಗೆ ಮಾರಾಟ ಮಾಡಿ ಕುಟುಂಬ ಆರ್ಥಿಕವಾಗಿ ಬೆಳೆಸಿ, ತಾವು ಆರ್ಥಿಕವಾಗಿ ಬೆಳೆಯಬೇಕು. ಶಿರಸಂಗಿ ಕ್ಷೇತ್ರಕ್ಕೂ ದಾನಮಾಡಿ ಕ್ಷೇತ್ರವನ್ನು ಆರ್ಥಿಕವಾಗಿ ಬೆಳೆಸಬೇಕು. ಸಮುದಾಯದ ಎಲ್ಲ ಜನರೊಂದಿಗೆ ತಾನುಕೂಡ ಒಬ್ಬನಾಗಿ ತನ್ನಿಂದಲೂ ಕ್ಷೇತ್ರಕ್ಕೆ ದಾನ-ಧರ್ಮಾಧಿಗಳನ್ನು ಮಾಡಲು ಸಾಧ್ಯವೆಂಬುದನ್ನು ತೋರಿಸಬೇಕಾಗುತ್ತದೆ. ಇತ್ತೀಚಿನ ದಾನಿಗಳ ಪಟ್ಟಿಯಲ್ಲಿ ಶ್ರಮಜೀವಿಗಳಾದ ಕುಶಲಕರ್ಮಿಗಳ ಹೆಸರು ಹೆಚ್ಚಾಗಿ ಕಾಣುತ್ತಿವೆ. ತಾನು ಬೆಳೆದು ಶಿರಸಂಗಿ ಕ್ಷೇತ್ರವನ್ನು ಆರ್ಥಿಕವಾಗಿ ಬೆಳೆಸಲು ಕೈಜೋಡಿಸಿದ್ದಾನೆ. ಗರ್ಭಗುಡಿಯಿಂದ ಹೊರಬರುವ ಪಂಚ ಪಾತ್ರೆಯಲ್ಲಿ ಒಂದು ರೂಪಾಯಿ ಬದಲಾಗಿ ಹತ್ತು ರೂಪಾಯಿಗಳು ಕಾಣಿಸುತ್ತಿವೆ. ರೈತರು ಕೊಟ್ಟ ಮನೆಯಿಂದ ತಂದ ಒಂದು ತೆಂಗಿನ ಕಾಯಿ ಒಡೆಸುವ ಬದಲಾಗಿ ಎರಡೆರಡು ತೆಂಗಿನ ಕಾಯಿ ಒಡೆಸುವುದನ್ನು ಕಾಣುತ್ತಿದ್ದೇವೆ. ಒಂದು ವಡೆಕರ್ಪೂರ ಬದಲಾಯಿತು. ೫ ರೂಪಾಯಿ ಕರ್ಪೂರ ದೇವರಿಗೆ ಅಗ್ನಿಸಲಾಗುತ್ತಿದೆ. ಮನೆಯಂಗಳದ ಬಿಡಿಹೂವುಗಳ ಬದಲು ದಟ್ಟನೆ ಹೂವುಗಳಿಂದ ಹೆಣಿದ ಹೂ-ಮಾಲೆ ಅವ್ವನಿಗರ್ಪಿಸಲಾಗುತ್ತಿದೆ. ಇವೆಲ್ಲವುಗಳನ್ನು ಸೂಕ್ಷ್ಮವಾಗಿ

ಗಮನಿಸುತ್ತಿದ್ದರೆ ಕುಶಲಕರ್ಮಿಗಳು ಸ್ವಲ್ಪ ಮಟ್ಟಿಗೆ ಆರ್ಥಿಕವಾಗಿ ಸುಧಾರಿಸುತ್ತಿದ್ದಾರೆ. ಕಸಬಿನಿಂದ ಬಂದ ಸಂಪಾದನೆಯಲ್ಲಿ ಶೇ. ೫ ರಷ್ಟು ಧಾರ್ಮಿಕ ಕಾರ್ಯಗಳಿಗೆ ಹಣವನ್ನು ದಾನದ ರೂಪದಲ್ಲಿ ಸಮರ್ಪಿಸುತ್ತಿರುವುದು ತಿಳಿದುಬರುತ್ತದೆ.

೨೦೧೫ರ ಯುಗಾದಿ ಯಾತ್ರಾ ಮಹೋತ್ಸವ ಆಮಂತ್ರಣ ಪತ್ರಿಯಲ್ಲಿಯ ಮಾಹಿತಿಯಂತೆ, ಇಬ್ಬರು ಪ್ರತಿ ೧೫,೦೦೦ ರೂ, ಒಬ್ಬರು ೧೧೧೧೧.೦೦ ರೂ, ೧೫ ಜನ ಪ್ರತಿ ೧೧,೦೦೦ ರೂ ಆರು ಜನ ಪ್ರತಿ ೧೦,೦೦೦ ರೂ, ಒಬ್ಬರು ೫೧೧೧ ರೂ ಒಟ್ಟು- ೨,೭೧,೨೨೨ ರೂಪಾಯಿಗಳನ್ನು ಆರ್ಥಿಕವಾಗಿ ಬೆಳೆದ ಕುಶಲಕರ್ಮಿಗಳು ದಾನ ನೀಡಿದ್ದಾರೆ. ಇದರ ಜೊತೆ ೫೦೦೧ ರೂಪಾಯಿಗಳಂತೆ ೩೫೫ ಕುಶಲಕರ್ಮಿಗಳು ಒಟ್ಟು ೧೭,೭೫,೫೧೦ ರೂಪಾಯಿಗಳನ್ನು ಶಿರಸಂಗಿ ಅಭಿವೃದ್ಧಿಗಾಗಿ ದಾನವನ್ನು ನೀಡಿದ್ದು ತಿಳಿದುಬರುತ್ತದೆ. ಇದು ಕೇವಲ ೨೦೧೫ರ ಯುಗಾದಿ ಮಹೋತ್ಸವದ ಕಾರ್ಯಕ್ರಮಕ್ಕೆ ೨,೭೧,೨೨೨ ಮತ್ತು ೧೭,೭೫,೫೧೦ ಒಟ್ಟು ೨೦,೪೬,೭೩೨ ರೂಪಾಯಿಗಳು ಕ್ಷೇತ್ರಕ್ಕೆ ದಾನದ ರೂಪದಲ್ಲಿ ಬಂದು ಸೇರಿದವು. ಪ್ರತಿವರ್ಷ ಯುಗಾದಿ ಮಹೋತ್ಸವದ ಹೊತ್ತಿಗೆ ಲಕ್ಷಾಂತರ ರೂಪಾಯಿಗಳು ಶಿರಸಂಗಿ ಕಾಳಮ್ಮನ ಸನ್ನಿಧಿಗೆ ತಲುಪುತ್ತವೆ. ೨೦೧೫ರ ಮಾಹಿತಿ ಪತ್ರದಲ್ಲಿರುವಂತೆ ನಿರಂತರ ಅನ್ನ ಸಂತರ್ಪಣೆಗಾಗಿ ಒಬ್ಬರು ೨೫,೦೦೦ ರೂ. ಒಬ್ಬರು ೧೫,೦೦೦ ಹಾಗೂ ೫೭ ಕುಶಲಕರ್ಮಿದಾನಿಗಳು ಪ್ರತಿ ೧೧,೦೦೦ ರೂಪಾಯಿಯಂತೆ ಒಟ್ಟು ೬,೨೭,೦೦೦ ರೂಪಾಯಿಗಳನ್ನು ಸುಕ್ಷೇತ್ರ ಶಿರಸಂಗಿ ಅಭಿವೃದ್ಧಿಗಾಗಿ ದಾನಮಾಡಿರುವುದು ಕಂಡುಬರುತ್ತದೆ. ಒಟ್ಟು ೧೦೦೦ ಜನರಿಂದ ೧೧,೦೦೦ ರೂಗಳಂತೆ ಸುಮಾರು ೧ ಕೋಟಿ ೧೦ ಲಕ್ಷ ರೂ.ಗಳು ಸಂಗ್ರಹವಾಗಿರುವುದು ತಿಳಿದುಬರುತ್ತದೆ.

ಶಿರಸಂಗಿಯಲ್ಲಿ ಲಕ್ಷದೀಪೋತ್ಸವ ಮತ್ತು ವಿಶ್ವಕರ್ಮ ಮಹೋತ್ಸವದಿಂದಾಗಿ ಕ್ಷೇತ್ರಕ್ಕೆ ಕುಶಲಕರ್ಮಿ ಬಂಧುಗಳು ಹೆಚ್ಚಿನ ಪ್ರಮಾಣದಲ್ಲಿ ಬರುವುದರ ಜೊತೆ ಲಕ್ಷಾಂತರ ಹಣವನ್ನು ದಾನವಾಗಿ ನೀಡುತ್ತಿದ್ದಾರೆ. ಇದರಿಂದಾಗಿ ಶಿರಸಂಗಿ ಕಾಳಮ್ಮ ದೇವಸ್ಥಾನವು ಆರ್ಥಿಕವಾಗಿ ಸುಧಾರಿಸುತ್ತಿದೆ. ಕುಶಲಕರ್ಮಿಗಳ ಜೀವನ ಕ್ರಮಗಳಲ್ಲಿ ಗಮನಾರ್ಹ ಬದಲಾವಣೆಗಳಾಗುತ್ತಿವೆ. ದಾನ ಮಾಡಿದೆನೆಂಬ ಆತ್ಮತೃಪ್ತಿಯ ಮುಂದೆ ಇನ್ನಾವ ಸ್ವರ್ಗ ಸುಖವಿಲ್ಲವೆಂಬುದನ್ನು ದಾನಿಗಳು ಮನಗಂಡಿದ್ದಾರೆ. ಶಿರಸಂಗಿಗೆ ಒಂದು ಸಣ್ಣ ಝರಿಯಂತೆ ಹರಿದುಬರುತ್ತಿದ್ದ ದಾನದ ಜಲವು ಈಗ ಹೊಳೆಯಾಗಿ ನದಿಯಂತೆ ರಭಸವಾಗಿ ಶ್ರೀ ಕ್ಷೇತ್ರಕ್ಕೆ ಹರಿದುಬರುತ್ತಿದೆ. ಸುಮಾರು ೨೦೩೦ರ ಹೊತ್ತಿಗೆ ಇದು ಸಾಗರವಾಗಿ ಧುಮ್ಮುಕ್ಕಲಿದೆ ಎಂಬುದು ಕೆಲವು ಆರ್ಥಿಕ ಆಲೋಚಕರ ವಿಚಾರವಾಗಿದೆ.

ದಾನದ ರೂಪದಲ್ಲಿ ಹಣವಷ್ಟೇ ಅಲ್ಲ. ಧಾನ್ಯ ಒಡವೆ-ವಸ್ತು, ಬಂಗಾರ-ಬೆಳ್ಳಿ, ವಸ್ತ್ರ ಹೀಗೆ ವಿವಿಧ ರೂಪದಲ್ಲಿ ದಾನಸ್ವರೂಪ ವಿಂಗಡನೆಯಾಗಿದೆ. ಇದರಿಂದ ಕ್ಷೇತ್ರದಲ್ಲಿ ನಿತ್ಯ ಮತ್ತು ಅಮವಾಸ್ಯೆ

ಅನ್ನಸಂತರ್ಪಣೆ ಕಾರ್ಯಗಳು ಜರುಗುತ್ತಿರುವುದು ದಾನಿಗಳಿಗೆ ಸಂತೃಪ್ತಿಯನ್ನು ತರುತ್ತಿದೆ. ಸಮುದಾಯ ಮತ್ತು ಸಮುದಾಯಿಕ ಕ್ಷೇತ್ರ ಆರ್ಥಿಕವಾಗಿ ಬೆಳೆದಾಗ ಮಾತ್ರ ಏನಾದರೂ ಒಂದನ್ನು ಸಾಧಿಸಲು ಸಾಧ್ಯವಾಗುತ್ತದೆ. ಈ ಮಾತು ಪ್ರತಿ ಕುಲಕಸಬುದಾರನಿಗೂ ಅನ್ವಯವಾಗುತ್ತದೆ. ಆರ್ಥಿಕವಾಗಿ ಯಾವ ಸಮುದಾಯ ಮುಂದುವರೆದಿದೆಯೋ ಅಂತಹ ಸಮುದಾಯ ಎಲ್ಲ ರಂಗಗಳಲ್ಲಿಯೂ ಮುಂಚೂಣಿಯಲ್ಲಿ ಕಾಣಬಹುದು. 'ಸೋರಗು ಜೋಳದ ಶಾಪ' ಕುಶಲಕರ್ಮಿಗಳಿಗೆ ಈಗ ಕಡಿಮೆಯಾಗಿದೆ. ಆರ್ಥಿಕ ಪರಿಸ್ಥಿತಿ ಸುಧಾರಣೆ ಕಾಣುತ್ತಿದ್ದಂತೆ ಸಾಂಸ್ಕೃತಿಕ ಸಂದರ್ಭಗಳು ಸುಧಾರಿಸುತ್ತಾ ಹೋಗುತ್ತವೆ. ದೇವಸ್ಥಾನದಲ್ಲಿಯ ಜೀವನ ಕ್ರಮ, ಉಡುಗೆ, ತೊಡುಗೆ, ರೀತಿ–ನೀತಿ, ಆಚಾರ–ವಿಚಾರ, ಸಂಪ್ರದಾಯ ಮುಂತಾದವುಗಳ ಮೇಲೆ ಪ್ರಭಾವ ಬೀರುತ್ತವೆ.

ಶಾಕ್ತ ಪಂಥದ ಸಂಪ್ರದಾಯವನ್ನು ಶಿರಸಂಗಿ ಕಾಳಮ್ಮನ ದೇವಾಲಯದಲ್ಲಿ ಆಚರಿಸಲಾಗುತ್ತದೆ. ಇದು ಪ್ರಾಚೀನ ಕಾಲದಿಂದಲೂ ಬೆಳೆದುಬಂದ ಸಂಪ್ರದಾಯ. ಅಭಿಷೇಕಗಳಿಗೆ ಸಲ್ಲುವ ಹಣದ ರೂಪ ಈಗ ಬದಲಾವಣೆಯಾಗಿವೆ. ಒಂದು ಕಾಲದಲ್ಲಿ ನೂರೊಂದು ರೂಪಾಯಿಗಳನ್ನು ಅಭಿಷೇಕಕ್ಕೆ ನೀಡುತ್ತಿದ್ದರೆ ಈಗ ಅದು ಐನೂರು ಆಗಿದೆ. ಆದರೆ ನಿತ್ಯವು ಸೂರ್ೋದಯದ ಮುನ್ನ ಖಡ್ಗತೀರ್ಥಕ್ಕೆ ಹೋಗಿ ತಾಮ್ರದ ಕೊಡದಲ್ಲಿ ಅಮ್ಮನ ಸ್ನಾನಕ್ಕೆ ನೀರು ತರುವುದರಲ್ಲಿ ಬದಲಾವಣೆಗಳಿಲ್ಲ. ಗಂಧ–ಕುಂಕುಮಾದಿಗಳು ಹಾಗೇ ಮುಂದುವರೆದಿವೆ. ದೇವಿಯ ಉಡುಗೆ ತೊಡುಗೆಯಲ್ಲಿ ಸೂಕ್ಷ್ಮ ಬದಲಾವಣೆಗಾಳಗಿವೆ. ಮೊದಲು ಸಾಧಾರಣ ಗುಣಮಟ್ಟದ ಸೀರೆಗಳಿರುತ್ತಿದ್ದವು. ಈಗ ರೇಷ್ಮೆ ಸೀರೆಗಳನ್ನು ಕಾಳಮ್ಮನಿಗೆ ಉಡಿಸಲಾಗುತ್ತಿದೆ. ತಾಮ್ರದ ಸಮೆಗಳೊಂದಿಗೆ, ಬೆಳ್ಳಿಯ ಸಮೆಗಳು ಕಂಗೊಳಿಸುತ್ತಿವೆ. ಗಂಟೆ–ಜಾಗಟೆಗಳ ಪ್ರಮಾಣ ಹೆಚ್ಚಾಗಿವೆ. ಚಿಕ್ಕದಾಗಿರುತ್ತಿದ್ದ ಆರತಿ ತಟ್ಟೆ ಈಗೀಗ ದೊಡ್ಡದಾಗುತ್ತಿದೆ. ಸಂಸ್ಕೃತಿಯ ಪ್ರವರ್ತಕರಾದ ಪೂಜಾರಿಗಳು ಖಾದಿ ಮಡಿ ಬದಲಾಗಿ ರೇಷ್ಮೆ ಮಡಿ ಉಡುತ್ತಿದ್ದಾರೆ. ಬಿಳಿಜನಿವಾರ ಒಂದೇ ಕಾಣುತ್ತಿದ್ದ ಪೂಜಾರಿಗಳ ಮೈಮೇಲೆ ಬಂಗಾರ ಸರ, ಉಂಗುರಗಳು ಅಮ್ಮನ ಸೇವೆಗೆ ಮುಂದಾಗುತ್ತಿವೆ. ಕಾಳಮ್ಮನಿಗೆ ಹೋಳಿಗೆ–ಗೋಧಿ ಪಾಯಸ ನೈವೇದ್ಯ ಮಾತ್ರ ಬದಲಾವಣೆಗಳಾಗಿಲ್ಲ. ಕ್ಷೇತ್ರದಲ್ಲಿಯ ಕಟ್ಟಿಗೆಯ ಪಲ್ಲಕ್ಕಿಗಳು ಬೆಳ್ಳಿಯ ಸ್ವರೂಪ ತಂದುಕೊಂಡಿವೆ.

ಪಲ್ಲಕ್ಕಿ ಸ್ವರೂಪ ಬದಲಾದರೆ ಕುಶಲಕರ್ಮಿ ಬಂಧುಗಳು ಒಪ್ಪಿಕೊಳ್ಳಬಹುದು. ಆದರೆ ಪಲ್ಲಕ್ಕಿಯಲ್ಲಿ ಕೂಡ್ರಿಸುವ ಉತ್ಸವ ಮೂರ್ತಿ ಬದಲಾದರೆ ಕ್ಷೇತ್ರದ ಯಾವ ಭಕ್ತರು ಅಷ್ಟು ಸುಲಭವಾಗಿ ಸ್ವೀಕರಿಸುವುದಿಲ್ಲ. ಪ್ರಾಚೀನ ಕಾಲದ ಕಾಳಮ್ಮನ ಉತ್ಸವ ಮೂರ್ತಿಯೇ ಕಾಣುತ್ತಿಲ್ಲ. ಅದರ ಬದಲಾಗಿ ಬೆಳ್ಳಿಯ ಉತ್ಸವ ಮೂರ್ತಿ ಪಲ್ಲಕ್ಕಿಯಲ್ಲಿ ಅಲಂಕೃತಗೊಳ್ಳುತ್ತಿದೆ ಎಂಬ ಮಾತೊಂದು ಕೇಳಿಬರುತ್ತಿದೆ. ಸಾಂಸ್ಕೃತಿಕ ಪಲ್ಲಟಗಳು ಈ ರೀತಿಯಾದರೆ ಭಕ್ತರು ಸುಮ್ಮನಿರುವುದು ಅಸಾಧ್ಯ. ಈ ತರಹದ ಸಾಂಸ್ಕೃತಿಕ ಬದಲಾವಣೆಗಳು ಶಿರಸಂಗಿಯಲ್ಲಿ ಅಪರೂಪವೆನಿಸುತ್ತವೆ.

ಶಿರಸಂಗಿಯಲ್ಲಿ ಆರಂಭದಿಂದಲೂ ಉಪನಯನ ಕಾರ್ಯಗಳು ಜಾತ್ರೆಯ ಸಂದರ್ಭದಲ್ಲಿ ಜರುಗುತ್ತವೆ. ಇಂದಿಗೂ ಉಪನಯನ ಕಾರ್ಯಗಳು ಮುಂದುವರೆದಿವೆ. ಇದರ ಜೊತೆಗೆ ಮದುವೆ ಕಾರ್ಯಗಳು ಸಾಗುತ್ತಿವೆ. ಬಡ ಮತ್ತು ಮಧ್ಯಮ ವರ್ಗದ ಕುಶಲಕರ್ಮಿ ಕುಟುಂಬದವರು ಶಿರಸಂಗಿ ಕಾಳಮ್ಮನ ಸನ್ನಿಧಿಯಲ್ಲಿ ಮದುವೆ ಕಾರ್ಯಗಳನ್ನು ನೆರವೇರಿಸುತ್ತಾರೆ. ಇದರಿಂದಲೂ ಶಿರಸಂಗಿ ಕಾಳಮ್ಮನ ದೇವಾಲಯವು ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಲವಾರು ಸುಧಾರಣೆಗಳನ್ನು ಕಾಣುತ್ತಿವೆ. ೫೦ ವರ್ಷಗಳ ಹಿಂದೆ ನೂರಾರು ಕುಶಲಕರ್ಮಿಗಳ ದರ್ಶನಕ್ಕೆ ಕಾದು ಕುಳಿತಿದ್ದ ಶಿರಸಂಗಿ ಕ್ಷೇತ್ರವು ಇಂದು ಲಕ್ಷಾಂತರ ರೂಪಾಯಿಗಳೊಂದಿಗೆ ಲಕ್ಷಾಂತರ ಕುಶಲಕರ್ಮಿ ಬಂಧುಗಳ ಆರ್ಥಿಕ ಸುಧಾರಣೆಯ ಸಾಂಸ್ಕೃತಿಕ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. ಉತ್ತರ ಕರ್ನಾಟಕದಲ್ಲಿ ಕುಶಲಕರ್ಮಿಗಳ ನಾಲಿಗೆಯಲ್ಲಿದ್ದ ಮೊಟ್ಟಮೊದಲ ಆರಾಧನ ಕೇಂದ್ರವಾಗಿದೆ. ಶಿರಸಂಗಿ ಎಂದರೆ ಕುಶಲಕರ್ಮಿಗಳು; ಕುಶಲಕರ್ಮಿಗಳೆಂದರೆ ಕಾಳಮ್ಮ ಎಂಬ ಧಾರ್ಮಿಕ ಸಾಂಸ್ಕೃತಿಕ ಮನೋಭಾವ ಶಿರಸಂಗಿ ಕ್ಷೇತ್ರದಲ್ಲಿ ತುಂಬಿದೆ.

ಕುಶಲಕರ್ಮಿಗಳ ಕೇಂದ್ರ ಸ್ಥಾನ : ಶಿರಸಂಗಿ

ಶಿರಸಂಗಿಯು ಪ್ರಾಚೀನ ಕಾಲದಿಂದಲೂ ಕುಶಲಕರ್ಮಿಗಳ ನೆಲೆಯಾಗಿದೆ. ಕುಶಲಕರ್ಮಿಗಳು ವಿಶ್ವದ ಕಲೆಗಳ ಅಧಿಪತಿಗಳಾಗಿದ್ದಾರೆ. ಇವರ ಕಲೆಯ ರೂಪಗೊಳ್ಳುವಿಕೆಗೆ ಬೆಂಕಿಯ ಸಹಾಯ ಬೇಕಾಗುತ್ತದೆ. ಬೆಂಕಿಯನ್ನು ಕುಶಲಕರ್ಮಿಗಳು ಕಾಳಮ್ಮನ ಸ್ವರೂಪವೆಂದು ಭಾವಿಸಿರುವುದರಿಂದ ಕಾಳಿ ಇರುವಲ್ಲಿ ಕುಶಲಕರ್ಮಿಗಳು ಒಂದೆಡೆ ಸೇರಿರುವುದು ತಿಳಿದುಬರುತ್ತದೆ. ಕಾಳಿ ಇರುವ ಪ್ರದೇಶದಲ್ಲಿ ಉತ್ಪಾದಿಸುವ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ತಾಳಿಕೆ-ಬಾಳಿಕೆಯಿಂದ ಕೂಡಿರುತ್ತವೆ. ಈ ಕಾರಣವಾಗಿ ಕಾಳಮ್ಮನ ನೆಲೆ ಶಿರಸಂಗಿ ಕುಶಲಕರ್ಮಿಗಳ ಶ್ರಮದಾನದ ಕೇಂದ್ರವಾಗಿದೆ.

ಪ್ರಾಚೀನ ಕಾಲದಿಂದಲೂ ಕ್ಷೇತ್ರದಲ್ಲಿ ಬೆಳೆದು ಬಂದ ನಂಬಿಕೆ, ಸಂಪ್ರದಾಯಗಳು ಶಿರಸಂಗಿಯಲ್ಲಿ ಇಂದಿಗೂ ಮುಂದುವರಿಯುತ್ತಿವೆ. ಶಿರಸಂಗಿ ಕ್ಷೇತ್ರಕ್ಕೆ ಕುಶಲಕರ್ಮಿಗಳು ಹೋಗಿ ಬಂದರೆ ಅವರಲ್ಲಿ ಆತ್ಮ ಸಂತೃಪ್ತಿಯ, ಧನ್ಯತಾ ಭಾವ ಮೂಡುತ್ತದೆ. ಶಿರಸಂಗಿ ಕ್ಷೇತ್ರದ ಮಹಿಮೆಯೇ ಅಂಥದ್ದು, ಕ್ಷೇತ್ರಕ್ಕೆ ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯಿರುವುದು ಕ್ಷೇತ್ರದ ಹಿರಿಮೆಯನ್ನು ಹೆಚ್ಚಿಸಿದೆ. ಪವಿತ್ರ ಕ್ಷೇತ್ರಕ್ಕೆ ಹೋಗಿಬರುವ ಈ ಪರಿಕಲ್ಪನೆ ಅನಾದಿಕಾಲದಿಂದಲೂ ಬೆಳೆದು ಬಂದಿದೆ. ಶಿರಸಂಗಿ ಕ್ಷೇತ್ರ ದರ್ಶನದಿಂದ ಕುಶಲಕರ್ಮಿಗಳಿಗೆ ಒಂದಿಲ್ಲೊಂದು ಲಾಭ ಆಗಿರುತ್ತದೆ. ಆದರೆ ಯಾವ ರೀತಿಯಲ್ಲಿ ಲಾಭವಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಕಷ್ಟ. "ಶ್ರೀ ಕ್ಷೇತ್ರ ಅಲ್ಲಿಯ ದೇವರ ಮೂರ್ತಿ, ಸುತ್ತಲಿನ ನಿಸರ್ಗ, ಪರ್ವತ, ನದಿ, ಸರೋವರ ಮೊದಲಾದ ಭಗವಂತನ ಕುರುಹುಗಳನ್ನು ದರ್ಶನ ಮಾಡದೆ ಇರುವಕಣ್ಣುಗಳು ನವಿಲುಗರಿಯಲ್ಲಿರುವ ಕಣ್ಣುಗಳಿಗೆ ಸಮಾನ;

ಭಗವಂತನ ಕ್ಷೇತ್ರಗಳಿಗೆ ಹೋಗದಿರುವ ಮನುಷ್ಯನ ಕಾಲುಗಳು ಮರದ ಕಾಲುಗಳಿಗೆ ಸಮಾನ ಎಂದು ಶ್ರೀ ಮದ್ಭಗವತ್‌ಗೀತೆಯಲ್ಲಿ ಶುಕಮುನಿಗಳು ಪರೀಕ್ಷಿತ ರಾಜನಿಗೆ ಉಪದೇಶ ಮಾಡಿದ್ದಾರೆ. ಭಗವಂತ ಅಥವಾ ಭಗವತಿ, ದುರ್ಗಾ, ಕಾಳಿ ಈ ಎಲ್ಲ ಹೆಸರುಗಳಲ್ಲಿದ್ದ ಶಕ್ತಿ ಒಂದೇ.

ಕಾಳಮ್ಮನ ದೇವಸ್ಥಾನ ಪವಿತ್ರವಾದದ್ದು, ಆರೋಗ್ಯಕರ ಪರಿಸರ ಹೊಂದಿದೆ. ಇಲ್ಲಿ ಸುಸೂವ ಶ್ರೀ ಗಂಧಯುತ ಗಾಳಿ, ಬೇಧವೆನಿಸದ ನೀರು, ಏಕಾಗ್ರತೆಗೊಳಿಸುವ ಅವ್ವನ ಸ್ಮರಣೆಯ ಮಂತ್ರ ಘೋಷಗಳು, ಕಣ್ಣುಗಳಿಗೆ ಆನಂದ ಉಂಟು ಮಾಡುವ ಕಾಳಮ್ಮನ ಮೂರ್ತಿ ಇವೆಲವೂ ಭಕ್ತ ಕುಶಲಕರ್ಮಿ ಭಾಂಧವರನ್ನು ಉಲ್ಲಸಿತರನ್ನಾಗಿಸುತ್ತವೆ. ಕುಶಲಕರ್ಮಿಗಳಲ್ಲಿ ಚೈತನ್ಯ ಉಂಟುಮಾಡುತ್ತದೆ. ಆಧ್ಯಾತ್ಮಿಕ ಮನೋಧರ್ಮ ಬೆಳೆಯುವುದರ ಜೊತೆಗೆ ಮಾಡುವ ಕಾಯಕದಲ್ಲಿ ಪರಿಶುದ್ಧತೆ ಕಂಡುಬರುತ್ತದೆ. ಶಿರಸಂಗಿ ಕ್ಷೇತ್ರದಲ್ಲಿ ತಪಸ್ಸು, ಧ್ಯಾನ ಜಪ-ತಪ-ವ್ರತಾದಿಗಳು ನಿರಂತರವಾಗಿರುತ್ತವೆ. ತಪೋಭೂಮಿಯಲ್ಲಿ ದೈವತ್ವ ಘನೀಭವಿಸಿರುತ್ತದೆ. ಹೀಗಾಗಿ ಕಾಳಮ್ಮನ ದರ್ಶನದಿಂದಾಗಿ ಪುನೀತತೆ ಭಾವ ಪ್ರತಿಯೊಬ್ಬ ಕುಶಲಕರ್ಮಿ ಬಾಂಧವರಲ್ಲಿ ಕಂಡುಬರುತ್ತದೆ.

ಪ್ರಾಚೀನ ಕಾಲದಲ್ಲಿ ಶಿರಸಂಗಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ ಕುಶಲಕರ್ಮಿಗಳು ಕಾಲಾಂತರದಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ಸ್ಥಳಾಂತರಗೊಂಡು ನೆಲೆಗೊಂಡಿದ್ದಾರೆ. ದೇಶದ ಬೇರೆ ಬೇರೆ ಮೂಲೆಯಲ್ಲಿದ್ದ ಕುಶಲಕರ್ಮಿಗಳು ಶಿರಸಂಗಿಗೆ ಬರುವುದೆಂದರೆ ಮಗಳು ತವರಿಗೆ ಬಂದಂತೆ. ಕುಶಲಕರ್ಮಿಗಳ ಪೂರ್ವಜರ ತಾಣ ಶಿರಸಂಗಿ ಇಲ್ಲಿ ಒಮ್ಮೆಯಾದರೂ ಬಂದು ಹೋದರೆ ಕಸಬುದಾರನಿಗೆ ಸಮಾಧಾನವೆನಿಸುತ್ತದೆ. ಕಾಳಮ್ಮನ ದರ್ಶನ ಪಡೆದುಕೊಂಡಾಗ ಆತ್ಮಾನಂದವಾಗುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಕುಶಲಕರ್ಮಿಗೆ ಕೈತುಂಬ ಕೆಲಸ ದೊರೆಯುತ್ತದೆ ಎಂಬ ನಂಬಿಕೆ ಕುಶಲಕರ್ಮಿ ಬಂಧುಗಳಲ್ಲಿದೆ.

ಕಾಳಮ್ಮ 'ಚವುಕ್ಷಷ್ಠಿ ಕಳಾನ್ವಿತೆ' ಸಕಲ ಕಲೆಗಳ ಸಂಗಮ ಅವಳು ನೆಲೆಸಿದ ತಾಣ ಕಲಾರಾಧನೆಯ ಪವಿತ್ರ ಕ್ಷೇತ್ರ, ಕಲೆಯ ಆರಾಧಕರು ಕುಶಲಕರ್ಮಿಗಳು ಹೀಗೆ ಶಿರಸಂಗಿ, ಕುಲಕಸಬುದಾರರಿಗೆ ಒಂದಕ್ಕೊಂದು ಸಾಂಬಂಧಿಕ ನೆಲೆಯಾಗಿದೆ. ಕುಲಕಸಬಿನ ಕಾರ್ಯಾಗಾರವಾಗಿದೆ. ಇಂದು ಕಾರ್ಯಾಗಾರ ದೇವಿಯ ಸನ್ನಿಧಿಯಲ್ಲಿ ಕಾಣುವುದಿಲ್ಲ ಆದರೆ ಶಿರಸಂಗಿಯ ಬೆಟ್ಟ ಕಲ್ಲು-ಮಣ್ಣು, ನೀರು, ಗಾಳಿ ಇವೆಲ್ಲವೂ ಕಾರ್ಯಾಗಾರದ ಇರುವಿಕೆಯ ಕುರುಹುಗಳನ್ನು ಹೇಳುತ್ತವೆ. ಕುಶಲಕರ್ಮಿ ಹೃನ್ಮನದಲ್ಲಿ ಶಿರಸಂಗಿ ಕುಶಲಕರ್ಮಿಗಳ ಮೂಲ ಕಾರ್ಯಾಗಾರವೆಂದು ಅಚ್ಚೊತ್ತಿದೆ. ಇದರಿಂದಾಗಿ ತಿಂಗಳು, ವರ್ಷಕ್ಕೆ ಒಮ್ಮೆಯಾದರು ಶಿರಸಂಗಿ ಕಾಳಮ್ಮನ ದೇವಸ್ಥಾನಕ್ಕೆ ಹೋಗಿಬರುವ ಕೈಂಕರ್ಯ ಕೈಗೊಳ್ಳುತ್ತಾರೆ.

ಶಿರಸಂಗಿಗೆ ಕುಶಲಕರ್ಮಿಗಳ ಗುರುತ್ವಾಕರ್ಷಣೆಯಿದೆ. ಕಾಳಮ್ಮ ತನ್ನಲ್ಲಿಯ ಕಲೆಗಳನ್ನು ಅದಿಷ್ಠಾನಗೊಳಿಸುವ ಕಸಬುದಾರರನ್ನು ಸೆಳೆಯುವ ಶಕ್ತಿ ಹೊಂದಿದ್ದಾಳೆ. ಅದು ತಾಯಿ–ಮಗನ ಸಂಬಂಧಿಕ ಸೆಳೆತವಾದರೂ ಗುರು–ಶಿಷ್ಯರ ವೃತ್ತಿ ಕೌಶಲ್ಯದ ಸೆಳೆತ ಎಂಬುದು ಮೂಲವೆನಿಸುತ್ತದೆ. ಕುಶಲಕರ್ಮಿ ಹತ್ತಾರು ಮನೆಗಳನ್ನು ತಿರುಗಿದರೂ ಕೊನೆಗೊಮ್ಮೆ ತನ್ನ ಮೂಲ ಮನೆಗೆ ಬರುವಂತೆ, ಕಸಬುದಾರ ದುಡಿಮೆಗಾಗಿ ಎಲ್ಲೆ ಇದ್ದರೂ ಕಸಬಿನ ಹಿನ್ನೆಲೆಯಲ್ಲಿ ಒಮ್ಮೆಯಾದರೂ ಶಿರಸಂಗಿಗೆ ಬಂದು ಕಾಳಮ್ಮನಲ್ಲಿ ಪ್ರಾರ್ಥಿಸಿಕೊಳ್ಳುವುದು ಮುಖ್ಯವಾಗಿದೆ. ಕುಶಲಕರ್ಮಿಗಳನ್ನು ಶಿರಸಂಗಿಯಲ್ಲಿ ಕಾಳಮ್ಮ ಒಂದೆಡೆ ಕೂಡಿಸಿ ತಾನೇನು ಹೇಳುವುದಿಲ್ಲ ಆದರೆ ಮುಂದೆ ಮಾಡುವ ಕಾಯಕಕ್ಕೆ ಪ್ರೇರಕಳಾಗುತ್ತಾಳೆ.

ಶಿರಸಂಗಿ ಕಾಳಮ್ಮನ ಪ್ರೇರಣೆ ಕುಶಲಕರ್ಮಿಗೆ ದೊರೆಯುವುದೆಂದರೆ ಅದೊಂದು ಸೌಭಾಗ್ಯವೇ ಸರಿ. ಪ್ರೇರಣೆ ಇಲ್ಲದೇ ಯಾವೊಂದು ಕಾರ್ಯವು ಸಾಗದು. ಕುಶಲಕರ್ಮಿಗಳಿಗೆ ಶಿರಸಂಗಿ ಒಂದು ಪ್ರೇರಣಾ ಕೇಂದ್ರ ಎದ್ದೊಂದು ಘಳಿಗೆ ಯಾರ್‍ಯಾರ ನೆನೆಯಲಿ! ಎಂಬ ಜನಪದರ ಮಾತಿನಂತೆ ಕುಶಲಕರ್ಮಿ ಏಳುತ್ತಲೇ ಒಂದುಕ್ಷಣ ಶಿರಸಂಗಿ, ಕಾಳಮ್ಮ, ಕುಶಲಕಲೆ, ದುಡಿಮೆ, ಉತ್ಪಾದಿಸಲಿರುವ ವಸ್ತು, ಮಾರಾಟ ಕೌಶಲ್ಯ ಹೀಗೆ ನೆನಪುಗಳ ಸುರಿಮಳೆ ಕುಶಲಕರ್ಮಿಯಲ್ಲಿ ಬಂದು ಹೋಗುತ್ತವೆ. ಆದರೆ ಪ್ರಥಮವಾಗಿ ನೆನೆಯುವುದು ಶಿರಸಂಗಿ ಕಾಳಮ್ಮನನ್ನು ಕಸಬಿನಿಂದ ಬದುಕನ್ನು ರೂಪಿಸುವ ಕಲಾದೇವತೆಯನ್ನು ಎದ್ದೊಂದು ಘಳಿಗೆ ನೆನೆದೇನ! ಎಂದು ಕುಶಲಕರ್ಮಿ ನಿತ್ಯದ ಕಸಬಿನ ಕುರಿತು ಆಲೋಚಿಸುತ್ತಾನೆ.

ಶಿರಸಂಗಿ ಶೃಂಗಋಷಿಯ ತಪೋಭೂಮಿ ಸಿದ್ಧಿ–ಪ್ರಸಿದ್ಧಿಯ ಸುಕ್ಷೇತ್ರ. ಈಗ ಅದು ಕುಶಲ ಕರ್ಮಿಗಳ ತಪಸ್ಸಿನ ಸಿದ್ಧಿ–ಪ್ರಸಿದ್ಧಿಯ ಕೇಂದ್ರ. ಋಷಿ–ಮುನಿಗಳಿಗೆ ಹಿಮಾಲಯ ಪರ್ವತವು ಪುಣ್ಯ ತಾಣವಾದರೆ, ಶಿರಸಂಗಿ ಪ್ರಾಚೀನ ಕಾಲದಿಂದಲೂ ಕುಶಲಕರ್ಮಿಗಳಿಗೆ ಪುಣ್ಯ ಕ್ಷೇತ್ರವಾಗಿದೆ. ಹೊಳೆಯದ ಆಲೋಚನೆಗಳೆಲ್ಲ ಹೊಳೆಯುತ್ತವೆ. ನಿಂತ ಕೆಲಸಗಳೆಲ್ಲ ಮುಂದೆ ಸಾಗುತ್ತವೆ. ಅದ್ಭುತವೆನಿಸುವ ಕಾರ್ಯಗಳ ಕುಲಕಸಬುದಾರರಿಂದ ಜರುಗುತ್ತವೆ. ಆ ಕೆಲಸವು ಇಡೀ ಊರಿಗೆ, ನಾಡಿಗೆ ಮಹತ್ವದ್ದೆನಿಸುತ್ತದೆ. ಮನೆಯ ಮಗನೆಂದೆನಿಸುತ್ತಿದ್ದ ಕುಶಲಕರ್ಮಿ ಊರಿನ ನಾಡಿನ ಮಗನಾಗಿ ಬೆಳೆಯುತ್ತಾನೆ. ಶಿರಸಂಗಿಗೆ ಅಂತಹ ಅಸಾಧಾರನೀಯ ಶಕ್ತಿಯಿದೆ. ಸಾಮಾನ್ಯವಾಗಿ ಮಣ್ಣಿಗೆ ಉತ್ಪಾದಿಸುವ ಶಕ್ತಿಯಿರುತ್ತದೆ. ಆದರೆ ಶಿರಸಂಗಿಯ ಪುಣ್ಯ ಭೂಮಿಗೆ ಅದ್ಭುತವಾದುದನ್ನು ಹುಟ್ಟಿಸುವ, ಕಟ್ಟುವ, ಮುರಿದುಕಟ್ಟುವ ಶಕ್ತಿಯನ್ನು ಕಾಳಮ್ಮ ದಯಪಾಲಿಸಿದ್ದಾಳೆ. ಈ ಕಾರಣವಾಗಿಯೇ ತಿಂಗಳಿಗೊಮ್ಮೆ, ವರ್ಷಕ್ಕೊಮ್ಮೆಯಾದರೂ ಕುಶಲಕರ್ಮಿ ಕಸಬಿನ ತಪೋನೆಲಕ್ಕೆ ಬಂದು ಹೋಗಬೇಕೆಂದು ಬಯಸುತ್ತಾನೆಂದು ಕ್ಷೇತ್ರಕ್ಕೆ ಆಗಿಮಿಸುವ ಕೆಲವು ಹಿರಿಯ ಕುಶಲಕರ್ಮಿಗಳು

ಅಭಿಪ್ರಾಯಿಸುತ್ತಾರೆ. ಶಿರಸಂಗಿಯ ನೆಲದ ಸ್ಪರ್ಷವಾದ ತಕ್ಷಣವೇ ಕಾಳಮ್ಮ ಸಾಕ್ಷಾತ್ಕರಿಸುತ್ತಿದ್ದಾಳೆಂಬಂತೆ ವೃತ್ತಿ ಕೌಶಲ್ಯಾತ್ಮಕ ಯೋಚನೆಗಳು ಅಪೂರ್ವ ವಸ್ತುರಚನಾ ವಿನ್ಯಾಸಗಳು ಕುಶಲಕರ್ಮಿಯೆ ಸೃತಿಪಟಲದಲ್ಲಿ ಚಿತ್ರೀತವಾಗತೊಡಗುತ್ತವೆ.

ಶಿರಸಂಗಿ ಕಾಳಮ್ಮನ ದರ್ಶನ ಪಡೆಯುವುದು ಎಂದರೆ ನೂರಾರು ವರ್ಷಗಳ ಕಾಲ ತಪಸ್ಸುಮಾಡಿ ದೇವರನ್ನು ಒಲಿಸಿಕೊಂಡ ಫಲಕ್ಕೆ ಸಮ. ಕಲೆಗಳ ಉತ್ತಮ ಫಲಗಳು ಕಾಳಮ್ಮ ಕಸಬುದಾರನಿಗೆ ಕೊಟ್ಟ ವರವಿದ್ದಂತೆ. ಕಾಳಮ್ಮನ ವರದಿಂದ ಕುಶಲಕರ್ಮಿ ವಿಶ್ವಪ್ರಸಿದ್ಧನಾಗಿ ಬೆಳೆಯುತ್ತಾನೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಎಲ್ಲ ರಂಗಗಳಲ್ಲಿಯೂ ಕುಶಲಕರ್ಮಿ ಕೀರ್ತಿವಂತನು, ವೃತ್ತಿ ಶ್ರೀಮಂತನಾಗುತ್ತಾನೆ. ಕಲಾಜ್ಞಾನದ ದಾನ ಮಾಡುವುದರೊಂದಿಗೆ ಕುಶಲಕರ್ಮಿ ಧನ-ಧಾನ್ಯದ ದಾನವನ್ನು ಕ್ಷೇತ್ರದ ಅಭಿವೃದ್ಧಿಗಾಗಿ ಮಾಡತೊಡಗುತ್ತಿದ್ದಾನೆ.

ಶಿರಸಂಗಿ ಕಾಳಮ್ಮನ ಪರಿಸರವು ಕಲೆಗಳ ಆಗರವಾಗಿದೆ. ಕಲೆಗಳ ಅನಾವರಣಗೊಳ್ಳಲು ಪ್ರೇರಕವಾಗಿ ಶಿರಸಂಗಿ ರೂಪಗೊಂಡಿದೆ. ಕುಶಲಕರ್ಮಿಗಳಿಗೆ ಕ್ಷೇತ್ರವು ಒಂದು ಕುಲಕಸಬಿನ ಕೇಂದ್ರವಾಗಿದೆ. ಕಸಬುದಾರನ ಸರ್ವಾಂಗೀಣ ಅಭಿವೃದ್ಧಿಗಾಗಿ ಶಿರಸಂಗಿ ಪಣತೊಟ್ಟು ನಿಂತಂತಿದೆ. ಕ್ಷೇತ್ರಕ್ಕೆ ಹೋಗಿಬಂದ ಮೇಲೆ ಕುಶಲಕರ್ಮಿಗಳಲ್ಲಿ ಇರುವ ಚಿಂತೆಗಳೆಲ್ಲ ಬಟ್ಟ ಬಯಲಾಗುತ್ತವೆ. ತೊಂದರೆ ತಾಪತ್ರಯಗಳು ನಿವಾರಣೆಯಾಗುತ್ತವೆ. ಸಾಮಾನ್ಯವಾಗಿ ರಾಜಕೀಯ ರಂಗವನ್ನು ಹೊರತುಪಡಿಸಿದರೆ ಕುಶಲಕರ್ಮಿ ಬಂಧುಗಳನ್ನು ಶಿರಸಂಗಿ ಕಾಳಮ್ಮ ಎಲ್ಲ ರಂಗಗಳಲ್ಲಿಯೂ ಮುಂಚೂಣಿಗೆ ತಂದಿದ್ದಾಳೆ ಎಂಬ ಭಕ್ತರ ನಂಬಿಕೆ ಅಪೂರ್ವವಾದದ್ದು.

ಕ್ಷೇತ್ರದಲ್ಲಿ ಸಾಗುತ್ತಿರುವ ನಿತ್ಯ ಅನ್ನಸಂತರ್ಪಣೆ, ಅಮವಾಸ್ಯೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳು ಆಧ್ಯಾತ್ಮಿಕ ಚಿಂತನ ದೇವಿ ಮಹಿಮೆ ಸಾರುವ ದೇವಿ ಮಹಾತ್ಮೆ ಪಠಣಗಳು, ಸಮುದಾಯದ ಸಾಧಕರನ್ನು ಗೌರವಿಸುವ ಮಹತ್ವದ ಕಾರ್ಯಗಳು ಈಗೀಗ ಶಿರಸಂಗಿ ಕ್ಷೇತ್ರದಲ್ಲಿ ನಿತ್ಯ ನಿರಂತರವಾಗುತ್ತಿವೆ. ಈ ಎಲ್ಲ ಹಿನ್ನೆಲೆಗಳು ಕುಶಲಕರ್ಮಿಗಳಲ್ಲಿ ಆತ್ಮ ಸಂತುಷ್ಟಿಯನ್ನು ತಂದುಕೊಡುವುದರಿಂದ ವಾರ, ತಿಂಗಳು ವರ್ಷದ ಅವಧಿಯನ್ನು ನಿರ್ಧಿಷ್ಟ ಪಡಿಸಿಕೊಂಡು ಕಾಳಮ್ಮನ ದರ್ಶನ ಪಡೆದುಕೊಳ್ಳಲು ಶಿರಸಂಗಿ ಕ್ಷೇತ್ರಕ್ಕೆ ಧಾವಿಸುತ್ತಿದ್ದಾರೆ. ನಿತ್ಯ ಕಾಯಕದಲ್ಲಿ ಕುಶಲಕರ್ಮಿ ತಾನು ಬಳಸುವ ಉಳಿ-ಬಾಚಿ, ಅಡಿಗಲ್ಲು, ಇಕ್ಕಳ, ಸುತ್ತಿಗೆ, ಕುಲುಮೆ ಮುಂತಾದ ಉಪಕರಣಗಳಲ್ಲಿ ಕಾಳಮ್ಮನನ್ನು ಕಂಡು ಹೃಣ್ಮನದಲ್ಲಿ ದೇವಿಯನ್ನು ಒಮ್ಮೆ ನೆನೆದು ಕಾಯಕ ಆರಂಭಿಸುತ್ತಿರುವುದು ಕಂಡುಬರುತ್ತದೆ. ಕಸಬಿನ ಉಪಕರಣಗಳಿಗೂ ಕಾಳಮ್ಮನಿಗೂ ಏಕೋಭಾವದ ಸಂಬಂಧವಿದೆ. ಉಪಕರಣಗಳೆಂದರೆ ಕಾಳಮ್ಮ; ಕಾಳಮ್ಮನೆಂದರೆ ಕಸಬಿನ ಉಪಕರಣಗಳು ಎನ್ನುವಷ್ಟು ಅವೆರಡರಲ್ಲಿಯೂ ಅಷ್ಟೊಂದು ತಾಧ್ಯಾತ್ಮತೆ ಬೆಳೆದಿದೆ. ಇಂದಿಗೂ ಕುಶಲಕರ್ಮಿ ನಿತ್ಯ ಅಮವಾಸ್ಯೆ,

ಯುಗಾದಿ ಸಂದರ್ಭದಲ್ಲಿ ಉಪಕರಣಗಳನ್ನು ಈ ಹಿನ್ನೆಲೆಯಲ್ಲಿ ಪೂಜಿಸುತ್ತಾನೆ. ಕೈಯಲ್ಲಿರುವ ಉಪಕರಣಗಳೇ ಕಾಳಮ್ಮ; ತಾನು ಕಾಯಕ ಮಾಡುತ್ತಿರುವ ಪ್ರದೇಶವೇ ಶಿರಸಂಗಿ ಎಂಬ ಭಾವನೆ ಕುಶಲಕರ್ಮಿಗಳೆಲ್ಲರಲ್ಲಿಯೂ ಮೂಡಿರುತ್ತದೆ. "ಗೊಲ್ಲರಹಳ್ಳಿ ಕಾಳಿಕಾ ದೇವಸ್ಥಾನದಲ್ಲಿ ಇಂದಿಗೂ ಪೂಜೆಗೊಳ್ಳುತ್ತಿರುವ ಹಳೆಕಾಲದ ಬೃಹತ್ ಅಡಿಗಲ್ಲು ತಂಡಾಸ ಇಕ್ಕಳುಗಳಂತಹ ಕಮ್ಮಾರಿಕೆಯ ಸಲಕರಣೆಗಳನ್ನು ಕಾಣಬಹುದು."[೩] ಹೀಗಾಗಿ ಕುಶಲಕರ್ಮಿಗಳಿಗೆ ಶಿರಸಂಗಿ ಪ್ರದೇಶ ವೃತ್ತಿಮೂಲವಾಗಿ ತಪಸ್ಸಿನ ಕ್ಷೇತ್ರವಾಗಿದೆ. ಕಾಳಮ್ಮ ಕಸಬಿನ ಶಕ್ತಿಯಾಗಿರುವುದರಿಂದ, ಕುಶಲಕರ್ಮಿಗಳು ಶಿರಸಂಗಿಯನ್ನು ಆತ್ಮೋದ್ಧಾರದ ಕೇಂದ್ರವನ್ನಾಗಿಸಿಕೊಂಡಿದ್ದಾರೆ. ಕಸಬಿನ ಮೂಲ ಶಕ್ತಿ ಪೀಠವಾಗಿರಿಸಿಕೊಂಡಿರುವುದು ಕುಶಲಕರ್ಮಿಗಳ ಉನ್ನತೀಕರಣದ ಸಂಕೇತ.

ಕಾಳಮ್ಮನ ಆರಾಧನೆ; ವ್ಯಾಪಾರಿ ಉದ್ಯಮ

ಆರಾಧನೆ ದೇವರನ್ನು ಪ್ರಾರ್ಥಿಸುವ ಒಂದು ಕ್ರಮ. ಪ್ರಾಚೀನ ಕಾಲದಿಂದಲೂ ಈ ಆರಾಧನೆ ಭಕ್ತರಲ್ಲಿ ಬೆಳೆದುಬಂದ ಪದ್ಧತಿ. ಕಾಳಮ್ಮನನ್ನು ಕುಶಲಕರ್ಮಿಗಳು ಆದಿಕಾಲದಿಂದಲೂ ತನ್ನ ಶಕ್ತ್ಯಾನುಸಾರ ಆರಾಧಿಸುತ್ತ ಬಂದಿದ್ದಾರೆ. ಆರಾಧನೆಗೆ ಭಕ್ತನಲ್ಲಿ ಒಂದು ಮೂಲ ದ್ರವ್ಯಬೇಕಾಗುತ್ತದೆ. ಅದುವೇ ಭಕ್ತಿ. ಭಕ್ತಿಯಿಲ್ಲದೆ ಪ್ರಾರ್ಥಿಸಿದರೆ ಅದನ್ನು ಯಾವ ಬಗೆಯಲ್ಲಿಯೂ ಆರಾಧನೆ ಎಂದು ಕರೆಯಲು ಸಾಧ್ಯವಿಲ್ಲ. ಭಕ್ತಿ ಅದೃಶ್ಯವಾದದ್ದು, ಅನಂತವಾದದ್ದು, ಅನಂತಶಯನನನ್ನು ಆದಿಶಕ್ತಿಯನ್ನು ಮೆಚ್ಚಿಸುವ ಸಾಧನೆಯ ಸಾಧನ ಹೃದಯದಲ್ಲಿ ಸೂಪ್ತವಾಗಿದ್ದು ಭಕ್ತನನ್ನು ಸದಾ ಜಾಗ್ರತನನ್ನಾಗಿ ಮಾಡುತ್ತಿರುತ್ತದೆ. ಭಕ್ತಿ ಸಮರ್ಪಣೆಗೆ ದೇವಾಲಯ ಪ್ರಾಶಸ್ತ್ಯವಾದ ಸ್ಥಳ. ದೇವಾಲಯದಲ್ಲಿರುವ ದೇವರಿಗೆ ಭಕ್ತಿ ಸಮರ್ಪಿಸುವುದಕ್ಕಾಗಿ ಭಕ್ತ ತೆರಳುತ್ತಾನೆ. ಭಕ್ತನ ಭಕ್ತಿಗನುಗುಣವಾಗಿ ಆರಾಧಿಸಿಕೊಳ್ಳುತ್ತಿರುವ ದೈವ, ಪ್ರತಿಫಲ ನೀಡುತ್ತದೆಂಬ ಭಾರತೀಯರ ಪರಿಕಲ್ಪನೆ ಅದ್ಭುತವೆನಿಸುತ್ತದೆ.

ದೇಗುಲಗಳಿಗೆ ಹೋಗುವ ಭಕ್ತ ಹಾಗೆ ಹೋಗಬಾರದೆಂಬ ಜನವಾಣಿಯೊಂದಿದೆ. ದೇವರನ್ನು ಆರಾಧಿಸಲು ಏನಾದರೂ ಒಂದು ದ್ರವ್ಯವನ್ನು ಒಯ್ಯಲೇಬೇಕು. ಇಲ್ಲವಾದರೆ ದೇವರಿಂದ ಪ್ರತಿಫಲವೇನು ? ದೊರೆಯಲಾರದು. "ಹ್ಯಾಂಗ ಬಂದಿ ನನ ಗುಡಿಗೆ; ಹಂಗ ಹೋಗ ನಿನ್ನ ಮನಿಗೆ" ಎಂದು ದೇವರು ವರ ಬದಲಾಗಿ ಶಾಪ ನೀಡುತ್ತಾನೆಂಬ ದೈವದ ಭಯಕ್ಕಾಗಿ ಭಕ್ತನಾದವನು ಹೂವು, ಹಣ್ಣು-ಹಂಪಲ ತೆಂಗಿನಕಾಯಿ, ಕರ್ಪೂರ, ಮಾಲೆ ಹೀಗೆ ಹಲವಾರು ದ್ರವ್ಯಗಳನ್ನು ಕಟ್ಟಿಕೊಂಡು ದೇವಾಲಯಕ್ಕೆ ತೆರಳುವ ರೂಢಿಬೆಳೆಸಿಕೊಂಡು ಬಂದದ್ದನ್ನು ಕಾಣುತ್ತೇವೆ.

ಶಿರಸಂಗಿ ಕಾಳಮ್ಮನ ಆರಾಧನೆಯೂ ಇದರಿಂದ ಹೊರತೇನಲ್ಲ ! ಕಾಳಮ್ಮನ ಸನ್ನಿಧಿಗೆ ಬರುವ ಕುಶಲಕರ್ಮಿ ಬಂಧುಗಳು ಹೀಗೆ ಒಂದಿಲ್ಲೊಂದು ದ್ರವ್ಯವನ್ನು ಆರಾಧಿಸಲು ತರುವ ರೂಢಿ ಬೆಳೆಸಿಕೊಂಡಿದ್ದಾರೆ. ಅದೃಶ್ಯವಾದ ಭಕ್ತಿ ಅಂತರಂಗದಲ್ಲಿದ್ದರೂ, ದೃಶ್ಯವಾದ ಕಾಯಿ-

ಕರ್ಪೂರ, ಹೂವು-ಹಣ್ಣು-ಹಂಪಲಾಧಿ ದ್ರವ್ಯಗಳಿಗೆ ಕುಶಲಕರ್ಮಿ ಕೊರತೆ ಮಾಡಲಿಲ್ಲ; ತನ್ನ ಶಕ್ತ್ಯಾನುಸಾರ ತೆಂಗಿನಕಾಯಿ, ಕರ್ಪೂರ, ಸಕ್ಕರೆ-ಪುಠಾಣಿ, ಉದಬತ್ತಿ, ಹೂವು ಅಥವಾ ಮಾಲೆ, ಬಾಳೆ ಹಣ್ಣು, ಸೀರೆ-ಕುಪ್ಪಸ ಒಡವೆ-ಬಂಗಾರ ಮೊದಲಾದ ಭಕ್ತಿ ದ್ರವ್ಯಗಳನ್ನು ಸಮರ್ಪಿಸಲು ಆರಂಭಿಸಿದನು. ಆರಾಧನೆಯ ಮೂಲ ದ್ರವ್ಯ ಭಕ್ತಿ, ಬಾಹ್ಯವಾಗಿ ಕಾಣುವ ಈ ಎಲ್ಲ ದ್ರವ್ಯಗಳ ಮುಂದೆ ನಗನ್ಯವಾಗತೊಡಗಿತು. ಭಕ್ತಿಗಿಂತ ಕಾಯಿ ಕರ್ಪೂರದಂತಹ ಬಹಿರಂಗದ ವಸ್ತು ಕಾಳಮ್ಮನ ಆರಾಧನೆಯ ಒಂದು ಪ್ರಮುಖ ಭಾಗವಾಗಿ ಶಿರಸಂಗಿ ಕ್ಷೇತ್ರದಲ್ಲಿ ಕಾಣತೊಡಗಿತು. ಅಸಂಖ್ಯಾತ ಕುಶಲಕರ್ಮಿಗಳ ಬರುವಿಕೆಯಿಂದ ಶಿರಸಂಗಿಯಲ್ಲಿ ಆರಾಧನೆಯ ವಸ್ತುಗಳು ಅತ್ಯಂತ ಅವಶ್ಯಕವೆನಿಸತೊಡಗಿದವು. ವಸ್ತುಗಳು ಶ್ರೀ ಕ್ಷೇತ್ರದಲ್ಲಿ ಬಂದು ಕುಳಿತುಕೊಂಡವು. ಕುಶಲಕರ್ಮಿಗಳನ್ನು ಕೈ ಮಾಡಿ ಕರೆಯಲಾರಂಭಿಸಿದವು. ತಾವು ಕಾಯಂ ಆಗಿ ಉಳಿದುಕೊಳ್ಳಲು ನೆರಳು ಮಾಡಿಕೊಂಡವು. ಆರಾಧನೆಯ ವಸ್ತುಗಳಿಗೆ ನೆರಳಾಗಿರುವವೇ ಅಂಗಡಿಗಳು ಇವುಗಳನ್ನು ಆರಾಧನೆಯ ಅಂಗಡಿಗಳು ಎನ್ನುವುದಕ್ಕಿಂತ ಆಧುನಿಕ ಸಂದರ್ಭದಲ್ಲಿ ವ್ಯಾಪಾರಿ ಅಂಗಡಿಗಳೆಂದು ಕರೆಯುವುದು ಉತ್ತಮ.

ಪ್ರಾಚೀನ ಕಾಲದಿಂದಲೂ ಕಾಳಮ್ಮ ಶಿರಸಂಗಿಯಲ್ಲಿ ಪೂಜಿತಗೊಳ್ಳುತ್ತ ಬಂದಿದ್ದಾಳೆ. ಅಂದು ಕುಶಲಕರ್ಮಿಗಳು ಅವಳ ದರ್ಶನಕ್ಕೆ ಕಾಲ್ನಡಿಗೆಯಿಂದ ಬರುತ್ತಿದ್ದರು. ತಮ್ಮಲ್ಲಿದ್ದ ಭಕ್ತಿಯನ್ನು ಸಮರ್ಪಿಸುತ್ತಿದ್ದರೂ ಬಾಹ್ಯವಾಗಿ ಕಾಣುವ ಆರಾಧನಾ ವಸ್ತುಗಳು ಶಿರಸಂಗಿಯಲ್ಲಿ ಅಂದು ಹೆಚ್ಚಾಗಿ ಕಂಡುಬರುತ್ತಿರಲಿಲ್ಲ. ಕುಶಲಕರ್ಮಿಗೆ ಕೊಂಡುಕೊಳ್ಳುವ ಶಕ್ತಿಯಿರಲಿಲ್ಲ. ಇದರಿಂದಾಗಿ ಶಿರಸಂಗಿ ದೇವಾಲಯ ಬಳಿ ಒಂದೂ ಅಂಗಡಿ ಕಾಣುತ್ತಿರಲಿಲ್ಲ. ಇಂದೂ ದೇವಾಲಯದ ಅಕ್ಕ-ಪಕ್ಕ ಎದುರಿಗೆ ಅಂಗಡಿಗಳ ಸಂಕೀರ್ಣವೇ ಏರ್ಪಟ್ಟಿದೆ. ೫೦ಕ್ಕೂ ಹೆಚ್ಚು ಕಾಯಿ ಕರ್ಪೂರದ ಅಂಗಡಿಗಳು ಕಾಣುತ್ತಿವೆ. ಇದರ ಜೊತೆಯಲ್ಲಿ ನಾವೇನು ಕಡಿಮೆ ಎನ್ನುವಂತೆ ಚಹಾದ ಅಂಗಡಿಗಳು ಎರಡು-ಮೂರು ತಲೆಯೆತ್ತಿವೆ. ದೇವಾಲಯಕ್ಕೆ ಹೋಗುವ ಕುಶಲಕರ್ಮಿ ಭಕ್ತರನ್ನು ಕೈ ಮಾಡಿ ಕರೆಯುತ್ತವೆ. ಕೆಲವೊಮ್ಮೆ ಸ್ಪರ್ಧೆಗಿಳಿಯುತ್ತಿವೆ. ಶಬ್ಧ ಮಾಲಿನ್ಯವುಂಟು ಮಾಡುತ್ತವೆ. ಯಾರು ಏನೇ ಅಂದು ಕೊಂಡರು. ಆರಾಧನಾ ವಸ್ತುವಿನ ಅಂಗಡಿಗಳು ತಮ್ಮ ಅರ್ಭಟಗಳನ್ನು ಮುಂದುವರೆಸಿರುತ್ತವೆ. ಕಾಳಮ್ಮನ ದರ್ಶನ ಪಡೆಯುವುದಕ್ಕಿಂತ ಮುಂಚೆ ಅಂಗಡಿಗಳ ದರ್ಶನ ಪಡೆಯುವುದು ಇಂದು ಅವಶ್ಯವಾಗಿದೆ. ದೇವಿಯ ದರ್ಶನಕ್ಕೆ ಸಮಯ ಕೊಡದಿದ್ದರೂ ದೇವಿಗೆ ಸಮರ್ಪಿಸುವ ವಸ್ತುಗಳನ್ನು ಪಡೆಯಲು ಅಂಗಡಿಗಳ ಮುಂದೆ ಕಾಯಬೇಕಾದ ಪರಿಸ್ಥಿತಿ ಇಂದು ಶಿರಸಂಗಿ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ದೇವಸ್ಥಾನಕ್ಕೆ ಕುಶಲಕರ್ಮಿ ಬಂಧುಗಳು ಬರುವುದೇ ವಿರಳ. ಬಂದರೆ ತಮ್ಮ ಊರು-ಮನೆಯಿಂದಲೇ ಸೀದಾ ತರುತ್ತಿದ್ದರು. ಶಿರಸಂಗಿಯ ಅಂಗಡಿಗಳನ್ನು

ಯಾರು ಅವಲಂಭಿಸುತ್ತಿರಲಿಲ್ಲ. ೧೯೭೦ರ ದಶಕದಲ್ಲಿ ಶ್ರೀ ಕ್ಷೇತ್ರಕ್ಕೆ ಭಕ್ತರು ಹೆಚ್ಚಾಗಿ ಬರುವುದು ಕಂಡುಬಂದಿತು. ಈಗಿನ ಬಸ್ ನಿಲ್ದಾಣದಿಂದ ದೇವಾಲಯಕ್ಕೆ ಹೋಗುವ ಪೇಟೆಯ ರಸ್ತೆಯಲ್ಲಿ ಅಕ್ಕ-ಪಕ್ಕ ಕೆಲವು ಅಂಗಡಿಗಳು ಹುಟ್ಟಿಕೊಂಡಿದ್ದವು. ಈಗಲೂ ಕೆಲವು ಉಳಿದುಕೊಂಡಿವೆ. ಊರೊಳಗಿನ ಅಂಗಡಿಗಳಲ್ಲಿಯೇ ಕಾಯಿ-ಕರ್ಪೂರ, ಸಕ್ಕರೆ- ಮಠಾಣಿಯಂತಹ ದ್ರವ್ಯಗಳನ್ನು ಖರೀದಿಸಲಾಗುತ್ತಿತ್ತು. ದೇವಾಲಯದ ಆವರಣದಲ್ಲಿ ಒಂದು ಕರ್ಪೂರದ ವಡೆಯೂ ಸಿಗುತ್ತಿರಲಿಲ್ಲ. ಏನಿದ್ದರೂ ಪೇಟೆಯಲ್ಲಿ ಖರೀದಿಸಬೇಕು. ಹೂವು-ಮಾಲೆಯನ್ನು ರಾಮದುರ್ಗ- ಸವದತ್ತಿ ಕಾಳಮ್ಮನ ದೇವಸ್ಥಾನಕ್ಕೆ ಹೋಗುವ ರಸ್ತೆಗಳ ವೃತ್ತದಲ್ಲಿ ಮಾತ್ರ ಕೊಂಡುಕೊಳ್ಳಬೇಕಿತ್ತು. ಪೇಟೆಯಲ್ಲಿ ಕರ್ಪೂರ ಮರೆತು ಹೋದರೆ ಮತ್ತೇ ತಿರುಗಿ ೩ ಕಿ.ಮೀ ಬರಬೇಕಾಗುತ್ತಿತ್ತು. ಪೇಟೆಯೊಳಗಿನ ಅಂಗಡಿಗಳೇ ೭೦ರ ದಶಕದಲ್ಲಿ ಕುಶಲಕರ್ಮಿ ಬಾಂಧವರನ್ನು ಸ್ವಾಗತಿಸುತ್ತಿದ್ದವು. ಆದರೆ ೧೯೭೮ರ ನಂತರದಲ್ಲಿ ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿ ಬದಲಾವಣೆಯ ಗಾಳಿ ಮಂದವಾಗಿ ಎಲ್ಲ ಕಡೆಗೂ ಪಸರಿಸಿತು. ದೇಗುಲ ಆವರಣದ ಎದುರಿಗೆ ಬೀಸಿದ ಗಾಳಿಯಲ್ಲಿ ಎಲ್ಲೇಲ್ಲೋ ಇದ್ದ ವ್ಯಾಪಾರಿ ಅಂಗಡಿಗಳು ಹೇಳ-ಕೇಳದೆ ಬಂದು ನೆಲೆಯೂರಿದ್ದವು.

೯೦ರ ದಶಕ ಶಿರಸಂಗಿ ಕಾಳಮ್ಮ ದೇವಸ್ಥಾನ ಅಭಿವೃದ್ಧಿಯ ಆರಂಭದ ಶಕೆ: ಲಕ್ಷದೀಪೋತ್ಸವ ದಲ್ಲಿ ಒಂದು ವಾರದವರೆಗೆ ಸಕ್ರಿಯವಾಗಿದ್ದ ಅಂಗಡಿಗಳು ಅನಂತರದಲ್ಲಿ ಮಂಗಳವಾರ, ಶುಕ್ರವಾರ, ಅಮವಾಸ್ಯೆ ದಿನಗಳಲ್ಲಿ ಕುಶಲಕರ್ಮಿ ಬಾಂಧವರನ್ನು ಸ್ವಾಗತಿಸಲು ಮುಂದಾದವು. ೭ ವರ್ಷಗಳಲ್ಲಿ ನೂರಾರು ಕುಶಲಕರ್ಮಿಗಳು ಸೇರುತ್ತಿದ್ದ ಶಿರಸಂಗಿಯಲ್ಲಿ ಸಾವಿರಾರು, ಲಕ್ಷಾಂತರ ಜನಸೇರಲು ಆರಂಭಿಸಿದರು. ಪೇಟೆಯ ಅಂಗಡಿಗಳಲ್ಲಿ ವಸ್ತುಗಳನ್ನು ಖರೀದಿಸುವುದು ನಿಂತುಹೋಯಿತು. ದೇವಾಲಯ ಎದುರಿನ ಅಂಗಡಿಗಳಲ್ಲಿ ವಸ್ತುಗಳು ಲಭಿಸತೊಡಗಿದವು. ಮಾಲೆ ಮಾರುವವರು ದೇವಾಲಯ ಪೂರ್ವ ದಿಕ್ಕಿನ ದ್ವಾರಬಾಗಿಲದ ಉತ್ತರದ ಪವುಳಿಯಲ್ಲಿ ಹೂವು-ಮಾಲೆಗಳನ್ನು ಮಾರಾಟ ಮಾಡಲು ಆರಂಭಿಸಿದರು. ಅರಿಷಿನ-ಕುಂಕುಮ, ಜನಿವಾರ ಮಾರಾಟಗಾರರು ಲಕ್ಷದೀಪೋತ್ಸವ ಸ್ಥಂಭದ ಬಳಿ ಹಾಜರಾದರು ಒಟ್ಟಾಗಿ ಕಾಳಮ್ಮನ ಆರಾಧನೆಗೆ ಶಿರಸಂಗಿ ದೇವಾಲಯದ ಆವರಣದಲ್ಲಿ ಯಾವ್ಯಾವ ವಸ್ತುಗಳು ಅವಶ್ಯಕವೆನಿಸುತ್ತಿದ್ದವೊ? ಅವೆಲ್ಲವೂ ದೊರೆಯಲಾರಂಭಿಸಿದವು. ಆರಾಧನ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳು ಹೊಸ ಸಹಸ್ರಮಾನದ ಸಂದರ್ಭದಲ್ಲಿ ವ್ಯಾಪಾರೋದ್ಯಮದ ಕೇಂದ್ರವಾಗಿ ಪರಿವರ್ತನೆಯಾಗತೊಡಗಿದವು.

ಶಿರಸಂಗಿಯಲ್ಲಿ ಶಾಶ್ವತವಾಗಿ ಲಕ್ಷಾಂತರ ಜನ ಸೇರುತ್ತಿರಬೇಕೆಂಬ ಉದ್ದೇಶದಿಂದ ೨೦೦೨ ಯುಗಾದಿ ಮಹೋತ್ಸವದೊಂದಿಗೆ 'ಶ್ರೀ ವಿಶ್ವಕರ್ಮ ಮಹೋತ್ಸವ'ವು ಆರಂಭವಾಯಿತು. ಅಂದಿನಿಂದ ಇಲ್ಲಿಯವರೆಗೆ ನಿತ್ಯ ಕುಶಲಕರ್ಮಿ ಬಾಂಧವರು ಶಿರಸಂಗಿ ಕಾಳಮ್ಮ ದೇವಸ್ಥಾನಕ್ಕೆ ಸಾಗರೋಪಾದಿಯಲ್ಲಿ

ಸೇರುತ್ತಾರೆ. ಇದರಿಂದಾಗಿ ದೇವಸ್ಥಾನದ ಸುತ್ತ-ಮುತ್ತಲಿನ ಅಂಗಡಿಕಾರರ ವ್ಯಾಪಾರ ಲಾಭದಾಯಕವಾಗಿ ನಡೆಯುತ್ತಿದೆ. ಅಂಗಡಿಗಳು ವಿಶ್ವಕರ್ಮ ಮಹೋತ್ಸವ ಜರುಗಿದಂದಿನಿಂದ ಇಲ್ಲಿಯವರೆಗೆ ಗಟ್ಟಿಯಾಗಿ ನೆಲೆಯೂರಿ ತಮ್ಮ ವ್ಯಾಪಾರಿ ಬೇರುಗಳನ್ನು ಆಳವಾಗಿ ಊರಿದ್ದಾವೆ. ಮುಂದಿನ ಹತ್ತಾರು ವರ್ಷಗಳಲ್ಲಿ ಅಂಗಡಿಕಾರರಿಗೆ ಈಗಿರುವ ವ್ಯಾಪಾರವನ್ನು ಶಾಶ್ವತಗೊಳಿಸಲು ವಾಣಿಜ್ಯ ಸಂಕೀರ್ಣಗಳು ನಿರ್ಮಾಣವಾಗುವ ಸಾಧ್ಯತೆಗಳಿವೆ. ಗೊಡಚಿ ವೀರಭದ್ರೇಶ್ವರ ದೇವಸ್ಥಾನ ಎದುರಿಗೆ ನಿರ್ಮಾಣಗೊಂಡ ವಾಣಿಜ್ಯ ಸಂಕೀರ್ಣದಂತೆ ಶಿರಸಂಗಿಯಲ್ಲಿ ಈ ವ್ಯಾಪಾರೋಧ್ಯಮದ ಕೆಲಸ ಆಗುವ ನಿರೀಕ್ಷೆಗಳಿವೆ.

ಯುಗಾದಿ ಮತ್ತು ವಿಶ್ವಕರ್ಮ ಮಹೋತ್ಸವಕ್ಕೆ ಸುಮಾರು ೨೦೦ ಮೇಲ್ಪಟ್ಟು ಅಂಗಡಿಗಳು ಸ್ಥಾಪಿತಗೊಂಡಿರುತ್ತವೆ. ಇವುಗಳ ಜೊತೆ ವರ್ಷಾನುಗಟ್ಟಲೆ ೫೦ಕ್ಕೂ ಹೆಚ್ಚು ಅಂಗಡಿಗಳು ಹಗಲಿರುಳು ತೆರೆದಿರುತ್ತವೆ. ಜಾತ್ರೆಯ ಸಂದರ್ಭದಲ್ಲಿ ದೇವಿಗೆ ಅರ್ಪಿಸುವ ಹೊಸಗೋಧಿ, ತೆಂಗಿನಕಾಯಿ, ಕಡಲೆ ಅರಿಷಿನ ಬೇರು, ಎಲೆ, ಅಡಿಕೆ, ಕರ್ಪೂರ, ಉದಬತ್ತಿ, ಚುರುಮುರಿ, ಬೆಂಡು-ಬೆತ್ತಾಸ, ಬಳೆ, ಬಟ್ಟೆ, ಮುತ್ತಿನ ಸರಗಳು, ಸಣ್ಣ ಪುಟ್ಟ ಚಹಾ ಮಾರುವವರು, ಬಜಿ ವ್ಯಾಪಾರಿ ಅಂಗಡಿಗಳು ಸಾವಿರಾರು ರೂಪಾಯಿ ಬಂಡವಾಳ ತೊಡಗಿಸಿ ಹತ್ತಾರು ಸಾವಿರ ರೂಪಾಯಿ ಲಾಭವನ್ನು ಹೊಂದುತ್ತಾರೆ. ನಿತ್ಯ ವಾರಾಟ ವಾಡುವ ಅಂಗಡಿಕಾರರು ಕಾಯಂ ಉದ್ಯೋಗ ಸ್ಥಾಪಿಸಿಕೊಂಡಿದ್ದಾರೆ. ನಾಡಿನ ಪ್ರಸಿದ್ಧ ಶಕ್ತಿ ಪೀಠಗಳಲ್ಲಿ ದೊರೆಯುವ ಮಾದರಿಯಲ್ಲಿ ಎಲ್ಲ ವಸ್ತುಗಳು ದೊರೆಯುವಂತಾಗಿದೆ. ಮಡಿ ವಸ್ತ್ರ, ಸೀರೆ-ಕುಪ್ಪಸ, ದೀಪದ ಎಣ್ಣೆ, ತೆಂಗಿನಕಾಯಿ-ಹಣ್ಣು, ಕರ್ಪೂರ, ಉದಬತ್ತಿ, ಅರಿಷಿನ ಕುಂಕುಮ ಹೀಗೆ ೧೦-೧೧ ಬಗೆಯ ಆರಾಧನಾ ವಸ್ತುಗಳನ್ನು ಒಂದು ಬಿದಿರಿನ ತಟ್ಟೆ ಬುಟ್ಟಿಯಲ್ಲಿ ವ್ಯವಸ್ಥಿವಾಗಿ ಮಾರಾಟವಾಗುತ್ತವೆ. ಒಂದು ತಟ್ಟೆ ಬುಟ್ಟಿ ಮಾರಾಟವಾದರೆ ನೂರೊಂದು ರೂಪಾಯಿ ಲಭಿಸುತ್ತದೆ. ದಿನಕ್ಕೆ ನೂರಾರು ಕುಶಲಕರ್ಮಿ ಬಂಧುಗಳು ದೇವಿಯ ದರ್ಶನ ಪಡೆಯಲು ಆಗಮಿಸುತ್ತಾರೆ. ವಾರದ ಮಂಗಳವಾರ ಮತ್ತು ಶುಕ್ರವಾರ ಹೆಚ್ಚಿನ ವ್ಯಾಪಾರವಾಗುತ್ತದೆ. ಇತ್ತೀಚೆಗೆ ಎಲ್ಲ ದಿನಗಳು ಅಂಗಡಿಕಾರರಿಗೆ ಲಾಭದಾಯಕ ವ್ಯಾಪಾರದ ದಿನಗಳಾಗಿವೆ.

ಅಂಗಡಿಕಾರರು ಪೂಜಾ ಸಾಮಗ್ರಿಗಳ ಜೊತೆಗೆ ಕಾಳಮ್ಮ, ಮೌನೇಶ್ವರ, ವಿಶ್ವಕರ್ಮ, ನಾಗಲಿಂಗ, ಪುಣ್ಯ ಪುರುಷರ, ಆದಿಶಕ್ತಿಯ ಫೋಟೋಗಳನ್ನು ಕಟ್ಟುಹಾಕಿಸಿ ಫೋಟೋಗೆ ಕೃತ್ರಿಮ ವಿದ್ಯುತ್ ಸಂಪರ್ಕಿಸಿ ಮಾರಾಟ ಮಾಡುತ್ತಿರುವುದು ಕಂಡುಬರುತ್ತಿದೆ. ಎಲ್ಲ ಅಂಗಡಿಕಾರರು ಒಂದೇ ರೀತಿಯಲ್ಲಿ ಲಾಭ ಪಡೆದುಕೊಳ್ಳಲು ಸಾಧ್ಯವಿಲ್ಲ. ಅವರವರ ವ್ಯಾಪಾರಿ ಮನೋಧರ್ಮಕ್ಕೆ ತಕ್ಕಂತೆ ಅಂಗಡಿಗಳ ವ್ಯಾಪಾರ ನಡೆಯುತ್ತದೆ. ಶೇ. ೩೦ ರಿಂದ ೩೫ ರಷ್ಟು ಲಾಭಾಂಶವನ್ನು ಅಂಗಡಿಕಾರರು ಪಡೆಯುತ್ತಾರೆ. ಅಂಗಡಿಗಳಿಗೆ ಯಾವುದೇ ಬಗೆಗಳಲ್ಲಿ ಅಂಗಡಿ ಕರ(Shoping Tax) ಇಲ್ಲದಿರುವುದು ಅಂಗಡಿಕಾರರಿಗೆ

ಅನುಕೂಲವಾಗಿದೆ. ಹೀಗಾಗಿ ವ್ಯಾಪಾರಿಗಳು ಅಂಗಡಿಗಳಿಗೆ ಬಾಡಿಗೆ ನೀಡುವುದಿಲ್ಲ. ಇದು ವ್ಯಾಪಾರಿಗಳಿಗೆ ಅನುಕೂಲವಾಗಿದೆ. ಬಹುತೇಕ ಅಂಗಡಿಕಾರರಲ್ಲಿ ವಿಶ್ವಕರ್ಮ ಸಮುದಾಯದವರು ಹೆಚ್ಚಿದ್ದಾರೆ. ಇತರ ಸಮುದಾಯದವರ ಅಂಗಡಿಗಳೂ ಇವೆ.

ಶಿರಸಂಗಿ ಕಾಳಮ್ಮನ ಆರಾಧನೆ ಒಂದೆಡೆ ನಿತ್ಯವೂ ಜರುಗುತ್ತಿದ್ದರೆ, ಇನ್ನೊಂದೆಡೆ ಅವಳ ಆರಾಧನೆಯಿಂದಾಗಿ ಸುಮಾರು ೫೦ ಕುಟುಂಬಗಳು ಜೀವನ ಕಟ್ಟಿಕೊಂಡಿವೆ. ಕ್ಷೇತ್ರಕ್ಕೆ ಕುಶಲಕರ್ಮಿಗಳು ಹೆಚ್ಚಾಗುತ್ತಿದ್ದಂತೆ, ಅಂಗಡಿಕಾರರ ವ್ಯಾಪಾರ ಚನ್ನಾಗಿರುತ್ತದೆ. ಯಾತ್ರಾರ್ಥಿಗಳ ಸಂಖ್ಯೆ ಕಡಿಮೆಯಿದ್ದಾಗ ವ್ಯಾಪಾರ ಕುಂಠಿತವಾಗಿರುತ್ತದೆ. ಮಳೆಗಾಲದಲ್ಲಿ ಸ್ವಲ್ಪ ಮಟ್ಟಿಗೆ ವ್ಯಾಪಾರ ಕಡಿಮೆಯಿರುತ್ತದೆ. ಬೇಸಿಗೆಯಲ್ಲಿ ಭರ್ಜರಿಯಿರುತ್ತದೆಂದು ವ್ಯಾಪಾರಸ್ಥರು ಹೇಳುತ್ತಾರೆ. ಇಲ್ಲಿಯ ಅಂಗಡಿಕಾರರಲ್ಲಿ ಪರಸ್ಪರ ಹೊಂದಾಣಿಕೆಯ ಗುಣವಿದೆ. ವೈರಿಗಳಂತೆ ವ್ಯಾಪಾರ ಮಾಡುತ್ತಾರೆ; ಸಂಬಂಧಿಕರಂತೆ ಕೂಡಿ ಬಾಳುತ್ತಾರೆ. ಯಾವ ಅಂಗಡಿಗೆ ಹೋಗಲಿ ಎಂದು ಕುಶಲಕರ್ಮಿ ಬಂಧುಗಳಿಗೆ ದಿಗಿಲು ಬಡಿಯುವಂತೆ ಅಂಗಡಿಕಾರರು ಸ್ಪರ್ಧೆ ಮಾಡುತ್ತಾರೆ. ಅಕ್ಕ-ಪಕ್ಕದ ಅಂಗಡಿಕಾರರಲ್ಲಿ ಚಿಲ್ಲರೆ ಅಥವಾ ವಸ್ತುಗಳ ಕೊರತೆ ಬಿದ್ದರೆ ಕೊಡು-ಕೊಳ್ಳುವಿಕೆ ಸಹಕಾರ ತತ್ವ ಪಾಲಿಸುತ್ತಾರೆ. ಈಗ ನಿತ್ಯ ಅನ್ನಸಂತರ್ಪಣೆ ಯಿರುವುದರಿಂದ ಅಂಗಡಿಕಾರರು ಮಧ್ಯಾಹ್ನ ಪ್ರಸಾದ ದೇವಸ್ಥಾನದಲ್ಲಿ ಸ್ವೀಕರಿಸಲು ಅನುಕೂಲವಿದೆ. ಹೀಗೆ ಕ್ಷೇತ್ರದಲ್ಲಿ ಕಾಳಮ್ಮನ ಆರಾಧನೆಯಿಂದ ಅಂಗಡಿಕಾರರ ಉಪಜೀವನ ಸಾಗುತ್ತಿದೆ. ಚಿಕ್ಕ-ಪುಟ್ಟ ವ್ಯಾಪಾರಗಳೇ ಮುಂದೊಂದು ದಿನ ಬೃಹತ್ ಉದ್ಯಮಗಳಾಗಿ ಬೆಳೆಯುತ್ತವೆ.

ಶಿರಸಂಗಿ ಕಾಳಮ್ಮ; ವಿಶ್ವಕರ್ಮ ವಿಕಾಸ ಸಂಸ್ಥೆ ಮತ್ತು ಪೂಜಾರಿಗಳು

ಶಿರಸಂಗಿ ಕಾಳಮ್ಮ ಕುಶಲಕರ್ಮಿಗಳ ದಿವ್ಯಶಕ್ತಿ ವಿಶ್ವದ ಕ್ರಿಯಾಕರ್ಮಗಳ ನಿಯಂತ್ರಕಿ. ವೇದಕಾಲದಿಂದಲೂ ಕಾಳಮ್ಮನನ್ನು ಆರಾಧಿಸಲಾಗುತ್ತಿದೆ. ನಿರಾಕಾರದಲ್ಲಿದ್ದ ದೇವಿ ಯಜ್ಞ-ಯಾಗಾದಿಗಳ ತಪೋಬಲಕ್ಕೆ ಕುಲಬಾಂಧವರಿಗೆ ಸಾಕ್ಷಾತ್ಕರವಾದವಳು. ಅನಂತರದಲ್ಲಿ ಅಮೂರ್ತದಿಂದ ಮೂರ್ತಿಯಾದಳು. ಶಿರಸಂಗಿಯಲ್ಲಿ ಪ್ರತಿಷ್ಠಾನಗೊಂಡಳು ಶಾಸ್ತ್ರಜ್ಞಾನ, ಕಲ್ಪನಾ ಶಕ್ತಿ, ಸೌಂದರ್ಯ ಪ್ರಜ್ಞೆಯುಳ್ಳ ಶಿಲ್ಪಾಚಾರರು ಕಾಳಮ್ಮನಿಗೆ ದೇಗುಲ ನಿರ್ಮಿಸುವ ಮೂಲಕ ಭಕ್ತರ ಆರಾಧನಾ ಕೇಂದ್ರವನ್ನಾಗಿ ಮಾಡಿದರು. ದೇವಾಲಯ ಮತ್ತು ಕಾಳಮ್ಮನ ಮೂರ್ತಿ ವೈದಿಕ ಸನಾತನ ಸಂಸ್ಕೃತಿಯ ಪ್ರತೀಕವಾಯಿತು. ಸಾಮಾನ್ಯ ಜನನಿತ್ಯ ಪೂಜಿಸಲು, ಭಕ್ತಿ ಸಮರ್ಪಿಸುವ ಶಾಕ್ತ ಕೇಂದ್ರವಾಯಿತು.

ಶಿರಸಂಗಿಯಲ್ಲಿ ದೇವಾಲಯ ನಿರ್ಮಾಣವಾದ ಮೇಲೆ ನಿತ್ಯ ಪೂಜೆಗಾಗಿ ಅರ್ಚಕ ಅಥವಾ ಪೂಜಾರಿಗಳು ನೇಮಕಗೊಂಡರು. ಭಕ್ತನಿಂದ ದೇವತೆಗೊಂದು ಆಲಯ ನಿರ್ಮಿಸಿ, ದೇವ-ಭಕ್ತನ ಜೊತೆ ಪೂಜಾರಿಗಳು ಶಿರಸಂಗಿ ಕ್ಷೇತ್ರದಲ್ಲಿ ಕಾಳಮ್ಮನ ಆರಾಧಕರಾದರು. ದೇವಿಯ ಆರಾಧನೆ

ನಿರಂತರವಾಗಿ ನಡೆಯುವುದರ ಕುರಿತು ರಾಜರುಗಳು, ಸಾಮಂತರು, ಮಾಂಡಳಿಕರು, ದೇಸಾಯರು ಜವಾಬ್ದಾರಿ ತೆಗೆದುಕೊಂಡರು. ಕಲ್ಯಾಣ ಚಾಲುಕ್ಯ ಸಾಮ್ರಾಟ ಜಗದೇಕಮಲ್ಲ ಮತ್ತು ಆತನ ಸಾಮಂತ ಕೇಶಿಮಯ್ಯ, ಕಲ್ಯಾಣ ಚಾಲುಕ್ಯರ ಅಭಿನವಮಲ್ಲ ನಾಲ್ಕನೆಯ ವೀರಸೋಮೇಶ್ವರ, ಸಾಮಂತ ಹಬ್ಬೆನಾಯಕ, ಬಾದಾಮಿ ಚಾಲುಕ್ಯರು, ಮರಾಠಾ-ಪೇಶ್ವೆ, ರಾಮದುರ್ಗ ಸಂಸ್ಥಾನ ಮತ್ತು ಜಾಯಪ್ಪ, ಲಿಂಗಪ್ಪ, ಲಿಂಗರಾಜ ಸ್ಥಾನ ಬೆಳೆಯುತ್ತ ಬಂದಿತು. ೧೯೦೬ರಲ್ಲಿ ಲಿಂಗರಾಜ ದೇಸಾಯರ ನಿಧನಾನಂತರ ಬ್ರಿಟಿಷರ ಸುಪರ್ದಿಯಲ್ಲಿ ದೇವಸ್ಥಾನವು ಅಭಿವೃದ್ಧಿ ಕಾರ್ಯಗಳ ಕನಸಿನ ಮೂಟೆ ಹೊತ್ತುಕೊಂಡು ಮಳೆಗಾಲ, ಚಳಿಗಾಲ, ಬೇಸಿಗೆಯನ್ನದೆ ನಿಂತಿತು.

ಕಾಳಮ್ಮ ದೇವಾಲಯ ನಿರ್ಮಾಣದಲ್ಲಿ ರಾಜ-ಮಹಾರಾಜರು, ಭಕ್ತರು, ಪೂಜಾರಿ ಈ ಮೂರು ವರ್ಗಗಳು ಸಕ್ರಿಯವಾಗಿ ಕಾರ್ಯಪ್ರವರ್ತವಾಗಿವೆ. ರಾಜ-ಮಹಾರಾಜರುಗಳ ಕಾಲದಲ್ಲಿ ಶಿರಸಂಗಿ ಕಾಳಮ್ಮನ ದೇವಸ್ಥಾನ ನಿರ್ವಹಣೆಯ ಆಡಳಿತ ವ್ಯವಸ್ಥೆಯನ್ನು ಅರಸರು ನೋಡಿಕೊಳ್ಳುತ್ತಿದ್ದರು. ಆದರೆ ಸ್ವಾತಂತ್ರ್ಯ ನಂತರದಲ್ಲಿ ದೇವಾಲಯದ ಆಡಳಿತ ವ್ಯವಸ್ಥೆ ನಿಂತು ಹೋಯಿತು. ಭಕ್ತ ಮತ್ತು ಪೂಜಾರಿ ಎರಡು ವರ್ಗಗಳು ಪರಂಪರಾಗತವಾಗಿ ಉಳಿದುಕೊಂಡವು. ಆದರೆ ಆಡಳಿತ ವರ್ಗ ರಾಜತ್ವದಿಂದ ಪ್ರಜಾಪ್ರಭುತ್ವಕ್ಕೆ ತಿರುಗಿದ ಮೇಲೆ ಬದಲಾಗುವುದು, ಮರು ಹುಟ್ಟುವುದು ಅನಿವಾರ್ಯವಾಯಿತು. ಶಿರಸಂಗಿ ಪರಿಸರದಲ್ಲಿ ಕೇವಲ ಎರಡೇ ಎರಡು ಒಲೆಗುಂಡುಗಳಿಂದ ವಿಶ್ವಕರ್ಮ ಸಮುದಾಯವೆಂಬ ಪರಿಪಕ್ವ ಅನ್ನ ಬೆಯಿಸಲು ಸಾಧ್ಯವಾಗಲಿಲ್ಲ. ಆಡಳಿತವೆಂಬ ಮತ್ತೊಂದು ಒಲೆಗುಂಡಿಗಾಗಿ ಹಲವು ದಶಕಗಳವರೆಗೆ ಕಾಯಬೇಕಾಯಿತು.

ಶಿರಸಂಗಿ ಕಾಳಮ್ಮ ಭಕ್ತರ ದೂರವಿರುವಿಕೆಯಿಂದ ದೇವಾಲಯದಲ್ಲಿಯ ಮೂಲಭೂತ ಸೌಲಭ್ಯಗಳನ್ನು ಕಾಣದಂತಹ ಸ್ಥಿತಿಯಲ್ಲಿ ದೇವಿ ಉಳಿಯಬೇಕಾಯಿತು. ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ದೇಸಾಯರ ಕಾಲದಿಂದ ನಿಂತು ಹೋದವು. ಸಮಾಜದಲ್ಲಿ ಸಂಘಟನೆಗಳು ಮೂಡದಾದವು. ದೇವಾಲಯದ ಸುತ್ತ-ಮುತ್ತೆಲ್ಲ ಮುಳ್ಳುಕಂಟಿನ ವಾತಾವರಣ, ನೀರು-ಬೆಳಕಿಲ್ಲದೆ ಕತ್ತಲೆಯ ಸ್ಥಿತಿಯಲ್ಲಿ ಕ್ಷೇತ್ರ ಮುಂದುವರೆಯ ಬೇಕಾಯಿತು. ಸಮಾಜದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ರಂಗಗಳಲ್ಲಿ ಅಭಿವೃದ್ಧಿಯನ್ನು ಕುಶಲಕರ್ಮಿ ಬಾಂಧವರು ಹೊಂದು ವುದು ಅವಶ್ಯವಾಗಿತ್ತು. ಮುಳುಗುವವರಿಗೆ ಆಸರೇಗೋಲು ಎಂಬಂಥ ಸಂದಿಗ್ಧ ಸ್ಥಿತಿಯಲ್ಲಿರುವಾಗ ಹುಟ್ಟಿಕೊಂಡ ಸಂಘಟನೆಯೇ "ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ, ಶಿರಸಂಗಿ".

ಶಿರಸಂಗಿ ಕಾಳಮ್ಮನ ದೇವಾಲಯ ಮತ್ತು ಸಮಸ್ತ ವಿಶ್ವಕರ್ಮ ಕುಶಲಕರ್ಮಿ ಬಾಂಧವರ ಸರ್ವಾಂಗೀಣ ಅಭಿವೃದ್ಧಿಗಾಗಿ ಪಣತೊಟ್ಟು "ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯ ೧೯೭೦ರಲ್ಲಿ ಶಿರಸಂಗಿಯಲ್ಲಿ ಹುಟ್ಟುಕೊಂಡಿತು. ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ

ಬಳಲುತ್ತಿದ್ದ ಕ್ಷೇತ್ರದಲ್ಲಿ ಎಲ್ಲ ಸೌಕರ್ಯಗಳನ್ನು ಭಕ್ತರಿಗೆ ಒದಗಿಸಬೇಕೆಂಬ ಧ್ಯೇಯೋದ್ಧೇಶವನ್ನು ಸಂಸ್ಥೆ ಹೊಂದಿತು. ಸಮಾಜದ ಕೆಲವು ಉತ್ಸಾಹಿಗಳು ಹುಬ್ಬಳ್ಳಿಯ ಶ್ಯಾಂಡಿಲಾಶ್ರಮದ ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಜಿ ಅವರ ಮಾರ್ಗದರ್ಶನ ಪಡೆದುಕೊಂಡು ಸಂಘಟನೆ ಕಟ್ಟಿಕೊಂಡರು. ಈ ಸಂಸ್ಥೆಯು ಸಮಾಜದ ಮತ್ತು ದೇವಾಲಯದ ಜೀರ್ಣೋದ್ಧಾರಕ್ಕೆ ಅವಶ್ಯಕವಾಗಿತ್ತು.

ಡಿ.ಬಿ. ಪತ್ತಾರ (ಹಾರೂಗೇರಿ)	– ಸಂಸ್ಥಾಪಕ ಅಧ್ಯಕ್ಷರು
ನಾರಾಯಣರಾವ್ ಮಲಾಬಾದಿ (ಬೆಳಗಾವಿ)	– ಉಪಾಧ್ಯಕ್ಷರು
ನಾರಾಯಣರಾವ್ ಹೆರಕಲ್ (ಬಾದಾಮಿ)	– ಕೋಶಾಧಿಕಾರಿ
ಚಂದ್ರಕಾಂತ ಸುಳ್ಳದ	– ಜಂಟಿ ಕಾರ್ಯದರ್ಶಿ
ಆಯ್. ಕೆ. ಕಲಬುರ್ಗಿ	– ನಿರ್ದೇಶಕರು
ಕೆ.ಬಿ. ವಿಶ್ವಬ್ರಾಹ್ಮಣ	– ಕಾರ್ಯದರ್ಶಿ
ಎಸ್.ಎಲ್. ಪತ್ತಾರ	– ಸದಸ್ಯರು
ಎಸ್.ಎಲ್. ಟಂಕಸಾಲಿ	– ಕಾರ್ಯದರ್ಶಿ
ಎಸ್.ಎಸ್. ವಡಿಯರ	– ಸದಸ್ಯರು
ಟಿ.ಬಿ. ಕಮ್ಮಾರ	– ಸದಸ್ಯರು

ಹಾರುಗೇರಿಯ ಪ್ರೌಢಶಾಲೆಯ ಮುಖ್ಯಾಧ್ಯಾಪಕರಾಗಿದ್ದ ಪ್ರಾಮಾಣಿಕ ಆಡಳಿತಗಾರತ್ವದ ಅನುಭವಿಯಾಗಿದ್ದ ಡಿ.ಬಿ. ಪತ್ತಾರ ಅವರ ಅಧ್ಯಕ್ಷತೆಯಲ್ಲಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಆರಂಭಗೊಂಡವು. ಸಂಸ್ಥೆಹುಟ್ಟಿಕೊಂಡಾಗ ಸಮಸ್ಯೆಗಳು ಸಾರಗದಷ್ಟಿದ್ದವು ಸೇವೆ ಮಾಡುವ ಕೈಗಳು ಕೇವಲ ಎಣಿಕೆಯಷ್ಟಿದ್ದವು. ಸಂಸ್ಥೆಯು ಇದರ ಕುರಿತು ಸಮುದಾಯದ ಎಲ್ಲ ವರ್ಗಗಳೊಂದಿಗೆ ಚಿಂಥನ–ಮಂಥನ ಆರಂಭಿಸಿತು. ಹತ್ತಾರು ಸೇವಾ ಕೈಂಕರ್ಯದ ಕೈಗಳು ಕಡಿಮೆ ಅವಧಿಯಲ್ಲಿ ನೂರಾರು, ಸಾವಿರಾರು ಕೈಗಳು ಸಂಸ್ಥೆಗೆ ಸೇರಿಕೊಂಡವು. ಸಾವಿರಾರು ದುಡಿಯುವ ಕೈಗಳನ್ನು ಪಡೆದ ಸಂಸ್ಥೆ, ಕೆಲಸಕ್ಕೆ ತೀವ್ರಗತಿಯಲ್ಲಿ ಚಾಲನೆ ನೀಡಿತು. ಈ ಸಂದರ್ಭದಲ್ಲಿ ಸಂಸ್ಥೆಯನ್ನು ಕಾಡಿದ ಪ್ರಮುಖ ಸಮಸ್ಯೆಯೆಂದರೆ ಆರ್ಥಿಕತೆ.

ಸಮಾಜದ ಹಸುಗೂಸೇನು ಹುಟ್ಟಿಕೊಂಡಿತು. ಆದರೆ ಮುನ್ನಡೆಯುವ ದಾರಿ ಕಠಿಣವಾಗಿತ್ತು. ಕೆಲವರು ಧಾರ್ಮಿಕ ಮತ್ತು ಸಾಮಾಜಿಕವಾದ ವಿಚಾರಧಾರೆಗಳನ್ನು ಅರುಹಿದರು. ಸಂಸ್ಥೆಗೆ ಶಿಸ್ತು,

ನಿಷ್ಠೆ, ಪ್ರಾಮಾಣಿಕತೆ, ಶಾಂತಿ-ಸೌಹಾರ್ದತೆ, ಸಾಂಘಿಕ ಬೆಳವಣಿಗೆಯ ಕುರಿತಾಗಿ ತರಬೇತಿ ನೀಡಿದರು.ಬರುವ ಕಷ್ಟಕಾರ್ಪಣ್ಯಗಳನ್ನು ಎದುರಿಸುವ ತಂತ್ರಗಾರಿಕೆ ಹೇಳಿಕೊಟ್ಟರು. ಇದೆಲ್ಲದರ ಜೊತೆ ಕೆಲವರು ಆರ್ಥಿಕ ಸಂಪನ್ಮೂಲಗಳ ಕ್ರೋಢಿಕರಣದ ದಾರಿ ಹುಡುಕಿದರು. ಶಿರಸಂಗಿಯಲ್ಲಿ ಕಾಳಮ್ಮನ ದೇವಸ್ಥಾನ ಮತ್ತು ವಿಶ್ವಕರ್ಮ ಸಮಾಜೋದ್ಧಾರದ ಸಲುವಾಗಿ ನೂರಾರು ಕುಶಲಕರ್ಮಿಬಂಧುಗಳು ತನು-ಮನ-ಧನ ಸಹಾಯ ಮಾಡಲು ಮುಂದಾದುದು ಸಂಸ್ಥೆಯ ಆಡಳಿತ ಮಂಡಳಿಗೆ ಹೊಸ ಚೈತನ್ಯ ತುಂಬಿದಂತಾಯಿತು. ಏಳು-ಬೀಳು; ಸೋಲು ಗೆಲುವುಗಳ ಜೊತೆ ಅಭಿವೃದ್ಧಿಯ ಕಾರ್ಯಗಳು ಆರಂಭಗೊಂಡವು.

೧೯೭೦ರ ಅವಧಿಯಲ್ಲಿಯ ಸಮಸ್ಯೆಗಳು

* ದೇವಾಲಯಕ್ಕೆ ಕುಶಲಕರ್ಮಿ ಬಂಧುಗಳ ಬರುವಿಕೆ ಕೊರತೆ
* ಪ್ರತಿ ಅಮವಾಸ್ಯೆಗೆ ೫೦-೬೦ ಜನ ಸೇರುವುದು; ಪ್ರತಿ ಯುಗಾದಿ ಜಾತ್ರೆಗೆ ೫೦೦-೬೦೦ ಜನಸೇರುತ್ತಿದ್ದರು.
* ದೇವಾಲಯಕ್ಕೆ ಹೋಗುವ ದಾರಿ ತೀರಾ ಹದಗೆಟ್ಟಿತು.
* ಮುಳ್ಳು-ಕಂಟಿಗಳಿಂದ ದೇವಾಲಯ ಆವೃತ್ತಗೊಂಡಿತ್ತು.
* ಕುಡಿಯುವ ನೀರಿನ ಕೊರತೆಯಿತ್ತು.
* ಬೆಳಕಿನ ವ್ಯವಸ್ಥೆಗಳು ಅಚ್ಚು ಕಟ್ಟಾಗಿರಲಿಲ್ಲ.
* ವಸತಿ ಸೌಕರ್ಯಗಳಿರಲಿಲ್ಲ.
* ಸಾರಿಗೆ ವ್ಯವಸ್ಥೆಯಲ್ಲಿ ಅಸ್ತವ್ಯಸ್ತತನವಿತ್ತು.

ನೂರಾರು ಸಮಸ್ಯೆಗಳು ಸಂಸ್ಥೆಯ ಮುಂದೆ ತಲೆ ಎತ್ತಿ ನಿಂತಿದ್ದವು. ಎಲ್ಲವನ್ನು ಏಕಕಾಲದಲ್ಲಿಯೇ ನಿವಾರಿಸಲು ಸಾಧ್ಯವಿಲ್ಲವೆಂಬ ಸತ್ಯವನ್ನು ಸಂಸ್ಥೆ ಅರ್ಥೈಸಿ ಕೊಂಡಿತ್ತು. ಒಂದೊಂದಾಗಿ ಸಮಸ್ಯೆಗಳನ್ನು ಪರಿಹರಿಸಲು ಸಂಸ್ಥೆ ಶಿಸ್ತುಬದ್ಧವಾಗಿ ಸಮಸ್ಯೆಗಳನ್ನು ಪರಿಹರಿಸಲು ಸಂಸ್ಥೆ ಶಿಸ್ತುಬದ್ಧವಾಗಿ ಯೋಚಿಸಿತು. ಯೋಚನೆಯ ಹೊಳವುಗಳ ಕೆಲವು ದಾನಿಗಳನ್ನು ಹುಡುಕಲು ಹಚ್ಚಿದವು. ಶಂಕರಪ್ಪ ದೇಶನೂರ (ಬೈಲಹೊಂಗಲ), ವಿ.ಕೆ. ಪಂಡಿತ್ (ವಿಜಯಪುರ) ಶಿವಶಂಕರಪ್ಪ ದೇವವೂರ, ಎಂ.ಬಿ. ಪತ್ತಾರ ಮುಂತಾದ ಸ್ಮರಣೀಯರು ಸಂಸ್ಥೆ ಬೆಳೆಸಲು ಸಹಕಾರಹಸ್ತ ಚಾಚಿದರು. ರಸ್ತೆ ಸುಧಾರಣೆ, ಪವುಳಿಗಳ ನಿರ್ಮಾಣ ಕಾರ್ಯಗಳು ಆರಂಭವಾಗುವುದರೊಂದಿಗೆ ಕ್ಷೇತ್ರದ ಅಭಿವೃದ್ಧಿಗಳು ಒಂದೊಂದಾಗಿ ಮುಂದುವರೆಯಲಾರಂಭಿಸಿದವು.

ಸಂಸ್ಥೆ ತನ್ನ ಏಳು-ಬೀಳುಗಳೊಂದಿಗೆ ೨೫ ವರ್ಷ ಪ್ರಯಾಣಿಸಿದ್ದು, ಸಾಹಸದ ಪ್ರವಾಸವಾಗಿತ್ತು. ಜೀರ್ಣೋದ್ಧಾರದ ಕಾರ್ಯಗಳಲ್ಲಿ ಎರಡು ದಶಕಗಳನ್ನು ಕಳೆದಿರುವುದೇ ಗೊತ್ತಾಗಲಿಲ್ಲ. ಕುಶಲಕರ್ಮಿಗಳು ಮೂಲತಃ ಶ್ರಮಜೀವಿಗಳು ಇವರಿಗೆ ಶ್ರಮದಾನದ ಕೆಲಸ, ನಿರ್ಮಾಣ, ಕಟ್ಟುವುದು, ಮುರಿದು ಕಟ್ಟುವುದು ಕಳಸ ಕಟ್ಟುವುದೆಂದರೆ ಪಂಚಪ್ರಾಣ. ಕಾಯಕ ತತ್ವವನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸಿಕೊಂಡು ಬಂದ ಬಾಚಿ ಕಾಯಕದ ಬಸವಯ್ಯನ ಅನುಯಾಯಿಗಳಿಗೆ ಕಾಲಚಕ್ರ ಉರುಳಿದ್ದೇಗೊತ್ತಾಗಿರಲಿಲ್ಲ. ೨೫ ವರ್ಷಗಳು ಸಂಸ್ಥೆಗೆ ಗತಿಸಿದನಂತರದಲ್ಲಿ ಅದರ ಸವಿನೆನಪಿಗಾಗಿ ಅಭಿವೃದ್ಧಿಯ ಮಹಾಯಾಗವನ್ನು ಅವಿಸ್ಮರಣೀಯವೆನ್ನುವಂತೆ ನಡೆಸಲು ಸಿದ್ಧತೆಗಳು ರೂಪಗೊಳ್ಳಹತ್ತಿದವು.

೧೯೯೬ರಲ್ಲಿ ಶಿರಸಂಗಿ ಕ್ಷೇತ್ರದಲ್ಲಿ ಸಂಸ್ಥೆಯು 'ಲಕ್ಷದೀಪೋತ್ಸವ'ವನ್ನು ಬೆಳಗಿಸುವ ಮೂಲಕ ವಿಶ್ವದ ಜ್ಞಾನಿಗಳ ಜ್ಞಾನದ ಕಿರಣಗಳನ್ನು ಪ್ರಜ್ವಲಿಸಲಾಯಿತು. ಸಂಸ್ಥಾಪಕ ಅಧ್ಯಕ್ಷರಾಗಿದ್ದ ಡಿ.ಬಿ. ಪತ್ತಾರ ಅವರು ಸುಮಾರು ೨೫ ವರ್ಷಗಳ ಕಾಲ ಸಂಸ್ಥೆಯನ್ನು ಹೊತ್ತು, ಹೆಗಲದೊಗಲು ಸುಲಿದು ಹೋಗಿತ್ತು. ಆಗಲೇ ಪತ್ತಾರರು ಮತ್ತೊಂದು ಹೊಸಹೆಗಲನ್ನು ಹುಡುಕುತ್ತಿದ್ದರು. ಚಂದ್ರಕಾಂತ ಸುಳ್ಳದ ಎಂಬ ಹರೆಯದ ಹೆಗಲು ಹೊರಲು ಸಿದ್ಧತೆಯಲ್ಲಿತ್ತು. ಸಂಸ್ಥೆಯ ವಜ್ರಮಹೋತ್ಸವದ ನಿಮಿತ್ತ 'ಲಕ್ಷದೀಪೋತ್ಸವ' ಡಿ.ಬಿ. ಪತ್ತಾರ ಮಾರ್ಗದರ್ಶನದಲ್ಲಿ ಚಂದ್ರಕಾಂತ ಸುಳ್ಳದ ಕಾರ್ಯ ದಕ್ಷತೆಯಲ್ಲಿ ನಾಡಿನ ಹೊರನಾಡಿನ ಪ್ರತಿಯೊರ್ವ ಕುಶಲಕರ್ಮಿ ವಿಶ್ವಕರ್ಮ ಬಾಂಧವರನ್ನು ಭೇಟಿ ಮಾಡಿ, ಒಂದು ದೀಪಕ್ಕೆ ೨೫ ರೂಪಾಯಿಯಂತೆ ಲಕ್ಷಾಂತರ ರೂಪಾಯಿಗಳು ಲಕ್ಷದೀಪೋತ್ಸವದ ನಿಮಿತ್ತ ಶಿರಸಂಗಿಗೆ ಬಂದು ತಲುಪಿದವು. ೫ ದಿನಗಳ ಕಾಲ ಅದ್ದೂರಿಯೆ ಉತ್ಸವ ಕ್ಷೇತ್ರದಲ್ಲಿ ಜರುಗುವುದಷ್ಟೇ ಅಲ್ಲ! ಲಕ್ಷಾಂತರ ಕುಶಲಕರ್ಮಿ ಬಾಂಧವರು ಶಿರಸಂಗಿ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಸೇರಿ ಸಮಾಜ ಸಂಘಟನೆಗೆ ನಾಂದಿ ಹಾಡಿದರು.

೧೯೯೭ರಲ್ಲಿ ಸಂಸ್ಥೆ ಅಧ್ಯಕ್ಷರಾಗಿ ಕ್ರಿಯಾಶೀಲತೆಗೆ ಸಾಕ್ಷಿಯಾದ ಚಂದ್ರಕಾಂತ ಸುಳ್ಳದ ಅವರು ಆಯ್ಕೆಯಾದರು. ಅನಂತದಲ್ಲಿ ಸಂಸ್ಥೆಯು ಕ್ಷೇತ್ರಾಭಿವೃದ್ಧಿಯೆಂಬ ಪಾದರಸ ಎಲ್ಲಕಡೆ ಹರಿದಾಡತೊಡಗಿತು. ರಾಜ್ಯ-ಹೊರ ರಾಜ್ಯಗಳಲ್ಲಿ ಕುಶಲಕರ್ಮಿ ಬಾಂಧವರ ಮನಸ್ಸು ಶಿರಸಂಗಿಯತ್ತ ಸೆಳೆಯುವಂತೆ ಸಂಸ್ಥೆ ಮಾಡಿತು. ಪ್ರತಿಭಾ ಪುರಸ್ಕಾರ, ಕಾಳಿಕಾ ಸ್ತುತಿ, ಅಮವಾಸ್ಯೆಯ ಅನ್ನ ಸಂತರ್ಪಣೆಗೆ ಕಾಯಕಲ್ಪ ದೊರಕಿಸಿಕೊಡಲಾಯಿತು. ರಾಜ್ಯದ ಮೂಲೆ-ಮೂಲೆಯಲ್ಲಿ ಸಮುದಾಯದ ಎಲ್ಲ ಬಗೆಯ ಕುಶಲಕರ್ಮಿ ಬಾಂಧವರನ್ನು ಗುರುತಿಸಿ ಪುರಸ್ಕರಿಸುವ ಜವಾಬ್ದಾರಿ ಸಾಮಾನ್ಯ ವಾದದ್ದಲ್ಲ. ಸಮುದಾಯದ ಮತ್ತು ಅನ್ಯ ಸಮುದಾಯದ ಸಾಹಿತಿ-ವಿದ್ವಾಂಸರನ್ನು ಕರೆಯಿಸಿ ಶಿರಸಂಗಿ ಕಾಳಮ್ಮನ ಮಹಿಮೆ ಚರಿತ್ರೆ-ಹೇಳುವ ಉಪನ್ಯಾಸಗಳು ಸಮಾಜದ ಗಮನಸೆಳೆದವು.

ಸಾವಿರಾರು ಕಲಾವಿದರನ್ನು ಸಂಸ್ಥೆ ಸಮಾಜಕ್ಕೆ, ನಾಡಿಗೆ ಪರಿಚಯಿಸಿತು. ಸಂಸ್ಥೆಯ ಸಂಘಟನಾತ್ಮಕ ಕಾರ್ಯ ಯೋಜನೆಗಳಿಗೆ ಉತ್ಸಾಹಿಗಳಾದ ಪ್ರೊ. ಪಿ.ಬಿ. ಬಡಿಗೇರ, ಜಗನ್ನಾಥ ಬಡಿಗೇರ, ಮಾಧವರಾವ ಪೋದ್ದಾರ, ಅಶೋಕ ಕುಲ್ಲಳಕರ ಮೊದಲಾದವರು ಕೈಜೋಡಿಸಿ ಅಭಿವೃದ್ಧಿ ಕಾರ್ಯಗಳನ್ನು ತೀವ್ರಗೊಳಿಸಿದರು. ಪ್ರತಿ ಅಮವಾಸ್ಯೆ ಮಂಗಳವಾರ, ಶುಕ್ರವಾರಗಳಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತ ಕುಶಲಕರ್ಮಿ ಬಂಧುಗಳು ಬರುವಂತಾಗಬೇಕು. ಯಾತ್ರಾರ್ಥಿಗಳಿಗೆ ವಸತಿ ಅನುಕೂಲತೆಗಳನ್ನು ಕಲ್ಪಿಸಲು ಸಂಸ್ಥೆ ಹಗಲಿರುಳು ದುಡಿದಿದೆ.

ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯ ಮಹತ್ವದ ದಾಖಲಾತಿಯ ಕಾರ್ಯವೆಂದರೆ 'ಶ್ರೀ ಕಾಳಿ ಪ್ರಶಸ್ತಿ' ಹುಟ್ಟುಹಾಕಿರುವುದು ಮತ್ತು 'ಶ್ರೀ ವಿಶ್ವಕರ್ಮ ಮಹೋತ್ಸವ' ಆಚರಣೆ ಸಮುದಾಯದ ಎಲ್ಲ ವರ್ಗದವರ ಮೆಚ್ಚುಗೆಯ ಕಾರ್ಯವಾಯಿತು. ಸಂಸ್ಥೆಯ ಪ್ರತಿಭಾ ಪುರಸ್ಕಾರ ಕಾರ್ಯ ಅದ್ವಿತೀಯದಾಯಿತು. ಪ್ರಪ್ರಥಮ 'ಶ್ರೀ ಕಾಳಿ ಪ್ರಶಸ್ತಿ' ಪರಿಕಲ್ಪನೆಯೇ ಅದ್ಭುತವಾದದ್ದು ಕಾಳಿಯಿಂದ ಹುಟ್ಟಿ-ಬೆಳೆದ ಕುಲುಮೆದಾರರಿಗೆ 'ಶ್ರೀ ಕಾಳಿ' ಒಲಿಯುವುದು ಅಸಾಮಾನ್ಯ. ಅಂತಹ ಅಸಾಮಾನ್ಯರಾದ ೨೦೦೨ರ ಅವಧಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕ್ರಿಯಾಶಕ್ತಿಯ ಕರ್ತೃ ಡಾ.ಚಂದ್ರಶೇಖರ ಕಂಬಾರ ಸಾಹೇಬ್ರನ್ನು ಸಂಸ್ಥೆ ಪ್ರಾಮಾಣಿಕವಾಗಿ ಹುಡುಕಿ ಪ್ರಶಸ್ತಿ ಪ್ರದಾನ ಮಾಡಿದ್ದು ಸಂಸ್ಥೆಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವ ಕೈಂಕರ್ಯ ಸಂಸ್ಥೆ ಕೇವಲ ಕೆಲವು ಪದಾಧಿಕಾರಿಗಳ ಸಂಘಟನೆ ಅಷ್ಟೇ ಅಲ್ಲ! ಹಿರಿಕಿರಿಯರ ಅನುಭವದಿಂದ ಕ್ರಿಯಾಶೀಲ ಮನಸ್ಸುಗಳಿಂದ ಚಿಂತನಶೀಲ ಪ್ರತಿಭೆಗಳನ್ನು ಗರ್ಭೀಕರಿಸಿಕೊಂಡ ಈ ಸಂಸ್ಥೆ, ಸಮಗ್ರ ಕರ್ನಾಟಕದ ವಿಶ್ವಕರ್ಮ ಕುಲಬಾಂಧವರ ಆತ್ಮಸಾಕ್ಷಿಯ ಪ್ರತೀಕ ಎಂದು ವಿದ್ವಾಂಸರಾದ ಡಾ. ವೀರೇಶ ಬಡಿಗೇರ ಅಭಿಪ್ರಾಯ ಪಡುತ್ತಾರೆ. ಜಡತ್ವದಿಂದ ಕ್ರಿಯಾಶೀಲದತ್ತ ಕುಶಲಕರ್ಮಿ ಬಾಂಧವರನ್ನು ಕೊಂಡೊಯ್ಯುವ ಕಾರ್ಯವನ್ನು ಸಂಸ್ಥೆ ಮಾಡುತ್ತಿದೆ.

ಸಂಸ್ಥೆಯ ಕ್ರಿಯಾಶೀಲತೆಯನ್ನು ಮನಗಂಡ ಪ್ರಪ್ರಥಮ 'ಶ್ರೀ ಕಾಳಿ ಪ್ರಶಸ್ತಿ' ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಸಾಹೇಬ್ರು "ಮೌನೇಶ್ವರರು ಐದು ಜನ ಕುಲಬಾಂಧವರನ್ನು ಒಂದು ಮಾಡಲು ಪ್ರಯತ್ನಿಸಿದ್ದರು. ಐದು ಜನ ಒಂದೇ ಎಡೆಯಲ್ಲಿ ಒಂದೇ ಕಲ್ಲಿನ ಮೇಲೆ ಕೂತು ಊಟ ಮಾಡಲು ನಿರಾಕರಿಸಿದ್ದರು. ಆದರೆ ನೀವು ದೀಪೋತ್ಸವ ಮಾಡಿ ಇವರನ್ನು ಒಂದುಗೂಡಿಸುವ ಕಾರ್ಯವನ್ನು ಪುನರಾರಂಭ ಮಾಡಿದ್ದೀರಿ. ಇವತ್ತು ಪ್ರತಿ ವರ್ಷ ಲಕ್ಷಜನ ಕುಲಬಾಂಧವರು ಒಂದೇ ಕಡೆ ಸೇರುವ ಒಬ್ಬ ದೇವಿಯ ಆರಾಧನೆ ಮಾಡುವ ಒಂದೇ ಪ್ರಸಾದ ಸ್ವೀಕರಿಸುವ ದೃಶ್ಯಕಂಡು ಕಣ್ಣು ತುಂಬುತ್ತವೆ" ಎಂದು ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ ಕಂಬಾರ ಸಾಹೇಬ್ರು ಆಡಿದ ಮಾತುಗಳೇ ಸಂಸ್ಥೆಯ ಶ್ಲಾಘನೀಯ ಕಾರ್ಯಕ್ಕೆ ಸಾಕ್ಷಿಯಾಗುತ್ತವೆ. ಹೀಗೆ

ಅವಿಸ್ಮರಣೀಯವೆನಿಸುವ ಸಂಸ್ಥೆಯ ಕಾರ್ಯಗಳು ೨೦೧೦ರವರೆಗೆ ಚಂದ್ರಕಾಂತ ಸುಳ್ಳದ ಅವರ ನೇತೃತ್ವದಲ್ಲಿ ನಡೆದವು.

೨೦೧೦ರಲ್ಲಿ ಕ್ಷೇತ್ರದ ಅಭಿವೃದ್ಧಿಯ ಮತ್ತೊಂದು ಪರ್ವ ಆರಂಭವಾಯಿತು. ಸುಳ್ಳದ ಅವರ ನಂತರದಲ್ಲಿ ಪ್ರಾಧ್ಯಾಪಕರಾದ ಪಿ.ಬಿ. ಬಡಿಗೇರ (ಮುಧೋಳ) ಅವರು ಸಂಸ್ಥೆಯ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಚಂದ್ರಕಾಂತ ಸುಳ್ಳದ ಅವರ ಅವಧಿಯಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾಗಿ ದುಡಿದ ಅನುಭವದಿಂದ ಈಗ ಎರಡನೆಯ ಅವಧಿಗಾಗಿ ಸಂಸ್ಥೆಯನ್ನು ಬಡಿಗೇರ ಅವರು ಮುನ್ನಡೆಸಿಕೊಂಡು ಹೊರಟಿದ್ದಾರೆ. ಪ್ರತಿ ಅಮವಾಸ್ಯೆಗೆ ದೇವಿ ಪುರಾಣವನ್ನು ಪಠಿಸುವ ಕಾರ್ಯವನ್ನು ಸಂಸ್ಥೆಯ ಅಧ್ಯಕ್ಷರೇ ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ಸಂಸ್ಥೆಯ ಆಡಳಿತ ಮಂಡಳಿ

ಪ್ರೊ. ಪಿ.ಬಿ. ಬಡಿಗೇರ	–	ಅಧ್ಯಕ್ಷರು
ಶ್ರೀ ಮೌನೇಶ್ವರ ಶಂ. ಸುಳ್ಳದ	–	ಉಪಾಧ್ಯಕ್ಷರು
ಶ್ರೀ ಜಗನ್ನಾಥ ಕಾ.ಬಡಿಗೇರ	–	ಉಪಾಧ್ಯಕ್ಷರು
ಶ್ರೀ ಅರುಣ ಸೋನಾರ	–	ಪ್ರಧಾನ ಕಾರ್ಯದರ್ಶಿ
ಶ್ರೀ ಸುರೇಶ ಬಾ. ಜುಂಜರವಾಡ	–	ಕೋಶಾಧ್ಯಕ್ಷರು
ಶ್ರೀ ಸಿದರಾಯ ಗೋ. ಪೋತದಾರ	–	ಸದಸ್ಯರು
ಶ್ರೀ ಭಗವಂತ ಹ. ಪತ್ತಾರ	–	ಸದಸ್ಯರು
ಶ್ರೀ ಕಾಳಪ್ಪ ಕ. ಬಡಿಗೇರ	–	ಸದಸ್ಯರು
ಶ್ರೀ ಭೀಮಪ್ಪ ಕಾ. ಬಡಿಗೇರ	–	ಸದಸ್ಯರು
ಶ್ರೀ ಸದಾಶಿವ ಶಂ. ಲಾಳಕೆ	–	ಸದಸ್ಯರು
ಶ್ರೀ ವಿ.ಎ. ಗೌಡರ	–	ಸದಸ್ಯರು
ಶ್ರೀ ರಮೇಶ ಕಾ. ಪತ್ತಾರ	–	ಸದಸ್ಯರು
ಶ್ರೀ ರಾಮಕೃಷ್ಣ ಯ. ಮನ್ವಾಚಾರ	–	ಸದಸ್ಯರು
ಶ್ರೀ ವಿ.ಪಿ. ಮಾಯಾಚಾರ	–	ಸದಸ್ಯರು
ಶ್ರೀ ಶ್ರೀಕಾಂತ ಪತ್ತಾರ	–	ಸದಸ್ಯರು

ಸಂಸ್ಥೆಯ ಆಡಳಿತ ಕಚೇರಿಯ ನಿರ್ವಾಹಕರು

ಶ್ರೀ ಪ್ರಕಾಶ ಶಂ. ಪ್ರಸಾದ	–	ಮುಖ್ಯ ಗುಮಾಸ್ತರು
ಶ್ರೀ ಸಿದ್ದು ಅ.ಕಂಬಾರ	–	ಸಹಾಯಕ ಗುಮಾಸ್ತರು

ಕಾಳಿಕಾಸ್ತುತಿ, ಪ್ರತಿಭಾ ಪುರಸ್ಕಾರ ಸಾಹಿತಿ– ಕಲಾವಿದರ ಸನ್ಮಾನ ಅನ್ನಸಂತರ್ಪಣೆ, ಜಾತ್ರಾ ಮಹೋತ್ಸವ ಇದುವರೆಗೆ ಮೂವರಿಗೆ 'ಶ್ರೀ ಕಾಳಿ ಪ್ರಶಸ್ತಿ' ಪ್ರಧಾನತೆಯ ಕಾರ್ಯ ಸಂಸ್ಥೆಯ ಹೆಮ್ಮೆಯ ಕಾರ್ಯಗಳಾಗಿವೆ. 'ಶ್ರೀ ಕಾಳಿ ಪ್ರಶಸ್ತಿ' ನೆನಪಿನ ಕಾಣಿಕೆ ಶಾಲು, ಹಣ್ಣು, ಮಾಲೆಯೊಂದಿಗೆ ಗೌರವ ಪೂರ್ವಕವಾಗಿ ೫೦ ಸಾವಿರ ರೂಗಳನ್ನು ನೀಡುತ್ತಿರುವುದು ಪ್ರಶಂಶನೀಯವಾದದ್ದಾಗಿದೆ. ಈ ಎಲ್ಲ ಕಾರ್ಯಗಳಿಗೆ ದಾನಿಗಳ ಕೊಡುಗೆ ಅಪಾರವಾದದ್ದು, ದಾನಿಗಳಿಲ್ಲದಿದ್ದರೆ ನಿತ್ಯ ಅನ್ನಸಂತರ್ಪಣೆ, ಅಮವಾಸ್ಯೆ ಅನ್ನ ಸಂತರ್ಪಣೆ ಜಾತ್ರೆ–ಉತ್ಸವ, ಧಾರ್ಮಿಕ–ಸಾಂಸ್ಕೃತಿಕ ಕಾರ್ಯಗಳು ಮರೆತು ಹೋಗುತ್ತಿದ್ದವು.

೭ನೇ ವರ್ಷದಲ್ಲಿ ನಿತ್ಯ ಅನ್ನ ಸಂತರ್ಪಣೆ ಶಿರಸಂಗಿ ಕ್ಷೇತ್ರದಲ್ಲಿ ನಡೆಯುತ್ತಿದೆ. ೨೦೦೯ರಲ್ಲಿ ಆರಂಭವಾದ ಈ ಯೋಜನೆ ಸಂಸ್ಥೆಯ ಮಹತ್ವದ ಯೋಜನೆಯಾಗಿದೆ. ಕರ್ನಾಟಕದೊಂದಿಗೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಗೋವಾ ಮುಂತಾದ ದಕ್ಷಿಣ ರಾಜ್ಯಗಳಲ್ಲಿರುವ ಕುಶಲಕರ್ಮಿ ಬಂಧುಗಳು ನಿತ್ಯ ಅನ್ನಸಂತರ್ಪಣೆ ಸಾವಿರಾರು ರೂಪಾಯಿಗಳನ್ನು ದಾನ ನೀಡಿದ್ದಾರೆ. ದಾನಿಗಳು ಅಪೇಕ್ಷಿಸಿದ ವರ್ಷದ ಯಾವುದಾದರೂ ಒಂದು ದಿನ ದಾನಿಗಳ ಹೆಸರಿನಲ್ಲಿ ಅನ್ನಸಂತರ್ಪಣೆಯನ್ನು ಸಂಸ್ಥೆಯವರು ನಿರ್ವಹಿಸುತ್ತಿದ್ದಾರೆ. ಒಟ್ಟು ೧೦೦೦ ಜನರಿಂದ ಪ್ರತಿಯೊಬ್ಬರು ೧೧,೦೦೦ ರೂಪಾಯಿಗಳಂತೆ ಒಟ್ಟು ೧ ಕೋಟಿ, ೧೦ ಲಕ್ಷ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಠೇವಣಿಯಿಟ್ಟು, ಅದರಿಂದ ಬಂದ ಹಣದಿಂದ ಅನ್ನಸಂತರ್ಪಣೆ ದಾಸೋಹ ಮುಂದುವರೆಯುತ್ತಲಿದೆ. ೧೦೦೦ ದಾನಿಗಳನ್ನು ಆಯಾ ತಿಂಗಳಲ್ಲಿ ಗೌರವಿಸುವ ಸಂಪ್ರದಾಯವನ್ನು ಸಂಸ್ಥೆ ಮುಂದುವರೆಸಿದೆ. ಇದೇ ರೀತಿ ಅಮವಾಸ್ಯೆ, ಯುಗಾದಿ, ವಿಶ್ವಕರ್ಮ ಮಹೋತ್ಸವ ಅನ್ನಸಂತರ್ಪಣೆ ಕಾರ್ಯ ಸಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ದಾನಿಗಳ ಪ್ರಮಾಣ ಕ್ಷೇತ್ರದಲ್ಲಿ ಹೆಚ್ಚುತ್ತಿದೆ. ದಾನದ ರೂಪದಲ್ಲಿ ಹಣ ಹೊಳೆಯಂತೆ ಹರಿದು ಬರುತ್ತಿದೆ.

೧೯೭೮ರಲ್ಲಿ ಹಣಕಾಸಿನ ಆಯವ್ಯಯ

ಆದಾಯ ಬಾಬತ್ತು

೧.	ಭಕ್ತರಿಂದ ಬಂದ ಬಾಬತ್ತು	–	೩೧೬೭–೦೦
೨.	ಸದಸ್ಯತ್ವದ ಫೀ	–	೧೫೬೫–೦೦
೩.	ಬ್ಯಾಂಕಿನ ಬಡ್ಡಿ	–	೨೫೯–೦೦

೪.	ಜಾಹೀರಾತಿನಿಂದ	–	೧೭೭–೦೦
			೫೧೬೮–೦೦

ಖರ್ಚಿನ ಬಾಬತ್ತು

೧.	ಮುದ್ರಣ ಹಾಗೂ ಸ್ಟೇಷನರಿ	–	೬೮೭–೬೧
೨.	ಟಪಾಲು	–	೨೬೫–೨೦
೩.	ಪ್ರವಾಸ	–	೩೨೧–೧೩
೪.	ನೀರು ಪೂರೈಸುವ ಸಲುವಾಗಿ	–	೬೦–೦೦
೫.	ಇಲೆಕ್ಟ್ರಿಕ್ ಲೈಟ್ ಬಗ್ಗೆ ಖರ್ಚು	–	೫೨೭–೦೦
೬.	ಗಾಡಿಬಾಡಿಗೆ ವ ಹಮಾಲಿ	–	೩೧–೦೦
೭.	ಪೂಜಾ ಖರ್ಚು	–	೧೮೭–೪೩
೮.	ಮನರಂಜನೆ	–	೫೬೩–೦೦
೯.	ಬಿಲ್ಡಿಂಗ್ ರೀಪೇರಿ ಖರ್ಚು	–	೧೦೦–೦೦
೧೦.	ಸಾದಿಲವಾರ	–	೨೩೧–೦೦
೧೧.	ಬ್ಯಾಂಕ ಕಮೀಷನ್	–	೯–೦೦
೧೨.	ಡೆಡ್ ಸ್ಟಾರ್ ಸವಕಳಿ	–	೪೦–೦೦
೧೩.	ನಿವ್ವಳ ಉತ್ಪನ್ನ	–	೨೧೪೫–೯೩
			೫,೧೬೮–೯೦

(ಐದು ಸಾವಿರದ ಒಂದುನೂರ ಅರವತ್ತೆಂಟು ರೂಪಾಯಿ ತೊಂಬತ್ತು ಪೈಸೆ ಮಾತ್ರ)

ಎಸ್.ಕೆ. ಅಪರಂಜಿ, ಚಾರ್ಟರ್ಡ್ ಅಕೌಂಟಂಟ್, ಹುಬ್ಬಳ್ಳಿ ಅವರಿಂದ ಪರಿಶೀಲಿಸಿದ ಆಯ–ವ್ಯಯ ಪತ್ರ.

೨೦೧೩ರಲ್ಲಿ ಹಣಕಾಸಿನ ಆಯವ್ಯಯ ಮಾಹಿತಿಯಂತೆ ೮೯,೬೭,೬೨೧.೫೧(ಎಂಬತ್ತೊಂಬತ್ತು ಲಕ್ಷ ಅರವತ್ತೇಳು ಸಾವಿರದ ಆರುನೂರ ಇಪ್ಪತ್ತೊಂದು ರೂಪಾಯಿ ಐವತ್ತೊಂದು ಪೈಸೆ) ಹಣಕಾಸು ವ್ಯವಹಾರ ನಡೆದಿದೆ. ಎಂದು ಸುರೇಶ ಎಂ. ಉಡುಪಿ ಚಾರ್ಟರ್ಡ್ ಅಕೌಂಟಂಟ್, ಬೈಲಹೊಂಗಲ ವರದಿ ತಿಳಿಸುತ್ತದೆ. ೧೯೭೮ರ ಅವಧಿಯಲ್ಲಿ ಸಂಸ್ಥೆಯ ಹಣಕಾಸು ವ್ಯವಹಾರ ಸಾವಿರ ರೂಪಾಯಿಗಳಲ್ಲಿ ನಡೆಯುತ್ತಿದ್ದರೆ, ೨೦೧೩ರ ಹೊತ್ತಿಗೆ ದಶಲಕ್ಷ ರೂಪಾಯಿಗಳಲ್ಲಿ ಸಂಸ್ಥೆಯ ಹಣಕಾಸು ವಹಿವಾಟು ಇದೆ.

ಸಂಸ್ಥೆಯ ಅಭಿವೃದ್ಧಿ ಕಾರ್ಯಗಳು

* ಪ್ರತಿಭಾ ಪುರಸ್ಕಾರ

ಶ್ರೀ ಕಾಳಿ ಪ್ರಶಸ್ತಿ – ಡಾ. ಚಂದ್ರಶೇಖರ ಕಂಬಾರ

ಡಾ. ಜಿ. ಜ್ಞಾನಾನಂದ

ಪರಮ ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಜಿ

ಶ್ಯಾಂಡಿಲಾಶ್ರಮ, ಹುಬ್ಬಳ್ಳಿ

* ೩೦ ಕೊಠಡಿಗಳು ನಿರ್ಮಾಣ (ಪಶ್ಚಿಮ ಭಾಗ) ಶ್ಯಾಂಡಿಲಾಶ್ರಮ, ಹುಬ್ಬಳ್ಳಿ ೧ನೇ ಮಹಡಿ
* ಕಾಳಿ ಶಿಲ್ಪವನ
* ಕಾಳಿ ಜಲಕುಂಭ (೨ ನೀರಿನ ಟ್ಯಾಂಕ್)
* ಸ್ನಾನಗ್ರಹ–ಶೌಚಾಲಯ
* ಗ್ರಾನೈಟ್ ಹಾಸಿಗೆ
* ನೂತನ ಸಭಾಗ್ರಹ ನಿರ್ಮಾಣ
* ಮಿನಿ ಮಂಗಲ ಭವನ

ಚಿತ್ರಕಲಾ ಮತ್ತು ಶಿಲ್ಪಕಲಾ ಪ್ರದರ್ಶನ ಯಾತ್ರಿನಿವಾಸ ನಿರ್ಮಾಣ ರಸ್ತೆ ಢಾಂಬರೀಕರಣ

೫–೬ ಸಾವಿರ ರೂಪಾಯಿಗಳ ವ್ಯವಹಾರಿಕ ಸಂಸ್ಥೆ ಇಂದು ಕೋಟ್ಯಾಂತರ ರೂಪಾಯಿಗಳ ವ್ಯವಹಾರಿಕೆಯನ್ನು ಮುನ್ನಡೆಸುತ್ತಿದೆ. ದಿನದಿಂದ ದಿನಕ್ಕೆ ಕ್ಷೇತ್ರಕ್ಕೆ ಕುಶಲಕರ್ಮಿಗಳು ಬಂದು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ದಾನಿಗಳು ದಾನ ನೀಡುತ್ತಿದ್ದಾರೆ. ಕಾಳಮ್ಮ ಕೊಟ್ಟ ಸಂಪತ್ತಿನಲ್ಲಿ ಒಂದಿಷ್ಟು ಭಾಗ ಕಾಳಮ್ಮನಿಗೆ ತಿರುಗಿಸುವ ಋಣಾನುಬಂಧ ಕಾರ್ಯಗಳು ಕ್ಷೇತ್ರದಲ್ಲಿ ಜರುಗುತ್ತಿವೆ. ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯು ಸಮಾಜಮುಖಿಯಾಗಿ ಕೆಲಸ ಮಾಡುತ್ತಿದೆ. ಕ್ಷೇತ್ರದಲ್ಲಿ ಕಡಿಮೆ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ. ಶಿರಸಂಗಿ ಕಾಳಮ್ಮ ದೇವಸ್ಥಾನ ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ ಮತ್ತು ಭಕ್ತ ಕುಶಲಕರ್ಮಿ ಬಾಂಧವರು ಪರಸ್ಪರ ಅನ್ಯೂನ್ಯತೆಯಿಂದ ದೇವಾಲಯದ ಅಭಿವೃದ್ಧಿ ಕಾರ್ಯಗಳಿಗೆ ಮುಂದಾಗುತ್ತಿದ್ದಾರೆ. ಇವರ ಜೊತೆ ಪೂಜಾರಿ (ಅರ್ಚಕ)ಗಳ ಹೊಂದಾಣಿಕೆ ಅತೀ ಮಹತ್ವದ್ದು

ಪೂಜಾರಿಗಳು

ದೇವಾಲಯ ಒಂದು ಪವಿತ್ರವಾದ ಆರಾಧನಾ ಕೇಂದ್ರ, ಗರ್ಭಗುಡಿಯಲ್ಲಿರುವ ಮೂರ್ತಿಗೆ ದೈವಿಕತೆ ಉಂಟಾಗಿರುತ್ತದೆ. ದೇವರ ಶಕ್ತಿಯಿಂದಾಗಿ ದೇವಾಲಯದ ಪರಸರವೆಲ್ಲವೂ ದೈವಾಂಶತೆಯಿಂದ ಕೂಡಿರುತ್ತದೆ. ದೇವರ ಸಾಮಿಪ್ಯ ಬಯಸುವ ವಸ್ತುಗಳೆಲ್ಲವೂ ಪರಿಶುದ್ಧ ಭಾವನೆ ಹೊಂದಿರುತ್ತವೆ. ದೈವಿಕತೆ ಮತ್ತು ಪರಿಶುದ್ಧತೆಯ ಜೊತೆ ಸಂಗಾತಿ ಬಯಸುವವರು ಆತ್ಮ ಶುದ್ಧಿಗಳಾಗಿರಬೇಕು. ಬ್ರಹ್ಮಜ್ಞಾನವನ್ನು ಹೊಂದಿರಬೇಕು. ಸತ್ಯದ ಸಾಕಾರ ಮೂರ್ತಿಯಂತಿರಬೇಕು. ಈ ಎಲ್ಲ ಗುಣಗಳನ್ನು ಪಡೆದವರನ್ನು ದೇವಾಲಯದ ಪೂಜಾರಿಗಳೆಂದು ಕರೆಯಲಾಗುತ್ತದೆ. ಇವರನ್ನು ಅರ್ಚಕರು ಎಂದು ಸಂಬೋಧಿಸಲಾಗುತ್ತದೆ. ಪೂಜಾರಿ ಅಥವಾ ಅರ್ಚಕ ಪದ ಒಂದೇ ಅರ್ಥವನ್ನು ಕೊಡುತ್ತದೆ. ದೇವ–ಭಕ್ತನ ನಡುವಿನ ಭಕ್ತಿ–ಭಾವದ ಸೇತುವೆ ಈ ಅರ್ಚಕರು ಅಥವಾ ಪೂಜಾರಿಗಳು.

ಸುಕ್ಷೇತ್ರದಲ್ಲಿಯ ದೇವಸ್ಥಾನವು ಎಲ್ಲ ವ್ಯವಹಾರಗಳ ಕೇಂದ್ರ ಬಿಂದುವಾಗಿರುತ್ತದೆ. ಆಡಳಿತಗಾರರು ಮತ್ತು ಭಕ್ತರ ಜೊತೆಯಲ್ಲಿ ಪೂಜಾರಿಗಳು ದೇವಸ್ಥಾನದ ಅಭಿವೃದ್ಧಿಗೆ ಮಹತ್ವದ ವ್ಯಕ್ತಿಗಳಾಗಿರುತ್ತಾರೆ. ಮೂರ್ತಿಗೆ ಜೀವ ತುಂಬಬಲ್ಲ ಶಕ್ತಿ ಪೂಜಾರಿಗಳಿಗೆ ಇರುತ್ತದೆ. ಪೂಜಾರಿಗಳು ಅಂದರೆ ಪೂಜಾ ವಿಧಾನಗಳನ್ನು ಅರಿತವರು. ಪೂಜೆಯ ಅರಿವಿನವರು ಪೂಜಾರಿಗಳಾಗಿದ್ದಾರೆ. ಅಮೂರ್ತವಾದದ್ದನ್ನು ಮೂರ್ತಗೊಳಿಸಿ ಆರಾಧನೆಯ ಅರಿವಿನಿಂದ ಕ್ರಿಯಾತ್ಮಕಗೊಳಿಸಿ ಮತ್ತೇ ಶಕ್ತಿಯನ್ನು ಆಹ್ವಾನಿಸಿ ಅಮೂರ್ತದತ್ತ ಕೊಂಡೊಯ್ಯುವ ಅರಿವಿನವರು ಪೂಜಾರಿಗಳು ಇವರನ್ನು ಅರಿತವರು, ಅರ್ಚಿಸುವವರು, ಅರ್ಚನೆ ಮಾಡುವವರು, ಅರ್ಚಕರೆಂದು ಗುರುತಿಸಲಾಗುತ್ತದೆ.

ಪೂಜಾರಿಗೆ ಉತ್ತಮ ನಡವಳಿಕೆಯಿರಬೇಕಾಗುತ್ತದೆ. ಶ್ರೇಷ್ಠ ಗುಣಗಳಿಂದ ದೇವಾಲಯದ ಘನತೆಯನ್ನು ಭಕ್ತ ಕುಶಲಕರ್ಮಿ ಬಾಂದವರಲ್ಲಿ ಭಕ್ತಿ–ಭಾವವನ್ನು ಹೆಚ್ಚಿಸುತ್ತಾನೆ. ಪೂಜಾರಿಗಳಿಗೆ ದೇವಾಲಯದಲ್ಲಿ ಅತ್ಯಂತ ಹಿರಿಯದಾದ ಸ್ಥಾನಮಾನಗಳನ್ನು ಸಮಾಜ ನೀಡುತ್ತ ಬಂದಿದೆ. ಗೌರವಯುತವಾದ ಪೂಜಾರಿಯು ತನ್ನ ಸ್ಥಾನಕ್ಕೆ ಗೌರವ ತಂದು ಕೊಡುವಂತನಾಗಿರಬೇಕು. ವಿಶೇಷವಾಗಿ ವಂಶಪಾರಂಪರಿಕವಾಗಿ ಬೆಳೆದು ಬಂದ ಪೂಜಾರಿಗಳ ಸ್ಥಾನ–ಮಾನವು ಹಿರಿಯದಾಗಿರುತ್ತದೆ. "ಅರ್ಚಕಸ್ಯ ಪ್ರಾಭವೇನ್ ಶಿಲಾಭವತಿ ಶಂಕರ;" ಎಂದು ಹೇಳಲಾಗುತ್ತದೆ. ಪೂಜಾರಿಗಳು ಸಾಕ್ಷಾತ್ ಪರಬ್ರಹ್ಮ ಜ್ಞಾನ ಸಂಪಾದಿಸಿದವರಾಗಿರುತ್ತಾರೆ. ಜಾತ್ರೆ–ಉತ್ಸವ–ನಿತ್ಯ ಪೂಜೆಯ ಕಾರ್ಯಗಳನ್ನು ಪೂಜಾರಿಗಳು ನಿರ್ವಹಿಸುತ್ತಾರೆ. ಇದರಲ್ಲಿ ಯಾವುದೇ ಬದಲಾವಣೆಗಳು ಕಂಡುಬರುವುದಿಲ್ಲ. ಅಪೂರ್ವವೆನಿಸುವ ಮೂರ್ತಿಗಳ ದೇವಾಲಯಗಳಲ್ಲಿ ದೇವತೆ ಸಾಕ್ಷಾತ್ಕರಿಸಿರುತ್ತಾಳೆ. ಇಂತಲ್ಲಿ ಪೂಜಾರಿಗಳು ಕರ್ತವ್ಯ ಪ್ರಜ್ಞೆಯ ಅರಿವಿನೊಂದಿಗೆ ಸದಾ ಜಾಗೃತರಾಗಿರುತ್ತಾರೆ.

ಪೂಜಾರಿಗಳಲ್ಲಿ ಧರ್ಮ, ನಿಷ್ಠೆ, ಶ್ರದ್ಧೆ, ಭಕ್ತಿ, ಪರಿಶುದ್ಧ ಭಾವ, ಬುದ್ಧಿ-ಮನಸ್ಸುಗಳಲ್ಲಿ ಏಕತೆ ಮತ್ತು ಪರಿಪಕ್ವತೆಯ ವಿಶೇಷ ಗುಣಗಳು ತುಂಬಿಕೊಂಡಿರುತ್ತವೆ. ದೇವಾಲಯಕ್ಕೆ ಆಗಮಿಸುವ ಭಕ್ತ ಕುಶಲಕರ್ಮಿಗಳೊಂದಿಗೆ ಸರಳ-ಸೌಜನ್ಯತೆಯಿಂದ ಇದ್ದು ಎಲ್ಲರನ್ನು ಗೌರವಾಧರಗಳೊಂದಿಗೆ ಬದುಕುವ ಕಲೆಯನ್ನು ಕಲಿತು, ಕಲಿಸುವಂತಹ ಗುಣವೈಶಿಷ್ಟ್ಯತೆ ಪೂಜಾರಿಗಳಲ್ಲಿರುತ್ತದೆ. ಭಕ್ತರೊಂದಿಗೆ ಅನ್ಯೂನ್ಯವಾಗಿರುವುದರ ಜೊತೆಗೆ ದೇವಾಲಯದ ಆಡಳಿತ ನಿರ್ವಾಹಕರಾದ ಆಡಳಿತ ಮಂಡಳಿಗೆ ಧರ್ಮಸೂಕ್ಷ್ಮತೆಯ ಸಲಹೆ- ಸೂಚನೆಗಳನ್ನು ನೀಡಬೇಕಾಗುತ್ತದೆ. ಭಕ್ತ ಆಡಳಿತ ಮಂಡಳಿಯೊಂದಿಗೆ ಪೂಜಾರಿಗಳು ಸಮನ್ವಯತೆಯನ್ನು ಸಾಧಿಸುವಂತವರಾಗಿರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಪೂಜಾರಿಗಳನ್ನು ಧರ್ಮದರ್ಶಿಗಳೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಪೂಜಾರಿಗಳು ಪುರುಷ ವರ್ಗದವರು ಹೆಚ್ಚಾಗಿರುತ್ತಾರೆ. "ಮಾತೃದೇವತೆ ಎಲ್ಲಮ್ಮನ ಗುಡಿಯ ಪೂಜಾರರು ಸಾಧಾರಣವಾಗಿ ಗಂಡಸರೆ ಆಗಿರುತ್ತಾರೆ. ಎಲ್ಲಿ ಹಣದ ಪ್ರಶ್ನೆ ಬರುತ್ತದೊ? ಅಲ್ಲಿ ಗಂಡು ಪ್ರಧಾನ ಪಾತ್ರವಹಿಸುವುದು ಕಂಡುಬರುತ್ತದೆ. ಪುರುಷರು ಇಲ್ಲೂ ಅಗ್ರ ಪಟ್ಟವಹಿಸಿರುವುದು ಸ್ಪಷ್ಟವಾಗಿದೆ."[೫]

ಶಿರಸಂಗಿ ಕಾಳಮ್ಮನ ದೇವಸ್ಥಾನ ಶಕ್ತಿಯ ಮತ್ತು ಜಾಗೃತ ದೇವಸ್ಥಾನ ಇಲ್ಲಿಯೂ ಬ್ರಹ್ಮಜ್ಞಾನ ಹೊಂದಿದ ಯಜ್ಞ-ಯಾಗಾದಿಗಳಲ್ಲಿ ಸಿದ್ಧಹಸ್ತರಾದ ಪುಜಾರಿಗಳಿದ್ದಾರೆ. ಪರಂಪರಾಗತವಾಗಿ ಧಾರ್ಮಿಕ ಕಾರ್ಯಗಳನ್ನು ಶಿರಸಂಗಿ ಕ್ಷೇತ್ರದಲ್ಲಿ ನಿರ್ವಹಿಸುತ್ತಿದ್ದಾರೆ. ಧರ್ಮಪರವಾದ ನಿಲುವುಗಳನ್ನು ತಾಳುತ್ತ, ಧರ್ಮಶಾಸ್ತ್ರ ಅರಿತವರಾಗಿ ಕಾಳಮ್ಮ ಮತ್ತು ಕುಶಲಕರ್ಮಿ ಬಂಧುಗಳಲ್ಲಿ ಅನನ್ಯ ಭಕ್ತಿಯನ್ನು ಹೊಂದಿದವರಾಗಿದ್ದಾರೆ. ದೇವಾಲಯದ ಲಾಭಾಂಶದತ್ತದ ಮೇಲೆ ಆಶೆ-ಆಕಾಂಶೆಗಳನ್ನು ಇಡದ, ಧರ್ಮಯುತ ನಡವಳಿಕೆಯುಳ್ಳವರಾಗಿದ್ದಾರೆ. ಕಾಳಮ್ಮ ಮತ್ತು ಭಕ್ತ ಕುಶಲಕರ್ಮಿಗಳಲ್ಲಿ ಅನುಸಂಧಾನಕಾರರಾಗಿ ಕರ್ತವ್ಯದಲ್ಲಿ ನಿರತರಾಗಿದ್ದಾರೆ.

ಶಿರಸಂಗಿ ಕಾಳಮ್ಮನ ಪೂಜಾರಿಗಳು ಪುರಾತನ ಕಾಲದಿಂದಲೂ 'ವಿಶ್ವಕರ್ಮ ವಂಶಸ್ಥ' ರಾಗಿದ್ದಾರೆ. ಈಗಿರುವ ಪೂಜಾರಿಗಳಲ್ಲಿ ಮೂರು ಬಣಗಳನ್ನು ಗುರುತಿಸಿಲಾಗುತ್ತದೆ.

೧.ಮೂಕಿ ಪೂಜಾರ ಕುಟುಂಬ (ವಿಶ್ವಕರ್ಮ)

೨. ಕರಿಬಣ ಪೂಜಾರ ಕುಟುಂಬ (ವಿಶ್ವಕರ್ಮ)

೩. ಶಹಾಪೂರಕರ ಪೂಜಾರ ಕುಟುಂಬ (ವಿಶ್ವಕರ್ಮ)

ಗಂಗಣ್ಣೈವರ ಪೂಜಾರ ಉಪಕುಟುಂಬ

ಈ ಪೂಜಾರ ಕುಟುಂಬಗಳು ತಲೆತಲಾಂತರವಾಗಿ ಶಿರಸಂಗಿಯಲ್ಲಿ ನೆಲೆಸಿದ್ದಾರೆ. ಕಾಳಮ್ಮನಲ್ಲಿ ಅನನ್ಯ ಭಕ್ತಿ ಹೊಂದಿದ್ದಾರೆ.

೧. ಮೂಕಿ ಪೂಜಾರ ಕುಟುಂಬಸ್ಥರು

ಬ್ರ.ಶ್ರೀ.ವೇ. ವಿರುಪಾಕ್ಷ ಆಚಾರ ರಾಮಾಚಾರ ಪೂಜಾರ; ದೇವಾಲಯದ ಹಿರಿಯ ಪೂಜಾರಿಗಳು. ವೇದ–ಉಪನಿಷತ್ತು, ಶಾಸ್ತ್ರಾಧ್ಯಯನಿಗಳಾಗಿದ್ದಾರೆ. ಸರಳ–ಶಾಂತ ಸ್ವರೂಪದ ಆಚಾರರು, ಬಾಲ್ಯದಿಂದಲೂ ಕಾಳಮ್ಮನನ್ನು ಆರಾಧಿಸುತ್ತ ಬಂದಿದ್ದಾರೆ. ವೇದ–ಮಂತ್ರಗಳ ಜ್ಞಾನದ ಕಣಜ. ಶಿರಸಂಗಿ ಕಾಳಮ್ಮನ ದೇವಾಲಯ ಪೂರ್ವಿತಿಹಾಸವನ್ನು ಅರಿತವರಲ್ಲಿ ಆಚಾರರು ಒಬ್ಬರು. ವಂಶಪಾರಂಪರಿಕವಾಗಿ ಬಂದ ಕಾಳಮ್ಮನ ಸೇವೆ ಅರ್ಚನೆಯನ್ನು ಚಾಚು ತಪ್ಪದೆ ಮುಂದಿನ ಪೀಳಿಗೆಗೆ ಕಲಿಸಿಕೊಡುವ ಸಮಾಜದ ಗುರುವಾಗಿದ್ದಾರೆ. ದೇವಾಲಯಕ್ಕೆ ಬರುವ ಭಕ್ತರೊಂದಿಗೆ ಸೌಜನ್ಯದಿಂದ ಇದ್ದು, ಸೂಕ್ತ ಮಾರ್ಗೋಪದೇಶವನ್ನು ನೀಡುತ್ತಾರೆ.

೨. ಮುರಳಿಧರ ಆಚಾರ್ ರಾಮಾಚಾರ್ಯ ಪೂಜಾರ

೩. ಪ್ರಕಾಶ ಆಚಾರ್, ರಾಮಾಚಾರ್ಯ ಪೂಜಾರ

೪. ವಿಶ್ವನಾಥ ಆಚಾರ ವಿರುಪಾಕ್ಷ ಆಚಾರ ಪೂಜಾರ

೫. ಗಣೇಶ ಆಚಾರ ವಿರುಪಾಕ್ಷ ಆಚಾರ ಪೂಜಾರ

ಕರಿಬಣ ಪೂಜಾರ ಕುಟುಂಬಸ್ಥರು

೧. ಬ್ರ. ಶ್ರೀ. ವೇ. ಶ್ರೀಕಾಂತ ಆಚಾರ ಕಾಳಾಚಾರ್ಯ ಪೂಜಾರ, ಶೈಕ್ಷಣಿಕ ಅರ್ಹತೆ ಗಳೊಂದಿಗೆ ಧಾರ್ಮಿಕ– ಸಾಂಸ್ಕೃತಿಕ ಸಾಧನೆಯನ್ನು ಇವರು ಮಾಡಿದ್ದಾರೆ. ಕನ್ನಡ–ಸಂಸ್ಕೃತಾಧ್ಯಯನ ಗೈದಿದ್ದಾರೆ. ವೇದಬ್ರಹ್ಮ ಸ್ವರೂಪಿಗಳಾಗಿದ್ದ ಸ್ವರ್ಗೀಯ ಕಾಳಾಚಾರ್ಯ–ಶಾರಮ್ಮ ಪುಣ್ಯದಂಪತಿಗಳ ಕಿರಿಯ ಪುತ್ರರು. ತಂದೆಯವರ ವೇದಾಧ್ಯಯನದ ಶಿಷ್ಯರಾಗಿ, ಸಹೋದರರಾದ ಪೂರ್ವಾಚಾರ್ ಮತ್ತು ಬಾಳಾಚಾರ್ಯ ಅವರ ಧಾರ್ಮಿಕ ಸಂಸರ್ಗದಲ್ಲಿ ಬೆಳೆದ ಶ್ರೀಕಾಂತ ಆಚಾರರು, ಸಾತ್ವಿಕ ಸ್ವಭಾವದ ಧರ್ಮನಿಷ್ಠರು. ೪೦ ವರ್ಷಗಳಿಂದ ಕಾಳಮ್ಮನ ಅರ್ಚನ ಮಾಡುತ್ತಿದ್ದಾರೆ. ಭಕ್ತ ಕುಶಲಕರ್ಮಿಗಳಿಗೆ ಅಗತ್ಯಕ್ಕನುಗುಣವಾಗಿ ಉಪಯುಕ್ತ ಮಾಹಿತಿಗಳನ್ನು ನೀಡುತ್ತ ದೇವಿಯ ಭಕ್ತರನ್ನು ಧರ್ಮಮಾರ್ಗದಲ್ಲಿ ಮುನ್ನಡೆಯಲು ಉಪದೇಶಿಸುತ್ತಾರೆ. ಭಕ್ತರ ಮದುವೆ–ಮುಂಜಿ ಇತರ ಧಾರ್ಮಿಕ ಕಾರ್ಯಗಳಲ್ಲಿ ಪೌರೋಹಿತ್ಯ ಸೇವೆ ಸಲ್ಲಿಸುತ್ತ ಬಂದಿದ್ದಾರೆ.

೨. ದಯಾನಂದಾಚಾರ ಪೂರ್ವಾಚಾರ್ಯ ಪೂಜಾರ

೩. ಕಾಳಾಚಾರ್ಯ ಪೂರ್ವಾಚಾರ್ಯ ಪೂಜಾರ

೪. ಮೌನೇಶಾಚಾರ್ಯ ಪೂರ್ವಾಚಾರ್ಯ ಪೂಜಾರ

೫. ಸಂತೋಷ ಆಚಾರ್ ಸುಬ್ಬಾಚಾರ್ಯ ಪೂಜಾರ

೬. ನಿರಂಜನ ಆಚಾರ್ ಸುಬ್ಬಾಚಾರ್ಯ ಪೂಜಾರ

೩. ಶಹಪೂರಕರ ಬಣ

ಬ್ರಶ್ರೀ.ವೇ. ಪ್ರಕಾಶ ಆಚಾರ್ ಕಾಳಾಚಾರ್ ಶಹಪೂರಕರ: ಚಿಕ್ಕ ವಯಸ್ಸಿನಲ್ಲಿಯೇ ಅರ್ಚನೆಯ ವಿಧಾನಗಳನ್ನು ತಂದೆಯಿಂದ ರೂಢಿಸಿಕೊಂಡವರು. ಪೂಜಾರ ಬಣಗಳಲ್ಲಿಯೇ ಸ್ವಲ್ಪಮಟ್ಟಿಗೆ ಆರ್ಥಿಕವಾಗಿ ಅನುಕೂಲಸ್ಥರಾಗಿದ್ದಾರೆ. ಕಾಳಮ್ಮನ ಸೇವೆಯಲ್ಲಿ ಭಕ್ತಿ–ನಿಷ್ಠೆ–ಶ್ರದ್ಧೆಯನ್ನು ಹೊಂದಿದವರಾಗಿದ್ದಾರೆ. ದೇವಾಲಯದ ಪ್ರತಿಯೊಂದು ಧಾರ್ಮಿಕಕಾರ್ಯಗಳಲ್ಲಿ ಮುಂಚೂಣಿಯಲ್ಲಿರುತ್ತಾರೆ. ಕಾಳಮ್ಮನ ಗರ್ಭಗುಡಿಯ ಪುರಾತನ ಗೋಪುರಕ್ಕೆ ಪಂಚಲೋಹ ಶಿಲ್ಪ ವೈಭವೀಕರಣಗೊಳಿಸುವಲ್ಲಿ ಅವಿರತವಾಗಿ ದುಡಿದಿದ್ದಾರೆ. ಓದು ಪ್ರಕಾಶ ಆಚಾರ್‌ರ ಪ್ರಮುಖ ಹವ್ಯಾಸ. ಧಾರ್ಮಿಕ ಸಾಹಿತ್ಯ ಅಧ್ಯಯನ ಧಾರ್ಮಿಕ ಕ್ಷೇತ್ರಾಧ್ಯಯನ ಮಾಡುವ ಆಚಾಯರು, ಶಿರಸಂಗಿಯಲ್ಲಿ ವಿಶ್ವಕರ್ಮ ಸಮುದಾಯದವರಿಗೆ ಉಪಯುಕ್ತವಾಗುವ ಧಾರ್ಮಿಕ ಪುಸ್ತಕ ಮಾರಾಟ ಮಳಿಗೆಯನ್ನು ತೆರೆದಿದ್ದಾರೆ. ಕಾಳಮ್ಮನ ಮೂರ್ತಿ ಪೂಜೆಯೊಂದಿಗೆ ಸಾಹಿತ್ಯಿಕ ಸೇವೆ ಸಲ್ಲಿಸುತ್ತಿದ್ದಾರೆ. ದಂಪತಿಗಳಿರ್ವರು ಭಕ್ತಕುಶಲಕರ್ಮಿ ಬಾಂಧವರಲ್ಲಿ ಪುಸ್ತಕ ಮಾರಾಟ ಮಾಡುವುದರ ಮೂಲಕ ಧರ್ಮ ಜಾಗೃತಿಯುಂಟು ಮಾಡುವ ಕೈಂಕರ್ಯ ಕೈಗೊಂಡಿದ್ದಾರೆ.

೨. ಪ್ರಭಾಕರ ಆಚಾರ್ ಕಾಳಾಚಾರ್ಯ ಶಹಪೂರಕರ

೩. ಮನೋಹರ ಆಚಾರ ಶಹಪೂರಕರ

೪. ಪುನೀತ ಆಚಾರ ಶಹಪೂರಕರ

೫. ಇಂದ್ರಾಚಾರ್ಯ ಕೃಷ್ಣಾಚಾರ್ಯ ಗಂಗಣ್ಣೈವರ

೬. ಶಂಕರ ಆಚಾರ ಇಂದ್ರಾಚಾರ್ಯ ಗಂಗಣ್ಣೈವರ

೭. ಯೋಗೇಂದ್ರಾಚಾರ ಅನಂತಾಚಾರ ಗಂಗಣ್ಣೈವರ

೮. ನಾಗೇಂದ್ರ ಆಚಾರ ಅನಂತಾಚಾರ ಗಂಗಣ್ಣೈವರ

ಶಿರಸಂಗಿ ಕಾಳಮ್ಮ ದೇವಸ್ಥಾನದಲ್ಲಿ ಕಿರಿಯರು, ಹಿರಿಯರು, ಜ್ಞಾನಿಗಳು, ವೇದಾಧ್ಯಯನಿಯನ್ನೊಳಗೊಂಡು ಸುಮಾರು ೨೫ ಕ್ಕೂ ಹೆಚ್ಚು ಪುರುಷ ಪೂಜಾರಿಗಳಿದ್ದಾರೆ. ಇವರೊಂದಿಗೆ ಕುಟುಂಬದ ಮಹಿಳೆಯರು ನಿತ್ಯ ಕಾಳಮ್ಮ ಸೇವೆಗೆ ನಿಲ್ಲುತ್ತಾರೆ. ದೂಪ–ದೀಪ ಮಡಿಗಳ ಸ್ವಚ್ಛತೆ, ಆರತಿ–ಸಮೆಗಳ ಸುವ್ಯವಸ್ಥೆ ಮತ್ತು ನಿತ್ಯವು ಮಡಿಯಿಂದ ಕಾಳಮ್ಮನಿಗೆ ನೇವೈದ್ಯ ತಯಾರಿಸುವ ಕಾರ್ಯಗಳನ್ನು ಭಕ್ತಿ–ಭಾವದಿಂದ ನಿರ್ವಹಿಸುತ್ತಿದ್ದಾರೆ. ಸತಿ–ಪತಿ, ಮಕ್ಕಳೊಂದಿಗೆ ಸುಮಾರು ೫೦ಕ್ಕೂ ಹೆಚ್ಚು ಪೂಜಾರಿಗಳು ಶಿರಸಂಗಿಯಲ್ಲಿ ವಾಸವಾಗಿದ್ದಾರೆ. ಈಗ ಪೂಜಾರಿಗಳು ಮೂರು ಬಣಗಳಿದ್ದು, ಒಂದೊಂದು ಬಣವು ಒಂದೊಂದು ವರ್ಷ ಕಾಳಮ್ಮನ ಪೂಜಾರಿಕೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುತ್ತದೆ. ಪೂಜಾರಿಕೆಯ ಬದಲಾಗುವ ಘಳಿಗೆ ವಿಶೇಷವಾದದ್ದು.

ಪ್ರತಿ ವರ್ಷ ಚೈತ್ರ ಶುದ್ಧ ಪ್ರತಿಪದೆ ಆರಂಭವಾಗುವ ಮಧ್ಯರಾತ್ರಿ ೧೨.೦೧ ಗಂಟೆಗೆ ಪೂಜಾರರ ಪೂಜಾರಿಕೆ ಬದಲಾಗುತ್ತದೆ. ಇದು ಪೂರ್ವ ಒಪ್ಪಿಗೆಯಿಂದ ಕೂಡಿರುತ್ತದೆ. ಸರದಿ ಪ್ರಕಾರ ಒಂದೊಂದು ಬಣಕ್ಕೆ ೩ ವರ್ಷಕ್ಕೊಮ್ಮೆ ಪೂಜಾರಿಕೆ ಸೇವೆ ಬರುತ್ತದೆ. ಪೂಜಾರಿಕೆ ಇರುವಾಗ ಆ ಬಣದ ಎಲ್ಲ ಪೂಜಾರಿಗಳು ಕಡ್ಡಾಯವಾಗಿ ದೇವಸ್ಥಾನದ ಪವುಳಿಗಳಲ್ಲಿ ವಾಸವಾಗುತ್ತಾರೆ.

ಆಧುನಿಕ ಸಂದರ್ಭದಲ್ಲಿ ಕಾಳಮ್ಮನ ಪೂಜಾರರು ಮೂರು ಬಣಗಳಲ್ಲಿ ವಿಂಗಡಣೆಗೊಂಡಿದ್ದಾರೆ. ಮೂಕಿಯರು, ಕರಿಬಣದವರು, ಶಹಪುರಕರ ಎಂದಿದೆ. ಆದರೆ ಇವೆರಲ್ಲರ ಪೂಜಾ ವಿಧಾನಗಳು ಒಂದೇಯಾಗಿವೆ. ಯುಗಾದಿಯ ಸಂದರ್ಭದಲ್ಲಿ ಗರ್ಭಗುಡಿ ಸೇವೆ ಯಾವ ಬಣದವರಿದಿದ್ದರೂ ಮೂರು ಬಣದವರು ಕೂಡಿಕೊಂಡು ಕಾರ್ಯನಿರ್ವಹಿಸುತ್ತಾರೆ. ಆದರೂ ಏನೋ? ಒಂದು ವೈಶಿಷ್ಟ್ಯತೆ ಈ ಬಣಗಳಲ್ಲಡಗಿದೆ. ಮೂಕಿಯರು ಎಂದು ಕರೆಯುವಾಗ ಕುಟುಂಬದ ಪೂರ್ವಜರು ಕಾಳಮ್ಮನ ಪೂಜೆ ಪುನಸ್ಕಾರ ನೈವೇಧ್ಯ ಸಮರ್ಪಣೆ ಮಹಾಮಂಗಳಾರತಿ ಮುಗಿಯುವವರೆಗೂ ಯಾರೊಂದಿಗೂ ಮಾತನಾಡದೆ ಮೂಕವಾಗಿ ಆರಾಧಿಸುವುದನ್ನು ರೂಢಿಸಿಕೊಂಡಿರಬೇಕು. ಹೀಗಾಗಿ ಭಕ್ತಸಮೂಹ ಇವರನ್ನು ಮೂಕ ಪೂಜಾರರು, ಮೂಕಿಯರು ಎಂದು ಗುರುತಿಸಿಕೊಂಡಿರಬೇಕು. ಪೂಜಾರರು ಮೂಕರಾಗಿ ಹುಟ್ಟಿ ದೇವರನ್ನು ಅರ್ಚಿಸಿ ಮೂಕಿಯರೆಂದು ಕರೆಸಿಕೊಳ್ಳುವ ಸಾಧ್ಯತೆಗಳೇ ಇಲ್ಲ! ಏಕೆಂದರೆ ಪೂಜಾರಿಗಳು ಜನ್ಮತಃ ಮೂಕರಾಗಿದ್ದರೆ ಮಂತ್ರೋಚ್ಚಾರಣೆಗಳಿಂದ ಕಾಳಮ್ಮನಲ್ಲಿ ದೈವಿಕತೆ ತುಂಬುವುದು ಕಷ್ಟವಾಗುತ್ತದೆ. ಹೀಗಾಗಿ ವಾಗ್ಮಿಗಳಾಗಿದ್ದು, ಪೂಜಾ ಸಂದರ್ಭದಲ್ಲಿ ಮಾತ್ರ ಮೂಕರಾಗಿದ್ದುಕೊಂಡು ಮಂತ್ರೋಚ್ಚಾರಣೆಗಳ ಮೂಲಕ ಕಾಳಮ್ಮನನ್ನು ಪೂಜಿಸಿದವರು ಮೂಕಿ ಕುಟುಂಬದವರಾಗಿರುವ ಸಾಧ್ಯತೆಗಳಿವೆ.

ಕರಿಬಣದವರು ಹೆಸರೆ ಸೂಚಿಸುವಂತೆ ಕಪ್ಪು ಬಣ್ಣದ ಪೂಜಾರರು ಕರಿಕಾಳಮ್ಮನ ಬಣ್ಣ ಯಥಾಸ್ಥಿತಿ ಈ ಬಣದ ಪೂಜಾರಿಗಳಿಗೆ ವರವಾಗಿ ಬಂದಿರಬೇಕು. ಇನ್ನು ಶಹಪೂರಕರ ಬಣವೆಂದು ಕರೆಸಿಕೊಳ್ಳುವ ಇನ್ನೊಂದು ಪೂಜಾರಿಗಳ ಬಣ ಈ ಬಣದ ಪೂರ್ವಜರು ಶಹಪೂರದಿಂದ ಬಂದವರು ಎಂಬ ಪ್ರತೀತಿಯಿದೆ. ಹೀಗೆ ಮೂರು ಬಣದ ಪೂಜಾರಿಗಳಲ್ಲಿ ಒಂದೊಂದು ವೈಶಿಷ್ಟ್ಯತೆಯಿರುವುದು ಕಂಡುಬರುತ್ತದೆ.

ಈಗಿನ ಪೂಜಾರಿಗಳಲ್ಲಿ ಮೂರು ಗುಂಪುಗಳನ್ನು ಕಂಡುಕೊಂಡರು ಇವರೆಲ್ಲ ಪುರಾತನ ಕಾಲದಲ್ಲಿ ಒಂದೇ ಬಣದವರಾಗಿದ್ದರೆಂಬ ಸತ್ಯವನ್ನು ಪೌರಾಣಿಕ ಮತ್ತು ಶಾಸನಕಾಲಗಳು ತಿಳಿಸುತ್ತವೆ. ಕ್ರಿ.ಶ. ೧೧೪೪ರ ಶಿರಸಂಗಿ ಶಾಸನವೊಂದರಲ್ಲಿ ತಿಳಿಸಿರುವಂತೆ ಈ ಶಾಸನದಲ್ಲಿ ೬ ಜನ ಗೌಡರ ಪ್ರಸ್ತಾಪ ಬರುತ್ತದೆ. ಅವರಲ್ಲಿ ಒಬ್ಬ ತೋಲಹ ಕುಲದ ಕಾವಗಾವುಂಡ ಭೂಮಿದಾನ ಮಾಡಿದ ವಿಷಯವಿದೆ. ೨ ಮತ್ತೇರು ಭೂಮಿಯನ್ನು ಗ್ರಾಮೇಶ್ವರ ದೇವಾಲಯಕ್ಕೆ ದಾನವಾಗಿ ನೀಡುವಾಗ

ಅದರ ಸ್ಥಾನಾಚಾರ್ಯ(ಪೂಜಾರಿ)ರುದ್ರಶಕ್ತಿದೇವನಿದ್ದನು ಎಂಬುದು ತಿಳಿದುಬರುತ್ತದೆ. ದೇವಾಲಯದ ಆಚಾರ್ಯ ಎಂತಹ ಗುಣಗಳನ್ನು ಸಂಪಾದಿಸಿದ್ದನೆಂಬುದನ್ನು ಶಾಸನವು ತಿಳಿಸುತ್ತದೆ. "ಜ್ಞಾನದ ಭಂಡಾರ, ಒಳ್ಳೆಯ ಗುಣಸಾಗರ, ದಾನದ ಖಣಿ, ಧರ್ಮವನ್ನು ಬೆಳಗುವ ದೀಪ ಪ್ರಸಿದ್ಧ ಕ್ಷೇತ್ರವಾದ ಗ್ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯ ರುದ್ರಶಕ್ತಿ ದೇವರ ಮಹಿಮೆ ಅಪಾರವಾದುದು." ಎಂದು ಆಚಾರ್ಯರ ಕುರಿತು ತಿಳಿಸಲಾಗಿದೆ. ಇವನ ಪರಮಶಿಷ್ಯ ವಾಮಶಕ್ತಿ ಇವರಿರ್ವರು ಕಾಳಾಮುಖ ರಾಜಗುರುಗಳಾಗಿದ್ದರು. ವಿಶ್ವಕರ್ಮರೇ ಆಗಿದ್ದರು ಎಂಬ ವಿಚಾರ ಶಾಸನದಿಂದ ತಿಳಿಯುತ್ತದೆ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ಶತಶತಮಾನಗಳಿಂದಲೂ ಶಿರಸಂಗಿ ದೇವಾಲಯದ ಪೂಜಾರಿಗಳು ವಿಶ್ವಕರ್ಮರು ಆಗಿದ್ದು, ಈಗಿನ ಪೂಜಾರಿಗಳ ೩೦೦ ವರ್ಷಗಳ ಹಿಂದಿನ ಪೂರ್ವಜರು ರುದ್ರಶಕ್ತಿ ಮತ್ತು ಆತನ ಶಿಷ್ಯವಾಮಶಕ್ತಿಯರೇ ಆಗಿರುವ ಸಾಧ್ಯತೆಗಳಿವೆ.

ಪೂಜಾರಿಗಳ ಪರಂಪರೆಯನ್ನು ಶಾಸನ ಕಾಲದಿಂದ, ಪುರಾತನ ಕಾಲಕ್ಕೆ ಕೊಂಡೊಯ್ಯ ಬೇಕಾಗಿದೆ. ಶಾಸನಕಾಲದ ರುದ್ರಶಕ್ತಿ ದೇವ–ವಾಮಶಕ್ತಿ ಇವರು ಈಗಿನ ಪೂಜಾರಿಗಳ ಪೂರ್ವಜರೆಂದು ಗುರುತಿಸಿದರೆ, ಈ ಪೂರ್ವಜರ ಇತಿಹಾಸ ಹಿಂದಕ್ಕೆ ಹೋದರೆ ಮೂಲ ಕಾಳಮ್ಮನ ಆರಾಧಕ ಯಾರೆಂಬುದು ಗೊತ್ತಾಗುವ ಸಾಧ್ಯತೆಯಿರುತ್ತದೆ. ರಾಮಾಯಣ ಕಾಲಕ್ಕೆ ದಶರಥ ಮಹಾರಾಜನ ಪುತ್ರಕಾಮೇಷ್ಠಿಯಾಗಕ್ಕೆ ಮುಖ್ಯ ಪೌರೋಹಿತ್ಯವಹಿಸಿದ್ದ ಋಷ್ಯಶೃಂಗ ವಿಶ್ವಕರ್ಮ ವಂಶಸಂಭೂತ ಉಗ್ರ ತಪಸ್ಸು ಮಾಡಿ ಆದಿಶಕ್ತಿಯನ್ನು ಕಾಳಮ್ಮನ ರೂಪದಲ್ಲಿ ಈಗಿನ ಶಿರಸಂಗಿಯಲ್ಲಿ ನೆಲೆಗೊಳಿಸಿ ನಿತ್ಯವು ದೇವಿಯನ್ನು ಪೂಜಿಸಿದವನು ಋಷ್ಯಶೃಂಗ ಇದರಿಂದಾಗಿ ತಿಳಿದು ಬರುವ ವಿಷಯವೇನೆಂದರೆ ಶಿರಸಂಗಿ ಪ್ರದೇಶದಲ್ಲಿ ಕಾಳಮ್ಮನ ಪ್ರಪ್ರಥಮ ಪೂಜಾರಿ ಋಷ್ಯಶೃಂಗನೇ ಆಗಿರಲೂಬೇಕು. ಹೀಗಾಗಿ ಯುಗ–ಯುಗದಿಂದಲೂ ಶಿರಸಂಗಿ ಕಾಳಮ್ಮನ ಪೂಜಾರಿಗಳು ಒಂದೇ ಕುಲದವರಾಗಿದ್ದು, ಅದು ವಿಶ್ವಕರ್ಮರೇ ಆಗಿದ್ದಾರೆ. ಇದಕ್ಕೆ ಶಾಸನಗಳು, ಪುರಾಣಗಳು ಐತಿಹ್ಯಗಳು, ಜಾನಪದ ಅಂಶಗಳು ಪುಷ್ಠಿನೀಡುತ್ತವೆ. ಒಟ್ಟಾಗಿ ಆಧುನಿಕ ಸಂದರ್ಭದ ಪೂಜಾರಿಗಳ ಮೂಲ ಪುರುಷರು ರುದ್ರಶಕ್ತಿದೇವ–ವಾಮಶಕ್ತಿ ಇವರಿಗಿಂತ ಪೂರ್ವದಲ್ಲಿ ಋಷ್ಯಶೃಂಗನು ಆಗಿರುವ ಎಲ್ಲ ಸಾಧ್ಯತೆಗಳು ಕಂಡುಬರುತ್ತವೆ.

ಹೀಗಾಗಿ ಶಿರಸಂಗಿ ಕಾಳಮ್ಮನ ಪೂಜಾರಿಗಳು ಯುಗ–ಯುಗದಿಂದಲೂ ವಂಶದ ಪುಣ್ಯದಿಂದ ಜ್ಞಾನದ ಆಗರವಾಗಿದ್ದಾರೆ. ಕುಶಲಕರ್ಮಿ ಬಾಂಧವರಿಗೆ ಕಾಳಮ್ಮನ ಪೂಜಾರಿಗಳು ಗುರುಸ್ಥಾನದಲ್ಲಿದ್ದಾರೆ. ಸಕಲ ವಿಶ್ವಕರ್ಮ ಬಂಧುಗಳಿಗೆ ಜ್ಞಾನಮಾರ್ಗಕಾರರಾಗಿದ್ದಾರೆ. 'ಗುರುವಿನಂತೆ ಶಿಷ್ಯ' ಎಂಬ ಮಾತಿನಂತೆ ವಿಶ್ವಕರ್ಮ ಕುಲಬಾಂಧವರಿಗೆ ಶಿರಸಂಗಿಯ ಪೂಜಾರಿಗಳು ಆದರ್ಶಪ್ರಾಯರು. ಆದರ್ಶನೀಯರಾದ ಪೂಜಾರಿಗಳು ಕಾಳಮ್ಮ ದೇವಾಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಅವಿರತವಾಗಿ ದುಡಿಯಬೇಕಾಗುತ್ತದೆ. ಅದಕ್ಕಾಗಿ ಭಕ್ತಕುಶಲಕರ್ಮಿಗಳೊಂದಿಗೆ ಅನ್ಯೂನ್ಯತೆಯಿಂದ

ಇರಬೇಕಾಗುತ್ತದೆ. ಅಷ್ಟೇ ಅಲ್ಲ ಅಭಿವೃದ್ಧಿ ಕಾರ್ಯ ಕೈಗೊಳ್ಳುವವರಿಗೆ ಸಹಾಯಕರಾಗಬೇಕಾಗುತ್ತದೆ. ಈ ದೃಷ್ಟಿಯಿಂದ ಶಿರಸಂಗಿಯಲ್ಲಿ ಪೂಜಾರಿಗಳು ಭಕ್ತರು, ದೇವಾಲಯದ ಆಡಳಿತ ಮಂಡಳಿಯೊಂದಿಗೆ ಸುಮಧುರ ಭಾವವನ್ನು ಮತ್ತಷ್ಟು ಬೆಳೆಸಿಕೊಂಡರೆ ಕ್ಷೇತ್ರದ ಅಭಿವೃದ್ಧಿ ಸಮಾಜೋದ್ಧಾರದ ಕೆಲಸಗಳು ನಿರೀಕ್ಷೆ ಮೀರಿ ಬೆಳೆಯಲು ಸಾಧ್ಯವಾಗುತ್ತವೆ.

ಆಧುನಿಕ ಸಂದರ್ಭದಲ್ಲಿ ಶಿರಸಂಗಿ ಕಾಳಮ್ಮ ದೇವಾಲಯದಲ್ಲಿ ಸಾಕಷ್ಟು ಬದಲಾವಣೆಗಳಾಗಿರುವ ಸಂಗತಿಗಳು ತಿಳಿದು ಬರುತ್ತವೆ. ಸ್ವಾತಂತ್ರ್ಯ ಪೂರ್ವದ ಶಿರಸಂಗಿ ಪರಿಸರ ಈಗ ಬದಲಾಗಿದೆ. ಸಮಸ್ಯೆಗಳ ಕೂಟವಾಗಿದ್ದ ಶಿರಸಂಗಿ ಕಾಳಮ್ಮನ ದೇವಾಲಯ, ಅಭಿವೃದ್ಧಿಯ ಹೆದ್ದಾರಿಯಾಗುತ್ತಿದೆ. ಭೌತಿಕವಾಗಿ ದೇವಾಲಯ ಆವರಣ ಹೊಸಸ್ವರೂಪ ಪಡೆದುಕೊಂಡಿವೆ. ಜಾತ್ರೆ- ಉತ್ಸವಗಳಲ್ಲಿ ಹೊಸತನವಿದೆ. ದೇವಸ್ಥಾನಕ್ಕೆ ಕುಶಲಕರ್ಮಿ ಬಂಧುಗಳು ಲಕ್ಷಾಂತರ ಸಂಖ್ಯೆಯಲ್ಲಿ ಸೇರಿ, ಸಮಾಜದಲ್ಲಿ ಐಕ್ಯತೆಯನ್ನುಂಟು ಮಾಡುತ್ತಿದ್ದಾರೆ. ಕುಶಲಕರ್ಮಿ ಬಂಧುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆರ್ಥಿಕಮಟ್ಟ ಸುಧಾರಿಸಿದೆ. ಇದರಿಂದ ದೇವಾಲಯಕ್ಕೆ ಹಣ ದಾನದ ರೂಪ ಪಡೆದುಕೊಂಡಿದೆ. ಕುಶಲಕರ್ಮಿಗಳಿಗೆ ಕಸಬು ಮೂಲ ಶಕ್ತಿಕೇಂದ್ರವಾಗಿ ಬೆಳೆಯುತ್ತಿದೆ. ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರ ಬರುವಿಕೆಯಿಂದ ಅಂಗಡಿಗಳು ಶಾಶ್ವತವಾಗಿ ಸ್ಥಾಪಿತವಾಗಿ ವ್ಯಾಪಾರೋಧ್ಯಮ ಬೆಳೆಯುತ್ತಿದೆ. ಕ್ಷೇತ್ರದ ಅಭಿವೃದ್ಧಿಗೆ ಕಾರಣರಾದ ಭಕ್ತ ಸಮೂಹದೊಂದಿಗೆ ಆಡಳಿತ ಮಂಡಳಿ ಮತ್ತು ಪಾರಂಪರಿಕವಾಗಿ ಬಂದ ದೇವಾಲಯದ ಪೂಜಾರಿಗಳಲ್ಲಿ ಸಮನ್ವಯತೆ ಸಾಧಿಸುತ್ತಿದೆ. ಇದರಿಂದಾಗಿ ಜಾಗತೀಕರಣದ ಎಂಥಹ ಗಾಳಿ ಶ್ರೀ ಕ್ಷೇತ್ರಕ್ಕೆ ಬೀಸಿದರೂ ಕೆಲವು ಸಂಗತಿಗಳಲ್ಲಿ ಯಾವ ರೀತಿಯಲ್ಲಿಯೂ ಬದಲಾವಣೆಗಳಾಗುವುದಿಲ್ಲ ಕೆಲವು ಸಣ್ಣ-ಪುಟ್ಟ ಬದಲಾವಣೆ ಅನಿವಾರ್ಯ ಬದಲಾವಣೆ ಜಗದನಿಯಮ.

ಕೊನೆ ಟಿಪ್ಪಣಿಗಳು

೧. ಡಾ.ವಿರುಪಾಕ್ಷ ಬಡಿಗೇರ, **ಶಿರಸಂಗಿ ಸಂಸ್ಥಾನ: ಒಂದು ಅಧ್ಯಯನ**, ೧೯೮೮, ಪು.೧೭೬

೨. ಡಾ.ವೀರೇಶ ಬಡಿಗೇರ, **ಪ್ರಪ್ರಥಮ ಶ್ರೀಕಾಳಿ ಪ್ರಶಸ್ತಿ ಪುರಸ್ಕೃತ, ಡಾ. ಚಂದ್ರಶೇಖರ ಕಂಬಾರ**, ೨೦೦೨, ಪು.VIII

೩. ಅದೇ, ಪು.೯೫

೪. ಅದೇ, ಪು.VIII

೫. ಡಾ.ಕಮಲಾ ಹೆಮ್ಮಿಗೆ, **ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ**, ೧೯೯೮, ಪು.೧೬೮

ಅಧ್ಯಾಯ ಏಳು

ಸಮುದಾಯ ಮತ್ತು ಉದ್ಯೋಗಗಳ ಪುನಶ್ಚೇತನದ ಆಯಾಮ

ಅಧ್ಯಾಯ ಏಳು

ಸಮುದಾಯ ಮತ್ತು ಉದ್ಯೋಗಗಳ ಪುನಶ್ಚೇತನದ ಆಯಾಮ

ಭಾರತವು ಬಹು ಸಮುದಾಯ, ಜನಾಂಗ, ಧರ್ಮ, ಭಾಷೆ, ಜಾತಿ–ಉಪಜಾತಿಗಳಿಂದ ಕೂಡಿದ ಸಾಮಾಜಿಕ ಶ್ರೇಣೀಕೃತ ದೇಶ. ದೇಶದಲ್ಲಿ ಮುಖ್ಯವಾಗಿ ನಾಲ್ಕು ವರ್ಗಗಳನ್ನು ಗುರುತಿಸಲಾಗುತ್ತದೆ. ಬ್ರಾಹ್ಮಣ, ಕ್ಷತೀಯ, ವೈಶ್ಯ ಮತ್ತು ಶೂದ್ರ, ಈ ವರ್ಗಗಳಲ್ಲಿ ವಿಶ್ವಕರ್ಮ ಕುಶಲಕರ್ಮಿವರ್ಗ ಪ್ರಥಮ ಬ್ರಾಹ್ಮಣ ವರ್ಗವಾಗಿದೆ. ಬ್ರಾಹ್ಮಣ ವರ್ಗದಲ್ಲಿ ಕರ್ಮಮಾರ್ಗಿಗಳಾಗಿ ವಿಶ್ವಕರ್ಮ ಬ್ರಾಹ್ಮಣವರ್ಗವೆಂದು ಗುರುತಿಸಲಾಗಿದೆ. ಕ್ರಿಪೂ. ೩–೪ ನೇ ಶತಮಾನದ ಸಂದರ್ಭದಲ್ಲಿ ಸಮುದಾಯದ ಶಿಲ್ಪ ಕುಶಲಕರ್ಮಿಗಳು ರಾಜ–ಮಹಾರಾಜರುಗಳಿಂದ ಭೂದಾನ ಪಡೆದುಕೊಂಡಿದ್ದ ರೆಂದು ಶಾಸನಲೇಖಗಳು ತಿಳಿಸುತ್ತವೆ. "ಈ ಜಾತಿಯು ಇಡೀ ಪ್ರಪಂಚದ ಜಾತಿಗಳಲ್ಲಿಯೇ ಉದಾತ್ತ ಧ್ಯೇಯ ಮತ್ತು ನಿರ್ವಿವಾದ ಗಟ್ಟಿ ಸತ್ಯಗಳ ಮೇಲೆ ನಿಂತಿರುವ ಜಾತಿ ವಿಶ್ವಕರ್ಮರ ಕೀರ್ತಿ, ತೇಜಸ್ಸು, ಪ್ರಸಿದ್ಧಿಗಳು ಅವರ ಜಾತಿಗೆ ವಿಶ್ವದಲ್ಲಿ ಉನ್ನತ ಸಾಮಾಜಿಕ ಸ್ಥಾನ–ಮಾನ, ರಾಜಮಾನ್ಯತೆ ಮತ್ತು ಉನ್ನತೋನ್ನತ ಘನತೆಗಳನ್ನು ದೊರಕಿಸಿಕೊಟ್ಟಿವೆ."[೧]

ವಿಶ್ವಕರ್ಮರು ಬ್ರಾಹ್ಮಣರಾದುದರಿಂದ ರಾಜ–ಮಹಾರಾಜರುಗಳ ಪಟ್ಟಾಭಿಷೇಕ ಮಹೋತ್ಸವ ದಲ್ಲಿ ಪೌರೋಹಿತ್ಯ ನಡೆಸುತ್ತಿದ್ದರು. ಆಚಾರ್ಯರಾಗಿದ್ದ ಇವರಿಗೆ ಉನ್ನತ ಸ್ಥಾನಮಾನ, ಗೌರವ ಗಳೊಂದಿಗೆ ಭೂದಾನ ನೀಡಲಾಗುತ್ತಿತ್ತು. ಲಂಕೆಯಲ್ಲಿ ರಾಜರಿಂದ ಭೂಮಿ ಮತ್ತು ಬಿರುದಾವಳಿಗಳನ್ನು ಅಗಣಿತವಾಗಿ ಪಡೆದುಕೊಂಡ ಸಮುದಾಯವಾಗಿದೆ. ದೇಶ–ವಿದೇಶಗಳಲ್ಲಿಯೂ ವಿಶ್ವಕರ್ಮ ಕುಶಲಕರ್ಮಿ ಸಮುದಾಯವರನ್ನು ಗೌರವಿಸಲಾಗುತ್ತಿತ್ತು. ಹೀಗೆ ವಿಶ್ವಕರ್ಮರು ಜ್ಞಾನ ಮತ್ತು ಕ್ರಿಯೆಯಿಂದ ಲೋಕ ಪ್ರಸಿದ್ಧರಾಗುತ್ತಿದ್ದರು. ಇವರ ಪ್ರಸಿದ್ಧಿಯನ್ನು ಸಹಿಸದ ವಿಶ್ವಕರ್ಮ ಬ್ರಾಹ್ಮಣರ ಮತ್ತೊಂದು ವರ್ಗವು ಕುಶಲಕರ್ಮಿ ಸಮುದಾಯದ ಜೊತೆ ಅಸಹನೀಯ ಕಾರ್ಯಗಳಲ್ಲಿ ಭಾರತೀಯ ಮೇಲ್ವರ್ಗ ತೊಡಗಿತು. ಹೇರಳವಾಗಿ ದೊರೆಯುತ್ತಿದ್ದ ಅವಕಾಶಗಳ ಸಮುದಾಯಕ್ಕೆ ದೊರೆಯದಾದವು.

ಸಾಮಾಜಿಕ ತುಳಿತಕ್ಕೆ ಒಳಗಾದರು. ವಿಶ್ವಕರ್ಮ ಕುಶಲಕರ್ಮಿ ಸಮುದಾಯದ ಉನ್ನತ ಸ್ಥಾನ-ಮಾನಗಳು ಕೆಳಮುಖಗೊಂಡವು.

ಬ್ರಾಹ್ಮಣರ ಸಮಾನವಾಗಿದ್ದ ಕುಶಲಕರ್ಮಿ ಸಮುದಾಯದ ಸ್ಥಾನ-ಮಾನಗಳು ಕೆಳಮುಖ ಗೊಳ್ಳಲು ಅಸೂಯೆ- ಅಸಹಕಾರಗಳು ಪ್ರಮುಖ ಕಾರಣವೆನಿಸುತ್ತವೆ. ಸಮುದಾಯದವರ ಮೇಲಿನ ಸೇಡು ಅಗ್ನಿಯಾಗಿ ಉರಿದ ಕಥನಗಳನ್ನು ಕೇಳುತ್ತೇವೆ. ಗುಡಿ-ಗುಂಡಾರುಗಳ ಜೊತೆ ಕೋಟೆ-ಕೊತ್ತಲುಗಳನ್ನು ನಿರ್ಮಿಸುವ ಕುಶಲಕರ್ಮಿಗಳು ಕಿ.ಪೂ. ೬೦೦ರಲ್ಲಿ ಸಿಂಹಳ ದ್ವೀಪದ 'ಮಹಾಂತೆ'ಯಲ್ಲಿ ಆಯಸ್ಕಾಂತದ ಕೋಟೆಯನ್ನು ಕಟ್ಟಿದ್ದರು. ಛಪ್ಪನ್ನ ದೇಶಗಳ ಅರಸರಿಗೆ ಕಬ್ಬಿಣ, ಕಟ್ಟಿಗೆ, ಕಂಚು-ಹಿತ್ತಾಳೆ, ಶಿಲ್ಪ ಮತ್ತು ಬಂಗಾರ-ಬೆಳ್ಳಿ ಲೋಹದ ಕೆಲಸಗಳನ್ನು 'ಮಹಾಂತೆ' ನಗರದಲ್ಲಿ ಮಾಡಿಕೊಡುತ್ತಿದ್ದರು. ಪ್ರಭು ಮತ್ತು ಪ್ರಜೆಗಳ ಪ್ರೀತಿ ಸಂಪಾದಿಸಿದ ಕುಶಲಕರ್ಮಿಗಳು ಜ್ಞಾನ-ವಿಜ್ಞಾನಿಗಳು ಮತ್ತು ಆಚಾರಿಗಳಾಗಿದ್ದರು. ವ್ಯಾಸನೆಂಬ ಕುಶಲಕರ್ಮಿ ಅಸನೀಯ ವ್ಯಕ್ತಿ-ಭತೃಹರಿ ರಾಜನಿಗೆ ಕುಶಲಕರ್ಮಿಗಳಲ್ಲಿ ಒಡಕು ಉಂಟಾಗುವಂತೆ ಪಿತೂರಿ ಮಾಡುತ್ತಾನೆ. ಐದು ಬಗೆಯ ಕಸಬುಗಳನ್ನು ನಿರ್ವಹಿಸುತ್ತ, ವೈರಿನಾಶಕವಲ್ಲದ ಕೋಟೆ ನಿರ್ಮಿಸಿದುದರಿಂದ ರಾಜಮಾನ್ಯ ದಿಂದ ಜೀವನ ಸಾಗುತ್ತಿದ್ದರು. ಕೋಟೆಯ ರಹಸ್ಯ ಕುಶಲಕರ್ಮಿಗಳು ಮಾತ್ರ ಬಲ್ಲವರಾಗಿದ್ದರು. ವ್ಯಾಸ, ವಂಚನೆಯಿಂದ ರಹಸ್ಯ ಬೇಧಿಸಿ ಕೋಟೆಯನ್ನು ಭರ್ತೃಹರಿಗೆ ದೊರೆಯುವಂತೆ ಮಾಡುತ್ತಾನೆ. ಇದರಿಂದ ಕುಶಲಕರ್ಮಿಗಳು ರಾಜಮನ್ನಣೆ- ಗೌರವ ಕಳೆದುಕೊಂಡು ಒಂದೆಡೆಯಿದ್ದವರು ವಿವಿಧೆಡೆ ಚದುರಿಹೋಗುತ್ತಾರೆ. ಅಸಂಘಟಿತರಾಗುತ್ತಾರೆ. ಅಲ್ಪ ಸಂಖ್ಯಾತರಾಗಿ ಮೂಲವಿದ್ದ ಆಚಾರ್ಯತ್ವ ಸಾಮಾಜಿಕ ಸ್ಥಾನ-ಮಾನ ಹೊರಟು ಹೋಗುತ್ತವೆ. ಅಂದಿನಿಂದ ಇಂದಿನವರೆಗೂ ಕುಶಲಕರ್ಮಿಗಳಲ್ಲಿ ತಮ್ಮ ಸಾಮಾಜಿಕ ಸ್ಥಾನ-ಮಾನಗಳಿಸಿಕೊಳ್ಳಲು ಸಾಧ್ಯವಾಗದೆ ಪರದಾಡಬೇಕಾಗಿದೆ.

ಆಯಸ್ಕಾಂತ ಕೋಟೆಯ ಪಥನದಿಂದ ಸಾಮಾಜಿಕ ಜೀವನದಲ್ಲಿ ಪಥನಗೊಂಡ ಕುಶಲಕರ್ಮಿ ಸಮುದಾಯ ಕಂಚಿಯಲ್ಲಿಯೂ ಶೋಷಣೆಗೊಳಗಾಯಿತು. ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಹೆಣಗಾಡಬೇಕಾಯಿತು. ಕಸಬು ತೆರಿಗೆ ಕುಶಲಕರ್ಮಿಗಳಿಗೆ ಮುಳುವಾಯಿತು. ಸಪ್ತಾರ್ಷೆಯ ಬ್ರಾಹ್ಮಣರು ಕುಶಲಕರ್ಮಿ ಸಮುದಾಯವನ್ನು ದ್ವೇಷಿಸುತ್ತ ಅವರ ಸ್ಥಾನಗಳಿಗೆ ಚ್ಯುತಿ ತರಲು ಸದಾ ಪ್ರಯತ್ನಿಸುತ್ತಿದ್ದರೆಂದು 'ಕಂಚಿ ಪುರಾಣ' ಕೃತಿಯಿಂದ ತಿಳಿದು ಬರುತ್ತದೆ. 'ಪರಿಮಳ ಚೋಳ'ನ ಕಾಲದಲ್ಲಿಯೂ ಕುಶಲಕರ್ಮಿ ಸಮುದಾಯ ಕುಲಕಸಬಿನೊಂದಿಗೆ ಮಂತ್ರಿಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಅಮರಸಿಂಹನು ಮಂತ್ರಿ ಪದವಿ ಆಶೆಯಿಂದಾಗಿ ಕಳಿಂಗನ ಕೆಂಗಣ್ಣಿಗೆ ಗುರಿಯಾದರು. ಚೋಳ ಸಾಮ್ರಾಜ್ಯದ ವಿದ್ಯಾಗುರು ವ್ಯಾಸ (ಮಹಾಭಾರತ ಕರ್ತೃ ಅಲ್ಲ) ಪರಿಮಳ ಚೋಳನ ಅಕ್ರಮ ಸಂತಾನ ಕಳಿಂಗನಿಗೆ ಉಪಾಯ ಹೂಡಿ ರಾಜ್ಯ ಸಿಗುವಂತೆ ಮಾಡುತ್ತಾನೆ.

ಕಳಿಂಗನ ವ್ಯಾಸನಿಗೆ ಪ್ರಮುಖ ಸ್ಥಾನ ನೀಡುತ್ತಾನೆ. ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಉನ್ನತ ಸ್ಥಾನಿಗಳಾಗಿದ್ದ ಕುಶಲಕರ್ಮಿಗಳು ಸ್ಥಾನಪಲ್ಲಟಿಗಳಾಗುತ್ತಾರೆ ಎಂದು 'ಪರಿಮಳ ಚೋಳ ಚರಿತ್ರೆ' ತಿಳಿಸುತ್ತದೆ.

ಹೀಗೆ ಅಸೂಯೆ– ಅಸಹಕಾರ, ಅಧಿಕಾರಲಾಲಸೆ, ಮೋಸ– ವಂಚನೆಗಳಿಂದಾಗಿ ಕುಶಲಕರ್ಮಿ ಸಮುದಾಯ ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಅವನತಿಯನ್ನು ಹೊಂದುತ್ತದೆ. ಸಮುದಾಯದ ವಿರುದ್ಧ ಪಿತೂರಿ, ಕುತಂತ್ರಗಳು ನಡೆಯುತ್ತಲೆ ಬಂದವು. ಇದರ ಪರಿಣಾಮವಾಗಿ ಸಾಮಾಜಿಕ ಶ್ರೇಣಿ ಕೆಳಗಿಳಿಯಿತು. ಶತ–ಶತಮಾನಗಳವರೆಗೂ ಮೂಲ ಸ್ಥಾನದಿಂದ ವಂಚಿತರಾಗಿ ಜೀವನ ಸಾಗಿಸಬೇಕಾಗುತ್ತಿದೆ. ಪೌರೋಹಿತ್ಯ ಆಚಾರ್ಯತ್ವ ನಿಂತುಹೋಯಿತು. ಜೀವನೋಪಾಯಕ್ಕೆ ಉಳಿದಿರುವ ಒಂದೇ ಒಂದು ಹಾದಿ ಕುಲಕಸಬುಗಳನ್ನು ನಿರ್ವಹಿಸುವುದು. ಐದು ಬಗೆಯ ಕಸಬಿನಲ್ಲಿ ಮುಂದುವರೆದು ರೈತಾಪಿ ಸಮುದಾಯದ ಕೃಷಿಯೋಪಕರಣಗಳನ್ನು ತಯಾರಿಸಿ ಕೊಡಲಾರಂಭಿಸಿದರು. ಕುಶಲ ಕಲೆಯ ಮೂಲಕ ಭಾರತೀಯ ಸಮಾಜದ ಎಲ್ಲ ವರ್ಗದವರಿಗೆ ಉಪಕರಣ–ಆಭರಣ, ದೇವಾಲಯ ಮೂರ್ತಿಗಳನ್ನು ತಯಾರಿಸುತ್ತಿದ್ದಾರೆ. ರೈತನ ಬೆನ್ನೆಲುಬಾಗಿ ಕುಶಲಕರ್ಮಿಗಳು ನಿಂತಿದ್ದಾರೆ. ರೈತರಿಂದ 'ಆಯ' ಪಡೆಯುವ ಮೂಲಕ ಆಯಗಾರ ಸಮುದಾಯವಾಗಿದ್ದಾರೆ. ಸಮಾಜ ಸೇವೆ ಮಾಡುತ್ತ, ಪ್ರತಿ ಹಳ್ಳಿ–ಪಟ್ಟಣಗಳಲ್ಲಿ ಅತ್ಯಂತ ಅವಶ್ಯಕತೆಯ ಕಸಬುದಾರರಾಗಿದ್ದಾರೆ. ರೈತನು ಬೆಳೆದ ಹೊಲದಲ್ಲಿ ಕುಶಲಕರ್ಮಿ 'ಕೈಗೆ ತಾಗುವಷ್ಟು, ಮನಸ್ಸಿಗೆ ಹಿಡಿಸುವಷ್ಟು' ಧವಸ– ಧಾನ್ಯವನ್ನು ಪಡೆದುಕೊಂಡು ಬರುತ್ತಾನೆ. ಇಂದಿಗೂ ಹಳ್ಳಿಗಳಲ್ಲಿ 'ಆಯಗಾರ'ನೆಂದರೆ ಮನೆಯ ಮಗನಿದ್ದಂತೆ. ರೈತರು ಸಮುದಾಯಕ್ಕೆ ಅಷ್ಟು ಮುಕ್ತ ಸ್ವಾತಂತ್ರ್ಯ ನೀಡಿದ್ದಾರೆ. ಹೀಗಾಗಿ ರೈತ ಮತ್ತು ಕುಶಲಕರ್ಮಿ ಸಮುದಾಯದಲ್ಲಿ ಅನ್ಯೂನ್ಯ ಸಂಬಂಧ ಬೆಳೆದುಬಂದಿದೆ.

ಬ್ರಾಹ್ಮಣೀಯ ಮೂಲ ಜ್ಞಾನದ ಬಲದಿಂದ ಕುಶಲಕರ್ಮಿಗಳು ಯಂತ್ರ– ಮಂತ್ರ– ತಂತ್ರ, ನಾಟಿವೈದ್ಯ ಚಿತ್ರಗಾರ, ಕಲಾವಿದ, ಗ್ರಾಮದೇವತೆಗಳ ಪೂಜಾರಿಗಳಾಗಿ ರೈತ ಸಮುದಾಯದೊಂದಿಗೆ ಜೀವನ ನಿರ್ವಹಿಸುತ್ತಿದ್ದಾರೆ. ಆದರೆ ಇದುವರೆಗೂ ತಮ್ಮ ಮೂಲ ಸ್ಥಾನ–ಮಾನಗಳಿಗೆ ಬರಲು ಸಾಧ್ಯವಾಗುತ್ತಿಲ್ಲ. ಸಾಮಾಜಿಕವಾಗಿ ಇಂದು ಕುಶಲಕರ್ಮಿಗಳು ಹಿಂದುಳಿದ ವರ್ಗವಾಗಿದ್ದಾರೆ. ಹಿಂದುಳಿದವರಲ್ಲಿಯೇ ಅಲ್ಪಸಂಖ್ಯಾತರಾಗಿ ಸಮಾಜದಲ್ಲಿ ಗುರುತಿಸಲ್ಪಟ್ಟಿದ್ದಾರೆ.

ಸಮುದಾಯದ ಆರ್ಥಿಕ ಪರಿಸ್ಥಿತಿ

ಪಂಚಾಳ ಕುಶಲಕರ್ಮಿ ಸಮುದಾಯ ಒಂದು ಕಾಲದಲ್ಲಿ ಧಾರ್ಮಿಕ, ಸಾಮಾಜಿಕವಾಗಿ ಉನ್ನತ ಸ್ಥಾನದಲ್ಲಿತ್ತು. ಹಾಗೆಯೇ ರಾಜ–ಮಹಾರಾಜರುಗಳಿಂದ ಭೂದಾನ ಪಡೆದು, ಕಸಬು ತೆರಿಗೆಯಿಂದ ವಿನಾಯಿತಿ ಪಡೆದು ಆರ್ಥಿಕವಾಗಿಯೂ ಉತ್ತಮ ಸ್ಥಿತಿಯಲ್ಲಿತ್ತು. ಆದರೆ ಸಾಮಾಜಿಕ–

ಧಾರ್ಮಿಕವಾಗಿ ಕೆಳಮುಖಗೊಂಡಾಗ ಸಮುದಾಯದ ಆರ್ಥಿಕ ಸ್ಥಿತಿ–ಗತಿಯು ಕೆಳಸ್ತರವಾಯಿತು. ಕಸಬುಗಳು ಜೀವನೋಪಾಯಕ್ಕಾಗಿ ಮಾತ್ರ ಎಂಬಂತಾಗಿವೆ. ಲಾಭಾಂಶ ಮಾತ್ರ ಶೂನ್ಯವಾಗಿದೆ. 'ಆಯಗಾರಿಕೆ' ವ್ಯವಸ್ಥೆಯಲ್ಲಿ ವರ್ಷದುದ್ದಕ್ಕೂ ಕುಶಲಕರ್ಮಿ ಸಮುದಾಯ ದುಡಿಯುತ್ತಿದೆ. ರೈತ ಸಮುದಾಯದ ಎಲ್ಲ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿತ್ತು. ವರ್ಷದುದ್ದಕ್ಕೂ ದುಡಿದು ಮೈಯಲ್ಲಿ ಬೆವರಿಳಿದರೆ, ಕೈಯಲ್ಲಿ ಕಾಸು ಇರುತ್ತಿರಲಿಲ್ಲ. ರಾಶಿಯ ಸಂದರ್ಭದಲ್ಲಿ ರೈತರ ಕಡಿ–ಕಾಳುಗಳು (ಸೊರಗ ಜೋಳ) ಕುಶಲಕರ್ಮಿ ಮನೆ ಸೇರುತ್ತಿದ್ದವು. ಕೆಲವೇ ದಿನಗಳಲ್ಲಿ ಮನೆಯಲ್ಲಿದ್ದ ಧವಸ–ಧಾನ್ಯಗಳು ಪಟ್ಟಣದ ಮಾರುಕಟ್ಟೆ ಸೇರುತ್ತಿದ್ದವು. ಕೈಗೆ ಬಂದ ಕಾಸು ಅದಕ್ಕಿದಕ್ಕೆ ಒಂದಿಷ್ಟು ಖರ್ಚು ಆಗಿ ಪೈಸೆಗಳು ಮಾತ್ರ ಉಳಿಯುತ್ತಿದ್ದವು.

ಕುಶಲಕರ್ಮಿ ನಿತ್ಯ ದುಡಿದರೂ ದುಡ್ಡು ಮಾತ್ರ ಸಾಕಾಗುತ್ತಿರಲಿಲ್ಲ. ಕೆಲವೊಂದು ಕುಶಲಕರ್ಮಿ ಕುಟುಂಬಗಳಲ್ಲಿ ದುಡಿಮೆದಾರ ಒಬ್ಬನಿದ್ದರೆ, ಖರ್ಚುದಾರರು ೬–೮ ಜನ ಇರುತ್ತಿದ್ದರು. ಬಹುತೇಕ ಎಲ್ಲ ಕುಶಲಕರ್ಮಿಗಳ ಮನೆ ಪರಿಸ್ಥಿತಿಯೂ ಹೀಗೆ ಇರುತ್ತದೆ. ಕಿರಿಯ ಸಹೋದರರನ್ನು ಬೆಳೆಸುವುದು ಮುಂಜಿ–ಮದುವೆ ಮಾಡಿಸುವುದು, ಅಷ್ಟರಲ್ಲಿಯೇ ಮಕ್ಕಳ ಅಲ್ಪ ಶಿಕ್ಷಣ, ಮುಂಜಿ–ಮದುವೆ ಮಾಡುವಷ್ಟರಲ್ಲಿ ಕುಶಲಕರ್ಮಿಯ ಜೀವನವೇ ಮುಗಿದು ಹೋಗುತ್ತದೆ. ಸಾಹುಕಾರರ ಸಾಲದ ಸುಳಿಯಲ್ಲಿ ಸಿಲುಕಿ ಹೊರಬಾರದೆ ಒದ್ದಾಡಬೇಕಾಗುತ್ತದೆ. ಆಯಕ್ಕಿಂತ ವ್ಯಯವೇ ಈ ಸಮುದಾಯದಲ್ಲಿ ಹೆಚ್ಚಾಗಿದ್ದು ಕಂಡುಬರುತ್ತದೆ.

ಕುಶಲಕರ್ಮಿ ೧, – ಅವಲಂಭಿತರು ೫ ಜನ ದಿನಕ್ಕೆ ೪೦೦ ರೂ ದುಡಿಮೆ ಸಂತೆದಿನ ಹೊರತುಪಡಿಸಿ ೪೦೦ ರೂ x ೬ ದಿನ = ೨೪೦೦ ರೂಪಾಯಿಗಳು ತಿಂಗಳ ಆದಾಯದಲ್ಲಿ ೨೪೦೦ ರೂ x ೪ ವಾರಗಳು = ೨೪ ದಿನಗಳು ೨೪ ದಿನಗಳಿಗೆ = ೯೬೦೦ ರೂಪಾಯಿ ಒರ್ವ ಕುಶಲಕರ್ಮಿಯ ತಿಂಗಳ ಆದಾಯ ೯೬೦೦ ರೂ ಒಂದು ವರ್ಷದಲ್ಲಿ ಮಳೆಗಾಲ ಸಹಿತ ೧೦ ತಿಂಗಳು ಕಸಬುಗಳು ನಡೆಯುತ್ತವೆ. ಒಟ್ಟು ೯೬೦೦೦ ರೂಪಾಯಿಗಳು ವರ್ಷದ ಆದಾಯವಾಗಿದೆ. ಆದರೆ ಖರ್ಚುದಾರರು ೫ ಜನರಿರುವುದರಿಂದ ಈ ಕುಟುಂಬದ ಆದಾಯಕ್ಕಿಂತ ಖರ್ಚು ಹೆಚ್ಚಿರುತ್ತದೆ.

ಕಿರಾಣಿ ಅಂಗಡಿ ಖರ್ಚು– ತಿಂಗಳಿಗೆ	– ೩೦೦೦ ರೂ.
ದುಡಿಮೆ (೨೪ ದಿನಗಳು)	– (೩೦ ದಿನಕ್ಕೆ) ಖರ್ಚು
ಮೊಸರು– ಹಾಲು	– ೫೦೦ ರೂ.
ವಾರದ ಕಾಯಿಪಲ್ಯೆ ಸಂತೆ	– ೨೦೦೦ ರೂ (೧ತಿಂಗಳಿಗೆ)
ವಿದ್ಯುತ್ ಬಿಲ್ಲ್	– ೩೦೦ ರೂ.

ದೂರದರ್ಶನ (ಟಿವಿ)	–	೨೦೦ ರೂ.
ಮಕ್ಕಳ ಶಾಲೆ ಖರ್ಚು	–	೫೦೦ ರೂ.
ಇತರೆ ಖರ್ಚು	–	೧೦೦೦ ರೂ.
	–	೬೫೦೦ ರೂ.
ತಿಂಗಳ ಒಟ್ಟು ಆದಾಯದಲ್ಲಿ ಉಳಿತಾಯ	–	೩೦೦೦ ರೂ.
೩೦೦೦ x ೧೦ = ೩೦,೦೦೦ ರೂ ಉಳಿತಾಯ	–	೯೫೦೦ ರೂ.
೧೨ ತಿಂಗಳು x ೬೫೦೦ ರೂ ಖರ್ಚು	–	೭೮೦೦೦ ರೂ.
ವರ್ಷದ ಆದಾಯ	–	೯೬೦೦೦ ರೂ.
	–	೧೮೦೦೦ ರೂ ಉಳಿತಾಯ

ಒಬ್ಬಕುಶಲಕರ್ಮಿ ವರ್ಷಕ್ಕೆ ೧೮,೦೦೦ ರೂ ಉಳಿತಾಯಿಸಿದರೆ ಇಡೀ ಜೀವಮಾನದಲ್ಲಿ ಅಂದರೆ ೬೦ ರಿಂದ ೭೦ ವರ್ಷಗಳನ್ನು ಪರಿಗಣಿಸಿದಾಗ, ೧೮೦೦೦ x ೫೦ ವರ್ಷಗಳು (೨೦ನೇ ವರ್ಷಕ್ಕೆ ಆದಾಯ ಗಳಿಕೆ ಆರಂಭ) ಒಟ್ಟು ೯,೦೦,೦೦೦ (ಲಕ್ಷ) ಹಣ ಉಳಿತಾಯವಾಗುತ್ತದೆ. ೯ ಲಕ್ಷ ಹಣದಲ್ಲಿ ಮಕ್ಕಳ (೩ ಜನ) ಮದುವೆ, ಶಿಕ್ಷಣ ಉದ್ಯೋಗ, ಬಟ್ಟೆ-ಬರೆ-ಸಂಬಂಧಿಕರ ಕೊಡುಕೊಳ್ಳುವಿಕೆಯ ಉಡುಗೊರೆ ಖರ್ಚು ಗಮನಿಸಿದರೆ ೯ ಲಕ್ಷ ರೂ ಸಾಲದೇ ಮತ್ತೇ ೯ ಲಕ್ಷ ರೂಪಾಯಿ ಸಾಲ ಮಾಡಿ ಸಾಲದ ಹೊರೆಯನ್ನು ಮಗನ ಮೇಲೆ ಹೊರಿಸಬೇಕಾಗುತ್ತದೆ. ಮಗನ ಜೀವಮಾನದ ಒಟ್ಟು ಆದಾಯದಲ್ಲಿ ೯ ಲಕ್ಷ ಸಾಲವಾಗಿರುತ್ತದೆ. ಅದರ ಜೊತೆ ತಂದೆ ಮಾಡಿದ ೯ ಲಕ್ಷ ಕೂಡಿ ೧೮ ಲಕ್ಷ ರೂಪಾಯಿ ೨ನೇ ತಲೆಮಾರಿಗೆ ಸಾಲವಾಗುತ್ತದೆ.

ಇಲ್ಲಿ ನಾನು ಕೇವಲ ಒರ್ವ ಕುಶಲಕರ್ಮಿಯ ಕುರಿತಾಗಿ ಆಯ-ವ್ಯಯಗಳ ಆರ್ಥಿಕ ಪರಿಸ್ಥಿತಿಯನ್ನು ಚರ್ಚಿಸಿದ್ದೇನೆ. ಬಹುತೇಕ ಇಡೀ ಕುಶಲಕರ್ಮಿ ಸಮುದಾಯದ ಆರ್ಥಿಕ ಸ್ಥಿತಿ-ಗತಿ ಒಂದೇ ಆಗಿರುತ್ತದೆ. ಇದರಿಂದಾಗಿ ಪಂಚಾಳ ಕುಶಲಕರ್ಮಿ ಸಮುದಾಯ ಆರ್ಥಿಕವಾಗಿ ಮೇಲ್ಮಟ್ಟಕ್ಕೆ ಏರಲು ಸಾಧ್ಯವಾಗುತ್ತಿಲ್ಲ.

ಜಾಗತೀಕರಣದ ಬಿರುಗಾಳಿಯಿಂದಾಗಿ ಕುಶಲಕರ್ಮಿಗಳು ಆರ್ಥಿಕವಾಗಿ ಕಂಗೆಟ್ಟಿದ್ದಾರೆ. ಚಿನ್ನ-ಬೆಳ್ಳಿ, ಕಬ್ಬಿಣ, ಕಟ್ಟಿಗೆ, ಶಿಲೆಯ ವ್ಯವಹಾರಗಳಲ್ಲಿ ಬದಲಾವಣೆಗಳಾಗುತ್ತಿವೆ. ಹಳ್ಳಿಗಳಲ್ಲಿ ಅಕ್ಕಸಾಲಿಗನ ಮನೆಗಳು ಬದಲಾಗಿವೆ. ಚಿನ್ನಾಭರಣ ತಯಾರಿಕಾ ಮಜೂರಿ ಏರಿಕೆಯಾಗಿಲ್ಲ ದಿನದಿಂದ ದಿನಕ್ಕೆ ಬಂಗಾರ-ಬೆಳ್ಳಿ ದರ ಏರಿಕೆಯಾಗುತ್ತಿರುತ್ತದೆ. ಕೆಲಸ ಕಡಿಮೆಯಾಗಿ ಖರ್ಚು ಹೆಚ್ಚಾಗುತ್ತಿದ್ದಂತೆ ಸಾಲ ಹೆಚ್ಚಾಗುತ್ತ ಹೋಗುತ್ತದೆ. ಇತ್ತೀಚೆಗೆ ೨೦೧೬ ನವೆಂಬರ್ ೮ರ ಅವಧಿಯಲ್ಲಿ ಕ್ಷೇತ್ರಕಾರ್ಯದಲ್ಲಿದ್ದಾಗ ಭಾರತದಲ್ಲಿ ೫೦೦ ಈ ನೋಟು ಅಮಾನ್ಯವಾದವು. ಇದರ ಪರಿಣಾಮ

ಕುಶಲಕರ್ಮಿಗಳಿಗೆ ಕೆಲಸ ಒತ್ತಡ ಕಡಿಮೆಯಾಯಿತು. ಕೆಲವೇ ದಿನಗಳಲ್ಲಿ ಕೈಯಲ್ಲಿದ್ದ ಕೆಲಸಗಳು ನಿಂತುಹೋದವು. ೧-೨ ವರ್ಷಗಳಲ್ಲಿ ಕುಶಲಕರ್ಮಿಗಳಿಗೆ ಉದ್ಯೋಗವಕಾಶಗಳು ಕ್ಷೀಣಿಸಿವೆ. ಇದರಿಂದಾಗಿ ಪಂಚಾಳ ಕುಶಲಕರ್ಮಿಗಳು ಆರ್ಥಿಕವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. "ವಾಸ್ತವವಾಗಿ, ಜಾಗತೀಕರಣವು ವಿಶೇಷವಾಗಿ ಪಾರಂಪರಿಕ ಕುಶಲಕರ್ಮಿಗಳಾದ ಸ್ವರ್ಣಕಾರರು, ಕಮ್ಮಾರರು, ಬಡಗಿಗಳು ಮತ್ತು ಲೋಹಕಾರರ ಮಹತ್ವವನ್ನು ಕಡೆಗಣಿಸುತ್ತಿದೆ. ಈ ಜಾಗತೀಕರಣವು ವ್ಯಾಪಾರಿವರ್ಗ ಮತ್ತು ಗ್ರಾಹಕವರ್ಗ ಸ್ವಲ್ಪ ಮಟ್ಟಿಗೆ ಅನುಕೂಲಕರವಾಗಿದೆ. ಇದು ಎಂದೆಂದಿಗೂ ಕುಶಲಕರ್ಮಿಗಳಿಗೆ ಲಾಭದಾಯಕವಾಗಿಲ್ಲ"[೨]

ಸಮುದಾಯ ಶತ-ಶತಮಾನಗಳಿಂದ ಸಾಮಾಜಿಕವಾಗಿ ಕೆಳಮುಖವಾಗಿರುವುದರೊಂದಿಗೆ ಆರ್ಥಿಕವಾಗಿಯೂ ಹಿಂದುಳಿದ ಸಮುದಾಯವಾಗಿದೆ. ಕುಲಕಸಬುಗಳಲ್ಲಿ ಸುಧಾರಣೆಗಳನ್ನು ತರುವ ಮೂಲಕ ಆರ್ಥಿಕಭಿವೃದ್ಧಿಯನ್ನು ಸಮುದಾಯ ಹೊಂದಬೇಕಾಗಿದೆ.

ಸಮುದಾಯದ ಆಚರಣೆ-ಸಂಪ್ರದಾಯಗಳು

ಪಂಚಾಳ ಕುಶಲಕರ್ಮಿ ಸಮುದಾಯದವರು ವಿಶಿಷ್ಟ ಸಂಪ್ರದಾಯ ಆಚರಣೆಯುಳ್ಳವರಾಗಿದ್ದಾರೆ. ಭಾರತೀಯ ಸಂಸ್ಕೃತಿಯ ರೂವಾರಿಗಳಾದ ಕುಶಲಕರ್ಮಿಗಳು ಪ್ರಾಚೀನ ಕಾಲದಿಂದಲೂ ತಮ್ಮದೇ ಆದ ವಿಶಿಷ್ಟ ರೀತಿ- ನೀತಿ, ಸಂಪ್ರದಾಯ- ಆಚರಣೆಗಳನ್ನು ಪಾಲಿಸುತ್ತ ಬಂದ ಸಮುದಾಯವಾಗಿದೆ. ಮೂಲತಃ ಪಂಚಾಳ ಕುಶಲಕರ್ಮಿಗಳು ಬ್ರಾಹ್ಮಣರಾಗಿರುವುದರಿಂದ ಈಗಿನ ಬ್ರಾಹ್ಮಣರು ಆಚರಿಸುವ ವಿಧಿವಿಧಾನಗಳೆಲ್ಲವನ್ನು ಪಂಚಾಳ ಕುಶಲಕರ್ಮಿಗಳು ಪಾಲಿಸುತ್ತಾರೆ. ಸಮುದಾಯದವರು ಜ್ಞಾನ ಮಾರ್ಗಿಗಳೂ ಆಗಿರುವಂತೆ ಕರ್ಮ ಮಾರ್ಗಿಗಳಾಗಿ ಪಂಚಕಸಬುಗಳನ್ನು ನಿರ್ವಹಿಸುತ್ತ ಬಂದಿದ್ದಾರೆ. ವೃತ್ತಿಗಳು ಬೇರೆ ಬೇರೆ ಎನಿಸಿದರೂ ಆಚರಣೆಯ ರೀತಿ-ನೀತಿ-ಸಂಪ್ರದಾಯಗಳಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ. ಕುಶಲಕರ್ಮಿಗಳು ಐದು ಬಗೆಯ ಕುಲಕಸಬುದಾರರಾಗಿದ್ದು ಐವರಿಗೂ ಪ್ರತ್ಯೇಕ ಗೋತ್ರಗಳಿವೆ. ಸಾನಗ, ಸನಾತನ, ಅಹಭೂನ, ಪ್ರತ್ನಸ ಮತ್ತು ಸುಪರ್ಣಸ ಎಂದು ಕರೆಯಲಾಗುತ್ತದೆ. ಈ ಗೋತ್ರದ ಮೂಲ ಪುರುಷರು ಮನು, ಮಯ, ತ್ವಷ್ಟ್ರ ಶಿಲ್ಪಿ ಮತ್ತು ವಿಶ್ವಜ್ಞರಾಗಿದಾರೆ. ಪಂಚಾಳ ಕುಶಲಕರ್ಮಿಗಳ ಸಂಪ್ರದಾಯ- ಆಚರಣೆಗಳ ಕುರಿತು ಹಲವಾರು ಧಾರ್ಮಿಕ ಗ್ರಂಥಗಳಲ್ಲಿ ಹೇಳಲ್ಪಟ್ಟಿವೆ.

ಪಂಚಾಳ ಕುಶಲಕರ್ಮಿ ಸಮುದಾಯದವರು ಪಂಚಬ್ರಹ್ಮರನ್ನು ಭಕ್ತಿಯಿಂದ ಪೂಜಿಸುತ್ತಾರೆ. ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯರನ್ನು ಪ್ರಧಾನವಾಗಿ ಪೂಜಿಸುತ್ತಾ ಆದಿಶಕ್ತಿ, ಸರಸ್ವತಿ, ಲಕ್ಷ್ಮೀ, ದುರ್ಗೆ, ಕಾಳಮ್ಮ, ಶಂಕರಿ, ದೇವಾನು-ದೇವತೆಗಳನ್ನು ಭಕ್ತಿಯಿಂದ ಭಜಿಸುತ್ತಾರೆ. ಶಿರಸಂಗಿ ಕಾಳಮ್ಮ ಕುಶಲಕರ್ಮಿಗಳ ಕುಲದೇವತೆಯಾಗಿದ್ದಾಳೆ. ಹೋಮ-ಹವನ; ಯಜ್ಞ-ಯಾಗಾದಿಗಳ ಪುರೋಹಿತರಾಗಿ ಭಾಗವಹಿಸುತ್ತಾರೆ. ಪ್ರಮುಖವಾಗಿ ವಿಶ್ವಕರ್ಮ ಪುರಾಣ, ಮೂಲಸ್ಥಂಭ ಪುರಾಣ ಹಾಗೂ ಸರ್ವಜ್ಞರಾದ

ಕಾಳಹಸ್ತ ಮುನಿಗಳು ಹೇಳಿದಂತೆ, ತ್ಯಾಗ ಆರಾಧನೆ, ಜ್ಞಾನಾರ್ಜನೆ, ಧರ್ಮಪಾಲನೆಯೊಂದಿಗೆ ಧರ್ಮೋಪದೇಶ ಪಾರಂಪರಿಕ ಕಸಬುಗಳು, ಗ್ರಹಸ್ಥಾಶ್ರಮ ಪ್ರವೇಶ ತಂದೆ-ತಾಯಿಗಳ ಪೋಷಣೆ, ಅತಿಥಿ ದೇವೋಭವ ಪಾಲನೆ, ಮಹತ್ವದ ಷೋಡಶ ಕರ್ಮಾ ಚರಣೆಗಳನ್ನು ಪಂಚಾಳ ಕುಶಲಕರ್ಮಿ ಚಾಚುತಪ್ಪದೆ ಪಾಲಿಸಬೇಕು. ೧ ಗರ್ಭಾಧಾರಣ ೨ ಪುಂಸವನ ೩ ಸೀಮಂತ ೪ ಜಾತಕರ್ಮ ೫ ನಾಮಕರಣ ೬ ಅನ್ನಪ್ರಾಶನ ೭ ಚೌಲ (ಜವುಳ) ೮ ಉಪನಯನ ೯ ವೇದಾಭ್ಯಾಸ ೧೦ ವಂಶಕರ್ಮಾಭ್ಯಾಸ ೧೧ ಉತ್ಸರ್ಜನ ೧೨ ಗುರುದಕ್ಷಿಣೆ ೧೩ ಗೋಕಾಣಿಕೆ ೧೪ ಸಮಾವರ್ತನ ೧೫ ವಿವಾಹ ೧೬ ಗ್ರಹಸ್ಥಾಶ್ರಮ ಪ್ರವೇಶ

ಈ ಹದಿನಾರು ಬಗೆಯ ಶಾಸ್ತ್ರ ವಿಧಿಗಳನ್ನು ಪುರಾತನ ಕಾಲದಿಂದಲೂ ಪಂಚಾಳ ಕುಶಲಕರ್ಮಿ ಸಮುದಾಯ ಆಚರಿಸುತ್ತಿದೆ. ಗರ್ಭಧಾರಣೆಯಿಂದಿಡಿದು ಗೃಹಸ್ಥಾಶ್ರಮ ಪ್ರವೇಶದವರೆಗೂ ನಿಯಮಬದ್ಧವಾಗಿ ಕಾಲಕಾಲಕ್ಕೆ ಈ ಎಲ್ಲ ಬಗೆಯ ಸಂಪ್ರದಾಯಗಳನ್ನು ಕುಶಲಕರ್ಮಿಗಳು ಆಚರಿಸುತ್ತಾರೆ. ಮದುವೆ ಮುಂಜಿಗಳಲ್ಲಿ ಹೋಮ-ಹವನಗಳೇರ್ಪಡತ್ತವೆ. ಬ್ರಹ್ಮಚಾರಿಗೆ ಮೂರು ಎಳೆಯ ಜನಿವಾರ ಧಾರಣೆ ಮಾಡಿಸುತ್ತಾರೆ. ಮಗು ಹುಟ್ಟಿದಾಗ ಐದು ದಿನಗಳವರೆಗೆ ಮಡಿ-ಮೈಲಿಗೆ ಆಚರಿಸುತ್ತಾರೆ. ೩ ದಿನದ ಬಾಣಂತಿಗೆ ಕೊಬ್ಬರಿ-ಬೆಲ್ಲ ನೀರಿನಲ್ಲಿ ಕುದಿಸಿದ ಕಡುಬು ಉಣಿಸಿ, ತಾಯಿಯ ಎದೆಯೊಳಗಿನ ಗಟ್ಟಿ ಹಾಲು ತಿಳಿಗೊಳಿಸಿ ಮಗುವಿಗೆ ಹಾಲು ಉಣಿಸುವಂತೆ ಮಾಡುತ್ತಾರೆ. ಈ ಕಾರ್ಯ ವೈಜ್ಞಾನಿಕವಾಗಿಯೂ ಸೂಕ್ತವಾಗಿದೆ. ಉಪನಯನ ದಲ್ಲಿ ವಟುವಿನ ನಾಲಿಗೆಗೆ ಅಗ್ನಿ ಸ್ಪರ್ಷಿಸುತ್ತಾರೆ. ಯಜ್ಞಯಾಗಾದಿಗಳನ್ನು ಏರ್ಪಡಿಸಿದಾಗ ಪಂಚಾಳ ಕುಶಲಕರ್ಮಿ ಗುರುಗಳನ್ನು ಕರೆಯಿಸಿ ಪೌರೋಹಿತ್ಯ ಕಾರ್ಯ ನೇರವೇರಿಸಿಕೊಳ್ಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಮದುವೆ-ಮುಂಜಿ, ಹೋಮ ಹವನಗಳಿಗೆ ಶಿರಸಂಗಿ ಕಾಳಮ್ಮನ ಪೂಜಾರಿಗಳನ್ನು ಸಾಮಾನ್ಯವಾಗಿ ಪುರೋಹಿತರನ್ನಾಗಿ ನೇಮಿಸಲಾಗುತ್ತದೆ.

ಪಂಚಾಳ ಕುಶಲಕರ್ಮಿಗಳು ನಿತ್ಯವೂ ಸಂಧ್ಯಾವಂದನೆಯನ್ನು ದಿನದ ಮೂರು ಹೊತ್ತು ಆಚರಿಸಬೇಕೆಂಬ ನಿಯಮವಿದೆ. ಆದರೆ ಎಲ್ಲ ಕುಶಲಕರ್ಮಿಗಳಲ್ಲಿ ಈ ನಿಯಮ ಅನುಷ್ಠಾನದಲ್ಲಿಲ್ಲ. ವಿಶ್ವಕರ್ಮ ಗಾಯತ್ರಿ, ಕಾಳಮ್ಮ, ಮಲ್ಲಯ್ಯ ದೇವತೆಗಳನ್ನು ಒಂದು ಹನಿ ನೀರೂ ಕುಡಿಯದೇ ಪೂಜಿಸುವುದು. ಹಣೆಗೆ ಗಂಧ-ಕುಂಕುಮ ಧರಿಸುವುದು, ಮಹಿಳೆಯರು ಅಡ್ಡಕುಂಕುಮ, ಮೂಗಿನ ಬಲಭಾಗಕ್ಕೆ ನತ್ತು ಧರಿಸುವುದು ಆಚರಣೆಯಲ್ಲಿ ಸ್ವಲ್ಪಮಟ್ಟಿಗೆ ಉಳಿದುಕೊಂಡಿದೆ. ವಾರದ ಶುಕ್ರವಾರ ಕಾಳಮ್ಮನ ಶುಭ ವಾರವೆಂದು ಉಪವಾಸ ವೃತಾಚರಣೆ ಕುಶಲಕರ್ಮಿಗಳಲ್ಲಿದೆ. ಮಾಂಸಾಹಾರ ಕುಶಲಕರ್ಮಿಗಳಿಗೆ ಇಂದು ನಿಷೇಧ. ಆದರೆ ಮುಖ್ಯವಾಗಿ ಇವರು ಶಾಕ್ತ ಪಂಥದ ಕಾಳಾಮುಖ ಅನುಯಾಯಿಗಳಿದ್ದರಿಂದ ಪ್ರಾಚೀನ ಕಾಲದಲ್ಲಿ ಮಾಂಸಹಾರವೇ ಪ್ರಧಾನ ಆಹಾರವಾಗಿರುತ್ತಿತ್ತೆಂದು

ಹೇಳಲಾಗುತ್ತದೆ. ಏಕಾದಶಿ, ದ್ವಾದಶಿ, ಸಂಕಷ್ಠಿ ಹಾಗೂ ಯುಗಾದಿ ಅಮವಾಸ್ಯೆ ಉಪವಾಸವಿರುತ್ತಾರೆ. ಗೃಹಸ್ಥನು ಮೃತನಾದಾಗ ಶ್ರಾದ್ಧಗಳನ್ನು ಆಚರಿಸಲಾಗುತ್ತಿದೆ. ಮೃತನ ಹಿರಿಯ ಮಗ ಅಗ್ನಿ ಸ್ಪರ್ಷ ಸಂಸ್ಕಾರ ನೆರವೇರಿಸುತ್ತಾನೆ. ೩ನೇ ದಿನದಂದು ಬೂದಿ ಬಳೆಯುವ ಪದ್ಧತಿ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿದೆ. ಪಟ್ಟಣಗಳಲ್ಲಿ ವಿದ್ಯುತ್ಚಾಲಿತ ಅಗ್ನಿ ಸ್ಪರ್ಷದ ಯಂತ್ರಗಳ ಬಳಕೆಯಿದ್ದು ಸಂಸ್ಕಾರದ ಕೆಲವೇ ಹೊತ್ತಿನಲ್ಲಿ ಬೂದಿ ದೊರೆಯುತ್ತದೆ. ಪುಣ್ಯನದಿಗೆ ಅರ್ಪಿಸುತ್ತಾರೆ. ೧೦ ನೇ ದಿನದಂದು ಶುದ್ಧವಾಗುವುದು. ಮನೆಗಳನ್ನು ಶುದ್ಧಗೊಳಿಸುವುದು ಗೋಮೂತ್ರದಿಂದ ಶುದ್ಧೀಕರಣಗೊಳ್ಳುವುದು ೧೩ನೇ ದಿನದಂದು ಶ್ರಾದ್ಧದ ಪ್ರಮುಖ ಪೂಜೆ ನೇರವುದು ೧೩ ದಿನಗಳ ಕಾಲ ಅಗ್ನಿ ಸ್ಪರ್ಶ(ಸಂಸ್ಕಾರ) ಮಾಡಿದ ಹಿರಿಯ ಮಗ ನಿತ್ಯವೂ ಸ್ಮಶಾನಕ್ಕೆ ಹೋಗಿ ಮೃತರ ಹಣೆ ಪಟ್ಟಿಯನ್ನು ಪೂಜಿಸುವ ವಿಶಿಷ್ಟ ಸಂಪ್ರದಾಯ ಆಚರಣೆಗಳು ಪಂಚಾಳ ಕುಶಲಕರ್ಮಿ ಸಮುದಾಯದಲ್ಲಿವೆ.

ಮದುವೆಯ ಸಂದರ್ಭದಲ್ಲಿಯೂ ಸಗೋತ್ರಗಳ ಮಧ್ಯ ಲಗ್ನ ಏರ್ಪಡುವುದಿಲ್ಲ. ಐದು ಗೋತ್ರಗಳಲ್ಲಿ ಗಂಡು-ಹೆಣ್ಣಿನ ಗೋತ್ರಗಳು, ಬೇರೆಯಾಗಿರಬೇಕು. ಹಾಗೆಯೇ ಪಂಥ ಎಂದು ಪಂಚಾಳ ಕುಶಲಕರ್ಮಿಗಳಲ್ಲಿ ಸಮುದಾಯ ಗುರುತಿಸುವಿಕೆ ಪದ ಪ್ರಯೋಗವಾಗುತ್ತದೆ. ೧ ಕೊಣ್ಣೂರ ಪಂಥ ೨ ನಿಲಗುಂದಿ ಪಂಥವೆಂದು ಕರೆಯಲಾಗುತ್ತಿದ್ದು, ವಧು-ವರರು ಒಂದೇ ಪಂಥದವರಾಗಿರಬೇಕು ಕೊಣ್ಣೂರ ಪಂಥ ಮತ್ತು ನಿಲಗುಂದ ಪಂಥದ ನಡುವೆ ಮದುವೆಯಾಗುವುದಿಲ್ಲ. ಕೇವಲ ನೀರಬಳಕೆ ಮಾತ್ರ ಜರುಗುತ್ತದೆ. ಇಂಥಹ ಅಪೂರ್ವವೆನಿಸುವ ಆಚರಣೆ ಸಂಪ್ರದಾಯಗಳು ಕುಶಲಕರ್ಮಿಗಳಲ್ಲಿ ಬಳಕೆಯಲ್ಲಿವೆ. ಸಂಪ್ರದಾಯಗಳು ಪುರಾತನ ಕಾಲದಿಂದಲೂ ಬಳಕೆಯಲ್ಲಿರುವ ಉತ್ತಮ ಪದ್ಧತಿ ಇಂತಹ ಪದ್ಧತಿಗಳನ್ನು ಹಿನ್ನೆಲೆ ಮುನ್ನೆಲೆ-ಆಚಾರ-ವಿಚಾರಗಳನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡು, ಭಕ್ತಿ-ಶ್ರದ್ಧೆಯಿಂದ ಆಚರಿಸುವವನು ಆಚಾರ್ಯನಾಗಿರುತ್ತಾನೆ. ಅಂದರೆ ಗುರು-ಜ್ಞಾನ-ವಿಜ್ಞಾನದ ಕಣಜ ಕುಶಲಕರ್ಮಿಗಳು ಜ್ಞಾನ- ವಿಜ್ಞಾನಿಗಳಾಗಿರುವುದರಿಂದ ಅವರು ಆಚರಿಸುವ ಆಚರಣೆ-ಸಂಪ್ರದಾಯಗಳು ಅರ್ಥಪೂರ್ಣವಾಗಿರುತ್ತವೆ ಎಂದು ಹೇಳಲಾಗುತ್ತದೆ. ಹೀಗಾಗಿ ಪಂಚಾಳ ಕುಸಲಕರ್ಮಿ ಸಮುದಾಯದ ಆಚರಣೆ ಸಂಪ್ರದಾಯಗಳೆಲ್ಲವೂ ತರ್ಕ ಮತ್ತು ಮಾಪನ ಬದ್ಧ ವಾಗಿರುತ್ತವೆ.

ಹೀಗೆ ಪಂಚಾಳ ಕುಶಲಕರ್ಮಿ ಸಮುದಾಯ ಪುರಾತನ ಕಾಲದಿಂದಲೂ ಬ್ರಾಹ್ಮಣ ಶ್ರೇಷ್ಠ ಸಮುದಾಯವಾಗಿದೆ. ಜ್ಞಾನ ಮತ್ತು ಕರ್ಮದಿಂದ ವಿಶ್ವದ ಶ್ರೇಷ್ಠ ಸಂಸ್ಕೃತಿಯ ಪ್ರತಿಮೆಗಳಾಗಿದ್ದಾರೆ. ಸಮುದಾಯದ ಹಿರಿಮೆ ಗರಿಮೆಯನ್ನು ಶಾಸನಗಳಲ್ಲಿ, ಜನಪದರಲ್ಲಿ, ಸಾಹಿತ್ಯದಲ್ಲಿ, ಸಾಮಾಜಿಕ ಜನಜೀವನ ವ್ಯವಸ್ಥೆಯಲ್ಲಿ ಆರ್ಥಿಕ ದೃಷ್ಟಿಯಿಂದ ಮತ್ತು ಅವರು ಆಚರಿಸುವ ಆಚರಣೆ ಸಂಪ್ರದಾಯಗಳ

ಹಿನ್ನೆಲೆಯಲ್ಲಿ ಕುಶಲಕರ್ಮಿಗಳು ಉನ್ನತ ಸ್ಥಾನ-ಮಾನಗಳನ್ನು ಹೊಂದಿದ್ದು ತಿಳಿದುಬರುತ್ತದೆ. ಸಮುದಾಯದ ಶ್ರೇಷ್ಠತೆಗೆ ಅವರ ಕುಲಕಸುಬುಗಾರಿಕೆ ಪ್ರಮುಖ ಕಾರಣವಾಗಿದೆ. ಸಮುದಾಯದಿಂದ ಕಸಬುಗಳು ಹೊರತಾಗಿಲ್ಲ. ಐದು ಬಗೆಯ ಕುಲಕಸಬುಗಳು ಮತ್ತು ಕುಶಲಕರ್ಮಿಗಳು ಭಾರತ ಸಂಸ್ಕೃತಿ ನಾಣ್ಯದ ಎರಡು ಮುಖಗಳಾಗಿವೆ.

ಸಮುದಾಯಿಕ ಉದ್ಯೋಗಗಳು

ಪಂಚಾಳ ಕುಶಲಕರ್ಮಿ ಸಮುದಾಯ ಶ್ರಮ ಸಂಸ್ಕೃತಿ: ಕೃಷಿ ಸಂಸ್ಕೃತಿಯ ಕ್ರಿಯಾಶೀಲ ಸಮುದಾಯವಾಗಿದೆ. ಸಮುದಾಯ ಹೋಮ-ಹವನ; ಯಜ್ಞಯಾಗಾದಿ ಜಪ-ತಪ ಅರ್ಚನೆ-ಆಚಾರ್ಯತ್ವದಿಂದ ಮಾತ್ರ ಪ್ರಖ್ಯಾತವಾಗಲಿಲ್ಲ. ಸಮುದಾಯದಲ್ಲಿ ಕ್ರಿಯಾತ್ಮಕಗೊಳಿಸುವ ಗುಣ ಶ್ರೇಷ್ಠವಾದದ್ದಾಗಿದೆ. ಜ್ಞಾನ ಮತ್ತು ಕ್ರಿಯೆಗಳನ್ನು ಹುರಿಗೊಳಿಸಿ ಶಕ್ತಿಯುತವಾದದ್ದನ್ನು ಸೃಷ್ಟಿಸಬಲ್ಲ ಕಸುವು ಸಮುದಾಯಕ್ಕಿದೆ. ಅದ್ವಿತೀಯ, ಅವಿಸ್ಮರಣೀಯವಾದದ್ದನ್ನು ವಿಶ್ವಕ್ಕೆ ನೀಡಬಲ್ಲ ಏಕೈಕ ಸಮುದಾಯ ಪಂಚಾಳ ಕುಶಲಕರ್ಮಿ ಸಮುದಾಯ ಇವರು ಕಾಯಕ ಜೀವಿಗಳಾಗಿರುವುದರಿಂದ ಭಾರತ ಕೃಷಿ ಪ್ರಧಾನ ರಾಷ್ಟ್ರಗಳಲ್ಲಿ ಬೇಡಿಕೆಯ ಮತ್ತು ಗೌರವಾನ್ವಿತ ಕರ್ಮಿಗಳಾಗಿದ್ದಾರೆ. ಗ್ರಾಮೀಣರ ಬದುಕಿನ ಅವಿಭಾಜ್ಯ ಅಂಗವಾಗಿದ್ದಾರೆ. ರೈತ ಸಮುದಾಯ ಮತ್ತು ಇತರರಿಗೆ ಅವಶ್ಯಕವಾದ ಕೃಷಿ ಹಾಗೂ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿಕೊಡುತ್ತಾರೆ. ರೈತ ಸಮುದಾಯದ ಮಹಿಳೆಯರಿಗೆ ಅಲಂಕಾರಿಕವಾಗಿ ಅವಶ್ಯವಾಗಿರುವ ಲೋಹದ ಆಭರಣಗಳನ್ನು ತಯಾರಿಸುತ್ತಾರೆ. ಆರಾಧನೆಯ ಪ್ರತೀಕವಾದ ದೇವಾಲಯ- ಮೂರ್ತಿಗಳನ್ನು ನಿರ್ಮಿಸುತ್ತಿದ್ದಾರೆ. ಒಟ್ಟಾಗಿ ಕುಶಲಕರ್ಮಿ ಸಮುದಾಯ ತನ್ನ ಕಾಯಕ ಸಂಸ್ಕೃತಿಯಿಂದ ಭಾರತೀಯರ ಮನೆ ಮಕ್ಕಳಾಗಿದ್ದಾರೆ. ರೈತ ಸಮುದಾಯದ 'ಆಯಗಾರ'ರಾಗಿದ್ದಾರೆ. ಕುಲಕಸಬುಗಳೇ ಸಮುದಾಯದವರ ಜೀವಾಳ ಕಂಬಾರ, ಬಡಿಗೇರ, ಕಂಚುಗಾರ ಶಿಲ್ಪಿ ಮತ್ತು ಅಕ್ಕಸಾಲಿಗರೇ ಸಮುದಾಯದ ಶಕ್ತಿಯಾಗಿದ್ದಾರೆ.

ಕಂಬಾರ

ಪಂಚಾಳ ಕುಶಲಕರ್ಮಿ ಸಮುದಾಯದ ಪ್ರಥಮ ಕಸಬುದಾರ ಕಬ್ಬಿಣ ಕೆಲಸ ನಿರ್ವಹಿಸುತ್ತಾನೆ. ರೈತರಿಗೆ ಅವಶ್ಯಕವಾಗಿ ಕೂರಿಗೆ ತಾಳಿನ ಹೊಂಬಲ, ಕುಡ, ಕುರುಪಿ, ಕುಡಗೋಲು, ನೇಗಿಲು ಪಾಳೆ, ಬಂಡಿ ಹಳಿ, ಹಾರೆ ಮುಂತಾದ ಕೃಷಿ ಹಾಗೂ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುತ್ತಾರೆ. ಕುಲುಮೆ, ತಿದಿ ಅಡಿಗಲ್ಲು, ಸುತ್ತಿಗೆ, ಚಾಣ, ಇಕ್ಕಳು ಉಪಕರಣಗಳು ಕಂಬಾರನ ಜೀವಂತಿಕೆಗಳು ಕಸಬು ಉಪಕರಣಗಳೇ ಕಾಳಮ್ಮ; ಕಾಳಮ್ಮನೇ ವೃತ್ತಿಗೆ ಅವಶ್ಯಕವಾಗಿರುವ ಅಗ್ನಿ ಎಂಬ ನಂಬಿಕೆ ಕಾಯಕಯೋಗಿಯದು. ತಾನು ಕಾಯಕ ಮಾಡುವ ಪ್ರದೇಶವನ್ನೇ ಸಾಲಿಯಾಗಿಸಿ ಕಂಬಾರಸಾಲಿ

ಎಂದು ಕರೆಸಿಕೊಳ್ಳುತ್ತ ಕಬ್ಬಿಣ ಲೋಹದಿಂದ ವಸ್ತುಗಳನ್ನು ಉತ್ಪಾದಿಸುವುದು ಕಂಬಾರ ಕುಶಲಕರ್ಮಿಯ ಕಾಯಕವಾಗಿದೆ.

ರಾಜಪ್ರಭುತ್ವವಿದ್ದಾಗ ರಾಜನಿಂದ ಮಾನ್ಯಗಳಿಸಿಕೊಂಡು ಯುದ್ಧದಲ್ಲಿ ಉಪಯೋಗವಾಗುವ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಡುತ್ತಿದ್ದನು. ಕಾಲಾಂತರದಲ್ಲಿ ರಾಜತ್ವ ಅಳಿದು ಪ್ರಜಾಪ್ರಭುತ್ವ ಬಲಗೊಂಡಿತು. ಕಂಬಾರ ಕಸಬು ರೈತ ಸಮುದಾಯಕ್ಕೆ ಅತ್ಯಂತ ಅವಶ್ಯಕವಾದ ಕಸಬಾಯಿತು. 'ರೈತರಿಂದ ಆಯ ಪಡೆದು ಜೀವನದುದ್ದಕ್ಕೂ ಕಾಸಿಲ್ಲದೆ ದುಡಿಯಬೇಕಾಗುತ್ತಿತ್ತು. ಇದರಿಂದಾಗಿ ಕಂಬಾರ ಕುಶಲಕರ್ಮಿಯ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದೆ. ಆರ್ಥಿಕವಾಗಿ ಕುಟುಂಬ ಕೆಳಮುಖವಾಯಿತು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಬಾರರು ಹಿಂದುಳಿದವರಾದರು.

ಜಾಗತೀಕರಣ ಮತ್ತು ತಂತ್ರಜ್ಞಾನದ ಪ್ರಭಾವದಿಂದಾಗಿ ಗ್ರಾಮೀಣ ಪ್ರದೇಶದ ಕಸಬುಗಳು ಅವನತಿಯ ಹಂತದಲ್ಲಿವೆ. ಭಜಂತ್ರಿಗಳ ಬುಟ್ಟಿ ಹೆಣೆಯುವುದು, ದೇವಾಂಗ ಜನಾಂಗದ ನೇಕಾರಿಕೆ, ಕುರುಬರ ಕಂಬಳಿ ನೇಯುವ ಕುಶಲ ಕಲೆಗಳು ಸಂಪೂರ್ಣವಾಗಿ ಮರೆಯಾಗುತ್ತಿವೆ. ಸ್ವಲ್ಪಮಟ್ಟಿಗೆ ಪಂಚಾಳ ಕುಶಲಕರ್ಮಿಗಳ ಕಂಬಾರಿಕೆ, ಬಡಿಗತ, ಕಂಚುಗಾರಿಕೆ, ಶಿಲ್ಪಗಾರಿಕೆ ಮತ್ತು ಅಕ್ಕಸಾಲಿಗ ಕೆಲಸಗಳು ಗ್ರಾಮೀಣ ಪ್ರದೇಶಗಳಲ್ಲಿ ಉಳಿದುಕೊಂಡಿವೆ. ಆದರೆ ಉದ್ಯೋಗಗಳ ಸೃಷ್ಟಿ ಕಡಿಮೆ ಯಾಗುತ್ತಿದೆ. ಉದ್ಯೋಗಗಳ ಸ್ವರೂಪದಲ್ಲಿ ಬದಲಾವಣೆಗಳಾಗುತ್ತಿವೆ. ಡಾ. ದಸ್ತಗೀರ ಅಲ್ಲಿಬಾಯಿ ಮತ್ತು ಎಂ.ಎಲ್. ನರಸಿಂಹ ಮೂರ್ತಿ ಅವರು ಉತ್ತರ ಕರ್ನಾಟಕದ ಕುಶಲಕರ್ಮಿ, ದಕ್ಷಿಣ ಕರ್ನಾಟಕದ ಕುಶಲಕರ್ಮಿಗಳ ಕುರಿತಾಗಿ, ಮಾಡಿದ ಮೇಲಿನ ವಿಶ್ಲೇಷಣೆ ಉಪಯುಕ್ತವಾಗಿದೆ. ಪಂಚಕಸಬುದಾರರ ಕುರಿತಾಗಿ ಮಾಹಿತಿ ಒದಗಿಸಿಕೊಟ್ಟಿದ್ದಾರೆ. ಕಂಬಾರಿಕೆ ಕಸಬನ್ನು ಪಂಚಾಳ ಕುಶಲಕರ್ಮಿಗಳು ಪರಂಪರಾಗತವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಆದರೆ ಇದೇ ಉದ್ಯೋಗಗಳನ್ನು ಅನ್ಯಮತೀಯರು ನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಪರಂಪರಾಗತ ಕುಶಲಕರ್ಮಿಗಳು ಅನ್ಯಮತೀಯರೊಂದಿಗೆ ಪೈಪೋಟಿಗಿಳಿಯುವ ಸ್ಥಿತಿ ಒದಗಿದೆ. ಉದ್ಯೋಗ ಸೃಷ್ಟಿ ಕಡಿಮೆಗೊಂಡು ಕಂಬಾರಿಕೆ ಉದ್ಯೋಗದಾರರು ಹೆಚ್ಚಾಗಿರುವುದು ಕಂಡುಬರುತ್ತದೆ.

ಕಂಬಾರರಿಗೆ ದೊರೆಯುತ್ತಿದ್ದ ಉದ್ಯೋಗಗಳು ತೀರಾ ಕಡಿಮೆಯಾಗಿವೆ. ಇದಕ್ಕೆ ಕಾರಣ ಭಾರತದಲ್ಲಿ ಕೃಷಿಗಾರಿಕೆ ಕಡಿಮೆಯಾಗಿರುವುದು. ಸ್ವಲ್ಪ ಮಟ್ಟಿಗೆ ವ್ಯವಸಾಯ ಉಳಿದುಕೊಂಡಿದ್ದರು, ರೈತರಿಗೆ ಅವಶ್ಯಕವಾದ ಕುರುಪಿ, ಕುಡುಗೋಲು, ಸಲಿಕೆ, ಗುದ್ದಲಿ, ಹಾರೆಗಳನ್ನು ಆಧುನಿಕ ತಂತ್ರಜ್ಞಾನ ಬಳಸುವ ಕಾರಖಾನೆಗಳು ತಯಾರಿಸಿಕೊಡುತ್ತಿವೆ. ರೈತನ ಸಂಗಾತಿಯಾಗಿದ್ದ ಬಂಡಿ (ಚಕ್ಕಡಿ) ಗಾಲಿಗಳ ಹಳಿ ಬಿಗಿಯುವುದು ನಿಂತಿದೆ. ಗಾಲಿಗೆ ಟಯರುಗಳ ಬಳಕೆಯಾಗುತ್ತಿದೆ. ಇದರಿಂದಾಗಿ ಕಂಬಾರರ ಉದ್ಯೋಗಗಳಿಗೆ ಪೆಟ್ಟು ಬೀಳುತ್ತಿದೆ. ಮೂಲ ಕಸಬುಗಳನ್ನು ಬಿಟ್ಟು

ಪರ್ಯಾಯವಾಗಿ ಮತ್ತೊಂದು ಉದ್ಯೋಗ ಹುಡುಕುವ ಅನಿವಾರ್ಯತೆ ಕಂಬಾರರಿಗೆ ಒದಗಿಬರುತ್ತಿದೆ. ಕಬ್ಬಿಣ ಕೆಲಸಬಿಟ್ಟು ಮರಗೆಲಸ, ಬಾರ್‌ಬೆಂಡಿಂಗ್, ವೆಲ್ಡಿಂಗದಂತಹ ಉದ್ಯೋಗ ಹುಡುಕುತ್ತಿದ್ದಾರೆ.

ಪುರಾತನ ಕಾಲದಿಂದಲೂ ಕಂಬಾರಿಕೆ ಹಳ್ಳಿಗರ, ರೈತ ಸಮುದಾಯದ ಜೀವಾಳವಾಗಿತ್ತು. ಆದರೆ ಇತ್ತೀಚೆಗೆ ಕಂಬಾರರನ್ನು ಮಾತನಾಡಿಸುವವರೇ ಇಲ್ಲದಂತಾಗಿದೆ. ಕುದಿಯುವ ಕುಲುಮೆಗೆ ತಿಳಿಗಾಳಿಬೀಸಿ ಕಾಯ್ದ ಕಬ್ಬಿಣವನು ಅಡಿಗಲ್ಲ ಮೇಲಿಟ್ಟು ಚಮ್ಮಟಿಗೆಯಿಂದ ಹೊಡೆಯುತ್ತಿದ್ದರೆ ಉಪಕರಣ ಕಂಬಾರನ ಕೈಯಲ್ಲಿ ತನ್ನಿಂದ ತಾನೇ ನಿರ್ಮಾಣವಾಗುತ್ತಿತ್ತು. ಆದರೆ ಇಂದು ಕಬ್ಬಿಣ ಬಡಿಯುವ ದೃಢಕಾಯದ ಸಹಾಯಕರು ಸಿಗುತ್ತಿಲ್ಲ. ಸ್ಟಾರ್, ಗುಟುಕಾ ತಿನ್ನುವವರಿಗೆ ದೊಡ್ಡ ಸುತ್ತಿಗೆ ಎತ್ತುತ್ತಿಲ್ಲ.

ಮನೆಯಲ್ಲಿ ಗ್ಯಾಸ್ ಸಿಲಿಂಡರ್ ಬಳಕೆಯಿಂದಾಗಿ ಕಸಬಿಗೆ ಅವಶ್ಯವಾಗಿರುವ ಇದ್ದಿಲು ದೊರೆಯುತ್ತಿಲ್ಲ. ತಿದಿ ತಯಾರಿಸುವ ಚಮ್ಮಾರ ಕುಶಲಕಲೆಗಾರರ ಕಸಬು ನಿಂತುಹೋಗಿವೆ. ಕಂಬಾರ ಸಾಲಿ ಹಾಕಿದನೆಂದರೆ ಊರ ರೈತರೆಲ್ಲ ಓಡೋಡಿ ಬರುತ್ತಿದ್ದರು. ಉಪಕರಣಗಳನ್ನು ತಯಾರಿಸಿಕೊಂಡು ಹೋಗುತ್ತಿದ್ದರು. ಈಗ ಸಾಲಿಯೂ ಇಲ್ಲ! ಕುಲುಮೆ-ತಿದಿಗಳೂ ಇಲ್ಲ. ರೈತ ಭೂಮಿಯನ್ನು ವಾಣಿಜ್ಯೀಕರಣಗೊಳಿಸುತ್ತಿದ್ದಾನೆ. ಕಂಬಾರ ಅಡಗಲ್ಲನ್ನು ಮೊಡಕಾಕ್ಕೆ ಹಾಕುವ ಸ್ಥಿತಿ ತಲುಪಿದಂತಾಗಿದೆ. "ಬಹುಮಂದಿ ಕಮ್ಮಾರರು ಮತ್ತು ಇತರೆ ಸಾಂಪ್ರದಾಯಿಕ ಕುಶಲಕರ್ಮಿಗಳು ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆಹೋಗಿ, ಬದಲಿ ಕಸಬುಗಳನ್ನು ಹುಡುಕಿಕೊಂಡಿದ್ದಾರೆ. ಎಲ್ಲೊ ಬೆರಳೆಣಿಕೆಯಷ್ಟು ಮಂದಿ ಕಮ್ಮಾರರು ಹಳ್ಳಿಗಳಲ್ಲಿ ಉಳಿದುಕೊಂಡಿದ್ದಾರೆ."[೩] ಇಂತಹ ಸಂದರ್ಭಗಳು ಕಂಬಾರ ಉದ್ಯೋಗಸ್ಥರಿಗೆ ದೊಡ್ಡಪೆಟ್ಟು ಕೊಡುತ್ತಿವೆ.

ಹೀಗೇ ಮುಂದುವರೆದರೆ ಮುಂದೊಂದು ದಿನ ಕಂಬಾರ ಉದ್ಯೋಗ ನೋಡಲು ಸಿಗುವುದಿಲ್ಲ. ಪ್ರಾಚೀನ ಕಾಲದಿಂದಲೂ ಪರಂಪರಾಗತವಾಗಿ ನಿರ್ವಹಿಸುತ್ತಿದ್ದ ಕಂಬಾರ ಕುಶಲಕರ್ಮಿಗಳ ಜೀವನ ಅಧೋಗತಿಗೆ ಇಳಿಯುವುದನ್ನು ತಪ್ಪಿಸಬೇಕು. ಕಂಬಾರಿಕೆಯ ಕಲಾತ್ಮಕ ಕಲೆ ನಾಶವಾಗದೇ ಮತ್ತೇ ಮುಂದುವರೆಯುಂತಾಗ ಬೇಕಿದೆ. ಅದಕ್ಕೋಸ್ಕರ ಮೊದಲು ಪಂಚಾಳ ಕುಶಲಕರ್ಮಿಗಳು ತಮ್ಮ ಉದ್ಯೋಗವನ್ನು ಗೌರವಿಸುವಂತಾಗ ಬೇಕು. ಸಮಾಜದಲ್ಲಿ ಕಂಬಾರ ಉದ್ಯೋಗ ಸೃಷ್ಠಿಗಳು ಪುನಃ ನಿರ್ಮಾಣವಾಗಬೇಕಾಗಿದೆ. ಉದ್ಯೋಗಗಳಿಗೆ ಹೊಸಚೈತನ್ಯ ತುಂಬುವ ಕೆಲಸ ಆಗಬೇಕು.

ಬಡಿಗೇರ

ಪಂಚಾಳ ಕುಶಲಕರ್ಮಿ ಸಮುದಾಯದ ಎರಡನೆಯ ಕಸಬುದಾರ ಕಟ್ಟಿಗೆ ಅಥವಾ ಮರದ ಕೃಷಿ ಉಪಕರಣಗಳನ್ನು ತಯಾರಿಸುತ್ತಾರೆ. ರೆಂಟೆ- ಕುಂಟೆ-ಕೂರಿಗೆ, ಹರಗುವ ದಿಂಡು ಸಡ್ಡೆ,

ಕೋಲು, ಮೇಳಿ, ಬಂಡಿ, ಕಡಗೋಲ, ರಾಘೋಲು, ಕೊಮ್ಮಣಿಗಿ, ಹೊಳಿಗಿ ಮನಿ, ಶ್ಯಾವಿಗೆ ಮನಿ ಮುಂತಾದ ಕೃಷಿ ಹಾಗೂ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುತ್ತಾರೆ. ಉಳಿ-ಬಾಚಿ, ಕೊಡತಿ, ಸುತ್ತಿಗೆ, ಉಚುಗೊಡ್ಡ, ಕಾಮಾಟ, ಉಪಕರಣಗಳನ್ನು ಬಡಿಗೇರರು ಬಳಸುತ್ತಾರೆ. ಅಮವಾಸ್ಯೆ ಯುಗಾದಿಯಂದು ಉಪಕರಣಗಳನ್ನು ಕಾಳಮ್ಮನೆಂದು ಭಾವಿಸಿ ಪೂಜಿಸುತ್ತಾರೆ. ಉಪಕರಣಗಳಲ್ಲಿ ಕಾಳಮ್ಮನನ್ನು ಕಾಣುವ ಬಡಿಗೇರರು ಕಟ್ಟಿಗೆಯಲ್ಲಿ ಕಲಾತ್ಮಕವಾಗಿ ಸುಳಿವಿನ ಕೆಲಸ ಮಾಡುತ್ತಾರೆ. ಬೆನ್ನ್ಹುರಿಯಲಿ ಬೆವರಿಳಿಯುವ ತನಕ ಬಾಚಿಯಿಂದ ಕಟ್ಟಿಗೆ ಕೆತ್ತಿ ಉಪಕರಣ ತಯಾರಿಸುವ ಶ್ರಮಜೀವಿಗಳಾಗಿದ್ದಾರೆ. ಮರದಲಿ ಮಹಾದೇವನನ್ನು ಕೆತ್ತಬಲ್ಲ ಪ್ರತಿಭೆ ಪಂಚಾಳ ಕುಶಲಕರ್ಮಿ ಬಡಿಗೇರರಲ್ಲಿದೆ.

ರಾಜ-ಮಹಾರಾಜರ ಕಾಲದಲ್ಲಿ ಅರಮನೆಯ ಕುಶಲಕರ್ಮಿಯಾಗಿ ಮರದ- ದೇವಾಲಯ ಕೆತ್ತನೆ ಕೆಲಸ ಬಡಿಗೇರರು ಮಾಡುತ್ತಿದ್ದರು. ಅರಸರುಗಳಿಂದ ಭೂದಾನ ಪಡೆದ ಬಡಿಗೇರರು ಆಚಾರ್ಯರಾಗಿ, ಅರಸನ ಪ್ರೀತಿ ವಿಶ್ವಾಸಗಳಿಸಿದ್ದರು. ಅರಸೋತ್ತಿಗೆ ಅಳಿದ ಮೇಲೆ ಪ್ರಜಾಪ್ರಭುತ್ವ ದಿನಮಾನಗಳಲ್ಲಿ ಬಡಿಗೇರರು ಮೂಲ ಸ್ಥಾನ ಕಳೆದು ಕೊಂಡರು. ರೈತ ಸಮುದಾಯದ ಕೃಷಿ ಉದ್ಯೋಗಗಳಿಗೆ ಪೂರಕವಾದ ಉಪಕರಣಗಳನ್ನು ತಯಾರಿಸಿಕೊಡಲಾರಂಭಿಸಿದರು. ರೈತರಿಂದ ವರ್ಷಕ್ಕೊಮ್ಮೆ ಧವಸ-ಧಾನ್ಯಗಳನ್ನು 'ಆಯ' ಪಡೆಯುವ ಪದ್ಧತಿಯನ್ನು ರೂಢಿಸಿಕೊಂಡರು. ಊರಿನ 'ಆಯಗಾರ' ಸಮುದಾಯವೆಂದು ಕರೆಯುವುದು ರೂಢಿಯಾಯಿತು. ಕೈಯಲ್ಲಿ ದುಡ್ಡಿಲ್ಲದೆ, ಬೆವರ್ಹರಿಸುವುದು ನಿರಂತರವಾಯಿತು. ಬಡತನ ಬೆನ್ನೇರಿ ಬಂದಿತು. ಬಡಿಗೇರ ಮನೆಯಲ್ಲಿ ದಾರಿದ್ರ್ಯ ಮೂಲೆ ಮಾಡಿಕೊಂಡಿತು. ಆರ್ಥಿಕವಾಗಿ ಬಡಿಗೇರ ಕುಟುಂಬಗಳು ಕೆಳಮುಖಗೊಂಡವು. ಸಾಮಾಜಿಕವಾಗಿ ಬಡಿಗೇರರು ಹಿಂದುಳಿದವರೆಂದು ಗುರುತಿಸಲ್ಪಟ್ಟರು.

ಆಧುನಿಕ ಸಂದರ್ಭದಲ್ಲಿ ಯಂತ್ರಗಳ ಪ್ರಭಾವದಿಂದಾಗಿ ಹಳ್ಳಿಗಳಲ್ಲಿಯ ಉದ್ಯೋಗಗಳು ದುಸ್ಥಿತಿಯನ್ನು ತಲುಪಿವೆ. ಹಳ್ಳಿಗಳಲ್ಲಿ ಸ್ವಲ್ಪ ಮಟ್ಟಿಗೆ ಇನ್ನಿತರ ಕುಶಲಕರ್ಮಿಗಳಿಗಿಂತ ಬಡಿಗೇರ ಕುಶಲಕರ್ಮಿ ಉದ್ಯೋಗಗಳು ಉಳಿದಿವೆ. ಆದರೆ ಉದ್ಯೋಗಗಳಲ್ಲಿ ಬದಲಾವಣೆಗಳು ಬಡಿಗೇರರನ್ನು ನಿದ್ದೆಗೆಡಿಸುತ್ತಿವೆ. ಸಾಂಪ್ರದಾಯಿಕವಾಗಿ ಮುಂದುವರೆಸಿಕೊಂಡು ಬಂದ ಬಡಿಗೇರ ಉದ್ಯೋಗಗಳು ಅನ್ಯ ಮತೀಯರ ಪ್ರವೇಶದಿಂದ, ದೊಡ್ಡ ದೊಡ್ಡ ಕಾರಖಾನೆಗಳಿಂದ ತಯಾರಿತ ವಸ್ತುಗಳು ದೊರೆಯುತ್ತಿರುವುದರಿಂದ ಉದ್ಯೋಗಗಳು ಇಳಿಮುಖವಾಗಿವೆ. ಅನ್ಯರ ಜೊತೆ ಪಂಚಾಳ ಕುಶಲಕರ್ಮಿ ಸ್ಪರ್ಧೆ ಮಾಡಬೇಕಾದ ಅನಿವಾರ್ಯತೆ ಬಂದಿದೆ. ಇವೆಲ್ಲದರ ಕಾರಣದೊಂದಿಗೆ ಹಣದ ಮೌಲ್ಯ ಕುಸಿತದ ಕಾರಣವೂ ಆಗಿ ಬಡಿಗೇರರ ಉದ್ಯೋಗ ಕಡಿಮೆಯಾಗಿವೆ. ವೈಚಿತ್ರ್ಯವೆಂದರೆ ಬಡಿಗೇರರ ಉದ್ಯೋಗ ಮಾಡುವವರು ಹೆಚ್ಚಾಗಿದ್ದಾರೆ. ಆರಂಭದಲ್ಲಿ ಹಳ್ಳಿಗಳಲ್ಲಿ ಒಂದೊಂದೇ ಬಡಿಗೇರ

ಕುಟುಂಬ ಇರುತ್ತಿತ್ತು. ಕಾಲಾಂತರದಲ್ಲಿ ತಂದೆಯಿಂದ ಮೂರು ಜನ ಗಂಡು ಮಕ್ಕಳು ಜನಿಸಿ, ಬೇರೆ ಬೇರೆಯಾಗಿ ಮೂರುಕುಟುಂಬಗಳು ಬಡಿಗತನ ಉದ್ಯೋಗದಲ್ಲಿ ಮುಂದುವರೆಯುತ್ತಾರೆ. ಅನಂತರದಲ್ಲಿ ಮೂರು ಕುಟುಂಬದಿಂದ ೯ ಜನ ಕುಟುಂಬಸ್ಥರು ಬಡಿಗೇರ ಉದ್ಯೋಗದಲ್ಲಿ ಮುಂದುವರೆಯುತ್ತಾರೆ. ಒಬ್ಬರು- ಇಬ್ಬರು ಮಾಡುವ ಉದ್ಯೋಗವನ್ನು ೯ ಜನರು ಮಾಡಲು ಮುಂದಾದರೆ ಉದ್ಯೋಗದಲ್ಲಿ ಕೊರತೆಯುಂಟಾಗುತ್ತದೆ. ಪರಸ್ಪರರು ಸ್ಪರ್ಧಿಗಳಾಗುತ್ತಾರೆ. ದುಡಿಮೆಗೆ ತಕ್ಕ ದುಡ್ಡು ದೊರೆಯುವುದಿಲ್ಲ. ಇದರಿಂದಾಗಿ ಕುಟುಂಬ ಆರ್ಥಿಕ ಸಂಕಷ್ಟ ಅನುಭವಿಸಬೇಕಾಗುತ್ತದೆ.

ಬಡಿಗೇರ ಕುಶಲಕರ್ಮಿಗಳಿಗೆ ಉದ್ಯೋಗಗಳು ಕಡಿಮೆಯಾಗಿವೆ. ಮರದಿಂದ ತಯಾರಾಗುತ್ತಿದ್ದ ರೈತೋಪಯೋಗಿ ಮತ್ತು ಗೃಹೋಪಯೋಗಿ ವಸ್ತುಗಳ ಬದಲಾಗಿ ಪ್ಲಾಸ್ಟಿಕ್ ವಸ್ತುಗಳು ಕಾಲಿರಿಸಿವೆ. ಮಜ್ಜಿಗೆ ಕಡೆಯುವ ಕಡಗೋಲು ಪ್ಲಾಸ್ಟಿಕ್‌ದಿಂದ ತಯಾರಾಗಿ ಮಾರುಕಟ್ಟೆಯಲ್ಲಿ ಲಭಿಸುತ್ತಿದೆ. ಅಡುಗೆ ಪಾತ್ರೆಯಲ್ಲಿ ಬಳಸಲು ಹುಟ್ಟುಗಳ ಬದಲು ಸ್ಟೀಲ್ ಚಮಚಗಳು ಬಂದಿವೆ. ಇಂಗಳ ಇಂಗಳ ಕಟ್ಟಿಗೆಯಲ್ಲಿ ಉದ್ದೇಶ ಪೂರ್ವಕವಾಗಿ ಹುಟ್ಟನ್ನು ಬಡಿಗೇರರು ತಯಾರಿಸುತ್ತಿದ್ದರು. ಬೇಳೆ ಬೇದ ಬಗ್ಗೆ ಅನ್ನಪೂರ್ಣಗೊಂಡ ಕುರಿತಾಗಿ ಪಾತ್ರೆಯಲ್ಲಿ ಅದ್ದಿ ತೆಗೆಯಲು ಹುಟ್ಟನ್ನು ಬಳಸಲಾಗುತ್ತಿತ್ತು. ಕಾರಣ ಇಂಗಳ ಹಾರಿವಾಳ ಜಾತಿಯ ಕಟ್ಟಿಗೆ ವಿಶಿಷ್ಟ ಗುಣವೆನೆಂದರೆ ಅಡುಗೆ ಹಳಸುವುದಿಲ್ಲ. ಉಂಡು ತಿಂದು ಉಳಿದ ಅಡುಗೆ ಕೆಡಬಾರದೆಂದು ಕಟ್ಟಿಗೆಯ ಹುಟ್ಟನ್ನು ಬಡಿಗೇರರು ತಯಾರಿ ಸುತ್ತಿದ್ದರು. ಇದರ ಮಹತ್ವ ಅರಿಯದ ಸಮಾಜ, ಆಧುನೀಕರಣಗೊಂಡು ಪ್ಲಾಸ್ಟಿಕ್, ಸ್ಟೀಲ್ ಉಪಕರಣಗಳಿಗೆ ಮಾರುಹೋಗುತ್ತಿವೆ. ಬಾಚಿಯಿಂದ ಕೆತ್ತಿದ ಕಟ್ಟಿಗೆಯಲ್ಲಿ ಒಳಗೆ ಕೆಚ್ಚುಗಟ್ಟಿಯಾಗಿ ಉಳಿದು ವಸ್ತು ಹೆಚ್ಚಿಗೆ ತಾಳಿಕೆಯಿಂದ ಕೂಡಿರುತ್ತದೆ. ಆದರೆ ಈಗ ಯಂತ್ರದಿಂದ ಕೊಯ್ದ ಕಟ್ಟಿಗೆಯಲ್ಲಿ ಬೇರು ಜೀವರಸ ಕಳೆದುಕೊಂಡು ಬೇಗ ನಾಶವಾಗುತ್ತವೆ. ಇಂದಿಗೂ ಸಲಿಕೆ-ಗುದ್ದಲಿಗಳ ಕಾಂವ ಹಾಸುವ ಕಟ್ಟಿಗೆಯನ್ನು ಪರೀಕ್ಷಿಸಬಹುದಾಗಿದೆ. ಜನ್ಮತಃ ಗುಂಡುಕಟ್ಟಿಗೆ ಹೆಚ್ಚಿಗೆ ತಾಳಿಕೆಯುಳ್ಳದ್ದು, ಚೌಕಾಕಾರದಲ್ಲಿ ಕೊಯ್ದಕಟ್ಟಿಗೆ ಬೇಗನೆ ತುಂಡಾಗುತ್ತದೆ. ಹೀಗೆ ಮರದ ಆಂತರ್ಯವನ್ನು ಬಲ್ಲವನು ಬಡಿಗೇರ ಆದರೆ ಅವನ ಚಾತುರ್ಯತೆಗೆ ಬೆಲೆಯಿಲ್ಲದಾಗಿದೆ. ಬಾಚಿಯಿಂದ ಬುಗುರಿ ಕೆತ್ತಿದ ಬಡಿಗೇರರಿಗೆ ಪ್ಲಾಸ್ಟಿಕ ಬುಗುರಿ ತೋರಿಸುವಂತಾಗಿದೆ. ಹೆಚ್ಚುಸುತ್ತು ತಿರುಗುವ ಬಗುರಿ ಮರದಿಂದ ಕೂಡಿದ್ದಾಗಿದೆ. ಹೀಗಿದ್ದರೂ ಬಡಿಗೇರರ ಕೈಚಳಕದಿಂದ ತಯಾರಾದ ವಸ್ತುಗಳು ಇಂದು ಯಾರಿಗೂ ಬೇಕಾಗಿಲ್ಲ. ಅರಮನೆಯಂತಹ ಮನೆಗೆ ಸುಂದರವಾದ ಬಾಗಿಲು-ಪಡಕ ಜೋಡಿಸುವುದು ಮಾಲೀಕನಿಗೆ ಮಹತ್ವದ್ದಾಗಿರುತ್ತದೆ. ಹೀಗಾಗಿ ಅವರವರ ಅಭಿಷ್ಟ ದೇವತೆಗಳ ಮೂರ್ತಿಕೆತ್ತಿಸಿ ಬಾಗಿಲಿಗೆ ಪಡಕ ಅಳವಡಿಸಿರುತ್ತಾರೆ. ಮರದ ಹಲಗೆಯಲ್ಲಿ ಬಡಿಗೇರ ಸುಂದರವಾದ ಮೂರ್ತಿಕೆತ್ತಿ ಕುಶಲಕಲೆಯನ್ನು ವಿಶ್ವಕ್ಕೆ ಪರಿಚಯಿಸಿರುತ್ತಾರೆ. ಆದರೆ ಇಂದು ಇಂತಹ ಹಲಗೆ ಮೇಲೆ ಮೂರ್ತಿಕೆತ್ತುವ ಕೆಲಸ

ನಿಂತುಹೋಗಿವೆ. ಕಾರಣ 'ವುಡ್‌ಡಿಸೈನ ಕಟಿಂಗ್' ಕಂಪ್ಯೂಟರ್ ಮೂಲಕ(ಸಿ.ಎನ್.ಸಿ ರೋಟರ್) ಮರದ ಕೆತ್ತನೆಯ ಯಂತ್ರಗಳು ಬಂದಿವೆ. ಗಣಪತಿ, ರಾಧಾ-ಕೃಷ್ಣ, ಶಿವ, ಸುಳಿವಿನ ಬಳ್ಳಿ, ಜೋಡು ನವಿಲು, ಕುಂಭ ಬಳ್ಳಿ, ದೀಪ ಬಳ್ಳಿ, ಮಕ್ಕಾ ಮಸೀದಿ, ಮದಗಜ ಮುಂತಾದ ಮೂರ್ತಿಗಳನ್ನು ತುರ್ತಾಗಿ ತಯಾರಾಗುತ್ತಿವೆ. ಇದರಿಂದ ಬಡಿಗೇರರ ಕುಶಲ ಕೈಗಳು ಬರಿದಾಗಿವೆ. ಜಗತ್ತು ಯಾಂತ್ರೀಕಣಗೊಳ್ಳತ್ತಿರುವುದರಿಂದ ಬಡಿಗೇರರಿಗೆ ಉದ್ಯೋಗವಕಾಶಗಳು ಇಲ್ಲವಾಗಿವೆ.

ಕುರುಬ, ಲಿಂಗಾಯತ ಇತರೆ ಸಮಾಜದವರು ಊರಲ್ಲಿ ಮೃತರಾದರೆ ಮೊದಲು ಬಡಿಗೇರರನ್ನು ಕಂಡು ಛಟ್ಟ ಪಲ್ಲಕ್ಕಿ ತಯಾರಿಸಲು ಹೇಳುತ್ತಿದ್ದರು. ಅನಂತರದಲ್ಲಿ ಬೀಗರು-ಬಿಜ್ಜರು, ಹಲಗೆಯವರಿಗೆ ತಿಳಿಸುತ್ತಿದ್ದರು. ಮನುಷ್ಯ ಮೃತನಾದ ಕ್ಷಣ ಮಾತ್ರದಲ್ಲಿ ಬಡಿಗೇರರ ಬಾಚಿ ಮೃತರ ಮನೆಯಂಗಳದಲ್ಲಿ ಇರುತ್ತಿತ್ತು. ಬಾಚಿಗೆ ಅಷ್ಟೊಂದು ಮಹತ್ವವಿದೆ. ಇದರಿಂದಾಗಿ ಬಡಿಗೇರರು ಕಡ್ಡಾಯವಾಗಿ ಹೆಣಶೃಂಗಾರಗೊಳಿಸಲು ಸಂಸ್ಕಾರ ಕಾರ್ಯದಲ್ಲಿ ಬಾಚಿಯೊಂದಿಗೆ ಭಾಗವಹಿಸುತ್ತಿದ್ದರು. ಆದರೆ ಇಂದೂ ಬಾಚಿ ಮತ್ತು ಬಡಿಗೇರರ ಮಹತ್ವ ಅರಿಯದ ಇತರ ಸಮುದಾಯದವರು ಛಟ್ಟಕಟ್ಟಲು ಬಡಿಗೇರರನ್ನು ಕರೆಯುತ್ತಿಲ್ಲ. ಪರ್ಯಾಯವಾಗಿ ಸ್ಟೀಲ್, ಕಬ್ಬಿಣದ (ಚಕ್ರದ) ಸಿದ್ಧಪಡಿಸಿದ ಛಟ್ಟ ಪಲ್ಲಕ್ಕಿ ಅಥವಾ ಹೆಣದ ರಥವನ್ನು ಬಳಸುತ್ತಿದ್ದಾರೆ. ಈ ಕೆಲಸಕ್ಕೆ ಬಡಿಗೇರರು ನಿರ್ದಿಷ್ಟ ಸಂಬಳವನ್ನು ಬಯಸುತ್ತಿರಲಿಲ್ಲ. ನೀಡಿದಷ್ಟೇ ಹಣ ಪಡೆಯುತ್ತಿದ್ದರು. ಬಡಿಗೇರರು ಮೂಲತಃ ಹಣದಾಹಿಗಳಲ್ಲ. ಶ್ರಮವಹಿಸಿ ದುಡಿಯವುದೊಂದೇ ಅವರ ಗುರಿಯಾಗಿರುತ್ತಿತ್ತು.

ಮರದ ಜೇಷ್ಪಾ ಮಡಿಗೆಯ ಮನೆಗಳು ಮಾಯವಾಗಿವೆ. ಅಪ್ಪಪೇಲ ಗಡಿಗೆ, ನಾಗೊಂದಿ ಪಳಿ (ಹಲಗೆ) ಇವೆಲ್ಲವೂ ಇಂದು ನೋಡಲು ಸಿಗುತ್ತಿಲ್ಲ. ಸಿಮೆಂಟ್ ಪತ್ರಾಸ ಮಂಗಳೂರು ಹೆಂಚುಗಳು ಇವುಗಳನ್ನು ಆಕ್ರಮಿಸಿದವು. ಕಾಲ ಎಷ್ಟೊಂದು ವೇಗವಾಗಿದೆಯೆಂದರೆ ಸಿಮೆಂಟ್ ಪತ್ರಾಸಗಳನ್ನು ಸಿಮೆಂಟ್-ಕಬ್ಬಿಣ ಸಲಾಕೆಗಳು ಆಕ್ರಮಿಸಿಕೊಂಡಿವೆ. ಕಾರಣ ಮರಗಳನ್ನು ಕಡಿಯುವುದು ನಿಷೇಧವಾಗಿದೆ. ಕಟ್ಟಿಗೆ ಕೊರೆಯುವ ಮಿಲ್(ಸಾಮಿಲ್)ಗಳ ಚಕ್ರ ನಿಂತಿದೆ. ಬಡಿಗೇರರ ಬಾಚಿ ಮೂಲೆ ಸೇರಿದೆ. ಶೇ. ೮೦ರಷ್ಟು ಮರಗೆಲಸ ಕಡಿಮೆಯಾಗಿದೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ ಆದರೆ ಪರಿಸರ ಹೆಸರಿನಲ್ಲಿ ಪಾರಂಪರಿಕ ಮರಗೆಲಸಕಾರರನ್ನು ನಾಶಮಾಡುವ ಕ್ರಮ ಸರಿಯಾದುದಲ್ಲ. ಇದರ ಪರಿಣಾಮ ಬಡಿಗೇರರು ಮೂಲ ಉದ್ಯೋಗ ಬಿಟ್ಟು ಆಧುನಿಕ ಕೆಲಸಗಳತ್ತ ಮುಖಮಾಡುತ್ತಿದ್ದಾರೆ. ಇನ್ನು ಕೆಲವರು ತಮ್ಮ ಕೆಲಸದಲ್ಲಿನ ಶ್ರಮಕಡಿಮೆ ಮಾಡಿಕೊಳ್ಳಲು ಯಂತ್ರೋಪಕರಣಗಳನ್ನು ಸ್ವೀಕರಿಸುವ ಸ್ಥಿತಿಯಲ್ಲಿದ್ದಾರೆ. ಆಧುನಿಕರಣಕ್ಕೊಳಗಾಗಿರುವ ಬಡಿಗೇರರ ಉದ್ಯೋಗಗಳು ಮುಂದುವರೆಯಬೇಕು. ಆರ್ಥಿಕವಾಗಿ ಪ್ರಭಲರಾಗಬೇಕು ಏಣಿಕೃತ ಸಾಮಾಜಿಕ ಸ್ಥಾನಮಾನ ಪಡೆಯಬೇಕಾಗಿದೆ.

ಕಂಚುಗಾರ

ಕಂಚುಗಾರರು ಪಂಚಾಳ ಕುಶಲಕರ್ಮಿ ಸಮುದಾಯದ ತೃತೀಯ ಕಸಬುದಾರರಾಗಿದ್ದಾರೆ. ಕಂಚು, ಹಿತ್ತಾಳೆ, ತ್ರಾಮದ ಕೆಲಸ ನಿರ್ವಹಿಸುತ್ತಾರೆ. ಕಂಚುಗಾರರ ಕುರಿತಾಗಿ ಶಾಸನಗಳು ಉಲ್ಲೇಖಿಸಿವೆ. ಲೋಹದಿಂದ ದೇವರ ಮೂರ್ತಿ ಹೋಮ-ಹವನಗಳಿಗೆ ಸಂಬಂಧಿಸಿದ ಗಂಟೆ-ಜಾಗಟೆ, ದೀಪ, ವಿಗ್ರಹಗಳ ಪ್ರಭಾವಳಿ, ವಿವಿಧ ಪ್ರಾಣಿಗಳ ದೇವತೆಗಳ ವಾಹನ ವಿಗ್ರಹಗಳನ್ನು ಪಡಿಯಚ್ಚು ಮೂಲಕ ತಯಾರಿಸುತ್ತಾರೆ. ನಾಟ್ಯ ರತ್ನಾಕರ ಶಿವನರ್ತನ ವಿಗ್ರಹ ಕಲಾತ್ಮಕವಾಗಿ ತಯಾರಿಸುತ್ತಾರೆ.

'ಕಂಚು' ಲೋಹ ದಿನಪ್ರತಿ ಬೆಳಗುತ್ತಿದ್ದರೆ ಹೊಳೆವು ಹೆಚ್ಚಾಗುತ್ತಿರುತ್ತದೆ. 'ತುಕ್ಕು' ಹಿಡಿಯುವ ಗುಣ ಈ ಲೋಹಕ್ಕಿಲ್ಲ. ಬೇರೆ ಬೇರೆ ವಿಗ್ರಹ-ವಸ್ತುಗಳ ಪಡಿಯಚ್ಚು ಕಂಚುಗಾರನು ಹೇರಳವಾಗಿ ತಯಾರಿಸಿ ಕೊಂಡಿರುತ್ತಾನೆ. ಪಡಿಯಚ್ಚಿನಲ್ಲಿ ಕಂಚು-ತಾಮ್ರ-ಹಿತ್ತಾಳೆ ಲೋಹ ಕರಗಿಸಿ ಸುರಿಯುತ್ತಾನೆ. ಲೋಹ ಕರಗಿಸುವಾಗ ದೊಡ್ಡದಾದ ಕುಲುಮೆ-ತಿದಿ ಬಳಸುತ್ತಾನೆ. ಅನಂತರದಲ್ಲಿ ಆವಿಗೆಯಲ್ಲಿ ಪಡಿಯಚ್ಚು ಕಾಯಿಸಿ, ಜೇಡಿ ಮಣ್ಣಿನಿಂದ ಲೋಹ ಬೇರ್ಪಡಿಸಿ ನಯವಾಗಿ ತಿಕ್ಕಿ- ತೊಳೆದು ಸ್ವಚ್ಛಗೊಳಿಸಿ ಸುಂದರ ವಿಗ್ರಹ, ಪಾತ್ರೆಗಳನ್ನು ಕಂಚುಗಾರರು ತಯಾರಿಸುತ್ತಾರೆ. ತೀಕ್ಷ್ಣ ಮತ್ತು ಚಾಣಾಕ್ಷತೆಯ ಕೆಲಸ, ಕಂಚುಗಾರಿಕೆ. ಪಂಚಲೋಹಗಳಲ್ಲಿ ಒಂದಾಗಿರುವ ಕಂಚಿನಿಂದ ವಿಗ್ರಹಗಳ ಜೊತೆ ರಾಜ-ಮಹಾರಾಜರ ಕಾಲದಲ್ಲಿಯ ಶಸ್ತ್ರಾಸ್ತ್ರಗಳನ್ನು ತಯಾರಿಸಲಾಗುತ್ತಿತ್ತು. ಬಿಲ್ಲು-ಬಾಣ ಗದೆ, ಭರ್ಜಿ, ಕತ್ತಿ-ಗುರಾಣಿ ಮುಂತಾದ ಆಯುಧಗಳನ್ನು ಕಂಚುಗಾರರು ಅರಸರಿಗೆ ತಯಾರಿಸಿ ಕೊಟ್ಟು ಭೂದಾನ ಪಡೆದುಕೊಂಡ ಉಲ್ಲೇಖಗಳು ಶಾಸನ-ಜಾನಪದ ಸಾಹಿತ್ಯದಲ್ಲಿ ದೊರೆಯುತ್ತಿವೆ. ಜೈನರು ವಾಸವಾಗಿದ್ದ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಚುಗಾರ ಕುಟುಂಬಗಳ ನೆಲೆಸಿದ್ದರ ಕುರಿತು ಮಾಹಿತಿ ದೊರೆಯುತ್ತದೆ. ತೇರದಾಳ, ಹಣಗಂಡಿ, ಅಥಣಿ ಹಾರೂಗೇರಿಯಲ್ಲಿ ಕಂಚುಗಾರರ ಕುಟುಂಬಗಳಿದ್ದವು. ಜೈನರು ಹೆಚ್ಚಾಗಿ ತಾಮ್ರ- ಹಿತ್ತಾಳೆ ಗೃಹೋಪಯೋಗಿ ವಸ್ತುಗಳನ್ನು ಬಳಸುತ್ತಿದ್ದರು. ಹೀಗಾಗಿ ಕಂಚುಗಾರ ಕುಟುಂಬಗಳಿಗೆ ನೆಲೆಯಾಗಿದ್ದರು.

ಕಂಚುಗಾರಿಕೆ ಕಸಬು ಈಗ ಕಡಿಮೆಯಾಗಿದೆ. ತಾಮ್ರ-ಹಿತ್ತಾಳೆ, ಕಂಚು ಪಾತ್ರೆ-ಪಗಡುಗಳನ್ನು ಈಗ ಬಳಸುವವರು ಕಡಿಮೆಯಾಗಿದ್ದಾರೆ. ಮದುವೆ-ಮುಂಜಿ ವಿಶೇಷ ಪೂಜೆಗಳಲ್ಲಿ ಮಾತ್ರ ಬಳಸಲ್ಪಡುತ್ತಿವೆ. ಹೀಗಾಗಿ ಜೀವಮಾನದಲ್ಲಿ ಇಂತ ವಸ್ತುಗಳನ್ನು ಒಮ್ಮೆ ಖರೀದಿಸುತ್ತಾರೆ. ಅನಂತರದಲ್ಲಿ ಕಂಚು-ಹಿತ್ತಾಳೆ- ತಾಮ್ರದ ಕಡೆ ಯಾರು ಮುಖಮಾಡುವುದಿಲ್ಲ. ಹಗುರವಾದ ಕಾಲಮಾನದಲ್ಲಿ ತಾಮ್ರದ ಕೊಡ, ತಪೇಲಿ, ಹಂಡೆ, ನೀರು ಕಾಯಿಸುವ ಕೊಳವೆ ಮನೆಯ ಮೂಲೆ ಸೇರಿವೆ. ಎರಡು ಕೊಡದಳತೆಯ ಒಂದೇ ಒಂದು 'ಬಂಡಿಗೊಡ'ವಿರುತ್ತಿತ್ತು. ಫೈಲ್ವಾನರೇ ಬಂಡಿಗೊಡ ಹೊತ್ತು ಬಾವಿಗೆ ಹೋಗಿ ನೀರು ತರುತ್ತಿದ್ದರು. ಮಹಿಳೆಯರು ತಲೆಮೇಲೆ, ಕೊಂಕಳಲ್ಲಿ ಒಂದೊಂದು

ತಾಮ್ರದ ಕೊಡ ಹೊತ್ತು ನೀರು ತರುತ್ತಿದ್ದರು. ಈಗ ಪಾನ್ ಪರಾಗ, ಸ್ಟಾರ್ ಗುಟಕಾ ತಿನ್ನುವವರಿಗೆ ಬಂಡಿಗೊಡ ಹೊರಲಾಗದೆ, ಕೊಡಗಳು ಹತ್ತಾರು ವರ್ಷಗಳಿಂದ ಕುಳಿತಿವೆ. ಪ್ಲಾಸ್ಟಿಕ್ ಕೊಡ ಮಹಿಳೆಯರ ಅಚ್ಚುಮೆಚ್ಚಿನ ಕೊಡ. ಜನರಲ್ಲಿ ತಾಮ್ರ ಹಿತ್ತಾಳೆ– ಕಂಚಿನ ಬಳಕೆ ಕಡಿಮೆಯಾದುದರಿಂದ ಈ ಕಸಬುದಾರರು ಉದ್ಯೋಗ ತೊರೆದು ಬೇರೆ ಬೇರೆ ಉದ್ಯೋಗ ಹುಡುಕಬೇಕಾಗಿದೆ. ಈ ಉದ್ಯೋಗದಲ್ಲಿಯೂ ಅನ್ಯ ಮತೀಯರು ಪ್ರವೇಶಗೊಂಡಿರುವುದರಿಂದ ಪಾರಂಪರಿಕ ಕಸಬುದಾರ ಕಂಚುಗಾರ ಜೀವನ ನಿರ್ವಹಿಸುವುದೇ ಕಷ್ಟವಾಗಿದೆ. ಪ್ಲಾಸ್ಟೀಕೀಕರಣದಿಂದ ಪರಂಪರಾಗತ ಕಂಚುಗಾರಿಕೆ ಉದ್ಯೋಗ ಅವನತಿ ಹಾದಿ ಹಿಡಿದಿದೆ ಮತ್ತೇ ಈ ಉದ್ಯೋಗಗಳು ಜೀವಂತಿಕೆ ಪಡೆದುಕೊಳ್ಳಬೇಕಾಗಿದೆ. ವೈಜ್ಞಾನಿಕವಾಗಿ ಹಿತ್ತಾಳೆ–ತಾಮ್ರದ ವಸ್ತುಗಳನ್ನು ಬಳಸುವುದರಿಂದ ಮನುಷ್ಯ ಆರೋಗ್ಯ ಪೂರ್ಣನಾಗಿರುತ್ತಾನೆಂಬ ಸತ್ಯವನ್ನು ಜನತೆಗೆ ಮನವರಿಕೆ ಮಾಡಬೇಕಿದೆ. ತಾಮ್ರ–ಹಿತ್ತಾಳೆ–ಕಂಚಿನ ಬಳಕೆಯನ್ನು ಹೆಚ್ಚಿಸಬೇಕು. ಈ ಉದ್ಯೋಗದಾರರ ಬದುಕನ್ನು ಉಳಿಸಬೇಕಾಗಿದೆ. ಪ್ಲಾಸ್ಟಿಕ್ ಬಳಕೆ ಆರೋಗ್ಯಕ್ಕೆ ಹಾನಿಕಾರಕ; ತಾಮ್ರ–ಹಿತ್ತಾಳೆ ಕಂಚಿನ ಬಳಕೆ ಆರೋಗ್ಯಕರ ಎಂಬುದನ್ನು ಜನಸಾಮಾನ್ಯರಲ್ಲಿ ಮನವರಿಕೆ ಮಾಡಬೇಕಿದೆ. ಸಂಪೂರ್ಣವಾಗಿ ಪ್ಲಾಸ್ಟಿಕ್ ಸಾಮಾನು, ಆಟಿಕೆ, ಅಲಂಕಾರಿಕತೆಗಳು ನಿಷೇಧವಾಗಬೇಕು.

ಶಿಲ್ಪ

ಮದ್ಯಯನಂ ನಾಮವೃತ್ತಂ ಬ್ರಾಹ್ಮಣ ಲಕ್ಷಣಂ ಎಂದು ವ್ಯಾಸಮುನಿ ಮಹಾಭಾರತದಲ್ಲಿ ಹೇಳಿದ್ದಾನೆ. ಬ್ರಾಹ್ಮಣ ಕುಶಲಕರ್ಮಿಯಾದ ಶಿಲ್ಪಿಯು ಕುಲಕಸಬುದಾರ ಸಮುದಾಯದ ಚತುಷ್ಟ ಮತ್ತು ಚತುರ ಕೆಲಸಗಾರ ಶಿಲೆಯಲ್ಲಿ ಸುಂದರ ಮೂರ್ತಿಗಳನ್ನು ಕೆತ್ತುವುದು ಶಿಲ್ಪಿಯ ಉದ್ಯೋಗ. ಶಿಲ್ಪಗಾರಿಕೆ ಸಾಮಾನ್ಯ ಕಸಬು ಅಲ್ಲ. ಅದೊಂದು ತಪಸ್ಸು ಸಿದ್ಧಿ ಏಕಾಗ್ರತೆಯ ಮನೋಧರ್ಮದವರಿಗೆ ಮಾತ್ರ ಒಲಿದು ಬರುವ ದೇವರ ಕೊಟ್ಟ ಕಸಬು ಶಿಲ್ಪಗಾರಿಕೆ.

ಭಾರತೀಯ ಭವ್ಯ ಸಂಸ್ಕೃತಿಯ ರೂವಾರಿ ಶಿಲ್ಪಿ ದೇಶದಲ್ಲಿ ನಿರ್ಮಾಣಗೊಂಡ ಸುಂದರ ದೇವಾಲಯಗಳು ದೇಶದ ಸಾಂಸ್ಕೃತಿಕ ಆಸ್ತಿಗಳು. ಶಿಲ್ಪಿಗಳು ಭಾರತ ದೇಶದ ಸಂಸ್ಕೃತಿಯ ಸ್ವತ್ತು. ಹಳೇಬೀಡು, ಬದಾಮಿ ಪಟ್ಟದಕಲ್ಲು, ಐಹೊಳೆ, ಹಂಪಿ ಮುಂತಾದ ಅಪೂರ್ವ ದೇವಾಲಯಗಳು, ಗೋಮ್ಮಟೇಶ್ವರನ ಅದ್ಭುತ ಶಿಲಾಮೂರ್ತಿಗಳ ರಚನೆಯಲ್ಲಿ ಶಿಲ್ಪಿಗಳು ತಮ್ಮ ಕೈಚಳಕದ ಚಾತುರ್ಯತೆಯನ್ನು ತೋರಿಸಿದ್ದಾರೆ. ಶಿಲ್ಪಿ ಸೌಂದರ್ಯದ ಆರಾಧಕ; ಕಾಂಚಾನದ ಕನಸುಗಾರನಲ್ಲ. ದುಡ್ಡಿಗಿಂತ– ದುಡಿಮೆಯನ್ನು ಜೀವನದಲ್ಲಿ ಪ್ರಧಾನವಾಗಿಸಿದವನು ಶಿಲ್ಪಿ. ಶಿಲೆಗೆ ಸಂಸ್ಕಾರ ಕೊಡುವಂತೆ ಜಡಸಮಾಜಕ್ಕೂ ಸಂಸ್ಕಾರ ಕೊಡುವ ಆಚಾರ್ಯನಾಗಿದ್ದವನು ಶಿಲ್ಪಿ. ಶಾಸ್ತ್ರಬದ್ಧ ನಿಯಮಗಳಿಗನುಸಾರವಾಗಿ ಶಿಲ್ಪವನ್ನು ನಿರ್ಮಿಸಲಾಗುತ್ತಿತ್ತು. ಹೀಗಾಗಿ ಶಿಲ್ಪಿಯ ಶಿಲ್ಪಶಾಸ್ತ್ರವನ್ನು ಸಂಪೂರ್ಣವಾಗಿ ಅಧ್ಯಯನ

ಮಾಡಿರುವವನಾಗಿರುತ್ತಿದ್ದನು.

ಶಿಲ್ಪಿಗಾರರು ಸಮಾಜದಲ್ಲಿ ಉನ್ನತ ಸ್ಥಾನ–ಮಾನಗಳನ್ನು ಹೊಂದಿದ್ದರೆಂಬುದನ್ನು ರಾಜ–ಮಹಾರಾಜರ ಚರಿತ್ರೆಗಳು, ಶಾಸನಗಳು, ಜನಪದರು ಹಾಡುಕಟ್ಟಿ ಹಾಡಿದ್ದು ತಿಳಿದುಬರುತ್ತವೆ. ವೇದ–ಉಪನಿಷತ್ತುಗಳನ್ನು ಬಲ್ಲ ಕೈಶುದ್ಧ; ಬಾಯ್ ಶುದ್ಧ ಪಂಚಾಳ ಕುಶಲಕರ್ಮಿ ಇಂದಿಗೂ ಪರಿಶುದ್ಧ ಭಾವನೆಯಿಂದ ಮೂರ್ತಿಗಳನ್ನು ತಯಾರಿಸುತ್ತಿದ್ದಾನೆ. ಪರಂಪರಾಗತವಾಗಿ ಬಂದ ಈ ಕಲೆ ವಿಶ್ವಕರ್ಮ ಕುಶಲಕರ್ಮಿಯ ಆಜನ್ಮ ಸಿದ್ಧಿಯ ಕುಶಲಕರ್ಮವಾಗಿದೆ.

'ಬ್ರಾಹ್ಮಣನ ಬಾಯ್‌ಶುದ್ಧ; ಪಂಚಾಳನ ಕೈಶುದ್ಧ' ಎಂಬ ಗಾದೆ ಮಾತು ಈ ಹಿನ್ನೆಲೆಯಲ್ಲಿ ಪ್ರಚಲಿತವಾಗಿದೆ. ಬ್ರಾಹ್ಮಣ ಮತ್ತು ಪಂಚಾಳ ಒಬ್ಬನೇ ಆಗಿರುವುದರಿಂದ ಕೈ–ಬಾಯ್ ಶುದ್ಧವಿರುವ ಶಿಲ್ಪಿ ತಯಾರಿಸಿದ ಶಿಲ್ಪ ಪವಿತ್ರವಾದದ್ದಾಗಿದೆ. ನಿತ್ಯ ಪೂಜೆಗರ್ಹವಾಗಿರುತ್ತಿತ್ತು. ವೇದೋಕ್ತ ಪಠಣದಿಂದಾಗಿ ಶಿಲ್ಪ ಶಾಸ್ತ್ರದ ಅರಿವಿನಿಂದಾಗಿ ಶಿಲ್ಪದಲ್ಲಿ ದೈವಾಂಶತೆಯನ್ನು ತುಂಬುವ ಶಕ್ತಿಯನ್ನು ಶಿಲ್ಪಿ ಹೊಂದಿದ್ದನು.

ಪಂಚಾಳ ಕುಶಲಕರ್ಮಿ ಸಮುದಾಯದ ಇತರ ಕಸಬುಗಳನ್ನು ಲಕ್ಷಿಸಿದರೆ ಶಿಲ್ಪಗಾರಿಕೆ ಹೆಚ್ಚು ಬೇಡಿಕೆಯ ಕಸಬಾಗಿದೆ. "ಎಲ್ಲಿಯವರೆಗೆ ಮಾನವನಲ್ಲಿ ದೇವರು ಮತ್ತು ದೇವಾಲಯಗಳ ಮೇಲಿನ ನಂಬಿಕೆ, ಜೀವಂತವಾಗಿ ಉಳಿದಿರುತ್ತದೆಯೋ, ಅಲ್ಲಿಯವರೆಗೂ ಶಿಲ್ಪಿಗಳಿಗೆ ಜೀವನೋಪಾಯಕ್ಕೆ ಮಾರ್ಗವಿದ್ದೇ ಇರುತ್ತದೆ."[೪] ಆದರೆ ಇದೇ ನಂಬಿಕೆಗಳನ್ನು ಅತಿಯಾಗಿ ನಂಬಿ ಕುಳಿತರೆ ಶಿಲ್ಪಿಗಳ ಉಳಿ, ಚಾಣ ತುಕ್ಕು ಹಿಡಿಯುತ್ತವೆ. ಆಧುನಿಕ ಸಂದರ್ಭದಲ್ಲಿ ಭೂಮಿ ಅಗೆಯುವುದು ನಿಷೇಧವಾಗುತ್ತಿದೆ. ಗಣಿಗಾರಿಕೆ ಬಗ್ಗೆ ಸರ್ಕಾರ ಹದ್ದಿನ ಕಣ್ಣು ಇಟ್ಟಿದೆ. ಬಂಡವಾಳ ಶಾಹಿಗಳು ಶಿಲೆಯನ್ನು ಪುಡಿ ಪುಡಿಗೊಳಿಸುವ ಯಂತ್ರಗಳನ್ನು ಬಳಸುತ್ತಿದ್ದಾರೆ. ಗೊಮ್ಮಟೇಶ್ವರನ ತಯಾರಿಸಿದ ಏಕಶಿಲೆಗಳು ದೊರೆಯುವುದು ಕಷ್ಟವಾಗುತ್ತಿವೆ. ಪ್ಲಾವುಡ್–ಸಿಮೆಂಟ್–ಪತ್ರಾಸ ತಗಡಿನ ಮನೆಗಳು ನಿರ್ಮಾಣ ವಾಗಿರುವಂತೆ, ಗುಡಿ–ಗೋಪುರ ದೇವಾಲಯಗಳು ಶಿಲೆಯಿಂದ ಮುಕ್ತವಾಗುತ್ತವೆಂಬ ಸೂಚನೆಗಳು ಕಂಡುಬರುತ್ತವೆ. ಭಾರತದ ಶಿಲ್ಪಿಗಳಿಗೆ ದೇಶ–ವಿದೇಶಗಳಲ್ಲಿಯೂ ಹೆಸರಿದೆ. ಇವರಿಗೆ ಪ್ರಶಾಂತ ವಾತಾವರಣದಲ್ಲಿ ಕುಟೀರ ನಿರ್ಮಿಸಿಕೊಂಡು ಬದುಕಿರಲು ಸ್ಥಳಾವಕಾಶಗಳು ಬೇಕಾಗುತ್ತವೆ. 'ಶಿಲ್ಪಗ್ರಾಮ'ಗಳ ಅವಶ್ಯಕತೆಯಿದೆ. ಸ್ವಲ್ಪ ಮಟ್ಟಿಗೆ ತಮಿಳುನಾಡಿನಲ್ಲಿ ಶಿಲ್ಪಕಲಾ ಶಾಲೆಗಳನ್ನು ಸರ್ಕಾರವೇ ನಿರ್ಮಿಸಿದೆ. ಶಿಲ್ಪಿ–ಕುಶಲಕರ್ಮಿಗಳ ಕುಂದು ಕೊರತೆಗಾಗಿ ರಾಜ್ಯಮಟ್ಟದಲ್ಲಿ ಸಂಘಗಳು ಅಸ್ಥಿತ್ವದಲ್ಲಿವೆ. ಆದರೆ ಕರ್ನಾಟಕದಲ್ಲಿ ಶಿಲ್ಪಕಲೆ ಪೋಷಣೆಗಾಗಿ ಮತ್ತಷ್ಟು ಗಟ್ಟಿ ನೆಲೆಗಳು ಹುಟ್ಟಿಕೊಳ್ಳಬೇಕಾಗಿದೆ.

ಶಿಲೆಯಲ್ಲಿ ಕಲೆಯನ್ನು ಅರಳಿಸುವವನು ಅಗಾಧ ಪ್ರತಿಭಾ ಪಾಂಡಿತ್ಯವನ್ನು ಹೊಂದಿರುತ್ತಾನೆ. ಶಿಲ್ಪಿಗೆ ಅಧ್ಯಯನ ತುಂಬಾ ಅವಶ್ಯಕವಾದದ್ದಾಗಿದೆ. ಆದರೆ ಇತ್ತೀಚಿನ ಶಿಲ್ಪಿಗಳಲ್ಲಿ ಈ ಬಗೆಯ ವೃತ್ತಿ

ನಿಷ್ಠೆ ಕಡಿಮೆಯಾಗಿದೆ. ಕೈಯಲ್ಲಿ ಉಳಿ–ಚಾಣ ಹಿಡಿಯಲು ಬಂದರೆ ಶಿಲ್ಪಿಗಳಾಗಲು ಸಾಧ್ಯವಿಲ್ಲವೆಂದು ಹಿರಿಯ ಶಿಲ್ಪಿಗಳ ಅಭಿಪ್ರಾಯ. ಶಿಲ್ಪಶಾಸ್ತ್ರದ ಜ್ಞಾನ ಇಂದು ಯುವಶಿಲ್ಪಿಗಳಿಗೆ ಬೇಕು. ಆಧುನಿಕ ಶಿಕ್ಷಣ ನೀತಿಯಲ್ಲಿ ಸೆಮಿಸ್ಟರ್ ಪದ್ಧತಿ ಜಾರಿಗೆ ಬಂದ ರೀತಿಯಲ್ಲಿ ಶಿಲ್ಪಗಾರಿಕೆ ಕಲಿಕೆಯಲ್ಲಿ ಹಗುರಗಾರಿಕೆ ನುಸುಳುತ್ತಿದೆ. ಶಿಲ್ಪಿ ಮತ್ತು ಉಳಿ–ಚಾಣ–ಸುತ್ತಿಗೆಗಳು ಸುಂದರವಾಗಿವೆ. ಆದರೆ ಶಿಲ್ಪಗಳು ಅಸುಂದರವಾಗುತ್ತಿವೆ. ಕಾರಣ ಹಿರಿಯ ಶಿಲ್ಪಿಗಳಲ್ಲಿದ್ದ ವೃತ್ತಿ ನಿಷ್ಠೆ ಶ್ರದ್ಧೆ–ಭಕ್ತಿಯ ಪ್ರಮಾಣ ಇಂದಿನ ಉಳಿ–ಚಾಣದ ಕೈಗಳಲ್ಲಿ ಉಳಿದಿಲ್ಲ. ಈ ಕಸಬಿನಲ್ಲಿಯೂ ಅನ್ಯಮತೀಯರು ಪ್ರವೇಶಗೊಂಡಿದ್ದಾರೆ. ಕಲೆಯ ಆರಾಧನೆಯಾಗಿದ್ದ ಶಿಲ್ಪಗಾರಿಕೆ ಅನ್ಯರಿಂದಾಗಿ ವ್ಯವಹಾರಿಕ ಕಸಬಾಗಿದೆ. ಕಲ್ಲಿನ ಜಾತಿಯನರಿತು ಕಲೆಯರಳಿಸುತ್ತಿದ್ದರು ಪ್ರಾಚೀನ ಕಾಲದ ಪಾರಂಪರಿಕ ಶಿಲ್ಪಿಗಳು. ಆದರೆ ಇಂದು ಕಲ್ಲಿನ ಜಾತಿ ಅರಿಯುವಷ್ಟು ಸಮಯ ಯುವ ಶಿಲ್ಪಿಗಳಲ್ಲಿಲ್ಲವಾಗಿದೆ. ಜಗತ್ತು ವೇಗವಾಗಿ ಸಂಚಲಿತಗೊಂಡಿರುವುದು ಇದಕ್ಕೆ ಒಂದು ಕಾರಣವಾಗಿದೆ. ಹೀಗಾಗಿ ಶಿಲ್ಪಗಾರಿಕೆ ಕಲಿಕೆಗೆ ಪೂರ್ಣಾವಧಿಯ ಶಾಲೆ ಅಗತ್ಯವಾಗಿದೆ.

ಕರ್ನಾಟಕದಲ್ಲಿ 'ಶಿಲ್ಪ ಕಲಾ ಅಕಾಡೆಮಿ' ಸ್ವಲ್ಪ ಮಟ್ಟಿಗೆ ಶಿಲ್ಪಿಗಳಿಗೆ ಪ್ರೋತ್ಸಾಹಕ ಶಕ್ತಿಯಾಗಿದೆ. ಶಿಲ್ಪಗಾರಿಕೆ ಕುರಿತು ಕೆಲವು ಗ್ರಂಥಗಳು ಪ್ರಕಟವಾಗುತ್ತಿವೆ. ಇದು ಇಂದಿನ ಶಿಲ್ಪಗಾರಿಕೆ ಉಳಿಯುವಿಕೆಗೆ ಸಾಲದು. ರಾಜ ಪೋಷಣೆಯಲ್ಲಿ ಸರ್ವಸ್ವತಂತ್ರವಾಗಿ ಬೆಳೆದ ಶಿಲ್ಪಗಾರಿಕೆ ಇಂದಿನ ಸರ್ಕಾರದ ಹತ್ತಾರು ಕಾನೂನು ಕಟ್ಟಳೆಗಳಲ್ಲಿ ಬೆಳೆಯುವುದು ಕಷ್ಟವೆನಿಸುತ್ತದೆ. ಹೀಗಾಗಿ ಶಿಲ್ಪಗಾರಿಕೆ ಕುಶಲಕರ್ಮಿಗಳು ಜೀವನೋಪಾಯಕ್ಕೆ ಅವಶ್ಯವಾಗಿದ್ದ ಶಿಲ್ಪ ಕಸಬನ್ನು ಮುನ್ನಡೆಸುವುದು ಕಷ್ಟಕರವಾಗಿದೆ. ಹಣ ಗಳಿಕೆಯ ಕಸಬು ಇಲ್ಲದಿರುವುದರಿಂದ ಸರ್ಕಾರ ಶಿಲ್ಪಿ ಕುಶಲಕರ್ಮಿ ಕುಟುಂಬಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡುವಂತಾಗಬೇಕಾಗಿದೆ.

ಅಕ್ಕಸಾಲಿ (ಪತ್ತಾರ)

ಪಂಚಾಳ ಕುಶಲಕರ್ಮಿ ಸಮುದಾಯದ ಐದನೆಯ ಕಸಬುದಾರ ಚಿನ್ನ–ಬೆಳ್ಳಿ ತಾಮ್ರದಿಂದ ಆಭರಣಗಳನ್ನು ತಯಾರಿಸುತ್ತಾರೆ. ಅರ್ಕಸಾಲಿ, ಅಕ್ಕಸಾಲಿ ಎಂದು ಕರೆಯುತ್ತಾರೆ. ಕರ್ನಾಟಕದ ಉತ್ತರ ಭಾಗದಲ್ಲಿ ಪತ್ತಾರ, ಸೋನಾರ ಎಂದು ಗುರುತಿಸಲ್ಪಟ್ಟಿದ್ದಾರೆ. ಬೆಳ್ಳಿ–ಚಿನ್ನ ಆಭರಣಗಳಲ್ಲಿ ತಯಾರಿಕೆಯಲ್ಲಿ ನೈಪುಣ್ಯತೆ ಸಾಧಿಸಿದ್ದಾರೆ. ವಜ್ರ, ಪಚ್ಚೆ, ಮುತ್ತು–ರತ್ನ ಮತ್ತಿತರ ಹರಳುಗಳಿಂದ ಆಭರಣ ತಯಾರಿಸುತ್ತಾರೆ. ಕೊರಳ ಆಭರಣಗಳು, ಕಿವಿಯಾಭರಣಗಳು, ಮೂಗುನತ್ತು, ತೋಳುಬಂದಿ, ಕೈಬಳೆ, ವಡ್ಯಾಣ, ಸರ, ಕಾಲಿಗೆ ಕಾಲುಂಗುರಗಳನ್ನು ಚಾಣಾಕ್ಷತೆಯಿಂದ ತಯಾರಿಸುತ್ತಾರೆ. ಅಗ್ಗಿಷ್ಟಿಕೆ, ಅಡಗಲ್ಲು, ಸುತ್ತಿಗೆ, ಇಕ್ಕಳು, ಚಾಣ, ಕತ್ತರಿ ಉಪಕರಣಗಳು ಅಕ್ಕಸಾಲಿಗನ ಜೀವನಾಡಿಗಳಾಗಿವೆ. ಬೆಂಕಿ ಸ್ವರೂಪದ ಅಗ್ಗಿಷ್ಟಿಕೆ ಅಕ್ಕಸಾಲಿಗ ಮತ್ತು ಗ್ರಾಹಕ ಸಮುದಾಯಕ್ಕೆ ಪವಿತ್ರವಾದದ್ದು, ಅಕ್ಕಸಾಲಿಗ ಉಪಕರಣಗಳೆಲ್ಲವನ್ನು ಕಾಳಮ್ಮನಾಗಿ ಕಾಣುತ್ತೇವೆ. ಕೆಲಸ ಆರಂಭಿಸುವ ಮುನ್ನ ಅವುಗಳಿಗೆ ಭಕ್ತಿ–

ಭಾವದಿಂದ ನಮಿಸುತ್ತಾನೆ. ಮದುವೆ ಸಂದರ್ಭದಲ್ಲಿ 'ತಾಳಿ' ಮಾಡಿಸಲು ರೈತಾಪಿ ಸಮುದಾಯ ಅಕ್ಕಸಾಲಿಗನಿಗೆ ಹೇಳಿ ಶುಭ ಮೂಹೂರ್ತದಂದು ಮನೆಗೆ ತರುವಾಗ 'ಅಗ್ಗಿಷ್ಟಿಕೆ'ಗೆ ನಮಿಸುತ್ತಾರೆ. ಹೆಣ್ಣು ಮದುವೆ ಮಂಟಪದಲ್ಲಿ ಪತಿಯಿಂದ ಅಗ್ನಿಸಾಕ್ಷಿಯಾಗಿ ಧರಿಸುವ ತಾಳಿಯು, ಪ್ರಥಮಬಾರಿಗೆ ಅಕ್ಕಸಾಲಿಗನ ಅಗ್ಗಿಷ್ಟಿಕೆಯಲ್ಲಿ ತಯಾರಾಗಿ ಅಗ್ನಿಯ ದರ್ಶನ ಪಡೆದುಕೊಂಡು ಪರಿಶುದ್ಧವಾಗುತ್ತದೆ.

ಭಾರತದಲ್ಲಿ ಮಹಿಳೆಯರು ಧರಿಸುವ 'ತಾಳಿ' 'ಮಂಗಳಸೂತ್ರ'ಕ್ಕೆ ಉನ್ನತ ಸ್ಥಾನ–ಮಾನವಿದೆ. ಶುಭದಿನದಂದೇ ತಾಳಿ ಮಾಡಿಸಲು ಅಕ್ಕಸಾಲಿಗನ ಮನೆಗೆ ಗ್ರಾಹಕ ಸಮುದಾಯ ಬರುತ್ತದೆ. ಪ್ರೀತಿ–ವಿಶ್ವಾಸ ನಂಬಿಕೆಯ ಮೇಲೆ ಗಟ್ಟಿ ಚಿನ್ನಕೊಟ್ಟು ಹೋಗುತ್ತಾರೆ. ತಾನು ತಯಾರಿಸುವ 'ತಾಳಿ' ಹೆಣ್ಣು ಮಗಳನ್ನು ಶಾಶ್ವತವಾಗಿ ಮುತ್ತೈದೆಯನ್ನಾಗಿಸಲಿ ಎಂದು ಅಕ್ಕಸಾಲಿಗ ಹರಸಿ ಶುಭದಿನದಂದು ಆಭರಣ ತಯಾರಿಸುತ್ತಾನೆ. ಶಾಸ್ತ್ರ–ಪುರಾಣ, ಪಂಚಾಂಗಗಳ ಜ್ಞಾನವಿರುವ ಅಕ್ಕಸಾಲಿಗ ಅಮೃತ ಸಿದ್ಧಿಯೋಗ, ದ್ವಾದಷಿ, ತ್ರಯೋದಶಿ, ಪ್ರತಿಪದೆ, ರೇವತಿ ನಕ್ಷತ್ರಗಳ ಶುಭ ಶುಕ್ರವಾರ, ಮಂಗಳವಾರದಂದು 'ತಾಳಿ'ಯನ್ನು ತಯಾರಿಸಿಕೊಡುತ್ತಾನೆ.

ಮದುವೆಯಾಗಿ ಮಕ್ಕಳಾದ ಮೇಲೆ ಮಗುವಿಗೆ ಮೂರನೆ ತಿಂಗಳಲ್ಲಿ ಕಿವಿಗೆ ಮುರುವು ತಯಾರಿಸಿಕೊಡುತ್ತಾನೆ. ಹಳ್ಳಿಗಳಲ್ಲಿ ಕಡ್ಡಾಯವೆನ್ನುವಂತೆ ಮುರುವನ್ನು ಅಕ್ಕಸಾಲಿಗರೆ ಕಿವಿಗೆ ಚುಚ್ಚುವ ಪದ್ಧತಿಯಿದೆ. ಅಕ್ಕಸಾಲಿಗನಿಗೆ ಪ್ರತಿಫಲವಾಗಿ ಬೇಳೆ–ಬೆಲ್ಲ ಕೊಬ್ಬರಿ ಸೀದಾ ಮೊರದ ತುಂಬ ಕೊಡುವ ರೂಢಿಯಿದೆ.

ಪ್ರಾಚೀನ ಕಾಲದಲ್ಲಿ ರಾಜ–ಮಹಾರಾಜರ ಅವಧಿಯಲ್ಲಿ ಚಿನ್ನ–ಬೆಳ್ಳಿಯಿಂದ ನಾಣ್ಯಗಳನ್ನು ತಯಾರಿಸಲಾಗುತ್ತಿತ್ತು. ಅದಕ್ಕಾಗಿ ರಾಜರು ಟಂಕಶಾಲೆಗಳನ್ನು ನಿರ್ಮಿಸಿದ್ದರು. ನಾಣ್ಯ ತಯಾರಿಸಲು ಅನುಭವಿ ಅಕ್ಕಸಾಲಿಗರನ್ನು ನೇಮಿಸಲಾಗುತ್ತಿತ್ತು. ಅವರಿಗೆ ಅಗ್ರಹಾರ, ಭೂದಾನಗಳನ್ನು ರಾಜರು ನೀಡುತ್ತಿದ್ದ ಸಂಗತಿಗಳು ತಿಳಿದುಬರುತ್ತವೆ. ಉತ್ತರ ಭಾರತದಲ್ಲಿ ಇವರನ್ನು 'ಬಾದಲ್' ಎಂದು ಕರೆಯುತ್ತಿದ್ದರು. ಇದರಿಂದಾಗಿ ಅಕ್ಕಸಾಲಿಗರು ಆರ್ಥಿಕವಾಗಿ ಅನುಕೂಲಸ್ಥರಾಗಿದ್ದರು. ಸಮಾಜದಲ್ಲಿ ಒಂದು ರೂಢಿ ಬೆಳೆದು ಬಂದಿದೆ. ಅದೇನೆಂದರೆ ಕಂಬಾರರ ಮನೆಯಲ್ಲಿ ಕಬ್ಬಿಣದ ಚೂರುಗಳು ಸಿಗುತ್ತವೆ. ಬಡಿಗೇರರ ಮನೆ ಮೂಲೆ–ಮೂಲೆಗಳಲ್ಲಿ ಮರದ ಸೆಕ್ಕಿಗಳಿರುತ್ತವೆ. ಕಂಚುಗಾರರ ಮನೆಯಲ್ಲಿ ಕಂಚು–ತಾಮ್ರ–ಹಿತ್ತಾಳೆಯ ಚೂರುಗಳು ದೊರೆಯುತ್ತವೆ. ಶಿಲ್ಪಿಗಳ ಮನೆಯಂಗಳದಲ್ಲಿ ಕಲ್ಲಿನ ಪಕಳಿಗಳು ಸಿಗುತ್ತವೆ. ಹಾಗೆಯೇ ಪಂಚಾಳ ಕುಶಲಕರ್ಮಿಗಳಲ್ಲಿಯೇ ಒಂದಾದ ಅಕ್ಕಸಾಲಿಗರ ಬೆರಳ ಉಗುರಿನಲ್ಲಿ ಬಂಗಾರವಿರುತ್ತದೆ. ಎಂಬ ಮಾತು ಅಕ್ಷರಷಃ ಸತ್ಯವಾಗಿದೆ. ನಾಲ್ಕು ಜನ ಪಂಚಾಳ ಕುಶಲಕರ್ಮಿಗಳಿಗಿಂತ ಅಕ್ಕಸಾಲಿ ಕುಶಲಕರ್ಮಿ ಆರ್ಥಿಕವಾಗಿ ಮುಂದುವರೆದವನಾಗಿದ್ದಾನೆ.

ಪಾರಂಪರಿಕವಾಗಿ ಬೆಳೆದು ಬಂದ ಚಿನ್ನ-ಬೆಳ್ಳಿ ಕುಶಲಕರ್ಮಿಗಳು ಬೇರೆ ಯಾವ ಕೆಲಸವನ್ನು ನಿರ್ವಹಿಸದೇ ಲೋಹದ ಕಸಬನ್ನು ನೆಚ್ಚಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಕಸಬುದಾರರು ಮನೆಯಲ್ಲಿಯೇ ಕೆಲಸ ನಿರ್ವಹಿಸುತ್ತಾರೆ. ಕೆಲವೊಂದು ಪ್ರಸಂಗದಲ್ಲಿ ವ್ಯಾಪಾರಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಚಿನ್ನ-ಬೆಳ್ಳಿಯ ಕುಶಲಕರ್ಮಿಗಳು ಸೂಕ್ಷ್ಮ ಪ್ರಜ್ಞರು ಚಿನ್ನ-ಬೆಳ್ಳಿಯ ಆಭರಣಗಳನ್ನು ತಯಾರಿಸುವಾಗ ಸಾಮಾನ್ಯವಾಗಿ ಮತ್ತೊಂದು ಲೋಹವನ್ನು ಕರಗಿಸಿ, ಬೆರೆಸಬೇಕಾಗುತ್ತದೆ. ಅಕ್ಕಸಾಲಿಗರು ತಾಮ್ರವನ್ನು ಬೆರಸುತ್ತಾರೆ. ಆದರೆ ಕೆಲವು ಗ್ರಾಹಕರಿಗೆ ಆಭರಣಗಳ ಧರಿಸುವಿಕೆಯ ಅಲರ್ಜಿತನ ಉಂಟಾಗುತ್ತದೆ. ಈ ವಿಷಯವನ್ನು ಸೂಕ್ಷ್ಮವಾಗಿ ಅರ್ಥೈಸಿಕೊಂಡ ಕುಶಲಕರ್ಮಿಗಳು ಚಿನ್ನ-ಬೆಳ್ಳಿ ಆಭರಣದೊಂದಿಗೆ "ರೋಡಿಯಂ" ಲೋಹ ಕರಗಿಸಿ ಬೆರಸುತ್ತಾರೆ. ಈ ಲೋಹ ಬೆರಸಿ ತಯಾರಿಸಿದ ಚಿನ್ನ-ಬೆಳ್ಳಿ ಆಭರಣಗಳನ್ನು ಧರಿಸಿದರೆ 'ಅಲರ್ಜಿ'ತನ ಉಂಟಾಗುವುದಿಲ್ಲವೆಂದು ಹೇಳಲಾಗುತ್ತಿದೆ. ಗ್ರಾಹಕರಿಗೆ ಅವಶ್ಯಕವಾದ ಮತ್ತು ಆರೋಗ್ಯಕರ ಆಭರಣಗಳನ್ನು ತಯಾರಿಸಿಕೊಡುವಲ್ಲಿ ಅಕ್ಕಸಾಲಿ ಕುಶಲಕರ್ಮಿಗಳು ಸಿದ್ಧ ಹಸ್ತರಾಗಿದ್ದಾರೆ.

ಅಕ್ಕಸಾಲಿ ಕುಶಲಕರ್ಮಿಗಳು ೨೨ ಕ್ಯಾರೆಟ್‌ನ ಪರಿಶುದ್ಧ ಚಿನ್ನಾಭರಣಗಳಲ್ಲಿ ಅಮೂಲ್ಯವಾದ ಹರಳುಗಳನ್ನು ಜೋಡಿಸುತ್ತಾರೆ. ಪರಿಶುದ್ಧ ಚಿನ್ನದ ಪರೀಕ್ಷೆಗಾಗಿ 'ಕ್ಯಾರಾಮೀಟರ್' ವಿಧಾನ ಬಳಸುತ್ತಾರೆ. ಇಲ್ಲಿ ಗ್ರಾಹಕರಿಗೆ ಮೋಸವಾಗಬಾರದು. ಗ್ರಾಹಕರಲ್ಲಿಯ ನಂಬಿಕೆಯೇ ಕುಶಲಕರ್ಮಿಗಳ ಬದುಕಾಗಿರುತ್ತದೆ. ಚಿನ್ನ ಮತ್ತು ಮೌಲ್ಯದ ಹರಳನ್ನು ಪ್ರತ್ಯೇಕ ತೂಕಮಾಡುವುದರಿಂದ ಗ್ರಾಹಕರ ಹಣ ಚಿನ್ನದ ತೂಕಿಗೆ ಮಾತ್ರ ಸಂದಾಯವಾಗುತ್ತದೆ. ಈ ಪ್ರಾಮಾಣಿಕತೆಯನ್ನು ಅಕ್ಕಸಾಲಿ ಕುಶಲಕರ್ಮಿಗಳು ಜನಸಮುದಾಯಕ್ಕೆ ತಿಳಿಸಿಕೊಡುವುದರ ಮೂಲಕ ಪ್ರಾಮಾಣಿಕತೆಯನ್ನು ಮೆರೆಯುತ್ತಾರೆ. ಶೇ. ೧೦೦ ರಷ್ಟು ಪ್ರಸ್ತುತ ಬೆಲೆಯಲ್ಲಿ ಚಿನ್ನ ಮತ್ತು ವಜ್ರಗಳ ವಿನಿಮಯ ನಡೆಯುತ್ತದೆ. "ಬಂಗಾರs ಯಾವಾಗಿದ್ದರೂ ಬಂಗಾರನss" ಎಂಬ ಗ್ರಾಮೀಣರ ಮಾತು ಸತ್ಯವಾಗಿರಿಸಿರುತ್ತಾರೆ.

ಅಕ್ಕಸಾಲಿ ಕುಶಲಕರ್ಮಿಗಳ ಕಸಬಿಗೆ ಮೂಲ ಲೋಹ, ಚಿನ್ನ-ಬೆಳ್ಳಿ ಭಾರತದಲ್ಲಿ ಬಂಗಾರದ ಬಳಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಲಾಗುತ್ತಿದೆ. ದೇಶದಲ್ಲಿ ಚಿನ್ನದ ಆಮದು ಹೆಚ್ಚಿದೆ. ಹೀಗಾಗಿ ಭಾರತ ಸರ್ಕಾರ ಚಿನ್ನ ಲೋಹದ ಕುರಿತಾಗಿ ಆಗಾಗ ಹೊಸಹೊಸ ಕಾನೂನುಗಳನ್ನು ಜಾರಿಗೆ ತರುತ್ತಿದೆ. "೨೦೦೭ರಲ್ಲಿ ೯೫೦ ಟನ್ನು ಬಂಗಾರವನ್ನು ಆಮದು ಮಾಡಿಕೊಂಡಿದ್ದು"[೫] ಪ್ರತಿವರ್ಷ ಆಮದಿನ ಪ್ರಮಾಣ ಹೆಚ್ಚುತ್ತಲಿದೆ. ೩೦ ವರ್ಷಗಳ ಅವಧಿಯಲ್ಲಿ ಸುಮಾರು ೫-೬ ಸಾವಿರ ಟನ್ನು ಬಂಗಾರ ಭಾರತದಲ್ಲಿ ಆಮದಾಗಿರುವುದು ತಿಳಿದುಬರುತ್ತದೆ. ದೇಶದಲ್ಲಿ

ಚಿನ್ನಾಭರಣಗಳನ್ನು ತಯಾರಿಸುವ ಅಕ್ಕಸಾಲಿ ಕುಶಲಕರ್ಮಿಗಳು ವಿಶ್ವ ಚಿನ್ನ ಮಂಡಳಿಯ ವರದಿ ಪ್ರಕಾರ ೩ ದಶಲಕ್ಷಕ್ಕೂ ಹೆಚ್ಚು ಕಸಬನ್ನು ನಿರ್ವಹಿಸುತ್ತಿರುವುದು ತಿಳಿಯುತ್ತದೆ.

ಅಗಣಿತ ಸಂಖ್ಯೆಯಲ್ಲಿ ಕಸಬು ನಿರ್ವಹಿಸುತ್ತಿದ್ದ ಅಕ್ಕಸಾಲಿ ಕುಶಲಕರ್ಮಿಗಳ ಉದ್ಯೋಗಗಳಲ್ಲಿ ಕೊರತೆಯುಂಟಾಗುತ್ತಿದೆ. ಅಕ್ಕಸಾಲಿಗನ ಮನೆಯಲ್ಲಿ ತಯಾರಾಗುತ್ತಿದ್ದ ಚಿನ್ನಾಭರಣಗಳು ಮನೆಯಿಂದ ಕಾರಖಾನೆಗಳಿಗೆ ಸ್ಥಳಾಂತರಗೊಂಡಿವೆ. ಕಾರಖಾನೆಗಳಿಂದ ನೇರವಾಗಿ ಬಂಗಾರದಾಭರಣ ಮಾರಾಟ ಮಳಿಗೆಗಳಿಗೆ ಬರುತ್ತಿವೆ. ಕರಕುಶಲಕಲೆ ಯಾಂತ್ರಿಕ ಬದುಕಿನಲ್ಲಿ ಯಂತ್ರಗಳಲ್ಲಿ ಅರಳುತ್ತಿವೆ. ನೋಡಲು ಆಕರ್ಷಕವೆನಿಸುತ್ತಿವೆ. ಕಡಿಮೆ ಅವಧಿಯಲ್ಲಿ ತಯಾರಿಕಾ ಆಭರಣ ದೊರೆಯುತ್ತಿದೆ. ಅಕ್ಕಸಾಲಿಗನಿಗೆ ಒಂದು ಬೋರಮಾಳ ತಯಾರಿಸಲು ೮ ಗಂಟೆ ಅವಧಿ ಬೇಕಾಗುತ್ತದೆ. ಚಿನ್ನದ ಚೈನನ್ನು ತಯಾರಿಸಲು ೩ ಗಂಟೆ ಅವಧಿ ಬೇಕಾಗುತ್ತದೆ. ಬೋರಮಾಳ ಮತ್ತು ಚೈನು ತಯಾರಿಸಿದರೆ ಅಕ್ಕಸಾಲಿಗನಿಗೆ ೩೦೦ ರೂಪಾಯಿಂದ ೫೦೦ ರೂಪಾಯಿ ಮಜೂರಿ ಬೀಳುತ್ತದೆ" ಎಂದು ಗೋಕಾಕದ ಅಕ್ಕಸಾಲಿಗ ಮೌನೇಶ ಪತ್ತಾರ ಹೇಳುತ್ತಾರೆ. ಶ್ರಮಕ್ಕೆ ತಕ್ಕ ಸಂಬಳ ದೊರೆಯುವುದಿಲ್ಲ. ೧೦೦ ಗ್ರಾಂ ಚಿನ್ನದ ಆಭರಣದ ತಯಾರಿಕಾ ಕೆಲಸ ಮಾಡಿದರೆ ಶೇ.೫ರಷ್ಟು ತ್ಯಾಮಾನು (Wastage) ಅಥವಾ ನಷ್ಟವಾದದ್ದು ಮಜೂರಿ ದೊರೆಯುತ್ತದೆ. ಅದರಲ್ಲಿ ಕಸದಲ್ಲಿ ೧½– ೨%, ಗಿಟಿಟ್ ಗಾಟನಿ ಮಾಡುವುದರಲ್ಲಿ ೧/೨ % ಒಟ್ಟು ೨% ಕಳೆದು ಶೇ. ೩ರಷ್ಟು ಮಾತ್ರ ಅಕ್ಕಸಾಲಿಗನಿಗೆ ಸಂಬಳ ದೊರೆಯುತ್ತದೆ. ಅಕ್ಕಸಾಲಿಗ ಕಡಿಮೆ ಸಂಬಳದಲ್ಲಿ ದುಡಿಯುತ್ತಾರೆ. ಆದರೆ ಬಂಡವಾಳ ಶಾಹಿಗಳು ತಯಾರಿಕಾ ವೆಚ್ಚ ಹೆಚ್ಚಿಸಿ ಲಾಭ ಪಡೆದುಕೊಳ್ಳುತ್ತಾರೆ. ಜನಸಮುದಾಯ ಮತ್ತು ಬಂಡವಾಳ ಶಾಹಿಗಳ ಮಧ್ಯ ಅಕ್ಕಸಾಲಿ ಶೋಷಣೆಗೆ ಒಳಗಾಗಿದ್ದಾನೆ.

ಅಕ್ಕಸಾಲಿಗರ ಚಿನ್ನಾಭರಣ ತಯಾರಿಕೆಯ ಪಡಿಯಚ್ಚುಗಳನ್ನು ಆನುವಂಶಿಕವಾಗಿ ಪಡೆದುಕೊಂಡು ಬಂದಿದ್ದಾರೆ. ಇತ್ತೀಚಿನ ಸಂದರ್ಭದಲ್ಲಿ ಬಂಡವಾಳ ಶಾಹಿಗಳು ಅಕ್ಕಸಾಲಿಗರಲ್ಲಿದ್ದ ಆಭರಣ ತಯಾರಿಕಾ ಪಡಿಯಚ್ಚುಗಳನ್ನು ಖರೀದಿಸಿಕೊಂಡಿದ್ದಾರೆ. ಆರ್ಥಿಕ ಸಂಕಷ್ಟಗಳಿಗಾಗಿ ಅಕ್ಕಸಾಲಿಗರು ಪರಂಪರಾಗತವಾಗಿ ಬಂದು ಆಭರಣ ತಯಾರಿಕಾ ಪಡಿಯಚ್ಚು ಮಾರಾಟ ಮಾಡುತ್ತಿದ್ದಾರೆ. ಬಂಡವಾಳ ಶಾಹಿಗಳ ದೌರ್ಜನ್ಯ ಅಕ್ಕಸಾಲಿಗರ ಮೇಲೆ ನಿರಂತರವಾಗಿ ಆಗುತ್ತಿದೆ. ಬಂಡವಾಳ ಶಾಹಿಗಳು ದಿನಕ್ಕೆ ೪೦೦ ರಿಂದ ೫೦೦ ರೂಪಾಯಿ ನೀಡುತ್ತಾರೆ. ರಾಸಾಯನಿಕ ದ್ರವಗಳ ಜೊತೆ ಕೆಲಸ ಮಾಡಬೇಕಾದ ಅಕ್ಕಸಾಲಿಗನಿಗೆ ಆರೋಗ್ಯ ಸುರಕ್ಷತಾ ವಿಮೆಯೋಜನೆಗಳು ಇರುವುದಿಲ್ಲ. ಮನೆಯಲ್ಲಿ ಸ್ವತಃ ದುಡಿಯಬೇಕೆಂದರೆ ಪಡಿಯಚ್ಚು, ಸುತ್ತಿಗೆ, ಅಡಗಲ್ಲುಗಳು ಇಲ್ಲದಿರುವುದು ನೋವಿನ ಸಂಗತಿ. ಅಕ್ಕಸಾಲಿಗ ಈ ಎಲ್ಲ ಕಷ್ಟಗಳನ್ನು ಎದುರಿಸುವುದರ ಜೊತೆ ಉದ್ಯೋಗದಲ್ಲಿ

ಸ್ಪರ್ಧೆ ಎದುರಿಸಬೇಕಾಗಿದೆ. ಕಾರಣ ಅಕ್ಕಸಾಲಿ ಉದ್ಯೋಗದಲ್ಲಿ ಅನ್ಯಮತೀಯರು ಕಸಬನ್ನು ಆರಂಭಿಸಿದ್ದಾರೆ.

ಅಕ್ಕಸಾಲಿ ಕುಶಲಕರ್ಮಿಗಳು ತಮ್ಮ ಉದ್ಯೋಗದಲ್ಲಿ ಹತ್ತಾರು ಸಮಸ್ಯೆಗಳನ್ನು ನಿತ್ಯ ಅನುಭವಿಸಬೇಕಾಗುತ್ತಿದೆ. ೨೦೧೭ ಜುಲೈ ೧ ರಿಂದ ದೇಶಾದ್ಯಂತ ಜಾರಿಗೆ ಬಂದ ಸರಕು ಮತ್ತು ಸಾಗಾಟ ತೆರಿಗೆ (GST) ಯು ಬಂಡವಾಳ ಶಾಹಿಗಳಿಗೆ ಮಾತ್ರ ಅನುಕೂಲಕರವಾಗಿದ್ದು, ಅಕ್ಕಸಾಲಿ ಕುಶಲಕರ್ಮಿಗಳಿಗೆ ಲಾಭದಾಯಕವಾಗಿಲ್ಲ. ಚಿನ್ನಾಭರಣಗಳ ಸರಕು ಸಾಗಾಟದ ಮೇಲೆ ಶೇ. ೩ (ಮೂರು)ರಷ್ಟು ತೆರಿಗೆಯಿದೆ. ಬಂಡವಾಳ ಶಾಹಿಗಳು ಅಕ್ಕಸಾಲಿಗನಿಗೆ ಶೇ. ೫ರಷ್ಟು ತ್ಯಾಮಾನು (Wastage) ನಷ್ಟದ ಹಣ ನೀಡುತ್ತಿದ್ದರು. ಈಗ ಜಿ.ಎಸ್.ಟಿ ಜಾರಿಗೆ ಬಂದ ಮೇಲೆ ಶೇ. ೫ರಷ್ಟು ನೀಡುತ್ತಿದ್ದ ನಷ್ಟ (Wastage) ನೀಡಲು ನಿರಾಕರಿಸುತ್ತಿದ್ದಾರೆ. ೧೦ ಗ್ರಾಂ ಚಿನ್ನಾಭರಣ ಅಂದರೆ ಅಂದಾಜು ೩೦,೦೦೦ರೂ ಮೌಲ್ಯದ ಆಭರಣ ತಯಾರಿಸಿ ಕೊಟ್ಟರೆ, ಶೇ. ೫ರಷ್ಟು ಅಂದರೆ ೧೫೦೦ ರೂಪಾಯಿಗಳ ಅಕ್ಕಸಾಲಿಗನಿಗೆ ದುಡಿಮೆಯಲ್ಲಿ ಕಡಿತವಾಗುತ್ತಿವೆ. ಕೆಲಸಬೇಕಾದರೆ ಶೇ. ೫ರ ಹಣ ಕಡಿತಕ್ಕೆ ಅಕ್ಕಸಾಲಿಗನು ಒಪ್ಪಬೇಕೆಂಬುದು ಬಂಡವಾಳ ಶಾಹಿಗಳ ಮಾತಾಗಿದೆ. ಇದರಿಂದಾಗಿ ಅಕ್ಕಸಾಲಿ ಉದ್ಯೋಗ ಮತ್ತು ಕಸುಬನ್ನು ನಿರ್ವಹಿಸುವ ಕುಶಲಕರ್ಮಿಗಳ ಪರಿಸ್ಥಿತಿಯು ಅಧೋಗತಿ ಹೊಂದಿದೆ. ನಿತ್ಯ ಚಿನ್ನದ ಬೆಲೆ ಏರು-ಪೇರಾಗುತ್ತಿರುವುದರಿಂದ ಉದ್ಯೋಗದಲ್ಲಿ ನಿರಂತರತೆ ಉಳಿದುಕೊಳ್ಳುತ್ತಿಲ್ಲ. ವಂಶ ಪಾರಂಪರಿಕ ಕಸಬುದಾರರಾಗಿದ್ದ ಅಕ್ಕಸಾಲಿ ಕುಶಲಕರ್ಮಿಗಳಿಗೆ ಉದ್ಯೋಗವಿಲ್ಲದೆ, ಇದ್ದರೂ ಲಾಭಂಶವಿಲ್ಲದೆ ಬಂಡವಾಳ ಶಾಹಿಗಳ ಕೈಗೊಂಬೆಗಳಾಗಿ ದುಡಿಯಬೇಕಾದ ಅನಿವಾರ್ಯತೆ ಉಂಟಾಗಿದೆ. ಅಕ್ಕಸಾಲಿಗರ ಉದ್ಯೋಗಕ್ಕೆ ಅನುಕೂಲಕರವಾದ ವಾತಾವರಣವನ್ನು ಸಮುದಾಯ ಮತ್ತು ಸರ್ಕಾರ ನಿರ್ಮಿಸಬೇಕಾಗಿದೆ. ರಾಜ-ಮಹಾರಾಜರ ಮಾನ್ಯತೆ ಗಳಿಸಿಕೊಂಡಿದ್ದ ಅಕ್ಕಸಾಲಿ ಕಸಬಿಗೆ ಮತ್ತು ಅಕ್ಕಸಾಲಿ ಕುಶಲಕರ್ಮಿಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಉನ್ನತ ಶ್ರೇಣಿಯಲ್ಲಿದ್ದ ಪಂಚಾಳ ಕುಶಲಕರ್ಮಿ ಸಮುದಾಯ ಕಾಲಾಂತರದಲ್ಲಿ ಕೆಳಮುಖವಾಯಿತು. ಬ್ರಹ್ಮಜ್ಞಾನ ಹೊಂದಿದ್ದರೂ ಪಾಂಚಾಳ ಕುಶಲಕರ್ಮಿಗಳು ಕರ್ಮಮಾರ್ಗದಲ್ಲಿ ಮುಂದುವರೆದರು. ಅದರ ಫಲವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವರಾಗಿ ಜೀವನ ನಿರ್ವಹಿಸಬೇಕಾಯಿತು. ಉನ್ನತ ವರ್ಗವಾಗಿದ್ದ ಪಾಂಚಾಳ ಕುಶಲಕರ್ಮಿಗಳು ಕಾಯಕದಿಂದಾಗಿ ಒಂದು ಜಾತಿಯಾಗಿ ರೂಪಗೊಂಡಿತು. ಹಿಂದುಳಿದ ನೂರೊಂದು ಜಾತಿಗಳಲ್ಲಿ ಪಾಂಚಾಳ ಕುಶಲಕರ್ಮಿ ಅಲ್ಪಸಂಖ್ಯಾತ ಸಮುದಾಯವಾಗಿ ಸಮಾಜದಲ್ಲಿ ಗುರುತಿಸಲ್ಪಟ್ಟಿದೆ. ಸಮುದಾಯಕ್ಕೆ ಮೊದಲಿದ್ದ ಮನ್ನಣೆಗಳೆಲ್ಲವೂ ಇಂದು ಇಲ್ಲದಾಗಿವೆ. ಪಂಚಾಳ

ಕುಶಲಕರ್ಮಿ ಸಮುದಾಯ ತನ್ನ ಮೂಲ ಸ್ಥಾನ-ಮಾನ ಪಡೆಯಲು ಹರಸಾಹಸ ಪಡಬೇಕಾಗಿದೆ. ಧಾರ್ಮಿಕವಾಗಿ- ಸಾಮಾಜಿಕವಾಗಿ ಉನ್ನತೀಕರಣ ಹೊಂದಬೇಕಾಗಿದೆ. ವಂಶಪಾರಂಪರಿಕ ಕಸಬಿನಿಂದ ಆರ್ಥಿಕವಾಗಿ ಬೆಳೆಯಬೇಕು. ಪಾರಂಪರಿಕ ಕಸಬನ್ನು ಬಿಟ್ಟು ಮತ್ತೊಂದು ಕಸಬನ್ನು ಹುಡುಕುವುದಕ್ಕಿಂತ ಕಸಬಿನಲ್ಲಿ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು. ಕುಶಲಕರ್ಮಗಾರಿಕೆ ಯಿಂದಲೇ ಆಯಸ್ಕಾಂತದಂತಹ ಕೋಟೆ ತಯಾರಿಸಿ ಪ್ರಸಿದ್ಧರಾಗಿದ್ದ ಪಂಚಾಳ ಕುಶಲಕರ್ಮಿಗಳು ಅದೇ ಕಸಬಿನಿಂದಲೇ ಮತ್ತೇ ಪ್ರಖ್ಯಾತಿ ಹೊಂದಬೇಕಾಗಿದೆ. ಸಾಮಾಜಿಕ ಹಿನ್ನೆಡೆ ಮತ್ತು ಅದಕ್ಕೆ ಪೂರಕವಾದ ಕಸಬಿನ ಸವಾಲುಗಳನ್ನು ಕಟ್ಟಿಕೊಂಡು ಪಂಚಾಳ ಕುಶಲಕರ್ಮಿ ಸಮುದಾಯ ಮುನ್ನಡೆಯಬೇಕಾದ ಅವಶ್ಯಕತೆಯಿದೆ. ಈ ಮುನ್ನಡೆಯುವಿಕೆಯನ್ನು ವಿದ್ವಾಂಸರು ಸಮುದಾಯ ಚಲನಶೀಲತೆ ಎಂದು ಕರೆಯುತ್ತಾರೆ.

ಪಂಚಾಳ ಕುಶಲಕರ್ಮಿ ಸಮುದಾಯದ ಮುನ್ನೆಡೆಗೆ ಕಂಬಾರಿಕೆ, ಬಡಿಗತನ, ಕಂಚುಗಾರಿಕೆ, ಶಿಲ್ಪಗಾರಿಕೆ ಮತ್ತು ಅಕ್ಕಸಾಲಿಗತನ ಕಸಬುಗಳು ಪ್ರಮುಖಕಾರಣವಾಗುತ್ತವೆ. ಈ ಕಸಬುಗಳನ್ನು ಸಮುದಾಯದಲ್ಲಿ ಪರಂಪರಾಗತವಾಗಿ ಮುನ್ನಡೆದುಕೊಂಡು ಬಂದಿವೆ. ಆದರೆ ಈಗೀನ ಪರಿಸ್ಥಿತಿಯಲ್ಲಿ ಪಂಚ ಕಸಬುಗಳನ್ನು ಚಲನಶೀಲಾತ್ಮಕಗೊಳಿಸುವುದು ಸಮುದಾಯಕ್ಕೆ ಸವಾಲಿನ ಕೆಲಸ. ವೃತ್ತಿಯು ಜಾಗತಿಕ ಸವಾಲುಗಳನ್ನು ಎದುರಿಸಬೇಕಾದ ವಂಶಿಕ ಕಸಬುಗಳನ್ನು ಅಷ್ಟು ಸುಲಭವಾಗಿ ಕೈಬಿಡಲಾಗದೇ ಮುಂದುವರೆಸಿಕೊಂಡು ಹೋಗಬೇಕಾಗಿದೆ. ವಿಶ್ವದಲ್ಲಿ ಸರ್ವ ಶ್ರೇಷ್ಠತೆಯನ್ನು ಪಡೆದುಕೊಂಡ ಪಂಚ ಕಸಬುಗಳು ಅಳಿಯಬಾರದು. ಅವುಗಳಿಗೆ ವಿಶ್ವಮಾನ್ಯತೆಯನ್ನು ತಂದುಕೊಡಬೇಕಾಗಿದೆ. ಕಳೆದುಹೋದ ವಿಶ್ವಮಾನ್ಯತೆಯನ್ನು ಪುನರ್ಗಳಿಸಬೇಕು. ಕಸಬುಗಳ ಶಾಶ್ವತತೆಗೆ ಸೂಕ್ತವೆನಿಸುವ ಆಯಾಮಾಗಳನ್ನು ಕಟ್ಟಿಕೊಳ್ಳಬೇಕಾಗಿದೆ.

ಸಮುದಾಯದ ಕಸಬು ತನ್ನ ಮೊದಲಿನ ಮಾನ್ಯತೆ- ಮಹತ್ವವನ್ನು ಪಡೆದುಕೊಳ್ಳಲು ಆಧುನಿಕ ಸಂದರ್ಭದಲ್ಲಿ ವೃತ್ತಿ ಆಯಾಮಗಳನ್ನು ರೂಪಿಸಿಕೊಳ್ಳುವ ಮೂಲಕ ಉದ್ಯೋಗಗಳಲ್ಲಿ ಪುನಶ್ಚೇತನ ಹೊಂದಬೇಕು. ಉದ್ಯೋಗಗಳ ಉಳಿವಿಕೆಗೆ ಕಂಡುಕೊಳ್ಳುವ ಆಯಾಮಗಳು ಸಮುದಾಯದ ಪುನಾರಾಭಿವೃದ್ಧಿಗೆ ಕಾರಣವಾಗುತ್ತವೆ. ಕಸಬುಗಳು ಗಟ್ಟಿಗೊಂಡರೆ ಸಮುದಾಯದ ಸಾಂಸ್ಕೃತಿಕತೆಯನ್ನು ಪುನರ್‌ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಹೊಸ ಆಯಾಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಪಂಚಾಳ ಕುಶಲಕರ್ಮಿ ಸಮುದಾಯ ಮತ್ತು ಸಮುದಾಯದ ಕಂಬಾರ, ಬಡಿಗ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿಗ ಕಸಬುಗಳು ಪುನಶ್ಚೇತನಗೊಳ್ಳಬೇಕು. ಸಾಮಾಜಿಕವಾಗಿ ಕೆಳಮುಖಗೊಂಡ ಸಮುದಾಯ ಉನ್ನತ ಶ್ರೇಣಿ ಪಡೆಯಲು ಸಿದ್ಧಗೊಳ್ಳಬೇಕು. ಧಾರ್ಮಿಕ ಮತ್ತು ಸಾಮಾಜಿಕವಾಗಿ ಉನ್ನತೀಕರಣಗೊಳ್ಳುವುದರ ಜೊತೆ ಸಮುದಾಯ, ಪಂಚಕಸಬುಗಳಿಗೆ ಹೊಸತನವನ್ನು

ಮರುಜೀವಂತಿಕೆಯನ್ನು ತಂದುಕೊಳ್ಳಬೇಕಾಗಿದೆ. ಈ ದೆಸೆಯಲ್ಲಿ ಸಮುದಾಯವನ್ನು ಹಾಗೂ ಐದು ಬಗೆಯ ಉದ್ಯೋಗಗಳನ್ನು ಪುನಶ್ಚೇತನಗೊಳಿಸಲು ಇಲ್ಲಿ ಕೆಲವು ಆಯಾಮಗಳನ್ನು ಚರ್ಚಿಸಲಾಗಿದೆ. ಅವುಗಳನ್ನು ಸಮುದಾಯ ಪುನಶ್ಚೇತನದ ಆಯಾಮಗಳು ಮತ್ತು ಪಂಚಕಸಬುಗಳಿಗೆ ಪೂರಕವಾಗಿ ಸಮುದಾಯಿಕ ಉದ್ಯೋಗಗಳ ಪುನಶ್ಚೇತನದ ಆಯಾಮಗಳೆಂದು ಗುರುತಿಸಲಾಗಿದೆ.

ಸಮುದಾಯ ಪುನಶ್ಚೇತನದ ಆಯಾಮಗಳು

೧. ಸಮುದಾಯ ಜಡತ್ವದಿಂದ ಕ್ರಿಯಾತ್ಮಕಗೊಳ್ಳುವುದು: ಬ್ರಾಹ್ಮಣವರ್ಗದ ಒಂದು ಭಾಗವಾದ ಪಂಚಾಳ ಕುಶಲಕರ್ಮಿ ಸಮುದಾಯ ಮೂಲತಃ ಪಾದರಸ ಜಡತ್ವ ಎಂಬುದೇ ಈ ಸಮುದಾಯಕ್ಕೆ ಇದ್ದಿರಲಿಲ್ಲ. ಜ್ಞಾನ ಮತ್ತು ಕರ್ಮಗಳೊಂದಿಗೆ ವಿಶ್ವದಲ್ಲಿಯೇ ಸರ್ವಶ್ರೇಷ್ಠರೆನಿಸಿಕೊಂಡ ಸಮುದಾಯವಾಗಿತ್ತು. ಆದರೆ ಅಭ್ಯಾಸ ಭಲ ಮನುಷ್ಯನನ್ನು ಜಡನನ್ನಾಗಿಯೂ ಮಾಡಿಬಿಡುತ್ತದೆ. ಈ ರೂಢಿ ಕಾಲಾಂತರದಲ್ಲಿ ಪಂಚಾಳ ಕುಶಲಕರ್ಮಿ ಸಮುದಾಯಕ್ಕೆ ಹೇಳದೇ ಕೇಳದೆ ಬಂದು ಮೈದುಂಬಿಕೊಂಡಿರಬೇಕು. ಉನ್ನತ ಸ್ಥಾನಮಾನ ಹೊಂದಿದ್ದ ಸಮುದಾಯ ಕೆಳಮುಖಗೊಂಡ ಮೇಲೆ ಸಹಜವಾಗಿ ಇವರಲ್ಲಿ ಜಡತ್ವ ಆವರಿಸಿಕೊಂಡಂತಿದೆ. ಯಾವುದಾದರೊಂದು ಸರ್ವಶ್ರೇಷ್ಠ ಕೆಲಸ ಕುಶಲಕರ್ಮಿ ಸಮುದಾಯದಿಂದ ಜರುಗಬೇಕಿದ್ದರೆ ಅದು ತುರ್ತಾಗಿ ಆಗುವುದಿಲ್ಲ. ನೂರು ಸಲ ಗ್ರಾಮದವರು ಕುಶಲಕರ್ಮಿ ಮನೆಗೆ ಅಳೆದಾಡಬೇಕಾಗುತ್ತದೆ. ತಾನು ಮಾಡುವ ಕೆಲಸದ ಕುರಿತಾಗಿ ಆಳವಾದ ಜ್ಞಾನವಿದ್ದರೂ ಕ್ಷಣಾರ್ಧದಲ್ಲಿ ಮಾಡಬಲ್ಲೆನೆಂಬ ಒಳಮನಸ್ಸಿನ ಕಾರಣವಾಗಿ ತಾತ್ಸಾರತೆ ತೋರುತ್ತಾರೆ. ಮನಸ್ಸನ್ನು ಜಡತ್ವಗೊಳಿಸಿ ಕೊಳ್ಳುತ್ತಾರೆ. ರೆಂಟೆ–ಕುಂಟೆ–ಕೂರಿಗೆ ರೈತಾಪಿ ಮತ್ತು ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿಕೊಡುವಲ್ಲಿಯೂ ಕುಶಲಕರ್ಮಿ ವಿಳಂಬ ನೀತಿ ತಾಳುತ್ತಾನೆ. ಊರ ಜಾತ್ರೆಯ ಸಂದರ್ಭದಲ್ಲಿ ತೇರು ಜೋಡಿಸಲು ಬಡಿಗ, ಕುಶಲಕರ್ಮಿ ಅವಶ್ಯಕವಾಗಿರುತ್ತಾನೆ.

ಬಾಚಿಯಂತಹ ಪಾದರಸ ಉಪಕರಣದ ಜೊತೆ ಜೀವನ ನಿರ್ವಹಿಸುವ ಪಂಚಾಳ ಕುಶಲಕರ್ಮಿ ಸಮುದಾಯ ಮೂಲತಃ ಜಡತ್ವವನ್ನು ಕಟ್ಟಿಕೊಂಡವರಲ್ಲ. ಆದರೆ ಅವರಲ್ಲಿಯ ಕಲೆಗಾರಿಕೆ, ಜ್ಞಾನ ಅವರಿಗರಿವಿಲ್ಲದಂತೆ ಅಹಂಭಾವಿಕೆಯ ರೂಪತಾಳಿದೆ. ಸೃಷ್ಟಿಕರ್ತನೆಂಬ ಭಾವ ಸಮುದಾಯ ದವರಲ್ಲಿದೆ. ಇದರಿಂದ ಸಮುದಾಯ ಹೊರಬರಬೇಕಾಗಿದೆ. ಎಲ್ಲವೂ ತನ್ನಿಂದಲೇ ಸಾಧ್ಯ, ತಾನೆಲ್ಲವನ್ನು ಸೃಷ್ಟಿಸಬಲ್ಲೆ, ತನಗೆ ಸಾಧ್ಯವಾದುದು ಯಾವುದಿದೆ? ಇಂತಹ ಕೆಲವು ಒಳಭಾವನೆಗಳು ಸಮುದಾಯ ದವರನ್ನು ಜಾಡ್ಯರನ್ನಾಗಿಸಿದೆ. ಮೈ–ಮನಸ್ಸುಗಳಿಗೆ ಜಡತ್ವ ತುಂಬಿಸಿದೆ. ಹರಿತ ಖಡ್ಗದಂತೆ ಜಳಪಿಸುವ ಸಮುದಾಯದ ಮನಸ್ಸು ನಿಂತ ನೀರಿನ ತರಹವಾಗಿದೆ. ಹಗುರವಾದ ಮನಸ್ಸು ಭಾರವಾಗಿದೆ. ಚುರುಕಾಗಿ ಓಡಾಡುವ ಕೈ–ಕಣ್ಣುಗಳು ಚೈತನ್ಯವನ್ನು ಕಳೆದುಕೊಂಡಂತಾಗಿವೆ.

ಸಮುದಾಯ ಜಡರೂಪ ತೊರೆದು ತಾವು ಮಾಡುವ ಕಾಯಕ-ಕಾರ್ಯಗಳಲ್ಲಿ ಕ್ರಿಯಾತ್ಮಕಗೊಳ್ಳುವುದು ಅವಶ್ಯಕವಾಗಿದೆ. ಸಮುದಾಯದ ಪ್ರತಿಯೊಬ್ಬರು ರೈತಸಮುದಾಯದ ಅವಲಂಭಿತರಾಗಿದ್ದೇವೆ. ರೈತಾಪಿ ವರ್ಗ ದಿಂಡಿದು ಸಮಾಜದ ಎಲ್ಲ ವರ್ಗದವರ ಕೆಲಸ-ಕಾರ್ಯಗಳನ್ನು ತುರ್ತಾಗಿ ಮಾಡಿಕೊಡುವಂತಾಗಬೇಕು. ಅಹಂಭಾವಿಕೆಯನ್ನು ತೊರೆಯಬೇಕು. ಪ್ರತಿಭೆಗಳಿಗೆ ಗೌರವ ನೀಡುವಂತಾಗಬೇಕು. ಶ್ರಮಸಂಸ್ಕೃತಿಯೊಂದಿಗೆ ಸಮಯೋಚಿತ ಪ್ರಜ್ಞೆಕಲಿತುಕೊಳ್ಳುವುದರ ಮೂಲಕ ಜಡತ್ವದಿಂದ ಸಮುದಾಯ ಕ್ರಿಯಾಶೀಲಗೊಳ್ಳಬೇಕು. ಜಡದಲ್ಲಿ ಚೈತನ್ಯ ಕ್ರಿಯೆಗೊಂಡ ಕಲೆ ಅರಳಲು ಸಾಧ್ಯವಾಗುತ್ತದೆ.

೨. ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಬೆಳೆಯಬೇಕು: ಪಂಚಾಳ ಸಮುದಾಯ ಜ್ಞಾನದ ಕಣಜ. ಆದರೆ ಶೈಕ್ಷಣಿಕರ್ಹತೆಯ ಬರಡು ವಂಶಪಾರಂಪರಿಕವಾಗಿ ಸಮುದಾಯದವರಲ್ಲಿ ವಿಶಿಷ್ಟ ಜ್ಞಾನವಿರುತ್ತದೆ. ಇವರು ಕಲೆಗಾರರು ಕಲೆಯನ್ನು ಅಧ್ಭುತವಾಗಿ ಅನಾವರಣಗೊಳಿಸುತ್ತಾರೆ. ಆದರೆ ಇಂದು ಅವಶ್ಯಕವಾಗಿರುವ ಶೈಕ್ಷಣಿಕ ಅರ್ಹತೆಗಳು ಇವರಲ್ಲಿ ಹೆಚ್ಚಾಗಿ ಕಂಡುಬರುತ್ತಿಲ್ಲ. ಸಮುದಾಯದ ಉನ್ನತ ಸ್ಥಾನ-ಮಾನಗಳು ಕೆಳಮುಖಗೊಂಡ ಮೇಲೆ ದುಡಿಮೆ ಸಮುದಾಯಕ್ಕೆ ಮುಖ್ಯವಾಯಿತು. ಶಿಕ್ಷಣ ಕಲಿಕೆ ಅಮುಖ್ಯವಾಯಿತು. ಕುಶಲಕರ್ಮಿ ಸಮುದಾಯ ಏಕವ್ಯಕ್ತಿ ಕೇಂದ್ರಿತ ಕೆಲಸಗಾರರ ವರ್ಗವಲ್ಲ. ಪ್ರತಿಯೊಂದು ಕಸಬಿಗೆ ಒಬ್ಬಿಬ್ಬರು ಸಹಾಯಕರು ಬೇಕಾಗುತ್ತಾರೆ. ಸಮುದಾಯದ ಮಕ್ಕಳು ಕಸಬಿಗೆ ಸಹಾಯಕರಾಗಿ ಮುಂದುವರೆಯುತ್ತಾರೆ. ಹೀಗಾಗಿ ಶಿಕ್ಷಣ ಕಲಿಕೆ ಇವರಿಗೆ ಮರಿಚಿಕೆಯಾಗಿದೆ. ಅನುಕೂಲಸ್ಥ ಕೆಲ ಕುಟುಂಬಗಳಲ್ಲಿ ಶಾಲೆಯಲ್ಲಿ ಹೆಸರು ನೋಂದಾಯಿಸಿ ದರೂ ನಿತ್ಯವೂ ಮಕ್ಕಳ ಕೈಯಲ್ಲಿ ಉಳಿ-ಬಾಚಿ, ಕೊಡತಿ, ಸುತ್ತಿಗೆಗಳಿರುತ್ತವೆ. ಪಾರಂಪರಿಕ ವಿದ್ಯೆಯ ಕಲಿಕೆಯಲ್ಲಿ ಸಮುದಾಯದ ಮಕ್ಕಳು ಆಸಕ್ತರಾಗುತ್ತಾರೆ. ಇದರಿಂದಾಗಿ ಸಮುದಾಯದಲ್ಲಿ ಕೆಲವೇ ಕೆಲವು ಮಕ್ಕಳು ಏಳನೇಯ, ೧೦ನೇ ತರಗತಿವರೆಗೆ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ಕೆಲವರು ಅರ್ಧದಲ್ಲಿಯೇ ಶಾಲೆ ಬಿಟ್ಟು ಕೆಲಸದಲ್ಲಿ ತೊಡಗಿಕೊಂಡಿರುವ ಸಂಗತಿಗಳು ತಿಳಿದುಬರುತ್ತವೆ.

ಶಿಕ್ಷಣವಿಲ್ಲದೆ ಸಮುದಾಯ ಸಮಾಜದಲ್ಲಿ ಉನ್ನತ ಸ್ಥಾನ-ಮಾನಗಳನ್ನು ಗಳಿಸಿಕೊಳ್ಳುವುದು ಅಸಾಧ್ಯ. ಇಂದು ಪಾಂಚಾಳ ಸಮುದಾಯಕ್ಕೆ ಸಲ್ಲುವ ಗೌರವಾದರಗಳು ಕಡಿಮೆಯಾಗಿವೆ. ಕಲೆಗಾರಿಕೆಯಿದ್ದರೂ, ದೇಶಿ ಜೇಷ ಧೋಪಚಾರದ ವೈಧ್ಯನಾಗಿದ್ದರೂ ಉಳಿಯಿಂದ ಉಳಿವೀಶನನ್ನು ಕೆತ್ತಿದರೂ "ಬಡಿಗ್ಯಾ" ಎಂಬ ಕೀಳರಿಮೆಯ ಪದಗಳು ಪಂಚಾಳ ಕುಶಲಕರ್ಮಿ ಸಮುದಾಯಕ್ಕೆ ಪ್ರಯೋಗಗೊಳ್ಳುತ್ತಿವೆ. "ಬಡಿಗ್ಯಾ ಬಡಿಗ್ಯಾ ಬಂಟ, ಬಡಿಗಿ ತೊಗೊಂಡ ಹೊಂಟ" ಎಂಬ ಮಾತು ಪ್ರಚಲಿತವಾಗಿದೆ. ಕೆಲಸ ಇಲ್ಲದ ಬಡಿಗ್ಯಾ ಮಗನ... ಕೆತ್ತಿದಾ! ಇಂಥ ಹತ್ತಾರು ಮಾತುಗಳನ್ನು ಸಮಾಜ ಇತರ ಸಮುದಾಯದವರಿಂದ ಎದುರಿಸಬೇಕಾಗಿದೆ. ಸಮುದಾಯದವರು ಕೂಡಾ

ಸಮಾಜದಲ್ಲಿ ನಮ್ಮ ಸ್ಥಾನ-ಮಾನಗಳೇನು? ಎಂಬುದನ್ನು ಅರ್ಥೈಸಿಕೊಳ್ಳ ಬೇಕಾಗಿದೆ. 'ಬಡಿಗ್ಯಾ' ಎಂದು ವ್ಯಂಗೋಕ್ತವಾಗಿ ಕೂಗುವವನ ಹಲ್ಲು ಮುರಿಯುವಂಥ ಕಸವು ಸಮುದಾಯಕ್ಕೆ ಬರಬೇಕಾಗಿದೆ. ಬಡಿಗೇರ, ಪಂಚಾಳ ಎಂದು ಶುದ್ಧವಾಗಿ ಕರೆಯಲು ಇಂತಹ ಸಮುದಾಯಕ್ಕೆ ಕುಶಲಕರ್ಮಿಗಳು ತಿಳಿಸಿಕೊಡಬೇಕು.

ಸಮುದಾಯ ಇತರರನ್ನು ಗೌರವದಿಂದ ಕಾಣುವುದರ ಜೊತೆಗೆ ತಮ್ಮನ್ನು ತಾವು ಗೌರವಿಸಿಕೊಳ್ಳುವ ಗುಣಗಳನ್ನು ಕಲಿತುಕೊಳ್ಳಬೇಕು. ಸಕಲ ಜೀವರಾಶಿಗಳಿಗೆ ಪಂಚಾಳರ ಪಂಚಕಸಬುಗಳು ಶ್ರೇಷ್ಠವಾಗಿರುವಂತೆ, ಅವುಗಳನ್ನು ನಿರ್ವಹಿಸುವ ಸಮುದಾಯದವರು ಸರ್ವ ಶ್ರೇಷ್ಠರಾಗಿರುತ್ತಾರೆ. ಈ ಸತ್ಯವನ್ನು ಸಮುದಾಯ ಮೊದಲು ಅರಿತುಕೊಂಡು, ಇತರ ಸಮುದಾಯಕ್ಕೆ ತಿಳಿವಳಿಕೆ ನೀಡಬೇಕಾಗಿದೆ. ಅದಕ್ಕೋಸ್ಕರ ಸಮುದಾಯಕ್ಕೆ ಶಿಕ್ಷಣದ ಅವಶ್ಯಕತೆಯಿದೆ. ಆಧುನಿಕ ಸಮಾಜದಲ್ಲಿ ಶಿಕ್ಷಣವಂತರಿಗೆ ಹೆಚ್ಚಿನ ಬೆಲೆಯಿದೆ. ಇದರಿಂದಾಗಿ ಪಂಚಾಳ ಸಮುದಾಯ ಶಿಕ್ಷಣವಂತರಾಗಿ ಪಾರಂಪರಿಕ ಕಸಬುಗಳನ್ನು ಮುಂದುವರೆಸಿಕೊಂಡು ಹೋಗುವುದರಿಂದ ಸಾಮಾಜಿಕವಾಗಿ ಸಮುದಾಯ ಮುನ್ನೆಲೆಯಲ್ಲಿ ಬರಲು ಸಾಧ್ಯವಾಗುತ್ತದೆ. ಶಿಕ್ಷಣ ಕಲಿಕೆ ಉದ್ಯೋಗಗಳ ಹೊಸ ಸಾಧ್ಯತೆಗಳಿಗೆ ಸಹಾಯಕವಾಗುತ್ತದೆ. ಸಾಮಾಜಿಕ ಮಾನ್ಯತೆಯ ದೊರೆಯುತ್ತದೆ.

ಪಂಚಾಳ ಸಮುದಾಯ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಬಲಗೊಳಿಸುವುದರೊಂದಿಗೆ ಆರ್ಥಿಕ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ. ಸಮುದಾಯ ಮುಖ್ಯವಾಗಿ ಶ್ರಮದಾಯಕ ಸಮಾಜ ನ್ಯಾಯಯುತವಾಗಿ ದುಡಿಯುವುದು ಕುಶಲಕರ್ಮಿಗಳ ಕರ್ತವ್ಯ. ಆದರೆ ಇಂದು ಬೆವರು ಸುರಿಸುವುದೇ ಮುಖ್ಯವಲ್ಲ! ಬೆವರಿಗೆ ತಕ್ಕದಾದ ಬೆಲೆ ಸಿಗಬೇಕಾಗಿದೆ. ಇಲ್ಲದಿದ್ದರೆ ಲಾಭಗಳಿಸುವವರು ಬೇರೆ ಯಾರೋ? ಆಗಿರುತ್ತಾರೆ. ಸಮುದಾಯ ಉತ್ಪಾದಿಸಿದ ವಸ್ತು ಮಾರುಕಟ್ಟೆಯಲ್ಲಿ ಯಾವ ಬೆಲೆಗೆ ಮಾರಾಟವಾಗುತ್ತದೆ. ಉತ್ಪಾದಕರಿಗೆ ಯಾವ ಬೆಲೆ ಸಿಗುತ್ತದೆ. ಎಂಬ ತಿಳಿವಳಿಕೆ ಸಮುದಾಯಕ್ಕೆ ಬೇಕಾಗುತ್ತದೆ. ಇಲ್ಲವಾದರೆ ಉತ್ಪಾದಕ ಮತ್ತು ಗ್ರಾಹಕನ ಮಧ್ಯೆ ಮಧ್ಯವರ್ತಿ ಶ್ರಮ ಹಾಗೂ ಬಂಡವಾಳವಿಲ್ಲದೆ ಲಾಭ ಪಡೆದುಕೊಳ್ಳುತ್ತಾನೆ. ಇಂಥಹ ಘಟನೆಗಳು ಸಮುದಾಯದಲ್ಲಿ ನಿರಂತರವಾಗಿ ನಡೆಯುತ್ತಿವೆ. ಹೀಗಾಗಿ ಇಂದಿಗೂ ಶೇ. ೭೫-೮೦ರಷ್ಟು ಸಮುದಾಯದ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ನೆಮ್ಮದಿಯಿಂದ ಮೂರ್ಹೊತ್ತು ಊಟಮಾಡಿ, ಕಣ್ತುಂಬ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ. ಸಾಲವೆಂಬುದು ಆಯಗಾರರ ಮನೆಯ ಸ್ವತ್ತಾಗಿದೆ. ಆಧುನಿಕ ಕಾಲದಲ್ಲಿ ದಿನಕ್ಕೆ ೫೦೦ ರೂಪಾಯಿ ಒರ್ವ ಕುಶಲಕರ್ಮಿಯ ಪಗಾರವಿದ್ದರೂ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿಲ್ಲ. ಎರಡಕ್ಕಿಂತ ಹೆಚ್ಚು ಮಕ್ಕಳಿದ್ದರೆ ಸಾಯುವವರೆಗೂ ಸಾಲದಲ್ಲಿಯೇ ಮುಳುಗಬೇಕಾಗುತ್ತದೆ. ಸಮುದಾಯದ ಪುರುಷರು ಸಾಮಾನ್ಯವಾಗಿ ದುಡ್ಡುಗಳಿಸುವ ಯಾಂತ್ರಿಕ ಶಕ್ತಿಗಳು. ಹಾಗೆಯೇ ಗಳಿಸಿದ ಹಣವನ್ನು

ಸರಳವಾಗಿ ಕಳೆದುಕೊಳ್ಳುವ ದುಃಶಕ್ತಿಗಳು ಸಮುದಾಯದ ಪುರುಷರಲ್ಲಿ ಹತ್ತಾರು ವ್ಯಸನಗಳು ತುಂಬಿಕೊಂಡಿವೆ. ಬೀಡಿ, ಸಿಗರೇಟ್, ಎಲೆ-ಅಡಿಕೆ ಸಾಮಾನ್ಯವೆನಿಸಿದರೂ ಖರ್ಚಿನ ಒಂದು ಭಾಗವೇ ಆಗಿರುತ್ತವೆ. ಇದರ ಜೊತೆ ಕೆಲವರು ಇಸ್ಪೇಟ್, ಮಟ್ಕಾ, ಮಧ್ಯ ಇತರೆ ವ್ಯಸನಗಳು ಕುಟುಂಬವನ್ನು ಆರ್ಥಿಕವಾಗಿ ಹಿಮ್ಮೆಟ್ಟಿಸುತ್ತವೆ. ಸಮುದಾಯದಲ್ಲಿ ಆದಾಯಕ್ಕಿಂತ ವ್ಯಸನಾದಿಗಳಿಗೆ ಖರ್ಚುಹೆಚ್ಚಾಗುತ್ತಿದ್ದರೆ ಆರ್ಥಿಕ ಸಬಲತೆಯನ್ನು ಕಾಣುವುದು ಕಷ್ಟವೆನಿಸುತ್ತದೆ. ಉದ್ಯೋಗಗಳ ಕೊರತೆಯಿರುವ ಇಂದಿನ ದಿನಮಾನಗಳಲ್ಲಿ ಶ್ರಮ ಮತ್ತು ಗಳಿಕೆ ಹೆಚ್ಚಾಗಬೇಕು. ಸಮುದಾಯದ ಮಹಿಳೆಯರು ಗೃಹೋಪಯೋಗಿ ಹಾಗೂ ಅಲಂಕಾರಿಕ ವಸ್ತುಗಳನ್ನು ತಯಾರಿಸಿ, ಸ್ವ-ಸಹಾಯ ಗುಂಪುಗಳ ಮೂಲಕ ಮಾರುಕಟ್ಟೆಗೆ ರವಾನಿಸುವಂತಾಗಬೇಕು. ಪುರುಷನ ಆದಾಯದೊಂದಿಗೆ ಗೃಹಿಣಿಯ ಅಲ್ಪ ಆದಾಯವು ಸಮುದಾಯದ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗುತ್ತದೆ.

ಪಂಚಾಳ ಸಮುದಾಯ ಇಂದು ಎಲ್ಲ ರಂಗಗಳಲ್ಲಿಯೂ ಹಿಂದುಳಿದಿದೆ. ಅದರಲ್ಲಿಯೂ ರಾಜಕೀಯ ರಂಗದಲ್ಲಿ ಶೇ.೧ ರಷ್ಟಿದೆ. ರಾಜ-ಮಹಾರಾಜರ ಕಾಲದಲ್ಲಿ ವಿಶ್ವಕರ್ಮರು ಮಹಾ ಮಂತ್ರಿಗಳಾಗಿ, ಆಸ್ಥಾನದ ವಿದ್ವಾಂಸರಾಗಿ, ಆಡಳಿತಗಾರರಾಗಿದ್ದರೆಂದು ಇತಿಹಾಸ ಶಾಸನಗಳು ತಿಳಿಸುತ್ತವೆ. ದೇಶದ ಪ್ರಥಮ ಆಡಳಿತ ವ್ಯವಸ್ಥೆಯಾದ ಹಳ್ಳಿಗಳ ಪಂಚಾಯತಿಗಳಲ್ಲಿಯೂ ಪಂಚಾಳ ಸಮುದಾಯ ಪ್ರಮುಖ ನಿರ್ಧಾರಕರಾಗಿರುತ್ತಿದ್ದರೆಂದು ತಿಳಿದುಬರುತ್ತದೆ. ಪಂಚಾಳ ಸಮುದಾಯಕ್ಕೆ ಪೂರ್ವದಲ್ಲಿ ರಾಜನಿಂದ ರಾಜಕೀಯ ಸ್ಥಾನಮಾನಗಳು ದೊರೆತ್ತಿದ್ದವು. ಅಂದು ಪ್ರತಿಭೆಗೆ ಹೆಚ್ಚು ಬೆಲೆಯಿರುತ್ತಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೊಂಡ ಮೇಲೆ ಪ್ರತಿಭೆಯ ಮೂಲಕ ರಾಜಕೀಯ ಸ್ಥಾನ-ಮಾನಗಳಿಸಿಕೊಂಡಿದ್ದ ಪಂಚಾಳ ಸಮುದಾಯ ಹಿಂದುಳಿದ, ಅಲ್ಪಸಂಖ್ಯಾತರಾಗಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಸಮುದಾಯಕ್ಕಿದ್ದ ರಾಜಕೀಯ ಭಲ ಕುಂದಿಹೋಯಿತು. ಅಲ್ಪ ಮತಗಳಿರುವ ಸಮುದಾಯಕ್ಕೆ ಸ್ವಂತ ರಾಜಕೀಯ ಶಕ್ತಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದೇಶದಲ್ಲಿ ಪಾಂಚಾಳ ಕುಶಲಕರ್ಮಿ ಸಮುದಾಯದವರು ಸಂಸದರು, ರಾಜ್ಯ ಸಭಾ ಸದಸ್ಯರು, ವಿಧಾನಸಭೆ ಸದಸ್ಯರು ಮತ್ತು ವಿಧಾನ ಪರಿಷತ್ತ ಸದಸ್ಯರಾಗಿದ್ದಾರೆಯೇ? ಎಂದು ಬೆಳಕು ಕಟ್ಟಿಕೊಂಡು ಹಗಲು ಹುಡುಕಬೇಕಾಗಿದೆ. ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಸಮುದಾಯದ ಪುರುಷರಾಗಲಿ ಮಹಿಳಾ ಸದಸ್ಯರಾಗಲಿ ತೀರಾ ವಿರಳ. ಹೀಗಾಗಿ ಸಮುದಾಯಕ್ಕೆ ಕಳೆದು ಹೋದ ರಾಜಕೀಯ ಶಕ್ತಿಯನ್ನು ಮರುತರಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಸಮುದಾಯದವರಲ್ಲಿ ಆತ್ಮೀಯ ಪ್ರೀತಿ- ವಿಶ್ವಾಸ, ನಂಬಿಕೆಗಳೊಂದಿಗೆ ಸಹನಾಶಕ್ತಿ ಬೆಳೆಯಬೇಕು. ರಾಜಕೀಯ ಎಲ್ಲರಿಗೂ ಒಲಿಯುವುದಿಲ್ಲ. ಒಲಿದವರಿಗೆ ಪ್ರೋತ್ಸಾಹ ನೀಡಿ ಬೆಳೆಸಬೇಕು. ಅಂತವರನ್ನು ಸಮುದಾಯದ ರಾಜಕೀಯ ಶಕ್ತಿಗಳನ್ನಾಗಿಸಬೇಕು. ಇಂದು ರಾಜಕೀಯ ಬಲವಿಲ್ಲದಿದ್ದರೆ ಯಾವ ಸಮುದಾಯ,

ಆಡಳಿತ ವರ್ಗಗಳು ಪಂಚಾಳರನ್ನು ಮಾತನಾಡಿಸುವುದಿಲ್ಲವೆಂಬ ಮಾತು ಸತ್ಯವಾಗುತ್ತಿದೆ. ಅದಕ್ಕೊಸ್ಕರ ಗ್ರಾಮ ಮಟ್ಟದಿಂದಿಡಿದು ರಾಷ್ಟ್ರಮಟ್ಟದವರೆಗೂ ರಾಜಕೀಯ ತಾರೆಗಳನ್ನು ತಯಾರಿಸಬೇಕು.

೩. ವಂಶಪಾರಂಪರಿಕ ಜ್ಞಾನದ ಅರಿವು ಬೆಳೆಸಿಕೊಳ್ಳುವುದು: ಬ್ರಹ್ಮ, ವಿಷ್ಣು, ಶಿವ, ಸೂರ್ಯ ಮತ್ತು ಇಂದ್ರ ದೇವತೆಗಳ ಸಂಜಾತರಾದ ಪಂಚಾಳ ಕುಶಲಕರ್ಮಿ ಸಮುದಾಯ ಜ್ಞಾನದ ನಿಧಿಗಳು ಅರವತ್ನಾಲ್ಕು ವಿದ್ಯೆಗಳನ್ನು ಬಲ್ಲವರಾಗಿದ್ದಾರೆ. ತಾತ, ಮುತ್ತಾತನಿಂದ ಕಸಬಿನ ಮೂಲಜ್ಞಾನವನ್ನು ಅರಿತುಕೊಂಡವರಾಗಿದ್ದಾರೆ. ಅನುವಂಶಿಕ ಜ್ಞಾನವನ್ನು ಅರಿತುಕೊಂಡವರಾಗಿದ್ದಾರೆ. ಅನುವಂಶಿಕ ಜ್ಞಾನವನ್ನು ಕ್ರಿಯಾತ್ಮಕಗೊಳಿಸಿ ಸ್ಮರಣೀಯ ಕಲಾ ಸಂಸ್ಕೃತಿಯನ್ನು ದೇಶಕ್ಕೆ, ವಿಶ್ವಕ್ಕೆ ಕಟ್ಟಿಕೊಟ್ಟಿದ್ದಾರೆ. ಕಲೆಗಾರಿಕೆ ತಲೆತಲಾಂತರದಿಂದ ಬೆಳೆದುಕೊಂಡು ಬಂದಿದೆ. ಸಮುದಾಯಕ್ಕೆ ಪಂಚ ಕಸಬುಗಳೇ ಮೂಲಾಧಾರ ಕಸಬುಗಳ ಮಹತ್ವ ಅವುಗಳೊಳಗಿನ ತಾಂತ್ರಿಕತೆಯ ಜ್ಞಾನವನ್ನು ಹಿರಿಯರಿಂದ ಪಡೆದುಕೊಳ್ಳಲಾಗಿರುತ್ತದೆ. ಸಾಮಾನ್ಯವಾಗಿ ವಂಶಿಕ ಈ ಜ್ಞಾನವು ಸಮುದಾಯದವರಲ್ಲಿ ಗೌಪ್ಯ ವಾಗಿರುತ್ತದೆ. ಕೆಲವೊಂದು ಸಂದರ್ಭದಲ್ಲಿ ಮತ್ತು ಕಸಬಿನ ಮೂಲವಾಗಿ ಸಮಾಜದಲ್ಲಿ ಗೌಪ್ಯತೆ ಅನಿವಾರ್ಯವೆನಿಸುತ್ತದೆ. ಸಮುದಾಯದ ಕುಶಲಕರ್ಮಿಗಳು ವಸ್ತು ಉತ್ಪಾದಿಸುವಾಗ ತೂಕ–ಮಾಪನ, ಉದ್ದಗಲಳತೆಗಳಲ್ಲಿ ಗೌಪ್ಯತೆ ಕಾಪಾಡುತ್ತಾರೆ.

ಸಮುದಾಯಕ್ಕೆ ದೈವಿಕ ಶಕ್ತಿಯಾದ ಜ್ಞಾನವು ಕುಶಲಕರ್ಮಿ ವರ್ಗವನ್ನು ಉನ್ನತವಾಗಿರಿಸಿದೆ. ಭಾರತೀಯ ಸಮಾಜದಲ್ಲಿ ಗೌರವಾನ್ವಿತವಾಗಿಸಿದೆ. ಸಮುದಾಯದವರಲ್ಲಿ ವಿಶಿಷ್ಟ ಪ್ರತಿಭೆ–ಕಲೆಯಿದೆ ಎಂದು ಇತರ ಸಮಾಜ ಗುರುತಿಸುತ್ತದೆ. ಸಮುದಾಯದ ಪ್ರತಿಭೆಗೆ ಮಾನ್ಯತೆ ನೀಡುತ್ತಲೆ ಬಂದಿದೆ. ಆದರೆ ಈ ಗೌರವ–ಮಾನ್ಯತೆಗಳೆಲ್ಲವೂ ಸಮುದಾಯದವರಿಂದ ದೂರವಾಗುತ್ತಿವೆ. ಅದಕ್ಕೆ ಕಾರಣ ಪಾಂಚಾಳರೆ ಆಗಿದ್ದಾರೆ. ತಮ್ಮಲ್ಲಿದ್ದ ಜ್ಞಾನವನ್ನು ಸಮುದಾಯ ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ಬುದ್ಧಿವಂತಿಕೆ ಇದೆಯೆಂದು ಅತೀ ಬುದ್ಧಿವಂತರಾಗಿ ಕಾಣುತ್ತಾರೆ. ಸಮುದಾಯದ ಕಲೆಗಳು ಎಷ್ಟು ಮಹತ್ವದ್ದು ಎಂಬುದನ್ನು ಅರ್ಥೈಸಿಕೊಳ್ಳಬೇಕು. ವಂಶಪರಂಪರೆಯ ಜ್ಞಾನ ಬೇರೆಯಾರಿಗೂ ತಿಳಿದಿರುವುದಿಲ್ಲ. ಇಂದಿಗೂ ಕಡೆ ಪಾಟ ಮಡಿಗೆಯ ಮನೆಗಳನ್ನು ತಯಾರಿಸುವ ಕುಶಲಕರ್ಮಿಯ ಜ್ಞಾನದ ಹರುವನ್ನು ಗಮನಿಸಬಹುದಾಗಿದೆ. ಮನೆಯ ಮುಂಭಾಗದ ಛಾವಣಿಯ ಜೋಡನೆಯ ಎರಡು ಕಟ್ಟಿಗೆ ಅಖಂಡವಾಗಿಸುವಾಗ ಕುಶಲಕರ್ಮಿ ವಂಶಪಾರಂಪರಿಕೆ ಅನುಭವ ಜ್ಞಾನ ಬಳಸುತ್ತಾನೆ. ಇದಕ್ಕೆ ಕಟ್ಟಿಗೆ 'ಗಂಟುಹಾಕುವುದು' ಎಂದು ಕರೆಯಲಾಗುತ್ತದೆ. ಬಹುತೇಕ ಇತ್ತೀಚೆಗೆ ಇಂತಹ ಮನೆಗಳ ಬಳಕೆ ಕಡಿಮೆಯಾಗಿರುವುದರಿಂದ ಎರಡು ಕಟ್ಟಿಗೆ ತುಂಡುಗಳ ಗಂಟು ಹಾಕುವಿಕೆ ಜ್ಞಾನವನ್ನು ಸಮುದಾಯ ಮರೆಯುತ್ತಿದೆ.

ಪಂಚಾಳ ಸಮುದಾಯದ ಜ್ಞಾನ ಪರಂಪರೆ ಸರ್ವ ಶ್ರೇಷ್ಠವಾದದ್ದು ಆದರೆ ಇತ್ತೀಚಿನ ದಿನಮಾನಗಳಲ್ಲಿ ಸಮುದಾಯದವರು ಉನ್ನತ ಜ್ಞಾನವನ್ನು ಕಳೆದುಕೊಳ್ಳುತ್ತಿದ್ದಾರೆ. ಬಡಿಗ, ಕಂಬಾರ ಸಾಲಿಯ ಜ್ಞಾನ ಬೀದಿಯಲಿ ಓಡಾಡುತ್ತಿದೆ. ಕುಶಲಕರ್ಮಿ ಸಮುದಾಯ ವ್ಯಸನಾದಿಗಳಿಗೆ ಬಲಿಯಾಗಿ ಹೋಗಬಾರದ ಕಡೆ ಹೋಗಿ, ನಿಲ್ಲಬಾರದ ಕಡೆನಿಂತು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಸಹಾಯಕರಾಗಿ ಉದ್ಯೋಗದಲ್ಲಿ ತೊಡಗಿದ ಅನ್ಯಸಮುದಾಯದವರಲ್ಲಿ ಪಂಚಾಳರ ಜ್ಞಾನ ಪಲ್ಲಟವಾಗುತ್ತಿದೆ. ಇದರ ಪರಿಣಾಮ ಪಾರಂಪರಿಕ ಕುಶಲಕರ್ಮಿಗಳಾದ ಪಂಚಾಳರಿಗೆ ಉದ್ಯೋಗ ಗಳು ಕೈತಪ್ಪುತ್ತಿವೆ. ಉದ್ಯೋಗಕ್ಕಾಗಿ ಅಲೆದಾಡಿ, ಕೊನೆಗೆ ಅನುವಂಶಿಕ ಕಸಬಿಗೆ ವಿದಾಯ ಹೇಳಬೇಕಾಗು ತ್ತದೆ. ಹೀಗಾಗಿ ಸಮುದಾಯ ಪರಂಪರೆಯ ಜ್ಞಾನದ ಅರಿವನ್ನು ಬೆಳಸಿಕೊಳ್ಳಬೇಕಾದ ಅವಶ್ಯಕತೆಯಿದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡು...' ಎಂಬಂತೆ ದಾರಿದ್ರ್ಯ, ಬಡತನ, ಅಂಧಕಾರ ಇವೆಲ್ಲವನ್ನು ಹೋಗಲಾಡಿಸುವ ಅಪೂರ್ವಜ್ಞಾನ ಸಮುದಾಯಕ್ಕಿದೆ. ಇಂತಹ ಜ್ಞಾನವನ್ನು ಸಮುದಾಯ ಮರೆಯಬಾರದು. ಒಮ್ಮೆ ದೃಷ್ಟಿ ಹಾಯಿಸಿದರೆ ಸಾಕು ಯಾವ್ಯಾವ ಮರದ ತುಂಡಿನಿಂದ, ಲೋಹಗಳಿಂದ, ಶಿಲೆಗಳಿಂದ ಎಂತಹ ವಸ್ತುಗಳು ಉತ್ಪಾದಿತವಾಗುತ್ತವೆ. ಎಂಬುದನ್ನು ನಿರ್ಧರಿಸಬಲ್ಲ ಜ್ಞಾನ ಕುಶಲಕರ್ಮಿಗಳದಾಗಿರುತ್ತದೆ. ಹೀಗಾಗಿ ಮಹತ್ತರವಾದ ಪಾರಂಪರಿಕ ಜ್ಞಾನ ನಶಿಸಿ ಹೋಗದಂತೆ ಕಾಪಾಡಿಕೊಳ್ಳಬೇಕು. ಮುಂದಿನ ಪೀಳಿಗೆಗೆ ಬಿತ್ತರಿಸಬೇಕು. ಕುಲಕಸಬುಗಳು ಅಳಿದು ಹೋಗದಂತೆ ಪಾರಂಪರಿಕ ಜ್ಞಾನದ ರಕ್ಷಕರಾಗಿ ಸಮುದಾಯ ಮುಂದುವರೆಯಬೇಕು.

೪. ಸಮುದಾಯದ ಕಲೆ-ಸಂಪ್ರದಾಯ, ಧಾರ್ಮಿಕ ಕ್ರಿಯಾಧಿಗಳನ್ನು ರೂಢಿಸುವುದು: ಬ್ರಾಹ್ಮಣೀಯ ರೀತಿ-ನೀತಿ, ಸಂಪ್ರದಾಯಗಳನ್ನು ಪಾಲಿಸುತ್ತಿರುವ ಪಂಚಾಳ ಸಮುದಾಯ ಇತರ ಸಮಾಜಕ್ಕೆ ಆದರ್ಶವಾಗಿದೆ. ಸಮುದಾಯದ ಕಲೆ-ಸಂಪ್ರದಾಯ ವಿಶಿಷ್ಟವಾದದ್ದು. ಅದ್ಭುತ ಕಲೆಗಾರಿಕೆಯಿಂದ ವಿಶ್ವಖ್ಯಾತಿ ಹೊಂದಿದ ಸಮುದಾಯ ಶಿಲ್ಪ-ವಾಸ್ತುಶಿಲ್ಪ ಮರದಕೆತ್ತನೆ ಸೂಕ್ಷ್ಮ ಆಭರಣ ತಯಾರಿಸುವ ಕಲೆ ಪಂಚಾಳರಲ್ಲಿ ವಿಶೇಷವಾಗಿ ಹುಟ್ಟಿಬಂದಿದೆ. ವಿಶ್ವಕರ್ಮ ಪುರಾಣ, ಕಾಳಿ ಪುರಾಣ, ಮೂಲಸ್ಥಂಭ ಪುರಾಣಗಳು ಸಮುದಾಯ ಪ್ರಾಚೀನ ರೀತಿ-ನೀತಿ ಸಂಪ್ರದಾಯಗಳಿಗೆ ಸಾಕ್ಷಿಯಾಗಿವೆ. 'ಬ್ರಹ್ಮಜ್ಞಾನೇನ ಬ್ರಾಹ್ಮಣ' ಎಂಬಂತೆ ಬ್ರಹ್ಮಜ್ಞಾನವುಳ್ಳ ವಿಶ್ವಕರ್ಮ ಬ್ರಾಹ್ಮಣ ಸಮುದಾಯ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದೆ. ವೇದ-ಉಪನಿಷತ್ತು ಅಧ್ಯಯನ ದೈವಿಕ ಆರಾಧನೆ, ತ್ಯಾಗ ಮನೋಧರ್ಮ, ಧರ್ಮೋಪದೇಶ ಬದುಕಿನ ಚತುರ್ಥ ಆಶ್ರಮಗಳ ಪಾಲನೆ, ಕುಲಕಸಬುಗಳ ನಿರ್ವಹಣೆ, ಷೋಡಶ ಕರ್ಮಾಚರಣೆ ಮುಂತಾದ ವಿಶಿಷ್ಟ ಸಂಪ್ರದಾಯ, ಧಾರ್ಮಿಕ ಕ್ರಿಯಾಧಿಗಳನ್ನು ಸಮುದಾಯ ಆಚರಿಸುತ್ತ ಬಂದಿದೆ. ಕರ್ಮಮಾರ್ಗದ ಪಂಚಕಸಬುಗಳ

ಜೊತೆ ವೈದಿಕ ಸಂಪ್ರದಾಯತೆ ಶಿಲ್ಪಶಾಸ್ತ್ರಗಳ ವಿಧಿವಿಧಾನಗಳು ಪಂಚಾಳ ಸಮುದಾಯದವರಲ್ಲಿ ಜಾರಿಯಲ್ಲಿದ್ದವು.

ಆಧುನಿಕ ಸಂದರ್ಭದಲ್ಲಿ ಸಮುದಾಯದಲ್ಲಿ ಆಚರಿಸುತ್ತಿದ್ದ ಸಂಪ್ರದಾಯಗಳು ಕಡಿಮೆಯಾಗುತ್ತಿವೆ. ಉದ್ಯೋಗಗಳ ಒತ್ತಡದಲ್ಲಿ ನಿತ್ಯ-ಜಪ-ತಪಾದಿಗಳು ನಿಂತು ಹೋಗುತ್ತಿವೆ. ವೇದಾಧ್ಯಯನದ ರೂಢಿ ತಪ್ಪಿಹೋಗಿದೆ. ಪೂಜೆ-ಪುನಸ್ಕಾರಗಳು ಮಾಯವಾಗಿವೆ. ಸಂಧ್ಯಾವಂದನೆಗಳು ಹೇಳಹೆಸರಿಲ್ಲದಂತಾಗಿದೆ. ಈ ಎಲ್ಲ ಸಂಪ್ರದಾಯ, ಧಾರ್ಮಿಕ ವಿಧಿ-ವಿಧಾನಗಳು ಸಮುದಾಯದಲ್ಲಿ ಸಂಪೂರ್ಣವಾಗಿ ಸ್ಥಗೀತಗೊಂಡಿವೆ. ಇದರಿಂದ ಪಂಚಾಳರಲ್ಲಿದ್ದ ಬ್ರಾಹ್ಮಣೀತನವು ಇಲ್ಲವಾಗುತ್ತಿದೆ. ಕುಲಕಸಬುಗಳ ನಿರ್ವಹಣೆ ಪಂಚಾಳ ಸಮುದಾಯದ ರೀತಿ-ನೀತಿ ಸಂಪ್ರದಾಯ, ಧಾರ್ಮಿಕ ವಿಧಿವಿಧಾನಗಳ ಒಂದು ಭಾಗ. ಆದರೆ ಸಮುದಾಯ ಕಸಬುಗಳ ನಿರ್ವಹಣೆಯಲ್ಲಿ ಶೇ. ೯೦ರಷ್ಟು ಬ್ರಾಹ್ಮಣೀತನವನ್ನು ಮರೆಯುತ್ತಿದೆ.

ಸಮುದಾಯದ ಮಹಿಳೆಯರಲ್ಲಿ ಅಡ್ಡಕುಂಕುಮ ಧಾರಣೆ, ಕಚ್ಚೆಸೀರೆ ಉಡುವುದು ಇಲ್ಲವಾಗಿದೆ. ಭಾರತೀಯ ಸಂಪ್ರದಾಯದಲ್ಲಿ ಸೀರೆ ಉಡುವುದೇ ನಿಂತುಹೋಗುತ್ತಿದೆ. ಪುರುಷರ ಜನಿವಾರಗಳು ಮನೆಯ ಗೂಟುಗಳನ್ನು ಅವಲಂಭಿಸಿವೆ. ಆಹಾರ ಪದ್ಧತಿಯಲ್ಲಿ ಅಮೂಲಾಗ್ರಹ ಬದಲಾವಣೆಗಳನ್ನು ಪುರುಷರು ತಂದುಕೊಳ್ಳುತ್ತಿದ್ದಾರೆ. "ಯಾವುದೇ ಒಂದು ಸಮುದಾಯದ ಸಾಮಾಜಿಕ ಸೈದ್ಧಾಂತಿಕ ಮತ್ತು ಸಾಂಸ್ಕೃತಿಕ ಅವನತಿ ಅಥವಾ ಪತನಕ್ಕೆ ಕಾರಣ. ಆ ಸಮುದಾಯದ ಅನುವಂಶಿಕ ವೈಭವೋಪೇತ ಸಂಸ್ಕೃತಿಯ ಇತಿಹಾಸದ ಅರಿವು ಆ ಸಮುದಾಯದವರಿಗೆ ಇಲ್ಲದೆ ಇರುವುದು"[೬] ತನ್ನ ಸಮುದಾಯದ ರೀತಿ-ನೀತಿ ಸಂಪ್ರದಾಯ, ಸಂಸ್ಕೃತಿಗಳ ಅರಿವನ್ನು ಮರೆಯಲಾರದೆ ಉನ್ನತ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಇಂದಿನ ಜಾಗತಿಕ ಒತ್ತಡಗಳ ಮಧ್ಯ ಶೇ. ೧೦೦ರಷ್ಟು ಅನುಷ್ಠಾನಗೊಳಿಸಲು ಸಾಧ್ಯವಾಗದಿದ್ದರೂ, ಶೇ. ೯೦ರಷ್ಟಾದರೂ ಸಮುದಾಯದ ಕಲೆ-ಸಂಪ್ರದಾಯ, ಧಾರ್ಮಿಕ ವಿಧಿ ವಿಧಾನಗಳನ್ನು ಸಮುದಾಯ ರೂಢಿಸಿಕೊಳ್ಳಬೇಕು.

೫. ಒಳಪಂಗಡಗಳ ಒಗ್ಗೂಡುವಿಕೆ: ವಿಶ್ವಕರ್ಮರು ಪಂಚ ಕಸಬುಗಳ ವೈದಿಕಾಚರಣೆಯ ಸಂಪ್ರದಾಯಸ್ಥ ಸಮುದಾಯದವರಾಗಿದ್ದಾರೆ. ಸಾನಗ, ಸನಾತನ, ಅಹಭೂನ, ಪ್ರತ್ನಷ ಮತ್ತು ಸುಪರ್ಣಸ ಪಂಚ ಗೋತ್ರಗಳಿವೆ. ಕೊಣ್ಣುರು ಮತ್ತು ನಿಲಗುಂದಿ ಎರಡು ಪಂಥಗಳಿವೆ. ಸಹ ಪಂಥ ಮತ್ತು ವಿಭಿನ್ನ ಗೋತ್ರಗಳಲ್ಲಿ ಲಗ್ನ ಕಾರ್ಯಗಳು, ಸಂಬಂಧ ಬೆಸೆಯುವಿಕೆ ಏರ್ಪಡುತ್ತದೆ. ಕೊಣ್ಣೂರ ಮತ್ತು ನಿಲಗುಂದಿ ಪಂಥದ ಕುಶಲಕರ್ಮಿಗಳಲ್ಲಿ ಸಂಬಂಧಗಳು ಬೆಸೆಯುವುದಿಲ್ಲ. ಕೊಣ್ಣೂರು ಪಂಥದ ವಿಶ್ವಕರ್ಮ ಸಮುದಾಯದ ಗುಂಪೇ ಬೇರೆ ನಿಲಗುಂದ ಪಂಥದ ಸಮುದಾಯದ ಗುಂಪೇ

ಬೇರೆಯಿರುತ್ತದೆ. ಕೊಣ್ಣೂರು ಪಂಥದ ಐದು ಗೋತ್ರದ ವಿಶ್ವಕರ್ಮರಲ್ಲಿಯೂ ಭಿನ್ನತೆಗಳು ಕಂಡು ಬರುತ್ತವೆ. ಐದು ಬಗೆಯ ಗೋತ್ರಗಳಲ್ಲಿ ಸುಪರ್ಣಸ ಗೋತ್ರದ ಅಕ್ಕಸಾಲಿಗರು ಉಳಿದ ನಾಲ್ಕು ಗೋತ್ರದವರಿಂದ ಭಿನ್ನವಾಗುತ್ತಾರೆ. ಎಲ್ಲರಿಗಿಂತ ಸಾಮಾಜಿಕ, ಆರ್ಥಿಕವಾಗಿ ಉನ್ನತ ಸ್ಥಾನದಲ್ಲಿರಲು ಬಯಸುತ್ತಾರೆ. ಮಧ್ಯಮ ಕ್ರಮಾಂಕದಲ್ಲಿ ಬಡಿಗ, ಕಂಚುಗಾರ ಮತ್ತು ಶಿಲ್ಪಿಗಳು ಉಳಿದುಕೊಳ್ಳುತ್ತಾರೆ. ಆರಕ್ಕೇರುವವರಲ್ಲ; ಮೂರಕ್ಕಳಿಯುವವರಲ್ಲ ಎಂಬಂತೆ ಈ ಕಸಬುದಾರರು ಅಕ್ಕಸಾಲಿಗನಿಂದ ಸ್ವಲ್ಪ ದೂರದಲ್ಲಿರುತ್ತಾರೆ. ಆದರೆ ವಿಶ್ವಕರ್ಮ ಸಮುದಾಯದಲ್ಲಿ ಅತ್ಯಂತ ಕನಿಷ್ಠ ಸ್ಥಾನಮಾನಗಳಲ್ಲಿ ಕಂಬಾರ ಕಸಬುದಾರರಿದ್ದರೆ ವಿಶ್ವಕರ್ಮರು ಮೂಲತಃ ಕಪ್ಪುವರ್ಣದ ಸಮುದಾಯವೆಂದು ಗುರುತಿಸಲಾಗುತ್ತಿದೆ. ಅದರಲ್ಲಿಯೇ ಕಂಬಾರರು ಅತೀಕಪ್ಪು ವರ್ಣದವರಾಗಿರುವುದರಿಂದ ಸಮುದಾಯ ದಲ್ಲಿ ಕೆಳಸ್ಥಾನ ಹೊಂದಿದ್ದಾರೆ. ಕಂಬಾರ ಮತ್ತು ಅಕ್ಕಸಾಲಿಗರ ಗೋತ್ರಗಳು ಭಿನ್ನವಾದರೂ ವೈವಾಹಿಕ ಸಂಬಂಧಗಳು ಏರ್ಪಡುವುದು ತೀರಾ ವಿರಳ ವಿಶೇಷವಾಗಿ ಕಂಬಾರ ಕುಟುಂಬದ ವಧುಗಳನ್ನು ಅಕ್ಕಸಾಲಿಗರು ಸ್ವೀಕರಿಸುತ್ತಾರೆ. ವಿನಃ ಅಕ್ಕಸಾಲಿಗರ ವಧುಗಳು ಕಂಬಾರ ಕುಟುಂಬಗಳನ್ನು ಸೇರಿರುವುದು ಕಂಡುಬರುವುದಿಲ್ಲ.

ಕುಶಲಕರ್ಮಿ ಸಮುದಾಯ ಒಂದೇಯಾಗಿದ್ದರೂ ಒಳಮನಸ್ಸುಗಳು ವೈಮನಸ್ಸುಗಳು ಸಮುದಾಯವನ್ನು ಒಂದುಗೂಡಿಸಲು ಸಾಧ್ಯವಾಗುತ್ತಿಲ್ಲ. ಹಾಗೆ ಗಮನಿಸಿದರೆ ವಿಶ್ವಕರ್ಮರಲ್ಲಿ ೪೧ ಒಳಪಂಗಡಗಳನ್ನು ಗುರುತಿಸಲಾಗುತ್ತದೆ. ೧. ವಿಶ್ವಕರ್ಮ ೨. ಆಚಾರಿ ೩. ಅಕ್ಕಸಾಲಿ ೪. ಜೈಸಾಲಿ ೫. ಬಡಿಗೇರ ೬. ಬಡಿವಾಡ್ಲ ೭. ಬೈಲಪತ್ತಾರ ೮. ಬೈಲು ಅಕ್ಕಸಾಲಿ ೯ ಬೈಲು ಕಮ್ಮಾರ ೧೦ ಬೋಗಾರ ೧೧ ಚಪ್ಪೇಗಾರ ೧೨ ಚಾರೋಡಿ ೧೩ ಕೊಂಕಣಿ ಆಚಾರ ೧೪ ದೈವಜ್ಞ ಬ್ರಾಹ್ಮಣ ೧೫ ಗೆಜ್ಜೆಗಾರ ೧೬ ಕಂಬಾರ ೧೭ ಕಮ್ಮಾಲನ ೧೮ ಕಮ್ಮಾರ ೧೯ ಕಂಸಾಳ ೨೦ ಕಂಸನ್ ೨೧ ಕಂಚೋರ ೨೩ ಕಂಚೋರಿ ೨೪ ಕಂಚುಗಾರ ೨೫ ಕಂಸಾರ ೨೬ ಕಸಾರ್ ೨೭ ಲುಹಾರ್ ೨೮ ಮೆಸ್ತ ೨೯ ಪಂಚಾಳ ೩೦ ಪತ್ತಾರ ೩೧ ಶಿಲ್ಪಿ ೩೨ ಸೋಹಗಾರ ೩೩ ಸೋನಾರ ೩೪ ಸೋನಿ ೩೫ ಸುತಾರ್ ೩೬ ತಸಹಾನ ೩೭ ವಿಶ್ವಬ್ರಾಹ್ಮಣ ೩೮ ಥಟ್ಟನ್ ೩೯ ಅಕ್ಸಾಲಿ ೪೦ ಕಂಸಾಲ್ ಮತ್ತು ೪೧ ಬಡಗಿ ಹೀಗೆ ಕರ್ನಾಟಕ, ಆಂಧ್ರ, ತೆಲಂಗಾಣ, ತಮಿಳು, ಮಹಾರಾಷ್ಟ್ರ ಮತ್ತು ಕೇರಳ ಗಡಿಭಾಗದಲ್ಲಿ ದುಡಿಯುತ್ತಿರುವ ವಿಶ್ವಕರ್ಮರನ್ನೊಳಗೊಂಡ ೪೧ ವಿವಿಧ ಕುಶಲಕರ್ಮಿ ಪಂಗಡಗಳು ರಾಜ್ಯದಲ್ಲಿವೆ. ಈ ಎಲ್ಲ ವಿಶ್ವಕರ್ಮ ಉಪಪಂಗಡಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಅಸಂಘಟಿತವಾಗಿ ಜೀವನ ನಿರ್ವಹಿಸುತ್ತಿವೆ. ಈ ಎಲ್ಲ ಪಂಗಡಗಳು ಒಗ್ಗೂಡಬೇಕು. ಎಲ್ಲರೂ ಒಂದೇ ಎಂಬ ಸಂಘಟಿತ ಭಾವನೆ ಸಮುದಾಯದಲ್ಲಿ ಬೆಳೆಯಬೇಕು. ಪರಸ್ಪರರಲ್ಲಿ ಅನ್ಯೂನ್ಯತೆ ಮೂಡಬೇಕು. ಸಮುದಾಯದಲ್ಲಿಯ ಅಸಮಾನತೆ ಭಾವನೆ ಅಳಿಯಬೇಕು. ಏಕತೆಯನ್ನು ಸಾಧಿಸಿದರೆ

ವಿಶ್ವಕರ್ಮರು ಸಮಾಜದ ಉನ್ನತ ಸ್ಥಾನಮಾನ ಪಡೆಯುವುದರೊಂದಿಗೆ ಸರ್ಕಾರದ ಸೌಲಭ್ಯ ಸೌಕರ್ಯಗಳನ್ನು ಪಡೆಯಬಹುದಾಗಿದೆ. ರಾಜಕೀಯ ಶಕ್ತಿಯನ್ನು ಪುನರ್ಗಳಿಸಬಹುದಾಗಿದೆ. ವಿಶ್ವಕರ್ಮರಲ್ಲಿ ಒಳ ಪಂಗಡಗಳಲ್ಲಿ ಐಕ್ಯತೆ ಸಾಧಿಸುವುದು ಕಷ್ಟದ ಕೆಲಸ. ಸಮುದಾಯದ ಪ್ರವರ್ತಕ ಮೌನೇಶ್ವರರು ಒಗ್ಗೂಡಿಸಲು ಪ್ರಯತ್ನಿಸಿದ್ದಾರೆ. ಆದರೂ ಇಲ್ಲಿಯವರೆಗೂ ಒಗ್ಗಟ್ಟಿನ ಪ್ರದರ್ಶನ ಸಾಧ್ಯವಾಗಿಲ್ಲ. ಇನ್ನಾದರೂ ಯುವಶಕ್ತಿ ಸಮುದಾಯದ ಒಳ ಪಂಗಡಗಳ ಒಗ್ಗೂಡುವಿಕೆ ಸಾಧಿಸಿದರೆ ಸಮುದಾಯಕ್ಕೆ ಭವಿಷ್ಯವಿದೆ.

೬. ಸಮುದಾಯ ಸಾಹಿತ್ಯ ಚಿಂತನ ಕಮ್ಮಟಗಳ ರಚನೆ: ಪಾಂಚಾಳ ಸಮುದಾಯದ ಸೂಕ್ಷ್ಮ ಸಂವೇಧನೆಗಳನ್ನು ಬರವಣಿಗೆಯಲ್ಲಿ ತಿಳಿಸುವ ಸಾಹಿತ್ಯಕ ಕೃತಿಗಳು ಸಮುದಾಯದಲ್ಲಿ ದೊರೆಯುತ್ತವೆ. ಕಸಬು ಮೂಲ ಸಂವೇಧನಾತ್ಮಕ ಸಾಹಿತ್ಯ ರಚನೆ ಕಡಿಮೆಯಿದೆ. ಪಾಂಚಾಳರು ರಚಿಸಿದ ಸಾಹಿತ್ಯವನ್ನು ಧಾರ್ಮಿಕ ಸಾಹಿತ್ಯ ಮತ್ತು ಸೃಜನಶೀಲ ಸಾಹಿತ್ಯವೆಂದು ಗುರುತಿಸಬಹುದಾಗಿದೆ. ವಿಶ್ವಕರ್ಮ ಪುರಾಣ, ಮೂಲಸ್ಥಂಭ ಪುರಾಣ, ಕಂಚಿ ಪುರಾಣ, ರಥಕಾರಾಧಿಕರಣಂ ಮೊದಲಾದ ಧರ್ಮಗ್ರಂಥಗಳಲ್ಲಿ ಪಾಂಚಾಳ ಕುಶಲಕರ್ಮಿ ಸಮುದಾಯದ ಪ್ರಾಚೀನತೆ, ರೀತಿ ನೀತಿ– ಸಂಪ್ರದಾಯ ಆಚರಣೆಗಳನ್ನು ತಿಳಿಸಲಾಗಿದೆ. ಕಸಬು ಮೂಲಪುರುಷರು, ಗೋತ್ರಗಳ ವಿವರಣೆಗಳು ದೊರೆಯುತ್ತವೆ. ೧೨ನೇ ಶತಮಾನದಲ್ಲಿ ಸಮುದಾಯದ ಬರಹಗಾರರು ವಚನ ಸಾಹಿತ್ಯದಲ್ಲಿಯೂ ಗುರುತಿಸಿಕೊಂಡಿದ್ದಾರೆ. ತಿಂಥಿಣಿ ಮೌನೇಶ್ವರ, ನವಲಗುಂದ ನಾಗಲಿಂಗಸ್ವಾಮಿ, ಬಾಚಿಕಾಯಕದ ಬಸವಯ್ಯ, ಕಾಮಾಟದ ಭೀಮಣ್ಣ, ಜೀವಣ್ಣ ಮಸಳಿ, ಡಾ. ಜಿ.ಜ್ಞಾನಾನಂದ, ದೀಕ್ಷಿತ, ನಾ.ಭಾ. ಚಂದ್ರಶೇಖರಾಚಾರ್ಯ, ಡಾ.ಎಸ್.ಕೆ. ಜೋಶಿ, ಮೊದಲಾದ ಸಾಹಿತ್ಯ ರಚನಾಕಾರರು ಸಮುದಾಯದ ಸಾಂಸ್ಕೃತಿಕ ಅಧ್ಯಯನಗಳಿಗೆ ಆದ್ಯತೆ ನೀಡಿ ಕೃತಿಗಳನ್ನು ರಚಿಸಿದರು. ಡಾ. ಚಂದ್ರಶೇಖರ ಕಂಬಾರ, ಡಾ. ಶೀಲಕಾಂತ ಪತ್ತಾರ ಡಾ. ವಿರುಪಾಕ್ಷ ಬಾಳಪ್ಪ ಬಡಿಗೇರ, ಡಾ. ಕೆ.ಎಸ್. ಕುಮಾರಸ್ವಾಮಿ, ಕೆ. ವಾಸುದೇವಾಚಾರ್ಯ, ಡಾ. ಪಲ್ತಾಡಿ ರಾಮಕೃಷ್ಣ ಆಚಾರರು ಸಮುದಾಯದ ಆಧುನಿಕ ಸಾಹಿತ್ಯ ಕೃತಿಕಾರರಾಗಿದ್ದಾರೆ.

ಸಮುದಾಯದವರಲ್ಲದಿದ್ದರೂ ಪಂಚಾಳರ ಕಸಬು–ಸಂಪ್ರದಾಯ ಕುರಿತಾಗಿ ಡಾ. ದೇವೇಂದ್ರ ಕುಮಾರ ಹಕಾರಿ, ಡಾ. ಡಿ. ಪಾಂಡುರಂಗಬಾಬು, ಡಾ. ಎಸ್.ಎಸ್ ಅಂಗಡಿ, ಡಾ. ದಸ್ತಗಿರಿ ಅಲ್ಲೀಬಾಯಿ, ಪ್ರೊ. ಎಂ.ಎಲ್. ನರಸಿಂಹಮೂರ್ತಿ ನರಸಿಂಹೇಗೌಡ ನಾರಾಯಣಾಪೂರ ಮೊದಲಾದ ಸಾಹಿತಿಗಳು ಬರಹಗಳನ್ನು ಬರೆದಿದ್ದಾರೆ. ಡಾ. ಎ.ಎಫ್. ಮೋಹನರವರ ಸಮುದಾಯದ ಕುರಿತಾಗಿ 'ವಿಶ್ವಕರ್ಮ ಸಮಾಜ ದರ್ಶನ' ಮೌಖಿಕ ಕೃತಿಯಾಗಿದೆ. ಸಮುದಾಯದವರನ್ನು ಸಾಹಿತ್ಯಕವಾಗಿ ಜಾಗೃತಿಗೊಳಸಿದಲು ಕೆಲವು ಸಂಘಟನೆಗಳು ಜನ್ಮತಾಳಿರುವುದನ್ನು ಗಮನಿಸಬಹುದಾಗಿದೆ.

ರಾಣೆಬೆನ್ನೂರಲ್ಲಿ 'ವಿಶ್ವಬ್ರಾಹ್ಮಣ ಧರ್ಮ ಸಾಹಿತ್ಯ ಕಲಾ ಜಾಗೃತಿ ಸಮಿತಿ ೧೦-೧೦-೧೯೯೭, ಹುಬ್ಬಳ್ಳಿಯಲ್ಲಿ 'ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ (೦೧.೦೧.೨೦೦೩)ಗಳು ಸಮುದಾಯ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ.

ಪಂಚಾಳ ಸಮುದಾಯ ಜ್ಞಾನಿ ಮತ್ತು ಕರ್ಮಿಗಳ ಸಮಾಜ, ಸಾಹಿತ್ಯ ರಚನೆ ಮತ್ತು ಅಧ್ಯಯನವು ಬದುಕಿನ ಒಂದು ಭಾಗ. ದಿನದ ಹೆಚ್ಚು ಅವಧಿಯನ್ನು ಶ್ರಮದಾನವಾಗಿಸಿದರೆ ಸ್ವಲ್ಪ ಅವಧಿಯನ್ನು ಸಾಹಿತ್ಯಕ್ಕೆ ಮೀಸಲಿಡಬೇಕಾಗುತ್ತದೆ. ಶ್ರಮದಿಂದ ಕುಶಲಕರ್ಮಿಯ ದೇಹ ಹುರಿಗೊಳ್ಳುವಂತೆ, ಸಾಹಿತ್ಯಧ್ಯಯನದಿಂದ ಮನಸ್ಸು ಹದಗೊಳ್ಳುತ್ತದೆ. ಸಾಹಿತ್ಯದ ಓದು ಸಮುದಾಯದ ವ್ಯಕ್ತಿತ್ವ ವಿಕಸನಗೊಳಿಸುತ್ತದೆ. ಆಧ್ಯಾತ್ಮಿಕ ಅರಿವನ್ನು ಮೂಡಿಸುತ್ತದೆ. ಜ್ಞಾನದ ಹರವನ್ನು ವಿಸ್ತರಿಸುತ್ತದೆ. ಈ ದೆಸೆಯಲ್ಲಿ ಇದುವರೆಗಿನ ಸಮುದಾಯದ ಸಾಹಿತ್ಯಿಕ ಚಟುವಟಿಕೆಗಳನ್ನು ಲಕ್ಷಿಸಿದರೆ, ಇತರೆ ಸಮುದಾಯದ ಸಾಹಿತ್ಯಕ್ಕೆ ಹೋಲಿಸಿದರೆ ಪಂಚಾಳರ ಸಾಹಿತ್ಯ ಪ್ರಮಾಣ ಕಡಿಮೆಯೆನಿಸುತ್ತದೆ. ದುಡಿಮೆಯ ಹಸಿವುಳ್ಳವರಾದ ಸಮುದಾಯದವರು ಓದಿನ ಸಾಹಿತ್ಯ ರಚನೆಯ ಹಸಿವುಳ್ಳವರಾಗ ಬೇಕಾಗಿದೆ. ಕನ್ನಡ ಸಾಹಿತ್ಯದಲ್ಲಿ ಪಂಚಾಳ ಸಮುದಾಯದ ಸಂಖ್ಯೆ ಅತ್ಯಂತ ವಿರಳ. ವಿರಳರಲ್ಲಿ ವಿರಳರಾಗಿ ಡಾ. ಚಂದ್ರಶೇಖರ ಕಂಬಾರ ಮತ್ತು ಜಿ. ಜ್ಞಾನಾನಂದ ಅವರುಗಳು ಸಮುದಾಯದ ಪ್ರತಿನಿಧಿಗಳಾಗಿ ಕನ್ನಡ ಸಾಹಿತ್ಯ ಚರಿತ್ರೆಯ ಮೊದಲ ಪುಟದಲ್ಲಿ ಕಾಣುತ್ತಾರೆ. ಆದರೆ ಈ ದಿಗ್ಗಜರ ಅನಂತರದಲ್ಲಿ ಸಮುದಾಯದ ಸಾಹಿತ್ಯಕಾರರ ಅವಶ್ಯಕತೆಯಿದೆ. ಸಾವಿರ ಸಾವಿರ ಕಂಬಾರರು : ಜ್ಞಾನಾನಂದರು ಸಮುದಾಯದಿಂದ ಜನ್ಮತಾಳಬೇಕಾಗಿದೆ.

ಪಂಚಾಳ ಸಮುದಾಯದಲ್ಲಿ ಶ್ರಮ ಸಂಸ್ಕೃತಿಯೊಂದಿಗೆ ಸಾಹಿತ್ಯ ಸಂಸ್ಕೃತಿಯು ಬೆಳೆಯಬೇಕು. ನಿರಂತರವಾಗಿ ಸಮುದಾಯದವರಿಂದ ಸಾಹಿತ್ಯ ಚಿಂತನೆಗಳು ಏರ್ಪಡಬೇಕು. ಕಾರ್ಯಾಗಾರಗಳು ಜರುಗಬೇಕು. ಹಿರಿಯ ಸಾಹಿತಿಗಳಿಂದ ಕಿರಿಯರಿಗೆ ಮಾರ್ಗದರ್ಶನ ಶಿಬಿರಗಳು ನಡೆಯಬೇಕು. ಸಾಹಿತ್ಯ ವೇದಿಕೆಗಳು- ಕಮ್ಮಟಗಳು ಸಮುದಾಯದವರಿಂದ, ಸಮುದಾಯದವರಿಗಾಗಿ ಹುಟ್ಟಿಕೊಳ್ಳಬೇಕು. ಪಾಕ್ಷಿಕ, ತ್ರೈಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಸಾಹಿತ್ಯ ಕಮ್ಮಟಗಳು, ಸಾಹಿತ್ಯ- ಸಂಶೋಧನ ಪತ್ರಿಕೆಗಳು ಕ್ರಿಯಾಶೀಲಗೊಳ್ಳಬೇಕಾಗಿದೆ. ಪಂಚಾಳ ಸಮುದಾಯದ ಸಾಹಿತ್ಯ ಮತ್ತು ಸಾಹಿತ್ಯಕಾರರ ಕೊಡುಗೆ ಕನ್ನಡ ಸಾಹಿತ್ಯಕ್ಕೆ ಅಪಾರವೆನಿಸಬೇಕಾಗಿದೆ. ನೂರು ವರ್ಷದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಬ್ಬರೇ ಒಬ್ಬರು ಪ್ರೊ. ಕೆ.ಜಿ. ಕುಂದಣಗಾರರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ಕಂಡುಬರುತ್ತದೆ. ಅನಂತರದಲ್ಲಿ ಮತ್ತಾವ ಕುಂದಾಣಗಾರರು ಕಾಣಸಿಗುವುದೇ ಇಲ್ಲ. ಹೀಗಾಗಿ ಪಂಚಾಳ ಸಮುದಾಯ ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರೀಯಗೊಳಿಸಿಕೊಳ್ಳಬೇಕಾಗಿದೆ.

ಸಮುದಾಯದ ಸಂವೇಧನೆಗಳನ್ನು ಹೊರತರಬೇಕಾಗಿದೆ. ಕಸಬಿನೊಂದಿಗೆ ವಚನ ಸಾಹಿತ್ಯ ರಚಿಸಿದ ತಿಂಥಣಿ ಮೌನೇಶ್ವರ, ನವಲಗುಂದ ನಾಗಲಿಂಗಸ್ವಾಮಿ, ಬಾಚಿ ಕಾಯಕದ ಬಸವಯ್ಯ, ಕಾಮಾಟದ ಭೀಮಣ್ಣ ಮೊದಲಾದವರನ್ನು ಆದರ್ಶವಾಗಿರಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ೨೦೧೩ರಲ್ಲಿ ಶಿವಮೊಗ್ಗದ ಡಾ.ಕೆ.ವಿ.ಕೃಷ್ಣಮೂರ್ತಿಯವರು ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಪರಿಷತ್ತು ಹುಟ್ಟುಹಾಕಿದ್ದಾರೆ. ಸಮುದಾಯದ ಸಾಹಿತಿಗಳಿಗೆ ಒಂದು ವೇದಿಕೆ ಕಟ್ಟಿಕೊಟ್ಟಿದ್ದಾರೆ. ಇದೇ ಬಗೆಯಲ್ಲಿ ಪ್ರತಿಗ್ರಾಮಗಳಲ್ಲಿ ಸಮುದಾಯದ ಸಾಹಿತ್ಯ ಚಿಂತನ ಕಮ್ಮಟಗಳು ರಚನೆಗೊಂಡು, ಸಮುದಾಯದ ಕಲೆ–ಕಲಾವಿದರು, ಸಾಹಿತ್ಯ–ಸಾಹಿತಿಗಳು, ರೀತಿ–ನೀತಿ–ಸಂಪ್ರದಾಯಗಳ ಚಿಂತನ ಮಂಥನ ಕಾರ್ಯಚಟುವಟಿಕೆಗಳು ಜರುಗುವಂತಾಗಬೇಕು.

ಸಮುದಾಯಿಕ ಉದ್ಯೋಗಗಳ ಪುನಶ್ಚೇತನದ ಆಯಾಮಗಳು

೭. ಗ್ರಾಮಮಟ್ಟದಲ್ಲಿ ಕುಲಕಸಬುದಾರರ ಸಂಘ ಸ್ಥಾಪನೆ: ಪಂಚಾಳ ಕುಶಲಕರ್ಮಿ ಸಮುದಾಯ ಶಕ್ತಿಯುತವಾಗಬೇಕು. ಸಮುದಾಯದ ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿ ಉದ್ಯೋಗಗಳು ಗಟ್ಟಿ ನೆಲೆ ಕಂಡುಕೊಳ್ಳಬೇಕಾಗಿದೆ. ಪಂಚಾಳ ಸಮುದಾಯ ಮತ್ತು ಸಮುದಾಯಿಕ ಉದ್ಯೋಗಗಳಿಗೆ ಅವಿನಾಭಾವ ಸಂಬಂಧವಿದೆ. ಸಮುದಾಯ ಬಿಟ್ಟು ಉದ್ಯೋಗಗಳಿಲ್ಲ; ಉದ್ಯೋಗ ಬಿಟ್ಟು ಸಮುದಾಯವಿಲ್ಲ. ಒಂದನ್ನೊಂದು ಬೆಳೆಸುತ್ತ ಹೋಗುತ್ತವೆ. ಪ್ರತಿಗ್ರಾಮದಲ್ಲಿ ಪಂಚಾಳ ಕುಶಲಕರ್ಮಿ ಉದ್ಯೋಗಗಳು ಅವಶ್ಯಕವಾಗಿವೆ. ಕೃಷಿಕನಿಗೆ, ವ್ಯಾಪಾರಿಗೆ, ಕೂಲಿಕಾರನಿಗೆ, ಬಡವರಿಗೆ, ಶ್ರೀಮಂತರಿಗೆ ಹೀಗೆ ಎಲ್ಲ ವರ್ಗಗಳಿಗೂ, ಜಾತ್ರೆ–ಉತ್ಸವ, ಮದುವೆ–ಮುಂಜಿ, ಹುಟ್ಟು– ಸಾವಿಗೂ ಪಾಂಚಾಳ ಕುಶಲಕರ್ಮಿಗಳು ಅವಶ್ಯಕವಾಗಿದ್ದಾರೆ. ಗ್ರಾಮದ ಪ್ರತಿಯೊಬ್ಬರಿಗೂ ಸಮುದಾಯದ ಉದ್ಯೋಗಿಗಳು ಚಿರಪರಿಚಿತರಾಗಿರುತ್ತಾರೆ. ಸಣ್ಣ ಮಕ್ಕಳಿಂದಿಡಿದು ವಯೋವೃದ್ಧರವರೆಗೂ ಮಹಿಳೆಯರಿಗೂ ಪಾಂಚಾಳರು ವಸ್ತುಗಳನ್ನು ತಯಾರಿಸಿ ಕೊಡುತ್ತಾರೆ. ಆದರೆ ಇವರ ಶ್ರಮಕ್ಕೆ ತಕ್ಕದಾದ ಪ್ರತಿಫಲ ದೊರೆಯುತ್ತಿಲ್ಲ. ಪಾಂಚಾಳ ಉದ್ಯೋಗಿಗಳು ಅಸಂಘಟಿತರು. ದುಡಿಮೆಯಲ್ಲಿ ಬಂಟರಾದರೂ, ಸಂಘಟನೆಯಲ್ಲಿ ಶೂನ್ಯರಾಗಿದ್ದಾರೆ.

ಗ್ರಾಮದ ಇತರ ಸಮುದಾಯದವರು ತಮಗೆ ಅವಶ್ಯಕವಾಗಿರುವ ವಸ್ತುಗಳನ್ನು ಕುಶಲಕರ್ಮಿಗಳಿಂದ ತಯಾರಿಸಿಕೊಳ್ಳುತ್ತಾರೆ. ಪ್ರತಿಯಾಗಿ ಉದ್ಯೋಗಿ ಸಂಭಾವಣೆ ಕೇಳಿದರೆ 'ಅದಕ್ಕೇಕೆ ಅಷ್ಟು ದುಡ್ಡು' ಎಂದು ಕೊಂಕು ತೆಗೆಯುತ್ತಾರೆ. ಧ್ವನಿ ಎತ್ತಿ ಹೇಳಲು ಹೋದರೆ ಬೇರೆ ಬೇರೆ ಕುಶಲಕರ್ಮಿಯ ಸಾಕ್ಷಿ ಹೇಳುತ್ತಾರೆ. "ಕಾಳಪ್ಪ ಕಡಿಮೆ ತಗೋಳತಾನs ಬಾಳಪ್ಪ ನಿನಗ್ಯಾಕೋ ಬಾಳss" ಎಂದು ಹೇಳಿ ಕಡಿಮೆ ದುಡ್ಡು ಕೊಟ್ಟು ಹೊರಟು ಹೋಗುತ್ತಾರೆ. ಇಲ್ಲಿ ಉದ್ಯೋಗ ಮಾಡಿಸಿಕೊಳ್ಳುವವನ ತಪ್ಪೇನಿಲ್ಲ! ಉದ್ಯೋಗಸ್ಥರದೇ ತಪ್ಪು. ಉದ್ಯೋಗಿಗಳಲ್ಲಿ ಸಂಘಟನಾತ್ಮಕ ಶಕ್ತಿಯಿಲ್ಲ. ಪರಸ್ಪರ ಅಸೂಯೇ

ಭಾವನೆ ತುಂಬಿರುತ್ತದೆ. ಉದ್ಯೋಗಿಗಳು ಒಂದಿಲ್ಲ ಒಂದು ರೀತಿಯಲ್ಲಿ ರಕ್ತ ಸಂಬಂಧಿಗಳಾಗಿದ್ದರೂ ಕೊಡು-ಕೊಳ್ಳುವಿಕೆಯಿದ್ದರೂ ಉದ್ಯೋಗದ ವಿಷಯದಲ್ಲಿ ನಿಕಟವಾಗಿರುವುದಿಲ್ಲ. ಇದಕ್ಕೆ ಕಾರಣ ಉದ್ಯೋಗಸ್ಥರು ಹೆಚ್ಚಿದ್ದು, ಉದ್ಯೋಗಗಳ ಕೊರತೆ, ಸಂಬಂಧಿಕರಲ್ಲಿ ಒಳಜಗಳ, ಪ್ರತಿಭೆಯನ್ನು ಹೊಸಕಿಹಾಕುವುದು ತಮ್ಮ ಕುಟುಂಬವೊಂದೇ ಬೆಳೆಯಬೇಕೆಂಬ ಹೀನ ಭಾವನೆಗಳಿವೆ. ಈ ಕಾರಣದಿಂದಲೆ ಇತರ ಸಮುದಾಯ ಪಾಂಚಾಳರಿಗೆ "ಆಯಾಗಾರ ಆಯಗಾರಗೆ ಸೇರ್ಕಿಲ್ಲ' ಎಂಬ ಮಾತು ಹೇಳುತ್ತಿದೆ.

ಬಾಗಿಲು, ಕಿಟಕಿ, ಮನೆ ಇಮಾರತಿ ಮುಂತಾದ ವಸ್ತುಗಳನ್ನು ತಯಾರಿಸಿಕೊಡಲು ಕುಶಲಕರ್ಮಿಗಳಲ್ಲಿ ನಿರ್ಧಿಷ್ಟ ಬೆಲೆ (ದರ) ಇಲ್ಲ. ಅವರವರಿಗೆ ಅನುಕೂಲವಾದಂತೆ ಹಣಪಡೆದು ವಸ್ತು ತಯಾರಿಸಿಕೊಡುತ್ತಾರೆ. ಇಲ್ಲಿ ಉದ್ಯೋಗಗಳಿಗಿಂತ ಗ್ರಾಹಕರು ಲಾಭ ಪಡೆದುಕೊಳ್ಳುತ್ತಾರೆ. "ಇಬ್ಬರ ಉದ್ಯೋಗಿಗಳಲ್ಲಿ ಗ್ರಾಹಕರು ಲಾಭಪಡೆದುಕೊಳ್ಳುತ್ತಾರೆ. ಇಂಥ ಘಟನೆಗಳು ಸಮುದಾಯದಲ್ಲಿ ಜರುಗಬಾರದು ಯಾವುದೇ ಒಂದು ವಸ್ತು ತಯಾರಿಸಿಕೊಡಲು ಉದ್ಯೋಗಿಗಳಲ್ಲಿ ಏಕರೂಪದ ಬೆಲೆ ನಿಗಧಿಪಡಿಸಿಕೊಂಡಿರಬೇಕು. ಯಾವ ಸಂದರ್ಭದಲ್ಲೂ ಬೆಲೆಯಲ್ಲಿ ಏರು-ಪೇರು ಆಗಬಾರದು. ಈ ತತ್ವವು ಸಮುದಾಯದ ಆರ್ಥಿಕಾಭಿವೃದ್ಧಿಗೆ ಮತ್ತು ಸಂಘಟನೆಗೆ ಅನುಕೂಲಮಾಡಿಕೊಡುತ್ತದೆ. ಅದಕ್ಕಾಗಿ ದೇಶದ ಪ್ರತಿಗ್ರಾಮಗಳಲ್ಲಿಯೂ ಪಾಂಚಾಳ ಕುಶಲಕಸಬುದಾರರ ಸಂಘಟನೆಗಳು ಸ್ಥಾಪನೆಗೊಳ್ಳಬೇಕು. ಸಂಘಗಳ ಸ್ಥಾಪನೆಯಿಂದ ಕುಶಲಕರ್ಮಿಗಳು ಗ್ರಾಮದ ಉದ್ಯೋಗಗಳಲ್ಲಿ ಹಿಡಿತ ಸಾಧಿಸಬಹುದು. ಔದ್ಯೋಗಿಕವಾಗಿ ಬೆಳೆಯಬಹುದಾಗಿದೆ. ಸಮುದಾಯದ ಉದ್ಯೋಗಿಗಳು ತಯಾರಿಸುವ ಪ್ರತಿ ವಸ್ತುಗಳ ನಿಗದಿತ ಬೆಲೆಯ(ದರಪಟ್ಟಿ) ಫಲಕ ಸಂಘ ಅಥವಾ ಕಾರ್ಯಾಗಾರ, ಬಡಿಗೇರ ಓಣಿ, ಮನೆಗಳಲ್ಲಿ ಅಂಟಿಸುವುದಾಗಬೇಕು. ಯಾವುದೇ ಗ್ರಾಹಕ ಎಲ್ಲೇ ಹೋದರೂ ಒಂದೇ ಬೆಲೆ ನೀಡುವಂತಾಗಬೇಕು. ಈಗಾಗಲೇ ಪ್ರತಿಗ್ರಾಮಮಟ್ಟದಲ್ಲಿ ಕಿರಾಣಿ ಅಂಗಡಿಕಾರರ ಸಂಘ, ಕ್ಷೌರಿಕರ ಸಂಘ ಝುರಾಕ್ಸ್ ಅಂಗಡಿಗಳ ಸಂಘ, ಹೊಟೇಲಗಳ ಸಂಘ ಹೀಗೆ ಹತ್ತು-ಹಲವು ಔದ್ಯೋಗಿಕ ಸಂಘಗಳು ಜನ್ಮತಾಳಿವೆ. ಇದೇ ಮಾದರಿಯಲ್ಲಿ ಪಾಂಚಾಳ ಕುಶಲಕರ್ಮಿಗಳು ಉದ್ಯೋಗಗಳ ಹಿತದೃಷ್ಟಿಯಿಂದ ಉದ್ಯೋಗಗಳಲ್ಲಿ ಮೋಸಗಾರಿಕೆ ನಡೆಯದಂತೆ, ಪರಸ್ಪರರಲ್ಲಿ ಏಕತೆಯನ್ನು ತಂದುಕೊಂಡು ಗ್ರಾಮ ಮಟ್ಟದಲ್ಲಿ ಕುಲಕಸಬುದಾರರ ಸಂಘಗಳನ್ನು ಸ್ಥಾಪಿಸಬೇಕು.

೮. ಕುಶಲಕರ್ಮಿಗಳ ಸಭೆ-ಸಮಾವೇಶಗಳ ಏರ್ಪಡುವಿಕೆ: ಪಂಚಾಳ ಕುಶಲಕರ್ಮಿಗಳ ಹಿತ ರಕ್ಷಣೆಗಾಗಿ ಕಾಲ-ಕಾಲಕ್ಕೆ ಸಭೆ-ಸಮಾವೇಶಗಳು ಏರ್ಪಡಬೇಕು. ಕುಶಲಕರ್ಮಿಗಳು ಸಂಘಟಿತರಾಗಲು ಗ್ರಾಮೀಣ ಮಟ್ಟದಿಂದ ರಾಷ್ಟ್ರಮಟ್ಟದವರೆಗೂ ಸಭೆಗಳು ನಡೆಯಬೇಕು. ಔದ್ಯೋಗಿಕವಾಗಿ ಬೆಳೆಯುವುದರ ಜೊತೆ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿಯೂ ಭಲಗೊಳ್ಳಲು ಸಾಧ್ಯವಾಗುತ್ತದೆ.

ಸಭೆ-ಸಮಾವೇಶಗಳಲ್ಲಿ ಪಾಂಚಾಳರ ಮತ್ತು ಅವರ ಪಂಚಕಸಬುಗಳ ಕುರಿತಾಗಿ ಚರ್ಚೆಗಳು ನಡೆಯಬೇಕು. ಬದಲಾದ ಸಂದರ್ಭಗಳನ್ನು ಎದುರಿಸುವ ಕಲೆಗಾರಿಕೆಯನ್ನು ಕಲಿತುಕೊಳ್ಳುವ ವಿಧಗಳನ್ನು ಚರ್ಚಿಸಬೇಕು. ಪರಂಪರಾಗತವಾಗಿ ಬೆಳೆದು ಬಂದ ಪಂಚ ಕಸಬುಗಳ ಮಹತ್ವವನ್ನು ಮನದಟ್ಟಾಗಿಸಬೇಕು. ಕುಶಲಕರ್ಮಿಗಳ ಪ್ರಾಚೀನ ಕಲಾವೈಭವದ ಬಗೆಗೆ ಜಾಗೃತಿಯುಂಟು ಮಾಡ ಬೇಕಿದೆ. ಹಿರಿಯರಿಂದ ಬಳುವಳಿಯಾಗಿ ಬಂದ ಪಂಚಕಸಬುಗಳು ನಶಿಸಬಾರದು. ಆನುವಂಶಿಕ ಉದ್ಯೋಗಗಳಿಗಿದ್ದ ಗೌರವ, ಮಾನ್ಯತೆಗಳನ್ನು ಮತ್ತೇ ಹೊಸದಾಗಿ ತಂದುಕೊಡಲು ಮಾಡಬೇಕಾದ ಅಗತ್ಯ ಮಾರ್ಗಗಳನ್ನು ಸಭೆ-ಸಮಾವೇಶಗಳಲ್ಲಿ ಚರ್ಚಿಸಬೇಕು. ಇದರಿಂದ ಕುಶಲಕರ್ಮಿಗಳಿಗೆ ಪರಂಪರಾಗತ ಉದ್ಯೋಗಗಳ ಬಗ್ಗೆ ಪ್ರೀತಿ-ಗೌರವ ಮೂಡಲು ಸಾಧ್ಯವಾಗುತ್ತದೆ. ಅದಕ್ಕೋಸ್ಕರ ಸಭೆ-ಸಮಾವೇಶ, ವಿಚಾರ ಸಂಕಿರಣ, ಗೋಷ್ಠಿಗಳು ಏರ್ಪಡಬೇಕು.

ಸಾಂಘಿಕ ಜೀವನ ಕಟ್ಟಿಕೊಂಡ ಪಂಚಾಳ ಕುಶಲಕರ್ಮಿಗಳು ಹೋಬಳಿ, ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟಗಳಲ್ಲಿ ಉದ್ಯೋಗ ಮತ್ತು ಸಮುದಾಯದ ಕುರಿತಾದ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಇದಕ್ಕಾಗಿ ಪರಸ್ಪರ ಸಂಪರ್ಕ ಸಾಧನ ಬಳಸಿಕೊಂಡು ಉದ್ಯೋಗಗಳಲ್ಲಿ ಹೊಸ ಹೊಸ ಆವಿಷ್ಕಾರತೆಯನ್ನು ಹೇಗೆ ತರಲು ಸಾಧ್ಯವೆಂಬುದನ್ನು ಸಭೆ-ಸಮಾವೇಶಗಳಲ್ಲಿ ಚರ್ಚಿಸು ವಂತಾಗಬೇಕು. ಸಮುದಾಯ ಮತ್ತು ಪಂಚಕಸಬುಗಳ ಪುನರುತ್ಥಾನಕ್ಕಾಗಿ ಸಮಾಜದ ಸಾಹಿತಿ, ಲೇಖಕ, ಸಂಶೋಧಕ- ವಿದ್ವಾಂಸರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಬೇಕು. ಕುಶಲಕರ್ಮಿಗಳ ಬದುಕಿನ ವಿಚಾರಗಳು ಚರ್ಚಿತವಾಗಿ ಸಮುದಾಯದಲ್ಲಿ ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತಿವೆ. ಪರಸ್ಪರ ವಿಚಾರ- ವಿನಿಮಯಗಳು ಏರ್ಪಡುತ್ತವೆ. ಕಸಬುಗಳಲ್ಲಿ ಉಪಕರಣಗಳಲ್ಲಿ ಉತ್ಪಾದಿತ ವಸ್ತುವಿನ ಕಚ್ಚಾ ಸಾಮಗ್ರಿಗಳಲ್ಲಿ ಕೊಡು-ಕೊಳ್ಳುವಿಕೆ ನಡೆಯುತ್ತದೆ. ಇದು ಕುಶಲಕರ್ಮಿಗಳನ್ನು ಸಂಘಟಿತರನ್ನಾಗಿಸಲು ಪ್ರಯತ್ನಿಸುತ್ತದೆ. ಈಗಾಗಲೇ ಕುಶಲಕರ್ಮಿಗಳ ಹಿತರಕ್ಷಣೆಗಾಗಿ ೧೯೦೩ರ ಅವಧಿಯಲ್ಲಿ ಸಭೆ ಸಮಾವೇಶಗಳು ಏರ್ಪಟ್ಟು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ವಿಶ್ವಕರ್ಮ ಮಹಾಸಭಾಗಳು ಇಂತಹ ಸಭೆಗಳನ್ನು ಏರ್ಪಡಿಸಿ ವಿಚಾರಗೋಷ್ಠಿಗಳು ನಡೆದುದರ ಬಗ್ಗೆ ತಿಳಿದುಬರುತ್ತದೆ.

ರಾಷ್ಟ್ರಮಟ್ಟದಲ್ಲಿ 'ಅಖಿಲ ಭಾರತ ವಿಶ್ವಕರ್ಮ ಮಹಾಸಭಾ' ಸ್ಥಾಪನೆಗೊಂಡು ಪಂಚಕಸಬು ದಾರರ ಕುರಿತಾಗಿ ಗೋಷ್ಠಿಗಳನ್ನು ನಡೆಸಿದ್ದಾರೆ. ಪಾರಂಪರಿಕ ವೃತ್ತಿಗಳ ಮಹತ್ತತೆಯನ್ನು ಸಭೆ-ಸಮಾವೇಶಗಳಲ್ಲಿ ಕುಶಲಕರ್ಮಿಗಳಿಗೆ ತಿಳಿಹೇಳುವ ಕಾರ್ಯಗಳು ಸಾಗಿವೆ. ಇನ್ನು ಹತ್ತು ಹಲವಾರು ಸಂಘಟನೆಗಳು ಜನ್ಮತಾಳಬೇಕು. ಸಮುದಾಯದ ಹೆಸರಿನಿಂದ ಸಂಘಟನೆಗಳು ಹುಟ್ಟಿಕೊಳ್ಳುವುದಕ್ಕಿಂತ

ಉದ್ಯೋಗಗಳ ಹೆಸರಿನಲ್ಲಿ ಕರ್ನಾಟಕದಲ್ಲಿ ಸಂಘಗಳು ಸ್ಥಾಪನೆಗೊಳ್ಳಬೇಕು. 'ಪಂಚಾಳರ ಸಂಘ' ಎನ್ನುವುದಕ್ಕಿಂತ 'ಪಂಚಾಳ ಕುಶಲಕರ್ಮಿ ಸಂಘ' ಸ್ಥಾಪನೆಗೊಳ್ಳಬೇಕು. ಇಂತಹ ಒಂದು ಉದಾಹರಣೆಯಾಗಿ "ಟ್ರೆಡಿಷನಲ್ ಆರ್ಟಿಸಾನ್ಸ್ ಫೆಡರೇಷನ್ ಆಫ್ ಸೌಥ ಇಂಡಿಯಾ" (TAFSI) ಟಾಪ್ಸಿ ನಿಲ್ಲುತ್ತದೆ. ಕುಶಲಕರ್ಮಿಗಳ ನೋವು, ಅವರಿಗಾಗುವ ಅನ್ಯಾಯ, ಔದ್ಯೋಗಿಕವಾಗಿ ಅವರನ್ನು ಸಧೃಢಗೊಳಿಸುವ ವಿಚಾರಗಳು ಸಭೆ-ಸಮಾವೇಶಗಳಲ್ಲಿ ನಿರ್ಧಾರವಾಗ ಬೇಕು. ಕೆ.ವಿ.ಕೃಷ್ಣಮೂರ್ತಿಯವರು ಹೇಳುವಂತೆ 'ಕರ್ನಾಟಕದಾಚೆಗೆ ಕುಶಲಕರ್ಮಿಗಳಲ್ಲಿ ಜಾಗೃತಿ ಮೂಡಿಸುವ ಸಭೆ-ಸಮಾವೇಶ, ಸಂಘಟನೆಗಳು ಸಾಕಷ್ಟು ಇವೆ' ಎಂಬುದನ್ನು ತಿಳಿಸುತ್ತಾರೆ. ಕರ್ನಾಟಕದಲ್ಲಿ ಇಂತಹ ಕೆಲಸ ಇನ್ನಷ್ಟು ಆಗಬೇಕಿದೆ. ಕುಶಲಕರ್ಮಿಗಳ ಶ್ರೇಯೋಭಿವೃದ್ಧಿ ಗಾಗಿ ಸಭೆ-ಸಮಾವೇಶಗಳು ಏರ್ಪಡಬೇಕು.

೯. ಸಮುದಾಯದ ನಿರುದ್ಯೋಗಿಗಳಿಗೆ ಕುಲಕಸಬಿನ ವಸತಿ ತರಬೇತಿ ಕೇಂದ್ರಗಳ ನಿರ್ಮಾಣ: ಪಂಚಾಳ ಕುಶಲಕರ್ಮಿ ಸಮುದಾಯ ಪಂಚಕಸಬುಗಳ ಕಮ್ಮಟದ ಗುಮ್ಮಟ ಸಮುದಾಯದಲ್ಲಿ ಜನ್ಮತಾಳಿದ ಪ್ರತಿಯೊಂದು ಮಗುವಿಗೂ ಉದ್ಯೋಗ ಕಟ್ಟಿಟ್ಟ ಬುತ್ತಿ. ಕೆಲವರು ಜನ್ಮತಃ ಬಾಯಲ್ಲಿ ಚಿನ್ನದ ಚಮಚ ಇರಿಸಿಕೊಂಡು ಹುಟ್ಟಿದಂತೆ ಪಾಂಚಾಳರು ಜನ್ಮತಃ ಕೈಯಲ್ಲಿ ಉಳಿ-ಬಾಚಿ, ಸುತ್ತಿಗೆ ಕೊಡತಿ ಇರಿಸಿಕೊಂಡೆ ಹುಟ್ಟಿದವರಾಗಿದ್ದಾರೆ ಹೀಗಾಗಿ ಸಮುದಾಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಕಡಿಮೆ ಹಾಗಂತ ಸಮುದಾಯದವರೆಲ್ಲರೂ ಪಾರಂಪರಿಕ ಉದ್ಯೋಗಿಗಳಾಗಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಹೊಸ ಸಹಸ್ರಮಾನಕ್ಕಿಂತ ಪೂರ್ವದಲ್ಲಿ ಸಮುದಾಯದವರಲ್ಲಿ ಪಾರಂಪರಿಕ ಉದ್ಯೋಗಗಳು ಹೇರಳವಾಗಿ ಕಾಣಸಿಗುತ್ತಿದ್ದವು. ಕುಶಲಕರ್ಮಿಗಳ ಮನೆಯ ಮುಂದೆ 'ಅಡಿಬಡ್ಡಿ' ಮತ್ತು ತುಳಸಿಕಟ್ಟೆ ಇರುತ್ತಿತ್ತು. ಹೊಸ ಸಹಸ್ರಮಾನದಿಂದ ಈಚೆಗೆ ಪಂಚಾಳರ ಮನೆಯ ಮುಂದೆ 'ಅಡ್ಡಿಬಡ್ಡಿ' ಕಾಣುತ್ತಿಲ್ಲ. ತುಳಸಿಕಟ್ಟೆ ಪಕ್ಕಕ್ಕೆ ಸರಿದಿದೆ. ಪಾರಂಪರಿಕ ಉದ್ಯೋಗಿಗಳು ಕಡಿಮೆಯಾಗಿದ್ದಾರೆ. ಬೇರೆ ಬೇರೆ ಉದ್ಯೋಗಗಳ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ಪಾರಂಪರಿಕ ಉದ್ಯೋಗಗಳ ಮಹತ್ವವನ್ನು ಅರಿತು ಕೊಳ್ಳುತ್ತಿಲ್ಲ. ಶ್ರಮ ಸಂಸ್ಕೃತಿಯ ಮೂಸೆಯಲ್ಲಿ ಹುಟ್ಟಿಬರುವ ಕುಲಕಸಬುಗಳು ಗ್ರಾಮೀಣರ ಜೀವಾಳವಾಗಿವೆ. ಪಂಚಾಳರ ಪರತತ್ವಗ್ರಾಳಗಿವೆ. ಆದರೆ ಈ ಅರಿವು ಇಂದಿನ ಸಮುದಾಯದ ಯುವಕರಲ್ಲಿ ಕಂಡುಬರುತ್ತಿಲ್ಲ. ಮನುಕುಲಕ್ಕೆ 'ಜನನಿತಾನೇ ಮೊದಲ ಗುರು' ಆದರೆ ಪಾಂಚಾಳರಿಗೆ ಉದ್ಯೋಗ ಕಲಿಕೆಗೆ 'ತಂದೆ ತಾಯಿ ತಾನೇ ಮೊದಲ ಗುರು' ಆಗಿರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಸಂಬಂಧಿಕರು ಗುರು ಆಗುತ್ತಾರೆ.

ಪಂಚ ಕಸಬುಗಳ ಕಲಿಕೆಗೆ ತಂದೆ ಗುರುವಾಗುತ್ತಾನೆ. ತಂದೆಯ ಅನುಕರಣೆ ಮಗನಲ್ಲಿ ಬೆಳೆಯುತ್ತದೆ. ಪಂಚ ಕಸಬುಗಳು ತಂದೆಯಿಂದ ಮಗನಿಗೆ ಅನುವಂಶಿಕವಾಗಿ ರೂಢಿಗತವಾಗುತ್ತವೆ.

ಇದರಿಂದಾಗಿ ಪಾಂಚಾಳ ಕುಶಲಕರ್ಮಿಗಳಿಗೆ ಸಮುದಾಯದಲ್ಲಿ ಉದ್ಯೋಗಗಳ ಕೊರತೆ ಯುಂಟಾಗಲಾರದು ಆದರೆ ಸ್ವಯಂ ಸಮುದಾಯದ ಯುವಕರು ನಿರುದ್ಯೋಗವನ್ನು ಸೃಷ್ಟಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈಗಿನವರು ಉಳಿ-ಬಾಚಿ-ಕೊಡತಿಗಳನ್ನು ಕೈಯಲ್ಲಿ ಹಿಡಿಯಲು ನಿರಾಕರಿಸುತ್ತಾರೆ. ನಾಚಿಕೆಪಟ್ಟುಕೊಳ್ಳುತ್ತಿದ್ದಾರೆ. ತಂದೆಯ ಜೊತೆ ಸಹಾಯಕರಾಗಿ ಶ್ರಮಿಸಲು ಹಿಂದೆ ಮುಂದೆ ನೋಡುವಂತ ಪರಿಸ್ಥಿತಿ ಸಮುದಾಯಕ್ಕೆ ಬಂದೊದಗಿದೆ. ಪಂಚ ಕಸಬುಗಳು ಸಮುದಾಯದ ಯುವಕರಿಂದ ದೂರವಾಗುತ್ತಿವೆ. ಆಧುನಿಕ ಶೈಕ್ಷಣಿಕ ಅರ್ಹತೆಗಳನ್ನು ಗಳಿಸಿದವರು ಕಂಬಾರ, ಬಡಿಗ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿ ವೃತ್ತಿಗಳೆಂದರೆ ಮೂಗು ಮುರಿಯುತ್ತಾರೆ. ಮತ್ತೊಂದು ಉದ್ಯೋಗವು ದೊರೆಯಲಾರದೆ ನಿರುದ್ಯೋಗಿಗಳಾಗಿ ಅಲೆದಾಡುವ ದುಃಸ್ಥಿತಿ ಸಮುದಾಯದಲ್ಲಿ ಕಂಡುಬರುತ್ತಿದೆ.

ಪಾರಂಪರಿಕ ಉದ್ಯೋಗಗಳ ಬಗ್ಗೆ ನಿರ್ಲಕ್ಷ್ಯ ಕೀಳರಿಮೆ ಹೊಂದಿದ ಸಮುದಾಯದ ಯುವಕರಿಗೆ ಕುಲಕಸಬುಗಳ ಮಹತ್ವವನ್ನು ತಿಳಿಸಿಕೊಡಬೇಕಾಗಿದೆ. ದುಡಿಯುವ ಕೈಗಳಲ್ಲಿ ಉದ್ಯೋಗಗಳನ್ನು ಕಲಿಸಿಕೊಡಬೇಕಾಗಿದೆ. ಸಮುದಾಯದಲ್ಲಿಯ ನಿರುದ್ಯೋಗತನವನ್ನು ಹೋಗಲಾಡಿಸಬೇಕು. ಪಂಚ ಕಸಬುಗಳನ್ನು ಕಲಿಸುವ ದೃಷ್ಟಿಯಿಂದ ಸಮುದಾಯದಲ್ಲಿ ವಸತಿ ತರಬೇತಿ ಕೇಂದ್ರಗಳನ್ನು ನಿರ್ಮಿಸಬೇಕು. ಇತರ ತರಬೇತಿ ಕೇಂದ್ರಗಳು ಯುವಕರಿಗೆ ಸ್ವಯಂ ಉದ್ಯೋಗ ಕೈಕೊಳ್ಳಲು ಅನುಕೂಲವಾಗುವಂತೆ ಪಂಚಾಳ ಸಮುದಾಯದಲ್ಲಿ ಐದು ಬಗೆಯ ವೃತ್ತಿ ಕಲಿಕೆಯ ವಸತಿ ಸಹಿತ ತರಬೇತಿ ಕೇಂದ್ರಗಳು ನಿರ್ಮಾಣವಾದರೆ ಸಮುದಾಯದಲ್ಲಿ ನಿರುದ್ಯೋಗತನವೇ ಇರುವುದಿಲ್ಲ ಆರ್ಥಿಕ ಸಂಕಷ್ಟಗಳು ಸಮುದಾಯದಲ್ಲಿ ಕಂಡುಬರುವುದಿಲ್ಲ.

ಬೆಳಗಾವಿಯ ಹ್ಯಾಮರಸನ್ಸ್ ಗೋಲ್ಡ ಆರ್ಟಿಕಲ್ಸ್ ಪ್ರೈ. ಲಿ ಇವರು ಸಮುದಾಯದ ಯುವಕರಿಗೆ ಬಂಗಾರ ಆಭರಣಗಳ ತಯಾರಿಕೆಯನ್ನು ಕಲಿಸಿಕೊಡುವ ಪ್ರಯತ್ನ ಮಾಡುತ್ತಿದ್ದಾರೆ. ವಸತಿ ಮತ್ತು ಊಟದ ವ್ಯವಸ್ಥೆಯೊಂದಿಗೆ ತರಬೇತಿದಾರರಿಗೆ ಪ್ರಮಾಣ ಪತ್ರ ನೀಡುತ್ತಾರೆ. ಸ್ವಯಂ ಉದ್ಯೋಗ ರೂಪಿಸಿಕೊಳ್ಳಲು ಸಹಾಯ-ಸಹಕಾರ ನೀಡುವ ಸಂಸ್ಥೆಗಳು ಸಮುದಾಯದಲ್ಲಿರು ವುದು ವಿಶೇಷ. ಬೆಂಗಳೂರಿನ ಶ್ರೀ ಮಾರ್ಕಂಡೇಶ್ವರಿ ವುಡ್‌ಕ್ರಾಪ್ಟ್ ಮತ್ತು ಡಿಸೈನ್‌ಸೆಂಟರ್‌ನಲ್ಲಿಯೂ ಯುವಕರಿಗೆ ವಸತಿ, ಊಟದ ವ್ಯವಸ್ಥೆ ನೀಡಿ ಉದ್ಯೋಗಗಳ ತರಬೇತಿ ನೀಡುತ್ತಾರೆ. ವುಡ್‌ಕಾರ್ಮಿಂಗ್/ (ಸುಳುವಿನ) ಡೋರವಿಂಡೋ ಮುಂತಾದ ಮರಗೆಲಸಗಳಿಗೆ ಆದ್ಯತೆ ಇರುತ್ತದೆ. ರಾಮನಗರದ ಕೆಪಿಜೆ ಪ್ರಭು ಕರಕುಶಲ ತರಬೇತಿ ಸಂಸ್ಥೆಯವರು ಕೆನರಾಬ್ಯಾಂಕಿನ ಪ್ರಾಯೋಜಕತ್ವದಲ್ಲಿ 'ಉಚಿತ ಶಿಲ್ಪಕಲಾ ಶಿಕ್ಷಣ'ತರಬೇತಿ ನೀಡುತ್ತಾರೆ. ಮರ ಮತ್ತು ಕಲ್ಲು ಕೆತ್ತನೆ ಹಾಗೂ ಲೋಹಶಿಲ್ಪ, ಕುಂಭಕಲೆ (ಟೆರ್ರಾಕೋಟಾ) ವಿಭಾಗಗಳಲ್ಲಿ ೧೮ ತಿಂಗಳು ತರಬೇತಿ ನೀಡಿ ಸಮುದಾಯದವರಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆಂದು ಸಂಸ್ಥೆಯ ನಿರ್ದೇಶಕ ವೆಂಕಟೇಶ ಶೇಷಾದ್ರಿ ಹೇಳುತ್ತಾರೆ. ತರಬೇತಿ

ಅವಧಿಯಲ್ಲಿ ಉಚಿತ ಊಟ, ವಸತಿ, ಸಮವಸ್ತ್ರ, ಉಪಕರಣ, ಕಚ್ಚಾ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಹೀಗೆ ಒಂದೆರಡು ಉದಾಹರಣೆಗಳನ್ನು ತರಬೇತಿ ಕೇಂದ್ರಗಳ ಸೇವೆಗಳನ್ನು ಗಮನಿಸಬಹುದಾಗಿದೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಶಿಲ್ಪಗಾರಿಕೆಯ ಕುರಿತು ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಕಂಚುಗಾರಿಕೆ ಮತ್ತು ಕಂಬಾರ ಉದ್ಯೋಗಗಳ ಕುರಿತು ತರಬೇತಿ ಕೇಂದ್ರಗಳು ಕಂಡುಬರುತ್ತಿಲ್ಲ. ಪಂಚ ಕಸಬುಗಳ ಪ್ರತ್ಯೇಕ ತರಬೇತಿ ಕೇಂದ್ರಗಳಿವೆ. ಆದರೆ ಪಂಚ ಕಸಬುಗಳನ್ನು ಒಂದೇ ಕಡೆ ಏಕಕಾಲದಲ್ಲಿ ನೀಡಬಲ್ಲ ತರಬೇತಿ ಕೇಂದ್ರಗಳು ನಿರ್ಮಾಣವಾಗಬೇಕಿವೆ. ಸರಕಾರ ಮತ್ತು ಸಮುದಾಯ ಈ ನಿಟ್ಟಿನಲ್ಲಿ ಕೆಲಸಮಾಡಿದರೆ, ಕನಿಷ್ಠ ಜಿಲ್ಲೆಗೊಂದು ಪಂಚಾಳರ ಪಂಚಕಸಬುಗಳ ತರಬೇತಿ ಕೇಂದ್ರಗಳು ಸ್ಥಾಪನೆಯಾಗಬೇಕು. ಇದರಿಂದ ಸಮುದಾಯ ಸುಶಿಕ್ಷಿತ, ಪದವೀಧರ ನಿರುದ್ಯೋಗಿಗಳಿಗೆ ಉದ್ಯೋಗ ತರಬೇತಿ ನೀಡಿ ಸ್ವಯಂ ಉದ್ಯೋಗಿಗಳಾಗಿಸಲು ಸಾಧ್ಯವಾಗುತ್ತದೆ. ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲಿಯೂ ಪಂಚಾಳರ ಪಂಚ ಕಸಬುಗಳ ತರಬೇತಿ ಮಹಾವಿದ್ಯಾಲಯಗಳನ್ನು ಸರ್ಕಾರ ಸ್ಥಾಪಿಸಬೇಕು. ೩೦ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ 'ವಿಶ್ವಕರ್ಮ ವಿಶ್ವವಿದ್ಯಾಲಯ' ಸ್ಥಾಪನೆಯಾಗಬೇಕು. ಅದು ಪಂಚ ಕಸಬುಗಳ ಶಕ್ತಿ ಕೇಂದ್ರವಾದ ಶಿರಸಂಗಿಯಲ್ಲಿ ವಿಶ್ವವಿದ್ಯಾಲಯ ರೂಪಗೊಳ್ಳಬೇಕು. ಇದರಿಂದ ಸಮುದಾಯದ ಯುವಕರಿಗೆ ಪಾರಂಪರಿಕ ಉದ್ಯೋಗಗಳ ಕುರಿತು ಆಸಕ್ತಿ ಮೂಡಿಸಲು ಸಾಧ್ಯ. ಪಾರಂಪರಿಕ ಉದ್ಯೋಗಗಳ ವಾರಸುದಾರರಾಗಲು ಅನುಕೂಲವಾಗುತ್ತದೆ.

೧೦. ಕುಲಕಸಬಿನ ಉತ್ಪಾದಿತ ವಸ್ತುಗಳ ಮುಕ್ತ ಸಾಗಾಣ ಮಾರಾಟ ವ್ಯವಸ್ಥೆ: ಪಂಚಾಳ ಕುಶಲಕರ್ಮಿಗಳು ಶ್ರಮದಾಯಕರು ದಿನಕ್ಕೆ ಶಕ್ತಿ ಮೀರಿ ದುಡಿಯುತ್ತಾರೆ. ಕಾಯಕದಲ್ಲಿ ನಿರತರಾದರೆ ಯಾವುದನ್ನು ಗಮನಿಸುವುದಿಲ್ಲ. ಒಂದೆರಡು ಗಂಟೆ ಹೆಚ್ಚಿನ ಸಮಯ ಶ್ರಮಿಸಲು ತಯಾರಿರುತ್ತಾರೆ. ಒಂದು ಅವಧಿಯೊಳಗೆ ವಸ್ತು ತಯಾರಿಸಬೇಕೆಂದರೆ ತಯಾರಿಸಿಯೇ ಬಿಡುತ್ತಾರೆ. ಕುಶಲಕರ್ಮಿಗಳು ದುಡಿಯುವುದರಲ್ಲಿ ಡಾಂಭಿಕತನ ತೋರಿಸುವುದಿಲ್ಲ. ಅದ್ಭುತವಾದ ವಸ್ತುಗಳನ್ನು ತಯಾರಿಸಿ ಇತರ ಸಮುದಾಯಕ್ಕೆ ಕೊಡುಗೆಯಾಗಿ ನೀಡುವ ಜ್ಞಾನವಿದೆ. ಕಬ್ಬಿಣ, ಮರ, ಕಂಚು-ಹಿತ್ತಾಳೆ, ಶಿಲೆ ಮತ್ತು ಚಿನ್ನ-ಬೆಳ್ಳಿಗಳಲ್ಲಿ ಸುಂದರವಾದ ಮತ್ತು ಶಕ್ತಿಯುತ ವಸ್ತುಗಳನ್ನು ಉತ್ಪಾದಿಸುತ್ತಾರೆ. ಪಾಂಚಾಳರು ಉತ್ಪಾದಿಸಿದ ವಸ್ತುಗಳು ಹಳ್ಳಿಗರಿಗೆ ಅತ್ಯಂತ ಉಪಯುಕ್ತವಾದುದು. ಕುಶಲಕರ್ಮಿಗಳು ನಿರ್ಮಿಸಿದ ಅಪೂರ್ವ ವಸ್ತುಗಳು ಇಂದಿಗೂ ಜನಮಾನಸದಲ್ಲಿ ಜೀವಂತವಾಗಿವೆ. ಕಣ್ತುಂಬ ನೋಡಿ ಆನಂದ ಪಡುವಂತೆ ಸ್ಮಾರಕಗಳಾಗಿ ದೇಗುಲಗಳಾಗಿ ಸಾಕ್ಷಿಯಾಗಿ ನಿಂತಿವೆ.

ಸಮುದಾಯಕ್ಕೆ ವಸ್ತು ಉತ್ಪಾದಿಸುವ ಕಲೆಗಾರಿಕೆ ದೇವರ ಕೊಡುಗೆ. ಆಧುನಿಕ ಸಂದರ್ಭದಲ್ಲಿ ವಸ್ತು ಉತ್ಪಾದಿಸುವ ಜ್ಞಾನವಿದ್ದರೆ ಸಾಲದು. ಉತ್ಪಾದಿತ ವಸ್ತುಗಳನ್ನು ಮುಕ್ತವಾಗಿ ಸಾಗಾಟ ಮತ್ತು ಮಾರಾಟ ಮಾಡುವ ಬುದ್ಧಿವಂತಿಕೆಯು ಅವಶ್ಯಕವಾಗಿದೆ. ಕುಶಲಕರ್ಮಿ ಉತ್ಪಾದಿಸುವ

ಕೃಷಿಯೋಪಕರಣ ಗೃಹೋಪಕರಣ ಮತ್ತು ಇತರೆ ವಸ್ತುಗಳು ವಿಶೇಷವಾಗಿ ಚಾಲಿತ ವಸ್ತುಗಳು, ರೆಂಟೆ-ಕುಂಟೆ-ಕೂರಿಗೆ, ಬಾಗಿಲು, ಕಿಟಕಿ, ಗೋಡೆಗೂಟ, ಹುಟ್ಟು, ಹೋಳಿಗೆ ಮಣಿ, ಕೂಡ್ರೂವ ಮಣಿ, ಶ್ಯಾವಿಗೆ ಮನೆ, ಕೊಮ್ಮಣಗಿ, ಟೇಬಲು, ಕುರ್ಚಿ ಸೋಫಾಸೆಟ್, ಡೈನಿಂಗ್ ಟೇಬಲ್ ಸೆಟ್, ಕಡಗೋಲು, ಬಾರಕೋಲು ಮುಂತಾದ ಕುಶಲಕರ್ಮಿ ನಿರ್ಮಿತ ವಸ್ತುಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುವ ಚಾಲಿತ ವಸ್ತುಗಳಾಗಿವೆ. ಇವುಗಳೊಂದಿಗೆ ಚಿಕ್ಕ ಮಕ್ಕಳ ಆಟಿಕೆ ವಸ್ತು, ಬ್ಯಾಟು, ಸ್ಟಂಪುಗಳನ್ನು ಉತ್ಪಾದಿಸಲಾಗುತ್ತದೆ. ಇವುಗಳನ್ನು ಮುಕ್ತವಾಗಿ ಸಾಗಾಟಮಾಡಿ, ಮಾರಾಟ ಮಾಡುವ ಕಲೆಗಾರಿಕೆಯನ್ನು ಪಂಚಾಳ ಕುಶಲಕರ್ಮಿಗಳು ಕಲಿತುಕೊಳ್ಳಬೇಕಾಗಿದೆ. ಕುಶಲಕರ್ಮಿಗಳ ಕಾರ್ಯಾಗಾರದಲ್ಲಿ ತಯಾರಾದ ವಸ್ತುಗಳ ಬೆಲೆಯು ಮಾರುಕಟ್ಟೆಯಲ್ಲಿ ಇಮ್ಮಡಿಗೊಂಡಿರುತ್ತದೆ. ಮನೆ ಹಾಗೂ ಕಚೇರಿ ಸಾಮಗ್ರಿಗಳನ್ನು ತಯಾರಿಸುವಲ್ಲಿ ಕುಶಲಕರ್ಮಿಗಳು ನುನುಪುಳ್ಳ ಕಟ್ಟಿಗೆಯನ್ನು ಬಳಸುತ್ತಾರೆ. ಸಾಮಾನ್ಯವಾಗಿ ತೇಗು, ಬಾರಿ, ಮಲೆನಾಡಿನ ನಾನಾ ಕಟ್ಟಿಗೆಯನ್ನು ಹೆಚ್ಚಾಗಿ ಬಳಸಲಾಗುತ್ತದೆ. ವಸ್ತುಗಳನ್ನು ತಯಾರಿಸಲು ಮಲೆನಾಡಿನ ನಾನಾಕಟ್ಟಿಗೆಗಳನ್ನು ಸಾಗಿಸಿಕೊಂಡು ಕಾರ್ಯಾಗಾರಗಳಿಗೆ ತರುವುದು ಕುಶಲಕರ್ಮಿಗಳಿಗೆ ತೊಂದರೆದಾಯಕ ಕಾರ್ಯವಾಗಿದೆ. ಮುಕ್ತ ಸಾಗಾಟ ವ್ಯವಸ್ಥೆ ಕುಶಲಕರ್ಮಿಗಳಿಗಿಲ್ಲ. ಅರಣ್ಯ ಇಲಾಖೆ, ಪೊಲೀಸ್ ಇಲಾಖೆಗಳ ಹೆದರಿಕೆ-ಬೆದರಿಕೆಯೊಂದಿಗೆ ಕಚ್ಚಾ ಮರದ ತುಂಡುಗಳನ್ನು ಸಾಗಾಟ ಮಾಡಬೇಕಾಗಿದೆ. ಅನಂತರದಲ್ಲಿ ವಸ್ತು ಉತ್ಪಾದಿಸಿದ ಮೇಲೆ ಮಾರಾಟ ಮಾಡಲು ಮುಕ್ತ ಅವಕಾಶಗಳು ಕುಶಲಕರ್ಮಿಗಳಿಗೆ ದೊರೆಯುತ್ತಿಲ್ಲ.

ಪಂಚಾಳ ಕುಶಲಕರ್ಮಿ ಸಮುದಾಯಕ್ಕೆ ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಲು, ಕೃಷಿ ಉತ್ಪನ್ನ ಮಾರುಕಟ್ಟೆ, ನಗರಸಭೆ, ಪುರಸಭೆ ಮತ್ತು ಗ್ರಾಮ ಪಂಚಾಯತಿ ಮಳಿಗೆಗಳಲ್ಲಿ ಕೆಲವು ಅಂಗಡಿಗಳನ್ನು ಕುಶಲಕರ್ಮಿಗಳಿಗೆ ಮೀಸಲಿರಿಸಬೇಕು. ಕುಶಲಕರ್ಮಿಗಳು ನೇರವಾಗಿ ಮಾರಾಟ ಮಾಡುವ ವ್ಯವಸ್ಥೆಯಾಗಬೇಕು. ಇತ್ತೀಚೆಗೆ ಸರಕಾರ ನಾನಾ ಕಟ್ಟಿಗೆಗಳ ಸರಕು ಖರೀದಿಯಲ್ಲಿ ಸ್ವಲ್ಪಮಟ್ಟಿಗೆ ಕಾನೂನು ಸಡಿಲಿಕೆ ಮಾಡಿದೆ. ಮನೆ ಕಟ್ಟಿಸುವ ಮಾಲೀಕ ಕುಶಲಕರ್ಮಿಯ ಶಿಫಾರಸ್ಸಿನನ್ವಯ ಅನಿಯಮಿತ ಘನಪೂಟ್ ಕಟ್ಟಿಗೆಯನ್ನು ಜೀವಮಾನದಲ್ಲಿ ಒಂದು ಸಾರಿ ಮಾತ್ರ ಖರೀದಿಸಲು ಅನುಮತಿಯಿದೆ. ಆದರೆ ಇದು ನೇರವಾಗಿ ಕುಶಲಕರ್ಮಿಗೆ ಯಾವುದೇ ತರಹದ ಅನುಕೂಲವಾಗುವುದಿಲ್ಲ. ಮನೆಕಟ್ಟುವ ಮಾಲೀಕನಿಗೆ ಒಂದು ಸಾರಿ ಅನುಮತಿಸಿದರೆ, ಕುಶಲಕರ್ಮಿಗೆ ಜೀವಮಾನದುದ್ದಕ್ಕೂ ಮರದ ತುಂಡುಗಳ ಸಾಗಾಟ ಮತ್ತು ವಸ್ತುಗಳ ಮಾರಾಟ ಮುಕ್ತವಾಗಬೇಕು.

ಕುಶಲಕರ್ಮಿಗಳು ವಸ್ತು ತಯಾರಕರಾಗುವುದರ ಜೊತೆ ವ್ಯಾಪಾರಿ ಮನೋಧರ್ಮದವರಾಗಬೇಕು. ಹೊರಗಿನ ವ್ಯಾಪಾರಿಗೆ ಹೆಚ್ಚು ಲಾಭವಾಗುವುದನ್ನು ತಪ್ಪಿಸಿ, ದುಡಿಮೆದಾರನೇ

ವ್ಯಾಪಾರ ಮಾಡಿದರೆ ಆರ್ಥಿಕವಾಗಿ ಅನುಕೂಲಸ್ಥನಾಗುತ್ತಾನೆ. ಕುಶಲಕರ್ಮಿ ಕಾರ್ಯಾಗಾರದ ಜೊತೆ ಅದೇ ಸ್ಥಳದಲ್ಲಿ ಸ್ವಲ್ಪಭಾಗ ಮಾರಾಟ ಮಳಿಗೆ ಸ್ಥಾಪಿಸಬೇಕು. ಮಧ್ಯವರ್ತಿಗಳು ಪಡೆಯುವ ಲಾಭಾಂಶವನ್ನು ನೇರವಾಗಿ ಕುಶಲಕರ್ಮಿಗಳು ಪಡೆಯುವಂತಾಬೇಕು. ಜುಲೈ ೧, ೨೦೧೭ರಂದು ಜಾರಿಗೆ ಬಂದ ಸರಕು ಮತ್ತು ಸಾಗಾಟ ತೆರಿಗೆ (GST) ಚಿಕ್ಕ ಚಿಕ್ಕ ವ್ಯಾಪಾರಿಗಳಿಗೆ ಅನುಕೂಲಕರವಿದೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯ. ಕರ್ನಾಟಕದಲ್ಲಿ ಉಳುವವನೇ ಒಡೆಯ ಎಂಬ ಕೃಷಿನೀತಿ ಜಾರಿಗೆ ಬಂದಂತೆ, 'ಉತ್ಪಾದಕನೇ ವ್ಯಾಪಾರಿ' ಎಂಬ ಕೈಗಾರಿಕಾ ನೀತಿ ಜಾರಿಯಾಗಬೇಕು. ಇದರಿಂದ ಕುಶಲಕರ್ಮಿಗಳ ಉತ್ಪಾದಿತ ವಸ್ತುಗಳಿಗೆ ನ್ಯಾಯಬೆಲೆ ದೊರೆಯುತ್ತದೆ. ಕುಶಲಕರ್ಮಿ ಸಮುದಾಯವು ಆರ್ಥಿಕವಾಗಿ ಬಲಗೊಳ್ಳುತ್ತದೆ.

೧೧. ಸರಕಾರ ಮತ್ತು ಸಮುದಾಯ ಅಭಿವೃದ್ಧಿ ನಿಗಮದ ಸೌಲಭ್ಯಗಳ ಅರಿವು: ಕರ್ನಾಟಕದ ಕುಶಲಕರ್ಮಿ ಸಮುದಾಯದ ಅಭಿವೃದ್ಧಿಯಾಗಬೇಕು. ಸಮುದಾಯದ ಪಂಚ ಕಸಬುಗಳು ಪುನಶ್ಚೇತನಗೊಳ್ಳಬೇಕು ಸಮುದಾಯ ಮತ್ತು ಸಮುದಾಯಿಕ ಉದ್ಯೋಗಗಳು ಜೊತೆ ಜೊತೆಯಲ್ಲಿ ಮುನ್ನಡೆಯಬೇಕಾಗಿದೆ. ಉದ್ಯೋಗಗಳಲ್ಲಿ ಸ್ಥಿರತೆ ಕಂಡುಕೊಳ್ಳಬೇಕಾಗಿದೆ. ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದವರೆಗೂ ಪಂಚಾಳರ ಪಂಚ ಕಸಬುಗಳಿಗೆ ಪ್ರೋತ್ಸಾಹ ದೊರೆಯಬೇಕಾಗಿದೆ. ಇದಕ್ಕೆ ಸಮುದಾಯ ಒಂದೇ ಪ್ರಯತ್ನಿಸಿದರೆ ಸಾಲದು ಕುಶಲಕರ್ಮಿ ಸಮುದಾಯ ಮತ್ತು ಉದ್ಯೋಗಗಳ ಅಭಿವೃದ್ಧಿಗಾಗಿ ಸರಕಾರಗಳು ಮನಸ್ಸು ಮಾಡಬೇಕು. ರಾಜ-ಮಹಾರಾಜರ ಕಾಲದಲ್ಲಿ ಪ್ರಭುಗಳು ಪಂಚ ಕಸಬುಗಳ ಪೋಷಕರಾಗಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರವೇ ಪಂಚಕಸಬು ಮತ್ತು ಕಸಬುದಾರರ ರಕ್ಷಣೆ ಮಾಡಬೇಕಾಗಿದೆ. ದೇಶದಲ್ಲಿ ಕುಶಲಕರ್ಮಿಗಳ ಹಿತದೃಷ್ಟಿಗಾಗಿ 'ಪಾರಂಪರಿಕ ಕುಶಲಕರ್ಮಿಗಳ ಕ್ಷೇಮಾಭಿವೃದ್ಧಿ ಪ್ರಾಧಿಕಾರ' ರಚಿಸಬೇಕೆಂದು ೨೦೦೬ರಿಂದಲೇ ಸಮುದಾಯ ಒತ್ತಾಯಿಸುತ್ತ ಬಂದಿದೆ.

ಕರ್ನಾಟಕದಲ್ಲಿ ಕುಲಕಸಬುದಾರರ ಏಳ್ಗೆಗಾಗಿ ಸರಕಾರ ನಿಗಮ ಸ್ಥಾಪಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ/೨೩೩/ಬಿಸಿಎ/೨೦೧೩ ದಿನಾಂಕ ೦೩/೦೨/೨೦೧೪ ರನ್ವಯ ಬೆಂಗಳೂರಿನಲ್ಲಿ 'ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮವನ್ನು ದಿನಾಂಕ ೨೮.೦೨.೨೦೧೪ರಂದು ಸ್ಥಾಪಿಸಲಾಗಿದೆ. ವಿಶ್ವಕರ್ಮ ಸಮುದಾಯದವರು ಆರ್ಥಿಕವಾಗಿ ಸದೃಢಗೊಳ್ಳಲು ಸಾಲ ಸೌಲಭ್ಯಗಳನ್ನು ನೀಡುವುದು ಮತ್ತು ಪಂಚ ಕಸಬುಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ವೃತ್ತಿ ಕೌಶಲ್ಯ ಹೆಚ್ಚಿಸುವುದು. ಕಸಬು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರಗಳ ಸ್ಥಾಪನೆಯ ಧ್ಯೇಯೋದ್ದೇಶವನ್ನು ಹೊತ್ತುಕೊಂಡು ನಿಗಮ ಸ್ಥಾಪನೆಯಾಗಿದೆ.

ನಿಗಮವು ಸಮುದಾಯ ಮತ್ತು ಪಂಚ ಕಸಬುಗಳಿಗೆ ಉತ್ತೇಜನ ನೀಡಲು ಕೆಲವು ಯೋಜನೆಗಳನ್ನು ರೂಪಿಸಿಕೊಂಡಿದೆ. ೧. ಕಂಬಾರ, ಬಡಿಗ, ಕಂಚುಗಾರ ಶಿಲ್ಪಿ ಮತ್ತು ಅಕ್ಕಸಾಲಿ ಉದ್ಯೋಗಗಳ ಅಭಿವೃದ್ಧಿಗೆ ಹಣಕಾಸಿನ ನೆರವು. ೨. ಸ್ವಯಂ ಪಂಚಕಸಬು ಕೈಕೊಳ್ಳಲು ನೇರಸಾಲ ಯೋಜನೆ ೩. ಬ್ಯಾಂಕುಗಳ ಜೊತೆಗೂಡಿ ಸ್ವಯಂ ಉದ್ಯೋಗ ನಿರ್ವಹಿಸಲು ಸಾಲ ೪. ಅರಿವು ಶೈಕ್ಷಣಿಕ ಸಾಲ ಮತ್ತು ೫. ಸಮುದಾಯದ ರೈತ ಕುಶಲಕರ್ಮಿಗಳಿಗೆ ನೀರಾವರಿ ಕಲ್ಪಿಸಲು ಗಂಗಾ ಕಲ್ಯಾಣ ಯೋಜನೆಗಳನ್ನು ರೂಪಿಸಲಾಗಿದೆ. ಈ ಯೋಜನೆಗಳನ್ನು ಪಡೆಯಲು ಫಲಾನುಭವಿ ೧೮ ರಿಂದ ೫೫ ವರ್ಷದವರಾಗಿರಬೇಕು. ಆದರೆ ಅರಿವು ಶೈಕ್ಷಣಿಕ ಸಾಲಕ್ಕೆ ೩೨ ವಯಸ್ಸು ನಿಗಧಿಪಡಿಸಲಾಗಿದೆ. ಸಮುದಾಯದ ಪಿಎಚ್.ಡಿ ಅಭ್ಯರ್ಥಿಗಳಿಗೆ ಈ ಸಾಲ ಪಡೆಯದಂತಾಗಿದೆ. ಕಾರಣ ಪಿಎಚ್.ಡಿ ಅಧ್ಯಯನೀಸಲು ವಯಸ್ಸಿನ ನಿರ್ಬಂಧತನವಿಲ್ಲ ಹೀಗಾಗಿ ೩೦ ವರ್ಷ ಮೇಲ್ಪಟ್ಟವರು ಸಮುದಾಯದಲ್ಲಿ ಸಂಶೋಧನೆ ಮಾಡುತ್ತಿರುತ್ತಾರೆ. ಅಂಥವರಿಗೂ ಅರಿವು ಶೈಕ್ಷಣಿಕ ಸಾಲ ಯೋಜನೆ ಉಪಯುಕ್ತವಾಗಬೇಕು. ಹೀಗಾಗಿ ಪಿಎಚ್.ಡಿ ಸಂಶೋಧಕರಿಗೆ ವಯಸ್ಸಿನ ಮಿತಿಯನ್ನು ಸಡಿಲಿಸಬೇಕು. ಹಿಂದುಳಿದ ವರ್ಗಗಳ ಆಯೋಗ ಸರಕಾರಕ್ಕೆ ಪ್ರಸ್ತಾವಣೆ ತುರ್ತಾಗಿ ಸಲ್ಲಿಸಿ ಸರಕಾರದಿಂದ ಸಂಶೋಧನ ವಿದ್ಯಾರ್ಥಿಗಳಿಗೆ ಅನುಕೂಲವಾಗಿಸಬೇಕು.

ಕಸಬುದಾರರು ವೃತ್ತಿಯ ಅಭಿವೃದ್ಧಿಗಾಗಿ, ಆಧುನಿಕ ಉಪಕರಣ ಖರೀದಿ, ಉದ್ಯೋಗಗಳಲ್ಲಿ ತಾಂತ್ರಿಕತೆಯ ಬಳಕೆಗೆ ಶೇ. ೪ರ ಬಡ್ಡಿ ದರದಲ್ಲಿ ೪೦ ಸಾವಿರ ಸಾಲ ಸೌಲಭ್ಯಗಳಿವೆ ಆದರೆ ಒಂದು ನಿಯಮವೆಂದರೆ ನಿಗಮದಿಂದ ಒಂದು ಸಾರಿ ಸಾಲ ಪಡೆದರೆ ಮತ್ತೊಮ್ಮೆ ಅವಕಾಶವಿರುವುದಿಲ್ಲ ಇಲ್ಲಿಯ ಮೂಲ ಉದ್ದೇಶ ಕರ್ನಾಟಕದ ೪೦ ಲಕ್ಷ ಕುಶಲಕರ್ಮಿ ಸಮುದಾಯಕ್ಕೆ ಯೋಜನೆ ಮುಟ್ಟುವುದು ಮತ್ತು ಫಲಾನುಭವಿ ಸಾಲವನ್ನು ಉದ್ದೇಶಿತ ಕಾರ್ಯಗಳಿಗೆ ಮಾತ್ರ ಬಳಸಿಕೊಂಡು ನಿಗದಿತ ಅವಧಿಯಲ್ಲಿ ಹಿಂತಿರುಗಿಸುವುದಾಗಿದೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆ (ಎನ್.ಬಿ.ಸಿ.ಎಫ್.ಡಿ.ಸಿ) ಗಳಲ್ಲಿ ಮಹಿಳೆಯರಿಗಾಗಿ ಯೋಜನೆ ರೂಪಿಸಲಾಗಿದೆ. ನ್ಯೂಸ್ವರ್ಣಿಮಾ ಯೋಜನೆಯಲ್ಲಿ ಸಮುದಾಯದ ಮಹಿಳೆಯ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಭಿತನ ಉಂಟಾಗಲು ಉದ್ಯೋಗ ಕೈಕೊಳ್ಳಲು ಸಾಲಸೌಲಭ್ಯಗಳಿವೆ. ಮಹಿಳೆಯರು ಈ ಯೋಜನೆಗಳನ್ನು ತಿಳಿದುಕೊಂಡು ಸಾಲ ಪಡೆದು ಸ್ವಾವಲಂಭಿಗಳಾಗಬೇಕಿದೆ. ಮಹಿಳೆಯರ ಸ್ವ-ಸಹಾಯ ಸಂಘ ಅಥವಾ ಗುಂಪುಗಳ ಮೂಲಕ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ನಿಗಮ ಸಹಾಯ ಮಾಡುತ್ತದೆ.

ಸಮುದಾಯ ಮತ್ತು ಉದ್ಯೋಗಗಳ ಕೌಶಲ್ಯಾಭಿವೃದ್ಧಿಗಾಗಿ ನಿಗಮ ಸಾಲ ಸೌಲಭ್ಯಗಳು ನೀಡಲು ಮುಂದಾಗಿದೆ. ಇದು ಸ್ವಲ್ಪ ಮಟ್ಟಿಗೆ ಪಂಚ ಕಸಬುದಾರರಿಗೆ ಅನುಕೂಲವಾಗಿದೆ. ನಿಗಮದ

ಕುರಿತಾಗಿ ಸಮುದಾಯದಲ್ಲಿ ಇನ್ನು ಹೆಚ್ಚಿನ ಮಾಹಿತಿಗಳು ದೊರೆಯಬೇಕಾಗಿದೆ. ನಿಗಮದ ಸಾಲ ಸೌಲಭ್ಯ ಯೋಜನೆಗಳು ಕುಶಲಕರ್ಮಿಯ ಬಡಿಗ, ಕಂಬಾರ ಸಾಲಿಯವರೆಗೆ ಹೋಗಿ ಮುಟ್ಟಬೇಕು. ಸಮುದಾಯದ ಮಹಿಳೆಯರಿಗೆ ನಿಗಮದ ಯೋಜನೆಗಳನ್ನು ಮನದಟ್ಟಾಗಿಸಬೇಕಾಗಿದೆ. ಸಾಲ ಸೌಲಭ್ಯ ಪಡೆದುಕೊಂಡ ಮೇಲೆ ಆ ಹಣವನ್ನು ಉದ್ಯೋಗಗಳ ಉತ್ತೇಜನಕ್ಕೆ ಆಧುನಿಕ ಯಂತ್ರಗಳ ಖರೀದಿಗೆ ವಿನಿಯೋಗಿಸಬೇಕು. ವೈಯಕ್ತಿಕ ವ್ಯಸನಾದಿಗಳಿಗೆ ಹಣ ಬಳಕೆಯಾಗದೆ ಸದ್ಬಳಕೆಯಾಗಬೇಕು.

೧೨. **ಕುಶಲಕರ್ಮಿಗಳ ಕಲೆ-ಕೌಶಲ್ಯಗಳ ಪ್ರಸಾರತೆಗೆ ಪತ್ರಿಕೆ ಸ್ಥಾಪನೆ:** ಪಂಚಾಳ ಕುಶಲಕರ್ಮಿಗಳು ಕರಕುಶಲ ಕಲೆಗಾರರು ಕಲೆ ಇವರಲ್ಲಿ ರಕ್ತಗತವಾಗಿ ಹುಟ್ಟಿ ಬಂದಿರುತ್ತದೆ. ಸಮುದಾಯಕ್ಕೆ ಪಂಚ ಉದ್ಯೋಗಗಳು ಪರಂಪರೆಯ ಕೊಡುಗೆಗಳಾಗಿವೆ. ಕಸಬುದಾರರು ಸೃಷ್ಟಿಸಿದ ವಸ್ತುಗಳು ವಿಶ್ವದಲ್ಲಿ ಪ್ರಸಿದ್ಧವಾಗಿವೆ. ಕಾವ್ಯ ರೂಪಕಗಳಾಗಿವೆ. ಅದ್ಭುತ ಶಿಲ್ಪಕಲೆಗಳಾಗಿ ಅರಳಿವೆ. ಬೇಲೂರು- ಹಳೇಬೀಡು ಪಾಂಚಾಳ ಕುಶಲಕರ್ಮಿಗಳ ಕಲಾ ಸೌಂದರ್ಯದ ಆಗರವಾಗಿದೆ. ಇವರು ಕುಶಲಕರ್ಮಗಾರಿಕೆಯಿಂದ ಲೋಕಪ್ರಿಯರಾಗಿದ್ದಾರೆ. ಕುಶಲಕರ್ಮಿಗಳಿಂದ ಎಷ್ಟೇ ಅದ್ಭುತ ಶಿಲ್ಪಗಳು ತಯಾರಾಗಿದ್ದರೂ ನಿತ್ಯವೂ ನವ-ನವನೀತವಾಗಿ ಉದ್ಯೋಗಗಳಲ್ಲಿ ಕಲೆಗಾರಿಕೆಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ಕುಶಲಕರ್ಮಿಗಳು ತಯಾರಿಸಿದ ಒಂದು ವಸ್ತುವಿಗಿಂತ ಮತ್ತೊಂದು ವಸ್ತು ಸುಂದರ ಮತ್ತು ವಿಶಿಷ್ಟವಾಗಿ ಕಾಣುತ್ತದೆ. ದಿನದಿಂದ ದಿನಕ್ಕೆ ಉದ್ಯೋಗಗಳಲ್ಲಿ ನಾವಿನ್ಯತೆಯನ್ನು ಕುಶಲಕರ್ಮಿಗಳು ತಂದುಕೊಳ್ಳಬೇಕಾಗುತ್ತದೆ. ಬಾಗಿಲ ಹಣೆ ಪಟ್ಟಿಯಲ್ಲಿ ಒಂದು ಸುಂದರ ಹೂವನ್ನು ಕಸಬುದಾರ ಕೆತ್ತಿದರೆ, ಮತ್ತೊಂದು ಸಲ ಬಾಗಿಲು ತಯಾರಿಸುವಾಗ ಅದರ ಹಣೆ ಪಟ್ಟಿಯಲ್ಲಿ ಹೂವಿನೊಂದಿಗೆ ಬಳ್ಳಿಯನ್ನು ಕೆತ್ತಿ ಹೊಸತನವನ್ನು ಉದ್ಯೋಗದಲ್ಲಿ ಹುಟ್ಟುಹಾಕುತ್ತಾರೆ. ಕುಶಲಕರ್ಮಿಗಳು ತಯಾರಿಸಿದ ಪ್ರತಿ ವಸ್ತುಗಳು ಕಲಾತ್ಮಕವಾಗಿರುತ್ತವೆ. ವಸ್ತು ಸೃಷ್ಟಿಯಲ್ಲಿ ಸಹಜವಾಗಿ ಕಲೆ ಅರಳುತ್ತದೆ. ಆದರೆ ಅರಳಿದ ಕಲೆಗೆ ಬೆಲೆ ದೊರೆಯುವಂತಾಗಬೇಕು. ಇಂದು ಕುಶಲಕರ್ಮಿಗಳು ಕಲಾತ್ಮಕವಾಗಿ, ಕುಶಲಗಾರಿಕೆಯಿಂದ ವಸ್ತುಗಳನ್ನು ತಯಾರಿಸುತ್ತಾರೆ. ವಸ್ತುಗಳ ಕುರಿತಾದ ಪ್ರಸಾರತೆಗಳು ಸಮುದಾಯದಲ್ಲಿ ಕಡಿಮೆಯಿವೆ. ಕಲೆಯಿದೆ, ತಕ್ಕದಾದ ಬೆಲೆಯಿಲ್ಲ ಕಲೆ-ಬೆಲೆಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತ ನೆಲೆಗಳಿಲ್ಲ. ಹೀಗಾಗಿ ಕುಶಲಕರ್ಮಿಗಳ ಕಲೆ-ಕೌಶಲ್ಯತೆಯ ಕುರಿತಾಗಿ ಪ್ರಸಾರ ಮಾಡುವ ಪತ್ರಿಕೆಗಳು ಸ್ಥಾಪನೆಯಾಗಬೇಕು.

ಪತ್ರಿಕೆಗಳ ಮೂಲಕ ಕುಶಲಕರ್ಮಿಗಳ ಕುರಿತು ಮತ್ತು ಉದ್ಯೋಗಗಳ ಬಗೆಗೆ ಪತ್ರಿಕೆಗಳು ಪ್ರಕಟಿಸಬೇಕು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದ ಕುಶಲಕರ್ಮಿ ಮತ್ತು ಕಲೆ-ಕೌಶಲ್ಯಗಳ ಕುರಿತಾಗಿ ಪತ್ರಿಕೆಗಳು ಪರಿಚಯಿಸಬೇಕಾಗಿವೆ. ಕುಶಲಕರ್ಮಿಗಳು ಉತ್ಪಾದಿಸಿದ ವಸ್ತುಗಳ ಪರಿಚಯವನ್ನು ಪತ್ರಿಕೆ ಮೂಲಕ ಮಾಡಬಹುದಾಗಿದೆ. ವಸ್ತುಗಳ ನಿಗದಿತ ಬೆಲೆಯನ್ನು ಪತ್ರಿಕೆಗಳ ಮೂಲಕ ಪ್ರಕಟಪಡಿಸಿದರೆ ಉತ್ಪಾದಕರಿಗೆ ಅನುಕೂಲವಾಗುತ್ತದೆ. ಪತ್ರಿಕೆಗಳ ಓದಿನಿಂದಾಗಿ ವಸ್ತು ತಯಾರಿಕರ

ಪರಿಚಯ ಬೆಳೆಯುತ್ತದೆ. ಕುಶಲಕರ್ಮಿ–ಕುಶಲಕರ್ಮಿಗಳ ಮಧ್ಯೆ; ಕುಶಲಕರ್ಮಿ– ಗ್ರಾಹಕರ ಮಧ್ಯ ಅನ್ಯೂನ್ಯ ಸಂಬಂಧಗಳು ಏರ್ಪಡುತ್ತವೆ. ಈ ದೆಸೆಯಲ್ಲಿ ರಾಜ್ಯದಲ್ಲಿ ಹತ್ತಾರು ಪತ್ರಿಕೆಗಳು ಕೆಲಸಮಾಡುತ್ತಿವೆ. ಮುಖ್ಯವಾಗಿ ಶಿರಸಂಗಿಯಲ್ಲಿ ೨೦೧೩ರಲ್ಲಿ 'ಕಾಳಿಕಾ ಸಂದೇಶ' ಪತ್ರಿಕೆ ಪ್ರಮುಖವೆನಿಸುತ್ತದೆ. ಪತ್ರಿಕೆಯು ಸಮುದಾಯದ ಎಲ್ಲರನ್ನು ಹಂತ ಹಂತವಾಗಿ ಚಿರಪರಿಚಿತಗೊಳಿಸುತ್ತಿದೆ. ಉದ್ಯೋಗ ಮತ್ತು ಉದ್ಯೋಗ ತರಬೇತಿ ಕೇಂದ್ರಗಳ ಕುರಿತಾಗಿ ಪತ್ರಿಕೆಯಲ್ಲಿ ಪ್ರತಿ ತಿಂಗಳು ಮಾಹಿತಿ ನೀಡುತ್ತದೆ. ವಿಶೇಷವಾಗಿ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪತ್ರಿಕೆ ರವಾನೆಯಾಗುತ್ತದೆ. ಇದರಿಂದಾಗಿ ದಕ್ಷಿಣ ಮತ್ತು ಉತ್ತರದ ಕುಶಲಕರ್ಮಿ ಮತ್ತು ಉದ್ಯೋಗಗಳನ್ನು ಒಗ್ಗೂಡಿಸುತ್ತಿದೆ. ಪರಸ್ಪರರಲ್ಲಿ ಅನ್ಯೂನ್ಯತೆಯನ್ನು ತರುತ್ತಿದೆ. ಸಮುದಾಯದ ಕಲೆ–ಕಲಾವಿದರನ್ನು ಕುಶಲಕರ್ಮಿಗಳನ್ನು ಒಗ್ಗೂಡುವ ಕೆಲಸವನ್ನು ಪತ್ರಿಕೆಗಳು ಮಾಡುತ್ತಿವೆ.

ಕರ್ನಾಟಕದಲ್ಲಿಯೂ ಕುಶಲಕರ್ಮಿಗಳ ಕಲೆ–ಕೌಶಲ್ಯಗಳ ಪ್ರಸಾರತೆಗೆ ಹತ್ತಾರು ಪತ್ರಿಕೆಗಳಿವೆ. ಮಂಗಳೂರಿನ ವಿಶ್ವಕರ್ಮ, ತುಮಕೂರಿನ ವಿಶ್ವಕರ್ಮ ಪ್ರಕಾಶ, ಮೈಸೂರಿನ ವಿಶ್ವಕರ್ಮ, ಬೆಂಗಳೂರಿನ ವಿಶ್ವಬ್ರಾಹ್ಮಣ ವಿಜಯ ಚಿತ್ರದುರ್ಗದ ವಿಶ್ವಕರ್ಮೋದಯ, ಶಿವಮೊಗ್ಗದ ವಿಶ್ವಬ್ರಾಹ್ಮಣ, ಬೆಂಗಳೂರಿನ ವಿಶ್ವಕರ್ಮಕಲಾ, ಜಗತ್‌ಕಲ್ಯಾಣ ಕಾಳಿಕಾದೇವಿ ವಾಣಿ, ವಿಧಾತೃ ಮುಂತಾದ ಪತ್ರಿಕೆಗಳು ಕುಶಲಕರ್ಮಿ ಭಾವನೆಗಳನ್ನು ಬೆಸೆಯುತ್ತಿವೆ. ಇವುಗಳಲ್ಲದೆ. ಇನ್ನಷ್ಟು ಮೌಲಿಕ ಪತ್ರಿಕೆಗಳು ಜನ್ಮತಾಳಬೇಕಿದೆ. ಈಗಿರುವ ಪತ್ರಿಕೆಗಳು ಸಮುದಾಯ ಅಭಿವೃದ್ಧಿಗೆ ಹೆಚ್ಚು ಒತ್ತುಕೊಡುತ್ತಿವೆ. ಮುಖ್ಯವಾಗಿ ಪಂಚಕಸಬುಗಳ ಕುರಿತಾಗಿ ಕೌಶಲ್ಯ ಅಭಿವೃದ್ಧಿಯ ವಿಚಾರಗಳು, ಚರ್ಚೆಗಳು, ಗೋಷ್ಠಿಗಳು ಚರ್ಚಿತವಾಗುವಂತಹ ಪತ್ರಿಕೆಗಳು ರೂಪಗೊಳ್ಳಲಿ ಉದ್ಯೋಗಗಳ ಪುನರಾಭಿವೃದ್ಧಿಗೆ ಪೂರಕವಾಗಿ ಚರ್ಚಿತ ವಿಷಯಗಳ ಪತ್ರಿಕೆಯಲ್ಲಿ ಪ್ರಕಟಗೊಳ್ಳಲಿ ಸಚಿತ್ರ ಸಮೇತ ವೈಚಾರಿಕ, ಸಂಶೋಧನಾತ್ಮಕ ಲೇಖನಗಳನ್ನು ಪತ್ರಿಕೆಗಳು ಪ್ರಸಾರಗೊಳಿಸಲಿ ಸಮುದಾಯ ಮತ್ತು ಪಂಚ ಉದ್ಯೋಗಗಳ ಅಭಿವೃದ್ಧಿಯಲ್ಲಿ ಪತ್ರಿಕೆಗಳು ಕೊಡುಗೆ ನೀಡುವಂತಾಗಬೇಕು.

ಸಮುದಾಯದ ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಯಾಗಬೇಕು. ಯುವಕರು ಉದ್ಯೋಗ ಗಳಲ್ಲಿ ಹೊಸ ಸವಾಲುಗಳನ್ನು ಎದುರಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯುವಕರಿಗಾಗಿ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ತರಬೇತಿ ನೀಡುತ್ತಿದೆ. ಯಾವುದೇ ಉದ್ಯೋಗಗಳ ಕುರಿತಾಗಿ ತರಬೇತಿ ಪಡೆದುಕೊಂಡು ಸ್ವಯಂ ಉದ್ಯೋಗ ಕೈಕೊಳ್ಳಲು ಸಾಧ್ಯವಾಗುತ್ತದೆ. ತರಬೇತಿ ದಾರರಿಗೆ ೧೦ನೇ ತರಗತಿಯಿಂದ ಪದವಿವರೆಗೆ ಓದಿದವರನ್ನು ಶೈಕ್ಷಣಿಕ ಅರ್ಹತೆಯುಳ್ಳವರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಬಗೆಯ ಉದ್ಯೋಗ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದಾಗ ಬೇಕು. ಇದರಿಂದ ಪಂಚ ಕಸಬುಗಳಲ್ಲಿ ತೊಡಗಿದ ಸಮುದಾಯದ ಕುಶಲಕರ್ಮಿಗಳಿಗೆ

ಅನುಕೂಲವಾಗುತ್ತದೆ. 'ಸ್ಕಿಲ್ ಇಂಡಿಯಾ' ಯೋಜನೆಯು ಸಮುದಾಯದ ಯುವಕರಿಗೆ 'ಸ್ಕಿಲ್ ಆರ್ಟಿಸಾನ್' ಆಗಿ ಸ್ವಾವಲಂಭಿತನ ಕಟ್ಟಿಕೊಡಬೇಕು.

೧೩. **ಕುಲಕಸಬುಗಳಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ:** ಮಾಹಿತಿ ತಂತ್ರಜ್ಞಾನ ಎಲ್ಲ ಉದ್ಯೋಗಗಳಲ್ಲಿ ಇತ್ತೀಚೆಗೆ ಹೆಚ್ಚಾಗಿ ಬಳಕೆಯಾಗುತ್ತಿರುವ ಪದ. ಮಾಹಿತಿ ತಂತ್ರಜ್ಞಾನದ ಬಳಕೆಯಿಂದಾಗಿ ವಿಶ್ವಮಟ್ಟದಲ್ಲಿ ತಂತ್ರಜ್ಞರ ನೆರವನ್ನು ಪಡೆದುಕೊಳ್ಳುವ ಅವಕಾಶಗಳಿವೆ. ಪಂಚಾಳ ಸಮುದಾಯದ ಪಂಚ ಕಸಬುಗಳ ಅಭಿವೃದ್ಧಿಗಾಗಿ ಹೊಸಹೊಸ ತಂತ್ರಾಂಶಗಳನ್ನು ರೂಪಿಸಬೇಕು. ಈ ಯೋಜನೆಯನ್ನು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮೂಲಕ ಸರಕಾರ ತಯಾರಿಸಬೇಕು. ಸಮುದಾಯ ದಲ್ಲಿ ನುರಿತ ಅನುಭವಿ ತಂತ್ರಜ್ಞರ ನೆರವನ್ನು ಪಡೆದುಕೊಳ್ಳಬೇಕು. ಕನ್ನಡದ ಪಾರಂಪರಿಕ ಕುಶಲ ಕರ್ಮಿಗಳಿಗೆ ಅನುಕೂಲವಾಗುವಂತಹ ತಂತ್ರಾಂಶಗಳ ಅಗತ್ಯತೆಯಿದೆ. ಈ ದೆಸೆಯಲ್ಲಿ ಕನ್ನಡ ಮತ್ತು ಪಂಚಾಳ ಸಮುದಾಯಕ್ಕೆ ಒಗ್ಗೂವಂತ 'ಕಂಪ್ಯೂಟಿಂಗ್' ತಂತ್ರಜ್ಞರನ್ನು ಬಳಸಿಕೊಂಡು ಹೊಸ ತಂತ್ರಾಂಶವನ್ನು ರೂಪಿಸಬೇಕು.

ಪಂಚಾಳ ಕುಶಲಕರ್ಮಿಗಳ ಐದು ಬಗೆಯ ಉದ್ಯೋಗಗಳ ಕೌಶಲ್ಯಾಭಿವೃದ್ಧಿಗೆ ತಂತ್ರಾಂಶಗಳು ಮುಖ್ಯ ಅದಕ್ಕೋಸ್ಕರ ತಂತ್ರಾಂಶ ತಯಾರಕ ಸಮಿತಿ ರಚಿಸಬೇಕು. ಹತ್ತಾರು ಬಾರಿ ಸಮಿತಿ ಸಭೆ ಸೇರಬೇಕು. ಐದು ಬಗೆಯ ಉದ್ಯೋಗಗಳ ಬಗೆಗೆ ಆಸಕ್ತರಿರುವವರನ್ನು ಆಹ್ವಾನಿಸಿ ಸೂಕ್ತ ಮಾಹಿತಿ ಪಡೆಯಬೇಕು. ಮಾಹಿತಿಯನ್ನು ತಲಸ್ಪರ್ಷಿಯಾಗಿ ವಿಶ್ಲೇಷಿಸಿ ತಂತ್ರಾಂಶ ತಯಾರಿಕಾ ನೀತಿ ರೂಪಗೊಳ್ಳಬೇಕು. ಹೆಚ್ಚಾಗಿ ಪಂಚಾಳ ಸಮುದಾಯದ ಯುವ ತಂತ್ರಜ್ಞರನ್ನು ಸಹಭಾಗಿಗಳನ್ನಾಗಿ ಮಾಡಿಕೊಳ್ಳಬೇಕು. ಕುಶಲಕರ್ಮಿ ಸಮುದಾಯಿಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕು.

ಕನ್ನಡದಲ್ಲಿ ಉಪಯುಕ್ತವಾದ 'ಕಣಜ' ಅಂತರ್ಜಾಲದ ಜ್ಞಾನಕೋಶವಿದೆ. ೫ ಡಿಸೆಂಬರ್ ೨೦೦೯ ರಿಂದ ಕಾರ್ಯನಿರ್ವಹಿಸುತ್ತಿದೆ. ಕನ್ನಡದಲ್ಲಿ ಮಾಹಿತಿಯ ಬಹುದೊಡ್ಡ ಆಕರ ಜ್ಞಾನ ಸಮುದಾಯದ ಸೃಷ್ಟಿಯು ಕಣಜದ ಮುಖ್ಯ ಉದ್ದೇಶ ಇದರಲ್ಲಿ ಪುಸ್ತಕ, ಧ್ವನಿ ಮತ್ತು ಚಲನಚಿತ್ರದ ತುಣುಕುಗಳು ಸಂಗ್ರಹಗೊಂಡಿವೆ. ಕನ್ನಡ ಸಂಸ್ಕೃತಿ ಪರಂಪರೆಗೆ ಸಂಬಂಧಿಸಿದ ಮಾಹಿತಿಯ ಜ್ಞಾನಶಾಖೆಯಾಗಿದೆ. ಕನ್ನಡಿಗರಾದ ಪಂಚಾಳ ಕುಶಲಕರ್ಮಿ ಸಮುದಾಯ ಮತ್ತು ಪಂಚ ಕಸಬುಗಳ ಕುರಿತಾಗಿ ಪುಸ್ತಕ ಮತ್ತು ಉದ್ಯೋಗಗಳ ಪ್ರಯೋಗಾತ್ಮಕ ದೃಶ್ಯಗಳು ಸಂಗ್ರಹಗೊಂಡರೆ ಸಮುದಾಯದ ಯುವ ಬರಹಗಾರರಿಗೆ, ಯುವ ಉದ್ಯೋಗಿಗಳಿಗೆ ಪಂಚಕಸಬುಗಳಲ್ಲಿ ತಂತ್ರಜ್ಞಾನ ಬಳಸಲಿಚ್ಚಿಸುವ ಕುಶಲಕರ್ಮಿಗಳಿಗೆ 'ಕಣಜ' ಉಪಯುಕ್ತವಾಗಬಲ್ಲದು ತಂತ್ರಜ್ಞಾನ ಬಳಕೆಯ ಪಂಚ ಕಸಬುಗಳ ದೃಶ್ಯಗಳು ಕಣಜದಲ್ಲಿ ಲಭ್ಯವಾಗುವಂತಾಗಬೇಕು. ಮಾಹಿತಿ ತಂತ್ರಜ್ಞಾನ ದಿನದಿಂದ ದಿನಕ್ಕೆ ಹೊಸ

ಹೊಸ ವಿಷಯಗಳನ್ನು ಉದ್ಯೋಗಾಸಕ್ತರಿಗೆ ನೀಡುತ್ತದೆ. ದುಡಿಮೆದಾರ ನಿತ್ಯ ಕಲಿಕೆದಾರನಾಗಿರ ಬೇಕಾಗುತ್ತದೆ. ಸಮುದಾಯದ ಹಳಸು ಮಾಹಿತಿಯನ್ನು ಬದಿಗೆ ಸರಿಸಿ, ತಾಜಾ ಅರಿವು ನಿರಂತರವಾಗಿ ಪಂಚ ಉದ್ಯೋಗಗಳಲ್ಲಿ ಮೈಗೂಡಬೇಕು. ಮಾಹಿತಿ ತಂತ್ರಜ್ಞಾನವು ಸಿದ್ಧ ಮತ್ತು ಹಳೆಯ ಔದ್ಯೋಗಿಕ ಸೂತ್ರಗಳಿಗೆ ತಡೆನೀಡಿ ಹೊಸ ಹೊಸ ಸೂತ್ರಗಳನ್ನು ಕಟ್ಟಿಕೊಡುತ್ತದೆ.

ಪಂಚಾಳ ಸಮುದಾಯದ ಕಂಬಾರ ಉದ್ಯೋಗದಲ್ಲಿ ಚಕ್ಕಡಿ ಗಾಲಿಯ ಹಳಿ ಬೆಸೆಯುವ ಕಾರ್ಯಗಳು ನಡೆಯುತ್ತಿದ್ದವು. ಹಳಿಯ ಕೂಡುವ ಎರಡು ತುದಿಗಳನ್ನು ಚೂಪಾಗಿಸಿ, ಹದಬರಿತವಾಗಿ ಕಾಯಿಸಿ ಹಳಿಯನ್ನು ಬೆಸೆಯಲಾಗುತ್ತಿತ್ತು. ಇದಕ್ಕೆ ಸಮಯವೂ ಬೇಕಾಗಿರುತ್ತಿತ್ತು. ಇಂದು ಹಳಿ, ಕಬ್ಬಿಣ ಪಟ್ಟಿ ಬೆಸೆಯಲು 'ವೆಲ್ಡಿಂಗ್' ಮಸೀನ್‌ಗಳು ಹುಟ್ಟಿಕೊಂಡಿವೆ. ತಂತ್ರಜ್ಞಾನವನ್ನು 'ವೆಲ್ಡಿಂಗ್' ಮಸೀನ್‌ನಲ್ಲಿ ಬಳಸಿಕೊಳ್ಳಲಾಯಿತು.

ಬಡಿಗೇರ ಉದ್ಯೋಗದಲ್ಲಿ ಯಾಂತ್ರಿಕ ಉಪಕರಣಗಳ ಬಳಕೆಯನ್ನು ಹೆಚ್ಚಾಗಿ ಕಾಣುತ್ತಿದ್ದೇವೆ. ಉಳಿ-ಕೊಡತಿ ಸುತ್ತಿಗೆಗಳು ಹಂತ ಹಂತವಾಗಿ ಮೂಲೆ ಸೇರುತ್ತಿವೆ. ಬಾಚಿ ಮೂಲೆಯಲ್ಲಿ ಕುಳಿತಿದೆ. ಕಟ್ಟಿಗೆ ನುನುಪುಗೊಳಿಸುವ ಉಚ್ಚುಗೊಡ್ಡ ಬದಲಾಗಿ ರಂದಾ ಮಸೀನ್ ಬಳಕೆಯಲ್ಲಿದೆ. ರಂಧ್ರತೊಡುವ ಡ್ರಿಲ್‌ಗಳಿವೆ. ಚೌಕ ರಂಧ್ರದ ಮಸೀನ್‌ಗಳಿವೆ. ಸುಳಿವಿನ ಮತ್ತು ವಿಗ್ರಹ ಕೆತ್ತನೆಯ ಮನೆ ಬಾಗಿಲು ಪಡಕಾ (ಡೋರ್) ತಯಾರಿಸಲು "ವುಡ್ ಡಿಸೈನ್ ಕಟಿಂಗ್' ಮಸೀನಗಳು ಬಳಕೆಯಾಗುತ್ತಿವೆ. ಗಣಕಯಂತ್ರದಲ್ಲಿ ವಿಗ್ರಹ ಮತ್ತು ಸುಳಿವಿನ ಬಳ್ಳಿಯನ್ನು ಆಯ್ಕೆಮಾಡಬೇಕು. ಮರದ ಹಲಗೆಯ ಉದ್ದಗಲಳತೆ ಮಾಪನ ಸ್ಥಿರಗೊಳಿಸಿ ಯಂತ್ರ ಆರಂಭಿಸಿದರೆ ಕೆಲವು ಗಂಟೆಗಳಲ್ಲಿ ಕೆತ್ತನೆಯ ಬಾಗಿಲು ಪಡಕಾ ಸಿದ್ಧವಾಗುತ್ತದೆ. ಇಂತಹ ವಸ್ತುಗಳ ತಯಾರಿಕೆಯಲ್ಲಿ ತಂತ್ರಜ್ಞಾನ ಸಂಪೂರ್ಣ ಬಳಕೆಯಾಗುತ್ತಿದೆ.

ತಾಮ್ರ- ಹಿತ್ತಾಳೆ-ಕಂಚುಗಳಿಂದ ತಯಾರಿಸುವ ವಸ್ತುಗಳ ಮೇಲೆ ತಂತ್ರಜ್ಞಾನ ಬಳಸಲ್ಪಡುತ್ತಿದೆ. ಶಿಲ್ಪಗಾರಿಕೆಯಲ್ಲಿ ಉಳಿ-ಚಾಣ- ಸುತ್ತಿಗೆಯಿಂದ ಮಾತ್ರ ವಿಗ್ರಹ ನಿರ್ಮಿಸಲಾಗುತ್ತಿತ್ತು. ಈಗ ಶಿಲೆ ತುಂಡರಿಸುವ ಉಬ್ಬು-ತಗ್ಗು ಕೆತ್ತನೆಯಲ್ಲಿ ಕಟರ್ ಮಸೀನ್, ಶಿಲೆ ನುನುಪುಗೊಳಿಸುವ ಮಸೀನ್‌ಗಳು ಬಳಸಲಾಗುತ್ತಿದೆ. ಹಾಗೆಯೇ ಚಿನ್ನ-ಬೆಳ್ಳಿಯ ಉಪಕರಣಗಳ ತಯಾರಿಕೆಯಲ್ಲಿ ಇಂದು ಕಡ್ಡಾಯ ವೆನ್ನುವಂತೆ ತಂತ್ರಜ್ಞಾನ ಬಳಸಲಾಗುತ್ತಿದೆ. ಸುತ್ತಿಗೆ ಪೆಟ್ಟಿನಿಂದ ಚಿನ್ನ-ಬೆಳ್ಳಿ-ತಾಮ್ರಗಳನ್ನು ಚಪ್ಪಟೆ ಯಾಗಿಸಲಾಗುತ್ತಿತ್ತು ಆದರೆ ಇಂದು ತಾಮ್ರ-ಚಿನ್ನ ಬೆಳ್ಳಿಯನ್ನು ಮಸೀನ್‌ಗಳಲ್ಲಿ ಅಕ್ಕಸಾಲಿ ಕುಶಲ ಕರ್ಮಿಗಳು ಚಪ್ಪಟೆಯಾಗಿಸುತ್ತಾರೆ. ಹೀಗೆ ಪಂಚ ಉದ್ಯೋಗಗಳಲ್ಲಿ ತಂತ್ರಜ್ಞಾನದ ಬಳಕೆ ರೂಢಿ ಯಾಗುತ್ತಿದೆ.

ಭಾರತದಂತಹ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಪ್ರತಿ ಸಮುದಾಯ ಮತ್ತು ಸಮುದಾಯಿಕ ಕುಲಕಸಬುಗಳು ಮುಂದೆವರೆದು ಅಭಿವೃದ್ಧಿ ಕಾಣಬೇಕಿದೆ. ಉಪಕರಣಗಳ ಜ್ಞಾನದ ಯಂತ್ರ-

ತಂತ್ರಗಳ ಸಹಾಯದಿಂದ ಹೊಸ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಉದ್ಯೋಗಗಳಲ್ಲಿ ನಿಶ್ಚಿತ ಗುರಿ ಸಾಧಿಸುವ ಜ್ಞಾನವಾಗಿದೆ. ಭಾರತದ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಹಾಸು ಹೊಕ್ಕಾಗಿದೆ. ಮುಖ್ಯವಾಗಿ ಕೃಷಿ ಕ್ಷೇತ್ರದಲ್ಲಿಯೂ ತನ್ನ ಮೈಚಾಚಿಕೊಂಡಿದೆ. ಜೈವಿಕ ತಂತ್ರಜ್ಞಾನ ಬಳಕೆಯಿಂದ ಕೃಷಿ ಉದ್ಯಮವಾಗಿಸುವಲ್ಲಿ ತಂತ್ರಜ್ಞಾನ ದೊಡ್ಡ ಕೊಡುಗೆ ನೀಡುತ್ತಿದೆ. ಬರಡು ಹೈಣವಾಗುತ್ತಿದೆ. ತಂತ್ರಜ್ಞಾನದ ಕೂಸಾದ ಮೊಬೈಲ್ ಮೂಲಕ ರೈತ ತನ್ನ ಬೆಳೆಯ ಮಾರುಕಟ್ಟೆ ಬೆಲೆಯನ್ನು ನೇರವಾಗಿ ತಿಳಿದುಕೊಳ್ಳಬಹುದಾಗಿದೆ.

ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಬಳಕೆಯಾಗುತ್ತಿರುವಾಗ ರೈತರ ಬೆನ್ನೆಲುಬಾದ ಪಾರಂಪರಿಕ ಕುಶಲಕರ್ಮಿಗಳ ಉದ್ಯೋಗಗಳಲ್ಲಿ ಮಾಹಿತಿ ತಂತ್ರಜ್ಞಾನ ಬಳಕೆಯಾಗಬೇಕಿದೆ. ಈಗ ಶೇ. ೪೦ರಷ್ಟು ಬಳಕೆಯಲ್ಲಿದೆ. ಹೆಚ್ಚಿನ ಪ್ರಮಾಣದಲ್ಲಿ ತಂತ್ರಜ್ಞಾನ ಬಳಕೆಯಾದರೆ ಸಮುದಾಯ ಆರ್ಥಿಕಾಭಿವೃದ್ಧಿ ಹೊಂದಲು ಸಾಧ್ಯವಿದೆ. ಕೃಷಿ ಕ್ಷೇತ್ರ ಉದ್ಯಮವಾಗುತ್ತಿರುವಾಗ ಕೃಷಿಯ ಉಪಕರಣಗಳನ್ನು ತಯಾರಿಸುವ ಕುಶಲಕರ್ಮಿಗಳ ಉದ್ಯೋಗ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಬಳಕೆಯಾಗಬೇಕು. ಪಂಚ ಕಸಬುಗಳಲ್ಲಿ ಅಭಿವೃದ್ಧಿಗೆ ಸೃಜನಶೀಲ ಮತ್ತು ಪ್ರಾವಿಣ್ಯತೆಯ ವ್ಯಕ್ತಿಗಳ ಮಾಹಿತಿ ಅವಶ್ಯ ಮಾಹಿತಿಯಾಧರಿಸಿ ತಾಂತ್ರಿಕತೆಯನ್ನು ಬಳಸಿ, ವಸ್ತು ಉತ್ಪಾದನ ಕ್ಷೇತ್ರವನ್ನು ಲಾಭದಾಯಕವಾಗಿಸಬಹುದಾಗಿದೆ. ತಂತ್ರಜ್ಞಾನವು ಇತ್ತೀಚೆಗೆ ಸಮುದಾಯದ ಮೇಲೆ ತನ್ನ ಪ್ರಭಾವ ಬೀರಿದೆ. ಇದರಿಂದ ಔದ್ಯೋಗಿಕ ಕ್ಷೇತ್ರಗಳು ಆರ್ಥಿಕಾಭಿವೃದ್ಧಿ ಕಾಣುತ್ತವೆ.

ತಂತ್ರಜ್ಞಾನದ ಮೂಲ ಉದ್ದೇಶ ಮಾರುಕಟ್ಟೆ, ಬಂಡವಾಳ, ಉತ್ಪಾದಿತ ವಸ್ತುಗಳ ಲಾಭಾಂಶ ವಾಗಿದೆ. ಆದರೆ ಸಮುದಾಯ ಸಂವೇಧನೆಗಳನ್ನು ಬಿತ್ತರಿಸಲು ಸಾಧ್ಯವಿಲ್ಲ. ಆರ್ಥಿಕ ಅಭಿವೃದ್ಧಿಗೆ ಮಾತ್ರ ತಂತ್ರಜ್ಞಾನದ ಬಳಕೆ ಸೂಕ್ತವೆನಿಸುತ್ತದೆ. ತಂತ್ರಜ್ಞಾನದಿಂದ ಜಗತ್ತು ಒಂದು ಚಿಕ್ಕ ಗ್ರಾಮವಾಗಿದೆ. ಹಣವೇ ಇಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತದೆ. ಸಮುದಾಯ ಆರ್ಥಿಕ ಅಭಿವೃದ್ಧಿಗೆ ತಂತ್ರಜ್ಞಾನ ಬಳಸಿಕೊಂಡು, ಸಮುದಾಯ ಸಂಘಟನೆ, ಮಾನವೀಯ ಸಂಬಂಧಗಳನ್ನು ಬೆಳೆಸಿ ಕೊಳ್ಳುವುದನ್ನು ಮರೆಯಬಾರದು. ಕುಶಲಕರ್ಮಿಯು ತಂತ್ರಜ್ಞಾನದ ಬಳಕೆಯ ಬರಾಟೆಯಲ್ಲಿ ಪಾರಂಪರಿಕ ಸಮುದಾಯ ಸಂವೇಧನ ಶೀಲತೆಯನ್ನು ದೂರೀಕರಿಸಬಾರದು. ದೂರದ ಮನುಷ್ಯನನ್ನು ಸಂಪರ್ಕಿಸುವ ಕುಶಲಕರ್ಮಿ ತನ್ನ ಪಕ್ಕದಲ್ಲಿರುವ ಸಹಉದ್ಯೋಗಿ, ಸಹಾಯಕ ಉದ್ಯೋಗಿಯ ಮನೋಭಾವನೆಗಳನ್ನು ಅರ್ಥಮಾಡಿಕೊಳ್ಳುವಂತಿರಬೇಕು.

ಕುಶಲಕರ್ಮಿ ತಂತ್ರಜ್ಞಾನದ ಆವಿಷ್ಕಾರವನ್ನು ಉದ್ಯೋಗಿಗಳಿಗೆ ಎಷ್ಟು ಬೇಕೋ" ಅಷ್ಟು ಬಳಸಿಕೊಳ್ಳಬೇಕು. ಇಡೀ ಬದುಕನ್ನು ಅದಕ್ಕೆ ಒಡ್ಡಿದರೆ ಪುರಾತನ, ಪಾರಂಪರಿಕ ಕಸಬುದಾರರಾದ ಪಂಚಾಳ ಸಮುದಾಯ ಧಾರ್ಮಿಕವಾಗಿ ಅವನತಿಯತ್ತ ಬಂದು ತಲುಪುತ್ತದೆ. ಪಂಚಾಳ ಕುಶಲಕರ್ಮಿ

ಮೂಲತಃ ಸಂವೇಧನಶೀಲ, ಸೃಜನಶೀಲ, ಮಾನವೀಯ ಮೌಲ್ಯಗಳ ಸಮುದಾಯವಾಗಿದೆ. ಇಂತಹ ಗುಣಗಳನ್ನು ಕಳೆದುಕೊಳ್ಳದೇ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕು. ತಂತ್ರಜ್ಞಾನ ಕುಶಲಕರ್ಮಿಗಳ ಉದ್ಯೋಗಗಳನ್ನು ಭೌತಿಕವಾಗಿ ಮುನ್ನಡೆಸುವಂತಾಗಬೇಕು. ವಿನಃ ಕುಶಲಕರ್ಮಿಗಳು ಬೌದ್ಧಿಕವಾಗಿ ಜಡರಾಗದಂತೆ ಜಾಗೃತಿವಹಿಸಬೇಕು. ಇಲ್ಲವಾದರೆ ಸಮುದಾಯ ಆರ್ಥಿಕ ಅಭಿವೃದ್ಧಿ ಸಾಧಿಸಲು ಹೋಗಿ, ಭಾವನೆಗಳ ಸೆಲೆಗಳನ್ನು ಬತ್ತಿಸಿ, ಸಂವೇದನೆಯ ನೆಲೆಗಳನ್ನು ನಾಶಪಡಿಸಿ ಕೊಳ್ಳಬೇಕಾಗುತ್ತದೆ. ಹೀಗಾಗಿ ಕುಲಕಸಬುದಾರ ಪಂಚಾಳ ಕುಶಲಕರ್ಮಿಗಳ ಪಂಚ ಉದ್ಯೋಗಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಸೂಕ್ತ ನೆಲೆಯಲ್ಲಿ ಜಾಗೃತಿಯಿಂದ ಬಳಸುವಂತಾಗಬೇಕು.

ಪಂಚಾಳ ಕುಶಲಕರ್ಮಿ ಸಮುದಾಯ ಪ್ರಾಚೀನವಾದದ್ದು. ಜ್ಞಾನಮಾರ್ಗದೊಂದಿಗೆ ಕರ್ಮಮಾರ್ಗದಲ್ಲಿ ಮುಂದುವರೆದ ಬ್ರಾಹ್ಮಣ ವರ್ಗವಾಗಿದೆ. ವೈದಿಕ ತತ್ವಾಚರಣೆಗಳನ್ನು ಪ್ರಾಚೀನ ಕಾಲದಿಂದಲೂ ಸಮುದಾಯ ಪಾಲಿಸಿಕೊಂಡು ಬಂದಿದೆ. ಸಮುದಾಯಕ್ಕೆ ಪ್ರಾಚೀನ ಸಂಪ್ರದಾಯಗಳು ಮುಖ್ಯವಾಗಿರುವಂತೆ ಪಂಚ ಉದ್ಯೋಗಗಳು ಮುಖ್ಯ ಕಂಬಾರ, ಬಡಿಗೇರ, ಕಂಚುಗಾರ, ಶಿಲ್ಪಿ ಮತ್ತು ಅಕ್ಕಸಾಲಿ ಉದ್ಯೋಗಗಳು ಸಮುದಾಯದ ಜೀವನಾಡಿಗಳು ವೈದಿಕ ಸಂಸ್ಕೃತಿ ಮತ್ತು ಪಂಚ ಕಸಬುಗಳು ಪಂಚಾಳರಲ್ಲಿ ಜೊತೆ ಜೊತೆಯಾಗಿ ಬೆಳೆದು ಬಂದಿವೆ. ಶಾಸನ ಜನಪದರು ಸಾಹಿತ್ಯ ಸಾಮಾಜಿಕ ಜೀವನ ಆರ್ಥಿಕ ಪರಿಸ್ಥಿತಿ ಆಚರಣೆ ಸಂಪ್ರದಾಯಗಳು ಈ ನೆಲೆಯಲ್ಲಿ ಕುಶಲಕರ್ಮಿ ಸಮುದಾಯವನ್ನು ಅವಲೋಕಿಸಿದರೆ ಕುಶಲಕರ್ಮಿಗಳ ಒಟ್ಟು ಬದುಕಿನ ಸ್ವರೂಪ ಮತ್ತು ಪಂಚ ಉದ್ಯೋಗಗಳ ವಾಸ್ತವಿಕ ಚಿತ್ರಣ ಕಂಡುಬರುತ್ತದೆ. ಸಮುದಾಯಕ್ಕಿದ್ದ ಮೂಲ ಉನ್ನತ ಸ್ಥಾನ–ಮಾನಗಳು ಕಡಿಮೆಯಾಗಿವೆ. ಎಲ್ಲ ರಂಗಗಳಲ್ಲಿ ಹಿಂದುಳಿದ ವರ್ಗವಾಗಿದೆ. ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇದರೊಂದಿಗೆ ಪಂಚ ಉದ್ಯೋಗಗಳು ತಮ್ಮ ಕಸುವು ಕಳೆದುಕೊಂಡಿವೆ. ಇಂದಿನ ಯುವಕರು ಪರಂಪರಾಗತ ಕಸಬುಗಳನ್ನು ಮುಂದುವರೆಸಲು ಆಸಕ್ತಿ ತೋರುತ್ತಿಲ್ಲ. ಪಂಚ ಉದ್ಯೋಗಗಳು ಆರ್ಥಿಕವಾಗಿ ಬಲಗೊಳಿಸುತ್ತಿಲ್ಲ ಹೀಗಾಗಿ ಸಮುದಾಯ ಪಂಚ ಉದ್ಯೋಗಗಳಿಂದ ದೂರ ಸರಿಯುತ್ತಿರುವ ವಾಸನೆ ಕಂಡುಬರುತ್ತಿದೆ. ಈ ದೆಸೆಯಲ್ಲಿ ಸಮುದಾಯವನ್ನು ಮತ್ತು ಸಮುದಾಯಿಕ ಪಂಚ ಉದ್ಯೋಗಗಳನ್ನು ಪುನಶ್ಚೇತನಗೊಳಿಸಲು ಕೆಲಪ್ರಮುಖ ಆಯಾಮಗಳನ್ನು ಕಂಡುಕೊಳ್ಳಲಾಗಿದೆ. ಇಲ್ಲಿ ಪ್ರಸ್ತಾಪಿಸಿದ ಆಯಾಮಗಳಷ್ಟೇ ಸಮುದಾಯ ಮತ್ತು ಉದ್ಯೋಗಗಳನ್ನು ಪುನಶ್ಚೇತನಗೊಳಿಸುತ್ತವೆ ಎಂದು ತಿಳಿಯಲಾಗುವುದಿಲ್ಲ ಇನ್ನು ಹೆಚ್ಚಿನ ಆಯಾಮಗಳು ಕಂಡುಕೊಳ್ಳ ಬಹುದಾಗಿದೆ. ಇಲ್ಲಿ ನನ್ನ ಅಧ್ಯಯನದ ಮತ್ತು ಜ್ಞಾನದ ಇತಿಮಿತಿಯಲ್ಲಿ ಹದಿಮೂರು ಆಯಾಮಗಳನ್ನು ಚರ್ಚಿಸಿದ್ದೇನೆ. ಕುಶಲಕರ್ಮಿ ಕುಟುಂಬದಲ್ಲಿ ನಾನು ಹುಟ್ಟಿ ಬೆಳೆದವನಾಗಿರುವುದರಿಂದ ಸಮುದಾಯದ ಮತ್ತು ಉದ್ಯೋಗಗಳ ಸಂವೇಧನೆಗಳನ್ನು ಅರ್ಥೈಸಿಕೊಂಡದ್ದೇನೆ. ಆ ಅನುಭವದ ಹಿನ್ನೆಲೆಯಲ್ಲಿ

ಈಗ ಕಂಡುಕೊಂಡ ಆಯಾಮಗಳಿಂದ ಸಮುದಾಯ ಮತ್ತು ಪಂಚ ಉದ್ಯೋಗಗಳು ಪುನಶ್ಚೇತನಗೊಳ್ಳಲು ಸಾಧ್ಯ.

ಕೊನೆಟಿಪ್ಪಣಿಗಳು

೧. ಕೃಷ್ಣಮೂರ್ತಿ ಕೆ.ವಿ., (ಮೂಲ), ಸೂರ್ಯನಾರಾಯಣಾಚಾರ್ಯ ವಿ.ಎಸ್ (ಅನು), **ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು,** ೨೦೧೨, ಪು.೯೭

೨. ಅದೇ ಪು.೪೮೯

೩. ಅದೇ ಪು.೫೨

೪. ಅದೇ ಪು.೬೨

೫. ಅದೇ ಪು.೬೯

೬. ಅದೇ ಪು.೧೨೫

ಅಧ್ಯಾಯ ಎಂಟು

ಅಧ್ಯಯನದ ಫಲಿತಗಳು

ಅಧ್ಯಾಯ ಎಂಟು

ಅಧ್ಯಯನದ ಫಲಿತಗಳು

'ರೈತ ಭಾರತದ ಬೆನ್ನಲುಬಾದರೆ; ರೈತನ ಬೆನ್ನೆಲುಬು ಕುಶಲಕರ್ಮಿ' ಎಂಬ ಜನವಾಣಿ ಗ್ರಾಮ ಸಂಸ್ಕೃತಿಯ ಮೂಲವಾಗಿದೆ. ರೈತ ದೇಶದ ಅನ್ನದಾತನಾದರೆ, ರೈತನ ಕೃಷಿಚಟುವಟಿಕೆ ಗಳಿಗೆ ಸಹಾಯಕನಾಗಿ ಕುಶಲಕರ್ಮಿ ಕೃಷಿಯೋಪಕರಣಗಳನ್ನು ತಯಾರಿಸಿಕೊಡುವ ಮೂಲಕ ರೈತನಿಗೆ ಬೆನ್ನೆಲುಬಾಗಿ ನಿಂತಿದ್ದಾನೆ. ಭಾರತೀಯರ ಗ್ರಾಮಸಂಸ್ಕೃತಿಗೆ ಕುಶಲಕರ್ಮಿಗಳ ಕೊಡುಗೆ ಅನನ್ಯ. ಕೃಷಿ ಸಂಸ್ಕೃತಿಯ ಪ್ರಾಧಾನ್ಯತೆ ಪಡೆದ ಭಾರತದಲ್ಲಿ ರೈತನಿಗೆ ಮೊದಲು ಆದ್ಯತೆ ಉಳುವವನು. 'ಉತ್ತದಿದ್ದರೆ ಜಗವೆಲ್ಲ ಬಿಕ್ಕುವುದು' ಎಂಬ ಜನಪದೀಯರ ಮಾತುಗಳು ಕುಶಲಕರ್ಮಿಗೂ ಅನ್ವಯವಾಗುತ್ತವೆ. ರೈತ ಜಗತ್ತಿಗೆ ಅನ್ನವನ್ನು ನೀಡಲು ಸಮಯೋಚಿತವಾಗಿ ಭೂಮಿಯ ಉಳುವಿ-ಬಿತ್ತಬೇಕು. ಹದಮೀರಿ ಬಿತ್ತಿದರೆ ಬಿತ್ತಿದ ಕಾಳು ಸಿಗುವುದಿಲ್ಲ. ಬಿತ್ತುವ ಸರಿಯಾದ ಹೊತ್ತಿಗೆ ರೈತ ಕುಶಲಕರ್ಮಿಗಳ ಬಡಿಗಸಾಲಿ, ಕಂಬಾರಸಾಲಿಗೆ ರೆಂಟ-ಕುಂಟೆ-ಕೂರಿಗೆಗಳನ್ನು-ಹೊತ್ತು ತರಬೇಕಾಗುತ್ತದೆ. ಕುಶಲಕರ್ಮಿ ಇಂತಹ ಸಮಯದಲ್ಲಿ ತನ್ನೆಲ್ಲ ಸ್ವಕಾರ್ಯಗಳನ್ನು ಬದಿಗೊತ್ತಿ ರೈತನಿಗೆ ಕೃಷಿಯೋಪಕರಣಗಳನ್ನು ಸಿದ್ಧಪಡಿಸಿಕೊಡುತ್ತಾನೆ. ದೇಶಕ್ಕೆ ರೈತನ ಅಗತ್ಯತೆ ಒಂದು ಭಾಗವಾದರೆ; ಕುಶಲಕರ್ಮಿ ಇನ್ನೊಂದು ಭಾಗ. ದೇಶದಲ್ಲಿ ಕೃಷಿ-ಗ್ರಾಮ-ಸಂಸ್ಕೃತಿಯನ್ನು ಪೂರ್ಣವಾಗಿ ಕಟ್ಟಿಕೊಡುವ ರೈತ ಮತ್ತು ಕುಶಲಕರ್ಮಿಗಳ ಪಾತ್ರ ಪ್ರಮುಖವಾಗಿದೆ. ಆ ಮೂಲಕ ಕಲೆಯ ಆರಾಧಕರಾಗಿ, ಗುಡಿ-ಗೋಪುರ ನಿರ್ಮಾಣದ ಭವ್ಯ ಸಂಸ್ಕೃತಿಕಾರರಾಗಿ ಕುಶಲಕರ್ಮಿಗಳು ಶ್ರೇಷ್ಠರೆಂದೆನಿಸಿಕೊಂಡಿದ್ದಾರೆ.

ಶ್ರಮ ಸಂಸ್ಕೃತಿಯ ವಾರಸುದಾರರಾದ ಕುಶಲಕರ್ಮಿಗಳು ಮೂಲತಃ ಕಾಯಕ ಜೀವಿಗಳು. ಭಾರತದಲ್ಲಿ ಹತ್ತಾರು ವರ್ಗಗಳಲ್ಲಿ ಈ ಬಗೆಯ ಪರಿಶ್ರಮಿಗಳಿದ್ದಾರೆ. ಮುಖ್ಯವಾಗಿ ರೈತನೊಂದಿಗೆ ಪಂಚಾಳ ಕುಶಲಕರ್ಮಿ ತೀರಾ ಹತ್ತಿರದ ಕರ್ಮಜೀವಿಯಾಗಿದ್ದಾನೆ. ಕೃಷಿಯೋಪಕರಣಗಳನ್ನು ತಯಾರಿಸಿಕೊಡುವಲ್ಲಿ ಕಂಬಾರ ಮತ್ತು ಬಡಿಗೇರ ಕುಶಲಕರ್ಮಿಗಳ ವೃತ್ತಿ ನೈಪುಣ್ಯತೆಯನ್ನು

ಕಾಣುತ್ತೇವೆ. ನೇಗಿಲಿನ ಕುಳ, ಕೂರಿಗೆ, ತಾಳಿನ ಹೊಂಬಲ, ಕುಡ, ಕುರೂಪಿ, ಕೊಡಲಿ, ಸಲಿಕೆ–ಗುದ್ದಲಿ, ಚಕ್ಕಡಿ ಹಾರೆ, ಹಳಿ–ಬಿಗಿಯುವ ಕಬ್ಬಿಣದ ಕೆಲಸಗಳನ್ನು ಕಂಬಾರ ಕುಶಲಕರ್ಮಿ ರೈತರಿಗೆ ತಯಾರಿಕೊಡುತ್ತಾನೆ. ರೆಂಟೆ–ಕುಂಟೆ–ಕೂರಿಗೆ, ತಾಳ–ಮೇಳಿ–ಈಸು ಹಾಸುವ ಕಾರ್ಯಗಳನ್ನು ಬಡಿಗೇರ ಕುಶಲಕರ್ಮಿ ರೈತವರ್ಗಕ್ಕೆ ಉಚಿತ ಸಮಯದಲ್ಲಿ ನಿರ್ಮಿಸಿಕೊಡುತ್ತಾನೆ. ಬಡಿಗ–ಕಂಬಾರ ಕುಶಲಕರ್ಮಿಗಳ ಶ್ರಮ ಮತ್ತು ಸಮಯ ಪ್ರಜ್ಞ ಕಾಯಕದಿಂದಾಗಿ ರೈತ ಸಮುದಾಯ ಜಗತ್ತಿಗೆ ಅನ್ನ ನೀಡುವಲ್ಲಿ ಯಶಸ್ವಿಯಾಗುತ್ತದೆ. ಕಂಬಾರ–ಬಡಿಗೇರ ಕುಶಲಕರ್ಮಿಗಳು ರೈತ ಭೂಮಿಯ ಉಪಕರಣಗಳ ಜೊತೆ ಗೃಹೋಪಕರಣಗಳನ್ನು ತಯಾರಿಸಿಕೊಟ್ಟು ರೈತನ ಸಾಮಾಜಿಕ ಬದುಕಿಗೊಂದು ಬದ್ರಬುನಾದಿ ಹಾಕಿಕೊಡುತ್ತಾನೆ. ದೀರ್ಘಕಾಲಿಕ ತಾಳಿಕೆಯ ಸೂರುಗಳನ್ನು ಕುಶಲಕರ್ಮಿಗಳು ತಯಾರಿಸಿಕೊಡುತ್ತಾರೆ. ರೈತನ ಸಾಮಾಜಿಕ ಜೀವನದಲ್ಲಿ ಕಂಬಾರ, ಬಡಿಗೇರ ಕುಶಲಕರ್ಮಿಗಳೊಂದಿಗೆ ಅಕ್ಕಸಾಲಿಗ(ಪತ್ತಾರ) ಕುಶಲಕರ್ಮಿ ಚಿನ್ನ–ಬೆಳ್ಳಿಯ ವಸ್ತುಗಳನ್ನು ತಯಾರಿಸಿಕೊಟ್ಟು ರೈತನ ಬದುಕಿನ ಅತ್ಯಂತ ಅವಶ್ಯಕ ಕಸಬುದಾರನಾಗಿದ್ದಾನೆ. ರೈತ ಸಮುದಾಯ ವೈಯಕ್ತಿಕವಾಗಿ ಕಂಬಾರ–ಬಡಿಗೇರ ಕುಶಲಕರ್ಮಿಯ ಜೊತೆ ಹೆಚ್ಚಿನ ಸಂಬಂಧ ಹೊಂದಿದ್ದರೂ ಕೌಟುಂಬಿಕ ಬದುಕಿಗಾಗಿ ಹೆಂಡತಿ–ಮಕ್ಕಳ ಬಂಗಾರದ ಬದುಕಿಗಾಗಿ ಅಕ್ಕಸಾಲಿ ಕುಶಲಕರ್ಮಿಯನ್ನು ಅವಲಂಬಿಸಿದೆ. ಮುರುವು–ಉಂಗುರ–ಹಾಲ್ಗಡಗ, ಮಂಗಳಸೂತ್ರ, ಚೈನು, ಬೋರಮಾಳ, ಚಿನ್ನದ ಸರ ಮುಂತಾದ ಸ್ತ್ರೀ ಆಭರಣಗಳನ್ನು ಅಕ್ಕಸಾಲಿ ಕುಶಲಕರ್ಮಿ ತಯಾರಿಸಿಕೊಟ್ಟು ರೈತನ ಕುಟುಂಬದಲ್ಲಿ ಐಕ್ಯತೆ ಮೂಡಿಸುವಲ್ಲಿ ಮುಖ್ಯನಾಗುತ್ತಾನೆ.

ಕಂಬಾರ–ಬಡಿಗೇರ–ಅಕ್ಕಸಾಲಿ(ಪತ್ತಾರ) ಕುಶಲಕರ್ಮಿಗಳು ರೈತಮಿತ್ರನಂತೆ ಪರಸ್ಪರ ವೃತ್ತಿ ಅವಲಂಬಿತರಾಗಿ ರೈತನ ಸಾಮಾಜಿಕ ಬದುಕಿನ ಮುನ್ನಡೆಗೆ ನೊಗವಾಗುತ್ತಾರೆ. ಸಾಮಾಜಿಕ ಜೀವನದಿಂದ ಸ್ವಲ್ಪಮಟ್ಟಿಗೆ ಆಧ್ಯಾತ್ಮಿಕತೆಯತ್ತ ಕರೆತರುವಲ್ಲಿಯೂ ಕುಶಲಕರ್ಮಿಗಳು ಮಹತ್ವದ ಶಕ್ತಿಯಾಗುತ್ತಾರೆ. ಕುಟುಂಬದಿಂದ ಗುಡಿ–ಗುಂಡಾರ, ದೇವರು, ಶಿಲ್ಪ, ದುರ್ಗೆ, ಶಂಕರಿ, ಕಾಳಿ ಮೊದಲಾದ ದೈವಿಕತೆಗಳ ಸಂಸರ್ಗವನ್ನು ಶಿಲ್ಪ ದೇವಾಲಯ, ಸ್ಥಂಭ, ಏಕಾಶಿಲಾ ಮೂರ್ತಿಗಳನ್ನು ನಿರ್ಮಿಸಿ, ರೈತ ಸಮುದಾಯವನ್ನು ಭಕ್ತಿ ಭಾವದ ಕಡೆ ಶಿಲ್ಪಿ ಕುಶಲಕರ್ಮಿ ಗಮನಹರಿಸುವಂತೆ ಮಾಡುತ್ತಾನೆ. ಇದರ ಜೊತೆ ಅರ್ಚಕನಿಗೆ ಅಗತ್ಯವಾಗಿರುವ ತಾಮ್ರದ ಪಂಚಪಾತ್ರೆ, ಜಾಗಟೆ, ಗಂಟೆ ಮೊದಲಾದ ಪೂಜಾ ಸಾಮಗ್ರಿಗಳನ್ನು ಕಂಚುಗಾರ ಕುಶಲಕರ್ಮಿ ಸಮುದಾಯಕ್ಕೆ ರೂಪಿಸಿಕೊಡುತ್ತಾನೆ.

ಭಾರತದಂಥಹ ಕೃಷಿ ಪ್ರಧಾನ ದೇಶದಲ್ಲಿ ಕುಶಲಕರ್ಮಿಗಳು ರೈತನ ಬೆನ್ನೆಲುಬಾಗಿ ದುಡಿಯುತ್ತಿರುವುದು ನಿತ್ಯ ಸತ್ಯ. ಐದು ಬಗೆಯ ವೃತ್ತಿದಾರರಾದ ಪಂಚಾಳ ಕುಶಲಕರ್ಮಿಗಳು

ದೇಶಕ್ಕೆ ಅತ್ಯಂತ ಅಗತ್ಯತೆಯ ಕುಶಲಕಸಬುದಾರರಾಗಿ ಕಂಡುಬರುತ್ತಾರೆ. ಪಂಚ ವೃತ್ತಿಯ ಕುಶಲಕರ್ಮಿಗಳಿಲ್ಲದ ಭಾರತದ ಯಾವ ಹಳ್ಳಿಯೂ ಇಲ್ಲ ಎಂಬುದರ ಸತ್ಯತೆಯನ್ನು ಕಂಡುಕೊಳ್ಳಲಾಗಿದೆ. ಅಷ್ಟರ ಮಟ್ಟಿಗೆ ಕುಶಲಕರ್ಮಿಗಳ ಕೆಲಸದ ಅವಶ್ಯಕತೆಯನ್ನು ಈ ದೇಶದಲ್ಲಿ ಗುರುತಿಸಲಾಗುತ್ತದೆ. ಇಲ್ಲಿಯವರೆಗೂ ಕಂಡುಕೊಂಡಂತೆ ಕರ್ನಾಟಕವಷ್ಟೇ ಅಲ್ಲ ಸಮಗ್ರ ಭಾರತದ ಕೃಷಿ ಸಂಸ್ಕೃತಿಯ ಕಟ್ಟುವಿಕೆಯಲ್ಲಿ ಪಂಚಾಳ ಕುಶಲಕರ್ಮಿಗಳು ಮಹತ್ವದ ಕರ್ಮಿಗಳಾಗಿದ್ದಾರೆಂಬುದು ತಿಳಿದುಬರುತ್ತದೆ.

ಕನಾಟಕದಲ್ಲಿ ಕಂಡುಕೊಂಡಂತೆ ಪಂಚಾಳ ಕುಶಲಕರ್ಮಿಗಳೊಂದಿಗೆ ಈ ವೃತ್ತಿಗಳನ್ನು ಪಂಚಾಳೇತರರು ನಿರ್ವಹಿಸುತ್ತಿದ್ದಾರೆಂಬುದು ಸ್ಪಷ್ಟ. ಕಂಬಾರ, ಬಡಿಗೇರ, ಕಂಚುಗಾರಿಕೆ, ಶಿಲ್ಪ ಮತ್ತು ಅಕ್ಕಸಾಲಿ ವೃತ್ತಿಗಳನ್ನು ಪ್ರಾಚೀನ ಕಾಲದಿಂದಲೂ ಪಂಚಾಳ ಕುಶಲಕರ್ಮಿಗಳು ನಿರ್ವಹಿಸಿಕೊಂಡು ಬಂದಿದ್ದಾರೆ. ಇವರಂತೆ ಪಂಚಾಳೇತರ ವರ್ಗಗಳಾದ ಹಿಂದೂ, ಮುಸ್ಲಿಂ, ಕ್ರೈಸ್ತ ಸಮುದಾಯ ಈ ಐದು ವೃತ್ತಿಗಳನ್ನು ಶಿರಸಂಗಿ ಪರಿಸರದಲ್ಲಿ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಹಿಂದೂ ಕುಶಲಕರ್ಮಿ ವರ್ಗದಲ್ಲಿ ಕುರುಬರು, ಕ್ಷತ್ರಿಯರು, ಲಿಂಗಾಯತರು, ಮಾದರ, ಮರಾಠ ಇತರೆ ಉಪವರ್ಗಗಳು ಕುಶಲಕರ್ಮಿ ಸಮುದಾಯದಲ್ಲಿ ಸೇರಿಕೊಂಡಿವೆ. ಕುಲಕಸಬುದಾರರಂತೆ ಈ ವರ್ಗದ ಕೆಲವರು ಸಾಮಾನ್ಯವಾಗಿ ಕಂಬಾರ ಮತ್ತು ಬಡಿಗೇರ ಕಸಬುಗಳನ್ನು ನಿರ್ವಹಿಸುತ್ತ ಬಂದಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.

ಪಂಚಾಳ ಮತ್ತು ಪಂಚಾಳೇತರ ಕುಶಲಕರ್ಮಿ ಸಮುದಾಯ ಧಾರ್ಮಿಕ ನೆಲೆಯಲ್ಲಿ ನೂರಾರು ದೇವರುಗಳನ್ನು ಆರಾಧಿಸುತ್ತಿದ್ದರೂ ಕಸುಬಿನ ಹಿನ್ನೆಲೆಯಲ್ಲಿ ಶಿರಸಂಗಿ ಕಾಳಮ್ಮನ ಆರಾಧಕರಾಗಿರುವುದು ತಿಳಿದುಬರುತ್ತದೆ. ಪಾರಂಪರಿಕ ಕುಶಲಕರ್ಮಿಗಳು ಶಿರಸಂಗಿ ಕಾಳಮ್ಮನನ್ನು ಧಾರ್ಮಿಕ ದೃಷ್ಟಿಗಿಂತ ವೃತ್ತಿಮೂಲ ದೇವತೆಯಾಗಿ ಕಾಣುತ್ತಾರೆ. ಇವರ ಪ್ರಭಾವ ಮತ್ತು ಪಂಚ ಕಸಬುಗಳ ಪರಿಣಾಮವಾಗಿ ಪಂಚಾಳೇತರ ಕುಶಲಕರ್ಮಿಗಳು ಶಿರಸಂಗಿ ಕಾಳಮ್ಮನನ್ನು ಆರಾಧಿಸುತ್ತಿರುವುದು ಕರ್ನಾಟಕದ ಎಲ್ಲ ಶಕ್ತಿ ದೇವತೆಗಳಲ್ಲಿ ಶಿರಸಂಗಿ ಕಾಳಮ್ಮ ವಿಶಿಷ್ಟದೇವತೆಯಾಗಿ ಕಂಡುಬರುತ್ತಾಳೆ. ಕುಶಲಕರ್ಮಿ ನಿರ್ಮಿಸಿದ ಪ್ರತಿವಸ್ತುವಿಗೂ ಕಾಳಮ್ಮ ಶಕ್ತಿಯಾಗಿ ರೂಪಗೊಂಡಿರುವುದು ತಿಳಿದುಬರುತ್ತದೆ. ಶಿರಸಂಗಿ ಕಾಳಮ್ಮನ ವಿಶಿಷ್ಟ ಶಕ್ತಿಯ ಕಾರಣವಾಗಿ ಕುಶಲಕರ್ಮಿ ನಿರ್ಮಿತ ವಸ್ತು ದೀರ್ಘಕಾಲಿಕ ತಾಳಿಕೆ-ಬಾಳಿಕೆಯ ಸುಂದರ ಮತ್ತು ಕಲಾತ್ಮಕ ವಸ್ತುವಾಗಿ ಕಾಣುತ್ತದೆ. ಈ ದಿಸೆಯಲ್ಲಿ ಕುಶಲಕರ್ಮಿಗಳು ಕಸುಬಿನ ಹಿನ್ನೆಲೆಯಲ್ಲಿ ಶಿರಸಂಗಿ ಕಾಳಮ್ಮನ ಆರಾಧಕರಾಗಿರುವುದು ತಿಳಿದುಬರುತ್ತದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಕುಶಲಕರ್ಮಿಗಳ ವೃತ್ತಿ ನೈಪುಣ್ಯತೆ ಮತ್ತು ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನ ಚಿತ್ರಣದೊಂದಿಗೆ ಅವರ ವೃತ್ತಿ ಮೂಲ ಆರಾಧನೆಯ ಶಿರಸಂಗಿ ಕಾಳಮ್ಮನ ಮಹತ್ವ ಮತ್ತು ದೇವತೆಯ ನೆಲೆ ಶಿರಸಂಗಿ ಪರಿಸರವನ್ನು ವಿಶೇಷ ಅಧ್ಯಯನಕ್ಕೊಳಪಡಿಸಿ ಕುಶಲಕರ್ಮಿ ಮತ್ತು ಶಿರಸಂಗಿ ಕಾಳಮ್ಮನ ವೃತ್ತಿ ಮೂಲ ನಡುವಿನ ಸಂಬಂಧಗಳ ಕೆಲವು ಒಳನೋಟಗಳನ್ನು ಕಂಡುಕೊಳ್ಳಲಾಗಿದೆ.

೧. ಕರ್ನಾಟಕದ ಕುಶಲಕರ್ಮಿಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕತೆಯ ಅನನ್ಯತೆಯನ್ನು ಕಂಡುಕೊಳ್ಳಲಾಗಿದೆ. ಕುಶಲಕರ್ಮಿಗಳನ್ನು ಮುಖ್ಯವಾಗಿ ಪಂಚಾಳರು ಮತ್ತು ಪಂಚಾಳೇತರ ಕುಶಲಕರ್ಮಿಗಳೆಂದು ಅಧ್ಯಯನದಲ್ಲಿ ಗುರುತಿಸಲಾಗಿದ್ದು, ಪಂಚಾಳ ಕುಶಲಕರ್ಮಿ ಕುಲಕಸುಬು (ವಾರಸುದಾರಿಕೆ)ದಾರರಾದರೆ ಪಂಚಾಳೇತರ ಕರ್ಮಿಗಳು ಸಾಂದರ್ಭಿಕ ಕುಶಲಕರ್ಮಿಗಳಾಗಿ ಕಂಡುಬರುತ್ತಾರೆ. ಪಾರಂಪರಿಕ ಮತ್ತು ಸಾಂದರ್ಭಿಕ ಕರ್ಮಿ ಬೇರೆ ಬೇರೆಯಾದರೂ ವೃತ್ತಿ ಒಂದೇಯಾಗಿದೆ. ಈ ಎರಡು ವರ್ಗಗಳು ವಿಭಿನ್ನವೆನಿಸಿದರೂ ವೃತ್ತಿ ಮೂಲ ಹಿನ್ನೆಲಯನ್ನು ಗಮನಿಸಲಾಗಿ ಪಂಚಾಳ ಮತ್ತು ಪಂಚಾಳೇತರ ಕಸಬುದಾರರು ಶಿರಸಂಗಿ ಪರಿಸರದ ಕಾಳಮ್ಮನ ಆರಾಧಕರಾಗಿದ್ದಾರೆ. ಶಿರಸಂಗಿ ಕಾಳಮ್ಮನ ಆರಾಧನೆ ಫಲವಾಗಿ ಉಭಯ ಕುಶಲಕರ್ಮಿ ವರ್ಗಗಳು ತಯಾರಿಸುವ ಪ್ರತಿವಸ್ತುಗಳು ಶಕ್ತಿಯುತವಾಗಿರುತ್ತವೆ. ಇದರಿಂದಾಗಿ ವೃತ್ತಿಯಲ್ಲಿ ಕಸಬುದಾರ ಪ್ರಖ್ಯಾತಿ ಪಡೆಯುತ್ತಾನೆ. ಅದಕ್ಕೆ ಕಾಳಮ್ಮ ಕಾರಣ ಳೆಂದು ಭಾವಿಸಿ ಕುಶಲಕರ್ಮಿ ಶಿರಸಂಗಿಯಲ್ಲಿ ನೆಲೆಗೊಂಡ ಕಾರಣಕ್ಕೆ ಶ್ರೀಕೇತ್ರದ ದರ್ಶನ ಪಡೆಯುತ್ತಾನೆ. ಕಾಳಮ್ಮನನ್ನು ಕಸುಬು ಮೂಲ ದೇವತೆಯಾಗಿ ಆರಾಧಿಸುತ್ತಿರುವುದು ಈ ಅಧ್ಯಯನದ ತಿರುಳು.

೨. ಕುಶಲಕರ್ಮಿಗಳ ಆರಾಧನೆಯ ಕೇಂದ್ರ ಶಿರಸಂಗಿ. ಅಲ್ಲಿ ನೆಲೆಗೊಂಡ ಕಾಯಕ ಶಕ್ತಿ ಕಾಳಮ್ಮ. ಶಿರಸಂಗಿಯ ಪರಿಸರವನ್ನು ಭೌಗೋಳಿಕವಾಗಿ ಮತ್ತು ಚಾರಿತ್ರಿಕ ದೃಷ್ಟಿಯಿಂದ ಅಧ್ಯಯನಿಸಲಾಗಿದೆ. ಕ್ಷೇತ್ರದ ಬಗ್ಗೆ ಕುಶಲಕರ್ಮಿಗಳಲ್ಲಿ ಗಾಢವಾದ ವೃತ್ತಿ ನಂಬಿಕೆಯಿರುವುದನ್ನು ಗುರುತಿಸಲಾಗಿದೆ.

೩. ಶಿರಸಂಗಿ ಪ್ರದೇಶ ಕುಶಲಕರ್ಮಿಗಳ ಸಾಂಸ್ಕೃತಿಕ ನೆಲೆ. ಈ ಪರಿಸರದಲ್ಲಿ ಕೇವಲ ಓರ್ವ ಕಾಳಮ್ಮ ದೇವತೆ ಅಷ್ಟೇ ನೆಲೆಗೊಂಡಿಲ್ಲ. ಇದರ ಜೊತೆ ಕಮ್ಮಟೇಶ್ವರ, ಭೈರವ, ಉಡಚಮ್ಮ ಹಾಗೂ ಕಮ್ಮಟೇಶ್ವರನ ಪರಿವಾರ ದೇವತೆಗಳಾದ ಭೈರವ, ಉಮಾಮಹೇಶ್ವರ, ಷಣ್ಮುಖ, ಗಣಪತಿ, ಸಪ್ತಮಾತೃಕೆಯರು, ಸೂರ್ಯ, ಪಾದಗಟ್ಟೆಯ ಶಿಲ್ಪ, ಅಮೃತೇಶ್ವರ ದೇವಸ್ಥಾನ, ಈಶ್ವರ ದೇವಸ್ಥಾನ, ರಾಮ-ಲಕ್ಷಣ-ಹನುಮಂತೇಶ್ವರ ದೇವಸ್ಥಾನ, ಮೌನೇಶ್ವರ ಗುಡಿ,

ಕಲ್ಮೇಶ್ವರ ಗುಡಿ, ಮಾರುತಿ ದೇವಸ್ಥಾನ ಹೀಗೆ ದೇವತೆಗಳ ಪರಿವಾರವೆಲ್ಲವೂ ಶಿರಸಂಗಿ ಪರಿಸರದಲ್ಲಿ ನೆಲೆಗೊಂಡು ಸಾಂಸ್ಕೃತಿಕ ಸ್ವರೂಪವನ್ನು ಕ್ಷೇತ್ರದಲ್ಲಿ ಕಟ್ಟಿಕೊಟ್ಟಿರುವುದನ್ನು ಕಂಡುಕೊಳ್ಳಲಾಗಿದೆ.

೪. ಶಿರಸಂಗಿ ಕಾಳಮ್ಮ ದೇವತೆಯನ್ನು ಇದುವರೆಗೂ ಧಾರ್ಮಿಕ ದೇವತೆಯಾಗಿ ಆರಾಧಿಸಿರುವುದನ್ನು ಗಮನಿಸಲಾಗಿದೆ. ಆದರೆ ಈ ಅಧ್ಯಯನದಲ್ಲಿ ಕಾಳಮ್ಮ ಧಾರ್ಮಿಕ ದೇವತೆಯಷ್ಟೇ ಅಲ್ಲ, ವೃತ್ತಿ ಮೂಲ ದೇವತೆಯೂ ಆಗಿದ್ದಾಳೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

೫. ಕಸಬುದಾರರ ವೃತ್ತಿಮೂಲ ದೇವತೆ ಕಾಳಮ್ಮ ಶಿರಸಂಗಿಯಲ್ಲಿ ನೆಲೆಸಿದ್ದರೂ ಕ್ಷೇತ್ರದ ಪ್ರಭಾವ ಕರ್ನಾಟಕದ ಆಚೆಗೂ ಬೀರಿರುವುದು ನಾಡಿನ ಎಲ್ಲ ದೇವತೆಗಳಿಗಿಂತ ಶಿರಸಂಗಿ ಕಾಳಮ್ಮ ಕುಶಲಕರ್ಮಿಗಳ ವೃತ್ತಿಯ ಹಿನ್ನೆಲೆಯಲ್ಲಿ ವಿಶಿಷ್ಟ ವೃತ್ತಿ ಮೂಲ ಶಕ್ತಿ ದೇವತೆಯಾಗಿ ರೂಪಗೊಂಡಿರುವುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ.

೬. ಕುಶಲಕರ್ಮಿಗಳ ವೃತ್ತಿ ಆರಾಧನೆಯ ಕ್ಷೇತ್ರವಾದ ಶಿರಸಂಗಿಯ ಆಧುನಿಕ ಸಂದರ್ಭಗಳನ್ನು ವಿವೇಚಿಸಲಾಗಿದೆ. ಕ್ಷೇತ್ರವನ್ನು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯನಂತರ ಎಂದು ವಿಭಾಗಿಸಿ ಅಧ್ಯಯನಿಸಲಾಗಿದ್ದು, ಸ್ವಾತಂತ್ರಪೂರ್ವದಲ್ಲಿ ಕುಶಲಕರ್ಮಿಗಳಿಗೆ ಶಿರಸಂಗಿಗೆ ಹೋಗಿ ಬರಲು ಆಗಿರುವ ಅನಾನುಕೂಲತೆ ಜನಸಂಪರ್ಕವಿಲ್ಲದೆ ಭಯಾನಕತೆಯುಂಟು ಮಾಡುತ್ತಿತ್ತು. ಸ್ವಾತಂತ್ರ್ಯನಂತರ ಸಮಾಜದ ಟ್ರಸ್ಟ್‌ಗಳು ಹುಟ್ಟುಕೊಂಡು ಆಧುನಿಕ ಸವಲತ್ತು ಕ್ಷೇತ್ರ ಹೊಂದಿರುವುದು ಮತ್ತು ಕುಶಲಕರ್ಮಿಗಳು ಕ್ಷೇತ್ರದಲ್ಲಿ ವಸತಿ ಉಳಿದ ವೃತ್ತಿ ಕೌಶಲ್ಯಗಳನ್ನು ಪರಸ್ಪರ ಅನುಯಾಯಿಗಳ ಜೊತೆ ಹಂಚಿಕೊಂಡಿರುವುದನ್ನು ಶಿರಸಂಗಿ ಆಧುನಿಕ ಕಾಲದಲ್ಲಿ ಪಡೆದುಕೊಂಡಿರುವುದನ್ನು ಗುರುತಿಸಲಾಗಿದೆ.

೭. ಶಿರಸಂಗಿ ಕಾಳಮ್ಮನ ವೃತ್ತಿ ಮೂಲ ಆರಾಧನೆಯ ಕುಶಲಕರ್ಮಿಗಳು ಸಮಾಜಮುಖಿ ಕಾಯಕದಲ್ಲಿ ನಿರತರಾದವರು. ಇವರು ವಿಶ್ವದ ಕಲೆಗಳ ಉಪಾಸಕರೂ ಆಗಿದ್ದು, ಬುದ್ಧಿಮತಿಗಳು ಹರಿತ ಅಲಗದಂತೆ ಕೆಲಸದಲ್ಲಿ ತೀಕ್ಷ್ಣಮತಿಗಳಾಗಿದ್ದಾರೆ. ಪರಸ್ಪರ ನಿರ್ಮಿಸುವ ವಸ್ತುವಿನ ಬಗ್ಗೆ ಸ್ಪರ್ಧಾತ್ಮಕತೆಯಿದ್ದರೂ ವಸ್ತುವಿನ ಗುಣಾತ್ಮಕತೆಯಲ್ಲಿ ಕನಿಷ್ಠತೆ ಕಂಡುಬರುವುದಿಲ್ಲ. ಕುಶಲಕರ್ಮಿಗಳು ತಯಾರಿಸುವ ವಸ್ತುಗಳನ್ನು ಕೃಷಿಯೋಪಕರಣ ಮತ್ತು ಗೃಹೋಪಕರಣಗಳೆಂದು ವಿಭಾಗಿಸಿ, ಆ ವಸ್ತುಗಳ ನಿಖರವಾದ ಮಾಪನಗಳನ್ನು ಹಾಗೂ ಕುಶಲಕರ್ಮಿಗಳ ವೃತ್ತಿ ಉಪಕರಣಗಳನ್ನು ಮಾಪನಾಧಾರಿತವಾಗಿ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದು, ಅಧ್ಯಯನದ ಪ್ರಮುಖ ವಸ್ತುವೆಂದು ಕಂಡುಕೊಳ್ಳಲಾಗಿದೆ.

೮. ಕುಶಲಕರ್ಮಿಗಳೆಂದರೆ ಪಾರಂಪಕರಿಕರೆಂದು ಮಾತ್ರ ತಿಳಿಯಲಾಗಿತ್ತು ಪಾರಂಪರಿಕ ಕಸಬುದಾರರ ಜೊತೆ ಪಂಚಾಳೇತರ ಕುಶಲಕರ್ಮಿಗಳು ಪಂಚವೃತ್ತಿಯಲ್ಲಿ ನೈಪುಣ್ಯತೆಯನ್ನು ಪಡೆದುಕೊಂಡಿರುವುದನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಪಾರಂಪರಿಕರು ಕಾಳಮ್ಮನನ್ನು ಆರಾಧಿಸುವಂತೆ ಪಂಚಾಳೇತರರು ವೃತ್ತಿಯ ಮೂಲವಾಗಿ ಕಾಳಮ್ಮನನ್ನು ಆರಾಧಿಸಿ ಕಸುಬಿನಲ್ಲಿ ನೈಪುಣ್ಯತೆ ಪಡೆದುಕೊಂಡಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೯. ಪಂಚಾಳೇತರ ಕುಶಲಕರ್ಮಿಗಳನ್ನು ವೃತ್ತಿ ಹಿನ್ನೆಲೆಯಲ್ಲಿ ಗುರುತಿಸಿರುವುದು ಇದೇ ಮೊದಲು ಎಂಬುದು ಈ ಅಧ್ಯಯನ ತಿಳಿಸಿಕೊಡುತ್ತದೆ. ಪಂಚಾಳೇತರ ಕಸುಬುದಾರರು ವೃತ್ತಿಯ ಮುಂದುವರಿಕೆ ಮತ್ತು ತಾಳಿಕೆಯ ವಸ್ತು ನಿರ್ಮಿತಿಗಾಗಿ ಕಾಳಮ್ಮನನ್ನು ವೃತ್ತಿ ಆರಾಧನಾ ದೇವತೆಯನ್ನಾಗಿ ಪೂಜಿಸಿರುವುದು ಅಧ್ಯಯನದಲ್ಲಿ ಸ್ಪಷ್ಟಪಡಿಸಲಾಗಿದೆ.

೧೦. ಅಧ್ಯಯನದಲ್ಲಿ ಸಾಂಸ್ಕೃತಿಕ ಅಂಶಗಳೇ ಪ್ರಮುಖವೆಂದೆನಿಸಿದರೂ ಚಾರಿತ್ರಿಕ ಮತ್ತು ಸಾಮಾಜಿಕ ಅಂಶಗಳನ್ನು ಪರಿಗಣಿಸಲಾಗಿದೆ.

೧೧. ಪಂಚಾಳ ಕುಶಲಕರ್ಮಿ ಸಾಮಾಜಿಕವಾಗಿ ಮೇಲಸ್ತರದಲ್ಲಿದ್ದರೂ ಕಾರಣಾಂತರವಾಗಿ ತಳ್ಳಲ್ಪಟ್ಟವನಾಗಿದ್ದಾನೆ. ಬ್ರಾಹ್ಮಣನಾದ ಪಂಚಾಳ ಕುಶಲಕರ್ಮಿ ಮತ್ತು ಆತನ ಪಂಚ ಕಸಬುಗಳು ಅವನತಿಯ ಅಂಚಿನಲ್ಲಿವೆ ಎಂಬುದು ತಿಳಿದುಬರುತ್ತದೆ.

೧೨. ಪಂಚಾಳ ಕುಶಲಕರ್ಮಿಗಳು ಸಾಮಾಜಿಕವಾಗಿ ಕಳೆದುಕೊಂಡ ಮೇಲು ಸ್ಥಾನ ಪಡೆಯಬೇಕು. ಅವರ ಪಂಚ ಕಸಬುಗಳು ವಿಶ್ವಕ್ಕೆ ಮಹತ್ವದ್ದಾಗಿದ್ದು ಅವು ಉನ್ನತೀಕರಣಗೊಳ್ಳಬೇಕು. ಈ ಮೂಲಕ ಸಮುದಾಯ ಮತ್ತು ಉದ್ಯೋಗಗಳು ಪುನಶ್ಚೇತನಗೊಳ್ಳಬೇಕು ಎಂಬುದನ್ನು ಈ ಅಧ್ಯಯನ ಮನದಟ್ಟಾಗಿಸುತ್ತದೆ.

೧೩. ಪಂಚಾಳ ಸಮುದಾಯ ಮತ್ತು ಸಮುದಾಯಿಕ ಪಂಚ ಉದ್ಯೋಗಗಳು ಜಾಗತಿಕ ಜೀವನದಲ್ಲಿ ನಾಶವಾಗುತ್ತಿವೆ. ಪಂಚ ಉದ್ಯೋಗಗಳು ನಾಶವಾದರೆ ಪಂಚಾಳ ಸಮುದಾಯದ ಅಸ್ತಿತ್ವವೇ ಇಲ್ಲದಂತಾಗುತ್ತದೆ ಎಂದು ಗುರುತಿಸಲಾಗಿದೆ. ಸಮುದಾಯದ ಉಳಿವಿಗೆ ಪುನಶ್ಚೇತನದ ಆಯಾಮಗಳನ್ನು ಕಂಡುಕೊಳ್ಳಲಾಗಿದೆ. ಹಾಗೆಯೇ ಪಂಚ ಉದ್ಯೋಗಗಳು ಪಂಚಾಳರ ವೃತ್ತಿ ಬದುಕಿನ ಭಾಗವಾಗಿ ಉಳಿಯಲು ಪುನಶ್ಚೇತಗೊಳಿಸಲು ಹದಿಮೂರು ಆಯಾಮಗಳ ಅತಿ ಮಹತ್ವದ್ದಾಗಿವೆ ಎಂಬುದನ್ನು ಈ ಅಧ್ಯಯನವು ಎತ್ತಿ ತೋರಿಸುತ್ತದೆ.\

೧೪. ಪಂಚಾಳ ಸಮುದಾಯ ಪುನಶ್ಚೇತನಗೊಳ್ಳುಲು ಆರು ಆಯಾಮಗಳನ್ನು ಗುರುತಿಸಲಾಗಿದೆ.

೧. ಸಮುದಾಯ ಜಡತ್ವದಿಂದ ಕ್ರಿಯಾತ್ಮಕಗೊಳ್ಳುವುದು

೨. ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಬೆಳೆಯಬೇಕು.

೩. ವಂಶಪಾರಂಪರಿಕ ಜ್ಞಾನದ ಅರಿವು ಬೆಳೆಸಿಕೊಳ್ಳುವುದು.

೪. ಸಮುದಾಯದ ಕಲೆ, ಸಂಪ್ರದಾಯ ಧಾರ್ಮಿಕ ಕ್ರಿಯಾಧಿಗಳನ್ನು ರೂಢಿಸುವುದು.

೫. ಒಳಪಂಡಗಳ ಒಗ್ಗೂಡುವಿಕೆ

೬. ಸಮುದಾಯ ಸಾಹಿತ್ಯ-ಚಿಂತನ ಕಮ್ಮಟಗಳ ರಚನೆ

೧೫. ಪಂಚ ಕಸಬುಗಳು ಪ್ರಾಚೀನ ಕಾಲದಿಂದಲೂ ಅತೀ ಮಹತ್ವತೆಯನ್ನು ಪಡೆದುಕೊಂಡಿವೆ. ಈಗ ಅವುಗಳಿಗೆ ಪುನಃಶಕ್ತಿಯನ್ನು ತುಂಬುವುದು ಅವಶ್ಯಕವಾಗಿದ್ದು, ಅವುಗಳ ಪುನಶ್ಚೇತನಕ್ಕೆ ಏಳು ಆಯಾಮಗಳನ್ನು ಕಂಡುಕೊಳ್ಳಲಾಗಿದೆ.

೧. ಗ್ರಾಮಮಟ್ಟದಲ್ಲಿ ಕುಲಕಸುಬುದಾರರ ಸಂಘ ಸ್ಥಾಪನೆ

೨. ಕುಶಲಕರ್ಮಿಗಳ ಸಭೆ-ಸಮಾವೇಶಗಳ ಏರ್ಪಡಿಸುವಿಕೆ

೩. ಸಮುದಾಯದ ನಿರುದ್ಯೋಗಿಗಳಿಗೆ ಕುಲಕಸುಬಿನ ವಸತಿ ತರಬೇತಿ ಕೇಂದ್ರಗಳ ನಿರ್ಮಾಣ

೪. ಕುಲಕಸುಬಿನ ಉತ್ಪಾದಿತ ವಸ್ತುಗಳ ಮುಕ್ತ ಸಾಗಟ-ಮಾರಾಟ ವ್ಯವಸ್ಥೆ

೫. ಸರಕಾರ ಮತ್ತು ಸಮುದಾಯ ಅಭಿವೃದ್ಧಿ ನಿಗಮದ ಸೌಲಭ್ಯಗಳ ಅರಿವು

೬. ಕುಶಲಕರ್ಮಿಗಳ ಕಲೆ-ಕೌಶಲ್ಯಗಳ ಪ್ರಸಾರತೆಗೆ ಪತ್ರಿಕೆ ಸ್ಥಾಪನೆ

೭. ಕುಲಕಸುಬುಗಳಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ

ಹೀಗೆ ಕುಶಲಕರ್ಮಿಗಳು ಎಲ್ಲ ಸಮುದಾಯದ ಕೆಲಸಕಾರ್ಯಗಳನ್ನು ನಿರ್ವಹಿಸಿ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಜಗತ್ತಿಗೆ ನೀಡಿದ್ದಾರೆ. ಜಗತ್ತಿನ ಸಕಲ ಕಲೆಗಳನ್ನು ಕರಗತ ಮಾಡಿಕೊಂಡ ಕುಶಲಕರ್ಮಿ ತನ್ನ ವೃತ್ತಿ ಸರ್ವಶ್ರೇಷ್ಠವಾದದ್ದು. ತಾನು ನಿರ್ಮಿಸಿದ ವಸ್ತು ವಿಶ್ವವಿಖ್ಯಾತವಾದುದು. ಅದಕ್ಕೆಲ್ಲ ಕಾರಣ ತನ್ನ ವೃತ್ತಿ ದೇವತೆ ಶಿರಸಂಗಿ ಕಾಳಮ್ಮ ಎಂಬ ನಂಬಿಕೆ ಇರಿಸಿಕೊಂಡಿದ್ದಾರೆ. ಕಾಳಮ್ಮನ ಆರಾಧನೆಯ ಫಲವಾಗಿ ಕುಶಲಕರ್ಮಿ ಉತ್ಕೃಷ್ಟ ವಸ್ತು ರಚಿಸಿ ಪ್ರಸಿದ್ಧಿ ಪಡೆದುಕೊಂಡಿದ್ದಾನೆ. ಇದರಿಂದಾಗಿ ಕುಶಲಕರ್ಮಿ ಕಾಳಮ್ಮನನ್ನು ವೃತ್ತಿ ಮೂಲ ದೇವತೆಯಾಗಿ ಆರಾಧಿಸುತ್ತ ಬಂದಿದ್ದಾನೆ. ವೃತ್ತಿ ಉಪಕರಣಗಳಲ್ಲಿ ಕಾಳಮ್ಮನನ್ನು ಕಾಣುವ ಕುಶಲಕರ್ಮಿಯ ದೃಷ್ಟಿಕೋನ ವೈಶಿಷ್ಟ್ಯಪೂರ್ಣವಾದದ್ದು.

ಶಿರಸಂಗಿ ಕಾಳಮ್ಮನನ್ನು ಧಾರ್ಮಿಕ ದೇವತೆಯಾಗಿ ಪೂಜಿಸುವ ಪಂಚಾಳ ಕುಶಲಕರ್ಮಿ ತನ್ನ ಆರಾಧನೆಯ ಸ್ಥಿತಿಯನ್ನು ಮತ್ತಷ್ಟು ಮುಂದುವರೆಸಿ ಕಾಳಮ್ಮನನ್ನು ವೃತ್ತಿಮೂಲ ದೇವತೆಯಾಗಿ ಕಾಣುವ ಬಗ್ಗೆ ವಿಶಿಷ್ಟವಾಗಿದೆ. ಪಂಚಾಳೇತರ ಕುಶಲಕರ್ಮಿ ಕಾಳಮ್ಮನನ್ನು ಆರಾಧಿಸಲು ಪ್ರೇರಣಾ ಶಕ್ತಿ ಪಂಚಾಳ ಕುಶಲಕರ್ಮಿಯೇ ಆಗಿದ್ದಾನೆ. ಒಟ್ಟಾಗಿ ಕುಶಲಕರ್ಮಿ ಮತ್ತು ಶಿರಸಂಗಿ ಕಾಳಮ್ಮ ನಡುವಿನ ವೃತ್ತಿಮೂಲ ಸಂಬಂಧಗಳು ಮಹತ್ವದ್ದು ಮತ್ತು ಪವಿತ್ರವಾದದ್ದಾಗಿವೆ. ಇಂಥಹ ವಿಶೇಷ ಸಂಬಂಧಗಳು ಯಾವ ದೇವತೆ ಮತ್ತು ಕಸಬುದಾರರಲ್ಲಿಯೂ ದೊರೆಯುವುದು ಕಷ್ಟ. 'ಚವುಷಷ್ಟಿಕಳಾನ್ವಿತೆ' ಶಿರಸಂಗಿ ಕಾಳಮ್ಮನಾದರೆ 'ಚವುಷಷ್ಠಿ ಕಲಾರಾಧಕ' ಕುಶಲಕರ್ಮಿಯಾಗಿ ದ್ದಾನೆ. ಈ ಬಗೆಯ ವೃತ್ತಿ ಸಂಬಂಧಿತ ದೇವತೆ ಮತ್ತು ಆರಾಧಕರು ಶಿರಸಂಗಿ ಕಾಳಮ್ಮ ಮತ್ತು ಕುಶಲಕರ್ಮಿಗಳಾಗಿದ್ದಾರೆ. ಹೀಗಾಗಿ ವಿಶ್ವದ ಸರ್ವಶ್ರೇಷ್ಠ ಪಂಚಕಸಬುಗಳು ಮತ್ತು ಅವುಗಳನ್ನು ನಿರ್ವಹಿಸುವ ಪಂಚಾಳ ಸಮುದಾಯಕ್ಕೆ ಪುನಃ ಶಕ್ತಿ ತುಂಬುವ ಅಗತ್ಯತೆಯನ್ನು ಕಂಡುಕೊಳ್ಳಲಾಗಿದೆ.

ಕುಶಲಕರ್ಮಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಉನ್ನತಕ್ಕೇರಬೇಕು. ಕುಶಲಕರ್ಮಿಯ ಬದುಕು ಸುಂದರಗೊಳ್ಳಲು ಉದ್ಯೋಗಗಳಲ್ಲಿ ಹೊಸತನವನ್ನು ತರುವ ಅಗತ್ಯವಿದೆ. ಸಮುದಾಯ ಮತ್ತು ಪಂಚಕಸಬುಗಳ ಪುನಶ್ಚೇತನಗೊಳ್ಳುವುಕೆಗೆ ಉದ್ಯೋಗಗಳಲ್ಲಿ ಹೊಸತನದ ಸಾಧ್ಯತೆಗಳನ್ನು ಕಂಡುಕೊಳ್ಳುವುದು ತೀರಾ ಅವಶ್ಯಕ. ಕುಶಲಕರ್ಮಿ ಮೂಲತಃ ಕರ್ಮಮಾರ್ಗಿ, ಶ್ರಮದಾನ, ಕುಶಲಕರ್ಮಿಯ ಮೂಲ ಸಂಸ್ಕೃತಿ ಅನಂತರದಲ್ಲಿ ಧಾರ್ಮಿಕ ಆರಾಧಕ. ಹೀಗಾಗಿ ಮುಂದಿನ ಪೀಳಿಗೆಗೆ ಪಂಚ ಕಸಬುಗಳ ತಿಳಿವಳಿಕೆ ಮತ್ತು ಮುಂದುವರಿಕೆ ಜ್ಞಾನ, ಅವಕಾಶಗಳು ಒದಗಿಸಬೇಕು. ಶೈಕ್ಷಣಿಕವಾಗಿ ಸಮುದಾಯ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿವರೆಗೆ ಅಧ್ಯಯನ ಮಾಡಿರುವ ಯುವಕರಿಗೆ ವೃತ್ತಿ ತರಬೇತಿಗಳನ್ನು ನೀಡಿ ಬದುಕಿಗೆ ಆಸರೆಯಾಗುವ ಉದ್ಯೋಗಗಳನ್ನು ಸೃಷ್ಟಿಸಬಲ್ಲ ಕೈಗಾರಿಕಾ ತರಬೇತಿ ಕೋರ್ಸ್, ಡಿಪ್ಲೋಮಾ ಕೋರ್ಸ್‌ಗಳನ್ನು ಹುಟ್ಟುಹಾಕಬೇಕು.

ವೃತ್ತಿ ಕೌಶಲ್ಯ ತರಬೇತಿ ಕೇಂದ್ರಗಳು ಸ್ಥಾಪನೆಯಾಗಬೇಕು. ಪ್ರಮಾಣ ಪತ್ರ ನೀಡುವ ಶೈಕ್ಷಣಿಕ ಕೇಂದ್ರಗಳಿಗಿಂತ ಉದ್ಯೋಗ ನೀಡುವ ಕುಶಲಕರ್ಮಿಗಳ ಹೆಮ್ಮೆಯ ಬಡಿಗಸಾಲಿ, ಕಂಬಾರಸಾಲಿ ಪ್ರಸ್ತುತ ಅಗತ್ಯವನ್ನು ಸೂಚಿಸುತ್ತವೆ. ಉದ್ಯೋಗಿಗಳಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸಬೇಕಾಗಿದೆ. ದೇಶಿಯ ವಸ್ತುಗಳಿಗೆ ಮಹತ್ವ ನೀಡಿದರೆ ಪ್ರತಿಗ್ರಾಮದಲ್ಲಿರುವ ಕುಶಲಕರ್ಮಿಯ ಬದುಕು ಸುಂದರವಾಗುತ್ತದೆ.

ಈ ದಿಸೆಯಲ್ಲಿ ಸಮುದಾಯ ಮತ್ತು ಪಂಚ ಕಸಬುಗಳ ರಕ್ಷಣೆಗಾಗಿ ಮತ್ತು ಪಾರಂಪರಿಕ ಕಲೆಯ ಮುಂದುವರಿಕೆಗಾಗಿ ವಿಶ್ವವಿದ್ಯಾಲಯಗಳನ್ನು ಕಟ್ಟಬೇಕು. ಅವು ಪ್ರಮಾಣ ಪತ್ರ ನೀಡುವುದರ

ಜೊತೆ ತರಬೇತಿದಾರರ ಕೈಗೆ ಉಳಿ, ಕೊಡತಿ, ಸುತ್ತಿಗೆ ಮುಂತಾದ ವೃತ್ತಿ ಮೂಲ ಉಪಕರಣಗಳನ್ನು ನೀಡಿ ಉದ್ಯೋಗಿಗಳನ್ನಾಗಿ ರೂಪಿಸುವ ಶಕ್ತಿ ಕೇಂದ್ರಗಳಾಗಬೇಕು. ಶಿರಸಂಗಿ ಕಾಳಮ್ಮ ಪಂಚ ಕಸುಬುಗಳ ವೃತ್ತಿ ಮೂಲದೇವತೆಯಾಗಿರುವುದರಿಂದ ಈ ಪ್ರದೇಶ ಪ್ರಾಚೀನ ಕಾಲದಿಂದಲೂ ಕುಶಲಕರ್ಮಿಗಳ ಕಾರ್ಯಾಗಾರವಾಗಿರುವುದರಿಂದ ವೃತ್ತಿ ಕೌಶಲ್ಯತೆಯ ವಿಶ್ವವಿದ್ಯಾಲಯ ಶಿರಸಂಗಿಯಲ್ಲಿ ಸ್ಥಾಪಿಸಬೇಕು. ಇದರಿಂದಾಗಿ ಕಮ್ಮಟ, ಕಮ್ಮಟಿಗಳು ಮತ್ತು ಇವರ ಶಕ್ತಿ ಕಾಳಮ್ಮ ಒಂದೇ ನೆಲೆಯಲ್ಲಿ ಕಾಣಲು ಸಾಧ್ಯವಾಗುತ್ತದೆ. ಪಂಚಾಳರ ಪಂಚಕಸಬುಗಳ ಡಿಪ್ಲೋಮಾ ಕೈಗಾರಿಕಾ ತರಬೇತಿ ಕೇಂದ್ರ, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದಲ್ಲಿ ಇದು ಇತರೆ ಕುಶಲ ಕರ್ಮಿ ಸಮುದಾಯಕ್ಕೆ ಪ್ರೇರಣೆಯಾಗುವ ಸಾಧ್ಯತೆಗಳಿವೆ.

ಒಟ್ಟಾಗಿ ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ ವೃತ್ತಿ ಹಿನ್ನೆಲೆಯಲ್ಲಿ ಸಮಾಜದಲ್ಲಿ ವಿಶಿಷ್ಟ ವೃತ್ತಿ ಮತ್ತು ಶಕ್ತಿಯಾಗಿ ಕಂಡುಬಂದಿರುವುದು ಈ ಅಧ್ಯಯನದ ಹೆಚ್ಚುಗಾರಿಕೆಯಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ಛಾಯಾಚಿತ್ರಗಳು
೩. ಕಾಳಮ್ಮನ ಕುರಿತಾದ ಪದಗಳು

೧. ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್.ಎಸ್., **ಕ್ಷೇತ್ರಕಾರ್ಯ**, ವಿಶಾಲಾಕ್ಷಿ ಪ್ರಕಾಶನ, ಬೆಳಗಾವಿ, ೨೦೧೫

೨. ಅಣ್ಣಿಗೇರಿ ಎಂ.ಎಂ., **ಶಾಸನ ಸಂಗ್ರಹ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೭

೩. ಅಣ್ಣಿಗೇರಿ ಎಂ.ಎಂ., **ಐಹೊಳೆ ಸಾಂಸ್ಕೃತಿಕ ಮತ್ತು ಕಲೆ**, ಧಾರವಾಡ, ೧೯೭೪

೪. ಅಮರೇಶ ನುಗಡೋಣಿ(ಸಂ), **ಜೈಮಿನಿ ಭಾರತದ ಸಾಂಸ್ಕೃತಿಕ ಮುಖಾಮುಖಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೫. ಆಚಾರ್ಯ ಜಿ.ಎನ್.ಎಂ., **ಅಮರಶಿಲ್ಪಿ ಜಕಣಾಚಾರ್ಯ**, ವಿಶ್ವಶಾಂತಿ ಪ್ರಕಾಶನ, ಬೆಂಗಳೂರು, ೨೦೧೩

೬. ಇರ್ಫಾನ್ ಹಬೀಬ್, **ಸಿಂಧೂನಾಗರಿಕತೆ**, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧

೭. ಕಲಬುರ್ಗಿ ಎಂ.ಎಂ., **ಕರ್ನಾಟಕದ ಕೈಫಿಯತ್ತುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೮. ಕಲಬುರ್ಗಿ ಎಂ.ಎಂ.(ಸಂ), **ಮಾರ್ಗ-೪**, ಸ್ವಪ್ನಬುಕ್ ಹೌಸ್, ಬೆಂಗಳೂರು, ೨೦೧೦

೯. ಕಲಬುರ್ಗಿ ಎಂ.ಎಂ., **ಸಂಸ್ಕೃತಿ-ವಿಕೃತಿ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೦. ಕಲವೀರ ಮನ್ವಚಾರ್, **ಮಾತೃದೇವತಾ ಆರಾಧನೆ: ಒಂದು ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೧೧. ಕಮಲಾ ಹೆಮ್ಮಿಗೆ, **ಸವದತ್ತಿ ಎಲ್ಲಮ್ಮ ಮತ್ತು ದೇವದಾಸಿ ಪದ್ಧತಿ**, ವಿಮೋಚನಾ ಪ್ರಕಾಶನ, ಅಥಣಿ, ೧೯೯೮

೧೨. ಕೃಷ್ಣಮೂರ್ತಿ ಕೆ.ವಿ., ದಕ್ಷಿಣ ಭಾರತದ ಪಾರಂಪರಿಕ ಕುಶಲಕರ್ಮಿಗಳು, ವಿಶ್ವಶ್ರೀ ಪಬ್ಲಿಷರ್ಸ್, ತುಮಕೂರು, ೨೦೧೨

೧೩. ಕೊಸಾಂಬಿ ಡಿ.ಡಿ., ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ, ಚಿಂತನ ಪ್ರಕಾಶನ, ಬೆಂಗಳೂರು, ೨೦೧೧

೧೪. ಕೊಟ್ಟಗನಹಳ್ಳಿ ರಾಮಯ್ಯ, ಸಿಂದ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೫. ಗುರುರಾಜಾಚಾರ್ಯ ಎಸ್., ಲೋಥಾಲ್ ಮತ್ತು ಸಿಂಧೂ ನಾಗರಿಕತೆ, ಹರಿಪ್ರಕಾಶನ, ಧಾರವಾಡ, ೧೯೯೪

೧೬. ಗುರುನಾಥ ಮಹಾಸ್ವಾಮಿಗಳು, ವಿಶ್ವಕರ್ಮ ಬ್ರಾಹ್ಮಣರು, ಅನೆಗೊಂದಿ, ೨೦೦೯

೧೭. ಗುಂಜಾಳ ಎಸ್.ಆರ್., ಬೆಳಗಾವಿ ಬೆಳಕು, ಕನ್ನಡ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೩

೧೮. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಪ್ರಕಾಶನ, ೨೦೧೧

೧೯. ಜಗನ್ನಾಥ ಬಡಿಗೇರ(ಸಂ), ಕಾಳಿಕಾ ಸಂದೇಶ(ಸ್ಮರಣ ಸಂಚಿಕೆ), ವಿಶ್ವಶಕ್ತಿ ಪ್ರಕಾಶನ, ಶಿರಸಂಗಿ, ೨೦೧೪

೨೦. ಜೀವಣ್ಣ ಮಸಳಿ(ಸಂ), ಮೌನೇಶ್ವರ ವಚನ ಸಂಗ್ರಹ, ವಿಶ್ವದರ್ಶನ ಪ್ರಕಾಶನ, ಬಾಗಲಕೋಟೆ, ೧೯೮೬

೨೧. ಜೋಶಿ ಎಸ್.ಕೆ., ಶ್ರೀ ಕಾಳಿಕಾ ದರ್ಶನ, ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ, ಶಿರಸಂಗಿ, ೨೦೦೮

೨೨. ತಾರಿಹಳ್ಳಿ ಹನುಮಂತಪ್ಪ, ಹೊಸೂರಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೨೩. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೨೦೧೧

೨೪. ದೇವೇಂದ್ರಕುಮಾರ ಹಕಾರಿ, ಗ್ರಾಮೀಣ ವೃತ್ತಿಗಳು, ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಾಶನ, ಬೆಂಗಳೂರು, ೨೦೦೦

೨೫. ನಾಯಕ್ ಎನ್.ಆರ್., **ಕರ್ನಾಟಕದ ಶಕ್ತಿ ದೇವತೆಗಳು**, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೩

೨೬. ಪಾಟೀಲ್ ಬಿ.ಪಿ., **ಗ್ರಾಮದೇವತೆಗಳು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬

೨೭. ಪಡಶೆಟ್ಟಿ ಎಂ.ಎಂ., **ತಿಂಥಿಣಿ ಮೊನಪ್ಪಯ್ಯ ಒಂದು ಅಧ್ಯಯನ**, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ-ಗದಗ, ೧೯೯೨

೨೮. ಪ್ರಭಾಕರ್, **ದೇವಾಲಯ ವಾಸ್ತು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೨೯. ಪತ್ತಾರ ಎನ್.ಆರ್., **ಶ್ರೀಕ್ಷೇತ್ರ ಶಿರಸಂಗಿ ಶ್ರೀ ಕಾಳಿಕಾದೇವಿ ಮಹಾತ್ಮೆ**, ಭುವನೇಶ್ವರಿ ಸಾಹಿತ್ಯ ಪ್ರಕಾಶನ, ಶಿರಹಟ್ಟಿ, ೧೯೯೨

೩೦. ಬೋರಲಿಂಗಯ್ಯ ಹಿ.ಚಿ., **ಮಂಟೇಸ್ವಾಮಿ ಕಾವ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೧. ಬಡಿಗೇರ ಆರ್.ಎ., **ವಿಶ್ವಕರ್ಮ ಜನಾಂಗ: ಒಂದು ಅಧ್ಯಯನ**, ಎಂ.ಫಿಲ್.(ಅಪ್ರಕಟಿತ ಪ್ರಬಂಧ), ಮುಂಬೈ ವಿಶ್ವವಿದ್ಯಾಲಯ, ಮುಂಬೈ

೩೨. ಭೀಮಸೇನ್ ಬಡಿಗೇರ, **ನಾ.ಭಾ.ಕೃತಿ ಸಂಪುಟ ೧**, ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ, ೨೦೦೩

೩೩. ಭೀಮಸೇನ್ ಬಡಿಗೇರ, **ನಾ.ಭಾ.ಕೃತಿ ಸಂಪುಟ ೨**, ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ, ೨೦೦೪

೩೪. ಶ್ರೀಶೈಲ ಮಠಪತಿ, **ನಿಡಗುರ್ಕಿ ಜೀವುಬಾಯಿಯ ಸಮಗ್ರ ಸಾಹಿತ್ಯ ಅಧ್ಯಯನ**, ಗುರು ಗೌರವ ಪ್ರಕಾಶನ, ಜಿನರಾಳ, ೨೦೧೬

೩೫. ಭಗವತ್ ಶರಣ ಉಪಾಧ್ಯಾಯ, **ಭಾರತೀಯ ಬಹುಮುಖಿ ಸಂಸ್ಕೃತಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧

೩೬. ಮೈತ್ರಿ ಕೆ.ಎಂ., **ಎಲ್ಲಮ್ಮನ ಕಥನ ಕಾವ್ಯ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೫

೩೭. ಮಹದೇವ ಶಂಕನಪೂರ, **ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೩೮. ಮಹದೇವ ಸಿ., **ಮೈಲಾರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೩೯. ಮೋಹನ್‌ರಾವ್ ಎ.ಎಫ್.(ಸಂ), **ವಿಶ್ವಕರ್ಮ ಸಮಾಜ ದರ್ಶನ–೨**, ವಿಶ್ವಬಂಧು ಪ್ರಕಾಶನ, ಶಿವಮೊಗ್ಗ, ೧೯೯೮

೪೦. ಮಂಜುನಾಥ ಬೇವಿನಕಟ್ಟಿ, **ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೪೧. ರಹಮತ್ ತರೀಕೆರೆ, **ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೪೨. ರವೀಂದ್ರನಾಥ ಕೆ., **ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ**, ೨೦೦೭

೪೩. ಲಿಂಗಯ್ಯ ಡಿ., **ಕರ್ನಾಟಕದ ಗ್ರಾಮದೇವತೆಗಳು**, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೪

೪೪. ಲಿಂಗದಹಳ್ಳಿ ಹಾಲಪ್ಪ, **ಮುಂಬೈ ಕರ್ನಾಟಕ ಸಂಸ್ಕೃತಿ ಮತ್ತು ಜನಾಂಗ**, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೧೦

೪೫. ಲಿಂಗರಾಜ ಕಮ್ಮಾರ(ಸಂ), **ಸಂಸ್ಕೃತಿ ಪರಂಪರೆ**, ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಾವೇರಿ, ೨೦೧೦

೪೬. ವಾಸುದೇವ ಬಡಿಗೇರ, **ಶಿರಸಂಗಿ ಕಾಳಮ್ಮ: ಸಾಂಸ್ಕೃತಿ ಅಧ್ಯಯನ(ಚಾರಿತ್ರಿಕ ಪರಂಪರೆ)** ಶ್ವೇತಾ–ಬಾಗೀರಥಿ ಪ್ರಕಾಶನ, ಹೊಸಪೇಟೆ, ೨೦೦೨

೪೭. ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೪೮. ವಾಸುದೇವ ಬಡಿಗೇರ, **ಬಸವನ ಬಾಗೇವಾಡಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೪೯. ವಾಸುದೇವ ಬಡಿಗೇರ, **ಸಂಡೂರು ಪರಿಸರದ ಕಾರ್ತೀಕೆಯ ತಪೋವನ**, ಮಯ ಪ್ರಕಾಶನ, ಕಮಲಾಪುರ, ೧೯೯೭

೫೦. ವಿಜಯಶ್ರೀ ಇಟ್ಟಣ್ಣವರ, **ಹದಿನೆಂಟು ಜಾತಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೫೧. ವೀರೇಶ ಬಡಿಗೇರ, **ಬಾಚಿಕಾಯಕದ ಬಸವಯ್ಯ: ವೃತ್ತಿ ಮತ್ತು ತತ್ವ ಮೀಮಾಂಸೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೫೨. ವೀರೇಶ ಬಡಿಗೇರ, **ತಿಂತಿಣಿ ಮೌನೇಶ್ವರರ ವಚನಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೬

೫೩. ವೀರೇಶ ಬಡಿಗೇರ, **ಪ್ರಥಮ ಶ್ರೀಕಾಳಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ,** ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ, ಶಿರಸಂಗಿ, ೨೦೦೨

೫೪. ವೀರೇಶ ಬಡಿಗೇರ(ಸಂ), **ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೫೫. ವೀರೇಶ ಬಡಿಗೇರ, **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೫೬. ವಿರೂಪಾಕ್ಷ ಬಡಿಗೇರ, **ಶಿರಸಂಗಿ ಸಂಸ್ಥಾನ: ಒಂದು ಅಧ್ಯಯನ,** ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ, ೨೦೧೬

೫೭. ವಿರೂಪಾಕ್ಷ ಬಡಿಗೇರ(ಸಂ), **ನಾಗಲಿಂಗಾನುಭವ,** ನವಲಗುಂದ(ಧಾರವಾಡ), ೧೯೭೩

೫೮. ವಿರೂಪಾಕ್ಷ ಬಡಿಗೇರ, **ಮನುಕುಲದ ಮಂದಾರ,** ವಿಶ್ವಕರ್ಮ ಸಮಾಜ ವಿಕಾಶ ಸಂಸ್ಥೆ, ಶಿರಸಂಗಿ, ೨೦೧೨

೫೯. ವಿರೂಪಾಕ್ಷ ಬಡಿಗೇರ, **ವಿದ್ಯಾವಾಚಸ್ಪತಿ,** ಹೊಂಬಳ ಎಸ್.ಎಸ್., ಗದಗ, ೧೯೭೮

೬೦. ವಿರೂಪಾಕ್ಷ ಬಡಿಗೇರ(ಸಂ), **ಆರಾಧನ,** ಕೃಷಿ ಕಾಮಧೇನು ಪ್ರಕಾಶನ, ಧಾರವಾಡ, ೨೦೧೪

೬೧. ಮೌನೇಶ್ ಆಚಾರ್(ಸಂ), **ವಿಶ್ವರಥ,** ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ, ೨೦೧೨

೬೨. ಸುರೇಶ ಹನಗಂಡಿ(ಸಂ), **ಇಂದ್ರವೇಣಿ,** ಬೆಳುವಲ ಪ್ರಕಾಶನ, ಬಳೋಬಾಳ, ೨೦೧೧

೬೩. ಸುಂದರ ಅ., **ಕರ್ನಾಟಕ ಪ್ರಾಗೀತಿಹಾಸ ಕಾಲದ ಕಲೆ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

೬೪. ಸುಂದರ ಅ., **ಕಿಷ್ಕಿಂದೆ,** ಹನುಮಂತನ ತವರು, ಹೊಸಪೇಟೆ, ೧೯೯೭

೬೫. ಸಿದ್ಧಲಿಂಗಯ್ಯ, **ಗ್ರಾಮದೇವತೆಗಳು,** ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೯

೬೬. ಸುಂಕಾಪುರ ಎಂ.ಎಸ್., **ಜಾನಪದ ಸಾಹಿತ್ಯ ದರ್ಶನ–೮**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೬೭. ಸರಜೂ ಕಾಟ್ಕರ್, **ಬೆಳಗಾವಿ ಸಂಸ್ಕೃತಿ**, ಬೆಳಂದಿಗಳು ಪ್ರಕಾಶನ, ಬೆಳಗಾವಿ, ೨೦೧೧

೬೮. ಸಿದ್ಧೇಶ್ವರಾನಂದ ಸ್ವಾಮಿಜಿ, **ಮೌನೇಶ್ವರ ವಚನಸುಧಾ**, ಅಲ್ಲಮಪ್ರಭು ದೇವರಮಠ, ಚಟ್ನಹಳ್ಳಿ, ೨೦೧೨

೬೯. ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೭೦. ಶಿರೂರ ಬಿ.ವಿ., **ಸಂಶೋಧನಾ ಸ್ವರೂಪ**, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೦೦

೭೧. ಶ್ರೀನಿವಾಸ ಪಾಡಿಗಾರ, **ಪುರಾತತ್ವಶಾಸ್ತ್ರ ಪರಿಚಯ**, ಚೈತನ್ಯ ಪ್ರಕಾಶನ, ಧಾರವಾಡ, ೨೦೧೦

೭೨. ಶ್ರೀನಿವಾಸ ಪಾಡಿಗಾರ, **ಭಾರತೀಯ ಇತಿಹಾಸದ ಶಾಸನ ಆಕರಗಳು**, ರಾಮಾಶ್ರಯ ಪಬ್ಲಿಕೇಶನ್ಸ್, ಧಾರವಾಡ, ೨೦೦೪

೭೩. ಶೆಟ್ಟರ್ ಷ., **ಬಾದಾಮಿ ಚಾಲುಕ್ಯರ ಶಾಸನ ಸಾಹಿತ್ಯ**, ಅಭಿನವ ಪ್ರಕಾಶನ, ಬೆಂಗಳೂರು, ೨೦೧೨

೭೪. ಹಳ್ಳಿಕೇರಿ ಎಫ್.ಟಿ.(ಸಂ), **ರೇವಣಸಿದ್ಧ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

೭೫. ಹೆಬ್ಬಾಲೆ ಕೆ.ನಾಗೇಶ, **ಬಹುಸಂಸ್ಕೃತಿ ಮತ್ತು ದೇಶೀ ಜಾತ್ರೆಗಳ ಮಹಾಸಮನ್ವಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

ಪತ್ರಿಕೆಗಳು

೧. ಕಾಳಿಕಾ ಸಂದೇಶ

೨. ಕಾಳಿಕಾ ದೇವಿ ವಾಣಿ

೩. ಜಗತ್ ಕಲ್ಯಾಣ

೪. ವಿಧಾತೃ


೫. ಸಂಯುಕ್ತ ಕರ್ನಾಟಕ

೬. ಗ್ಯಾಜೆಟಿಯರ್ ಮುಂಬೈ ಕರ್ನಾಟಕ ಭಾಗದ್ದು

ಲೇಖನಗಳು

೧. ಬಡಿಗೇರ ಬಿ.ಎಂ.(ಸಂ), ಶ್ರೀಕ್ಷೇತ್ರ ಶಿರಸಂಗಿ, ಬೆಳಗಾವಿ ಬೆಳಕು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೨. ಛಾಯಾಚಿತ್ರಗಳು



ಸಾಲಂಕೃತವಾಗಿ ಪೂಜೆಗೊಂಡ ಶ್ರೀ ಕಾಳಮ್ಮ, ಶಿರಸಂಗಿ




ಶಿರಸಂಗಿ ಕಾಳಮ್ಮ ದೇವಾಲಯದ ಪ್ರವೇಶದ್ವಾರ







ಋಷ್ಯಶೃಂಗ ಬೆಟ್ಟದ ಮೇಲಿನ ದೀಪಸ್ತಂಭ(ಶಿರಸಂಗಿ)



ಋಷ್ಯಶೃಂಗ ಬೆಟ್ಟದ ಮೇಲಿಂದ ಹರಿಯುವ ಸಣ್ಣ ಝರಿ



ಶಿರಸಂಗಿ ಪರಿಸರದ ಸೀಳು ಬೆಟ್ಟದ ಸುಂದರ ನೋಟ









ಶಿರಸಂಗಿ ಗುಹೆಗೆ ಹೋಗುವ ಕಾಲು ದಾರಿ



ಶಿರಸಂಗಿ ಪ್ರದೇಶದ ಪದರು ಕಲ್ಲಿನ ಬೆಟ್ಟ



ಶಿರಸಂಗಿ ಕಾಳಮ್ಮ ದೇವಸ್ಥಾನದ ಒಳಪ್ರಾಂಗಣ ಹಾಗೂ ಪಂಚಲೋಹ ಕವಚದ ಗೋಪುರ









ಕಾಳಮ್ಮ ದೇವಸ್ಥಾನದ ಪ್ರಾಂಗಣದ ಧ್ವಜಸ್ತಂಭ ಹಾಗೂ ಪಾದಗಟ್ಟೆ



ಕಾಳಮ್ಮ-ಕಮ್ಮಟೇಶ್ವರ ದೇವಸ್ಥಾನದ ಮುಂಭಾಗದ ರಂಗಮಂಟಪ







ಕಾಳಮ್ಮ ದೇವಸ್ಥಾನದ ಪ್ರಾಂಗಣ



ದೇವಸ್ಥಾನದ ಪ್ರಾಂಗಣದಲ್ಲಿರುವ ದೀಪಸ್ತಂಭ







ಕಾಳಮ್ಮ ದೇವಸಾನದ ಮುಂಭಾಗದಲ್ಲಿರುವ ರಂಗಮಂಟಪದ ಒಳಂಗಾಣ



ಶ್ರೀ ಕಮ್ಮಟೇಶ್ವರ, ಶಿರಸಂಗಿ







ಕಾಲಭೈರವನ ಮೂರ್ತಿ



ಚೆನ್ನಭೈರವನ ಮೂರ್ತಿ



ಗಣಪತಿ(ಸಿದ್ಧಿವಿನಾಯಕ)ಮೂರ್ತಿ









ಶ್ರೀ ಷಣ್ಮುಖಮೂರ್ತಿ



ಉಮಾಮಹೇಶ್ವರಮೂರ್ತಿ



ಸೂರ್ಯನಾರಾಯಣನ ಮೂರ್ತಿ









ಸಪ್ತ ಮಾತೃಕೆಯರು
ವೀರಭದ್ರ,ಬ್ರಾಹ್ಮಿ,
ಮಹೇಶ್ವರ, ಕಾಮಾರಿ,
ವೈಷ್ಣವಿ, ವರಾಹಿ, ಇಂದ್ರೆ,
ಚಾಮುಂಡಿ, ಗಣೇಶ



ಶಿರಸಂಗಿ ಕಮ್ಮಟೇಶ್ವರ
ದೇವಸ್ಥಾನದ ಸಭಾಂಗಣ
ಮಂಟಪದಲ್ಲಿರುವ ಶಿಲಾನಂದಿ



ಕ್ರಿ.ಶ.೧೧೮೬ರ ಶಿಲಾಶಾಸನ









ಕ್ರಿ.ಶ.೧೧೪೮ರ ಶಿಲಾಶಾಸನ



ಶಿರಸಂಗಿ ಕಾಳಮ್ಮ ದೇವಸ್ಥಾನದ ಪ್ರಾಂಗಣದಲ್ಲಿರುವ ಅಮರೇಶ್ವರ ದೇವಸ್ಥಾನ







ಶಿರಸಂಗಿ ಪರಿಸರದ ಕಲ್ಮೇಶ್ವರ ದೇವಸ್ಥಾನ ಕ್ರಿ.ಶ.೧೧೪೮ರ ಶಿಲಾಶಾಸನ ಮತ್ತು ಚಿಕ್ಕನಂದಿ



ಶಿರಸಂಗಿ ಕಾಳಮ್ಮ ದೇವಸ್ಥಾನದ ಪಶ್ಚಿಮ ಭಾಗದಲ್ಲಿರುವ ಪುವುಳಿ ಮತ್ತು ಸಭಾಮಂಟಪ



ಶಿರಸಂಗಿ ಗ್ರಾಮದೇವತೆ ಉಡಚಮ್ಮನ ಗುಡಿ







ಕಾಳಮ್ಮ ದೇವಸ್ಥಾನ
ಪ್ರಾಂಗಣದಲ್ಲಿರುವ
ಬುತ್ತಿಕಟ್ಟೆ





ಶಿರಸಂಗಿ ಪ್ರದೇಶದ
ರಾಮ, ಲಕ್ಷ್ಮಣ,
ಹನುಮಂತೇಶ್ವರ
ದೇವಸ್ಥಾನ, ಶಿರಸಂಗಿ

ಶಿರಸಂಗಿಯ ಭೀಮರತಿ
ಹೊಂಡ











ಶಿರಸಂಗಿ ಯಾತ್ರಿಕರ ನೀರಿನ ದಾಹ ತೀರಿಸುವ ಖಡ್ಗತೀರ್ಥ



ಶಿರಸಂಗಿಯಲ್ಲಿರುವ ಮೋನಪ್ಪಯ್ಯನ ಗುಡಿ







ಶಿರಸಂಗಿ ಕಾಳಮ್ಮ
ದೇವಸ್ಥಾನದ ದಕ್ಷಿಣ
ಭಾಗದಲ್ಲಿರುವ ಮಾರುತಿ
ದೇವಸ್ಥಾನ



ಶಿರಸಂಗಿ ಕಾಳಮ್ಮ
ದೇವಸ್ಥಾನಕ್ಕೆ ಹೋಗುವ
ಮಾರ್ಗ ಮಧ್ಯದಲ್ಲಿರುವ
ಬನ್ನಿ ಮಹಾಕಾಳಿ ಗುಡಿ



ಕಾಳಿಕಾ ದೇವಸ್ಥಾನದ
ದಕ್ಷಿಣಕ್ಕಿರುವ ಒಳಕಲ್ಲು
ಬರಮ್ಮಪ್ಪ(ಬ್ರಹ್ಮ)









ಶಿರಸಂಗಿ ಕಾಳಮ್ಮ ದೇವಸ್ಥಾನಕ್ಕೆ ತೆರಳುವ ಮುಖ್ಯರಸ್ತೆ



ಶಿರಸಂಗಿ ಕಾಳಮ್ಮನ ಪಾರಂಪರಿಕ ಪೂಜಾರಿಗಳು



ಬಡಿಗೇರ ಉದ್ಯೋಗದ ಕುಶಲಕರ್ಮಿ ತುಳಸಪ್ಪ ಭೀಮಪ್ಪ ಬಡಿಗೇರ, ಗ್ರಾಮ: ಬೆನಕಟ್ಟಿ, ತಾ:ಸವದತ್ತಿ, ಜಿ: ಬೆಳಗಾವಿ, ವಯಸ್ಸು ೭









ಕುರುಪಿ ಬಾಯಿ ಹೆಣೆಯುತ್ತಿರುವ ಕುಶಲಕರ್ಮಿ



೩. ಕಾಳಮ್ಮನ ಕುರಿತಾದ ಪದಗಳು

ನಮ್ಮಮ್ಮಾ ಶ್ರೀ ಕಾಳಿಕೆ ವಿಶ್ವರೂಪಿಣಿಯೇ
ಕಾರುಣ್ಯಮಯಿ ತಾಯಿಯೇ ಭಕ್ತರಾದ
ಕೃಪೆಯನು ಕರುಣಿಸು ಶ್ರೀಕಾಳಿಕೆಯೇ
ದಯತೋರಿ ಸಲಹಮ್ಮಾ ತಾಯೆ... ॥ಪ॥

ಆನಂದಾಸನದೊಳು ಆನಂದದಿ ಕುಳಿತವಳೆ
ಅಷ್ಟಭುಜಗಳಿಂದಲಿ ಆಯುಧಗಳನ್ನು ಹಿಡಿದವಳೆ
ಮನದಕತ್ತಲೆಯನು ಕಳೆದ ಮಹಾಂಕಾಳಿ
ತಾಯೆ ನಿನ್ನ ಸೇವೆಗೆ ನಾವು ಕಾದಿದೆವು ಅಮ್ಮ... ॥೧॥

ಬಯಲು ನಾಡಿನ ಬೆಟ್ಟದ ಕಣಿವೆಯ ಶಿಲಿಯಲಿ
ಬಯಕೆ ಕಾಮನೆಗಳಿಗೆ ಸ್ಪಂದಿಸಿದೆಯಲ್ಲಿ
ಕಲೆಯ ಆರಾಧನೆಗಾಗಿ ಜ್ಞಾನ ದೀಕ್ಷೆಯನಿತ್ತ
ಶಿರಸಂಗಿಯ ಸಿರಿರಾಣಿಯೇ ತಾಯೆ... ॥೨॥

ಸಕಲಭಕ್ತರ ಕರೆಗೆ ಓಗೊಟ್ಟು ನಲಿದವಳೆ
ಲೋಕಪಾವನೆ ದೇವಿ ವರದಾತೃಳೆ ವಿಶ್ವಕರ್ಮ
ಜನಾಂಗದ ತಾಯೇ ಮುಕ್ತಿದಾಯಿನಿ
ಮೊರೆಯನ್ನು ಕೇಳಿಕಾಪಡುಯೆಮ್ಮನು ತಾಯೇ... ॥೩॥

ಸತ್ವ-ರಜೋತಮದ ತ್ರಿಗುಣತ್ಮ ತವನಿಧಿಯೇ
ಶ್ರೀದೇವಿ ಕಾಳಿಕೆ ನಿನ್ನೆಷ್ಟು ಬ್ರಣ್ಣಿಸಲಿ
ವಿಶ್ವದಾಟಕೆ ನೀನು ಮೂಲಚೇತನ
ಭಕ್ತ ಕೋಟಿಯ ಪೊರೆವ ಕಾಳಿಕಾಂಬೆಯೇ... ॥೪॥

೨

ಕಾಳಮ್ಮ ಮಹಾಂಕಾಳಮ್ಮ
ನಮ್ಮವಗುಣಗಳನ್ನು ತಾಳಮ್ಮ....॥ಪ॥

ಹರಹರಿ ಇಲ್ಲದೊಂದಿಗಿದ್ದೆಮ್ಮ
ಆರಾರು ಅರಿಯ ನಿನ್ನ ನುದೆಮ್ಮ
ನಿಜರೂಪ ತಾಳಿ ಬಂದೆಮ್ಮ
ಮಹಿಷಾಸಾರನ ಹೊಡೆದು ಗೆದ್ದು ಬಂದೆಮ್ಮ... ॥೧॥

ಭೂಮಿ ಆಕಾಸಕೆ ಏಕಮ್ಮ
ನಿನ್ನ ರುಷದೊಳಗಿ ಮೂರುಲೋಕಮ್ಮ
ಯುಗ ಯುಗಗಳಾದವು ನಾಲ್ಕು ಮಾ
ಈ ಜಗದೊಳು ಪಾರಹಾಕಮ್ಮ... ॥೨॥

ಎನ್ನ ಮರೆಯಲು ನ್ಯಾಯಮ್ಮ
ನಿನ್ನಲ್ಲಿ ಇಲ್ಲ ಅನ್ಯಾಯಮ್ಮ
ತಿಂಥಣಿ ಮೋನನ ತಾಯಮ್ಮ
ರಾಜನಂತ ಕರುಣದಿಂದ ಕಾಯಮ್ಮ... ॥೩॥

ಕಾಳಮ್ಮ ಮಹಾಂಕಾಳಮ್ಮ
ನಮ್ಮ ಅವಗುಣಗಳನ್ನು ತಾಳಮ್ಮ

೩

ಲಿಂಗನ ಬಂಡಿಯಲ್ಲಿ ಮೆರವೆನೆಂದಾ
ಶ್ರೀ ವಿಶ್ವಕರ್ಮ ಶಿರಸಂಗಿ ಶ್ರೀ ಕಾಳಿಕಾಯ್ವಳೆಂದಾ
ನೀವೆಲ್ಲಾ ಒಂದಾಗಿ ಬನ್ನಿರೆಂದಾ॥

೪

ಶ್ರೀ ಕಾಳಿಕಾದೇವಿಯ ನೆನೆವರಿಗಾನಂದ
ಮಹಾದೇವಿಯ ನೆನೆವರಿಗಾನಂದ ॥ಪ॥

ಶಂಕರ ಚಕ್ರವನು। ಕಂದಲಿ ಪಿಡಿದಿಹ
ಪಂಕಜಲೋ)ಚನೆ ಶಂಕರಮಣಿಯು... ॥೧॥

ಭೀತಿಯ ತೋರಲು। ಗದೆಯನು ಪಿಡಿದಿಹ
ಮೂರ್ಖರ ಕಡಿಯಲು ಖಡ್ಗವಧರಿಸಿಹ... ॥೨॥

ದುಷ್ಟರ ಇರಿಯಲು। ಶೂಲವ ತೋರಿಪೆ
ಕಷ್ಟದ ಹರಿಸಂತೆ ಇಷ್ಟವ ಕರುಣಿಪೆ.... ॥೩॥

ಅಭಯದ ಹಸ್ತದಿ। ನಗು ಮೊಗದೋರುವ
ನಿರ್ಭಯ ವದನದ ಶ್ರೀ ದುರ್ಗಾಂಭಿಕೆಯು... ॥೪॥

ಸುತ್ತಲು ಮಹಾಜ್ಯೋತಿಯು ಥಳ ಥಳ ಥಳ ಥಳ
ಕೊರಳಿನ ಪದಕವು ಥಳ ಥಳ ಥಳ ಥಳ ॥೪॥

೫

ಆದಿಶಕ್ತಿಯೇ ಮಾಯೆ/ ಶ್ರೀ ಕಾಳಿಕಾದೇವಿಯೇ
ಬಾದಿಸುವ ದುರಿತಗಳ ಪರಿಹರಿಸು ತಾಯೇ... ॥ಪ॥

ನರನಾಗಿ ಜನಿಸಿರುವ ಮನುಜ ಜೀವನದಲಿ
ಬರಡು ಬುದ್ಧಿಗಳನ್ನು ಪರಿಹರಿಸೋ ಜನನಿ..... ॥೧॥

ದುರ್ಜನರ ಸಂಘವನು ಬಿಡಿಸಿ ಮೆರೆಸುವ ಮಾತೆ
ಸಜ್ಜನರರಿಗೊಲಿದು ನೀ ಮುಕ್ತಿಯ ಕೊಡುವ ಖ್ಯಾತೆ ॥೨॥

ಮುನ್ನ ಮಾಡಿದಪಾಪ/ ಇನ್ನು ಬಾರದ ತೆರದಿ
ನಿನ್ನ ಪಾದವನೆ ನಂಬಿ/ ಸ್ಮರಿಸುವೆನು ಭಕ್ತಿಯಲಿ ॥೩॥

ಕರುಣಾಂಬೆ ನೀನೆಂದು ಮರೆಯದೆನ್ನನು ಕಾಯೇ
ಕಾರಣ್ಯ ನಿಧಿ ನೀನು ರಕ್ಷಿಪುದು ಮಾತೆ ॥೪॥

ಕೈಮುಗಿವೆ ನಾ ಮಾತೆ ಜಗದಂಬೆ ಮಾಯೆ
ತ್ರಿಮೂರ್ತಿಗಳ ಮಾತೆ ಶ್ರೀಕಾಳಿಕಾದೇವಿ ಭುವನ ವಿಖ್ಯಾತೆ ॥೫॥

೬

ಕಾಳಮ್ಮ ಕಾಳಮ್ಮ। ದೇವಿ ನಿನಗೆ ಶರಣಮ್ಮ
ಅರಿಶಿನದಾರತಿ ನಿನಗಮ್ಮ। ನಿನ್ನ
ಅರಿಸಿನ ಬೊಟ್ಟು ನನಗಮ್ಮ॥

ಕಾಳಮ್ಮ ಕಾಳಮ್ಮ। ದೇವಿ ನಿನಗೆ ಶರಣಮ್ಮ
ಕುಂಕುಮದಾರತಿ ನಿನಗಮ್ಮ।
ನಿನ್ನ ಕುಂಕುಮ ಬೊಟ್ಟು ನನಗಮ್ಮ॥

ಕಾಳಮ್ಮ ಕಾಳಮ್ಮ। ದೇವಿ ನಿನಗೆ ಶರಣಮ್ಮ
ಮಲ್ಲಿಗೆ ದಂಡಿ ನಿನಗಮ್ಮ।
ನಿನ್ನ ಹೂವಿನ ಮನಸ್ಸು ನನಗಮ್ಮ॥

ಕಾಳಮ್ಮ ಕಾಳಮ್ಮ। ದೇವಿ ನಿನಗೆ ಶರಣಮ್ಮ
ಹಣ್ಣುಕಾಯಿ ನಿನಗಮ್ಮ।
ನಿನ್ನ ಪಾದಸೇವೆ ನನಗಮ್ಮ॥

ಕಾಳಮ್ಮ ಕಾಳಮ್ಮ। ದೇವಿ ನಿನಗೆ ಶರಣಮ್ಮ।
ತುಪ್ಪದ ಆರತಿ ನಿನಗಮ್ಮ
ನಿನ್ನ ಕರುಣೆಯ ಬೆಳಕು ನನಗಮ್ಮ॥

ಕಾಳಮ್ಮ ಕಾಳಮ್ಮ। ದೇವಿ ನಿನಗೆ ಶರಣಮ್ಮ
ಕಾಳಮ್ಮ ಕಾಳಮ್ಮ। ಲಕ್ಷ್ಮೀ ನಿನಗೆ ಶರಣಮ್ಮ

೭

ಕರುಣದಿ ಕಾಯನ್ನ ಕಾಳಮ್ಮ ತಾಯಿ
ಆದಿಶಕ್ತಿ ನೀ ಜಗದಂಬಾ ಮಾಯೆ॥

ತ್ರಿನೇತ್ರ ತ್ರಿಶೂಲ ಖಡ್ಗ ಕಂಜಾಲ
ತಿರವಿ ಈರ್‍ಯಾಡ್ಯಾಳ ದೈತ್ಯ ಸಂಹಾರ॥

ಮುಂಜಾನೆ ಉದಯಕ್ಕೆ ಭೀಮನದಿ ಸ್ನಾನ
ಭಕ್ತರು ತರುವರು ದಂಡಿ ಕುಂಕುಮ॥

ವರುಷಕೆ ಬರುವದು ನಮ್ಮ ಯುಗಾದಿ
ಭಕ್ತರು ತರುವರು ಉಡಿಯಕ್ಕಿ ಗೋಧಿ॥

ದೇವಿ ಇರುವ ಸ್ಥಳ ಶಿರಸಂಗಿ ಗ್ರಾಮ
ನಂಬಿದ ಭಕ್ತರಿಗೆ ಕರುಣೆಯ ತೋರಮ್ಮ॥

ಕರುಣದಿ ಕಾಯಮ್ಮನ್ನ ಕಾಳಮ್ಮ ತಾಯಿ
ಆದಿಶಕ್ತಿ ನೀ ಜಗದಾಂಬಾ ಮಾಯೆ॥

೮

ಪಂಚ ಕಸಬುಗಳ ಪಂಚಾಳ ನೀನು।
ನಿನ್ನನ್ನು ನೆನೆಯದೆ ಸ್ಥಳವಿರುವುದೇನು।
ಜನರಿಂದ ದೇವತೆಗಳವರೆಗೆ ಸೂರು ನಿನ್ನಿಂದ।
ಜಗತ್ತನ್ನ ನೀಡುತಿಹನು ತಲೆಮಾರಿನಿಂದ॥

ಕಂಬಾರ, ಗುದ್ದಲಿ ಸಲಿಕೆ ಸುತ್ತಿಗೆ ಗರಗಸಾ
ಕಾರ್ಖಾನೆ ಯಂತ್ರಗಳ ಅಚ್ಚುಗಳ ಕೆಲಸ।
ಉಕ್ಕು ಕಬ್ಬಿಣ ಲೋಹದಾ ಸುಡುರಸ।
ಕಂಬಾರನ ಕೈಚಳಕ ತೋರುವುದೇ ಸೊಗಸ॥

ಅಂಕುಡೊಂಕು ಮರಕಡಿದು ಮಾಡಿದರು ಗೊಂಬೆಗಳ।
ಕುಸುರಿ ಕಲೆಯರಳಿಸಿ ಕೆತ್ತಿದರು ಚಿತ್ರಗಳ

ಮೇಟಿ ವಿದ್ಯೆಗಳ ಇವನು ಬೆನ್ನೆಲುಬು ಕೇಳು
ಕೋಟಿ ವಿದ್ಯೆಗೂ ಬೇಕು ಇವನ ಹಸ್ತಗಳು॥


ಮಿಂಚುವಂತೆ ಮೂರ್ತಿಯ ಕೆತ್ತಿದ ಕಂಚಿನಲಿ
ಕಂಚುಗಾರನೆಂದೆನಿಸಿ ಮೆರೆದ ನೀ ಜಗದಲಿ
ಕಂಚು, ಹಿತ್ತಾಳೆ, ತಾಮ್ರ, ಪಾತ್ರೆ ಪಗಡೆಗಳು।
ಸಾಕಾರಗೊಳಿಸುವವು ನಿನ್ನಯ ಹಸ್ತಗಳು॥

ಕಲ್ಲಲ್ಲಿ ದೇವರುಗಳ ರೂಪವನು ಕೆತ್ತಿ
ಜನರಲ್ಲಿ ಮೂಡಿಸಿದೆ ಎಂದೆಂದಿಗೂ ಭಯಭಕ್ತಿ
ಸ್ಥಿರವಾಗಿ ನಿಲ್ಲುವವು ನೀ ನಿರ್ಮಿಸಿದ ಮೂರ್ತಿ
ನಿನಗಿಲ್ಲವಾಗಿದೆಯಿಂದು ಮೂರ್ತಿ ನಿರ್ಮಿಸಿದ ಕೀರ್ತಿ॥

ಮುತ್ತು, ರತ್ನ, ಹವಳ, ವಜ್ರ, ವೈಢೂರ್ಯ
ಕಂಚು, ಕಲ್ಲು, ಹಿತ್ತಾಳೆ, ತಾಮ್ರ, ಬೆಳ್ಳಿ, ಬಂಗಾರ
ನೀನಲ್ಲದೆ ಮತ್ತಾರಿಗೂ ಮುಟ್ಟಲೂ ಸಾಧ್ಯವಿಲ್ಲ
ಅಕ್ಕಸಾಲಿಗನಿಂದಲೇ ಮೆರಗು ಇವಕ್ಕೆಲ್ಲ॥

ಶಿಲ್ಪಿ, ಕಂಬಾರ, ಅಕ್ಕಸಾಇಗ, ಬಡಿಗ, ಕಂಚುಗಾರ
ಪಂಚಕಸುಬುಗಳು ಈ ಜಗಕೆ ಆಧಾರ
ಜನನ ಮರಣಕೂ ನಿನ್ನ ಕೊಡುಗೆ ಅಪಾರ
ಜಗವು ಸ್ಮರಿಸುತಿರಲಿ ಪ್ರತಿನಿತ್ಯ ನಿನ್ನೀ ಉಪಕಾರ॥

ಸುಧಾತಾಯಿ ಕೆ.ಬಡಿಗೇರ
ಸಂಗ್ರಹ: ರಾಜು ಕಂಬಾರ



ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ

ಹಸ್ತಪ್ರತಿಶಾಸ್ತ್ರ ವಿಭಾಗ